BROWN BOOK

TIGHT BINDING

UNIVERSAL
LIBRARY
OU_198344
UNIVERSAL
LIBRARY

ಶ್ರೀಃ.

ಚೆನ್ನಬಸವೇಶವಿಜಯಂ.

ಯಂ. ಆರ್. ಕರಿಬಸವಕಾಸ್ತ್ರಿಗಳಿಂದ

ವಿರಚಿತವಾದುದು.

(ದ್ವಿತೀಯಮುದ್ರಣ)

Printed at the

S. K. P. PRESS, MYSORE

1913

(All Right Reserved)

ಪ್ರಸ್ತಾವನೆ.

ವೀರಶೈವಮತದ ಪೌರಾಣಿಕಗ್ರಂಥಗಳಲ್ಲಿ ಅತಿಪ್ರಸಿದ್ಧವಾದುವುಗಳು ಬಸವೇಶ್ವರಪುರಾಣ ಚೆನ್ನಬಸವೇಶ್ವರಪುರಾಣಗಳು. ಬಸವೇಶ್ವರನು ಭಕ್ತಿಪ್ರಾಧಾನ್ಯದಿಂದ ಲೋಕೋತ್ತರನೆನಿಸಿಕೊಂಡಂತೆಯೇ ಚೆನ್ನಬಸವೇಶನು ಜ್ಞಾನಪ್ರಾಧಾನ್ಯದಿಂದ ಲೋಕಪೂಜ್ಯನಾದನು. ಇವರೀರ್ವರನ್ನು ನಾಯಕರನ್ನಾಗಿಟ್ಟು ರಚಿಸಿದುವುಗಳೇ ಮೇಲೆಕಂಡ ಎರಡು ಪುರಾಣಗಳಾಗಿರುವುವು. ಮೊದಲನೆಯ ಬಸವೇಶಪುರಾಣದಲ್ಲಿ—ಬಸವೇಶ್ವರನಿಗೆ ಸಂಬಂಧಿಸಿದ ಹೆಚ್ಚು ವಿಷಯಗಳೂ, ಇನ್ನು ಕೆಲಶರಣರ ಚರಿತ್ರಗಳೂ ಮಾತ್ರವೇ ಪ್ರತಿಪಾದಿತವಾಗಿದ್ದುವು. ಚೆನ್ನಬಸವೇಶನ ವಿಷಯವು ಅದರಲ್ಲಿ ಹೆಚ್ಚಾಗಿ ಬರೆಯಲ್ಪಟ್ಟಿರಲಿಲ್ಲ. ಅದುಕಾರಣ, ಚೆನ್ನಬಸವೇಶನ ಚಾರಿತ್ರವನ್ನೂ, ತದಂಗಗಳಾದ ಇತರ ವಿಷಯಗಳನ್ನೂ, ಶಿವನ ಪಂಚವಿಂಶತಿ ಲೀಲೆಗಳನ್ನೂ ಸೇರಿಸಿ, ಶ್ರೀ ವಿರೂಪಾಕ್ಷಪಂಡಿತರು "ಚೆನ್ನಬಸವಪುರಾಣ" ವೆಂಬ ಗ್ರಂಥವನ್ನು ರಚಿಸಿದರು.

ಈ ಗ್ರಂಥನಾಯಕನಾದ ಚೆನ್ನಬಸವೇಶನ ವಿಷಯವಾಗಿ ವಿಚಾರ ಮಾಡಿದರೆ,—ಜಗತ್ತಿನಲ್ಲಿ ಶಿವಭಕ್ತಿಯನ್ನುದ್ಧರಿಸುವುದಕ್ಕಾಗಿ ಬಸವೇಶನು ಅವತರಿಸಿ, ತನ್ನ ಪವಿತ್ರಕರ್ತವ್ಯವನ್ನು ಆತನು ಅತುಲವಾಗಿ ನೆರವೇರಿಸಿದರೂ, ಶಿವೋಪದಿಷ್ಟವಾದ ಅಸಾಧಾರಣವೀರಶೈವಮತಪಟ್ಟಸ್ಥಲಜ್ಞಾನಸಾರವನ್ನು ಜಗತ್ತಿನಲ್ಲಿ ಬಿತ್ತರಿಸಿದ ಮಹಾಮಹಿಮನು ಈ ಚೆನ್ನಬಸವೇಶನೇ ಆಗಿರುತ್ತಾನೆ. ಈತನು ಬಸವೇಶನ ಅಗ್ರಜೆಯಾದ ನಾಗಾಂಬಿಕೆಯ ಉದ್ಧರದಲ್ಲಿ ಶಿವಪ್ರಸಾದದಿಂದುದ್ಭವಿಸಿದನು. ಈತನ ಜನನಕಾಲವು ಚೆನ್ನಬಸವೇಶ್ವರಪುರಾಣದಲ್ಲಿ ತಿಳಿಯಿಸಲ್ಪಟ್ಟಿಲ್ಲ. ಇತರ ಕೆಲವು ಗ್ರಂಥಗಳಲ್ಲಿ ಅದು ಸೂಚಿಸಲ್ಪಟ್ಟಿದ್ದರೂ, ಪರಸ್ಪರ ವಿರುದ್ಧವಾಗಿದೆ. ಮತ್ತೂ ಆ ಕಾಲವು, ಶಾಸನಶೋಧನದಿಂದ ಗೊತ್ತಾಗಿರುವ ಬಿಜ್ಜಳನ ಆಳಿಕೆಯ ಕಾಲಕ್ಕೆ ಸಂಘಟಿಸುವುದಿಲ್ಲ. ಬಸವೇಶನು ಕಲ್ಯಾಣವನ್ನು ಸೇರಿ ಮಂತ್ರಿಯಾಗಿದ್ದ ನಂತರ ಈತನು ಜನಿಸಿದನೆಂದು ಪುರಾಣಗಳಲ್ಲಿ ಹೇಳಲ್ಪಟ್ಟಿದೆ. ಇದರಿಂದ ಬಸವೇಶನು ಮಂತ್ರಿತ್ವವನ್ನು ವಹಿಸುವುದಕ್ಕೆ ಅರ್ಹವಾದ ವಯಸ್ಸು

ನ್ನು ಪಡೆದ ಒಳಕವೇ ಈತನು ಉದಿಸಿದನೆಂದು ನಿರ್ಧರಿಸಬೇಕಾಗುತ್ತದೆ. ಆದರೆ, ಈತನು ಬಸವೇಶನಿಗಿಂತ ೧೨ ವರ್ಷಕ್ಕೆ ಮಾತ್ರ ಚಿಕ್ಕವನೆಂದು ಹಿಂದಣವರು ಅಭಿಪ್ರಾಯಪಟ್ಟಿರುತ್ತಾರೆ. ಇದನ್ನು ನೋಡಿದರೆ–ಬಸವೇಶನನ್ನು ೧೩ನೆ ವರ್ಷವಯಸ್ಸಿನಲ್ಲಿಯೇ ಮಂತ್ರಿತ್ವವನ್ನು ವಹಿಸಿದ್ದನೆಂದು ಹೇಳಬೇಕಾಗುತ್ತದೆ. ಇದು ಅಸಂಭವ. ಏಕೆಂದರೆ–ಬಸವೇಶನು ಬಿಜ್ಜಳನ ಒಳಯಲ್ಲಿ ಅವನು ಸಾಯುವುದಕ್ಕೆ ೩–೪ ತಿಂಗಳಿರುವವರೆಗೂ ಇದ್ದನೆಂದು ಗೊತ್ತಾಗಿದೆ. ಬಿಜ್ಜಳನ ಆಳಿಕೆಯ ಆದ್ಯಂತಕಾಲವೆಲ್ಲ ೧೨ ವರ್ಷಗಳು ಮಾತ್ರವೇ ಎಂದು ಶೋಧಕರು ಗೊತ್ತುಮಾಡಿದ್ದಾರೆ. ಇವೆರಡನ್ನೂ ಇಟ್ಟುಕೊಂಡು ನೋಡಿದರೆ, ೨೪ ವರ್ಷಗಳು ಮಾತ್ರವೇ ಬಸವೇಶನು ಭೂಮಿಯಲ್ಲಿದ್ದನೆಂತಲೂ, ಚೆನ್ನಬಸವೇಶನು ಬಸವೇಶನ ಶಿವೈಕ್ಯದ ನಂತರ ೪ ತಿಂಗಳೊಳಗೇ ಮುಕ್ತನಾದುದರಿಂದ, ಆತನು ೧೨ ವರ್ಷಗಳು ಮಾತ್ರವೇ ಭೂಮಿಯಲ್ಲಿದ್ದನೆಂತಲೂ ಹೇಳಬೇಕಾಗುತ್ತದೆ. ಇದು ಅಸಮಂಜಸವಾದುದು. ಅದುಕಾರಣ, ಬಸವೇಶನು ಮಂತ್ರಿತ್ವವನ್ನು ವಹಿಸುವುದಕ್ಕೆ ಮುಂಚೆಯೇ ಚೆನ್ನಬಸವೇಶನು ಉದಿಸಿದ್ದನೆಂತಲೂ, ಬಸವೇಶನು ಕಲ್ಯಾಣದ ಮಂತ್ರಿಯಾಗುವಾಗ್ಗೆ ತಾನು ೨೦ ವರ್ಷಕ್ಕಿಂತಲೂ ಕಡಿಮೆಯಿಲ್ಲದ ಪ್ರೌಢವಯಸ್ಕನಾಗಿದ್ದನೆಂತಲೂ, ಆಗ್ಗೆ ಚೆನ್ನಬಸವೇಶನು ದೀಕ್ಷಾಸಂಸ್ಕಾರಕ್ಕರ್ಹವಾವ, ೮ ವರ್ಷಕ್ಕಿಂತ ಕಡಿಮೆಯಿಲ್ಲದ, ಎಂದರೆ ೧೦–೧೨ ವರ್ಷ ವಯಸ್ಕನಾಗಿರಬಹುದೆಂತಲೂ ಊಹಿಸಬೇಕಾಗುತ್ತದೆ. ಅನಂತರ ಇವರು ಕಲ್ಯಾಣದಲ್ಲಿ ೧೨ ವರ್ಷಗಳಿದ್ದರೆಂದು ಹೇಳಿದರೆ, ಬಸವೇಶನ ಆದ್ಯಂತಜೀವಿತಕಾಲವು ಮೂರು ಪಟ್ಟು (೩೬) ವರ್ಷಗಳಿಂತಲೂ, ಚೆನ್ನಬಸವೇಶನ ಆದ್ಯಂತಕಾಲವು ಎರಡು ಪಟ್ಟು (೨೪) ವರ್ಷಗಳಿಂತಲೂ ಇರುವ ಜನಶ್ರುತಿಯು ಯಥಾರ್ಥವಾಗುವುದು ಮತ್ತೂ ಬಸವೇಶ ಚೆನ್ನಬಸವೇಶ ಬಿಜ್ಜಳರ ಕಾಲವು ಕ್ರಿ. ೧೨ ನೆ ಶತಮಾನದ ಮಧ್ಯಕಾಲವೆಂಬುದನ್ನು ಶೋಧಕರು ಗೊತ್ತುಮಾಡಿದ್ದಾರೆ.

ಈ ಚೆನ್ನಬಸವೇಶನಿಗೆ ಜನನಕಾಲದಲ್ಲಿಯೇ ಪದ್ಧತಿಯಂತೆ ಲಿಂಗಧಾರಣೆಯಾದರೂ, ಅಂಥ ಲಿಂಗವು ಗುರುಮುಖದಿಂದ ಅಧ್ಯಶೋಧನ ಕಳಾವಾಹನಗಳನ್ನೈದಿ ಕೊಡಲ್ಪಟ್ಟು, ಅದನ್ನರ್ಚಿಸುವುದೇ ವೀರಶೈವಧರ್ಮ

ವಾರವುದರಿಂದ, ಚೆನ್ನಬಸವೇಶನು ತನಗೆ ಮಾವನಾದ ಬಸವೇಶನನ್ನೇ ಗುರುಭಾವದಿಂದ ಕಂಡು, ಆತನಿಂದಲೇ ಮೇಲೆಕಂಡ ಸಂಸ್ಕಾರವನ್ನು ಪಡೆದನು. ತನಗೆ ಹಿರಿಯನೂ ಸಂಸ್ಕಾರಾಧಿಕಾರಿಯೂ ಆಗಿದ್ದ ಬಸವೇಶನನ್ನು ಚೆನ್ನಬಸವೇಶನು ಗುರುಭಾವದಿಂದ ಕಾಣುತ್ತಿದ್ದಂತೆಯೇ, ಚೆನ್ನಬಸವೇಶನಲ್ಲಿ ಶಿವಜ್ಞಾನಾಧಿಕ್ಯವನ್ನು ನೋಡಿಯೂ, ಆತನಿಂದ ಷಟ್ಸ್ಥಲ ಸಿದ್ಧಾಂತಬೋಧೆಯನ್ನು ತಾನು ಪಡೆದೂ ಕೂಡ, ಬಸವೇಶನು ಆ ಚೆನ್ನಬಸವೇಶನನ್ನೂ ಗುರುಭಾವದಿಂದ ಕಂಡಿದ್ದನು. ಚೆನ್ನಬಸವೇಶನು ಶಿವಜ್ಞಾನಮೂರ್ತಿಯೇ ತಾನಾಗಿದ್ದುದರಿಂದ ಭೂತಲದಲ್ಲಿ ಬಸವಾದಿಪ್ರಮಥರೆಲ್ಲರಿಗೂ ಕಾಲೋಚಿತವಾಗಿ ಜ್ಞಾನೋದಯವನ್ನು ಮಾಡಿ, ಎಚ್ಚರಿಸಿ, ಎಲ್ಲರನ್ನೂ ಷಟ್ಸ್ಥಲಮಾರ್ಗನಿಷ್ಠರಾಗುವಂತೆ ಮಾಡುತ್ತಿದ್ದನು. ಬಸವೇಶನು ಭಕ್ತಿಪರವಶತೆಯಿಂದ ಜಂಗಮರಲ್ಲಿ ಯೋಗ್ಯತಾವಿಶೇಷವೊಂದನ್ನೂ ಲಕ್ಷಿಸದೆ, ತನ್ನ ಪ್ರಾಣದಂತೆಯೇ ಅವರನ್ನು ಕಾಣುತ್ತಿದ್ದನು. ಚೆನ್ನಬಸವೇಶನು ಹಾಗಲ್ಲ ; ಜಂಗಮರು " ಜಾನಂತ್ಯತಿಶಯಾದ್ಯೋತುಶಿವಂವಿಶ್ವಪ್ರಕಾಶಕಂ । ಸ ಸ್ವರೂಪತಯಾತೇತುಜಂಗಮಾಇತಿಕೀರ್ತಿತಾಃ" ಎಂಬ ವಚನದರ್ಥದಂತೆ ಸ್ವಸ್ವರೂಪಜ್ಞಾನಿಗಳಾಗಿರತಕ್ಕುದೇ ಜಂಗಮಲಕ್ಷಣವೆಂದು ವಿಧಿಸಿ, ಎಲ್ಲರನ್ನೂ ಅಂತಹ ಜ್ಞಾನಿಗಳನ್ನಾಗಿ ಮಾಡುವುದಕ್ಕೆ ಅವಶ್ಯಕವಾದ ನಿರ್ಬಂಧವನ್ನು ಕೂಡ ಕಲ್ಪಿಸಿದ್ದನು. ಷಟ್ಸ್ಥಲಜ್ಞಾನಿಗಳಲ್ಲದವರು ತನ್ನರಮನೆಗೇ ಪ್ರವೇಶಿಸಲಾಗದೆಂದು ಕಟ್ಟಪ್ಪಣೆಯನ್ನು ಮಾಡಿ, ತನ್ನರಮನೆಯ ೬ ಬಾಗಿಲುಗಳಲ್ಲೂ ೬ ಮಂದಿ ಷಟ್ಸ್ಥಲಬ್ರಹ್ಮಿಗಳನ್ನು ಕಾವಲಿರಿಸಿ, ಹೊರಗಿನಿಂದ ಒರುವವರನ್ನೆಲ್ಲ ಅವರು ಷಟ್ಸ್ಥಲವಿಚಾರವಾಗಿ ಪ್ರಶ್ನೆ ಮಾಡಿ, ಅದಕ್ಕೆ ತಕ್ಕ ಉತ್ತರವನ್ನು ಕೊಟ್ಟವರನ್ನೇ ಒಳಕ್ಕೆ ಬಿಡುವಂತೆ ಏರ್ಪಡಿಸಿದ್ದನು. ಈ ಕಾರಣದಿಂದಲೇ ಚೆನ್ನಬಸವೇಶನನ್ನು ಷಟ್ಸ್ಥಲಸ್ಥಾಪನಾಚಾರ್ಯನೆಂದು ವೀರಶೈವರು ಸಂಬಿರುವರು. ಈತನು ಬಾಲಬ್ರಹ್ಮಚಾರಿಯಾಗಿದ್ದು, ಗೃಹಸ್ಥಾಶ್ರಮವನ್ನು ಸ್ವೀಕರಿಸದೆ, ನಿರಾಭಾರಿ (ಯತಿ) ಯಾಗಿಯೇ ಮುಕ್ತನಾದನು. ಅಲ್ಲಮಪ್ರಭುವು ಕಲ್ಯಾಣಪಟ್ಟಣದಲ್ಲಿ ಆರೋಹಿಸಿರ್ದ ಶೂನ್ಯಸಿಂಹಾಸನದ ಪಟ್ಟವೇ ಚೆನ್ನಬಸವೇಶನಿಗೆ ಪ್ರಭುವಿನಿಂದ ವಹಿಸಿಕೊಡಲ್ಪಟ್ಟಿತು.

ಹೀಗೆ ಭೂಲೋಕದಲ್ಲಿ ಶಿವಜ್ಞಾನವನ್ನು ಉದ್ಧರಿಸುವುದಕ್ಕಾಗಿ ಶಿವನಪ್ಪಣೆಯಿಂದ ಅವತರಿಸಿದ್ದ ಚೆನ್ನಬಸವೇಶನ ಚರಿತ್ರದ ವಿವರಣವನ್ನೇ ಮುಖ್ಯಲಕ್ಷ್ಯವನ್ನಾಗಿಟ್ಟುಕೊಂಡು, ಚೆನ್ನಬಸವೇಶ್ವರ ಪುರಾಣವನ್ನು ರಚಿಸಿದ ವಿರೂಪಾಕ್ಷಪಂಡಿತರು ವಿಜಯನಗರದಲ್ಲಿ ಈಗ್ಗೆ ೪ ಸೆ ಶತಮಾನದಲ್ಲಿದ್ದರು. ಅವರಿದ್ದಾಗ್ಗೆ ಮಹಮ್ಮದೀಯರು ವಿಜಯನಗರವನ್ನು ಹಿಡಿದುಕೊಂಡು ೨೦ ವರ್ಷಗಳಾಗಿದ್ದುವು. ಇವರು ಮೇಲೆಕಂಡ ಪುರಾಣಗ್ರಂಥವನ್ನು ಈಗ್ಗೆ ೪೨೦ ವರ್ಷಗಳಲ್ಲಿ ಎಂದರೆ– ಕ್ರಿ. ಶ. ೧೫೮೫ ರಲ್ಲಿ ರಚಿಸಿ ಮುಗಿಸಿದರು. ಆ ಕಾಲವನ್ನು ಇವರು ತಮ್ಮ ಗ್ರಂಥದ ಅಂತ್ಯದಲ್ಲಿ ವಿಶದಪಡಿಸಿರುತ್ತಾರೆ. ಇವರಿಗೆ ವಿಜಯನಗರದ ಹಿರೀಮಠದ ಸಿದ್ಧವೀರಸ್ವಾಮಿಗಳೆಂಬ ಯತಿಗಳು ಗುರುಗಳಾಗಿದ್ದರು. ಅವರು ಮುಳಿಯಮುಲ್ಲೇಶನ ಸಾಂಪ್ರದಾಯಸ್ಥರು. ಸ್ವಲ್ಪ ಹಿಂದುಮುಂದಾಗಿ ಚೆನ್ನಬಸವೇಶ್ವರಪುರಾಣರ ಚನೆಯು ಕಾಲದಲ್ಲೇ ಹುಟ್ಟಿರುವ ಪೌರಾಣಚರಾಯಚರಿತ್ರವೆಂಬ ಗ್ರಂಥಕ್ಕೆ ಕರ್ತರಾದ ಅದ್ರೀಶಪ್ಪ ಎಂಬುವರು ಕೂಡ ತಮ್ಮ ಗುರುವನ್ನು ಮುಳಿಯಮುಲ್ಲೇಶನೆಂದು ಹೇಳಿಕೊಂಡಿರುತ್ತಾರೆ.

ಚೆನ್ನಬಸವೇಶ್ವರಪುರಾಣವು ೫ ಕಾಂಡಗಳಾಗಿ ವಿಭಾಗಿಸಲ್ಪಟ್ಟು ೧–೫ ನೆ ಕಾಂಡಗಳಲ್ಲಿ ಚೆನ್ನಬಸವೇಶನ ಸ್ಥಳೀಯ ವಿಷಯಗಳೂ, ಪಟ್ಟಸ್ಥಲಾಪ್ಪಾವರಣವಿವರಣಗಳೂ, ಪಿಂಡೋತ್ಪತ್ತಿ, ಕರಣಪಸುಗೆ, ದೀಕ್ಷಾಕ್ರಮಗಳೂ, ಅನೇಕಶರಣರ ಸಂಕ್ಷಿಪ್ತಚರಿತ್ರಗಳೂ, ಸೂರ್ಯಚಂದ್ರವಂಶ ಪರಂಪರೆಯೂ, ಕಾಲಜ್ಞಾನವೆಂಬ ಚರಿತ್ರಭಾಗವೂ, ಹೇಳಲ್ಪಟ್ಟಿರುವುವು. ಮಧ್ಯದ ೩ ಕಾಂಡಗಳಲ್ಲಾದರೊ–ಪರಶಿವನ ಪಂಚವಿಂಶತಿಲೀಲೆಗಳು ವರ್ಣಿಸಲ್ಪಟ್ಟಿರುವುವು. ಈ ಕ್ರಮದಿಂದ, ಪ್ರಸಕ್ತವಾದ ಗ್ರಂಥದೊಳಗೆ ಅನೇಕ ಉಪಯುಕ್ತವಿಷಯಗಳನ್ನು ಸಂಗ್ರಹಿಸಿ ಹೇಳಬೇಕೆಂಬುದು ಗ್ರಂಥಕರ್ತರ ಉದ್ದೇಶವಾಗಿದ್ದಿತೆಂದು ತೋರುವುದು. ಹಿಂದೂ ಗ್ರಂಥಕಾರರಲ್ಲಿ ಚರಿತ್ರಭಾಗಕ್ಕೆ ದೃಷ್ಟಿಕೊಟ್ಟು, ವಿಷಯಗಳ ನಿರೂಪಣವನ್ನು ಮಾಡಿರತಕ್ಕವರು ಅತ್ಯಂತ ವಿರಳರು. ಅಂಥ ಲೋಪವನ್ನು ಈ ಗ್ರಂಥಕರ್ತರು ಸ್ವಲ್ಪಮಟ್ಟಿಗಾದರೂ ನಿವಾರಣಗೊಳಿಸಿರುವರೆಂಬುದು ಈ ಗ್ರಂಥದ ಕಡೆಯ ಭಾಗದ ೩ ಸಂಧಿಗಳಿಂದ ವ್ಯಕ್ತವಾಗುವುದು. ಇವ

ರ ಉದ್ದೇಶಗಳಲ್ಲಿ ಇದೊಂದು ಪ್ರಶಸ್ತವಾದ ಭಾಗವೂ ಅಡಕವಾಗಿದ್ದುದ ಕ್ಕಾಗಿ ಕನ್ನಡಿಗರೆಲ್ಲರೂ ಕೃತಜ್ಞರಾಗಿರಬೇಕಾಗಿದೆ. ಇವರು ತಮ್ಮ ಗ್ರಂಥಕ್ಕೆ ಪುರಾಣವೆಂದು ಹೆಸರನ್ನಿಟ್ಟುದರಿಂದ ಅದರ ಸಾರ್ಥಿಕ್ಯಕ್ಕಾಗಿ ಸೃಷ್ಟಿ, ಪ್ರತಿಸೃಷ್ಟಿ, ವಂಶ, ಮನ್ವಂತರ, ವಂಶಾನುಚರಿತವೆಂಬ ಪಂ ಚಲಕ್ಷಣಗಳು ಇದರಲ್ಲಿರುವಂತೆ ವಿಷಯನಿಯೋಜನವನ್ನು ಮಾಡಿತ್ತಾರೆ. ಮತ್ತೂ ಷಟ್ಪದಿಯು ಕಾವ್ಯವಾದುದರಿಂದ ಮಹಾಕಾವ್ಯದಲ್ಲಿರಬೇಕಾದ ಲಕ್ಷಣಗಳೂ ಪೂರ್ಣವಾಗಿರಬೇಕೆಂಬುದಾಗಿ ಪುರ, ಸಮುದ್ರ, ಗಿರಿ, ಋತು, ಮೊದಲಾದ ಅಷ್ಟಾದಶ ಗಳವರ್ಣನಗಳನ್ನೂ ಸಂದರ್ಭಾನುಸಾರ ವಾಗಿ ಮಾಡಿರುತ್ತಾರೆ.

ಅಂತಹ ಚೆನ್ನಬಸವೇಶ್ವರಪುರಾಣವು ಪದ್ಯಮಯವಾಗಿದ್ದು, ವ್ಯತ್ಪ ನ್ನರಿಗಲ್ಲದೆ ಭಾಷಾಜ್ಞಾನವುಳ್ಳಕನ್ನಡಿಗರೆಲ್ಲರಿಗೂ ಅರ್ಥವು ಸುಲಭವಾಗಿ ತಿಳಿ ಯದೆಯಿದ್ದುದರಿಂದಲೂ, ಗದ್ಯಗ್ರಂಥಗಳ ಅವಶ್ಯಕತೆಯು ಈಗ ಹೆಚ್ಚಾಗಿ ರುವುದರಿಂದಲೂ, ನನ್ನ ಮೊದಲಸೆಕೃತಿಯಾದ ಬಸವರಾಜವಿಜಯದ ಸ್ವೀ ಕಾರದಲ್ಲಿ ವಾಚಕರು ತೋರಿಸಿದ ಆಸಕ್ತಿಯಿಂದಲೂ, ಅದೇ ಚೆನ್ನಬಸ ವೇಶ್ವರ ಪುರಾಣಪ್ರತಿಪಾದಿತವಾದ ವಿಷಯಗಳನ್ನೇ ಲಲಿತವಾದ ಕನ್ನಡದ ಬಿಡುನುಡಿಯು ರೂಪವಾಗಿ ಬರೆದು "ಚೆನ್ನಬಸವೇಶವಿಜಯ" ವೆಂಬ ಹೆಸರಿನಿಂದ ಈ ಗ್ರಂಥವನ್ನು ರಚಿಸಿರುತ್ತೇನೆ. ಮೂಲಗ್ರಂಥದಲ್ಲಿ ಹೆಚ್ಚಾ ಗಿದ್ದ ವರ್ಣನಭಾಗಗಳನ್ನು ಮಾತ್ರ ಸಂಕ್ಷೇಪಗೊಳಿಸಿ, ಉಳಿದಂಶಗಳ ನ್ನೆಲ್ಲ ಸರಿಯಾಗಿ ವಿಸ್ತರಿಸಿ, ಅವಶ್ಯಕವಾಗಿ ತೋರಿದ ಕಡೆಗಳಲ್ಲಿ (ಗ್ರಂಥ ಕರ್ತರ ಆಶಯವು ಕೆಡದಂತೆ) ವ್ಯಾಸೋಕ್ತಪುರಾಣಗಳ ಸಾಹಾಯ್ಯ ದಿಂದ ಬೇಕಾದಂಶವನ್ನಾರಿಸಿ ಸೇರಿಸಿ, ಈ ಗ್ರಂಥವನ್ನು ಪೂರ್ಣಗೊಳಿಸಿ ರುತ್ತೇನೆ. ಅಮತ್ಸರಮತಿಗಳಾದ ಮಹಾಶಯರು ಇದರಲ್ಲಿ ಗುಣೈಕಗ್ರಹ ಣವನ್ನು ಮಾಡಿ, ಸಂತೋಷಿಸಿ, ನನ್ನ ಶ್ರಮವನ್ನು ಸಾರ್ಥಕಗೊಳಿಸು ವರೆಂದು ನಂಬುತ್ತೇನೆ.

ಬಿ. ಆರ್. ಕರಿಬಸವಶಾಸ್ತ್ರಿ.

ಸುಜನವಿಧೇಯ,



ವಿಷಯಸೂಚಿಕೆ.

ವಿಷಯಗಳು.	ಪುಟಸಂಖ್ಯೆ.
(೧ನೆ ಕಾಂಡವು)	
ಮಂಗಳಾಚರಣವು	೧
ಪೀಠಿಕೆ	೪
ಕಥಾರಂಭವು ಸನುದ್ರಮೇರುಕೈಲಾಸಾದಿವರ್ಣನವು	೬
ಚಿತ್ಕಳಾವತರಣವು	೧೧
ಚೆನ್ನಬಸವೇಶಾವತರಣವು	೧೬
ಚೆನ್ನಬಸವೇಶಪುಷ್ಪಕೋತ್ಪನವು	೨೦
ಬಸವೇಶಪ್ರಾಣಲಿಂಗೋಪದೇಶವು	೨೪
ಚೆನ್ನಬಸವೇಶನ ಪವಾಡವು	೩೦
ಮಂಚಣ್ಣನ ಚಾಡಿ	೩೩
ರಾಜನೀತಿಬೋಧೆ	೪೧
ಚಂದ್ರಿಕಾವಿಹಾರವು	೪೫
ಅಲ್ಲಮಪ್ರಭುವರಾಗಮನವು	೫೦
(೨ನೆ ಕಾಂಡವು)	
ಶೈವಸೃಷ್ಟಿಕ್ರಮಬೋಧೆ	೫೩
ವಿಕಟಾವತಲೀಲೆ	೫೬
ಮಹಾಸೃಷ್ಟಿಕ್ರಮ	೫೬
ಉಮಾಮಹೇಶ್ವರಲೀಲೆ	೬೦
ವೃಷಭವಾಹನಲೀಲೆ	೬೧
ದಕ್ಷಸಂತತಿ	೬೧
ಕಶ್ಯಪಸಂತತಿ	೬೫
ಅತ್ರ್ಯಾದಿಬ್ರಹ್ಮಸಂತತಿ	೬೭
ಲೋಕವರ್ಣನವು	೬೬
ಮಹಾಲಿಂಗೋದ್ಭವಲೀಲೆ	೭೭
ಅರ್ಧನಾರೀಶ್ವರಲೀಲೆ	೮೦
ಬ್ರಹ್ಮಶಿರಶ್ಛೇದನವು	೮೦
ಭಿಕ್ಷಾಟನಲೀಲೆ	೮೬
ದಿಕ್ಪಾಲಭಿಕ್ಷಾಟನವು	೮೯
ದಾರುಕಾವನವಿಹಾರವು	೯೧
ದಕ್ಷಿಣಾಮೂರ್ತಿತತ್ತ್ವೋಪದೇಶವು	೯೪
ಕಂಕಾಳಧರಲೀಲೆ	,,
ದಕ್ಷಾವತಾರಕಾರಣನಿರೂಪಣವು	೯೬
ವಿಷಕಂಠಲೀಲೆ	೧೦೨
ಜಲಂಧರಾಸುರನ ಕಥೆ	೧೧೩
ಜಲಂಧರನಿಂದದೇವೇಂದ್ರನಪಜಯ	೧೧೪
ವಿಷ್ಣುಬ್ರಹ್ಮೇಂದ್ರಾದಿಗಳ ಪರಾಜಯ	೧೨೩
ಜಲಂಧರಸಹ್ಯಾರವು	೧೩೧
ಚಕ್ರಪ್ರದಾನವು	೧೩೩
(೩ನೆ ಕಾಂಡವು)	
ಗಜಾಸುರಸಹ್ಯಾರವು	೧೩೯
ಶಿವಲೋಕಶಿವಸಭಾವರ್ಣನವು	೧೪೫
ದಕ್ಷಯಾಗವು	೧೫೨
ವೀರಭದ್ರವಿಜಯವು	೧೬೧
ದಕ್ಷಶಿರಶ್ಛೇದನವು	೧೭೦
ನೃಸಿಹ್ಮಹರಲೀಲೆ	೧೭೩
ಪಾರ್ವತೀತಪಶ್ಚರಣವು	೧೮೩
ಕಾಮದಹನವು	೧೯೦
ಗಿರಿಜಾವಿವಾಹಪ್ರಯತ್ನವು	೧೯೬
ಗಿರಿಜಾಕಲ್ಯಾಣವು	೨೦೫

ಕುಮಾರೋತ್ಪತ್ತಿಯು	೬೧೧
ಕುಮಾರತಾರಕಸೇನಾಯುದ್ಧವು	೬೧೪
ತಾರಕಸಹ್ಯಾರವು	೬೨೫
(೪ ನೆ ಕಾಂಡವು)	
ಪಶುಪತಿಪಟ್ಟವು	೬೩೧
ತ್ರಿಪುರವಿಜಯಮೂತ್ಪತ್ತಿಯು	೬೪೦
ಕಮಲಾಕ್ಷದೇವಸೇನಾಯುದ್ಧವು	೬೪೬
ತ್ರಿಪುರಸಹ್ಯಾರವು	೬೫೩
ಶಿವನವಿಹಾರೋತ್ಸವವು	೬೬೦
ಗಂಗಾಧರಲೀಲೆಯು	೬೬೭
ಅಂಧಕಾಸುರಪ್ರಾಬಲ್ಯವು	೬೭೩
ಅಂಧಕಸಹ್ಯಾರಯೂತ್ಪತ್ತಿಯು	೬೭೯
ಬಲನಮುಚಿದೈತ್ಯಾದಿಯುದ್ಧವು	೬೮೫
ಅಂಧಕಾಸುರಸಹ್ಯಾರವು	೬೯೬
ಕಾಲಹರಲೀಲೆ	೭೦೩
ಸುಖಾವಹಮೂರ್ತಿಲೀಲೆ	೭೧೩
ಚಂಡವರಪ್ರದಾನಲೀಲೆ	೭೨೫
ಕಿರಾತರುದ್ರಲೀಲೆ	೭೩೭
(೫ ನೆ ಕಾಂಡವು)	
ಸೋಮಸೂರ್ಯಾನ್ವಯವಿವರಣವು	೭೫೭
ಶೈವಕರಣರಕಥೆಗಳು	೭೪೯
ಸಾನಂದಗಣೇಶಚರಿತ್ರವು	೪೫೬
ವೀರಶೈವಕರಣಾಚರಿತ್ರೆ	೭೬೬
ಪಿಂಡೋತ್ಪತ್ತಿಕರಣಹಸುಗೆಗಳು	೭೮೧
ಲಿಂಗದೀಕ್ಷಾಗುರುಲಿಂಗಜಂಗಮ ಮಾಹಾತ್ಮ್ಯವು	೭೯೦
ಭಸ್ಮರುದ್ರಾಕ್ಷಾದಿಮಾಹಾತ್ಮ್ಯವು	೭೯೪
ಷಟ್ಸ್ಥಲವಿವರಣವು	೪೦೪
ಕಾಲಜ್ಞಾನವು	೪೧೫
ನೂರೊಂದುವಿರತರವತರಣವು	೪೨೭
ಸಮಾಪ್ತಿಯು	೪೪೦

ಓಂ.

ಶ್ರೀಗುರು ದಕ್ಷಿಣಾಮೂರ್ತಯೇನಮಃ.

ಚೆನ್ನಬಸವೇಶ ವಿಜಯಂ.

ಮಂಗಳಾಚರಣವು.

ಶ್ರೀಮತ್ಸಚ್ಚಿದಾನಂದಸ್ವರೂಪನೂ ಶಾಂತನೂ ನಿತ್ಯನೂ ಅವ್ಯಯಂತ ರಹಿತನೂ ಜಗದಾದಿಗುರುವೂ ದೇವದೇವೋತ್ತಮನೂ ಭಕ್ತವತ್ಸಲನೂ ಸಗುಣನಿರ್ಗುಣನೂ ಭಕ್ತಿಮುಕ್ತಿಪ್ರದನೂ ಸಕಲವಿದ್ಯಾಮೂಲನೂ ಆದ ಶ್ರೀಮತ್ಪಾರ್ವತೀಪತಿಯನ್ನು ನಿರ್ಮಲಮನಸ್ಸಿನಿಂದ ಧ್ಯಾನಿಸಿ, ವೇದಾಂತ ವೇದ್ಯನಾದ ಆ ಮಹಾದೇವನ ಪಾದಾರವಿಂದವಂ ಸೇವಿಸಿ, ಸರ್ವಮಂಗಳ ಮಯನಾದ ಆ ಪರಬ್ರಹ್ಮನನ್ನು ಅಡಿಗಡಿಗೆ ಪಾಡಿಸಿ, ಕರುಣಾಸಮುದ್ರ ನಾದ ಆ ದೇವನ ಚರಿತ್ರವನ್ನು ಹಾಡಿ ಹಾಡಿ ಧನ್ಯನಾಗುವೆನು.

ವಿಷ್ಣುಬ್ರಹ್ಮೇಂದ್ರಾದಿಸಕಲದೇವತೆಗಳೂ ಯಾವ ಮಹಾದೇವನ ಪಾದಾರವಿಂದವನ್ನರ್ಚಿಸಿ ಇಷ್ಟವರಗಳಂ ಪಡೆದರೂ ಆ ಜಗದೇಕಾರಾ ಧ್ಯನಾದ ಪರಶಿವನನ್ನು ನಿಷ್ಠಾಮದಿಂದಲೂ ಅನನ್ಯಭಾವದಿಂದಲೂ ಆರಾ ಧಿಸಿ ಕೃತಕೃತ್ಯನಾಗುವೆನು.

ಹೂವಿನಲ್ಲಿ ಪರಿಮಳವೂ, ಚಂದ್ರನಲ್ಲಿ ತಂಪೂ, ಕ್ಷೀರಸಮುದ್ರದ ಲ್ಲಿ ಮಾಧುರ್ಯವೂ ಅಗಲದೆ ಇರುವಂತೆ ಪರಶಿವನಲ್ಲಿ ಅವಿನಾಭೂತವಾಗಿ ಸ್ವಪ್ರಕಾಶತಾಶಕ್ತಿಯಾಗಿ ಬೆರೆದಿರುವ ಆ ಜಗದಂಬಿಕೆಯನ್ನು ಭಕ್ತಿಭಾ ವದಿಂದ ಪೊಡಮಡುವೆನು.

ಜಗದಾದಿಮೂರ್ತಿಯಾವ ಶಂಕರನ ಸದ್ಭಕ್ತನೇ ತಾನೊಂದುರೂಪಾ ಗಿಯೂ, ಸಕಲಶಿವಗಣಕ್ಕಧೀಶನಾಗಿಯೂ, ನಂದಿಯೆಂಬ ಹೆಸರಿನಿಂದ

ಶಿಲಾದರ್ಶಿಗೆ ಪುತ್ರನಾಗಿಯೂ ಮೆರೆದ ಆದಿಮಹಾವೃಷಭೇಶ್ವರನ ಪಾದ ಕ್ಕೆ ತಲೆವಾಗುವೆನು.

ಪರಶಿವನು ಕೈಲಾಸದ ಮಹಾಸಭೆಯಲ್ಲಿ ದೇವಾಧಿದೇವತೆಗಳಿಂದ ಸೇವೆಗೊಳ್ಳುತ್ತ, ಸಕಲಪ್ರಮಥಗಣಪರಿವೃತನಾಗಿ ರಂಜಿಸುತ್ತ, ದಿವ್ಯಸಿ ಹ್ಮಾಸನದಲ್ಲಿ ಸರ್ವಮಂಗಳಾರ್ಧಾಂಗನಾಗಿ ಮಂಡಿಸಿರಲು, ಆ ಸಭೆಗೆ ಒಂ ದು ತನ್ನ ನಾಟ್ಯದಿಂದ ಮಹಾದೇವನನ್ನು ಆನಂದಗೊಳಿಸಿ ನಮಸ್ಕರಿಸು ವಾಗ್ಗೆ, ತುಂಬಿಯ ಆಕಾರದಿಂ ಶಿವನ ದೇಹವಂ ಕೊರೆದು, ಪಾರ್ವತಿಯ ಶಕ್ತ್ಯಂಶವಾದ ಅರ್ಧದೇಹವನ್ನು ಬಿಟ್ಟು ಉಳಿದರ್ಧಭಾಗವನ್ನು ಪ್ರದಕ್ಷಿ ಣಮಾಡಿ ನಮಸ್ಕರಿಸಲು, ಪಾರ್ವತಿಯು ಇದನ್ನು ತಿಳಿದು,ಈತನ ದೇಹದ ರಕ್ತಮಾಂಸಾದಿಷಕ್ತ್ಯಂಶವನ್ನು ಆಕರ್ಷಿಸಿಕೊಳ್ಳಲು, ನಿಲ್ಲಲು ಸಾಧ್ಯವಿ ಲ್ಲದೆ ನಡುಗುತ್ತಿದ್ದ ತನಗೆ ಶಿವಪ್ರಸಾದದಿಂದ ಕೊಡಲ್ಪಟ್ಟ ಮತ್ತೊಂದು ಪಾದವನ್ನು ಹೊಂದಿ ಮೂರಡಿಯುಳ್ಳವನಾಗಿ ಮೆರೆದ ಭೃಂಗೀಶ್ವರನನ್ನು ಮರೆಹುಗುವೆನು.

ಶಿವನ ಪಣೆಗಣ್ಣಿನಿಂದೊಗೆದು ಶಿವದ್ರೋಹಿಯಾದ ದಕ್ಷನ ಯಾಗಶಾ ಲೆಗೆ ಹೋಗಿ ಅಲ್ಲಿದ್ದ ದೇವತೆಗಳನ್ನೆಲ್ಲ ಭಂಗಿಸಿ, ರುದ್ರನಿಗೆ ಅಗ್ರಹವಿರ್ಭಾ ಗವನ್ನು ಕೊಡದಿದ್ದ ಆದಕ್ಷಬ್ರಹ್ಮನ ಶಿರಸ್ಸನ್ನು ಕತ್ತರಿಸಿದ ಭದ್ರಕಾಳೀ ಪ್ರಿಯನಾದ ವೀರಭದ್ರೇಶ್ವರನಿಗೆ ಸಾಷ್ಟಾಂಗವಾಗಿ ಮಣಿವೆನು.

ತನಗೆ ಪಂಚಮುಖಗಳಿರುವುದೆಂಬುದನ್ನು ಸರ್ವರೂ ಬಲ್ಲರು; ಆರನೆಯ ಪಾತಾಳಮುಖವಿರುವುದೆಂಬುದನ್ನು ತಾತ್ವಿಕರು ಹೊರತು ಇತ ರರು ತಿಳಿಯರು. ಅದುಕಾರಣ, ಆ ಆರನೆಯಮುಖವನ್ನು ಸರ್ವರಿಗೂ ತೋರ್ಪಡಿಸಬೇಕೆಂಬುದಾಗಿ ಶಂಕರನೇ ಈ ಅರುಮೊಗನಾಗಿ ಜನಿಸಿದನೆಂ ಬಂತೆ ತೋರುತ್ತಿರುವ ಕುಮಾರಸ್ವಾಮಿಯ ಪಾದಾರವಿಂದದಲ್ಲಿ ನನ್ನ ಚೇ ತಃಕಮಲವನ್ನು ಸಮರ್ಪಿಸುವೆನು.

ಕನ್ನಡಿಯೊಳಗಣ ಪ್ರತಿಬಿಂಬದಂತೆಯೂ, ಆಕಾಶದಲ್ಲಿ ತೋರುವ ಇಂದ್ರನ ಧನುಸ್ಸಿನಂತೆಯೂ, ಸುಟ್ಟ ಬಟ್ಟೆಯು ಕಾಣುವಂತೆಯೂ, ಬಿಸಿ ಲ್ಗುದುರೆಯ ಜಾಡಿನಂತೆಯೂ,ಕರ್ಪೂರವು ಬೆಂಕಿಯೊಡನೆರೆದಂತೆಯೂ, ತುಷ್ಟವು ಧರಿಸಿರುವ ಆಕಾರದಂತೆಯೂ ರೂಪಾಂತರ ಮೆರೆವ ಮಾಯಾರ

ಹಿತನಾದ ಅಲ್ಲಮಪ್ರಭುವಿನ ಪಾದಾರವಿಂದವನ್ನು ಸದಾ ಸ್ಮರಿಸುವೆನು.

ಕಾಮಧೇನು ಕಲ್ಪವೃಕ್ಷಾದಿಗಳಂತೆ ಆಶ್ರಿತರ ಇಷ್ಟಾರ್ಥವನ್ನು ಕೊಡುತ್ತೆ, ಸಂಕಲ್ಪ ನಡೆ ನುಡಿ ಸೋಟ ಕೈಸೋಂಕುಗಳಲ್ಲಿ ಪಂಚಸ್ಪರ್ಶವುಳ್ಳವನಾಗಿ ಮೆರೆದ ಭಕ್ತಿಭಾಗ್ಯಸಿದ್ಧಿಯಾದ ಆ ನನ್ನ ಪ್ರಾಣನಾಥನಾದ ಬಸವೇಶನ ಚರಣಸರಸಿಜಕ್ಕೆ ನನ್ನ ಮನಸ್ಸನ್ನಾರಡಿಗೊಳಿಸುವೆನು.

ಶಿವಪ್ರಸಾದವೇ ಪಿಂಡವಾಗಿ ನಾಂಗಲಾಂಬಿಕೆಯ ಗರ್ಭದಲ್ಲಿ ಬೆಳೆದು ಅಯೋನಿಜನಾಗಿ ಜನಿಸಿ, ಭೂಮಿಯ ಸಕಲ ಶಿವಗಣಕ್ಕೂ ಷಟ್ಸ್ಥಲದ ತತ್ತ್ವವನ್ನುಪದೇಶಿಸಿ, ಸ್ಥಾವರಾದಿಲಿಂಗಗಳ ಪ್ರಾಜೆಯಂ ಬಿಡಿಸಿ, ಪ್ರಾಣಲಿಂಗದ ಸ್ವರೂಪವನ್ನು ವಿಸ್ತರಿಸಿ ತಿಳುಹಿ, ಮುಕ್ತರನ್ನು ಮಾಡಿದ ಆ ಜಗದ್ಗುರುವಾದ ಶ್ರೀ ಚೆನ್ನಬಸವೇಶನಿಗೆ ಶರಣಾಗತನಾಗುವೆನು.

ಶಿವಯೋಗಸಿದ್ಧಾಂತವನ್ನು ಜಗತ್ತಿನಲ್ಲಿ ವಿಸ್ತರಿಸುವುದಕ್ಕಾಗಿ ಏರಶಿವನೇ ಅವತರಿಸಿದಂತೆ ಮಾನವರೂಪವನ್ನು ಧರಿಸಿ, ಮಹಾಯೋಗಸಿದ್ಧರಲ್ಲೆಲ್ಲ ಅಗ್ರಗಣ್ಯನಾಗಿ ಮೆರೆದ ಶ್ರೀ ಸಿದ್ಧರಾಮೇಶ್ವರನ ಪಾದಕ್ಕೆ ನಮಸ್ಕರಿಸುವೆನು.

ಪಾರ್ವತಿಯಂಶವೇ ತಾನಾಗಿ ಭೂಮಿಯಲ್ಲವತರಿಸಿ, ಕದಳೀವನವನ್ನು ಹೊಕ್ಕು ಬಯಲಾದ ಮಹಾದೇವಿಯ ಪಾದವಂ ಪೊತ್ತು ಮೆರೆಯುವೆನು.

ದಕ್ಷಾಧ್ವರನಂ ನಾಶಮಾಡಿದ ವೀರಭದ್ರೇಶನೇ ಭೂಮಿಯಲ್ಲಿ ಭಕ್ತಜನದ ಮಹೋಮಾಲಿನ್ಯವನ್ನು ಕಳೆಯುವುದಕ್ಕಾಗಿ ಮಡಿವಳತನದ ವ್ಯಾಜದಿಂದ ಅವತರಿಸಿ, ಒಸವರಾಜನ ಅಹಂಭಾವವನ್ನು ಅಡಗಿಸಿದ ಮಡಿವಳಮಾಚಿದೇವನ ಪಾದಾಶ್ರಯವನ್ನು ಬೇಡುವೆನು.

ಜಗದುದ್ಧರಣಾರ್ಥವಾಗಿ ಭೂಮಿಯಲ್ಲವತರಿಸಿ ಪರಿಪರಿಯ ಮಹಿಮೆಯಿಂದ ಭಕ್ತಿಜ್ಞಾನವೈರಾಗ್ಯದ ನೆಲೆಯನ್ನು ಸಿದರ್ಶನಗೊಳಿಸಿದ ಶಂಕರದಾಸಿಮಯ್ಯ, ದಸರದೇವಯ್ಯ, ಕರಿಕಾಲಚೋಳ, ಮರುಳಶಂಕರದೇವ, ಸಕಳೇಶಮಾದರಸ, ಕಿನ್ನರಿಬ್ರಹ್ಮಯ್ಯ ಮೊದಲಾದ ಸಕಲ ಶಿವಶರಣರ ಪವಿತ್ರನಾಮಾಮೃತವನ್ನು ಸದಾ ಪಾನಮಾಡುತ್ತಿರುವೆನು.

ಪರಶಿವನ ಪಂಚಮುಖದಿಂದ ಉದ್ಭವಿಸಿ ಭೂಮಿಯಲ್ಲಿ ಶಿವಮತವ

ನ್ನು ಪ್ರತಿಷ್ಠಾಪಿಸಿದ ಆಚಾರ್ಯಪುಂಜಕಕ್ಕೂ, ಶಿವಸಿದ್ಧಾಂತನಿರ್ಧಾರಣ ಸಾರ್ವಭೌಮರಾದ ಪಂಡಿತತ್ರಯಕ್ಕೂ, ಲೋಕೈಕಪೂಜ್ಯವಾದ ಶಿವಕವಿಪರಂಪರೆಗೂ ನಯವಿನಯಭಕ್ತಿಯಿಂ ಪ್ರಣಮಿಸಿ ವಾಕ್ಸಿದ್ಧಿಗೊಳ್ಳುವೆನು.

ಭಕ್ತೈಕಸುಲಭನಾದ ಆ ಜಗದಂತರ್ಯಾಮಿಯು, ಆರಂಭಿಸಲ್ಪಟ್ಟ ಈ ಗ್ರಂಥವನ್ನು ನಿರ್ವಿಘ್ನವಾಗಿ ಪರಿಪೂರ್ಣಂಗೊಳಿಸಿ ಸನ್ಮಂಗಳವನ್ನುಂಟು ಮಾಡಲೆಂದು ಪ್ರಾರ್ಥಿಸುವೆನು.

ಪೀಠಿಕೆ.

ಶ್ರೀಮತ್ಪರಶಿವನು ಕೈಲಾಸದ ಸಕಲಶಿವಶರಣಗಣಕ್ಕೂ ವಿಷ್ಣುಬ್ರಹ್ಮೇಂದ್ರಾದಿದೇವತಾನಿಚಯಕ್ಕೂ ಶಿವತತ್ತ್ವೋಪದೇಶವನ್ನು ಮಾಡಿ, ಕಾಪಾಡಿ, ಬಳಿಕ ಭೂಮಿಯಲ್ಲಿರುವ ಶಿವಶರಣರನ್ನು ಉದ್ಧರಿಸುವುದಕ್ಕಾಗಿ ಮಲ್ಲೇಶಂಬ ನಾಮವಿನ ಜಂಗಮರೂಪಾಂತು ಅವತರಿಸಿದನು. ಆ ಗುರೂತ್ತಮನು ದೇಶಾಂತರಗಳನ್ನು ಸಂಚರಿಸಿಕೊಂಡು ತುರುಷ್ಕರ ಪುಣ್ಯಕ್ಷೇತ್ರವಾದ ಮಕ್ಕಕ್ಕೆ ಹೋಗಿ ಅಲ್ಲಿನ್ನ ಏಳುನೂರು ಮಂದಿ ಖಲಂದರರಿಗೆ ಗುರುವಾಗಿ, ಆ ತುರುಕಾಣ್ಯದಲ್ಲಿ ಮಹಾನಾವೃಷ್ಟಿಯು ಪ್ರಾಪ್ತವಾಗಿರಲು, ತನ್ನ ಪ್ರಭಾವದಿಂದ ಮಳೆಯನ್ನು ಸುರಿಸಿ, ಅಲ್ಲಿನ ಪ್ರಭುವಾದ ಸುಲ್ತಾನನಿಂದ ಪೂಜೆಗೊಂಡು, ಅಪರಿಮಿತವಾದ ಕೀರ್ತಿಯನ್ನು ಪಡೆದಂದಿನಿಂದ ಮಳೆಯಮಲ್ಲೇಶಂಬ ಹೆಸರಾಂತು ಮೆರೆಯುತ್ತಿದ್ದನು.

ಆ ಮಳೆಯಮಲ್ಲೇಶಗುರುವಿನ ಸಾಂಪ್ರದಾಯಸ್ಥನೂ ಷಟ್ಸ್ಥಲಜ್ಞಾನಸಂಪೂರ್ಣನೂ ಜಿತೇಂದ್ರಿಯವರೇಣ್ಯನೂ ಕರುಣಾನಿಧಿಯೂ ಆದ ಸಿದ್ಧವೀರೇಶ್ವರನೆಂಬ ಯತಿತಿಲಕನು ಘನವೈರಾಗ್ಯಸಂಪನ್ನನಾಗಿ ವಿದ್ಯಾನಗರಿ (ವಿಜಯನಗರ) ಯ ಹಿರೀಮಠದಲ್ಲಿ ವಿರಾಜಿಸುತ್ತಿದ್ದನು.

ಆ ಯತೀಂದ್ರನಿಗೆ ಶಾಂತಿಯೇ ಮನೆ, ದಯೆಯೇ ಪರಿವಾರ, ಶಿವಲಿಂಗಧ್ಯಾನವೇ ಮನವಾರ್ತೆ, ಮೋಕ್ಷಲಕ್ಷ್ಮಿಯೇ ಪತ್ನಿ, ಶಿಷ್ಯರೇ ಮಕ್ಕಳು ಆಗಿರಲಾಗಿ, ಈ ವಿಧವ ಸಂಸಾರದಿಂದೆ ಮೆರೆಯುತ್ತಿದ್ದನು. ಆ ಮಹಾಸಿದ್ಧವೀರೇಶನ ದರ್ಶನವಂ ಮಾಡಿದವನೇ ಪುನೀತ, ಪಾದಕ್ಕೆ ನಮ

ಸ್ಮರಿಸಿದವನೇ ಪುಣ್ಯಶಾಲಿ, ಇದಿರಿಗೆ ಮಾತಾಡಿದವನೇ ವೀರಶೈವಮಾರ್ಗ ಸಂಪನ್ನ, ಪ್ರಸಾದವಚನಮಂ ಪಡೆದವನೇ ಅಚ್ಯುತ, ಪ್ರಾರ್ಥಿಸಿದವನೇ ಇಷ್ಟಾರ್ಥಪೂರ್ಣ, ಸ್ತೋತ್ರಮಾಡಿದವನೇ ಜಗದ್ವಿನುತ, ಪಾದಸೇವೆಯಂ ಮಾಡಿದವನೇ ಲೋಕೈಕಸೇವ್ಯನೆನಿಸಿಕೊಳ್ಳುತ್ತಿದ್ದನು, ಎಂದ ಬಳಿಕ, ಆ ಮಹಾಗುರುವಿನ ಪ್ರಭಾವವನ್ನೆಷ್ಟೆಂದು ಹೇಳಬಹುದು !

ಅಂತಪ್ಪ ಗುರುವಿನ ಕರಕಮಲದಲ್ಲುದ್ಭವಿಸಿದ ವಿರೂಪಾಕ್ಷಪಂಡಿತಾರಾಧ್ಯನು ಕರ್ಣಾಟಾದಿಭಾಷೆಗಳಲ್ಲಿ ವಿಶಾರದನಾಗಿ, ವರಕವಿಗಳಿಂದ ಸ್ಮರಿಸಲ್ಪಡುತ್ತ, ಪರಮವೀರಶೈವಾಚಾರಸಂಪನ್ನನಾಗಿ, ಗಾಂಭೀರ್ಯೌದಾರ್ಯಾದಿಸದ್ಗುಣಮಣಿಕರಂಡನಾಗಿ ರಾಜಿಸುತ್ತಿದ್ದನು.

ಆ ಪಂಡಿತೋತ್ತಮನ ಬಳಿಗೆ ಅನೇಕ ಭಕ್ತಸಂಕುಲವು ಬಂದು ನಮಸ್ಕರಿಸಿ.—" ಎಲೈ ವಿಬುಧವರೇಣ್ಯನೆ ! ಶಿವಲಿಂಗಪೂಜೆಯಲ್ಲೇ ಆಯತ್ತವಾದ ಚಿತ್ತವೂ, ಆತ್ಮಸುಜಾರ್ಥವಾಗಿ ಶಿವಸ್ತುತಿಗಳಂ ಮಾಡುವಿಕೆಯೂ, ಬೇಡುವವರ ಮನೋಭಾವವನ್ನು ತಿಳಿದು ದಾನಮಾಡುವಿಕೆಯೂ, ಕುಶಲರನ್ನು ಮೆಚ್ಚಿಸುವ ವಾಗ್ವೈಖರಿಯೂ, ಶಿವನನ್ನು ಒಲಿಸುವ ಷಟ್ಸ್ಥಲಾಚರಣೆಯೂ ನಿನ್ನಲ್ಲಲ್ಲದೆ ಇನ್ನಾರಿಗಿರುವುದು ? ಶಿವನನ್ನಲ್ಲದೆ ಮತ್ತೊಂದು ದೈವವನ್ನು ನುತಿಸದೆ-ಪ್ರಾರ್ಥಿಸದೆ-ಭಕ್ತಿಯಿಂ ನೋಡದೆ-ಆ ಪರಶಿವನ ಕಥೆಯಲ್ಲದೆ ಅನ್ಯಕಥೆಯನ್ನು ಹೇಳದೆ-ಶಿವಪ್ರಸಾದವಲ್ಲದೆ ಇತರದೈವಪ್ರಸಾದವನ್ನು ಸ್ವೀಕರಿಸದೆ-ಬಿರುದು ಭೂಮಿಯಲ್ಲಿ ನಿನಗಲ್ಲದೆ ಮತ್ತಾರಿಗೆ ಸಲ್ಲುವುದು ? ಭೂಮಿಯಲ್ಲಿ ನಾವೂ ಕವಿಗಳೆಂದು ಹೇಳಿಕೊಳ್ಳುತ್ತ, ಈ ಪದ್ಯಕ್ಕರ್ಥವೇನೆಂದು ಕೇಳದೆ, ಕವಿಮಾಮೇಲೆ ಕೈಯಿಟ್ಟು, ಮೇಲೆ ಕೆಳಗೆ ನೋಡುತ್ತ ಕೊನೆಗೆ ಏನನ್ನೂ ತಿಳಿಯದೆ ತಲೆಬಗ್ಗಿಸಿ ಕುಳಿತುಕೊಳ್ಳುವ ದುಷ್ಟಕವಿಗಳೆಲ್ಲ ವರಕವಿಗಳಾದಾರೆ? ವರಕವಿಗಳ ನಾಲಿಗೆ ಕಿವಿ ಮನಸ್ಸುಗಳನ್ನೆಲ್ಲ ಸೆಳೆದುಕೊಳ್ಳುವ ನಿನ್ನಂಥ ಶಕ್ತಿಯುಳ್ಳವನೇ ಸತ್ಕವಿ. ಈ ಭೂಮಿಯಲ್ಲಿ ಸಕಲ ಶಿವಶರಣರ ಚರಿತ್ರವನ್ನೂ ಕವಿಗಳು ರಚಿಸಿರುವರು; ಆದರೆ ಚೆನ್ನಬಸವೇಶನ ಚರಿತ್ರವನ್ನು ಮಾತ್ರ ಯಾರೂ ರಚಿಸಿರುವುದಿಲ್ಲ. ಅದನ್ನು ನೀನು ವಿರಚಿಸಬೇಕು" ಎಂದು ವಿನ್ನಯಿಸಿಕೊಂಡರು. ಅವರಿಷ್ಟಪ್ರಕಾರವಾಗಿ ಪಂಡಿತೋತ್ತಮನಾದ ಆವಿರೂಪಾಕ್ಷಕವಿಯು ವಹ್ನಿ

ಮಾಣವಾದ ಕಥಾಭಾಗಗಳನ್ನು ಸಂಗ್ರಹಿಸಿ, ಕರ್ನಾಟಕವ್ಯಾಕರಣಛಂ ದೋಬದ್ಧವಾಗಿ ವಾರ್ಧಕಷಟ್ಪದಿಯರೂಪದಿಂದ "ಚೆನ್ನಬಸವಪುರಾಣ" ವೆಂಬ ರಸವತ್ತಾದ ಕಾವ್ಯವನ್ನು ವಿರಚಿಸಿದನು.

ಪವ್ಯಮಯವಾದ ಆಗ್ರಂಥವು ವ್ಯುತ್ಪನ್ನರಿಗಲ್ಲದೆ ಸಾಮಾನ್ಯವಾಗಿ ಓದುಬರಹವಂ ಬಲ್ಲ ಕನ್ನಡಿಗರಿಗೆ ಸುಲಭವಾಗಿ ಅರ್ಥವಾಗದೆ ಇದ್ದು ದರಿಂದ, ಪೌರಾಣವಾಗಿದ್ದ ವೃಷಭೇಂದ್ರವಿಜಯಪುರಾಣವನ್ನು ಬೀಡುಗನ್ನಡ ನುಡಿಯ ರೂಪಿನಲ್ಲಿ "ಬಸವರಾಜವಿಜಯ" ವೆಂಬ ಹೆಸರಿನಿಂದ ಇದಕ್ಕೆ ಮುಂಚೆ ನೀನು ವಿರಚಿಸಿರುವಂತೆಯೇ ಚೆನ್ನಬಸವಪೌರಾಣವನ್ನೂ ವಿರ ಚಿಸಬೇಕೆಂದು ಸಹಸಮಯಿಗಳಾದ ಭಕ್ತೋತ್ತಮರು ನನ್ನನ್ನು ಪ್ರೇರಿ ಸಿದುದರಿಂದ ಎಸ್. ಆರ್.ಕರಿಬಸವಶಾಸ್ತ್ರಿಯವಾ ನಾನು ಕಲಿತವಿದ್ಯೆಗೆ ಶಿವನ ಮತ್ತೂ ಶಿವಶರಣರ ಚರಿತ್ರವನ್ನು ವಿಸ್ತರಿಸುವುದೇ ಭೂಷಣವೆಂ ಬುದನ್ನು ಮನಗಂಡು ನಾನೀಲುದ್ಯಮದಲ್ಲಿ ತೊಡಗಿದೆನು.

"ಭಾವೇಹಿವಿದ್ಯತೇದೈವಃ; ಪ್ರಯತ್ನಸದೃಶಂಫಲಂ" ಎಂಬ ವ ಚನದಂತೆ ಶಿವಾಭಿನ್ನರಾದ ಶರಣರ ಮತ್ತೂ ಆ ಶಿವನ ಚರಿತ್ರವನ್ನು ಈ ಗ್ರಂಥದಲ್ಲಿ ವಿಸ್ತರಿಸಬೇಕೆಂಬ ಆಶಯವು ನನ್ನ ಭಾವದಲ್ಲಿ ಸ್ಫುರಿಸಿದಕೂ ಡಲೇ, ಆಭಾವದಲ್ಲಿ ಸಂದಿರುವ ಶಿವಾತ್ಮಲಿಂಗವೇ ಆ ತನ್ನ ಚರಿತ್ರವನ್ನು "ಚೆನ್ನಬಸವೇಶವಿಜಯ" ವೆಂಬ ಹೆಸರಿನಿಂದ ಈರೂಪಕವಾಗಿ ಹೊರ ಹೊರಡಿಸಿರುವನು. ಅದುಕಾರಣ, ಈ ಶಿವವಚನವು ಸುಸಾಭ್ಯವಾಗಿ ಸು ಶ್ರಾವ್ಯವಾಗಿ ಸುಬೋಧವಾಗಿ ಆಚಂದ್ರತಾರಕವಾಗಿ ರಂಜಿಸುವಿ ಇರದು.

ಎಂಬಿಲ್ಲಿಗೆ ಬಂದನೆಯಧ್ಯಾಯವು ಸಂಪೂರ್ಣವು.

೨ ನೆಯ ಅಧ್ಯಾಯವು.

ಕಥಾರಂಭವು.

ಶ್ರೀ ಜಗದೀಶ್ವರನ ಆಜ್ಞೆಯಿಂದ ವಿಸ್ಫುರಿಸಿರುವ ಹದಿನಾಲ್ಕು ಲೋಕಗಳಲ್ಲಿ ಈಭೂಲೋಕವೊಂದಾಗಿ,ಐವತ್ತುಕೋಟಿಯೋಜನದಳತೆಯು

ಳುದಾಗಿರುವುದು. ಇದರಲ್ಲಿ ರುವ ಏಳು ದ್ವೀಪಗಳನ್ನು ಏಳು ಸಮುದ್ರಗಳು ಚಕ್ರಾಕಾರವಾಗಿ ಆವರಿಸಿಕೊಂಡಿರುವುವು. ಅವುಗಳಲ್ಲಿ ಲವಣಸಮುದ್ರವು ಈ ಜಂಬೂದ್ವೀಪವನ್ನು ಸುತ್ತಿಕೊಂಡಿರುವುದು. ಆ ಸಮುದ್ರವಾದರೊ, ಮೀನು, ಮೊಸಳೆ, ಹಾವು, ಆಮೆ, ಏಡಿ ಮೊದಲಾದ ನಾನಾಜಲಚರಪ್ರಾಣಿಗಳಿಂದಲೂ, ಮುತ್ತು ಹವಳ ಮೊದಲಾದ ನಾನಾರತ್ನಗಳಿಂದಲೂ ಸುಳಿ,ತೆರೆ,ನೊರೆಗಳಿಂದಲೂ, ದೋಣಿಗಳಿಂದಲೂ ಹಡಗುಗಳಿಂದಲೂ ಕೂಡಿ ಅಪಾರವಾಗಿ ಮೆರೆಯುತ್ತಿರುವುದು.ಆಸಮುದ್ರದ ನೀರು ಒಂದೊಂದುವೇಳೆ ಹೆಚ್ಚಿ ಉಬ್ಬುತ್ತಲೂ ಒಂದೊಂದುವೇಳೆ ತಗ್ಗಿ ಸರಿಯುತ್ತಲೂ ಇರುವುದನ್ನು ನೋಡಿದರೆ, '' ತನಗೆ ಮಹಾವಿಷ್ಣುವೇ ಅಳಿಯನು, ಬ್ರಹ್ಮನೇ ಮಾವ್ಮನು, ಲಕ್ಷ್ಮಿಯೇ ಮಗಳು, ದೇವಗಂಗೆಯೇ ಪತ್ನಿಯು, ದೇವತೆಗಳನ್ನು ತನ್ನ ಅಮೃತದಿಂದ ಸಲಹುವ ಚಂದ್ರನೇ ತನ್ನ ಮಗನು, ದೇವೇಂದ್ರನಿಗೆ ಕಾಮಧೇನು ಕಲ್ಪವೃಕ್ಷಾದಿಸಂಪತ್ತನ್ನು ಕೊಟ್ಟವನೇ ನಾನು, ಪಾರ್ವತಿಯ ತಮ್ಮನಾದ ಮೈನಾಕನು ಮರೆಹುಗಲು ಸಲಹಿದವನೇ ನಾನು, ಅದುಕಾರಣ ನನಗೆ ಸಮಾನರಾರು? ''ಎಂಬ ಹಮ್ಮಿನಿಂದ ಸಮುದ್ರವು ಉಬ್ಬುತ್ತಿರುವಂತೆಯೂ,''ನನ್ನನ್ನು ಅಗಸ್ತ್ಯಮಹರ್ಷಿಯು ಕುಡಿದುಬಿಟ್ಟನು, ಬಡಬಾಗ್ನಿಯು ನನ್ನನ್ನು ಸದಾಹೀರುತ್ತಿರುವುದು,ನಾನು ಭಂಗವನ್ನು(ಹಾನಿ-ತೆರೆ) ಹೊಂದಿರುವೆನು'' ಎಂಬ ದುಃಖದಿಂದ ಕುಗ್ಗುತ್ತಿರುವಂತೆಯೂ ತೋರುತ್ತಿರುವುದು. ಇಂತಹ ಸಮುದ್ರವು ಸುತ್ತುವರಿದಿರುವ ಜಂಬೂದ್ವೀಪವು,ಕಾಶಿ ಕೇದಾರ ಹಂಪೆ ಗಯೆ ಶ್ರೀಶೈಲ ಮೊದಲಾದ ನಾನಾಪುಣ್ಯಕ್ಷೇತ್ರಗಳನ್ನು ಪಡೆದು, ಧರ್ಮಾರ್ಥಕಾಮಮೋಕ್ಷ ಸಂಪಾದನಾರ್ಥವಾಗಿ ದುರ್ಧರತಪಸ್ಸನ್ನಾಚರಿಸುತ್ತಿರುವ ಮುನಿಗಳಿಂದಲೂ ದೇವತೆಗಳಿಂದಲೂ ಕೂಡಿ, ಅನೇಕ ದೇಶಗಳಿಂದಲೂ, ನದೀವನಪರ್ವತಾವಳಿಗಳಿಂದಲೂ, ಮನೋಹರವಾಗಿ ತೋರುತ್ತಿರುವುದು. ಆ ದ್ವೀಪದ ಮಧ್ಯದಲ್ಲಿ ಈಶ್ವರವಾಹನಾರ್ಥವಾಗಿ ಬ್ರಹ್ಮನಿಂದ ನಿರ್ಮಿಸಿ ಸಿದ್ಧಮಾಡಲ್ಪಟ್ಟಿರುವ ಸಾಲಂಕಾರಮಹಾಗಜದಂತೆ ಮೇರುಪರ್ವತವು ಶೋಭಿಸುತ್ತಿರುವುದು. ಆ ಪರ್ವತದ ಮೇಲಣ ಒಂದೊಂದು ಶಿಖರಗಳಲ್ಲಿ ವಿಷ್ಣುಬ್ರಹ್ಮೇಂದ್ರಾದಿದೇವತೆಗಳ ಪಟ್ಟಣಗಳು ರಂಜಿಸುತ್ತಿರುವುವು. ದಕ್ಷಿಣಭಾಗದ ಶಿಖರದಲ್ಲಿ ಸಕಲ ದೇ

ಮಾಣವಾದ ಕಥಾಭಾಗಗಳನ್ನು ಸಂಗ್ರಹಿಸಿ, ಕರ್ನಾಟಕವ್ಯಾಕರಣಛಂ ದೋಬದ್ಧವಾಗಿ ವಾರ್ಧಕಷಟ್ಪದಿಯರೂಪದಿಂದ "ಚೆನ್ನಬಸವಪುರಾಣ" ವೆಂಬ ರಸವತ್ತಾದ ಕಾವ್ಯವನ್ನು ವಿರಚಿಸಿದನು.

ಪದ್ಯಮಯವಾದ ಆಗ್ರಂಥವು ವ್ಯುತ್ಪನ್ನರಿಗಲ್ಲದೆ ಸಾಮಾನ್ಯವಾಗಿ ಓದುಬರಹವಂ ಬಲ್ಲ ಕನ್ನಡಿಗರಿಗೆ ಸುಲಭವಾಗಿ ಅರ್ಥವಾಗದೆ ಇದ್ದು ದರಿಂದ, ಪೌರಾಣವಾಗಿದ್ದ ವೃಷಭೇಂದ್ರವಿಜಯಪುರಾಣವನ್ನು ಬಿಡುಗನ್ನಡ ನುಡಿಯ ರೂಪಿಸಲ್ಲಿ "ಬಸವರಾಜವಿಜಯ" ವೆಂಬ ಹೆಸರಿನಿಂದ ಇದಕ್ಕೆ ಮುಂಚೆ ನೀನು ವಿರಚಿಸಿರುವಂತೆಯೇ ಚೆನ್ನಬಸವಪೌರಾಣವನ್ನೂ ವಿರ ಚಿಸಬೇಕೆಂದು ಸಹಸಮಯಿಗಳಾದ ಭಕ್ತೋತ್ತಮರು ನನ್ನನ್ನು ಪ್ರೇರಿ ಸಿದುದರಿಂದ ಎಸ್. ಆರ್.ಕರಿಬಸವಶಾಸ್ತ್ರಿಯಾದ ನಾನು ಕಲಿತವಿದ್ಯೆಗೆ ಶಿವನ ಮತ್ತೂ ಶಿವಶರಣರ ಚರಿತ್ರವನ್ನು ವಿಸ್ತರಿಸುವುದೇ ಭೂಷಣವೆಂ ಬುದನ್ನು ಮನಗಂಡು ನಾಸೀಲುದ್ಯಮದಲ್ಲಿ ತೊಡಗಿದೆನು.

"ಭಾವೇಶಿವಿದ್ಯತೇದೈವಃ; ಪ್ರಯತ್ನಸದೃಶಂಫಲಂ" ಎಂಬ ವಚನವಂತೆ ಶಿವಾಭಿನ್ನರಾದ ಶರಣರ ಮತ್ತೂ ಆ ಶಿವನ ಚರಿತ್ರವನ್ನು ಈ ಗ್ರಂಥದಲ್ಲಿ ವಿಸ್ತರಿಸಬೇಕೆಂಬ ಆಶಯವು ನನ್ನ ಭಾವದಲ್ಲಿ ಸ್ಫುರಿಸಿದಕೂ ಡಲೇ, ಆಭಾವದಲ್ಲಿ ಸಂದಿರುವ ಶಿವಾತ್ಮಲಿಂಗವೇ ಆ ತನ್ನ ಚರಿತ್ರವನ್ನು "ಚೆನ್ನಬಸವೇಶವಿಜಯ" ವೆಂಬ ಹೆಸರಿನಿಂದ ಈರೂಪಕವಾಗಿ ಹೊರ ಹೊರಡಿಸಿರುವನು. ಅದುಕಾರಣ, ಈ ಶಿವವಚನವು ಸುಸಾಧ್ಯವಾಗಿ ಸು ಶಾವ್ಯವಾಗಿ ಸುಬೋಧವಾಗಿ ಆಚಂದ್ರತಾರಕವಾಗಿ ರಂಜಿಸುತಿ ಇರಲಿ.

ಎಂಬಿಲ್ಲಿಗೆ ಬಂದನೆಯಧ್ಯಾಯವು ಸಂಪೂರ್ಣವು.

೨ ನೆಯ ಅಧ್ಯಾಯವು.

ಕಥಾರಂಭವು.

ಶ್ರೀ ಜಗದೀಶ್ವರನ ಆಜ್ಞೆಯಿಂದ ವಿಸ್ಫುರಿಸಿರುವ ಹದಿನಾಲ್ಕು ಲೋಕಗಳಲ್ಲಿ ಈಭೂಲೋಕವೊಂದಾಗಿ,ಐವತ್ತು ಕೋಟಿಯೋಜನದಳತೆಯು


ಳುದಾಗಿರುವುದು. ಇದರಲ್ಲಿ ರುವ ಏಳು ದ್ವೀಪಗಳನ್ನು ಏಳು ಸಮುದ್ರಗಳು ಚಕ್ರಾಕಾರವಾಗಿ ಆವರಿಸಿಕೊಂಡಿರುವುವು. ಅವುಗಳಲ್ಲಿ ಲವಣಸಮುದ್ರವು ಈ ಜಂಬೂದ್ವೀಪವನ್ನು ಸುತ್ತಿಕೊಂಡಿರುವುದು. ಆ ಸಮುದ್ರವಾದರೊ, ಮೀನು, ಮೊಸಳೆ, ಹಾವು, ಆಮೆ, ಏಡಿ ಮೊದಲಾದ ನಾನಾಜಲಚರಪ್ರಾಣಿಗಳಿಂದಲೂ, ಮುತ್ತು ಹವಳ ಮೊದಲಾದ ನಾನಾರತ್ನಗಳಿಂದಲೂ ಸುಳಿ,ತೆರೆ,ನೊರೆಗಳಿಂದಲೂ, ದೋಣಿಗಳಿಂದಲೂ ಹಡಗುಗಳಿಂದಲೂ ಕೂಡಿ ಅಪಾರವಾಗಿ ಮೆರೆಯುತ್ತಿರುವುದು.ಆಸಮುದ್ರವ ನೀರು ಒಂದೊಂದುವೇಳೆ ಹೆಚ್ಚಿ ಉಬ್ಬುತ್ತಲೂ ಒಂದೊಂದುವೇಳೆ ತಗ್ಗಿ ಸರಿಯುತ್ತಲೂ ಇರುವುದನ್ನು ನೋಡಿದರೆ, " ತನಗೆ ಮಹಾವಿಷ್ಣುವೇ ಅಳಿಯನು, ಬ್ರಹ್ಮನೇ ಮಾವ್ಯನು, ಲಕ್ಷ್ಮಿಯೇ ಮಗಳು, ದೇವಗಂಗೆಯೇ ಪತ್ನಿಯು, ದೇವತೆಗಳನ್ನು ತನ್ನ ಅಮೃತದಿಂದ ಸಲಹುವ ಚಂದ್ರನೇ ತನ್ನ ಮಗನು, ದೇವೇಂದ್ರನಿಗೆ ಕಾಮಧೇನು ಕಲ್ಪವೃಕ್ಷಾದಿಸಂಪತ್ತನ್ನು ಕೊಟ್ಟವನೇ ನಾನು, ಪಾರ್ವತಿಯ ತಮ್ಮನಾದ ಮೈನಾಕನು ಮರೆಹುಗಲು ಸಲಹಿದವನೇ ನಾನು, ಅದುಕಾರಣ ನನಗೆ ಸಮಾನರಾರು? "ಎಂಬ ಹಮ್ಮಿನಿಂದ ಸಮುದ್ರವು ಉಬ್ಬುತ್ತಿರುವಂತೆಯೂ,"ನನ್ನನ್ನು ಅಗಸ್ತ್ಯಮಹರ್ಷಿಯು ಕುಡಿದುಬಿಟ್ಟನು, ಬಡಬಾಗ್ನಿಯು ನನ್ನನ್ನು ಸದಾಹೀರುತ್ತಿರುವುದು,ನಾನು ಭಂಗವನ್ನು(ಹಾನಿ-ತೆರೆ) ಹೊಂದಿರುವೆನು" ಎಂಬ ದುಃಖದಿಂದ ಕುಗ್ಗುತ್ತಿರುವಂತೆಯೂ ತೋರುತ್ತಿರುವುದು. ಇಂತಹ ಸಮುದ್ರವು ಸುತ್ತುವರಿದಿರುವ ಜಂಬೂದ್ವೀಪವು,ಕಾಶಿ ಕೇದಾರ ಹಂಪೆ ಗಯೆ ಶ್ರೀಶೈಲ ಮೊದಲಾದ ನಾನಾಪುಣ್ಯಕ್ಷೇತ್ರಗಳನ್ನು ಪಡೆದು, ಧರ್ಮಾರ್ಥಕಾಮಮೋಕ್ಷ ಸಂಪಾದನಾರ್ಥವಾಗಿ ದುರ್ಧರತಪಸ್ಸನ್ನಾಚರಿಸುತ್ತಿರುವ ಮುನಿಗಳಿಂದಲೂ ದೇವತೆಗಳಿಂದಲೂ ಕೂಡಿ, ಅನೇಕ ದೇಶಗಳಿಂದಲೂ, ನದೀವನಪರ್ವತಾವಳಿಗಳಿಂದಲೂ, ಮನೋಹರವಾಗಿ ತೋರುತ್ತಿರುವುದು. ಆ ದ್ವೀಪದ ಮಧ್ಯದಲ್ಲಿ ಈಶ್ವರವಾಹನಾರ್ಥವಾಗಿ ಬ್ರಹ್ಮನಿಂದ ನಿರ್ಮಿಸಿ ಸಿದ್ಧಮಾಡಲ್ಪಟ್ಟಿರುವ ಸಾಲಂಕಾರಮಹಾಗಜದಂತೆ ಮೇರುಪರ್ವತವು ಶೋಭಿಸುತ್ತಿರುವುದು. ಆ ಪರ್ವತದ ಮೇಲಣ ಒಂದೊಂದು ಶಿಖರಗಳಲ್ಲಿ ವಿಷ್ಣುಬ್ರಹ್ಮೇಂದ್ರಾದಿದೇವತೆಗಳ ಪಟ್ಟಣಗಳು ರಂಜಿಸುತ್ತಿರುವುವು. ದಕ್ಷಿಣಭಾಗದ ಶಿಖರದಲ್ಲಿ ಸಕಲ ದೇ

ವತೆಗಳೂ ಪ್ರಜಿಸುವ ಸ್ಫಟಿಕಲಿಂಗವೋ ಎಂಬಂತೆ ಧವಳಮಯವಾದ ಕಾಂತಿಯಿಂದ ಝಗಝಗಿಸುತ್ತಿರುವ ಕೈಲಾಸಪರ್ವತವು ಮೆರೆಯುತ್ತಿರುವುದು. ಆ ಪರ್ವತದಲ್ಲಿರುವ ಶಿಲೆಗಳೆಲ್ಲವೂ ಸ್ಪರ್ಶಶಿಲೆಯ ಖನಿಗಳೇ; ಅಲ್ಲಿರುವ ರತ್ನನೆಲ್ಲವೂ ಚಿಂತಾರತ್ನವೇ; ಮರಗಳೆಲ್ಲವೂ ಕಲ್ಪವೃಕ್ಷವೇ; ಗರಿಸದಿಯ ಜಲವೆಲ್ಲವೂ ಸಿದ್ಧರಸವೇ; ಮೃಗಗಳೆಲ್ಲವೂ ಪುಣ್ಯಮೃಗಗಳೇ; ಹೀಗಿರುವಲ್ಲಿ ಆಪರ್ವತದ ಮಹಿಮೆಯನ್ನು ಸಾಮಾನ್ಯವಾಗಿ ಹೊಗಳಲಾದೀತೆ? ಆ ಪರ್ವತದಮೇಲೆ ಶಿವಾಗಮಗಳೇ ಕೋಟೆಯಾಗಿಯೂ, ಅಮೃತವೇ ಅಗಳ ನೀರಾಗಿಯೂ, ವೈರಾಗ್ಯವೇ ಆಳ್ವೇರಿಯಾಗಿಯೂ, ಶಿವಜ್ಞಾನವೇ ಧ್ವಜಗಳಾಗಿಯೂ, ಶಿವಭಕ್ತಿಯೇ ಕೋಟೆಗಳಾಗಿಯೂ, ಮುಕ್ತಿಯೇ ಏರುದಿಣ್ಣೆಯಾಗಿಯೂ, ವೇದಗಳೇ ಬಾಗಿಲಾಗಿಯೂ, ಸತ್ಯವೇ ಕವಚಗಳಾಗಿಯೂ ಪುಣ್ಯಾವಾಸವಾಗಿಯೂ, ಪಾಪನಾಶಕವಾಗಿಯೂ, ಇರುವ ಶಿವನ ಪಟ್ಟಣವಿರುವುದು. ದೇವತಾಸಾರ್ವಭೌಮನಾದ ಪರಮಶಿವನೇ ಆ ಪಟ್ಟಣಕ್ಕಧಿಪತಿಯಾಗಿರುವನು. ಆ ಸ್ವಾಮಿಯು ಪ್ರತಿದಿನದಲ್ಲೂ ಒಡ್ಡೋಲಗಂಗೊಟ್ಟು, ವಿಷ್ಣುಬ್ರಹ್ಮೇಂದ್ರಾದಿಗಳ ಸ್ತುತಿಯನ್ನು ಲಾಲಿಸಿ, ಅಷ್ಟಲೋಕಪಾಲಕರ ಬಿನ್ನಹವಂಲಾಲಿಸಿ, ಭಕ್ತೋತ್ತಮರ ಭಕ್ತಿಗ ಬಲಿದು, ಸಭೆಯಲ್ಲಾಗುವ ಸರ್ವೋಪಚಾರವನ್ನು ಕೈಕೊಳ್ಳುತ್ತ, ಕುಳಿತಲ್ಲಿಯೇ ಜಗದ್ವ್ಯಾಪಾರವನ್ನೆಲ್ಲ ತಿಳಿದುಕೊಳ್ಳುತ್ತ, ಸರ್ವರನ್ನೂ ಮನ್ನಿಸಿ ಕಳುಹಿಸಿ, ಹೀಗೆಯೇ ಪರಮಾನಂದದಿಂದ ಜಗತ್ತನ್ನೆಲ್ಲ ಕಾಪಾಡುತ್ತಿದ್ದನು. ಒಂದಾನೊಂದುದಿವಸ ಎಂದಿನಂತೆ ಶಿವನ ಒಡ್ಡೋಲಗಕ್ಕೆ ಅನಂತವಿಷ್ಣುಗಳೂ, ಅನೇಕ ಬ್ರಹ್ಮರುಗಳೂ, ಇಂದ್ರಾದ್ಯಷ್ಟದಿಕ್ಪಾಲಕರೂ, ತಮ್ಮತಮ್ಮ ವಾಹನಗಳನ್ನೇರಿ ದಯಮಾಡಿಸಿದರು. ದೇವ ದಾನವ ಯಕ್ಷ ಕಿನ್ನರ ಕಿಂಪುರುಷ ಗಂಧರ್ವ ಗರುಡ ಸಿದ್ಧ ವಿದ್ಯಾಧರ ಗುಹ್ಯಕ ಉರಗ ಮಯೂರ ಮಾನವ ಪಿಶಾಚಾದಿಸಂಕುಲವು ಸಭೆಗೆ ಬರುತ್ತಿದ್ದಿತು. ದ್ವಾದಶಾದಿತ್ಯರು, ಏಕಾದಶರುದ್ರರು, ನವಗ್ರಹಗಳು, ನವಬ್ರಹ್ಮರುಗಳು, ಅಷ್ಟವಸುಗಳು, ಸಪ್ತಋಷಿಗಳು, ಚತುರ್ದಶಮನುಗಳು ಸಹ ಗುಂಪುಗುಂಪಾಗಿ ಬರುತ್ತಿದ್ದರು. ಭರದ್ವಾಜ ಮಾಂಡವ್ಯ ಮಾರ್ಕಂಡೇಯ ರೋಮಜ ವ್ಯಾಸ ಬಕ ದಾಲ್ಭ್ಯ ಶುಕಪರಾಶರ ಭೃಗು ಅಗಸ್ತ್ಯ ಮೈತ್ರೇಯ ವಾಲಖಿಲ್ಯ ಗಾಲವ ಗಾರ್ಗ್ಯ ದೂರ್ವಾಸ ಶ

ರಭ ಕೌಂಡಿನ್ಯ ಪುಷ್ಕಲ ಪುಷ್ಪದತ್ತ ಸನಕ ಸನಂದನ ನಾರದಾದಿಋಷಿ ಸಮೂಹವೆಲ್ಲವೂ ಬರುತ್ತಿದ್ದಿತು. ಲಕ್ಷ್ಮಿ ಸರಸ್ವತಿ ಅಹಲ್ಯೆ ಲೋಪಾ ಮುದ್ರೆ ಅರುಂಧತಿ ಮೊದಲಾದ ಸತೀಶಿರೋಮಣಿಗಳೂ, ರಂಭೆ ಊರ್ವಶಿ ಮೇನಕೆ ತಿಲೋತ್ತಮೆ ಮೊದಲಾದ ದೇವವೇಶ್ಯಾಂಗನೆಯರೂ, ಗಂಗೆ ಸರಸ್ವತಿ ಕುಮುದ್ವತಿ ಕಾವೇರಿ ಗೋದಾವರಿ ಮೊದಲಾದ ನದೀನಾರಿಯರುಗಳೂ ಬರುತ್ತಿದ್ದರು. ಸಪ್ತಮಾತೃಕೆಯರು ೬೪ ಯೋಗಿನಿಯರು ದಿಕ್ಪಾಲಕರ ಪತ್ನಿಯರು, ೨೭ ನಕ್ಷತ್ರಕನ್ಯೆಯರು, ರುದ್ರಕನ್ಯಕೆಯರು, ನಾಗಕನ್ಯಕೆಯರು, ಅಪ್ಸರಮಹಾಲಕ್ಷ್ಮಿಯರು, ಭೂಮ್ಯಂತರಿಕ್ಷಲೋಕದಲ್ಲಿರುವ ಪುಣ್ಯಸ್ತ್ರೀಯರುಗಳು ಸಹ ಬಂದು ಭಯಭಕ್ತಿಯಿಂದ ಮಹಾಪಾರ್ವತಿಯ ಹಿಂಗಡೆಯಲ್ಲಿ ನಿಂತಿದ್ದರು. ಎಡಗಡೆಯಲ್ಲಿ ಸಕಲನಾರೀಸಂಕುಲವೂ ಬಲಗಡೆಯಲ್ಲಿ ವಿಷ್ಣುಬ್ರಹ್ಮೇಂದ್ರಾದಿದೇವಸಂಕುಲವೂ ನಿಜೆಡವಾಗಿದ್ದುವು. ಮಧ್ಯದಲ್ಲಿ ಥಳಥಳಿಸಿ ಹೊಳೆಯುತ್ತಿರುವ ದಿವ್ಯತೇಜೋಮಯವಾದ ಸಿಹಾಸನವನ್ನೇರಿ ಅಪಿಲಾಂಡಕೋಟಿಬ್ರಹ್ಮಾಂಡನಾಯಕನಾದ ಮಹಾದೇವನು ಶ್ರೀ ಪಾರ್ವತೀಸಮೇತನಾಗಿ ಶುದ್ಧಸ್ಫಟಿಕಸಂಕಾಶನಾಗಿ ಭಸ್ಮಲಿಪ್ತಾಂಗನಾಗಿ ಸರ್ಪಾಭರಣಭೂಷಿತನಾಗಿ ಚಂದ್ರಗಂಗಾಮಂಡಿತಮೌಳಿಯಾಗಿ, ಪ್ರಸನ್ನಮುಖಮಂಡಲನಾಗಿ, ವರಾಭಯಶೂಲಡಮರುಗಹಸ್ತನಾಗಿ, ತ್ರಿಪುಂಡ್ರವಿಲಸಿತಫಾಲನಾಗಿ, ಚರ್ಮಾಂಬರಧಾರಿಯಾಗಿ ಮಂಡಿಸಿದ್ದನು. ಒಲಗಡೆ ಸವಿಾಪದಲ್ಲಿ ವಿಷ್ಣುಬ್ರಹ್ಮರುಗಳು ಉಚಿತ ಪೀಠಗಳಲ್ಲಿ ಸಪರಿವಾರರಾಗಿ ಕುಳಿತಿದ್ದರು. ಮುಂಗಡೆಯಲ್ಲಿ ವೀರಭದ್ರ, ಷಣ್ಮುಖ, ಗಣಪತಿಗಳೂ, ರೇಣುಕ, ದಾರುಕ, ಗಜಕರ್ಣ, ಘಂಟಾಕರ್ಣ ಭೈರವ, ಚಂಡೇಶ, ಕೂಷ್ಮಾಂಡ, ಗಗನಾಂಗ, ಧೂಮ್ರಾಂಗ, ಶೈಲಾಂಗ, ಮೊದಲಾದ ಮಹಾಗಣಗಳೂ ಸಾಲುಸಾಲಾಗಿ ಕುಳಿತಿದ್ದರು. ಏಳು ಸಮುದ್ರವನ್ನೂ ಸುರ್ರನೆ ಹೀರಿಬಿಡುವ-ಒಡಬಾಗ್ನಿಯನ್ನು ಮಿಂಚು ಹುಳುವಿನಂತೆ ಪಿಡಿದುಕೊಳ್ಳುವ-ಆಟಕ್ಕೇಪನ ಪಡೆಯನ್ನು ಕೆತ್ತು ಭೂಮಿಯನ್ನು ಬೆರಳ ತುದಿಯಲ್ಲಿ ಸಿಲ್ಲಿಸಿಕೊಳ್ಳುವ-ಕೋಪಗೊಂಡರೆ ಸಕಲ ಜಗತ್ತನ್ನೂ ನಿಮಿಷಮಾತ್ರದಲ್ಲಿ ಸುಟ್ಟುಬಿಡುವ-ಮೇರುಪರ್ವತವನ್ನು ಗೋಲಿಯಾಡುವ-ನಕ್ಷತ್ರಗಳನ್ನು ಕೀಳುವ-ಸೂರ್ಯಮಂಡಲವನ್ನು ಭೇದಿಸುವ-ಸಿಡಿಲನ್ನು

ಸೀಳುವ–ಮಹಾಶಕ್ತಿಯುಳ್ಳ ರುದ್ರಗಣವೆಲ್ಲವೂ ಆ ಮಹಾ ಸಭೆಯಲ್ಲಿ ಸೇರಿದ್ದಿತು. ಮತ್ತೂ ಸಾಮೀಪ್ಯ ಸಾಲೋಕ್ಯ ಸಾರೂಪ್ಯವನ್ನೈದಿದವರೆಲ್ಲರೂ ಅಲ್ಲಿ ಕುಳಿತಿದ್ದರು. ಆಗ ನಂದಿ ಮಹಾಕಾಳರೆಂಬ ವೇತ್ರಧರರೀರ್ವರೂ ನಿಂತು ,, ಕೂಗುವಂತೆ! ಸದ್ದು! ಎಚ್ಚರ! ಏಳಿರಿ! ಗುಸುಗುಟ್ಟದಿರಿ” ಎಂದು ಮೊದಲಾಗಿ ಸಭಿಕರೆಲ್ಲರನ್ನೂ ಎಚ್ಚರಿಸುತ್ತಲಿದ್ದರು. ವೇದಪುರುಷನು ಉಚ್ಚೈಃಸ್ವರದಿಂದ ಋಗ್ವೇದವನ್ನು ಪಠಿಸುತ್ತಿದ್ದನು. ಭೃಂಗೀಶನು ಮಧ್ಯಾಂಗಣದಲ್ಲಿ ನಿಂತು ಬಿರುಬಿರನೆ ಕಣ್ಣನ್ನು ಬಿಟ್ಟು ಹಲ್ಲನ್ನು ಕಿರಿದು ಮುಖವನ್ನು ರುಗಿಸಿ, ಕತ್ತಂ ತಿರುಗಿಸಿ, ಹುಬ್ಬರಲ ತುದಿಯನ್ನೂರಿ ನಿಂತು ಬಿಗ್ಗಿಸಿ ಬಿಗಿ ತುಕೊಂಡು ತಿರುತಿರನೆ ತಿರುಗಿ ಒಗ್ಗಿ ಆನೆದು ಅಣಕಿಸಿ ನಾನಾವಿಧವಾಗಿ ಅಂಗವಿಕೃತಿಯಂ ಮಾಡಿ ಕುಣಿಯುತ್ತ ಸಭೆಯಲ್ಲಿ ಹಾಸ್ಯರಸವಂ ಸುರಿಸುತ್ತಿದ್ದನು. ತುಂಬುರನಾರದರು ವೀಣೆಯಂ ಶ್ರುತಿಮಾಡಿ ಸಪ್ತಸ್ವರಗಳನ್ನು ಅನುಸರಿಸಿ ಲಯಗತಿಗಳಂ ಪಿಡಿದು ಆರೋಹಣಾವರೋಹಣಕ್ರಮಗಳಂ ತಪ್ಪದೆ, ಶುದ್ಧವಿಪ್ರಸಂಕೀರ್ಣಾದಿವಾಗಜಾತಿಗಳನರಿದು ಇಂಪಾಗಿ ಹಾಡಿ ವೀಣೆಯಂ ಬಾಜಿಸಿ ಸಭಿಕರನ್ನು ಗಾನಾಸಂದದಲ್ಲಿ ಮುಳುಗಿಸುತ್ತಿದ್ದರು. ಊರ್ಧ್ವಶೇರಂಭಾದಿವಾರಾಂಗನೆಯರು ತಾಳ ಮದ್ದಳೆ ಕೊಳಲು ವೀಣೆಗಳ ಶ್ರುತಿಲಯಗಳನ್ನನುಸರಿಸಿ, ಸಲಕ್ಷಣವಾಗಿ ಅಭಿನಯಪೂರ್ವಕವಾಗಿ ವೃದ್ಧದೇವೀಯಾದಿ ಭೇದಗಳ ನೃತ್ತನವನ್ನು ಮಾಡುತ್ತಿದ್ದರು. ಪಾರ್ವತೀಪ್ರಭೆಯಿಂದ ಶೃಂಗಾರರಸವೂ, ವೀರಭದ್ರೇಶನಿಂದ ವೀರರಸವೂ ಶಿವನ ಅಂತರಂಗದ ಕರುಣಾರಸವೂ, ಪಿಶಾಚಗಳಿಂದ ಅದ್ಭುತರಸವೂ, ಭೃಂಗೀಶನಿಂದ ಹಾಸ್ಯರಸವೂ, ಭಕ್ತರ ಮನಸ್ಸಿನ ಭಯರಸವೂ, ವ್ಯಾಘ್ರಚರ್ಮ ಅಸ್ಥಿಮಾಲೆಗಳ ಭೂಷಣವುಳ್ಳ ಶಿವಗಣದಿಂದ ಬೀಭತ್ಸರಸವೂ, ರುದ್ರಗಣದಿಂದ ರೌದ್ರರಸವೂ, ಋಷಿಗಳಿಂದ ಶಾಂತರಸವೂ ಹೊರಸೂಸುತ್ತ ಆ ಶಿವಸಭೆಯಲ್ಲಿ ಹೀಗೆ ನವರಸವೂ ತುಳುಕಾಡುತ್ತಿದ್ದಿತು. ಕುಬೇರನು ಕೈಚೀಲವನ್ನು ಹಿಡಿದುಕೊಂಡಿದ್ದನು. ವರುಣನು ನೀರ್ಗಿಂಡಿಯನ್ನು ಹಿಡಿದಿದ್ದನು. ವಾಯುವು ಹೂವಿನ ಬೀಸಣಿಗೆಯನ್ನು ಬೀಸುತ್ತಿದ್ದನು. ನಿಋತಿಯು ಕಾಳಂಜಿಯನ್ನು ಹಿಡಿದಿದ್ದನು. ಇಂದ್ರನು ರತ್ನದ ಕನ್ನಡಿಯನ್ನು ಹಿಡಿದಿದ್ದನು. ಸೂರ್ಯ ಚಂದ್ರರು ಚಾಮರಗಳನ್ನು ಬೀಸುತ್ತಿ

ದ್ದರು. ವಿಷ್ಣು ಬ್ರಹ್ಮಾದಿ ದೇವತಾಸ್ತೋಮವೆಲ್ಲವೂ ಆಗಾಗ್ಗೆ ನಮಸ್ಕರಿಸಿ, ಎದ್ದು ಕೈಕಟ್ಟಿ ನಿಂತು ಭಕ್ತಿಯಿಂದ ಸ್ತುತಿಸುತ್ತಿದ್ದಿತು. ಜಯ ಜಯ ಮಹಾದೇವ ಎಂಬ ಶಬ್ದವು ಸಭೆಯಲ್ಲೆಲ್ಲ ಪ್ರತಿಧ್ವನಿಗುಡುತ್ತಿದ್ದಿತು. ಆಗ ಪರಶಿವನು ಪ್ರಸನ್ನನಾಗಿ ವಿಷ್ಣು ಬ್ರಹ್ಮೇಂದ್ರಾದಿ ದೇವಶ್ರೇಷ್ಠರುಗಳನ್ನು ಕೃಪಾಕಟಾಕ್ಷದಿಂ ನೋಡಿ, ಕಣ್ಣಸ್ಸನ್ನೆಯಿಂದ ಸಮೀಪಕ್ಕೆ ಕರೆದು, ಅವರ ಮನೋಭಾವಗಳನ್ನು ಕೇಳಿ, ಮನ್ನಿಸಿ, ಮುನಿಗಳ ಭಕ್ತಿಗೆ ಮೆಚ್ಚಿ, ಇತರರನ್ನು ಯೋಗ್ಯತಾನುಸಾರವಾಗಿ ಅನುಗ್ರಹಿಸುತ್ತಿದ್ದನು. ಎಂಬಲ್ಲಿಗೆ ಎರಡನೆ ಅಧ್ಯಾಯವು ಸಂಪೂರ್ಣವು.



೩ನೆ ಅಧ್ಯಾಯವು.

(ಚಿತ್ಕಳಾವತರಣ).

ಪರಮೇಶ್ವರನು ಈ ರೀತಿಯಾದ ವಿಭವದಿಂದ ಕೈಲಾಸದ ಮಹಾಸಭೆಯಲ್ಲಿ ಬಿಜ್ಜಿರುತ್ತಿರಲು, ಪಾರ್ವತಿಯು ಪತಿಯನ್ನು ಕುರಿತು—ಸ್ವಾಮಿಯೆ! ನಾರದ ಮಹರ್ಷಿಯು ಪ್ರಾರ್ಥನೆಯಮೇರೆ ಶಿವಭಕ್ತಿ ಸಮುದ್ಧರಣಾರ್ಥವಾಗಿ ನಂದ್ಯಾದಿಪ್ರಮಥರನ್ನು ಭೂಮಿಯಲ್ಲಿ ಅವತರಿಸಬೇಕೆಂದು ಜಿಸಿನಿವಾಗ್ಗೆ, ಅವರುಗಳಿಗೆ ತತ್ತ್ವೋಪದೇಶವನ್ನು ಮಾಡುವುದಕ್ಕಾಗಿ ನಿಮ್ಮ ಚಿತ್ಕಳೆಯನ್ನೇ ಅವರ ಸಂಗಡ ಹೋಗಿ ಭೂಮಿಯಲ್ಲಿ ಅವತರಿಸುವಂತೆ ಮಾಡುವೆನೆಂದು ಅಪ್ಪಣೆಕೊಡಿಸಿದ್ದಿರಷ್ಟೆ. ಅದನ್ನು ನೆರವೇರಿಸಬೇಡವೆ? ಎಂದು ಸೂಚಿಸಲು, ಪರಶಿವನು ಅಹುದೆಂದು ಹೇಳಿ, ತನ್ನ ಹೃತ್ಕಮಲ ಮಧ್ಯದಲ್ಲಿರುವ ಚಿತ್ಪ್ರಣವಸ್ವರೂಪವನ್ನು ಸ್ಮರಿಸಿಕೊಂಡನು. ಆ ಪ್ರಣವನೇ ದಿವ್ಯತೇಜೋಭರಿತವಾದ ಆಕಾರವನ್ನು ಧರಿಸಿ, ಆರುಮುಖಿಗಳನ್ನು ಹೊಂದಿ, ಈಶ್ವರನ ಮುಂಗಡೆಯಲ್ಲಿ ಬಂದು ನಿಂತು, ಭಕ್ತಿಯಿಂದ ನಮಸ್ಕರಿಸಿತು. ಆ ಕುಮಾರನನ್ನು ಪರಶಿವನು ತೆಗೆದಪ್ಪಿ, ಮುದ್ದಾಡಿ, ತೊಡೆಯಮೇಲೆ ಕುಳ್ಳಿರಿಸಿಕೊಂಡು, ಎಲೆ ನಂದನನೇ! ನಂದ್ಯಾದಿ ಮಹಾಗಣಂಗಳೆಲ್ಲರೂ ಭೂಲೋಕಕ್ಕೆ ಹೋಗಿ ಮಾನವರೂಪಿನಿಂದ ಅವತರಿಸಿ

ರುವರು. ನೀನೂ ಅಲ್ಲಿಗೆ ಹೋಗಿ ಮಾನವಾಕಾರದಿಂದ ಜನಿಸಿ, ಅವರೆಲ್ಲರಿಗೂ ಷಟ್ಸ್ಥಲತತ್ತ್ವವನ್ನುಪದೇಶಿಸಿ, ಮುಕ್ತರನ್ನು ಮಾಡಬೇಕೆಂದು ಬಿಸಸಿದನು ಆಗಳಾಕುವರನು ಕೈ ಜೋಡಿಸಿ ನಿಂತು, ದೇವನೇ! ನಾನು ಮಾನವರಲ್ಲಿ ಜನಿಸಿ, ನಂದ್ಯಾದಿಗಣಸಂಕುಲಕ್ಕೆ ಷಟ್ಸ್ಥಲ ರಹಸ್ಯವನ್ನು ಬೋಧಿಸಬೇಕಾದ ಕಾರಣವೇನು? ಎಂದು ಕೇಳಿಕೊಳ್ಳಲು, ಶಿವನು ನಕ್ಕು, ಅಯ್ಯಾ! ನಮ್ಮ ಚಿತ್ಕಳೆಯೇ ಈ ರೂಪವಾಗಿರುವ ನೀನು ಆರು ಮುಖಂಗಳಲ್ಲೂ ಆರು ಪ್ರಣವಗಳ ಸ್ವರೂಪನಾಗಿ ಷಣ್ಮುಖಿಯೂ, ಷಟ್ಸ್ಥಲಬ್ರಹ್ಮಿಯೂ ಎನಿಸಿಕೊಂಡಿರುವೆ. ಇಂಥ ನಿನಗೆ ತಿಳಿಯದಿರುವ ವಿಷಯವಾವುದಿರುವುದು? ಆದರೆ ನನ್ನ ಮುಖವಚನದಿಂದ ತಿಳಿಯಬೇಕೆಂಬುದು ನಿನ್ನಪೇಕ್ಷೆಯಾಗಿದ್ದರೆ ಹೇಳುತ್ತೇನೆ ಕೇಳು—ಹಿಂದೆ ಒಂದು ದಿವಸ ನಾನು ಇದೇರೀತಿಯಲ್ಲಿ ಒಡ್ಡೋಲಗದಲ್ಲಿರುವಾಗ್ಗೆ ನಾರದಮಹರ್ಷಿಯು ಬಂದು ಸಾಷ್ಟಾಂಗವಾಗಿ ನಮಸ್ಕರಿಸಿ ನಿಂತಿರುವಲ್ಲಿ ಸಭೆಯಲ್ಲಿದ್ದ ನಂದೀಶನು—ಎಲೈ ಮುನಿಪನೇ! ನೀನು ಬಂದ ಕಾರ್ಯವಾವುದು? ಸ್ವಾಮಿಗೆ ವಿಜ್ಞಾಪಿಸು, ಎಂದು ಜೆಸಸಲು, ಆ ಋಷಿಯು—"ಭೂಲೋಕದ ಭರತಖಂಡದಲ್ಲಿ ಕಲಿ ಪ್ರಬಲವಾಗಿ ಸತ್ಯ ಸದಾಚಾರ ಶಿವಭಕ್ತಿ ಸದ್ಧರ್ಮ ಕಾರ್ಯಗಳೆಲ್ಲ ಅಡಗಿ, ದುರ್ನೀತಿ, ಕಾಪಟ್ಯ, ಅನೃತ, ವಂಚನೆ, ಅನಾಚಾರ ಮೊದಲಾದುವುಗಳು ಪ್ರಬಲವಾಗಿರುವುವು. ಜೈನ ಬೌದ್ಧಚಾರ್ವಾಕಾದಿ ಮತಗಳು ಹೆಚ್ಚಿ ಶಿವಸನ್ನು ಹರೆಯುತ್ತಿರುವ್ರವು. ಅಷ್ಟಾವರಣಗಳನ್ನೂ ಶಿವಭಕ್ತರನ್ನೂ ದೂಷಿಸುತ್ತಿರುವ ಪ್ರಭುಗಳು ಹೆಚ್ಚಾದರು. ಶಿವಾಲಯಗಳೂ ಜಂಗಮರ ಮಠಗಳೂ ಹಾಳಾದುವು. ಅವಕ್ಕೆ ಕೊಟ್ಟಿದ್ದ ಮಾನ್ಯಗಳಿಲ್ಲವೂ ಅಪಹೃತವಾಗಿರುವುವು. ಎಲ್ಲೆಲ್ಲೂ ಜೈನರ ಒಸ್ತಿಗಳೇ ತುಂಬಿಕೊಂಡಿರುವುವು. ದುಷ್ಟರ ಹಾವಳಿಯನ್ನು ತಡೆಯುವಾರದೆ ಕೋಟಿಗೊಬ್ಬೊಬ್ಬ ಶಿವಶರಣರು ಅಲ್ಲಲ್ಲಿ ನೀಗೆಸೊಳಗಣ ಬಾಳೆಯಂತೆಯೂ, ಬಿದಿರಿನೊಳಗಣ ಗಂಧದ ಮರಗಳಂತೆಯೂ, ಅಡಗಿಕೊಂಡು, ಕಷ್ಟದಿಂದ ವಾಸಮಾಡುತ್ತಿರುವರು. ಜೇಸಗೆಯಿಂದ ಬಣಗುತ್ತಿರುವ ಬಳ್ಳಿಗಳು ಮಳೆಯನ್ನು ಇದಿರುನೋಡುತ್ತಿರುವಂತೆ, ಶಿವ ಶರಣರುಗಳು, ಪರಮತಗಳೆಲ್ಲವೂ ಅಡಗಿ ಶಿವಮತವು ಎಂದಿಗೆ ಪ್ರಬಲಿಸುವುದೋ ಎಂದು ಹೇಳಿಕೊಂಡು

ನಿಟ್ಟುಸುರುಬಿಡುತ್ತಿದ್ದುದನ್ನು ನಾನು ಕಿವಿಯಾರ ಕೇಳಿದೆನು. ಇದನ್ನು ಮಹಾಪಾದದಲ್ಲಿ ಬಿನ್ನೈಸುವುದಕ್ಕಾಗಿಯೇ ನಾನಿಲ್ಲಿಗೆ ಬೇಗದಿಂದ ಬಂದೆನು. ಸ್ವಾಮಿ ತಿಳಿಯುವ ವಿಷಯವನ್ನೊಂದೂ ಇಲ್ಲ. ಸಕಲ ಜಗದ್ವ್ಯಾಪಾರಕ್ಕೂ ನೀನೇ ಸೂತ್ರಧಾರ. ಜಗತ್ತನ್ನುದ್ಧರಿಸುವುದಕ್ಕೆ ಇದು ಒಳ್ಳೆಯ ಸಮಯ, ಎಂದು ಬಿನ್ನೈಸಿದನು. ಆಗ ನಾನು ಭೂಮಿಯಲ್ಲಿ ಸದ್ಧರ್ಮಸ್ಥಾಪನೆಯನ್ನು ಮಾಡಿ ಬರುವುದಕ್ಕೆ ಯಾರನ್ನು ಕಳುಹಬೇಕೆಂದು ಯೋಚಿಸುತ್ತಿರುವಷ್ಟರಲ್ಲಿ ಪಾರ್ವತಿಯು—ಎಲೈ ಸ್ವಾಮಿಯೆ! ಭೂಲೋಕದ ಮನುಜರು ಹುಟ್ಟು ಸಾವುಗಳಿಗೆ ಸಿಕ್ಕಿರುವರೆಂಬುದನ್ನು ನಾನು ಬಲ್ಲೆ; ನಿನ್ನ ಮಹಾಸಭೆಯಲ್ಲಿರತಕ್ಕವರು ಕೂಡ ಆ ಭವದಲ್ಲಿ ಬರುವುದುಂಟೆ? ಎಂದು ಕೇಳಿದಳು. ಆಗ ನಾನು—ಹೌದಾಯಿತು! ಈ ವಿಷ್ಣು ಬ್ರಹ್ಮಾದಿಗಳಿಗು ಕೂಡ ಭವಬಂಧವು ತಪ್ಪಿದುದಲ್ಲವೆಂದು ನುಡಿದೆನು. ದೇವಿಯು—ಹಾಗಾದರೆ ಅಂತಹ ಭವಬಂಧವನ್ನು ತಪ್ಪಿಸಿಕೊಳ್ಳುವುದಕ್ಕೆ ಯಾರಿಂದಲೂ ಆಗುವುದಿಲ್ಲವೆ? ಎನ್ನಲು, ನಾನು—ಆಗುವುದು; ಷಟ್ಸ್ಥಲ ರಹಸ್ಯಾರ್ಥವನ್ನು ತಿಳಿದು ತತ್ಸ್ಥಲಾಚರಣೆಯಿಂದ ನಿತ್ಯ ಸುಖವನ್ನು ಪಡೆದವರಿಗೆ ಭವಬಂಧವು ತೊಲಗಿಹೋಗುವುದು ಎಂದು ಹೇಳಿದೆನು. ಹಾಗಾದರೆ ನಿತ್ಯಸುಖವನ್ನು ಕೊಡುವ ಆ ಷಟ್ಸ್ಥಲರಹಸ್ಯಾರ್ಥವನ್ನು ನನಗೆ ನಿರೂಪಿಸಿ ಕೃತಾರ್ಥಳಾಗಮಾಡಬೇಕೆಂದು ಕೇಳಿಕೊಂಡಳು. ಹೀಗೆ ಪಾರ್ವತಿಯು ಪ್ರಾರ್ಥಿಸಿಕೊಂಡುದು ಸಕಲ ಗಣಕುಲಕ್ಕೂ ಸಂತೋಷವನ್ನುಂಟುಮಾಡಿತು. ಏಕೆಂದರೆ—ಷಟ್ಸ್ಥಲತತ್ವವನ್ನು ತಿಳಿಯಬೇಕೆಂಬ ಆಸೆಯು ಅವರಿಗೂ ಇದ್ದಿತು. ಅವರ ಈ ವಿಫಲವಾದ ಮನೋಭಾವವನ್ನು ತಿಳಿದುಕೊಂಡೇ ಅವರ ಮೇಲಣ ಕಾರುಣ್ಯದಿಂದ ಪಾರ್ವತಿಯು ಆ ರೀತಿಯಲ್ಲಿ ಪ್ರಾರ್ಥಿಸಿರುವಳೆಂಬುದನ್ನು ನಂದೀಶ್ವರನು ಅರಿದು, ಕೈಮುಗಿದು, ನನ್ನಮುಂದೆ ನಿಂತು, ಸ್ವಾಮಿ! ಈ ಜಗನ್ಮಾತೆಯು ನಮ್ಮೆಲ್ಲರನ್ನೂ ಉದ್ಧಾರಮಾಡಬೇಕೆಂಬ ದಯಾವಿಶೇಷದಿಂದಲೇ ತಮ್ಮಲ್ಲಿ ಆ ಪ್ರಾರ್ಥನೆಯನ್ನು ಮಾಡಿಕೊಂಡಿರುವಳು. ಅದುಕಾರಣ ಈ ಮಾತಾಯಿಯು ಬಿನ್ನಪವನ್ನು ಅವಧಾರಕ್ಕೆ ತಂದುಕೊಂಡು, ಷಟ್ಸ್ಥಲರಹಸ್ಯಾರ್ಥವನ್ನು ಜೋಪಿಸಿ, ನಮ್ಮೆಲ್ಲರನ್ನೂ ಕಾಪಾಡಬೇಕೆಂದು ಭಕ್ತಿಯಿಂದ ಪ್ರಾರ್ಥಿಸಿಕೊಂಡನು. ಆಗ

ನಾನು ಸಂತೋಷಗೊಂಡು, ಎಲೆ ನಂದೀಶನೇ! ನೀನು ನಮಗೆ ಭಿನ್ನನೆ? ನಮ್ಮ ಸದ್ಧರ್ಮಸ್ವರೂಪವೇ ನೀನಾಗಿ ದ್ವಿತೀಯಶಂಭುವೆನಿಸಿಕೊಂಡಿರುವೆ. ನೀನು ತಿಳಿಯುದಿರುವ ರಹಸ್ಯಾರ್ಥವಾವುದಿರುವುದು? ಆದರೆ ಈ ಶಿವಶರಣರೆಲ್ಲರೂ ಕೇಳಿ ಧನ್ಯರಾಗಲಿ ಎಂಬುದಕ್ಕೋಸ್ಕರಲೇ ನೀನು ಪ್ರಾರ್ಥಿಸಿಕೊಂಡಿರುತ್ತೀಯೆ ಎಂದು ನುಡಿದೆನು, ನಂದೀಶನಾದರೊ—ಸ್ವಾಮಿ! ನಿಮ್ಮ ಪಾದಸೇವಕರ ಸೇವಕನಾಗಿ ನಾನಿರುವಾಗ ನನ್ನನ್ನು ಕುರಿತು ಇಷ್ಟು ದೊಡ್ಡವಮಾತೇಕೆ? ಷಟ್ಸ್ಥಲರಹಸ್ಯವನ್ನು ಬೋಧಿಸಿ, ಈ ಶಿವಗಣ ಸಮೂಹವೆಲ್ಲವನ್ನೂ ಉದ್ಧರಿಸಬೇಕು ಎಂದು ಬೇಡಿಕೊಂಡನು. ಆಗ ನಾನು ಅಂತರಂಗವಲ್ಲಿ ಭೂಲೋಕದೊಳಗೆ ವೀರಶೈವಧರ್ಮವನ್ನುದ್ಧರಿಸುವುದಕ್ಕಾಗಿ ನಂದೀಶ್ವರನನ್ನೇ ಕಳುಹಿಸಿಕೊಡಬೇಕೆಂದು ಯೋಚಿಸಿಕೊಂಡು, ಅಯ್ಯಾ ನಂದೀಶನೇ! ಷಟ್ಸ್ಥಲತತ್ತ್ವವನ್ನು ಈ ಶರೀರದಲ್ಲೇ ಈ ಲೋಕದಲ್ಲೇ ತಿಳಿಯಲಿಕ್ಕಾಗದು. ಭೂಲೋಕಕ್ಕೆ ನೀವುಗಳೆಲ್ಲರೂ ಹೋಗಿ, ಸರಜನ್ಮದಲ್ಲಿ ಜನಿಸಿ, ವೀರಶೈವಮಾರ್ಗಾಚರಣೆಯನ್ನು ಅನುಸರಿಸದಿದ್ದರೆ ನಿಮಗೆ ಷಟ್ಸ್ಥಲಸಾಧನವು ಸೂರೆಕೊಳ್ಳಲಾರದು ಎಂದೆನು. ನಂದೀಶನಾದರೊ— ಹಾಗೆ ನಾವು ನರಜನ್ಮವನ್ಹೆತ್ತಿದರೆ ಎಷ್ಟು ದಿನಕ್ಕೆ ಷಟ್ಸ್ಥಲತತ್ವವು ಸಾಧ್ಯವಾಗುವುದು? ಅಲ್ಲಿ ನಮಗೆ ಬೋಧಿಸುವರಾರು? ದಯೆಯಿಟ್ಟು ಅಪ್ಪಣೆ ಕೊಡಿಸಬೇಕೆಂದು ಬೇಡಿದನು. ಆಗ ನಾನು— ನಂದೀಶನೇ! ನೀವುಗಳೆಲ್ಲರೂ ಭೂಮಿಯಲ್ಲಿ ಅವತರಿಸಿ, ಗುರುಲಿಂಗಜಂಗಮ ಭಕ್ತರಾಗಿ ಪ್ರಸಾದಪಾದೋದಕಗಳನ್ನು ಪರಿಗ್ರಹಿಸುತ್ತ ವೀರಶೈವಾಚಾರತತ್ಪರರಾಗಿದ್ದರೆ ನಿಮ್ಮ ಭಕ್ತಿಯಲ್ಲೇ ಲಿಂಗರೂಪವಾಗಿಯೂ, ನಿಮ್ಮ ಭಾವದಲ್ಲೇ ಜಂಗಮರೂಪವಾಗಿಯೂ ನಾನಿರುತ್ತೆವು; ಷಟ್ಸ್ಥಲರಹಸ್ಯವನ್ನು ತಿಳಿಸುವುದಕ್ಕೆ ನಮ್ಮ ಚಿತ್ಕಳಾಕುಮಾರನೇ ಬರುವನು, ಎಂದು ಹೇಳಿದೆನು. ಆಗ ಪಾರ್ವತಿಯು—ಎಲೈ ದೇವನೇ! ನನ್ನ ಹೊಟ್ಟೆಯಲ್ಲಿ ಮಕ್ಕಳಾಗುವುದಿಲ್ಲವೆಂಬ ಸಂಗತಿಯನ್ನು ನೀವೇ ಬಲ್ಲಿರಿ. ಮಕ್ಕಳನ್ನು ಹಡೆಯಬೇಕೆಂಬ ನೆವನೊಂದು ನನಗಿದೆ. ಅದುಕಾರಣ, ನನ್ನ ಚಿತ್ಕಳೆಯನ್ನು ಭೂಮಿಗೆ ನಂದೀಶನೊಡನೆಕಳುಹಿಸಿ, ಜನಿಸುವಂತೆಮಾಡಿ, ಆಕೆಯ ಗರ್ಭವಲ್ಲಿ ತಮ್ಮ ಜ್ಞಾನಪುತ್ರನು ಹುಟ್ಟಿ, ಗಣಸಮೂಹಕ್ಕೆ ಷಟ್ಸ್ಥಲಾ

ರ್ಥವನ್ನು ಬೋಧಿಸುವಂತೆ ದಯೆಪಾಲಿಸಬೇಕೆಂದು ಕೇಳಿಕೊಂಡಳು. ಆಗ ನಾನು —ಹಾಗೇಆಗಲಿ; ನಾರದ ಮಹರ್ಷಿಯು ಈದಿನ ಬಂದ ಕಾರ್ಯವು ಸಿದ್ಧಿಸಿತು; ನಿನ್ನಿಂದಲೂ ಈ ನಂದೀಶನಿಂದಲೂ ಭೂತಲದ ಗಣಶ್ರೇಣಿಯು ಭವವೆಲ್ಲವೂ ತೊಲಗುವಂತಾಯಿತು; ಮುಂದೆ ಭಾರತ ಭೂಮಿಯಲ್ಲಿ ವೀರಶೈವಧರ್ಮವು ಬಳ್ಳಿಯ ನೆಲೆಗೆ ನಿಂತುಕೊಳ್ಳುವುದು; ಅದುಕಾರಣ, ಮುಂದಾಗಿ ನೀವೆಲ್ಲರೂ ಭೂಮಿಗೆ ಹೋಗಿ ಜನಿಸಿರಿ; ಹಿಂದೆಯೇ ನಾನು ನಮ್ಮ ಜ್ಞಾನಪುತ್ರನನ್ನು ಕಳುಹಿಸಿಕೊಡುತ್ತೇನೆ; ಎಂದು ಹೇಳಿದೆನು. ಆಗ ನಂದೀಶನು—ನಿಜವಾಗಿ ಕಳುಹಿಸುವಿರೆ? ಎನಲು, ನಾನು-ಕಳುಹುತ್ತೇನೆ ಎಂದೆನು. ನಂದಿ—ನಂಬಿಕೊಳ್ಳಲೊ? ಎನಲು, ನಾನು—ನಂಬು, ನಿನ್ನನ್ನು ಬಿಟ್ಟಿರುವುದಿಲ್ಲ; ಹೋಗು; ಕತ್ತಲೆಯನ್ನು ಬೆಳಕೂ, ವಿಷವನ್ನು ಅಮೃತವೂ, ಪಾಪವನ್ನು ಪುಣ್ಯವೂ, ಓಡಿಸಿಬಿಡುವಂತೆ ನೀನು ಭೂಮಿಯಲ್ಲಿ ಅನೇಕ ಪಾಷಂಡಗಳಿಂದ ಪರವಾದವನ್ನು ಗೆದ್ದು, ನಿರ್ಮಲವಾದ ವೀರಶೈವಮಾರ್ಗವನ್ನು ಉದ್ಧರಿಸು, ಎಂದು ಹೇಳಿ ಕಳುಹಿಸಿಕೊಟ್ಟೆನು. ಆ ಕೂಡಲೇ ಏಳ್ನೂರೆಪ್ಪತ್ತು ಮರಗಣಂಗಳೂ, ರುದ್ರಕನ್ನಿಕೆಯರೂ, ಇತರ ಅಸಂಖ್ಯಾತಗಣಂಗಳೂ ಸಹ ಸಂತೋಷದಿಂದೆದ್ದು, ಭಕ್ತಿಯಿಂದ ನಮಸ್ಕರಿಸಿ, ನನ್ನಪ್ಪಣೆಯನ್ನು ಪಡೆದು, ಭೂಮಿಗಿಳಿದು ನಾನಾಮಾನವ ಗರ್ಭದಲ್ಲಿ ಜನಿಸಿ, ಅನೇಕ ವಿಧವಾದ ಕಾಯಕಗಳನ್ನು ಹಿಡಿದು, ವೀರಶೈವಾಚಾರಸಂಪನ್ನರಾಗಿ ಇರುತ್ತಿರುವರು. ಅವರಲ್ಲಿ ಆದಿನಿರಂಜನಮೂರ್ತಿಯೇ ಅಲ್ಲಮಪ್ರಭುವಾಗಿಯೂ, ನನ್ನ ಪ್ರತಿಬಿಂಬವೇ ಸಿದ್ಧರಾಮನಾಗಿಯೂ, ವೀರಭದ್ರೇಶನೇ ಮಡಿವಳ ಮಾಚಿದೇವನಾಗಿಯೂ, ಮಹಾ ದೇವಿಯೆಂಬ ರುದ್ರಕನ್ಯಕೆಯೇ ಮಾದೇವಿಯಕ್ಕನಾಗಿಯೂ, ಹೀಗೆಯೇ ಉಳಿದ ನಾನಾ ಗಣಂಗಳು ನಾನಾವಿಧದ ರೂಪನಾಮಾದಿಭೇದಗಳಿಂದ ಅವತರಿಸಿರುವರು. ಮುಂಡಿಗೆ ಮಾದಿರಾಜನೆಂಬ ಬ್ರಾಹ್ಮಣನ ಪತ್ನಿಯಾದ ಮಾದಾಂಬಿಕೆಯ ಗರ್ಭದಲ್ಲಿ ಪಾರ್ವತಿಯ ಚಿತ್ಕಳೆಯು ನಾಗಲಾಂಬಿಕೆಯೆಂಬ ಹೆಸರಿನಿಂದಲೂ, ನಂದೀಶನು ಬಸವರಾಜನೆಂಬ ಹೆಸರಿನಿಂದಲೂ ಅಕ್ಕತಮ್ಮಂದಿರಾಗಿ ಉದಿಸಿರುವರು. ಬಸವೇಶನಾದರೊ ತನ್ನ ತೇಜಸ್ಸಿನಿಂದ ಕಲ್ಯಾಣಪುರದ ರಸಾದ ಬಿಜ್ಜಳನಿಗೆ ಮುಖ್ಯ ಮಂತ್ರಿಯಾಗಿರುವನು. ಮತ್ತೂ ಸಕಲ ಶಿವ

ಶರಣಗಣಕ್ಕೂ ಪ್ರಮುಖನಾಗಿದ್ದುಕೊಂಡು, ಅನೇಕ ಪವಾಡಗಳನ್ನು ಮಾಡಿ, ಪರಮತಗಳ ಗರ್ವವನ್ನಡಗಿಸಿ, ಲಕ್ಷದಮೇಲೆ ತೊಂಭತ್ತಾರುನಾವಿರ ಮಹಾಜಂಗಮರಿಗೆ ದಾಸೋಹಂಭಾವದಿಂದ ಮೃಷ್ಟಾನ್ನಭೋಜನ ಮಾಡಿಸಿಕೊಂಡು ಸದಾ ನಿನ್ನ ಆಗಮನವನ್ನೇ ನಿರೀಕ್ಷಿಸಿಕೊಂಡಿರುವನು. ಆ ನಂದೀಶ್ವರನೇ ನಮ್ಮ ಭಕ್ತಿಸ್ವರೂಪನು; ಆ ಪ್ರಭುದೇವನೇ ನಮ್ಮ ವೈರಾಗ್ಯಸ್ವರೂಪನು; ನೀನು ನಮ್ಮ ಜ್ಞಾನಸ್ವರೂಪನು; ನಾಗಲಾಂಬಿಕೆಯೇ ಪಾರ್ವತಿಯ ಸ್ವರೂಪಳು. ಆಕೆಯ ಗರ್ಭದಿಂದ ನೀನು ಸ್ವೇಚ್ಛೆಯಾಗಿ ಜನಿಸಿ, ಅವರನ್ನು ಅನುಮಾನವಿಲ್ಲದೆ ಗುರುಭಾವದಿಂದ ಕಂಡು, ಕೊನೆಗೆ ಷಟ್ಸ್ಥಲತತ್ತ್ವಾರ್ಥವನ್ನು ಅವರಿಗೆ ಗುರುಸ್ವರೂಪವಾಗಿ ನೀನೇ ಬೋಧಿಸು ಹೋಗು ಎಂದು ಅಪ್ಪಣೆಕೊಟ್ಟನು. ಆಗ ಪರಶಿವನ ಆ ಚಿತ್ಕಳಾಕುಮಾರನು—ಮಹಾದೇವನೇ! ನನಗೇನು ಸ್ವಾತಂತ್ರ್ಯ? ನೀನಿರಿಸಿದಂತೆ ಇರತಕ್ಕವನು ನಾನು, ಎಂದು ಬೇಳಿದನು. ಆಗ ಶಿವನು ಸಕ್ಕು ತನ್ನ ಆ ಜ್ಞಾನರೂಪವನ್ನು ತನ್ನಲ್ಲೇ ಅಡಗಿಸಿಕೊಂಡು, ಕಟಾಕ್ಷದ ಸನ್ನೆಯಿಂದ ಸಭೆಯನ್ನು ವಿಸರ್ಜಿಸಿದನು. ಶಿವನ ಆ ಚಿತ್ಕಳಾರೂಪವು ಭೂಮಿಗವತರಿಸಿ ನಾಗಲಾಂಬಿಕೆಯ ಗರ್ಭವನ್ನು ಪ್ರವೇಶಿಸಿತು. ಎಂಬಲ್ಲಿಗೆ ೫ನೆ ಅಧ್ಯಾಯವು ಸಂಪೂರ್ಣವು.



೮ನೆ ಅಧ್ಯಾಯವು.

ಚೆನ್ನಬಸವೇಶಾವತರಣವು.



ಇತ್ತ ಮಾದಿರಾಜನಿಗೆ ಪುತ್ರಿಯಾಗಿ ಜನಿಸಿದ್ದ ನಾಗಲಾಂಬಿಕೆಯು ಪ್ರವರ್ಧಮಾನಳಾಗಿ ಗುರುಲಿಂಗ ಜಂಗಮಸೇವೆಯನ್ನು ಅತ್ಯಂತ ಭಕ್ತಿಯಿಂದ ಮಾಡುತ್ತ, ಅವರ ಪ್ರಸಾದವಂ ಸವಿದು ಸುಖದಿಂದ ಒಂದು ದಿವಸ

ಹಾಸುಗೆಯಲ್ಲಿ ಒರಗಿ ಶಿವಯೋಗನಿದ್ರೆಯಲ್ಲಿರುತಿರಲು, ಪರಶಿವನು ಜಂಗಮರೂಪವನ್ನು ಧರಿಸಿಬಂದು, ಆಕೆಯನ್ನು ತಟ್ಟಿ ಏಳಿಸಿ, "ಎಲೌ ತರುಣಿಯೆ! ಈ ಮಹಾಪ್ರಸಾದವನ್ನು ಪರಿಗ್ರಹಿಸು" ಎಂದು ಹೇಳಿ ಕೊಡಲು, ಅದನ್ನು ಅತಿ ಸಂತೋಷದಿಂದ ಪಡೆದುಕೊಂಡು, ಲಿಂಗಕ್ಕೆ ನಿವೇದಿಸಿ ಸವಿದು ತೃಪ್ತಳಾದಳು. ಕೂಡಲೇ ಶಿವನು ಆ ಜಂಗಮರೂಪವನ್ನು ಬಿಟ್ಟು ಪಂಚಮುಖದಶಭುಜಾದಿಗಳನ್ನು ಧರಿಸಿ, ಪಾರ್ವತೀಸಮೇತನಾಗಿ, ನಿಜರೂಪದಿಂ ಪ್ರತ್ಯಕ್ಷನಾಗಿ, ನಾಗಲಾಂಬಿಕೆಯನ್ನು ಕುರಿತು—ಎಲೌ ಲಲಿತಾಂಗಿಯೇ! ಯೋಚನೆ ಮಾಡಬೇಡ; ನಾನೊಂದು ಚೋದ್ಯವನ್ನು ಹೇಳುತ್ತೇನೆ ಕೇಳು—ಈಗ ನಾವು ನಿನಗೆ ಕೊಟ್ಟಿರುವುದು ನಮ್ಮ ಚಿತ್ಕಳಾಮೃತಪ್ರಸಾದವು. ಇದರ ಸೇವನೆಯಿಂದ ನಿನ್ನ ಗರ್ಭದಲ್ಲಿ ನಮ್ಮ ಷಣ್ಮುಖಸ್ಥಿತಪ್ರಣವಸ್ವರೂಪಿಯಾದ ಷಟ್ಸ್ಥಲಬ್ರಹ್ಮವು ಜನಿಸುವನು. ಅವನು ಅನೇಕ ಪವಾಡಗಳನ್ನು ನಡೆಸಿ, ಸಕಲ ಭೂತಲಮಾನ್ಯನಾಗುವನು. ಮತ್ತೂ ಜೈನಬೌದ್ಧಾದಿಮತಗಳನ್ನು ಕೆಡಿಸಿ, ಭೂಮಿಯಲ್ಲಿ ಪರಮ ವೀರಶೈವಾಚಾರವನ್ನು ಸ್ಥಾಪಿಸಿ, ಬಸವಾದಿಪ್ರಮಥರುಗಳಿಗೆ ಷಟ್ಸ್ಥಲ ಬ್ರಹ್ಮೋಪದೇಶವನ್ನು ಮಾಡಿ, ನಿಜಪದವಿಯನ್ನುಂಟುಮಾಡಿಕೊಡುವನು. ಅದುಕಾರಣ ಈ ಮಹಾಪ್ರಸಾದ ಉದಯಪೂಜೋತ್ಸವವನ್ನು ಸಕಲ ಶಿವಗಣಸಮೂಹಕ್ಕೂ ತಿಳಿಸು, ಎಂದು ಹೇಳಿ ಅದೃಶ್ಯನಾದನು. ಅಷ್ಟರಲ್ಲಿ ನಾಗಲಾಂಬಿಕೆಯು ಕಣ್ಣನ್ನು ತೆರೆದು ನೋಡುವಲ್ಲಿ ಪರಶಿವನು ಕಾಣಿಸಲಿಲ್ಲ. ಆಗ ಇದೇನು ಆಶ್ಚರ್ಯ! ಕನಸು ಎಂದು ಹೇಳುವುದಕ್ಕೂ ಆಗುವುದಿಲ್ಲ; ಪ್ರತ್ಯಕ್ಷವಾಗಿ ಕಂಡಂತೆಯೇ ಆಗಿ ನನ್ನ ಮನಸ್ಸಿನಲ್ಲಿ ಇನ್ನೂ ಆ ಈಶ್ವರರೂಪನೇ ತೋರುತ್ತಿದೆಯಲ್ಲ! ಎಂದು ಆಶ್ಚರ್ಯಪಡುತ್ತಿರುವಷ್ಟರಲ್ಲಿ ಬೆಳಗಿನಜಾವದ ಕೋಳಿಗಳು ಕೂಗಿದುವು. ಕತ್ತಲೆಹರಿದು ಮೂಡಣದಿಕ್ಕಿನಲ್ಲಿ ಕೆಂಪುಮೂಡಿ, ತಂಗಾಳಿಯು ಬೀಸಿತು. ಅಷ್ಟರಲ್ಲಿ—ಮುಂದೆ ಒಬ್ಬ ವೀರಶೈವಪರಮಾಚಾರ್ಯನು ಉದಿಸುವನು, ಅವನು ನನಗಿಂತಲೂ ನೂರುಭಾಗ ಅಧಿಕವಾಗಿ ಬೆಳಕನ್ನು ಜಗತ್ತಿಗೆ ಬೀರುವನು. ಎಂಬುದನ್ನು ಸೂಚಿಸುವುದಕ್ಕಾಗಿ ಬಂದಂತೆ ಸೂರ್ಯನು ಉದಿಸಿದನು. ಆಗ ನಾಗಲಾಂಬಿಕೆಯು ಎದ್ದು, ಸ್ನಾನಶಿವಾರ್ಚನೆಗಳನ್ನು ತೀರಿಸಿಕೊಂ

ಡು, ಅನುಭವಮಂಟಪಕ್ಕೆ ಬಂದು, ರಾತ್ರಿ ನಡೆದ ಸಂಗತಿಯನ್ನೆಲ್ಲ ದಂ
ಡಾಧೀಶನಾದ ಬಸವೇಶ್ವರ ಮೊದಲಾದ ಪ್ರಮಥರೊಡನೆ ಸಾಂಗವಾಗಿ
ತಿಳುಹಿದಳು. ಅದನ್ನು ಕೇಳಿ ಬಸವೇಶ ಮೊದಲಾದ ಸಕಲಶಿವಗಣಂ
ಗಳೂ ಆನಂದಪಟ್ಟರು. ನಾಗಲಾಂಬಿಕೆಯೂ ಉಲ್ಲಾಸದಿಂದಿದ್ದಳು.
ಕ್ಷೀರಸಮುದ್ರವ ಮಧ್ಯದಲ್ಲಿರುವ ರತ್ನದಂತೆಯೂ, ಶರತ್ಕಾಲದ ಮೋ
ಡದ ಮರೆಯಲ್ಲಡಗಿರುವ ಶುಕ್ಲಪಕ್ಷದ ಚಂದ್ರರೇಖೆಯಂತೆಯೂ, ಪುಣ್ಯ
ಭೂಮಿಗತವಾಗಿರುವ ನಿಧಿಯಂತೆಯೂ, ಗುರುಬೋಧೆಯಲ್ಲಿ ಲೀನವಾಗಿ
ರುವ ಮುಕ್ತಿಯಂತೆಯೂ, ಸೂರ್ಯಕಾಂತಶಿಲೆಯಲ್ಲಿ ಗುಪ್ತವಾಗಿರುವ
ತೇಜಸ್ಸಿನಂತೆಯೂ, ಕಲ್ಪವೃಕ್ಷದ ಹೂವಿನ ಮೊಗ್ಗೆಯಲ್ಲಿ ಗುಪ್ತವಾಗಿ
ರುವ ಪರಿಮಳದಂತೆಯೂ, ಆ ನಾಗಲಾಂಬಿಕೆಯ ಗರ್ಭದಲ್ಲಿ ಪರತತ್ತ್ವ
ನಿಧಿಯಾದ ಪಿಂಡವು ವೃದ್ಧಿಯನ್ನೈದುತ್ತಿದ್ದಿತು. ಇದರಿಂದ ಆಕೆಯ ದೇಹ
ದಲ್ಲಿ ಗರ್ಭಚಿಹ್ನಗಳು ತೋರಲಾರಂಭಿಸಿದುವು. ಮುಖವು ಬೆಳ್ಳಗಾಯಿ
ತು. ಹೊಟ್ಟೆಯು ಮೇಲಣ ವಳಿಗಳು ಕಾಣದಂತಾದುವು. ರೋಮರಾ
ಜಿಯು ಕಪ್ಪಾಯಿತು. ಸ್ತನಗಳು ದಪ್ಪನಾಗಿ ತೊಟ್ಟು ಕಪ್ಪಾಯಿತು.
ನಡುವು ಸ್ಥೂಲವಾಯಿತು, ಅಲಸಿಕೆ ಹೆಚ್ಚಿತು, ನಡೆಯು ಮಂದವಾಯಿ
ತು. ಆ ಎಳಬಿಸುರಿನಲ್ಲಿ ಶಿವಪೂಜೆ, ಶಿವಕಥಾಶ್ರವಣ, ಶಿವೋತ್ಸವದರ್ಶ
ನಾದಿಗಳ, ಗುರುಲಿಂಗಜಂಗಮಸೇವೆ, ತತ್ತೀರ್ಥಪ್ರಸಾದಸ್ವೀಕಾರಗಳ
ಬಯಕೆಯಲ್ಲದೆ ಇನ್ನೊಂದು ಬಯಕೆಯೂ ಆ ತಾಯಿಗೆ ಉಂಟಾಗಿರಲಿಲ್ಲ.
ಹೀಗಿರುವಲ್ಲಿ ಆ ಗರ್ಭದ ವಿಷಯವಾಗಿ ಊರಿನಲ್ಲೆಲ್ಲ ಸಾಮಾನ್ಯಜನಗಳಲ್ಲಿ
ಗುಸುಗುಸುಪಿಲು ಹುಟ್ಟಿ, "ನಾಗಲಾಂಬಿಕೆಯು ಘನವಿರಕ್ತಳು! ಮತ್ತೊ
ರಾಜನ ಮುಖ್ಯಮಂತ್ರಿಯಾಗಿರುವ ಬಸವರಾಜನ ಅಕ್ಕ! ಇಂಥವಳು
ಬಸುರಾಗಿರುವುದೀಗ ಪರಮಾಶ್ಚರ್ಯ!" ಎಂಬುದಾಗಿ ಮನೆಮನೆಯಲ್ಲೂ
ಹಾದಿಬೀದಿಯಲ್ಲೂ ಮಾತನಾಡಿಕೊಳ್ಳುತ್ತಿದ್ದರು. ಇನ್ನು ಕೆಲವರು ಉತ್ತ
ಮರಾದವರು "ಆಕೆಯು ತ್ರಿಕಾಲಜ್ಞಾನಸಂಪನ್ನೆ; ಸಾಮಾನ್ಯಳಲ್ಲ"
ಎಂದು ಆಡಿಕೊಳ್ಳುತ್ತಿದ್ದರು. ಮಧ್ಯಸ್ಥರಾಗಿರುವವರು "ಏನೋ ಹೇಗಿ
ರುವುದೋ, ಹೀಗೆಯೇ ಸರಿ ಯೆಂದು ಹೇಳಲಾಗುವುದಿಲ್ಲ" ಎಂಬುದಾಗಿ
ಆಶ್ಚರ್ಯಪಡುತ್ತಿದ್ದರು. ಅವಿವೇಕಿಗಳಾದ ನೀಚಜನರು ನಾನಾವಿಧವಾಗಿ

ಹಾಸ್ಯಮಾಡುತ್ತಿದ್ದರು. ಅವರಲ್ಲೊಬ್ಬ ಚಾಡಿಕೋರನು ದೊರೆಗೆ ಈ ವರ್ತಮಾನವನ್ನು ತಿಳುಹಬೇಕೆಂದು ಹೋಗಿ, ಇದ್ದ ಸುದ್ದಿಯನ್ನು ತಿಳುಹಿದನು. ಇವನೆಲ್ಲೋ ಪಟಿಂಗ, ಇವನ ಮಾತು ನಂಬತಕ್ಕುದಲ್ಲವೆಂದು ದೊರೆಯು ತಿರಸ್ಕರಿಸಿದನು. ಚಾಡಿಕೋರನು—ಹಾಗಲ್ಲ, ತಾವು ಖಂಡಿತವಾಗಿ ಪರೀಕ್ಷಿಸಿ ನೋಡಿ, ಇದು ಸುಳ್ಳಲ್ಲ, ಆ ಗರ್ಭಿಣಿಯೂ ಬಸವರ ಸನೂ ಇತರ ಗಣಂಗಳೂ ಮನೆಯಲ್ಲಿ ಕುಳಿತಿರುವರು. ತಾವೇ ದಯಮಾಡಿಸಿದರೆ ತೋರಿಸಿಕೊಡುತ್ತೇನೆಂದು ಶಪಥದಿಂದ ನುಡಿದನು. ಆಗ ದೊರೆಯು ಆಶ್ಚರ್ಯಪಟ್ಟು, ತಾನೇ ನೋಡಬೇಕೆಂದು ಮಂತ್ರಿಗಳ ಸಮೇತನಾಗಿ ಸೇವಕಜನರೊಡನೆ ಹೊರಟನು. ಈ ಸುದ್ದಿಯನ್ನು ಕೇಳಿ ಬಸವೇಶನು ಶಿವಗಣಸಮೇತನಾಗಿ ಹೋಗಿ ದೊರೆಯನ್ನು ಇದಿರ್ಗೊಂಡು ಕರೆತಂದು ತನ್ನರಮನೆಯ ಉಚ್ಚಾಸನದಲ್ಲಿ ಕುಳ್ಳಿರಿಸಿದನು ಮತ್ತೂ—ಎಲೈ ರಾಜನೇ! ಈಗ ನಿನ್ನಾಯುಧಕ್ಕೆ ಇದಿರಾಗಿ ಪ್ರತಿಭಟಿಸತಕ್ಕ ಶತ್ರುರಾಜರು ಯಾರೂ ಇಲ್ಲ; ನಿನ್ನ ಆಜ್ಞೆಗೆ ಭಂಗವಿಲ್ಲ; ಭೂಸಂಪತ್ತಿಗೆ ಚ್ಯುತಿಯಿಲ್ಲ; ಅಣ್ಣತಮ್ಮಂದಿರು ಮಕ್ಕಳು ಮೊದಲಾದವರಲ್ಲಿ ಭಿನ್ನಭಾವಗಳೇನೂ ಇಲ್ಲ; ಯಾವ ಬೊಕ್ಕಸವಲ್ಲೂ ಏನೊಂದರ ಕೊರತೆಯೂ ಇಲ್ಲ; ಚತುರಂಗಸೈನ್ಯವಲ್ಲೂ ಒಡಕೇನೂ ಹುಟ್ಟಿಲ್ಲ. ಹೀಗಿರುವಲ್ಲಿ ಅಕಸ್ಮಾತ್ತಾಗಿ ನೀನೇ ನನ್ನ ಬಳಿಗೆ ಬರುವುದಕ್ಕೆ ಕಾರಣವೇನು? ಎಂದು ಕೇಳಿದನು. ದೊರೆಯು ನಸುನಕ್ಕು—ಎಲೈ ಬಸವದಂಡಾಧೀಶನೆ! ನೀನು ನನ್ನ ಮುಖ್ಯಪ್ರಧಾನಿಯಾಗಿದ್ದುಕೊಂಡಿರುವವರೆಗೂ ನನ್ನ ಸೌಭಾಗ್ಯಕ್ಕೆ ಹಾನಿಯೆಂದರೇನು? ಎಂದು ಹೇಳಿ, ಅತ್ತಿತ್ತ ನೋಡುತ್ತ, ಅಲ್ಲಿ ಕುಳಿತಿದ್ದ ನಾಗಲಾಂಬಿಕೆಯ ಸೌಂದರ್ಯವನ್ನು ತಿಳಿದುಕೊಂಡು, ಅಮ್ಮಾ! ನೀನಾರು? ನಿನಗೆ ಈ ಗರ್ಭಧಾರಣೆಯು ಸುಮ್ಮನೆ ಹೇಗಾಯಿತು? ಎಂದು ಕೇಳಲಾಗಿ. ಆ ಪಾತೆಯು—ಪ್ರಭುವೇ! ಇದು ಶಿವನ ಚಿತ್ಕಳಾಪ್ರಸಾದದಿಂದುತ್ಪನ್ನವಾಗಿರುವುದು, ಎಂದಳು. ಅತನು—ಶಿವಭಕ್ತರೆಲ್ಲರೂ ಪ್ರಸಾದಿಗಳೇ; ಆದರೆ ಅವರಾರಲ್ಲೂ ಈ ವಿಧವಾದ ಗರ್ಭಧಾರಣೆಯಾಗಿಲ್ಲವಲ್ಲ? ಎಂದನು. ನಾಗಲಾಂಬೆಯು—ನಾನು ಸುಳ್ಳನ್ನು ಹೇಳತಕ್ಕವಳಲ್ಲ; ಪರಶಿವನು ದಯೆಯಿಂದ ತನ್ನ ಪಣ್ಮುಖಸ್ಥಿತವಾದ ಚಿತ್ಕಳಾ


ಪ್ರಣವವನ್ನೇ ಜನಿಸಬೇಕೆಂದು ಹೇಳಿ ನನ್ನ ಗರ್ಭಕ್ಕೆ ಕಳುಹಿರುವನು, ಎಂದಳು. ದೊರೆಯು ಶಿವನ ವರದಿಂದ ನಿನ್ನ ಗರ್ಭದಲ್ಲಿ ಜ್ಞಾನಪುತ್ರನು ಉದಿಸಿದ್ದರೆ ಒಳ್ಳೆಯದೇ ಸರಿ. ಆ ಮಾತು ನಿಜವಾಗಿದ್ದರೆ ಮಹಿಮಾನ್ವಿತನಾದ ಆ ಪುತ್ರನು ತನ್ನ ಸಂಗತಿಯನ್ನು ನಮ್ಮೊಡನೆ ಹೇಳಲಿ; ಎಂದನು. ಆ ಕೂಡಲೇ ಗರ್ಭದಿಂದ "ಓಹೋ ಸದ್ದನ್ನು ನಿಲ್ಲಿಸಿ, ಎಲೆ ಬಿಜ್ಜಳರಾಜನೇ! ಆಕಾಶವು ಭೂಮಿಗಿಳಿದರೂ, ಭೂಮಿಯು ಪಾತಾಳಕ್ಕೆ ಹೋದರೂ, ಶಿವಶರಣರ ಮಾತು ಸುಳ್ಳಾಗುವುದೇ? ಶಿವನ ಪಣ್ಣುಖಸ್ಥಿತಚಿತ್ಕಳೆಯೇ ನಾನಾಗಿರುವೆನಲ್ಲದೆ ರಕ್ತರೇತಸ್ಸುಗಳಿಂದ ಹುಟ್ಟಿದ ಪಿಂಡವಲ್ಲ" ಎಂಬ ಮಾತು ಗಂಭೀರಸ್ವರದಿಂದ ಹೊರಟಿತು. ಇದನ್ನು ದೊರೆಯು ಕೇಳಿ ಬೆರಗಾದನು. ಬಸವೇಶ ಮೊದಲಾದ ಶಿವಗಣಂಗಳೆಲ್ಲ ಉಲ್ಲಾಸಗೊಂಡರು. ಆಗ ರಾಜನು—ಪ್ರತ್ಯಕ್ಷವಾದರೂ ಪ್ರಮಾಣಿಸಿ ನೋಡಬೇಕೆಂದು ನೀತಿವಚನವಿರುವುದು ಆದುದರಿಂದ ಅನಿತ್ಯವಾದ ಈ ಶರೀರದಲ್ಲಿ ಮಲಮೂತ್ರ ರಕ್ತಮಾಂಸಗಳೊಡನೆ ನಿತ್ಯವಾದ ಶಿವಚಿತ್ಕಳೆಯಿರುವುದು ಹೇಗೆ? ಇದು ಸತ್ಯವೆ? ಎಂದನು. ನಾಗಲಾಂಬಿಕೆಯು ಮೂಢರನ್ನೊಡಂಬಡಿಸುವಂತಾಯ್ತೆಂದು ಯೋಚಿಸಿಕೊಂಡು, ಅಹುದು, ನನ್ನ ಶರೀರದಲ್ಲಿ ಆ ಜ್ಞಾನಪುತ್ರನು ಮಲಮೂತ್ರಾದಿಗಳ ಸಂಗವಿಲ್ಲದೆಯೇ ಇದ್ದಾನೆ ಎಂದಳು. ದೊರೆಯಾದರೊ—ಬರಿಯ ಮಾತನ್ನು ನಂಬುವುದು ಹೇಗೆ? ಪ್ರತ್ಯಕ್ಷವಾದರೆ ಸಹಜವೆಂದು ಹೇಳಬಹುದು, ಎಂದನು. ಆಗ ನಾಗಲಾಂಬಿಕೆಯು ಶಿವಶರಣರಿಗೆ ಇಂತಹ ದೃಷ್ಟಾಂತವನ್ನು ತೋರಿಸುವುದೊಂದು ದೊಡ್ಡದೆ? ಎಂದು ಹೇಳಿ, ನಗುತ್ತ, ತನ್ನ ಉಗುರ ಕೊಸೆಯಿಂದ ಹೊಟ್ಟೆಯನ್ನು ಸೀಳಿದಳು ಆ ಕೂಡಲೇ ಹೊಟ್ಟೆಯು ಇಬ್ಭಾಗವಾಯಿತು ಒಳಗೆ ಕೋಟಿಬಾಲಸೂರ್ಯರ ತೇಜಸ್ಸಿನಿಂದ ಹೊಳೆಯುತ್ತಲೂ, ಭಸ್ಮಲೇಪನದಿಂದ ಶುಭ್ರಾಂಗನಾಗಿಯೂ, ಕಣ್ಣಕುಂಡಲಯುಗ್ಮದಿಂದ ಅಲಂಕೃತನಾಗಿಯೂ, ಸಣ್ಣ ಕಿರುಜಡೆಗಳು ಮುಸ್ತಕದ ಮೇಲಿಂದ ಇಳಿದು ಜೋಲುತ್ತಲೂ, ಬಸಯುಮೇಲೆ ಕಲ್ಪವೃಕ್ಷದ ಹೂವಿನ ಸರಗಳ ಮಧ್ಯದಲ್ಲಿ ಶಿವಲಿಂಗದ ಸಜ್ಜಿಕೆಯನ್ನು ಧರಿಸಿಯೂ ಇರುವ ದಿವ್ಯಮೂರ್ತಿಯು ತೋರಿತು. ನೋಡಿದ ಸಭೆಯುವರೆಲ್ಲರೂ ಆಶ್ಚರ್ಯ ಸಮುದ್ರದಲ್ಲಿ

ಮುಳುಗಿಹೋದರು. ಕೂಡಲೇ ದೇವದುಂದುಭಿಯು ಮೊಳಗಿತು ದೇವತೆಗಳು ಸಂತೋಷದಿಂದ ಪುಷ್ಪವೃಷ್ಟಿಯನ್ನು ಸುರಿಸಿದರು. ಸಭಿಕರೆಲ್ಲರನ್ನೂ ಅಪಾರವಾದ ಭಕ್ತಿರಸವು ಆವರಿಸಿಕೊಂಡಿತು. ಬಸವೇಶನು ಸಂತೋಷದಿಂದ ಮೈಮರೆತುಹೋದನು. ಬಿಜ್ಜಳರಾಜನೂ ಭಯಭಕ್ತಿಯಿಂದ ಕೂಡಿ ನಿಃಶ್ಚಲಂಡವಾಗಿ ನಮಸ್ಕರಿಸಿ, ಹಿಂದೆ ಶುಕಮುನಿಯು ರಂಭೆಗೂ, ಸಿದ್ಧರಾಮೇಶನು ಶಿವಶರಣರಿಗೂ ಹೊಟ್ಟೆಯನ್ನು ಸೀಳಿ ತೋರಿಸಿದರೆಂದು ಹೇಳುತ್ತಿದ್ದುದನ್ನು ಕೇಳಿದ್ದೆನು. ಈದಿನ ನಾನೇ ಪ್ರತ್ಯಕ್ಷವಾಗಿ ನೋಡಿದೆನು. ಎಂದು ಹೇಳುತ್ತ, ಎದ್ದು ನಿಂತು, ಕೈಮುಗಿದು—"ಎಲೈ ಚಿದ್ರೂಪನೇ! ನಿನ್ನ ಸ್ಥಿತಿಯನ್ನು ತಿಳಿಯದೆ ನಾನು ಅಜ್ಞಾನದಿಂದ ಆಡಿದ ದ್ರೋಹವೊಂದು, ಶಿವಶರಣೆಯನ್ನು ಹುರಿದ ದ್ರೋಹವು ಎರಡು, ಹೊಡೆದಲೇ ಕೇಳಿದ ಮಾತನ್ನು ಶಿವವಚನವೆಂದು ನಂಬದೆ ತಿರಸ್ಕರಿಸಿದ ದೈವದ್ರೋಹವು ಮೂರು, ಮದಾಂಧತೆಯಿಂದ ಈಕೆಯ ಹೊಟ್ಟೆಯನ್ನು ಸೀಳಿಸಿದ ಸತೀದ್ರೋಹವು ನಾಲ್ಕು, ಇವಿಷ್ಟನ್ನೂ ನಾನು ಮೊದಲೇ ಯೋಚಿಸಿಕೊಳ್ಳದೆ ಹೋದ ಆತ್ಮದ್ರೋಹವು ಐದು. ಹೀಗೆ ಈ ಪಂಚದ್ರೋಹಗಳಿಂದಲೂ ಕೂಡಿದ ನನ್ನನ್ನು ದಯೆಯಿಂದ ಕಾಪಾಡು" ಎಂದು ಪ್ರಾರ್ಥಿಸುತ್ತಿದ್ದನು. ಮತ್ತೊಂದುಕಡೆ ಬಸವೇಶನು ಸ್ತುತಿಸುತ್ತಿದ್ದನು. ಇನ್ನೊಂದುಕಡೆ ಶಿವಶರಣರೆಲ್ಲರೂ ಜಯಜಯ ಎನ್ನುತ್ತಿದ್ದರು. ಹಿಂದೆ ಮುಂದೆ ಭಕ್ತವಾಪೇಶ್ವರಾದಿಗಳು ತುಂಬಿ ಕೊಂಡಾಡುತ್ತಿದ್ದರು. ಹೀಗೆ ಚೆನ್ನಬಸವೇಶನು ತನ್ನ ಅವಿರ್ಭಾವಕಾಲದಲ್ಲೇ ಒಂದು ಪವಾಡವನ್ನು ತೋರಿಸಿದನು. ಆಗ ನಾಗಲಾಂಬಿಕೆಯು ತನ್ನ ಗರ್ಭಾಸನದಲ್ಲಿದ್ದ ಶಿಶುವನ್ನು ಅಂಗೈಗೆ ತೆಗೆದುಕೊಂಡಳು. ಕೂಡಲೇ ಎಂದಿನಂತೆ ಹೊಟ್ಟೆಯು ಸೇರಿಕೊಂಡು ಸಣ್ಣಗಾಯಿತು. (ಶಿವಮಹಾತ್ಮೆಯನ್ನು ತಿಳಿಯುವರಾರು!) ಈ ಮಹಾಪುರುಷನ ಅವತರಣಮಾತ್ರದಿಂದಲೇ ಭೂದೇವತೆಯ ಮತ್ತೂ ಆದಿಶೇಷ ಆದಿಕೂರ್ಮದಿಗ್ಗಜಗಳಮೇಲಿದ್ದ ಭಾರವೆಲ್ಲ ಕಡಿಮೆಯಾಯಿತು. ಕಡಿದು ಒಣಗಿಹೋಗಿದ್ದ ಮರಗಳೆಲ್ಲ ಚಿಗುರೇರಿದುವು. ಬರಡುಹಸುಗಳೆಲ್ಲವೂ ಕೊಡತುಂಬಿ ಹಾಲನ್ನು ಕರೆದುವು. ದೇವಾಲಯದಲ್ಲಿದ್ದ ಕಲ್ಲಿನ ಬೊಂಬೆಗಳೆಲ್ಲ ಕುಣಿದಾಡಿದುವು. ದುಸ್ಸಮಯಿಗಳ ಎದೆಯೆಲ್ಲಾ ಕಂಪಿಸಿತು.

ಕಾಮಕ್ರೋಧಾದಿ ಅರಿಷಡ್ವರ್ಗವೂ, ಅನೀತಿ ಅನಾಚಾರ ಮೊದಲಾದುವುಗಳೂ ಕುಗ್ಗಿಹೋದುವು. ಮಾರಿಕಾರೋಗಾದ್ಯುಪದ್ರವಗಳು ಅಡಗಿಹೋದುವು. ಘನವೈರಾಗ್ಯಸಂಪನ್ನನೂ ಶಾಂತಮೂರ್ತಿಯೂ ಆದ ಆ ಪಟ್ಟಣದ ಒಬ್ಬಿಯ ಜನನಮಾತ್ರದಿಂದಲೇ ಭೂತಲದಲ್ಲಿ ಹೀಗೆ ಗುಣಾತಿಶಯಗಳು ತೋರ್ಪಟ್ಟುವು. ಎಂಬಲ್ಲಿಗೆ ನಾಲ್ಕನೆ ಅಧ್ಯಾಯವು ಸಂಪೂರ್ಣವು.



೫ನೆ ಅಧ್ಯಾಯವು.



ಚೆನ್ನಬಸವೇಶಪುಷ್ಪೋತ್ಸವವು.

ಆಗ ಬಿಜ್ಜಳರಾಜನಿಗೆ ಆ ಜ್ಞಾನಪುತ್ರನನ್ನು ಉತ್ಸವಪೂರ್ವಕವಾಗಿ ಕರೆದುಕೊಂಡು ಹೋಗಬೇಕೆಂಬ ವಿಶ್ವಾಸವು ಪುಟ್ಟಿತು. ಅದಕ್ಕಾಗಿ ಅವನು ಮಾಡಿದ ಅಪ್ಪಣೆಯಮೇರೆ ಪಟ್ಟಣವೆಲ್ಲವೂ ಗುಡಿತೋರಣಗಳಿಂದ ಮನೋಹರವಾಗಿ ಅಲಂಕರಿಸಲ್ಪಟ್ಟಿತು. ಬಿಜ್ಜಳರಾಜನು ನವರತ್ನಖಚಿತವಾದ ಪಲ್ಲಕ್ಕಿಯನ್ನು ತರಿಸಿ, ಅದರಲ್ಲಿ ಆ ನಾಗಲಾಂಬಿಕೆಯ ಕುಮಾರನನ್ನು ಕುಳ್ಳಿರಿಸಿ, ತಾನು ನಮಸ್ಕಾರಮಾಡಿ, ಚತುರಂಗಸೈನ್ಯವನ್ನೂ ಪುರಜನ ಪರಿಜನಗಳನ್ನೂ ನರ್ತಕಿಯರು ವಾದ್ಯಗಾರರು ಮೊದಲಾದವರನ್ನೂ ಕಳುಹಿಸಿಕೊಟ್ಟು, ಉತ್ಸವಪೂರ್ವಕವಾಗಿ ಬರುವಂತೆ ಮಾಡಿದನು. ಮುಂಗಡೆಯಲ್ಲಿ ತಮಟೆ ನಗಾರಿ ಕಹಳೆ ಜಾಗಟೆ ಕೊಂಬು ಮೊರೀರಿ ತಾಳ ಮೊದಲಾದ ನಾನಾವಾದ್ಯಗಳು ಭೋರ್ಗರೆಯುತ್ತಿದ್ದುವು. ಮುಂದೆ ಅಲ್ಲಲ್ಲಿಗೆ ನಿಂತು ನರ್ತಕಿಯರು ಕುಣಿಯುತ್ತಿದ್ದರು. ಬಸವೇಶ ಮೊದಲಾದ ಶರಣರೆಲ್ಲರೂ ಜಯಜಯನೆಂದು ಉದ್ಘೋಷಿಸುತ್ತಿದ್ದರು. "ಅಕ್ಕ! ಬಸವೇಶನಕ್ಕನಾದ ನಾಗಲಾಂಬಿಕೆಯು ಗರ್ಭದಲ್ಲಿದ್ದಾಗಲೇ ದೊರೆಯು ಕೇಳಿದ ಮಾತಿಗೆ ಉತ್ತರವನ್ನು ಕೊಟ್ಟ ಮಹಿಮಶಾಲಿಯಾದ ಮಗನು ಒರುತ್ತಿರುವನು" ಎಂದು ಒಬ್ಬರಿಗೊಬ್ಬರು ಮಾತನಾಡಿಕೊಂಡು ಕೇರಿಕೇರಿಯ ಹೆಂಗುಸರೆಲ್ಲ ನೋಡುವುದಕ್ಕಾಗಿ ಬರುತ್ತಿದ್ದರು. ರತಿ ಶಚಿ ಮೊದಲಾದ

ದೇವತಾಸ್ತ್ರೀಯರ ಸೌಂದರ್ಯಾತಿಶಯವನ್ನು ತಿರಸ್ಕರಿಸುತ್ತಿರುವ ಪೌರನಾರಿಯರು ನಾನಾವಿಧವಾಗಿ ಅಲಂಕಾರಗೊಂಡು ಮನೆಬಾಗಿಲುಗಳಲ್ಲೂ ಮಾಡಗಳಲ್ಲೂ ಜಗುಲಿಗಳಲ್ಲೂ ನಿಂತು ನೋಡುತ್ತಿದ್ದರು. ಲಕ್ಷ್ಮೀಸರಸ್ವತಿಯರನ್ನೂ ಕೂಡ ತಮ್ಮ ಲಾವಣ್ಯಸೌಂದರ್ಯಾಂಗಲ್ಯಾತಿಶಯದಿಂದ ಧಿಕ್ಕರಿಸುತ್ತಿರುವ ಸುವಾಸಿನಿಯರು ಅಲ್ಲಲ್ಲಿಗೆ ಆರತಿಗಳನ್ನೆತ್ತಿ ಸೇಸೆಯನ್ನು ತಳಿಯುತ್ತಿದ್ದರು. ರಾಜನು ಅವರೆಲ್ಲರಿಗೂ ರತ್ನಹಾರ ತಾಂಬೂಲ ಹೊನ್ನು ಮೊದಲಾದುವುಗಳನ್ನು ಬಸವರಾಜನ ಹಸ್ತದಿಂದ ಕೊಡಿಸುತ್ತಿದ್ದನು. ದಾರಿಯುದ್ದಕ್ಕೂ ಭೂರಿ ದಕ್ಷಿಣೆಗಳನ್ನು ಹಂಚಿಸುತ್ತಿದ್ದನು. ಈ ರೀತಿಯಾವ ವೈಭವದಿಂದ ರಾಜಸರಮನೆಯಿಂದ ಉತ್ಸವವನ್ನು ಹೊರಡಿಸಿಕೊಂಡು ಬಸವೇಶ್ವರನರಮನೆಗೆ ಕರೆದುಕೊಂಡುಬಂದು, ಅಲ್ಲಿಳಿಸಿ, ಆ ಮಹಿಮಶಾಲಿಗೆ ನಾನಾವಸ್ತ್ರಾಭರಣಗಳನ್ನು ಉಡುಗೊರೆಯಾಗಿ ಕೊಟ್ಟು ವಂದಿಸಿ, ರಾಜನು ತನ್ನರಮನೆಗೆ ಹಿಂತಿರುಗಿದನು. ಇತ್ತ ಬಸವೇಶನು ಸಕಲಗಣಸಮೂಹದೊಡನೆ ಕೂಡಿ ಸಂತೋಷದಿಂದ ಇರುತ್ತಿದ್ದನು. ಬಸವೇಶನ ಪತ್ನಿಯಾದ ನೀಲಲೋಚನೆಯು ಅಂತಃಪುರದ ಸ್ತ್ರೀಯರನ್ನೆಲ್ಲ ಕರೆಸಿ, ಕುವರನಿಗೆ ಚೆನ್ನದ ಹರಿವಾಣಗಳಲ್ಲಿ ನಾನಾಬಣ್ಣದಾರತಿಗಳನ್ನೆತ್ತಿ ನಿವಾಳಿಸಿ, ಪರಸಿ, ಸೇಸೆಯನ್ನಿಕ್ಕಿಸಿದಳು. ಅಷ್ಟುಹೊತ್ತಿಗೆ ಸಂಧ್ಯಾಕಾಲವಾಯಿತು. ಬಸವೇಶನೂ ಅತ್ತಿಗೆ ನಾದಿನಿಯರೂ ಕೂಡ ಸ್ನಾನಶಿವಾರ್ಚನೆಗಳಂ ಮಾಡಿ ಜಂಗಮಪಾದವಂ ಸೇವಿಸಿ, ಭಕ್ತರ ಪಙ್ತಿಯಲ್ಲಿ ಕುಳಿತು, ಪ್ರಸಾದಸ್ವೀಕಾರವಂ ಮಾಡಿದರು. ಬಳಿಕ ಸಕಲ ಭಕ್ತರಿಗೂ ವಸ್ತ್ರಾಭರಣದುಡುಗೊರೆಗಳನ್ನೂ ದಕ್ಷಿಣೆಗಳನ್ನೂ ಕೊಟ್ಟು ಸಂತೋಷದಿಂದ ಕಳುಹಿಕೊಟ್ಟರು. ಬಸವೇಶನು ಸತಿಯಾದ ನೀಲಲೋಚನೆಯೊಡನೆ ಶಯ್ಯಾಗೃಹವನ್ನು ಸೇರಿದನು. ನಾಂಗಲಾಂಬಿಕೆಯು ಮೃದುತಲ್ಪದಲ್ಲಿ ಸುಕುಮಾರನನ್ನು ಮಲಗಿಸಿಕೊಂಡು ಸುಖನಿದ್ರೆಗೈದಳು. ಅತ್ತ ಕೈಲಾಸದಲ್ಲಿ ಪಾರ್ವತೀಪರಮೇಶ್ವರರು ಭೂಲೋಕದಲ್ಲಿ ತಮ್ಮ ಚಿತ್ಕಳಾಕುಮಾರನು ಪವಾಡವನ್ನು ಮೆರೆದು ಜನಿಸಿರುವುದನ್ನು ನೋಡಬೇಕೆಂಬ ಅಪೇಕ್ಷೆಯಿಂದ ವೃಷಭನನ್ನು ಹತ್ತಿ ರುದ್ರಕನ್ಯಕೆಯರೊಡನೆ ಭೂಲೋಕಕ್ಕೆ ಬಂದು, ನಾಗಲಾಂಬಿಕೆಯ ಶಯ್ಯಾಗೃಹವನ್ನು ಹೊಕ್ಕರು. ಗಂಗಾನ


ಯ ದಡದಲ್ಲಿ ಶುದ್ಧಸ್ಫಟಿಕಲಿಂಗವಿರುವಂತೆಯೂ, ಕ್ಷೀರಸಮುದ್ರದ ಪ
ಕ್ಕದಲ್ಲಿ ಪೂರ್ಣಚಂದ್ರನಿರುವಂತೆಯೂ, ಸರೋವರದ ಮಗ್ಗುಲಲ್ಲಿ ರಾಜ
ಹಂಸಪಕ್ಷಿಯು ಮೆರೆಯುವಂತೆಯೂ, ಮಂಗಳಾಂಗಿಯಾದ ನಾಗಲಾಂಬಿ
ಕೆಯ ಮಗ್ಗುಲಲ್ಲಿ ರಂಜಿಸುತ್ತಿರುವ ಶಿಶುವನ್ನು ಕಂಡು ಪಾರ್ವತಿಯ ಕಣ್ಣಿ
ನಲ್ಲಿ ಆನಂದಬಾಷ್ಪಗಳು ತುಂಬಿಕೊಳ್ಳಲು, ಆ ಪ್ರೇಮಪುತ್ರನನ್ನು ಪ್ರೀ
ತಿಯಿಂದೆತ್ತಿ ತಬ್ಬಿಕೊಂಡಳು. ಆಗ ಪರಶಿವನು ಪಾರ್ವತೀಸಮೇತನಾಗಿ
ಕುಳಿತು ಪಂಚಕಲಶಸ್ಥಾಪನವನ್ನು ಮಾಡಿ, ಆ ಕುಮಾರನಿಗೆ ವೇಧಾ
ಮನು ಕ್ರಿಯೆ ಯೆಂಬ ತ್ರಿವಿಧದೀಕ್ಷೆಗಳನ್ನು ಮಾಡಿ, ಆತನ ಸ್ಥೂಲಸೂ
ಕ್ಷ್ಮಕಾರಣಶರೀರಗಳಲ್ಲಿ ಇಷ್ಟಪ್ರಾಣಭಾವವೆಂಬ ತ್ರಿವಿಧಲಿಂಗಗಳನ್ನು
ಸ್ಥಾಪಿಸಿ, ಶಿವಶರಣರಿಗೆಲ್ಲ ಇದೇರೀತಿಯಾಗಿ ನೀನು ದೀಕ್ಷೆಯನ್ನು ಮಾ
ಡೆಂದು ಬೋಧಿಸುವನೋ ಎಂಬಂತೆ ಶಿವದೀಕ್ಷಾಸಂಸ್ಕಾರವನ್ನು ಮಾಡಿದ
ನು. ಮತ್ತೂ ಈ ಪುತ್ರನು ತೇಜಸ್ಸಿನಲ್ಲೂ, ರೂಪಿನಲ್ಲೂ, ಶೈವವಿದ್ಯೆಯ
ಲ್ಲೂ, ಶಿವಜ್ಞಾನದಲ್ಲೂ, ಸೈರ್ಯಶೌರ್ಯದಲ್ಲೂ, ಪವಾಡಗಳಲ್ಲೂ ಬಸವೇಶ
ನಿಗಿಂತಲೂ ಚೆನ್ನಾಗಿ ತೋರುವನಾದುದರಿಂದ ಇವನಿಗೆ "ಚೆನ್ನಬಸವೇಶ"
ನೆಂಬ ಹೆಸರು ಒಪ್ಪತಕ್ಕುದು ಎಂದು ಪಾರ್ವತಿಯೊಡನೆ ಪೇಳಿ, ನಾವು
ಕರಣವನ್ನು ಮಾಡಿದನು. ಬಳಿಕ ಪಾರ್ವತೀಪರಮೇಶ್ವರರಿಬ್ಬರೂ ಆ
ಮುದ್ದುಮಗನನ್ನು ನೋಡುವರು, ಸಂತೋಷದಿಂದ ತಲೆಯನ್ನು ತೂಗುವ
ರು, ಎತ್ತಿ ಮುದ್ದಾಡುವರು, ಅಪ್ಪಿ ಹಾಡುವರು, ತೊಡೆಯಲ್ಲಿ ಮಲಗಿಸಿ
ತಟ್ಟುವರು, ಕೈಯಲ್ಲಿ ಮಲಗಿಸಿ ನಂಬಿಸುವರು, ನಗಿಸುವರು, ಅಂಗಾಂಗಗ
ಳಲ್ಲೂ ಮುತ್ತನ್ನು ಕೊಡುವರು. ಕೈಚಾಚಿ ಕರೆಯುವರು, ಹೀಗೆ ನಾ
ನಾವಿಧವಾಗಿ ಪುತ್ರಮೋಹದಿಂದ ಪ್ರೀತಿಸುತ್ತಿರುವಲ್ಲಿ ಪಾರ್ವತಿಗೆ ಸ್ತನಗಳ
ಲ್ಲಿ ಹಾಲು ತುಂಬಿ ಬಿಗಿಯಲು, ಕೂಡಲೇ ಕುವರನನ್ನೆತ್ತಿ ತೊಡೆಯಲ್ಲಿ ಮ
ಲಗಿಸಿ, ಮೊಲೆಯನ್ನುಣ್ಣಿಸಿ, ಹಾಲನ್ನು ಕುಡಿಸಿ, ಮುಂಡಾಡಿ, ಹರಸಿ,
ಚೆನ್ನದ ತೊಟ್ಟಿಲಲ್ಲಿ ಮಲಗಿಸಿ, ಅಮ್ಮವ್ವೆ, ಚಿಕ್ಕೋಳಿಯಕ್ಕ, ಚೆಂಗಳೆ,
ನಿಂಬಿಯಕ್ಕ ಮೊದಲಾದ ರುದ್ರಕನ್ಯೆಯರೊಡನೆ ಕೂಡಿ, ಹಣೆಗೆ ಪಾದ
ಧೂಳಿಯ ರಕ್ಷೆಯ ಬಟ್ಟನ್ನಿಟ್ಟು, ಜೋ ಜೋ ಎಂದು ಜೋಗುಳಹಾ
ಡನ್ನು ಹಾಡಿ ತೂಗಿದಳು. ಬಳಿಕ ನಾಗಲಾಂಬಿಕೆಯನ್ನು ಕುರಿತು—

ಅಮ್ಮಾ ತಂಗಿ! ನೀನೇ ನನ್ನ ಸ್ವರೂಪಳು, ಈ ಮಗನೇ ಶಿವಕುಮಾರನು, ಲೋಕೋದ್ಧರಣಕಾರ್ಯಕ್ಕಾಗಿ ನರವೇಷದಿಂದಿಲ್ಲಿ ಅವತರಿಸಿರುವನು. ಮುಂದೆ ಸ್ನಾನಭೋಜನಾದಿ ಯಾವಕ್ರಿಯೆಯಲ್ಲೂ ಕೊರತೆಮಾಡದೆ, ಈ ಸುಕುಮಾರ ಶರೀರವನ್ನು ಕಂದದಂತೆ ಕಾಪಾಡಿಕೊಂಡಿರು, ಎಂದು ಹೇಳಿ ಆ ಮಾತಿಗೆ ಕೈ ತಟ್ಟಿಸಿಕೊಂಡಳು. ಅಷ್ಟರಲ್ಲಿ ನಡೆದ ಸಂಗತಿಯನ್ನೆಲ್ಲ ಭೂಲೋಕದ ಜನರಿಗೆ ತಿಳುಹಲು ಎಚ್ಚರಿಸುವಂತೆ ಕೋಳಿಗಳು ಕೂಗಿದುವು. ಶಿವಶಿವೆಯರು ಆ ಚೆನ್ನಬಸವೇಶನನ್ನು ಮುದ್ದಾಡಿ, ಆಶೀರ್ವದಿಸಿ, ಸಂತಸದಿಂದ ಕೈಲಾಸಕ್ಕೆ ತೆರಳಿದರು ಇತ್ತ ನಾಗಲಾಂಬಿಕೆಯು ಎಚ್ಚತ್ತು, ಇದೇನು! ಇದುವರೆಗೂ ನಡೆದ ಸಂಗತಿಯನ್ನು ಸ್ವಪ್ನವೆಂದು ತಿಳಿಯೋಣವೆಂದರೆ—ಮಗ್ಗುಲಲ್ಲೇ ಪಂಚಕಲಶಗಳೂ, ಚಿನ್ನದ ತೊಟ್ಟಿಲೂ ಪ್ರತ್ಯಕ್ಷವಾಗಿ ಕಾಣುತ್ತಿವೆ! ಎಂದು ಆಶ್ಚರ್ಯದಿಂದ ತಲೆದೂಗಿದಳು. ಅಷ್ಟರಲ್ಲಿ ಬೆಳಗಾಗಿ ಸೂರ್ಯನುದಿಸಿದನು. ನಾಗಾಂಬೆಯು ಬಸವೇಶನನ್ನು ಬರಮಾಡಿ, ರಾತ್ರಿ ನಡೆದ ಸಂಗತಿಯನ್ನೆಲ್ಲ ತಿಳುಹಿ, ಇದ್ದ ಗುರುತುಗಳನ್ನೆಲ್ಲ ತೋರಿಸಿದಳು. ಬಸವರಾಜನು ಅವನ್ನೆಲ್ಲ ಕೇಳಿ, ನೋಡಿ, ಈತನು ನಮ್ಮ ಕಣ್ಣಿನ ಪುಣ್ಯದ ನಿಧಿಯೆಂದು ಹೇಳಿ, ಅಳಿಯನನ್ನು ಸಂತೋಷದಿಂದ ಕೊಂಡಾಡಿದನು; ಮುಂಡಾಡಿದನು. ಆ ಚೆನ್ನಬಸವೇಶನು ಶುಕ್ಲಪಕ್ಷದ ಚಂದ್ರನಂತೆ ದಿನೇದಿನೆ ವೃದ್ಧಿಯೊಂದುತ್ತಿದ್ದನು. ತಾಯಿಯು ಮಗನಿಗೆ ರಕ್ಷಾಮಣಿಯ ಸರ, ಹುಲಿಯುಗುರು, ಗೆಜ್ಜೆ, ಗಗ್ಗರ, ಪಾಡಗ, ಮಾಗಾಯಿ, ಅರಳೆಲೆ, ಮುತ್ತಿನ ಹಾರ, ಉಡಿದಾರ ಮೊದಲಾವ ಮಕ್ಕಳ ತೊಡವುಗಳನ್ನಿಕ್ಕಿ, ಮೊಲೆವಾಲನ್ನು ಕುಡಿಸಿ, ಪ್ರೀತಿಯಿಂದ ಸಾಕುತ್ತಿದ್ದಳು. ಜಗನ್ನಾಟಕ ಸೂತ್ರಧಾರಕನಾದ ಆ ಪುತ್ರನು ನರವೇಷಧರ್ಮಾನುಸಾರವಾಗಿ ಅಳುವುದು, ನಗುವುದು, ಮುಮ್ಮುಖಾತನ್ನಾಡುವುದು, ಜೊಲ್ಲನ್ನು ಸುರಿಸುವುದು, ಕುಣಿಯುವುದು, ತಪ್ಪ ಹಜ್ಜೆಯನ್ನಿಕ್ಕುವುದು ಮೊದಲಾದ ನಾನಾ ಬಾಲಲೀಲೆಗಳನ್ನು ತೋರಿಸುತ್ತಿದ್ದನು. ಓರಗೆಯ ಮಕ್ಕಳ ಮಧ್ಯದಲ್ಲಿ ಈ ಸುಕುಮಾರನು ನಕ್ಷತ್ರಗಳ ಮಧ್ಯದ ಚಂದ್ರನಂತೆ ಕಾಂತಿಪೂರ್ಣನಾಗಿ ಪ್ರಭರ್ಧಮಾನನಾಗುತ್ತಿದ್ದನು. ಸಕಾಲದಲ್ಲಿ ವಿದ್ಯಾಭ್ಯಾಸದಲ್ಲಿ ನಿಯೋಗಿಸಲು, ಮಂತ್ರಮಯನಾದ ಈ ಕುಮಾರನು ಕೋಶ ಕಾ

ವ್ಯ ನಾಟಕ ಶಾಸ್ತ್ರವೇದಾಗಮಪುರಾಣಾದಿಗಳಲ್ಲೆಲ್ಲ ಪರಿಣತಪಾಂಡಿತ್ಯ ವನ್ನು ಸಂಪಾದಿಸಿದನು. ಅವರಿಂದ ಸಕಲ ವಿದ್ಯೆಗಳೂ ಈ ಮಹಾಮಹಿ ಮನ ಪಾದಸೇವೆಯನ್ನು ಮಾಡುವುದಕ್ಕಾಗಿ ಬಂದು ಸೇರಿಕೊಂಡಿರು ವಂತೆ ರಂಜಿಸುತ್ತಿದ್ದನು. ಯೌವನಕಾಲದಲ್ಲಿ ಆ ಚೆನ್ನಬಸವೇಶನ ಅಂಗವು ಅತ್ಯಂತ ಸೌಂದರ್ಯಪರಿಪೂರ್ಣವಾಯಿತು. ಆತನ ಕಣ್ಣುಗಳು ಕಮಲದ ದಳಗಳನ್ನೂ, ಹುಬ್ಬುಗಳು ಮನ್ಮಥನ ಬಿಲ್ಲಿನಾಕೃತಿಯನ್ನೂ, ಮುಖವು ಕನ್ನಡಿಯಂದವನ್ನೂ, ತೋಳುಗಳು ಆನೆಯ ಸುಂಡಿಲ ರೀತಿಯನ್ನೂ, ತೊಡೆಗಳು ಬಾಳೆಗಂಬದ ಚೆಂದವನ್ನೂ ಹಿಂದುಮಾಡಿದುವು. ಆತನ ಸೇವೆಗಾಗಿ ಹತಪದವರು, ಬೀಸಣಿಗೆಯವರು, ಹಾವುಗೆ ಹಿಡಿಯುವವರು, ಕಾಳಂಜಿಯವರು ಮೊದಲಾದ ಸೇವಕರನ್ನಿಲ್ಲ ಬಸವೇಶನು ನಿಯಮಿಸಿಕೊಟ್ಟನು. ಮತ್ತೂ ಬಸವೇಂದ್ರನು ಆತನ ವಿದ್ಯಾಪ್ರೌಢಿಮೆಯನ್ನೂ, ತತ್ತ್ವಜ್ಞಾನಾತಿಶಯವನ್ನೂ, ಅನುಪಮವಾದ ಶೈವತೇಜಸ್ಸನ್ನೂ, ಘನತರವಾದ ಶೀಲವನ್ನೂ ನೋಡಿ, ಬೆಗ್ಗ, ಈತನೇ ತನಗೆ ಗುರುವೆಂದು ಮನಸ್ಸಿನಲ್ಲಿ ಪರಿಭಾವಿಸಿ, ಆ ಮಹಿಮನ ವಾಸಕ್ಕೆ ಯೋಗ್ಯವಾದ ಭವ್ಯವಾದ ಮಂದಿರವೊಂದನ್ನು ತನ್ನ ಮನೆಯ ಮಗ್ಗುಲಲ್ಲೇ ಕಟ್ಟಿಸಬೇಕೆಂದು ಶಿಲ್ಪಿಗಳಿಗೆ ಅಪ್ಪಣೆ ಮಾಡಿದನು. ಅವರು ದೇವೇಂದ್ರಭವನದಂತೆ ಮುತ್ತು ಹವಳ ವಜ್ರ ಗೋಮೇಧಿಕ ಮೊದಲಾದುವುಗಳನ್ನು ಕೆತ್ತಿ ಚೆನ್ನ ಬೆಳ್ಳಿಗಳ ಕೆಲಸವನ್ನು ಮಾಡಿ ಕೋಭಾಸುರವಾದ ಭವನವನ್ನು ವಿರಚಿಸಿದರು. ಅದರಲ್ಲಿ ಶಿಲ್ಪಶಾಸ್ತ್ರೋಕ್ತ ಕ್ರಮಾನುಸಾರವಾಗಿ ಸ್ನಾನ, ಪಾಕ, ಭೋಜನ, ಮಂತ್ರ, ನಕ್ತಸ, ವಸ್ತ್ರ, ಹಯ, ಗಜ, ಸಭಾ, ಗೀತ, ಶಯನ ಮೊದಲಾದ ಸಕಲ ವಿಧದ ಶಾಲೆಗಳೂ ಮೇಲುಪ್ಪರಿಗೆಗಳೂ ಇರುವಂತೆ ಮಾಡಿದ್ದರು. ಧಾನ್ಯ ತೈಲ ಕರ್ಪರಾದಿ ಸಕಲ ವಸ್ತುಗಳನ್ನೂ ತುಂಬತಕ್ಕ ಉಗ್ರಾಣಗಳಿದ್ದುವು. ಅಲ್ಲಲ್ಲಿ ಕಾವಲುಗಾರರು ಕುಳಿತುಕೊಳ್ಳುವ ಚಾವಡಿಗಳೂ, ಲತಾಗೃಹ ಸರೋವರ ತರು ಗುಲ್ಮ ಲತಾದಿಗಳಿಂದ ಅಂದವಾದ ಉಪವನವೂ, ಚಂದ್ರಕಾಂತಸ್ಫಟಿಕಾದಿಗಳ ಜಗತಿಗಳೂ ಮೆರೆಯುತ್ತಿದ್ದುವು. ನಾನಾವರ್ಣಗಳಿಂದ ಮಂದಿರವು ಮಂಗಳಮಯವಾಗಿ ಶೋಭಿಸುತ್ತಿದ್ದಿತು. ವೈಶಾಲ್ಯದಲ್ಲೂ ಎತ್ತರದಲ್ಲೂ ಒಟ್ಟಂದದಲ್ಲೂ ಅಭೂತಪೂರ್ವ

ರ್ವವಾಗಿ ತೋರುತ್ತಿದ್ದಿತು. ನೋಡಿದವರೆಲ್ಲರೂ ಸಂತೋಷವನ್ನೂ ಆಶ್ಚರ್ಯವನ್ನೂ ಹೊಂದುತ್ತಿದ್ದರು. ಶಿಲ್ಪಿಯು ಬಂದು, ಮಂದಿರವೆಲ್ಲವೂ ಸಿದ್ಧವಾಗಿರುವುದು, ಚಿತ್ರೈಸಬೇಕೆಂದು ಬಸವೇಶನೊಡನೆ ಬಿನ್ನೈಸಿದನು. ಆಗ ಬಸವಣ್ಣನು ಚೆನ್ನಬಸವಣ್ಣನೊಡನೆ ಕೂಡಿ ಬಂದು, ಮನೆಯೆಲ್ಲವನ್ನೂ ಆದ್ಯಂತವಾಗಿ ನೋಡಲಾಗಿ, ಅದು ನಿರ್ಮಲವಾಗಿಯೂ, ಮಂಗಳಮಯವಾಗಿಯೂ, ಕಾಂತಿಮತ್ತಾಗಿಯೂ ಎಸೆಯುತ್ತಿದ್ದಿತು. ಬಸವೇಶನು ಮೆಚ್ಚಿ ತಲೆದೂಗಿ, ಶಿಲ್ಪಿಗೆ ಉಡಿಗೆ ತೊಡಿಗೆಗಳನ್ನಿತ್ತು ಸಂತೋಷಪಡಿಸಿ, ಮುಂದೆ ನಿಂತಿರುವ ಚೆನ್ನಬಸವೇಶನ ಪಾದಕ್ಕೆ ಭಕ್ತಿಯಿಂದ ನಮಸ್ಕರಿಸಿ, ಸದಾ ಈ ಮನೆಯಲ್ಲಿ ನೀವು ವಾಸಮಾಡಿಕೊಂಡು ನನ್ನ ಸೇವೆಯನ್ನು ಕೈಕೊಳ್ಳುತ್ತ ನಮಗೆ ಶಿವತತ್ತ್ವಬೋಧೆಯನ್ನು ಮಾಡಿಕೊಂಡಿರಬೇಕೆಂದು ಪ್ರಾರ್ಥಿಸಿದನು. ಅದನ್ನು ಚೆನ್ನಬಸವೇಶನು ಕೇಳಿ, ಗುರುವಿನ ವಾಕ್ಯವೇ ಅನೆಂದು ತಿಳಿದು, ''ಎಲೈ ಜ್ಞಾನನಿಧಿಯೇ ನೀನು ಹೇಗಿರಿಸಿದರೆ ಹಾಗೆ ನಾನಿರತಕ್ಕವನು'' ಎಂದು ಉತ್ತರವನ್ನು ಕೊಟ್ಟನು. ಆಗ ಬಸವೇಶನು ಸಂತೋಷದಿಂದ ಧನಧಾನ್ಯ ಮೊದಲಾದ ಸಕಲ ಸಾಮಗ್ರಿಗಳನ್ನೂ ಆ ಮನೆಗೆ ತಂದು ತುಂಬಿಸಿದನು. ಬೇಕಾದ ಪರಿಜನಗಳನ್ನೆಲ್ಲ ನೇಮಿಸಿದನು. ಭಕ್ತಿಯಿಂದ ನಾಗಲಾಂಬಿಕೆಗೂ ಬಿನ್ನೈಸಿಕೊಂಡನು. ಆಕೆಯು ಚೆನ್ನದ ಅಂಬಳದಲ್ಲಿ ಕುಳಿತು, ಸುವಾಸಿನಿಯರೊಡಗೂಡಿ, ಆ ಮಂಗಳ ಮಂದಿರವನ್ನು ಪ್ರವೇಶಿಸಿದಳು. ಬಳಿಕ ಬಸವೇಶನು ಈತನೇ ಸಾಕ್ಷಾತ್ಪರಶಿವನ ಅಪರಾವತಾರನೆಂದು ತಿಳಿದು, ಸಲಹಬೇಕೆಂದು ತನ್ನಕ್ಕನೊಡನೆ ಹೇಳಿ, ಚೆನ್ನಬಸವೇಶನಿಗೆ ವಂದಿಸಿ, ತನ್ನರಮನೆಗೆ ತೆರಳಿದನು. ಚೆನ್ನಬಸವೇಶನಾದರೊ ಆ ತನ್ನರಮನೆಗೆ ತಕ್ಕ ಕಾವಲಿನವರನ್ನು ನಿಯಮಿಸಬೇಕೆಂದು ಮನಸ್ಸಿನಲ್ಲಿ ಯೋಚಿಸಿಕೊಂಡು, ಷಟ್ಸ್ಥಲಮರ್ಮವನ್ನು ತಿಳಿಯದಿರತಕ್ಕ ಯಾರೊಬ್ಬರನ್ನೂ (ಮೂರು ಕಣ್ಣುಳ್ಳವರಾಗಿದ್ದರೂ) ಈ ಮನೆಯೊಳಕ್ಕೆ ಪುಗಿಸಬಾರದು, ಎಂದು ಹೇಳಿ, ಆರುಮಂದಿ ಷಟ್ಸ್ಥಲಬ್ರಹ್ಮಿಗಳನ್ನು ಆರುಬಾಗಿಲುಗಳಲ್ಲೂ ಕಾವಲಿಟ್ಟು, ೧೨ ಸಾವಿರ ಷಟ್ಸ್ಥಲಬ್ರಹ್ಮಿಗಳನ್ನು ಸೇರಿಸಿಕೊಂಡು ಜಂಗಮ ಪಾದಾರ್ಚನಲೋಲನಾಗಿ ಒಪ್ಪುತ್ತಿದ್ದನು. ಪ್ರತಿ ದಿನವಲ್ಲೂ ಷಟ್ಸ್ಥಲಬ್ರಹ್ಮಿಗಳಿಗೆಲ್ಲ ಭಕ್ತಿಯಿಂದ ಸ್ನಾ

ನಾಭ್ಯಂಗಗಳನ್ನು ಮಾಡಿಸಿ, ಭೋಜನಶಾಲೆಯಲ್ಲಿ ಎಲ್ಲರನ್ನೂ ಸಾಲುಸಾಲಾಗಿ ಗದ್ದುಗೆಯಮೇಲೆ ಕುಳ್ಳಿರಿಸಿ, ಅರ್ಘ್ಯಪಾದ್ಯಾದಿಗಳನ್ನಿತ್ತು, ಶಿವಾರ್ಚನೆಯನ್ನು ಮಾಡಿಸಿ, ಚಿನ್ನದ ಹರಿವಾಣಗಳಲ್ಲಿ ಶಾಕ ಪಾಕ ಭಕ್ಷ್ಯ ಭೋಜ್ಯ ಪರಮಾನ್ನ ದಧಿ ಕ್ಷೀರ ಘೃತಾದಿಗಳನ್ನು ನೀಡಿಸಿ, ಸಮರ್ಪಿಸುತ್ತಿದ್ದನು. ಸರ್ವರೂ ಭುಂಜಿಸಿ, ಆನಂದದಿಂದ ಹರಸುತ್ತಿದ್ದರು. ಬಳಿಕ ಅವರೆಲ್ಲರಿಗೂ ಸಕರ್ಪೂರ ತಾಂಬೂಲಗಳನ್ನು ಕೊಟ್ಟು ನಮಸ್ಕರಿಸುತ್ತಿದ್ದನು. ತದನಂತರ ತಾನು ಅವರ ಪಾದೋದಕ ಪ್ರಸಾದಗಳನ್ನು ಸ್ವೀಕರಿಸಿ, ವಿಲಾಸದಿಂದ ಅವರ ಸಭಾಮಧ್ಯದಲ್ಲಿ ಶಿವತತ್ತ್ವಾನುಭವವಿಚಾರದಲ್ಲಿ ಸುಖದಿಂದ ಕಾಲವನ್ನು ಕಳೆಯುತ್ತ ಪರಮ ಜಿತೇಂದ್ರಿಯನಾಗಿಯೂ, ಶಾಂತಮೂರ್ತಿಯಾಗಿಯೂ, ಮೆರೆಯುತ್ತಿದ್ದನೆಂಬಲ್ಲಿಗೆ ಐದನೆ ಅಧ್ಯಾಯವು ಸಂಪೂರ್ಣವು.



ಆನೆ ಅಧ್ಯಾಯವು.



ಬಸವೇಶಪ್ರಾಣಲಿಂಗೋಪದೇಶವು.

ಹೀಗಿರುವಲ್ಲಿ ಬಂದಾಸೊಂದು ದಿವಸ ಬಸವೇಶ್ವರನು ಪ್ರಾತಃಕಾಲದ ಸ್ನಾನ ಶಿವಾರ್ಚನೆಗಳನ್ನು ತೀರಿಸಿಕೊಂಡು, ಚೆನ್ನಬಸವೇಶನಿಂದ ಷಟ್ಸ್ಥಲವಿದ್ಯಾರಹಸ್ಯವನ್ನು ತಿಳಿಯಬೇಕೆಂದು ಯೋಚಿಸಿ ಹೊರಟನು. ಒಡನೆಯೇ ಕೆಲ ಶಿವಗಣಂಗಳೂ ವಿಭವಪರಿಜನರೂ ಹೊರಟರು. ಚೆನ್ನಬಸವೇಶ್ವರನ ಮನೆಯು ಬಾಗಿಲಿಗೆ ಬರುವುದರೊಳಗಾಗಿ ದ್ವಾರಪಾಲಕನು ಕಂಡು, ತನ್ನಿಷ್ಟಮಿತ್ರನಾದ ಬಸವೇಶಾಗಮನವನ್ನು ಸೂಚಿಸಲು, ಆತನು ಥಟ್ಟನೆದ್ದು ತನ್ನ ಒಳಮನೆಯಲ್ಲಿದ್ದ ಪರಿಜನರೊಡನೆ ಕೂಡಿ, ಇದಿರಾಗಿ ಬಂದು, ಬಸವೇಶನು ನಮಸ್ಕರಿಸಲು, ಬೇಗನೆ ಓರಯಾಗಿ, ತಾನೂ ನಮಸ್ಕರಿಸಿ, ಬರುತ್ತಿರುವಲ್ಲಿ, ಆ ಅಳಿಯನನ್ನು ಬಸವೇಶನು ಅತ್ಯಾನಂದದಿಂದಲೂ, ಪ್ರೀತಿಯಿಂದಲೂ, ಭಕ್ತಿಯಿಂದಲೂ, ತಬ್ಬಿಕೊಂಡು, ನಾನಾವಿ

ಥವಾಗಿ ಕೊಂಡಾಡಿ, ರತ್ನಖಚಿತವಾದ ಮಂಟಪದಲ್ಲಿ ಗದ್ದುಗೆಯಮೇಲೆ ಆತನನ್ನು ಕುಳ್ಳಿರಿಸಿ, ತಾನೂ ಕುಳಿತುಕೊಂಡು, ಎಡಬಲ ಪಕ್ಕಗಳಲ್ಲಿ ಉಳಿದ ಶರಣ ಸಮೂಹವನ್ನೆಲ್ಲ ಕುಳ್ಳಿರಿಸಿ, ಷಟ್ಸ್ಥಲತತ್ತ್ವವನ್ನು ತಿಳಿಯು ಬೇಕೆಂಬ ತಮ್ಮ ಆಶಯವನ್ನು ತಿಳಿಯುಪಡಿಸಿದನು. ಮತ್ತೂ ಬಸವೇ ಶನು ಚೆನ್ನಬಸವೇಶನ ಮುಖವನ್ನು ನೋಡಿ, ನಗುತ್ತ, ಶಿವಾರ್ಚನೆಯಾ ಯಿತೆ? ಎಂದು ಕೇಳಿದನು. ಆಗ ಚೆನ್ನಬಸವೇಶನು—ನಕ್ಕು, ವಿನಯು ದಿಂದ—ದೀಪವಿಲ್ಲದ ಮೇಲೆ ಕಣ್ಣು ಕಾಣುವುದುಂಟೆ? ಗುರುಮುಖ ದಿಂದ ದೀಕ್ಷೆಯನ್ನು ಹೊಂದದ ಬಳಿಕ ಶಿವಾರ್ಚನೆಯೆಂಬ ಹೆಸರುಂಟೆ? ಅದುಕಾರಣ, ಸಜ್ಜೆಯನ್ನು ಬಿಚ್ಚಿ, ಈಶ್ವರನ ಪೂಜೆಯನ್ನು ಮಾಡಲು ನನಗಪ್ಪಣೆಯನ್ನು ಮಾಡು, ಎಂದನು. ಅದಕ್ಕೆ ಬಸವೇಶನು—ಹರ ಹರಾ! ಲೋಕದಲ್ಲಿ ಗುರುವು ಶಿಷ್ಯನಿಗೆ ಉಪದೇಶಮಾಡುವುದುಂಟು; ಆ ಗುರುವಿಗೇ ಶಿಷ್ಯನು ಉಪದೇಶಿಸುವುದು ಎಲ್ಲಾದರೂ ಉಂಟೆ? ನೀನು ಸಾಮಾನ್ಯ ಮನುಷ್ಯನೆ? ತತ್ತ್ವರಹಸ್ಯವನ್ನು ಬೋಧಿಸಿ, ನಮ್ಮ ನ್ನು ರಕ್ಷಿಸುವುದಕ್ಕಾಗಿ ಬಂದಿರುವ ಸಾಕ್ಷಾತ್ ಸಂಗಮೇಶ್ವರನೇ ನೀನು. ನಿನಗೆ ದೀಕ್ಷೆಯನ್ನು ಮಾಡುವುದಕ್ಕೆ ನಾವು ಹೆದರುವೆವು, ಎಂದನು, ಚೆನ್ನಬಸವೇಶನಾದರೊ—ಬಸವಣ್ಣನೆ! ಇದಕ್ಕೆ ಹೆದರಬೇಕೆ! ಹಿಂದೆ ನೀನು ಕೊಟ್ಟ ಲಿಂಗವನ್ನು ತೆಗೆದುಕೊಂಡು ಅದೃಶ್ಯನಾದ ಅನಿಮಿಷಯ್ಯ ನಂತೆ ಮಾಡಲಕ್ಕೆ ಸಾಮರ್ಥ್ಯವು ನನಗಿಲ್ಲ. ಈ ಲಿಂಗಲಕ್ಷಣವನ್ನಾದರೂ ನನಗೆ ತಿಳಿಸಿಕೊಡು ಎಂದು ಹೇಳಿ, ಸಜ್ಜಿಕೆಯನ್ನು ಬಿಚ್ಚಿ, ಲಿಂಗವನ್ನು ಬಸವೇಶನ ಕೈಯಲ್ಲಿಡಲಾಗಿ, "ನನಗೆ ಲಿಂಗಲಕ್ಷಣವನ್ನು ಎಳ್ಳಷ್ಟಾದರೂ ವಿಚಾರಿಸುವುದಸಾಧ್ಯ" ಎಂದು ಹೇಳಿ ಬಸವೇಶನು ಮರಳಿ ಆ ಲಿಂಗ ವನ್ನು ಚೆನ್ನಬಸವೇಶನ ಹಸ್ತಕ್ಕೇ ಕೊಟ್ಟನು. ಅದನ್ನೇ ಗುರುದೀಕ್ಷೆ ಯೆಂದು ಚೆನ್ನಬಸವೇಶನು ನುಡಿದನು. ಬಳಿಕ ಬಸವೇಶನು—ಪೂರ್ವ ವೃತ್ತಾಂತವನ್ನು ನನಗೆ ಹೇಳಿ ಎಚ್ಚರಿಸಿ ಮುಂದೆ ಭವವು ತೊಡಗದಂತೆ ನನ್ನನ್ನು ಕರುಣದಿಂದ ಕಾಪಾಡುವ ತಂದೆಯು ನೀನಿರಲಾಗಿ ನನಗೆ ಕಷ್ಟ ವೇನುಂಟು? ಅನಿಮಿಷಯ್ಯನಿಗೆ ನಾನು ಕೊಡಲು ಅದೃಶ್ಯವಾದ ಆ ಮಹಾ ಲಿಂಗವು ನನಗೆ ಸಾಧ್ಯವಾಗುವುದು ಹೇಗೆ? ಸಂಗಮೇಶ್ವರನು ನನ್ನನ್ನು

ಕರೆದುಕೊಳ್ಳುವುದಾವಾಗ? ಇದನ್ನು ತಿಳುಹಿ, ನನ್ನನ್ನು ಉದ್ಧರಿಸಬೇಕೆಂದು ಹೇಳಿ, ನಮಸ್ಕರಿಸಿದನು. ಚೆನ್ನಬಸವೇಶನು ಅದಕ್ಕೆ ಪ್ರತಿನಮಸ್ಕಾರವನ್ನು ಮಾಡಿ, ಅಯ್ಯಾ! ಎಳೆಯ ಹೂಗಾಯನ್ನು ಕೊಯ್ದು ಹಣ್ಣನ್ನು ಮಾಡಲಾದೀತೆ? ನೀನು ಬಂದ ಉದ್ದೇಶದಲ್ಲಿ ತಿಲಮಾತ್ರದಷ್ಟು ಕೆಲಸವೂ ಭೂಲೋಕದಲ್ಲಿ ಸಾಗಿಲ್ಲ. ನೀನು ಈಗ ಇಷ್ಟಲಿಂಗವನ್ನು ಪೂಜಿಸುವಹಾಗೆಯೇ ಹೃದಯದಲ್ಲಿ ಪ್ರಾಣಲಿಂಗವನ್ನು ಆರಾಧಿಸಿ, ಷಟ್ಸ್ಥಲ ತತ್ತ್ವಾರ್ಥವನ್ನು ವಿಚಾರ ಮಾಡಿ ಲಿಂಗಾರ್ಪಣ ಸದ್ಭಾವಗಳನ್ನು ಅರಿವರೆ, ನಿನ್ನ ಮನೋರಥವು ಸಫಲವಾದೀತೇ ಹೊರತು ಬರಿಯ ಮಾತಿನಿಂದ ಸಾಧ್ಯವಿಲ್ಲವೆಂದನು. ಅದಕ್ಕೆ ಬಸವೇಶನು—ಬಳ್ಳಿಯ ಮಾತನ್ನಪ್ಪಣೆ ಕೊಡಿಸಿದೆ. ನಾನು ಇಷ್ಟು ದಿನವೂ ಹೊರಗಣ ಆಡಂಬರದ ಪೂಜೆಯನ್ನೇ ಮಾಡಿ ಮಾಡಿ ವ್ಯರ್ಥವಾಗಿ ಕಾಲಕಳೆದೆನು. ಮುಂದಾದರೂ ನನಗೆ ಪ್ರಾಣಲಿಂಗದ ನೆಲೆಯು ಅರಿಯುವಂತೆಯೂ, ಷಟ್ಸ್ಥಲಬ್ರಹ್ಮವು ತಿಳಿಯುವಂತೆಯೂ, ಜ್ಞೋಧಿಸುವೇಕೆಂದು ಪ್ರಾರ್ಥಿಸಿದನು. ಆಗ ಸಕಲ ಶಿವಗಣವೂ ತಿಳಿಯುವಂತೆ ಚೆನ್ನಬಸವೇಶನು ಜ್ಞೋಧಿಸಿದ ಷಟ್ಸ್ಥಲರಹಸ್ಯವನ್ನು ಬಸವೇಶನು ಆಲಿಸಿ, ಎಲೈ ಸದ್ಗುರುವೆ ನೀನು ಪ್ರಾಣಲಿಂಗದ ನೆಲೆಯನ್ನು ಜ್ಞೋಧಿಸಿ, ನನಗೆ ಭವಬಾಧೆಯನ್ನು ತಪ್ಪಿಸಿದೆ, ನಿನ್ನಿಂದ ನನಗೆ ಸಂಗನ ಬಸವೇಶನೆಂಬ ಹೆಸರು ಈಗ ಉಂಟಾಯಿತು. ಆನಿಮಿಷಯ್ಯನ ವೃತ್ತಾಂತವನ್ನೇನೆಂಬುವನ್ನು ನನಗೆ ಜ್ಞೋಧಿಸಬೇಕೆಂದು ಪ್ರಾರ್ಥಿಸಿದನು. ಆಗಳಾ ಚೆನ್ನಬಸವೇಶನು— ಎಲೈ ಬಸವಣ್ಣನೆ, ನೀನು ಶಿವನಪ್ಪಣೆಯನ್ನೀರೆ ಭೂಲೋಕದಲ್ಲಿ ವೀರಶೈವಾಚಾರವನ್ನು ಪ್ರತಿಷ್ಠಿಸುವುದಕ್ಕಾಗಿ ಸಳು ನೂರೆಪ್ಪತ್ತಮರಗಣಗಳೊಡನೆ ಈ ಲೋಕದಲ್ಲವತರಿಸಿರುವೆ; ನಿನ್ನ ಮಹಿಮೆಯನ್ನು ಹೇಳುವುದಕ್ಕೆ ನನಗಸಾಧ್ಯ; ಪೂರ್ವದಲ್ಲಿ ನೀನು ಆನಿಮಿಷಯ್ಯನಿಗೆ ಲಿಂಗವನ್ನು ಕೊಟ್ಟ ಒಳಿಕ ಅವನು ಅದೇ ಲಿಂಗದಲ್ಲೇ ಬೆರೆದು ಸಮಾಧಿಸ್ಥಿತನಾಗಿದ್ದನು. ಅವನ ಒಳಿಗೆ ಅಲ್ಲಮಪ್ರಭುವೆಂಬ ಜಂಗಮನು ಪೋಗಿ, ಅವನಂಗೈಯಲ್ಲಿದ್ದ ಲಿಂಗವನ್ನು ತೆಗೆದುಕೊಂಡು ನಿಜಾನಂದದಿಂದ ಓಲಾಡುತ್ತ, ಈಗ ನಿನ್ನ ಭಕ್ತಿಯನ್ನು ಪರೀಕ್ಷಿಸುವುದಕ್ಕಾಗಿ ಒರುವನು; ನೀನು ಜಂಗಮಪ್ರಾಣಿಯಾಗಿದ್ದರೇನೆಯೇ ಇಂತಹ ಜಂಗಮವು ನಿನ್ನ

ಮನೆಗೆ ಬರುವರು; ನೀನು ಮಾಡುವ ಜಂಗಮಾರ್ಚನೆಯು ಅಂತಹುದಲ್ಲ; ನಿನ್ನ ಮನೆಯಲ್ಲಿ ಜಂಗಮರನ್ನು ಲಿಂಗಶೋಭರು ಅಂಗಶೋಭರು ಎಂಬು ದಾಗಿ ಔದಾಸೀನ್ಯದಿಂದ ಇಟ್ಟುಕೊಂಡಿರಬಾರದು; ಅಲ್ಲಮನು ನಿನ್ನ ಮನೆಗೆ ಜಂಗಮಾಕಾರದಿಂದ ಬಂದಾಗ ನಿನಗೆ ಅವರ ಅಘಟಿತಘಟನಾಸಾಮರ್ಥ್ಯವಿಶೇಷವು ಕಾಣ್ಬರುವುದು; ಅದುಕಾರಣ ಆ ಜಂಗಮರ ಮಹತ್ತ್ವಕ್ಕನುಸಾರವಾಗಿ ಮಠಗಳನ್ನು ಕಟ್ಟಿಸಿಕೊಟ್ಟು ಅವುಗಳಲ್ಲಿ ಲಕ್ಷದಮೇಲೆ ತೊಂಭತ್ತಾರು ಸಾವಿರ ಜಂಗಮರನ್ನು ತಂದಿರಿಸಿ, ಅವರಿದ್ದ ಬಳಿಗೆ ನೀನೇ ಹೋಗಿ, ಭಯಭಕ್ತಿಯಿಂದ ವಿನ್ನಹವಂ ಮಾಡಿ, ನಿನ್ನರಮನೆಗೆ ಕರೆದು ಕೊಂಡು ಬಂದು, ಅವರೇಸನ್ನು ಕೇಳಿದರೂ ಕೊಟ್ಟು ಕಳುಹಿಸು ಎಂದು ಬೋಧಿಸಿದನು. ಅದಕ್ಕೆ ಬಸವೇಶನು ಹರ್ಷಗೊಂಡು, ನಾನು ಅಸ್ವತಂತ್ರ, ನೀವು ಹೇಗೆ ಇರಿಸಿದರೆ ಹಾಗೆ ನಾನಿರತಕ್ಕವನು, ಅಪ್ಪಣೆಯಾದಂತಾಗಲಿ, ಎಂದು ಹೇಳಿ, ಗಣಸಮೇತನಾಗಿ ಆ ಚೆನ್ನಬಸವೇಶನಿಗೆ ನಮಸ್ಕರಿಸಿ, ತನ್ನರಮನೆಗೆ ಹಿಂತಿರುಗಿದನು. ಬಳಿಕ ಚೆನ್ನಬಸವೇಶನು ಬಸವಣ್ಣನವರು ಸೆಯು ಮುಂದಣ ಬೈಲಿನಲ್ಲಿ ಲಕ್ಷದ ತೊಂಭತ್ತಾರುಸಾವಿರ ಜಂಗಮರಿಗೂ ಅನುಕೂಲಿಸುವಂತೆ ಮನೋಹರವಾದ ಮಠಗಳನ್ನು ಕಟ್ಟಿಸಿ, ಎಲ್ಲ ಜಂಗಮರನ್ನೂ ಅಲ್ಲಿರಿಸಿದನು. ಬಳಿಕ ಬಸವೇಶನರಮನೆಯಲ್ಲಿದ್ದ ಲಿಂಗಶೋಭರು ಅಂಗಭೋಗರುಗಳೆಲ್ಲರನ್ನೂ ಕುರಿತು—ಮುಂಗಡೆಯಲ್ಲಿರುವ ಮಠಗಳಿಗೆ ನಡೆಯಿರೆಂದು ಹೇಳಿದನು. ಅವರು ಏಳುವುದಿಲ್ಲವೆಂದರು. ಆಗ ಆ ಮನೆಗೇ ಬೆಂಕಿಯಿಕ್ಕಿಸಿದನು. ಅದು ಹೊತ್ತಿ ಧಗಧಗನೆ ಉರಿಯುತ್ತಿರಲು, ಎಲ್ಲರೂ ಗಡಬಡನೆ ಎದ್ದು, ಕೈಕಾಲೊಡೆದುಕೊಂಡು ದಿಕ್ಕು ತೋಚದೆ ಓಡುತ್ತಿದ್ದರು. ಅವರಲ್ಲಿ ಮೂವರು ಮಾತ್ರ ಲಿಂಗಾನುಸಂಧಾನದಲ್ಲಿದ್ದರು. ಅವರಲ್ಲೂ ಒಬ್ಬನು ತನ್ನ ಮಗ್ಗುಲಲ್ಲಿದ್ದವನನ್ನು ಕುರಿತು—ಇಗೋ ಇಗೋ ಬೆಂಕಿಯು ಉರಿಯುತ್ತಿದೆ! ಎಂದನು. ಮತ್ತೊಬ್ಬನು "ಎಲ್ಲಿ?" ಎಂದನು. ಇನ್ನೊಬ್ಬನು "ನಿಮ್ಮ ಸೊಲ್ಲಡಗ! ಸುಮ್ಮನಿರಿ" ಎಂದು ಹೇಳಲು, ಮೂವರೂ ಸುಮ್ಮನೆ ಮಲಗಿಕೊಂಡರು. ಚೆನ್ನಬಸವೇಶನು ಆ ಮೂವರನ್ನೂ, ಭಯದಿಂದ ಓಡಿಹೋದ ಇತರರನ್ನೂ ಕರೆತಂದು, ಬೇರೆ ಕಟ್ಟಿಸಿರುವ ಮಠಗಳಲ್ಲಿರಿಸಿ, ಮನೆಯ ಬೆಂಕಿಯನ್ನಾರಿಸಿ, ಮನೆ

ಯು ಮೊದಲಿದ್ದಂತೆ ಆಗಲೆಂದು ಅಪ್ಪಣೆ ಮಾಡಿದನು. ಥಟ್ಟನೆ ಹೊಸಕಟ್ಟಡದಂತೆ ಮನೋಹರವಾಗಿ ಶೋಭಿಸಿತು. ಬಿಜ್ಜಳರಾಜನು ಈ ಮಹತ್ತ್ವವನ್ನು ಕೇಳಿ, ಬಂದು, ಆ ಮನೆಯನ್ನು ನೋಡಿ ಆಶ್ಚರ್ಯಪಟ್ಟು, ಬಸವೇಶನೊಡನೆ "ನಿನ್ನ ಅಳಿಯನ ಮಹತ್ತ್ವವು ಘನತರವಾದುದು" ಎಂದು ಹೊಗಳಿ, ಚೆನ್ನಬಸವೇಶನ ಪಾದಕ್ಕೆ ನಮಸ್ಕರಿಸಿ, ಅಪ್ಪಣೆಯನ್ನು ಪಡೆದು ಅರಮನೆಗೆ ಹೋದನು. ಇತ್ತ ಬಸವೇಶ ಚೆನ್ನಬಸವೇಶರೀರ್ವರೂ ಸುಖದಿಂದಿದ್ದರು.

ಬಸವೇಶನ ಭಕ್ತಿಯನ್ನೂ ಮಹಿಮಾತಿಶಯವನ್ನೂ ಕಿವಿಯಿಂದ ಕೇಳಿದ್ದ ಒಬ್ಬ ಜಂಗಮಶ್ರೇಷ್ಠನು ಆತನನ್ನು ಪ್ರತ್ಯಕ್ಷವಾಗಿ ದರ್ಶನಮಾಡಬೇಕೆಂದು ಬಂದು ದಿವಸ ಅವರ ಮನೆಗೆ ಬಂದನು. ಕಾವಲುಗಾರನು ಕಾಣುವುದಕ್ಕೆ ಈಗ ಸಮಯವಿಲ್ಲವೆಂದು ತಡೆದನು. ಜಂಗಮನು ಮನಸ್ಸಿನಲ್ಲಿ ನೊಂದುಕೊಂಡು ಹಿಂತಿರುಗಿ ತ್ರಿಪುರಾಂತಕೇಶ್ವರದೇವಾಲಯಕ್ಕೆ ಹೋಗಿ ಕುಳಿತುಕೊಂಡನು. ಅಷ್ಟರಲ್ಲಿ ಬಿಜ್ಜಳರಾಜನು ಏನೋ ಬಂದು ಕಾರ್ಯಾರ್ಥವಾಗಿ ಬಸವೇಶನನ್ನು ಕರೆಯಕಳುಹಿಸಿದನು. ಅದನ್ನು ಬಸವೇಶನಿಗೆ ಅರುಹುವುದಕ್ಕಾಗಿ ಒಳಹೊಕ್ಕ ದ್ವಾರಪಾಲಕನು ಬಸವೇಶನು ಮಲಗಿರುವುದನ್ನು ನೋಡಿ, ಇಷ್ಟು ಹೊತ್ತೇಕೆ ಮಲಗಿದನೆಂದು ಆಶ್ಚರ್ಯಪಟ್ಟು ಎಬ್ಬಿಸಲು, ಉಸುರಾಡದೆ ಡಿಂಬಮಾತ್ರವಾಗಿರುವುದನ್ನು ಕಂಡು ಗೋಳಿಟ್ಟನು. ಅರಮನೆಯವರೆಲ್ಲರೂ ಓಹೋ ಏನೋ ಮೋಸ ನಡೆದಿತೆಂದು ಕೋಲಾಹಲವನ್ನು ಮಾಡಿದರು. ಹೋಗಿದ್ದ ದೂತನು ಕಂತ ಸಂಗತಿಯನ್ನು ರಾಜನೊಡನೆ ಬಿನ್ನೈಸಿದನು. ಬಿಜ್ಜಳರಾಜನು ಬರಗಾಗಿ ಥಟ್ಟನೆದ್ದು ಕಾಲ್ನಡಗೆಯಲ್ಲೇ ಬಸವರಾಜನ ಮನೆಗೆ ಬಂದನು. ಅಷ್ಟರಲ್ಲಿ ಚೆನ್ನಬಸವೇಶನು ಜ್ಞಾನದೃಷ್ಟಿಯಿಂದ ನಡೆದಿರುವ ಸಂಗತಿ ಯೇನೆಂಬುದನ್ನು ಪರಿಭಾವಿಸಿಕೊಂಡು, ಬಸವಣ್ಣನರಮನೆಗೆ ಬಂದನು. ಸಕಲ ಗಣಸಮೂಹವೂ ಬಂದು ಸೇರಿತು. ಆಗ ಬಿಜ್ಜಳನು ಜನದ ಕೋಲಾಹಲವನ್ನು ನಿಲ್ಲಿಸಿ, ಬಸವೇಶನಿಗೆ ಹೀಗೆ ನಿಷ್ಕಾರಣವಾಗಿ ಅಕಸ್ಮಾತ್ ಮರಣವೆಂತಾಯ್ತೆಂದು ಚೆನ್ನಬಸವೇಶನನ್ನು ಕೇಳಿದನು. ಅದಕ್ಕಾತನು—ಬಾಗಿಲಿಗೆ ಬಂದ ಜಂಗಮನನ್ನು ಕಾವಲುಗಾರನು ತಡೆದಟ್ಟಿದುದರಿಂದ ಆ ಜಂಗ

ಮನು ನೊಂದು ಹಿಂತಿರುಗಿ ಹೋದಕೂಡಲೇ ಈ ಬಸವೇಶನ ಪ್ರಾಣವೂ ಅವನ ಸಂಗಡ ಹೋಗಿರುವುದೆಂದು ನುಡಿದನು. ಆಗ ದೊರೆಯು ಕಾವಲುಗಾರರನ್ನು ಕರೆಸಿ "ಯಾರಾದರೂ ಬಾಗಿಲಿಗೆ ಬಂದಿದ್ದು ಹಿಂತಿರುಗಿ ಹೋದರೆ? ನಿಜವಾಗಿ ಹೇಳು, ಹೆದರಬೇಡ" ಎನಲು, ಪ್ರಭುವೇ! ಯಾರೋ ದೂರದೇಶದಿಂದ ಜಂಗಮರೊಬ್ಬರು ಬಂದಿದ್ದರು; ನಾನು ತಡೆಯಲಾಗಿ ಹೊರಟುಹೋದರು, ಎಂದನು. ಆಗ ಚೆನ್ನಬಸವೇಶನಪ್ಪಣೆಯ ಮೇರೆ ಚಾರರನ್ನು ತ್ರಿಪುರಾಂತಕೇಶ್ವರ ದೇವಾಲಯಕ್ಕೆ ಕಳುಹಿಸಿ, ಅಲ್ಲಿ ಕುಳಿತಿದ್ದ ಜಂಗಮರನ್ನು ಬರಮಾಡಿದನು. (ಆಗ ನಡೆದಾಶ್ಚರ್ಯವನ್ನೇನು ಹೇಳುವ!) ಜಂಗಮನು ಬಾಗಿಲನ್ನು ಮೆಟ್ಟಿದಕೂಡಲೇ ಬಸವೇಶನ ಪ್ರಾಣವಾರುತವು ಮೂಗಿನಲ್ಲಾಡಲಾರಂಭಿಸಿತು! ಸವಿಾಪಕ್ಕೆ ಬರುವುದರೊಳಗಾಗಿ ಸರ್ವಾಂಗವಲ್ಲೂ ನಾಡಿಯು ಆಯಾಯ ಸ್ಥಲದಲ್ಲಿ ಆಡುವುದು ಕಾಣಿಸಿತು! ಆಗ ಬಸವೇಶನು ಥಟ್ಟನೆದ್ದು ಜಂಗಮಮೂರ್ತಿಗೆ ನಮಸ್ಕಾರಮಾಡಿದನು. ಬಿಜ್ಜಳನು ಆಶ್ಚರ್ಯಪಟ್ಟು ಚೆನ್ನಬಸವೇಶನನ್ನು ಕೊಂಡಾಡಿ ತನ್ನರಮನೆಗೆ ತೆರಳಿದನು. ಇತ್ತ ಸಕಲಗಣಂಗಳೂ ಬಸವೇಶ ಚೆನ್ನಬಸವೇಶರಿಬ್ಬರನ್ನೂ ಹೊಗಳಿದರು. ಬಳಿಕ ಚೆನ್ನಬಸವೇಶನು ಬಸವರಾಜನನ್ನು ಕುರಿತು—ವ್ಯರ್ಥವಾಗಿ ಹೀಗೆ ಪ್ರಾಣವನ್ನು ಬಿಡುವುದು ಯೋಗ್ಯವಾದುದೆ? ಯಾವಾಗಲೂ ಲಿಂಗದಲ್ಲಿ ಅಥವಾ ಜಂಗಮದಲ್ಲಿ ಪ್ರಾಣವನ್ನು ಸಮರ್ಪಿಸಿರುವವನು ಆ ಲಿಂಗಜಂಗಮಗಳ ಅಳಿವಿನಲ್ಲಿ ತನ್ನ ಪ್ರಾಣವನ್ನೂ ಸಮರ್ಪಿಸುವುದು ಲಿಂಗಜಂಗಮಪ್ರಾಣಿಗಳ ನೀತಿ, ಹೇಗೆಂದರೆ— ಆ ಪ್ರಾಣಲಿಂಗಿ ಲಿಂಗಪ್ರಾಣಿ ಜಂಗಮಪ್ರಾಣಿಗಳ ಚರಿತ್ರವನ್ನು ಹೇಳುತ್ತೇನೆ ಕೇಳು— ಲಿಂಗಣ್ಣನೆಂಬ ಒಬ್ಬ ಶಿವಶರಣರ ಮಗನು ಆಡುತ್ತಿರುವಾಗ ಅವನ ಕೊರಲಿನಲ್ಲಿದ್ದ ಲಿಂಗವು ಎಲ್ಲೋ ಕಳಚಿ ಬಿದ್ದುಹೋಯಿತು. ತಾಯಿಯು ಮಗನ ಬರಿಯ ಕೊರಲನ್ನು ನೋಡಿ, ಲಿಂಗವೆಲ್ಲಿಂದು ಕೇಳಿದಳು. ಥಟ್ಟನೆ ಆ ಹುಡುಗನ ಪ್ರಾಣವು ಹೋಯಿತು. ತಾಯ್ತಂದೆಗಳೂ ಬಂಧುಗಳೂ ಸೇರಿ ಹುಡುಗನನ್ನು ಮಲಗಿಸಿಕೊಂಡು ಅಳುತ್ತಿದ್ದರು. ಚಿಕ್ಕಲಿಂಗಣ್ಣನೆಂಬೊಬ್ಬಾತನು ಆ ಹುಡುಗನ ಲಿಂಗವನ್ನು ತಡಕಿತಂದು ಕೊರಲಿಗೆ ಕಟ್ಟಿದನು. ಕೂಡಲೇ ಅವನ ಪ್ರಾಣವು ಬಂದಿತು.

ಅದನ್ನು ಕಂಡು ಇದಲ್ಲವೆ ಪ್ರಾಣಲಿಂಗಾಂಗಿಲಕ್ಷಣ? ಎಂದು ಚಿಕ್ಕಲಿಂಗಣ್ಣನು ನುಡಿದನು. ಅದನ್ನು ಅವನ ಗುರುವು ಕೇಳಿಕೊಂಡು ಸುಮ್ಮನಿದ್ದು ಆ ರಾತ್ರಿ ಚಿಕ್ಕಲಿಂಗಣ್ಣನು ಮಲಗಿಕೊಂಡಿದ್ದಾಗ ಅವನ ಕೊರಲ ಲಿಂಗವನ್ನು ಕಳಚಿಕೊಂಡು ಬೆಳಗಾವಕೂಡಲೇ ಹೂವನ್ನೆತ್ತಿ ತರುವುದಕ್ಕಾಗಿ ಹೋದನು. ಇತ್ತ ಚಿಕ್ಕಲಿಂಗಣ್ಣನು ಪ್ರಾಣವಿಲ್ಲದೆ ಮಲಗಿಕೊಂಡಿದ್ದನು. ಎಲ್ಲರೂ ಅವನ ಸುತ್ತ ಅಳುತ್ತಿದ್ದರು. ಅಷ್ಟರಲ್ಲಿ ಗುರುವು ಬಂದು ಅವನ ಲಿಂಗವನ್ನು ಅವನ ಕೊರಲಿಗೆ ಕಟ್ಟಿಬಿಟ್ಟನು. ಒಡನೆಯೇ ಅವನ ಪ್ರಾಣವು ಬಂದಿತು. ಸತ್ಯಣ್ಣನೆಂಬ ಮತ್ತೊಬ್ಬ ಜಂಗಮನು ತನ್ನ ಸೂಳೆಯೊಡನೆ ರತಿಕ್ರೀಳೆಯಲ್ಲಿರುವಾಗ್ಗೆ ಕರಡಿಗೆಯು ಮಗ್ಗುಲಿಗೆ ಬತ್ತುವುದೆಂಬುದಾಗಿ ಅದನ್ನು ತೆಗೆದು ಮಂಚದಮೇಲಿರಿಸಿಬಿಟ್ಟಿದ್ದನು. ಅದನ್ನು ನಾವು ಕೇಳಿ ಕಳುವಿನಿಂದ ಮೆಲ್ಲಗೆ ತರಿಸಿಬಿಟ್ಟೆವು. ಆಗ ಆ ಜಂಗಮನ ಪ್ರಾಣವೇ ಹೋಯಿತು. ಅದನ್ನು ನೋಡಿದಕೂಡಲೇ ಸೂಳೆಯ ಪ್ರಾಣವೂ ಹೋಯಿತು. ಒಳಿಕ ನಾವು ಸತ್ಯಣ್ಣನ ಕೊರಲಿಗೆ ಅವನ ಲಿಂಗವನ್ನು ಕಟ್ಟಿಸಲು ಅವನ ಪ್ರಾಣವು ಬಂದಿತು. ಸೂಳೆಯೂ ಪ್ರಾಣಗೂಡಿಕೊಂಡಳು. ಇವನಂತೆಯೇ ಮಾರಣ್ಣನೆಂಬುವನೊಬ್ಬನು ತನ್ನ ಪತ್ನಿಯೊಡನೆ ಮಲಗಿಕೊಂಡಿರುವಾಗ ಬತ್ತುವುದೆಂದು ಸಜ್ಜೆಕಯನ್ನು ಈರ್ವರೂ ಕಳೆದು ಮಂಚದಮೇಲೆ ಮಡಗಿದ್ದು, ಬೆಳಗಾದಕೂಡಲೇ ಎದ್ದು ಬಬ್ಬರಲಿಂಗವನೊಬ್ಬರು ತೆಗೆದುಕೊಂಡು ಪಲ್ಲಟವಾಗಿ ಧರಿಸಿಕೊಂಡರು. ಕೂಡಲೇ ಇಬ್ಬರ ಪ್ರಾಣವೂ ಹೋಯಿತು. ಅವರ ಮನೆಗೆ ನೀರನ್ನು ಹೊತ್ತು ತರುತ್ತಿದ್ದ ದಾಸಿಯು ಬಂದು ಇವರೀರ್ವರೂ ಮಲಗಿರುವುದನ್ನು ಕಂಡ ಕೂಡಲೇ ಅವಳ ಪ್ರಾಣವೂ ಹೋಯಿತು. ಈ ಸುದ್ದಿಯು ನಮಗೆ ಬರಲು, ಸತ್ಯಣ್ಣನನ್ನು ಕರೆಸಿ ಇದೇನು ವಿಶೇಷವೆಂದು ಕೇಳಲಾಗಿ, ಅವರುಗಳು ಪಲ್ಲಟದಿಂದ ಲಿಂಗಧಾರಣವನ್ನು ಮಾಡಿಕೊಂಡಿರುವ ಕಾರಣದಿಂದ ಹೀಗಾಯ್ತೆಂದು ತಿಳುಹಿದನು. ಕೂಡಲೇ ಅವರವರ ಲಿಂಗವನ್ನವರವರ ಕೊರಲಿಗೆ ಕಟ್ಟಿಸಲು, ಪ್ರಾಣವು ಬಂದಿತು. ಒಡನೆಯೇ ಗಾಡಿಯೂ ಪ್ರಾಣಸಮೇತಳಾದಳು. ಎಲೈ ಬಸವಣ್ಣನೆ! ಮೇಲೆ ಪೇಳಿದುವ ಲಿಂಗಣ್ಣ ಚಿಕ್ಕಲಿಂಗಣ್ಣ ಸತ್ಯಣ್ಣ ಮಾರಣ್ಣರುಗಳೂ ಮಾರಣ್ಣನ ಹೆಂಡತಿಯೂ

ಕೂಡ ಪ್ರಾಣಲಿಂಗಾಂಗಿಗಳೆನಿಸಿಕೊಳ್ಳುವರು. ಘಟ್ಟಿವಾಳಯ್ಯನೆಂಬ ಶರಣನು ತನ್ನ ಇಷ್ಟಲಿಂಗವನ್ನು ತನ್ನ ಕಾಲ್ಗೆ ಕಟ್ಟಕೊಂಡು ನಡೆಯುತ್ತಿರಲು, ಜಂಗಮರು ಅದನ್ನು ಕಂಡು ಕಿತ್ತುಕೊಂಡರು. ಆತನು ಕೊರಲಿಗೆ ಬಂದು ದೊಡ್ಡ ಗುಂಡನ್ನು ಕಟ್ಟಕೊಂಡು ಊರ ಬಾಗಿಲಲ್ಲಿ ಅಡ್ಡಲಾಗಿ ನಿಂತುಕೊಂಡನು. ಇದರಿಂದ ಹೋಗಿ ಬರುವವರಿಗೆ ದಾರಿಯಿಲ್ಲದೆ ಹೋಯಿತು. ಆಗ ಜಂಗಮರು ಅವನ ಲಿಂಗವನ್ನವನಿಗೆ ಕೊಟ್ಟುಬಿಟ್ಟರು. ಘಟ್ಟಿವಾಳಯ್ಯನಾದರೊ ಲಿಂಗವಲ್ಲೀ ಆ ಗುಂಡನ್ನು ಅಡಗಿಸಿದನು. ಈತನೇ ಲಿಂಗಪ್ರಾಣಿಯೆನಿಸಿಕೊಳ್ಳುವನು. ಆ ಸೂಳೆಯೂ ನೀರಿನ ದಾಸಿಯೂ ಕೂಡ ಜಂಗಮಪ್ರಾಣಿಗಳೆನಿಸಿಕೊಳ್ಳುವರು. ಅವರುಗಳು ನಿನ್ನಂತೆ ಜಂಗಮನು ಮುಳಿಸಿಕೊಂಡು ಹೋದಮಾತ್ರದಿಂದಲೇ ಪ್ರಾಣವನ್ನು ಬಿಟ್ಟರೆ? ಹಿಂದೆ ಕಿನ್ನರಯ್ಯನು ಪ್ರಾಣವನ್ನು ಬಿಟ್ಟಾಗ ನೀನೂ ಅವನೊಡನೆ ಪ್ರಾಣವನ್ನು ನೀಗಿದುವನ್ನೂ, ಮೇದರ ಕೇತಯ್ಯನೊಡನೆ ನೀನು ಪ್ರಾಣಬಿಟ್ಟುದನ್ನೂ ನಾವು ಅನುಚಿತವೆಂದು ಹೇಳುತ್ತೇವೆಯೆ? ಇನ್ನು ಈ ಚರಿತ್ರವ ಸುದ್ದಿಯನ್ನು ಕೇಳಿ ಭೂಲೋಕದ ಭಕ್ತಮಾಹೇಶ್ವರರೂ, ನಿನ್ನೊಡನೆ ಭೂವಿುಗವತರಿಸಿರುವ ಅಮರಗಣಂಗಳೂ ಸಹ ನಿನ್ನನ್ನು ನೋಡುವುದಕ್ಕಾಗಿ ಬರುತ್ತಾರೆ. ಈ ನಿನ್ನ ಮುಕ್ಕಳಾಟಿಕೆ ಸಾಕಪ್ಪ! ಎಂದು ಹೇಳಿ, ಚೆನ್ನಬಸವೇಶನು ಎಚ್ಚರಿಸಿ, ತನ್ನ ಮನೆಗೆ ತೆರಳಿ, ಶಿವಾನುಭವ ಗೋಷ್ಠಿಯಲ್ಲಿ ಸುಖದಿಂದಿದ್ದನು.

ಇಂಥ ಶಿವಜ್ಞಾನಸಂಪನ್ನರೂ ಮಹಾಮಹಿಮರೂ ಆದ ಬಸವೇಶ ಚೆನ್ನಬಸವೇಶರನ್ನೂ, ಕೈಲಾಸದಿಂದವತರಿಸಿರುವ ನಾನಾ ಶಿವಗಣಂಗಳನ್ನೂ, ಅಂತಪ್ಪ ಬಸವೇಶನನ್ನೇ ಮಂತ್ರಿಯನ್ನಾಗಿ ಪಡೆದಿರುವ–ಕಾರಣಾಂತರದಿಂದ ದರೆಗೆ ಬಂದಿರುವ-ಶಿವಪುರದ್ವಾರಪಾಲಕನಾದ–ಬಿಜ್ಜಳರಾಜನನ್ನೂ ಹೊಂದಿರುವ ಆ ಕಲ್ಯಾಪಟ್ಟಣದ ಭಾಗ್ಯವನ್ನಿನ್ನೆಂದು ಹೇಳಬಹುದೆ! ಇಂಥವರ ಅಧಿಕಾರಕ್ಕೊಳಪಟ್ಟ ಪ್ರಜೆಗಳ ಸದ್ಧರ್ಮ ಸದಾಚಾರ ಸುನೀತಿ ಮೊದಲಾದುವುಗಳ ಪ್ರಾಶಸ್ತ್ಯವನ್ನು ಹೊಗಳುವುದಕ್ಕಾದೀತೆ? ಆ ಪಟ್ಟಣದ ಜನಗಳಲ್ಲಿ ಸುಳ್ಳು ಕಳ್ಳತನ ಮೋಸ ಹಾದರ ಮಚ್ಚರ ದ್ವೇಷ ಠಕ್ಕು ನಿಂದೆ ದುರ್ವ್ಯಸನ ದುರಾಚಾರ ಅನ್ಯಾಯ ಕೃತ

ಪ್ಪತೆ ಮೊದಲಾದ ದುರ್ಗುಣಗಳೊಂದೂ ಇರಲಿಲ್ಲ. ವಿದ್ಯಾ ವಿನಯ ದಯಾ ದಾಕ್ಷಿಣ್ಯ ಶಮ ದಮ ಗಾಂಭೀರ್ಯೌದಾರ್ಯ ಧೈರ್ಯ ಸಾಹಸ ಚಮತ್ಕಾರ ಪರಹಿತ ಶಿವಭಕ್ತಿ ಸದಾಚಾರ ಸುನೀತಿ ಮೊದಲಾದುವುಗಳಿಂದ ಪೂರ್ಣರಾಗಿದ್ದರು. ಆ ಪಟ್ಟಣದ ಸಕಲವಿಧವಾದ ಸಂಪತ್ತಿಗೂ ಬಸವೇಶ ಚೆನ್ನಬಸವೇಶ್ವರರೇ ಮೂಲಪುರುಷರಾಗಿದ್ದರು. ಈ ಮಹಾಮಹಿಮರ ಚರಿತ್ರವಾರ್ತೆಯನ್ನು ಕೇಳಿ ಇವರ ದರ್ಶನವನ್ನು ಮಾಡುವುದಕ್ಕಾಗಿ ಅಂಗ ವಂಗ ಕಳಿಂಗ ಕಾಶ್ಮೀರ ಕಾಂಭೋಜ ನೇಪಾಳ ಗೌಳ ಮಲಯಾಳ ಸಿಂಧು ಮಾಳವ ಹೊಯ್ಸಳ ಮಗಧ ಬರ್ಬರ ತುಳುವ ಚೋಳ ಪಾಂಡ್ಯ ಯವನ ಮತ್ಸ್ಯ ಗುರ್ಜರ ದ್ರವಿಡ ಕರ್ನಾಟಕ ಮೊದಲಾದ ಅಯ್ವತ್ತಾರು ದೇಶಗಳಿಂದಲೂ ಭಕ್ತರುಗಳು ಬರುತ್ತಿದ್ದರು. ಇವರೆಲ್ಲರೂ ಬರುವ ವಾರ್ತೆಯನ್ನು ಚೆನ್ನಬಸವೇಶನು ಮುಂದಾಗಿ ಬಸವೇಶನಿಗೆ ಅರುಹಲು, ಆತನು ಪಟ್ಟಣವನ್ನೆಲ್ಲ ತಳಿರು ತೋರಣಗಳಿಂದಲೂ ಚಪ್ಪರ ಮೇಲ್ಕಟ್ಟುಗಳಿಂದಲೂ ವಾದ್ಯವೈಭವದಿಂದಲೂ ಮೆರೆಯುವಂತೆ ಮಾಡಿದನು. ಆಗ ಬಸವೇಶ ಚೆನ್ನಬಸವೇಶ್ವರರೀರ್ವರೂ ತಮ್ಮಲ್ಲಿನ ಶಿವಶರಣರನ್ನೆಲ್ಲ ಕರೆದುಕೊಂಡು, ಅನೇಕ ವಾದ್ಯಗಳು ನರ್ತಕಿಯರು ಪಂದಿಮಾಗಧರು ನಾನಾಬಿರುದುಗಳು ನಂದೀಧ್ವಜ ಮೊದಲಾದುವುಗಳಿಂದ ಕೂಡಿ ಇದಿರಾಗಿ ಹೋಗಿ, ಬಂದ ಶಿವಶರಣಸಮೂಹಕ್ಕೆಲ್ಲ ದೀರ್ಘದಂಡ ನಮಸ್ಕಾರವನ್ನು ಮಾಡಿದರು. ಅವರೆಲ್ಲರೂ ಇವರೀರ್ವರಿಗೆ ಪ್ರತಿ ನಮಸ್ಕಾರವನ್ನು ಮಾಡಿದರು. ಆಗ ಚೆನ್ನಬಸವೇಶನು ಆ ಗುಂಪಿನಲ್ಲಿದ್ದ ಪ್ರತಿಯೊಬ್ಬರನ್ನೂ ನಿರ್ದೇಶಿಸಿ, ಈತನೇ ಕಾಶ್ಮೀರಭೂಪಾಲನಾದ ಮಹಾದೇವನು. ಈತನೇ ಶ್ರೀ ಶೈಲದಿಂದ ಶಿವಯೋಗಿಮಲ್ಲಿಕಾರ್ಜುನಪಂಡಿತಯ ಮೇರೆಗೆ ಇಲ್ಲಿಗೆ ಬಂದಿರುವ ಸಕಳೇಶಮಾಹಾರಾಧ್ಯನು, ಈತನೇ ಕಾಳಿಂಗದೇಶದಿಂದ ಬಂದ ಮರುಳಶಂಕರದೇವನು, ಈತನೇ ಹಿಪ್ಪರಿಗೆಯಿಂದ ಬಂದ ಪಂಡಿತಾರಾಧ್ಯನು, ಈತನೇ ಕಟಕದಿಂದ ಬಂದ ಸುಜ್ಞಾನಿದೇವನು, ಈತನೇ ಸುಜ್ಞಾನಿದೇವನೆಂಬ ತನ್ನ ಗುರುವಿನ ರುಂಡಕ್ಕೆ ಮುಂಡವನ್ನೂ ಮುಂಡಕ್ಕೆ ರುಂಡವನ್ನೂ ಪಡೆದ ಮಾತಂಗತನಯನೆಂಬ ಶರಣನು, ಎಂದು ಹೇಳಿ, ಹೀಗೆ ಪ್ರತಿಯೊಬ್ಬರನ್ನೂ ಬಸವೇಶನಿಗೆ ಪರಿಚಯ ಮಾಡಿಸಿದನು. ಬಸವೇಶನು

ಎಲ್ಲರ ಸಂಗತಿಯನ್ನೂ ಕೇಳಿ, ಅವರ ದರ್ಶನವನ್ನು ಮಾಡಿ, ಸರ್ವರಿಗೂ ಮರಳಿ ನಮಸ್ಕಾರ ಮಾಡಿ, ಉತ್ಸವ ವೈಭವಾತಿಶಯದಿಂದ ತನ್ನ ಮನೆಗೆ ಕರೆದುಕೊಂಡುಹೋಗಿ, ಸ್ನಾನಶಿವಾರ್ಚನ ಭೋಜನಾದಿಗಳಿಂದ ಅವರೆಲ್ಲರನ್ನೂ ಸತ್ಕರಿಸಿದನು. ಒಳಕ ಎಲ್ಲರಿಗೂ ಅವರವರ ಯೋಗ್ಯತಾನುಸಾರವಾಗಿ ಬೇರೆ ಬೇರೆ ಮಠಗಳನ್ನೂ ಆಸ್ತಿಗಳನ್ನೂ ಕೊಡಿಸಿ, ಕೆಲಕೆಲರಿಗೆ ನಾನಾವಿಧವಾದ ಕಾಯಕಗಳನ್ನು ಕಲ್ಪಿಸಿಕೊಟ್ಟು, ಸರ್ವರೂ ಸುಖದಿಂದಿರುವಂತೆ ಮಾಡಿದನು. ಬಸವೇಶ ಚೆನ್ನಬಸವೇಶರೀರ್ವರೂ ಶಿವತತ್ತ್ವಗೋಷ್ಠಿಯಲ್ಲಿ ಸುಖವಾಗಿದ್ದರು. ಎಂಬಿಲ್ಲಿಗೆ ೬ನೆ ಅಧ್ಯಾಯವು ಸಂಪೂರ್ಣವು.

೭ನೆ ಅಧ್ಯಾಯವು.

ಮಂಚಣ್ಣನ ಚಾಡಿ.

ಇತ್ತ ಬಿಜ್ಜಳರಾಜನು ಬಂದು ದಿವಸ ಎಂದಿನಂತೆ ಬದ್ದೋಲಗವನ್ನು ಮಾಡಿಕೊಂಡಿದ್ದನು. ದೇವೇಂದ್ರನ ಮಹಾಸಭೆಯಂತೆ ರಾಜಿಸುವ ಸಾಲಂಕೃತವಾದ ಆ ರಾಜಸಭೆಯು ಮಧ್ಯದಲ್ಲಿ ರತ್ನಖಚಿತವಾದ ಸಿಹ್ಮಾಸನದ ಮೇಲೆ ಅರಿನೃಪಭಯಂಕರನೂ ಜಗದ್ವಿಖ್ಯಾತಯಶೋಭೂಯಿಷ್ಠನೂ ಸಕಲಸಂಪತ್ಪರಿಪೂರ್ಣನೂ ಅನುಪಮತೇಜೋವಿರಾಜಿತನೂ ಸರ್ವಸಲ್ಲಕ್ಷಣಲಕ್ಷಿತನೂ ಆದ ಬಿಜ್ಜಳರಾಜನು ಸರ್ವಾಲಂಕಾರಪರಿಪೂರ್ಣನಾಗಿ ಮೂರ್ತಿಗೊಂಡಿದ್ದನು. ಉಭಯಪಾರ್ಶ್ವಗಳಲ್ಲೂ ಹಾಕಿದ್ದ ಉಚಿತಾಸನಗಳ ಮೇಲೆ ಮನ್ಮಥರೂಪವನ್ನು ಪಳಿವ ಅಂಗಸೌಂದರ್ಯದಿಂದ ಕೂಡಿ ರತ್ನಾಭರಣಗಳಿಂದಲೂ ಪೀತಾಂಬರಗಳಿಂದಲೂ ಅಲಂಕೃತರಾಗಿ ಮೆರೆಯುತ್ತಿರುವ ಧೀರಾಗ್ರಣಿಗಳಾದ ಸಾಮಂತರಾಜರುಗಳು ಕುಳಿತಿದ್ದರು. ಹತ್ತಿರದಲ್ಲೇ ನಿಂತು ರಾಜನು ಮಾಡಿದ ಅಪ್ಪಣೆಯನ್ನು ಚಾರರ ಮುಖದಿಂದ ಮಾಡಿಸುತ್ತ ದೊರೆಯ ಇಷ್ಟವನ್ನರಿತು ನಡೆಸು ಕಾರ್ಯ

ಸಾಧನೆಯನ್ನು ಮಾಡಿ ರಾಜನ ಭಂಡಾರಕ್ಕೆ ಹೇರಳವಾದ ದ್ರವ್ಯವನ್ನು ಕೂಡಿಸುವುದರಲ್ಲಿ ಸಮರ್ಥರಾದ ಮಂತ್ರಿಗಳು (ಬಸವೇಶಹೊರತಾಗಿ) ಎ ಡಬಲಗಳಲ್ಲಿ ಒಪ್ಪುತ್ತಿದ್ದರು. ದಿನ ವರ್ಗ ಮಾಸ ವರ್ಷಗಳ ಲೆಕ್ಕವನ್ನು ಕನ್ನಡಿಯಂತೆ ಜೊಕ್ಕಟವಾಗಿಟ್ಟುಕೊಂಡಿರುವ ಗಟ್ಟಿಗರಾದ ಕಣಿಕರೂ, ವೇದವೇದಾಂತ ಪುರಾಣಾಗಮ ದರ್ಶನಾದಿಗಳಲ್ಲೆಲ್ಲ ಘನತರಪಾಂಡಿತ್ಯವನ್ನು ಸಂಪಾದಿಸಿರುವ ವಿಬುಧಸಮೂಹವೂ, ಚರಕ ಸುಶ್ರುತ ಮೊದಲಾದ ವೈದ್ಯವಿದ್ಯೆಯಲ್ಲಿ ಪರಿಣತಪಂಡಿತರೆನಿಸಿದ ವೈದ್ಯಶಿಖಾಮಣಿಗಳೂ, ನಾನಾ ಚಿತ್ರ ಧ್ವನಿ ಕಾವ್ಯಗಳನ್ನು ಸರಸವಾಗಿಯೂ ತ್ವರಿತವಾಗಿಯೂ ವಿರಚಿಸುವ ಅಮ್ಲಿತವಾದ ಸಮಸ್ಯಾಪೂರಣಗಳನ್ನು ಮಾಡುವ ಕವಿಶ್ರೇಷ್ಠರೂ, ಪರಸೈನ್ಯಕ್ಕೆ ಕಾಲನಂತೆ ಭಯಂಕರರಾದ ಶೂರದಳಪತಿಗಳೂ, ಜಾಣ್ನುಡಿಗಳಿಂದ ರಾಜನ ವಿಚಿತ್ರಚರಿತವನ್ನೂ ಸದ್ಗುಣಾತಿಶಯವನ್ನೂ ಪ್ರಾಸ ಛಂದೋಬದ್ಧವಾಗಿ ಕವಿತೆಯಿಸಗಿ ಕೈಯೆತ್ತಿ ಉದ್ಘೋಷಿಸುತ್ತಿರುವ ಸ್ತುತಿಪಾಠಕರುಗಳೂ, ಸೌಂದರ್ಯಲಾವಣ್ಯವಿಭ್ರಮಾತಿಶಯದಿಂದ ಸಭಿಕರ ಮನಸ್ಸನ್ನೆಲ್ಲ ಸೂರೆಗೊಳ್ಳುತ್ತ, ಇಂಪಾದ ಗಾನದಿಂದಲೂ, ಚಪಲತರವಾದ ನರ್ತನದಿಂದಲೂ, ಚತುರತರವಾದ ಅಭಿನಯದಿಂದಲೂ, ರಸಜ್ಞರ ತಲೆದೂಗಿಸುತ್ತ ವಿದ್ಯುಲ್ಲತೆಗಳಂತೆ ಕಾಂತಿಮಯರಾಗಿ ಹೊಳೆಯುತ್ತಿರುವ ವಾರಾಂಗನೆಯರೂ, ನಾನಾಬಿರುದಾಂಕಗಳ ಪಾದಕಟಕವನ್ನು ಧರಿಸಿರುವ ಮಾವುತರಾಹುತರುಗಳೂ, ಇನ್ನೇ ಮೊದಲಾದ ಅಂಗವೆಲ್ಲವೂ ಸಭೆಯಲ್ಲಿ ಪರಿಪೂರ್ಣವಾಗಿದ್ದಿತು. "ಜೀಯಾ! ಈತನು ಚೋಳರಾಜನು, ಈತನು ಪಾಂಡ್ಯ, ಈತನು ಮಾಗಧನು, ಈತನು ಒರ್ಜರನು, ಇದು ಮಂತ್ರಿಸಮೂಹ, ಇದು ದಳಪತಿಸಮೂಹ, ಚಿತ್ರೈಸು, ಪರಾಕು! ಬಹುಪರಾಕು!!" ಎಂದು ಮೊದಲಾಗಿ ಕಂಚುಕಿಗಳು ಮಾಡುತ್ತಿರುವ ಉದ್ಘೋಷವು ತುಂಬಿಕೊಂಡಿದ್ದಿತು. ಆಸಮಯದಲ್ಲಿ ನೆರೆದಿದ್ದ ಜನಸಂವಣಿಯಲ್ಲಿ ಚಾಡಿಕೋರರಲ್ಲಿ ಅಗ್ರಗಣ್ಯನಾದ ಮಂಚಣ್ಣನು ದಾರಿಬಿಡಿಸಿಕೊಂಡು ಒಳನುಗ್ಗಿ ರಾಜಾಧಿರಾಜರಿಗೆ ಕೈಯೆತ್ತಿ ಮುಗಿದು, ಸಿಂಹಾಸನದ ಪಕ್ಕಕ್ಕೆ ಬಂದು ತಲೆವಾಗಿ, ಬಾಯ್ಮಚ್ಚಿ ಅತಿವಿನಯದಿಂದ ನಿಂತು, ದೊರೆಯು ಕಿವಿಯುಲ್ಲಿ ಅವನಿಗೆ ಸಂಬುಗೆ ಹುಟ್ಟುವಂತೆ ಹೀಗೆ ಚಾಡಿ ಹೇಳಿ

ದನು– ಪ್ರಭುವೇ ! ಈ ಕಲ್ಯಾಣಪಟ್ಟಣದೊಳಗೆಲ್ಲ ಯಾವ ಯಾವ ದೇ ಶದಿಂದಿಲ್ಲೋ ಬಂದ ಶಿವಭಕ್ತರೇ ತುಂಬಿಕೊಂಡರು. ನಿನ್ನರಮನೆ ಹೊರ ತಾಗಿ ಉಳಿದ ಕಡೆಯಲ್ಲೆಲ್ಲ ಅವರ ಹಾವಳಿಯೇ. ಅವರ ಆನಂದ ! ಅವರ ಸೊಗಸು ! ಅವರ ವೈಭವ ! ಅವರ ಸೂಳೆಗಾರಿಕೆ ! ಅವರ ಪ್ರತಿಷ್ಠೆಗಳು ಅಪ್ರತಿಹತವಾಗಿರುವುವು. ಹೀಗೆ ಅವರು ಪ್ರಬಲಿಸಿಕೊಂಡಿರುವುದನ್ನು ನೋಡಿದರೆ ಕಾಲಕ್ರಮವಲ್ಲಿ ಚೆನ್ನಬಸವಣ್ಣನಿಗೇ ಪಟ್ಟವನ್ನು ಕಟ್ಟಿ; ಈ ದೇಶವನ್ನೆಲ್ಲಾ ಅವರಧೀನಮಾಡಿಕೊಂಡು ಕಡೆಗೆ ತಮ್ಮ ಪಾದ ಕ್ಕೇನುಮಾಡುವರೋ ಎಂಬ ಸಂಶಯವು ನನಗೆ ಬಲವಾಗಿದೆ. ಅವರ ಉ ಪಟಲಗಳನ್ನು "ಹೋ! ನಿಲ್ಲಿಸಿ" ಎಂದು ತಡೆಯುವರೊಬ್ಬರನ್ನೂ ನಾನು ಕಾಣೆ ! ನಿನ್ನ ಹಸ್ತ್ಯಶ್ವಗಳೆಲ್ಲ ಅವರಧೀನವೇ ಆಗಿವೆ. ಇನ್ನು ನೀವು ಮೈಮರೆದಿರುವುದು ಸರಿಯಲ್ಲ; ನಾನು ಹೇಳುವ ಮಾತಿನಲ್ಲಿ ತಿಲಾಂಶವೂ ಸುಳ್ಳಿಲ್ಲ. ತಮ್ಮ ಪಾದದಾಣೆ ಇದು ನಿಜ. ಹಿಂದೆ ವೃತ್ರಾಸುರನೂ ಹೀಗೆ ಯೇ ಅತಿಪ್ರಬಲನಾಗಿ ಮೂರು ಲೋಕವನ್ನೂ ವ್ಯಾಪಿಸಿಕೊಳ್ಳುತ್ತಿದ್ದ ರೂ, ಇಂದ್ರನು ಅಹಂಕಾರದಿಂದ ಮೈಮರೆತು ಕುಳಿತುಕೊಂಡುದರಿಂದ, ಕಡೆಗೆ ಯುದ್ಧದಲ್ಲಿ ಆ ರಾಕ್ಷಸನ ಇದಿರಿಗೆ ನಿಂತು ಕೊಳ್ಳಲಾರದೆ ಎಷ್ಟೋ ಪ್ರಯಾಸಪಟ್ಟು ಪಡಬಾರದ ಕಷ್ಟಗಳಿಗೆಲ್ಲ ಒಳಗಾದನು. ದೇವತೆಗಳ ಅವಸ್ಥೆಯೇ ಹಾಗಾಗಿರುವಲ್ಲಿ ಮನುಷ್ಯರಾದವರು ಮೈಮರೆತರೆ ಹೇಳತ ಕ್ಕುದೇನು ? ನಾನು ಹೇಳಿದುದೆಲ್ಲವೂ ನಿಜವೋ ಸುಳ್ಳೋ ಎಂಬುದ ನ್ನು ತಿಳಿವುದಕ್ಕಾಗಿ ಅವರೆಲ್ಲರನ್ನೂ ಬರಮಾಡಿ ವಿಚಾರಿಸುವುದೇ ತಮಗೆ ನ್ಯಾಯ. ನಾವೆಲ್ಲರೂ ತಮ್ಮ ಪಾದಕ್ಕೆ ಸೇರಿದವರಾದುದರಿಂದ ತಮ್ಮ ಕ ಷ್ಟಸುಖಗಳೇ ನಮ್ಮದೆಂದು ತಿಳಿದು, ಇದ್ದ ಸಂಗತಿಯನ್ನು ತಮಗೆ ವಿ ನ್ನೈಸಬೇಕಾಯಿತು. ಅಷ್ಟೇಪೊರತು ಚೆನ್ನಾಗಿ ಸಂಪತ್ತಿನಿಂದ ಬಾಳ ತಕ್ಕವರನ್ನು ನೋಡಿ ಸೈರಿಸಲಾರದೆ ಹೀಗೆಲ್ಲಾ ಆಡುತ್ತಾನೆಂದು ತಿಳಿಯ ಬೇಡಿರಿ, ಇದರಮೇಲೆ ತಮ್ಮ ಚಿತ್ತ ! ಎಂದು ಹೇಳಿ, ದೊರೆಯ ಮನಸ್ಸಿ ನಲ್ಲಿ ಬಲವಾಗಿ ಸಂಶಯವನ್ನುಂಟುಮಾಡಿದನು. ಈಮಾತನ್ನೆಲ್ಲ ಕೇಳಿಕೇಳಿ ದಂತೆ ದೊರೆಯ ಮುಖದಲ್ಲಿ ಬೆಮರಿಕ್ಕಿತು. ಮೂಗಿನಲ್ಲಿ ಬಿಸುಸುಯ್ಯಾಡಿ ತು. ಹರ್ಷರಸವು ತಗ್ಗಿತು. ತಲೆ ತೂಗಿತು. ಕತ್ತು ಉರುಗಿತು, ಕೆನ್ನೆಯು

ಕೈಯ್ಯಲ್ಲಿ ಬರಗಿತು, ಆಕುಳಿಕೆ ಅಂಕುರಿಸಿತು. ನಾಲಿಗೆಯು ಬಿಗ್ಗಿತು. ಈ ಚಿಹ್ನಗಳಿಂದ ಅವನಲ್ಲಿ ಉಂಟಾದ ಚಿಂತಾತಿಶಯವು ಹೊರಪಟ್ಟಿತು. ಆಗ ದೊರೆಯು ಇನ್ನು ಸುಮ್ಮನಿರುವುದು ಸರಿಯಲ್ಲವೆಂದು ಯೋಚಿಸಿ, ಥಟ್ಟನೆ ಹೋಗಿ, ಬಸವಣ್ಣ ಚೆನ್ನಬಸವಣ್ಣರುಗಳನ್ನು ಕರೆತನ್ನಿರೆಂದು ಹೇಳಿ ಕಳುಹಿ, ಕರಸಿ, ದುಮ್ಮಾನದಿಂದ ಕುಳಿತುಕೊಳ್ಳರೆಂದು ನುಡಿದನು. ಇವನ ಮನೋಭಾವವನ್ನರಿತುಕೊಂಡ ಅವರುಗಳು ಉಚಿತಾಸನದಲ್ಲಿ ಕುಳಿತುಕೊಂಡರು. ಬಳಿಕ ದೊರೆಯು ತನ್ನ ಮನಸ್ಸಿನೊಳಗಿದ್ದುದನ್ನು ಥಟ್ಟನೆ ಹೊರಪಡಿಸಲಾರದೆಯೂ, ಬಳಗೇ ಸೈರಿಸಿಕೊಳ್ಳಲಾರದೆಯೂ ಪೇಚಾಡುತ್ತ, ಮೆಲ್ಲಮೆಲ್ಲನೆ ಬಂದೊಂದು ಮಾತನ್ನು ತೆಗೆಯುತ್ತಿದ್ದನು. ಅದನ್ನು ಕಂಡು ಪ್ರೌಢನಾದ ಚೆನ್ನಬಸವೇಶನು ವಿನಯ ಪ್ರೀತಿಗಳಿಂದ-ರಾಜನೇ! ಈ ದಿವಸ ನಿನ್ನ ಮನೋಭಾವವು ಎಂದಿನಂತೆ ಇಲ್ಲ; ಮನಸ್ಸಿನಲ್ಲಿರುವುದನ್ನು ನನ್ನೊಡನೆ ವಂಚಿಸದೆ ಹೇಳು; ಇದಕ್ಕೆ ಅಂಜಿಸುವುದೇಕೆ? ನಿನ್ನ ಮನಸ್ಸಿಗುಂಟಾಗಿರುವ ಕೊರತೆಯೇನು? ಎಂದು ಕೇಳಿದನು. ಆಗ ದೊರೆಯು— ಎಲೈ ಚೆನ್ನಬಸವೇಶನೆ! ನಿಮ್ಮ ಮಾವನಾಟವನ್ನು ನಾನೇನು ಹೇಳಲಿ! ನಮ್ಮ ಪಟ್ಟಣದಲ್ಲಿ ಅತ್ಯಂತವಾಗಿ ಹಾವಳಿ ಮಾಡುತ್ತಿರುವನು; ಯಾವ ಯಾವ ದೇಶದ ದುಷ್ಟರನ್ನೋ ಭಕ್ತರೆಂದು ಪೇಳಿ ಇಲ್ಲಿ ಕೂಡಿಹಾಕಿ, ನಾನು ಮುಂದಾಗುವುದನ್ನರಿಯದೆ ಅವನಧೀನಮಾಡಿದ್ದ ನನ್ನ ಜೊಕ್ಕಸಬಂಡಾರದ ಪಸ್ತ್ಯಶ್ವಗಥಾದಿಸಂಪತ್ತನ್ನೆಲ್ಲ ಆ ಜಂಗಮರಿಗೆ ಕೊಟ್ಟುಬಿಟ್ಟನು. ನಮ್ಮ ಪಟ್ಟಣದೊಳಗೆ ಎಲ್ಲಿ ನೋಡಿದರೂ ಜಂಗಮರ ಮತಗಳು! ಎಲ್ಲಿ ನೋಡಿದರೂ ಜಂಗಮರ ಲೂಟಿ! ಎಲ್ಲಿ ನೋಡಿದರೂ ಜಂಗಮರ ಸೂಳೆಗೇರಿ! ಎಲ್ಲಿ ನೋಡಿದರೂ ಅವರ ಹಾದರ! ಎಲ್ಲಿ ನೋಡಿದರೂ ಅವರ ಕೋಲಾಹಲವೇ ಹೊರತು ಮತ್ತೊಂದಿಲ್ಲ; ಹೀಗಿರುವಲ್ಲಿ ನಾವೇನನ್ನುತಾನೇ ಮಾಡುವುದಕ್ಕಾದೀತು? ಎನ್ನಲು, ಚೆನ್ನಬಸವೇಶನು— "ರಾಜನೇ! ಕಳ್ಳತನ ಹಾದರ ಎಂಬಿವುಗಳು ನಮ್ಮ ಶಿವಭಕ್ತಸಮಾಜವನ್ನು ಸೇರಲಾರವು. ಈ ಭೂಮಿಯಲ್ಲಿ ಬಸವೇಶನಿರುವವರೆಗೂ ನಿಮ್ಮ ದೇಶದಲ್ಲಿ ಕಲಿದೋಷವು ಸಂಘಟಿಸಲಾರದು. ಹೆಚ್ಚು ಮಾತ್ಕೇಕೆ? ಬಾಡಿಕೊಂರರ ಮಾತನ್ನು ಕೇಳಿದುದಕ್ಕೆ ಹಿಂದೆಯೇ ನಿನಗೆ

ತಕ್ಕ ಫಲವಾಗಿರುವುದು. ಅದನ್ನು ಕಂಡಿದ್ದರೂ ನಿನಗೆ ಇನ್ನೂ ತಿಳಿವುಂಟಾಗಲಿಲ್ಲ. ಮಾಡುವುದೇನು? ಈ ತಾಮಸ ಗುಣವು ಕ್ಷತ್ರಿಯರಿಗೆ ಸಹಜವಾದುದು.

ರಾಜನೀತಿ ಬೋಧೆ.

ಸೂರ್ಯಮಂಡಲವನ್ನು ಮೇಘವೂ, ಕನ್ನಡಿಯನ್ನು ಕೊಳೆಯೂ, ನಿರ್ಮಲಜಲವನ್ನು ಧೂಳಿಯೂ, ಪರಮಾತ್ಮನನ್ನು ಜೀವಭಾವವೂ ಆವರಿಸಿಕೊಂಡಿರುವಂತೆ ಅರಸುಗಳನ್ನು ಕ್ಷಾತ್ರತಾಮಸವು ಸದಾ ಆವರಿಸಿಕೊಂಡಿರುವುದು. ಅದನ್ನು ಪರಿಹರಿಸುವ ಸಾಮರ್ಥ್ಯವು ರಾಜನೀತಿಗಿರುವುದು. ಅದನ್ನು ನಿನಗೆ ಬೋಧಿಸುತ್ತೇನೆ, ಕೇಳು— ಅರಸುಗಳು ಹಾವಿಗೆ ಸರಿಹೋಲತಕ್ಕವರು. ಏಗೆಂದರೆ— ಇವರೀರ್ವರೂ ವಕ್ರಗಾಮಿಗಳು. ಎರಡು ನಾಲಿಗೆಯವರು; ಹಣವನ್ನೇ ಕಾದುಕೊಂಡಿರುವ ದುರಾಸೆಯವರು; ಪರರ ಪ್ರಾಣವನ್ನು ನೀಗಿಸುವ ಕೋಪವುಳ್ಳವರು. ಇಬ್ಬರಿಗೂ ಕಿವಿಯೇ ಕಣ್ಣಾಗಿರುವುದು. ರಾಜನು ಲೋಕಮಾನ್ಯನಾಗಬೇಕಾದರೆ ಮೇಲೆ ಕಂಡ ದುರ್ಗುಣಗಳಿಗೆ ದೂರನಾಗಿರಬೇಕು. ಚಾಡಿಕೋರರ ಮಾರ್ಗವೇ ನಮಗೆ ಮನೋಹರ, ಅವರೇ ನಮಗೆ ಪರಮಾಪ್ತರು, ಎಂಬುದಾಗಿ ಯಾವ ಅರಸುಗಳು ನಂಬಿಕೊಂಡಿರುವರೋ ಅವರ ರಾಜ್ಯಕ್ಕೆ ಕೇಡು ತಟ್ಟುವುದೇ ನಿಶ್ಚಯ. ಅವರ ಸಂಪತ್ತೆಲ್ಲ ಬಯಲಾಗುವುದೇ ಸಿದ್ಧ. ಅನುಕಾರಣ, ರಾಜರು ಚಾಡಿಕೋರರ ಮಾತನ್ನು ಕೇಳಬಾರದು. ಹಿಸುಣಿಂದ ತಾವರೆಯೂ, ನೀರಿನಿಂದ ಜೇನೂ, ದುರಾಸೆಯಿಂದ ಸದ್ಗುಣವೂ, ಪರಟೆಯಿಂದ ಗೌರವವೂ, ಅನಾಚಾರದಿಂದ ಕುಲದ ಪಾವಿತ್ರ್ಯವೂ, ಹುಳಿಯಿಂದ ಹಾಲೂ, ಕೋಪದಿಂದ ತಪಸ್ಸಿನ ಫಲವೂ, ಬಿರುಗಾಳಿಯಿಂದ ಮೋಡದ ಬಿಡ್ಡಿ ಕೆಟ್ಟುಹೋಗುವಹಾಗೆ ರಾಜನ ರಾಜ್ಯವು ಚಾಡಿಕೋರರಿಂದ ಹಾಳಾಗುವುದು. ರಾಜರು ನೀಚರನ್ನೂ, ಮಾಯಾವಿಗಳನ್ನೂ, ದುರ್ನೀತರನ್ನೂ, ಚಪಲರನ್ನೂ, ದುರ್ಜನರನ್ನೂ, ಡಾಂಭಿಕರನ್ನೂ, ಸಿಸ್ಮರವಾಕ್ಯರನ್ನೂ, ದುರ್ಬೋಧಕರನ್ನೂ, ದುರಾಚಾರಿಗಳನ್ನೂ, ಕುಲಭ್ರಷ್ಟರನ್ನೂ, ದುರಾಲೋಚಕರನ್ನೂ, ವೇದಮಾರ್ಗಪರಿಭ್ರಷ್ಟರನ್ನುಕೂಡ ಹತ್ತಿರಕ್ಕೆ ಕರೆಯದೆ


ದೂರದಲ್ಲಿರಿಸಬೇಕು. ಪರರಿಗೆ ತಾನು ಮಾಡಿದ ಉಪಕಾರವನ್ನೂ, ಹೆರರಿಂದ ತನಗಾದ ಅಪಕಾರವನ್ನೂ ಇತರರೊಡನೆ ಆಡಿಕೊಳ್ಳುವುದು ಉತ್ತಮರ ಕೆಲಸವಲ್ಲ. ಹೆರರಿಗೆ ತಾನು ಮಾಡಿದ ಅಪಕಾರವನ್ನೂ, ಪರರಿಂದ ತನಗಾದ ಉಪಕಾರವನ್ನೂ ಇತರರೊಡನೆ ಆಡಿ ತೋರಿಸುವುದು ಉತ್ತಮರ ಕೆಲಸ. ರಾಜನು ತಾನು ಸದ್ಧರ್ಮವನ್ನು ಬಿಡದೆ ಆಚರಿಸುತ್ತ, ತನ್ನ ರಾಜ್ಯದಲ್ಲಿ ಧರ್ಮಿಷ್ಠರಾರಾದರೂ ಇದ್ದರೆ ಅವರನ್ನು ಕಾಪಾಡುತ್ತ, ಧರ್ಮಕ್ಕೆ ಹಾನಿ ಬಂದರೆ ಥಟ್ಟನೆ ಅದನ್ನು ಪರಿಹರಿಸುತ್ತ, ಧರ್ಮಹೀನರನ್ನು ಔದಾಸೀನ್ಯದಿಂದ ಕಾಣುತ್ತ, ವರ್ಣಾಶ್ರಮಧರ್ಮಗಳನ್ನು ತಪ್ಪದಂತೆ ನಡಸುತ್ತ ಬರುವುದು ಅತ್ಯುತ್ತಮವಾದ ರಾಜಧರ್ಮದ ರಹಸ್ಯವು. ಹಣವನ್ನು ಹೆಚ್ಚಾಗಿ ಗಳಿಸಬೇಕೆಂಬ ಆಸೆಯಿಂದ ದುರ್ಜನರ ಚಾಡಿಯನ್ನು ತನ್ನು ಕೇಳಿ, ಸಜ್ಜನರನ್ನು ದೂರೀಕರಿಸಿ, ಪಾಪವನ್ನು ಗಳಿಸಿಡುವಂತೆ ಕೂಡಿಸಿಟ್ಟ ಹಣವು ಸದ್ಯಃ ಹೆಚ್ಚಿದಂತೆ ತೋರುತ್ತಿದ್ದರೂ ರಾಸಿಯಾಗಿ ಸೇರಿದ ಸೌಮೆಯು ಕಾಲಾನುಕಾಲದಲ್ಲಿ ಬೆಂಕಿಯ ಪಾಲಾಗುವಂತೆ ಶತ್ರುಗಳಿಂದ ಅಪಹೃತವಾಗುವುದು ನಿಜ. ರಾಜನು ದ್ರವ್ಯಾಶೆಯಿಂದ ಪ್ರಜೆಗಳನ್ನು ನೋಯಿಸಬಾರದು. ಐಶ್ವರ್ಯವಂತರನ್ನು ಕಂಡು ಕರುಬಬಾರದು. ಪ್ರಜೆಗಳಿಗೆ ಆದ ಲಾಭವಲ್ಲಿ ೫ ಭಾಗವನ್ನು ಅವರಿಗೆ ಬಿಟ್ಟು, ೧ ಭಾಗವನ್ನು ಮಾತ್ರ ತಾನು ತೆಗೆದುಕೊಳ್ಳಬೇಕು. ಹೀಗೆ ಧನವನ್ನಾರ್ಜಿಸಿದರೆ ಅದು ನ್ಯಾಯಾರ್ಜಿತವಾಗಿ ಅಭಿವೃದ್ಧವಾಗುವುದು. ಅದನ್ನು ಸತ್ಕಾರ್ಯವಲ್ಲಿ ವೆಚ್ಚ ಮಾಡಿದರೆ ಆ ರಾಜನು ಪುಣ್ಯನಿಧಿಯಾಗಿ ಪರಲೋಕದಲ್ಲಿ ಸುಖಪಡುವನು. ದೊರೆತನವೆಂಬ ಶರೀರಕ್ಕೆ ರಾಜಾಜ್ಞೆಯೆಂಬುದೇ ಪ್ರಾಣ. ಅದಕ್ಕೆ ಅಪಚಯವುಂಟಾದರೆ ಆ ರಾಜನು ಬದುಕಿದ್ದರೂ ಸತ್ತಂತೆಯೇ. ಇದಲ್ಲದೆ ನಿಶ್ಚಯವಾದ ಶೌರ್ಯಧೈರ್ಯಗಳಿಲ್ಲದೆ ಯುದ್ಧಕ್ಕೆ ಹೋಗಿ ಅರಿಗಳನ್ನಿರಿಯಲಾರದೆ ಅಂಜಿ ಹಿಂದಿರುಗಿ ಓಡುವ ರಾಜನಂತೂ ರಾಣಿವಾಸದವರ ಕೈತಾಳಕ್ಕೆ ಸತ್ಕರ್ಕನಾಗುವನು. ಮನೆಹೊಕ್ಕವರನ್ನು ರಕ್ಷಿಸುವ—ಪ್ರತಿಭಟಿಸಿದವರನ್ನು ಸಂಹರಿಸುವ—ಬೇಡುವವರಿಗೆ ಇಷ್ಟಾರ್ಥವನ್ನು ಕೊಡುವ—ಇವೆಯೇ ಕ್ಷತ್ರಿಯನಿಗೆ ಸದ್ಧರ್ಮವಾದುದು. ಅದನ್ನು ಬಿಟ್ಟು ತನ್ನ ಮನೆಯೊಳಗೆ ತನ್ನವರ ಮುಂದೆ ಆಟೋಪವನ್ನು ಮಾಡಿ

ಕೊಳ್ಳುತ್ತಿದ್ದು, ಹಯುಲ್ಲದಮ್ಮಟಿಯ ಶಬ್ದವನ್ನು ಕೇಳಿದ ಮಾತ್ರದಿಂ ದಲೇ ಬೆದರಿಬಿದ್ದಿದ್ದು ಓಡಿ ಗಟ್ಟಬೆಟ್ಟಗಳನ್ನು ಸೇರಿ ಬಾಯ್ಬಾಯ್ಬಿಡು ವವನು ರಾಜನಾದಾನೆ? ತಾನು ಎಂತಹ ಸನ್ಮಾರ್ಗಗಾಮಿಯಾಗಿದ್ದರೂ, ಸತ್ಕೀರ್ತಿಸಂಪನ್ನನಾಗಿದ್ದರೂ, ಸದ್ಧರ್ಮದಿಂದಾರ್ಜಿಸಿದ ಸಂಪತ್ತನ್ನೇ ಪರಿಗ್ರಹಿಸುವವನಾಗಿದ್ದರೂ, ಎಷ್ಟೇ ಪ್ರಾಜ್ಞನಾಗಿದ್ದರೂ, ಅತ್ಯಂತ ದೋರ್ಬಲವುಳ್ಳವನಾಗಿದ್ದರೂ, ಶತ್ರುಜನರ ವಿಷಯದಲ್ಲಿ ರಾಜನು ಉದಾ ಸೀನನಾಗಿ ಕರುಣೆಯನೆಂದಿಗೂ ತೋರಿಸಬಾರದು. ವೇದಗಳಲ್ಲೆಲ್ಲ ಸಾ ಮವೇದವೇ ಉತ್ತಮವೆಸಿಸಿಕೊಂಡಿರುವಂತೆ ಉಪಾಯಗಳೊಳಗೆಲ್ಲ ಸಾ ವೋಪಾಯವೇ ಪ್ರಶಸ್ತವಾದುದು; ರಾಜರಿಗೆ ಅನುಸರಣೀಯವಾದು ದು. ಮಿಕ್ಕ ದಾನಭೇದೋಪಾಯಗಳು ಸಾಮಾನ್ಯವಾದುವುಗಳು. ದಂ ಡೋಪಾಯವೆಂಬುದಂತೂ ಕಸಿಷ್ಠತಮವಾದುದು. ಈ ತತ್ತ್ವವನ್ನು ತಿಳಿಯುವ ರಾಜರು ಉತ್ತಮರನಿಸಿಕೊಳ್ಳಲಾರರು. ಶತ್ರುಸಂಧಾನವಾ ಡುವಾಗಳೂ, ಅವನ ಕುಮಾರೆಗಳನ್ನೀರಿ ಸ್ಥಾರಿವಾಡುವಾಗಳೂ, ಯುದ್ಧ ಕಾಲದಲ್ಲೂ, ಸ್ತ್ರೀಯರೊಡನೆ ಕೂಡುವಾಗಳೂ, ಸ್ನಾನ ಶಯನಗಳಲ್ಲೂ ಭೋಜನ ಕಾಲದಲ್ಲೂ, ವಿವಾಹಾದಿ ಉತ್ಸವಸಮಯಗಳಲ್ಲೂ ರಾಜರಿಗೆ ಎಚ್ಚರಿಕೆಯು ಪೂರ್ತಿಯಾಗಿರಬೇಕು. ತನುಭವನಮನೋರಾಜ್ಯಾದಿಸಪ್ತವ್ಯ ಸನಸಮೂಹವನ್ನು ತೊರೆದು, ಸುಳ್ಳು, ಹಾದರ, ಜಾತಿ ಸಾಂಕರ್ಯ, ಕಳವು, ಮೋ ಸ, ಪರಸಂಸೆಗಳನ್ನು ತನ್ನ ರಾಜ್ಯದಲ್ಲಿ ಕಾಲೂರದಂತೆ ಮಾಡಿ, ಪರಿಪಾ ಲನೆ ಮಾಡುವ ರಾಜನಿಗೆ ಇಹಪರಗಳಿಗಿಡರಲ್ಲೂ ಕೊರತೆಯಿರುವುದಿಲ್ಲ. ಹಿರಿಯರಲ್ಲಿ ಗೌರವವನ್ನೂ, ಗುರುದೈವತೆಗಳಲ್ಲಿ ಭಯವನ್ನೂ, ಪುಣ್ಯಕ್ಷೇ ತ್ರತೀರ್ಥಗಳಲ್ಲಿ ಭಕ್ತಿಯನ್ನೂ, ಶರಣಾಗತರಲ್ಲಿ ದೋಷವನ್ನೆಣಿಸದೆ ರಕ್ಷಿ ಸುವುದನ್ನೂ, ಸೇವಕರಲ್ಲಿ ದಯೆಯನ್ನೂ, ಸಜ್ಜನರಲ್ಲಿ ಆದರಣೆಯನ್ನೂ, ಸ್ನೇಹಿತರಲ್ಲಿ ವಿಶ್ವಾಸವನ್ನೂ ವಹಿಸಿರುವ ರಾಜನು ನೀತಿವಿಚಾರದನೆನಿಸಿ ಕೊಳ್ಳುವನು. ಐಶ್ವರ್ಯಮದದಿಂದ ಮತ್ತನಾಗಿ ಪ್ರಜ್ಞೆಯನ್ನು ಛಿಕ್ಕರಿಸಿ, ಸೇವಕರಿಗೆ ಕಾಲಕಾಲಕ್ಕೆ ಸಂಬಳ ಕೊಡದೆ, ಸ್ವಾಮಿ–ಅಮಾತ್ಯ–ಸು ಹೃತ್ತು-ಕೋಶ-ರಾಷ್ಟ್ರ–ದುರ್ಗ–ಬಲವೆಂಬ ಸಪ್ತಾಂಗದ ಸನ್ನಾಹದಲ್ಲಿ ಎಚ್ಚರಿಕೆಯಿಲ್ಲದೆ, ಆಪ್ತಬಂಧುಗಳನ್ನು ಲೆಕ್ಕಕ್ಕೆ ತರದೆ, ಧರ್ಮಪತ್ನಿಯ

ನ್ನು ಹಾಳುಕೆಡಹಿ, ಸೂಳೆಯರೊಡನೆ ಉಪಭೋಗಿಸುತ್ತ ಇರುವ ರಾಜನನ್ನು ಜಯಲಕ್ಷ್ಮಿಯು ತೊಲಗಿಹೋಗದೆ ಇರುವಳೆ? ಸಂಪದಾಪತ್ತುಗಳಲ್ಲೂ ಒಳ್ಳೆಯ ನಡತೆ, ಆಡಿ ತಪ್ಪದ ಮಾತು, ಸಮಯಸಂಧಿಗಳನ್ನರಿತು ತೋರಿಸಬೇಕಾದ ಶೌರ್ಯ, ಸೇವಕರ ಪರಿಪಾಲನ, ಕಾಲೋಚಿತವಾದ ಭೋಗ, ಅಪರಾಧಕ್ಕೆ ತಕ್ಕಷ್ಟು ಕೋಪ, ಪಿಸುಣರ ಮಾತನ್ನು ಕೇಳದಿರುವುದು, ಬಂದುನೇಳಿ ಕೇಳಿದರೂ ಬಲ್ಲವರ ಮುಖದಿಂದ ನಿಜಸ್ಥಿತಿಯನ್ನು ಕೇಳಿ ನಿರ್ಧರಿಸಿಕೊಳ್ಳುವುದು, ಇವಿಷ್ಟನ್ನೂ ದೊರೆಯು ತಪ್ಪದೆ ಅನುಸರಿಸಬೇಕು. ಮಳೆಯಿಂದ ಪೈರುಗಳೂ, ಹೂವಿನ ಮಕರಂದದಿಂದ ತುಂಬಿಗಳೂ, ಜ್ಞಾನದಿಂದ ತಪಸ್ಸೂ, ಚಂದ್ರಕಿರಣದಿಂದ ಚಕೋರಪಕ್ಷಿಗಳೂ, ಸದ್ಧರ್ಮದಿಂದ ರಾಜ್ಯವೂ, ಸ್ನೇಹಿತರಿಂದ ಪ್ರೀತಿಯೂ, ಸತ್ಪುತ್ರರಿಂದ ಇಹಪರಸೌಖ್ಯವೂ, ವೃದ್ಧಿಯಾಗುವಂತೆ ಮಂತ್ರಿಶ್ರೇಷ್ಠನಿಂದ ರಾಜನ ಐಶ್ವರ್ಯವು ಶುಕ್ಲಪಕ್ಷದ ಚಂದ್ರನಂತೆ ಹೆಚ್ಚುವುದು. ನಿನ್ನಲ್ಲಿರುವ ಬಸವಾಮಾತ್ಯನು ಸಾಮಾನ್ಯನಲ್ಲ. ನಿನ್ನ ಸಕಲ ಸಂಪತ್ತಿಗೂ ಅವನೇ ಕಾರಣನು. ಪರರ ಸಂಪತ್ತನ್ನು ನೋಡಿ ಸೈರಿಸಲಾರದವರು ಚಾಡಿಯನ್ನು ಹೇಳಿದರೆ ಅದನ್ನು ನಿಜವೆಂದು ನಂಬತಕ್ಕುದು ನಿನಗೆ ನೀತಿಯಲ್ಲ, ಎಂದು ಚೆನ್ನಬಸವೇಶನು ಬೋಧಿಸಲು, ದೊರೆಯಲ್ಲಿ ಸುಜ್ಞಾನವೆಂಬ ಸೂರ್ಯನು ತಲೆದೋರಿದನು. ಕೂಡಲೇ ಅವನ ಮನಸ್ಸಿನಲ್ಲಿದ್ದ ಸಂಶಯವೆಂಬ ಅಂಧಕಾರವು ತೊಲಗಿ, ವಿವೇಕವೆಂಬ ಬೆಸಿಲು ಹರಡಿಕೊಂಡಿತು. ಮುಖಕಮಲವು ವಿಕಸಿತವಾಯಿತು. ಬಸವರಾಜನ ಮನಸ್ಸು ದೊರೆಯ ಮನಸ್ಸು ಎಂಬ ಚಕ್ರವಾಕಂಗಳೆರಡೂ ಕೂಡಿದುವು. ಆಗ ದೊರೆಯು ಸಂತೋಷದಿಂದ—ಸಾಮಿ! ನೀವಲ್ಲದೆ ನಮಗನ್ಯಾರು ಹಿತರು? ನಾನಾಳುವ ಭೂಮಿಯೆಲ್ಲವೂ ಬಸವೇಶನಿಗೆ ಅಧೀನವಾದುದು; ನೀವುಗಳೇ ಪವಿತ್ರಚರಿತ್ರರು; ಎಂದು ಇಬ್ಬರನ್ನೂ ಕೊಂಡಾಡಿ, ಉಡುಗೊರೆಗಳನ್ನು ತರಿಸಿಕೊಟ್ಟು, ಅವರ ಮನೆಗೆ ಮರ್ಯಾದೆಯಿಂದ ಕಳುಹಿಸಿ, ತನ್ನ ಅಂತಃಪುರಕ್ಕೆ ದೊರೆಯು ತೆರಳಿದನು

ಎಂಬಿಲ್ಲಿಗೆ ಪೂರ್ವ ಅಧ್ಯಾಯವು ಸಂಪೂರ್ಣವು.

೪ನೆ ಅಧ್ಯಾಯವು.



ಚಂದ್ರಿಕಾವಿಹಾರವು.

ಅಷ್ಟರಲ್ಲಿ ಸಂಧ್ಯಾಕಾಲವಾಯಿತು. ಪಶ್ಚಿಮಗಿರಿಯು ಶಿಖರವನ್ನೆಲ್ಲ ದಿ ಕೆಂಪಾಗಿ ರಂಜಿಸುತ್ತಿರುವ ಸೂರ್ಯನು ಪಶ್ಚಿಮದಿಗಂಗನೆಯು ಹಿಡಿದು ಕೊಂಡಿರುವ ರತ್ನಗನ್ನಡಿಯೋ, ವರುಣದಿಗಂಗನೆಯು ಮಸ್ತಕದ ಮೇಲಿ ರುವ ಮಾಣಿಕ್ಯವೋ, ಬಡಬಾಗ್ನಿಯಿಂದ ಸಿಡಿವ ದೊಡ್ಡಕಿಡಿಯೋ, ಸ ಮುದ್ರರಾಜನಿಗೆ ಅವನ ಪತ್ನಿಯು ಆರತಿಯನ್ನೆತ್ತಿ ಚೆಲ್ಲಿ ಕೈಯಲ್ಲಿ ಹಿಡಿದು ಕೊಂಡಿರುವ ಕಿಸ್ಸಿನ ಹರಿವಾಣವೋ ಎಂಬಂತೆ ತೋರುತ್ತಿದ್ದನು. ಈ ಸೂರ್ಯನು ತನ್ನ ಕಿರಣವೆಂಬ ಆಯುಧದಿಂದ ಬ್ರಾಹ್ಮಣನಿಗೆ (ಚಕೋರ ಪಕ್ಷಿಗಳಿಗೆ) ಹಾನಿಯನ್ನುಂಟುಮಾಡಿ, ಕುಲಗೋತ್ರಗಳಿಗೆ (ಕುಲಾಚಲ ಗಳಿಗೆ) ಬಾಧೆಯನ್ನುಂಟುಮಾಡಿ, ಕುದುರೆಗಳ ಹುಟ್ಟನ್ನು (ಸಮುದ್ರದ ಉಕ್ಕುವಿಕೆಯನ್ನು) ಹಾಳ್ಮಾಡಿ, ಭೂಮಂಡಲವನ್ನು (ನೈದಿಲೆಯನ್ನು) ಬ ಣಗಿಸಿ, ಜಗತ್ತೆಲ್ಲ ಕಾಣುವಂತೆ ಪೆಂಡಕ್ಕೆ ಆಸೆಪಡುವನು. (ವರುಣದಿ ಗಂಗನೆಯನ್ನು ಪ್ರೀತಿಸುವನು.) ಇಂತಹ ಪುಣ್ಯಪುರುಷನ ತೇಜಸ್ಸುಳಿ ಯುವುದುಂಟೆ ? ಅದುಕಾರಣ, ನಿಸ್ತೇಜನಾಗಿ ದಿಗಂಬರನಾಗಿ ಅಸ್ತಪರ್ವ ತವನ್ನು ಹೊಕ್ಕಿಕೊಂಡನು ಎಂಬಂತೆ ತೋರುತ್ತಿದ್ದನು. ಪದ್ಮಿನಿಯು ಹೆಂಡಗುಣಿಕರೂಡನೆ ಮಾತನಾಡತಕ್ಕವಳು (ತುಂಬಿಗಳ ಸಂಗವುಳ್ಳವ ಳು) ರಹಸ್ಯವೆ (ಹೂವನ್ನು ಬಿಟ್ಟರುವಳು) ನಾಚಿಕೆಗೆಟ್ಟವಳು (ಮಕರಂ ದದಿಂದ ಕೂಡಿರುವಳು) ಮುಖವನ್ನು ಮೇಲಕ್ಕೇ ಎತ್ತಿಕೊಂಡಿರುವಳು, ಹಗಲೇ ಬಯಲಲ್ಲಿ ಪುರುಷನ ಸಂಗವನ್ನು ಮಾಡತಕ್ಕವಳು (ವಿಕಸಿಸತಕ್ಕ ವಳು) ದೋಷವನ್ನು (ರಾತ್ರಿಯನ್ನು) ನೋಡದೆ ಇರುವ ಇಂಥವಳ ಸಂ ಗವು ತನಗೆ ಸಾಕೆಂದು ತ್ಯಜಿಸಿಬಿಟ್ಟು ಸೂರ್ಯನು ಸಂಧ್ಯಾದೇವಿಯನ್ನು ಮು ದುವೆಯಾಗಿ ಆಡಿದ ಓಕುಳಿಯಂತೆ ಸಂಜೆಗೆಂಪು ತೋರಿತು. ಆ ಹೊಸ ಹೆಂಡತಿಯೊಡನೆ ಕೂಡುವುದಕ್ಕಾಗಿ ರಹಸ್ಯಸ್ಥಲಕ್ಕೆ ಹೋಗುವಂತೆ ಸೂರ್ಯ ನು ಸಮುದ್ರವೆಂಬ ಗೃಹವನ್ನು ನುಗ್ಗಿದಂತೆ ತೋರಿದನು. ಭೂಮಂಡಲವೂ

ಚಕ್ರವಾಕಪಕ್ಷಿಗಳೂ ವ್ಯಥೆಗೊಂಡುವು. ತಾವರೆಗಳು ಬಾಡಿದುವು ನೈದಿಲುಗಳು ಅರಳಿದುವು. ಕತ್ತಲೆಯು ಭೂಲೋಕವನ್ನೆಲ್ಲ ಮುಸುಕಿಕೊಂಡಿತು. ಹಾವರಗಿತ್ತಿಯರು ನಲಿದಾಡಿದರು. ಆಕಾಶವಲ್ಲಿ ಅಲ್ಲಲ್ಲಿ ಒಂದೊಂದು ನಕ್ಷತ್ರಗಳು ಕಾಣಿಸಿಕೊಂಡುವು. ಕಾಮುಕರು ಹರ್ಷಗೊಂಡರು. ಮನ್ಮಥನು ಜಯಯಾತ್ರೆಮಾಡಿದನು. ಗಳಿಗೆಗಳಿಗೆಗೆ ಹೆಚ್ಚುತ್ತಿರುವ ಕತ್ತಲೆಯನ್ನುನೋಡಿ ಸ್ತ್ರೀಯರಿಯರು ಸಂತೋಷಗೊಂಡರು. ಅವರಲ್ಲೊಬ್ಬಳು "ಪಶ್ಚಿಮಸಮುದ್ರದಲ್ಲಿ ಮುಳುಗಿದ ಸೂರ್ಯನನ್ನು ಅಲ್ಲೇ ಮೊಸಳೆಯು ನುಂಗಿಬಿಡಲಿ, ಮುಂದೆ ಹುಟ್ಟುವ ಚಂದ್ರನನ್ನು ರಾಹುವೇ ನುಂಗಿಬಿಡಲಿ, ನನ್ನ ಗಂಡನಿಗೆ ವಿಪತ್ತುಬರಲಿ, ಮಿಂಡನಿಗೆ ಜಯವಾಗಲಿ,ಸಂಗಡಿತಿಯರಿಗೆ ಉಲ್ಲಾಸವಾಗಲಿ" ಎಂದು ಮಾರಿಗೆ ಹರಕೆಯನ್ನು ಕಟ್ಟುತ್ತಿದ್ದಳು. ಜಾರೆಯರು ಬಿಳಿಯಸೀರೆ ಬಿಳಿಯ-ಬಣ್ಣದ ಆಭರಣಗಳನ್ನೆಲ್ಲ ಬಿಟ್ಟು, ಕರಿಯ ಸೀರೆ ಕುಪ್ಪಸ, ಇಂದ್ರನೀಲರತ್ನದಾಭರಣ, ಕಸ್ತೂರಿತಿಲಕ, ಕಾಡಿಗೆ, ಕಸ್ತೂರಿ ಮೊದಲಾದುವುಗಳನ್ನು ಧರಿಸಿ, ಕಗ್ಗತ್ತಲೆಯಲ್ಲಿ ಪಾಪಸೀಸಿಲ್ರೀಯಾಕೃತಿಯಾಗಿರುವಂತೆ ಸಂಕೇತಸ್ಥಳಗಳಿಗೆ ತೆರಳಾಡುತ್ತಿದ್ದರು. ಅಷ್ಟರಲ್ಲಿ ಚಂದ್ರೋದಯವಾಯಿತು. ಬ್ರಹ್ಮನು ಪೂರ್ವ ಪಶ್ಚಿಮ ಗಿರಿಗಳನು ತೂಗಿಸೋಡಬೇಕೆಂದು ಪ್ರಯತ್ನಿಸಿ, ಪಶ್ಚಿಮಗಿರಿಯು ತೂಕವು ಸ್ವಲ್ಪ ಕಡಿಮೆಯಾಗಲು, ಅದರ ಮೇಲೆ ಸಮತೂಕಕ್ಕಾಗಿ ಮಡಗಿದ ಗಾಜಿನಗೊಂಬೆಯೋ ಎಂಬಂತೆಯೂ, ಮೋಹರಹಿತರಾಗಳನ್ನು ಸುಡುವುದಕ್ಕಾಗಿ ಮನ್ಮಥನೆಂಬ ರುದ್ರನು ತೆರೆದ ಅಗ್ನಿನೇತ್ರವೋ ಎಂಬಂತೆಯೂ ಪೂರ್ವಾದ್ರಿಯನ್ನೇಲೆ ಕೆಂಪಾದ ಚಂದ್ರಮಂಡಲವು ಉದಿಸಿತು. ಕಾಲನೆಂಬ ಯಾಕ್ಷಿಣಿಗಾರನು ಇಂದ್ರನ ಓಲಗಸಾಲೆಯಲ್ಲಿ ರತ್ನವ ಚೆಂಡನ್ನಿಟ್ಟು ಕ್ರಮವಾಗಿ ಅದನ್ನು ಚಿನ್ನವ ಚೆಂಡನ್ನಾಗಿಯೂ ಮುತ್ತಿನ ಚೆಂಡನ್ನಾಗಿಯೂ ಮಾಡಿದಂತೆ ಚಂದ್ರಮಂಡಲವು ಮೊದಲು ಕೆಂಪಾಗಿದ್ದು ಬಳಿಕ ಹೊಂಬಣ್ಣಕ್ಕೂ ಬಿಳ್ಪಣ್ಣಕ್ಕೂ ತಿರುಗಿತು. ಮಗನಾದ ಚಂದ್ರನು ತನ್ನ ಅಮೃತವನ್ನು ದೇವತೆಗಳಿಗಲ್ಲದೆ ಮತ್ತಾರಿಗೂ ಕೊಡದೆ ಹೋದಕಾರಣ ಅವನಿಗೆ ಇತರರ ವೃದ್ಧಿಯಾಗಿ, ಕ್ಷೀಣತೆಯೂ ಕಳಂಕವೂ ಉಂಟಾದು ಎಂಬುದಾಗಿ ಯೋಚಿಸಿ, ಅದನ್ನು ಪರಿಪರಿಸುವುದಕ್ಕಾಗಿ ಸಮುದ್ರನು ಚಂದ್ರನಮೇಲೆ

ಅಮೃತದ ಮಳೆಯನ್ನು ಕರೆದನೋ ಎಂಬಂತೆಯೂ, ಕ್ಷೀರಸಮುದ್ರವೇ ಉಕ್ಕಿ ಬಂದಂತೆಯೂ ಬೆಳ್ದಿಂಗಳು ಲೋಕವನ್ನೆಲ್ಲ ಆವರಿಸಿತು. ಚಂದ್ರ ಪ್ರಭೆಯಿಂದ ಗಿರಿ ತರು ಗುಲ್ಮ ನದೀನದಾದಿಗಳೆಲ್ಲವೂ ಬಿಳಿಯ ಬಣ್ಣವನ್ನೆ ತಳೆದು ರಂಜಿಸಿದುವು. ಈ ಬ್ರಹ್ಮಾಂಡವೆಲ್ಲವೂ ಸ್ಫಟಿಕದಿಂದ ಮಾಡಿದ ಭರಣಿಯಂತೆಯೂ, ಚಂದ್ರಮಂಡಲವು ಅದರ ಬಾಯ್ಗಮುಚ್ಚಿದ ಕರ್ಪೂರದ ಹಲ್ಲೆಯಂತೆಯೂ ತೋರಿದುವು. ಚಂದ್ರನೆಂಬ ಗುಂಡಾದ ಬಿಳೀಕಾಗದದ ಮೇಲೆ ಮನ್ಮಥನು ಕಸ್ತೂರಿಯಿಂದ ಬರೆದ ಮೋಹಶಾಸ್ತ್ರಾಂತರ್ಗತವಾದ ಓಂಕಾರವೋ ! ಕತ್ತಲೆಯು ಪೆದರಿ ಚಂದ್ರನ ಗರ್ಭದಲ್ಲಿ ಹುಟ್ಟಿ ಬರಬೇಕೆಂದು ಯೋಚಿಸಿ ಓಡಿಬಂದು ಚಂದ್ರನ ದೇಹವನ್ನು ಹೊಕ್ಕಿತೋ ! ಇಂದ್ರನು ಚಂದ್ರನೆಂಬ ಅಮೃತಕುಂಭವನ್ನು ಆಸೆಯಿಂದ ಎಟ್ಟುಕೊಂಡು ಅದಕ್ಕೆ ಅರಗಿನ ಮುದ್ರೆಯನ್ನೊತ್ತಿರುವನೋ ! ಎಂಬಂತೆ ಚಂದ್ರಮಂಡಲದ ಮಧ್ಯದಲ್ಲಿರುವ ಕಳಂಕವು ತೋರುತ್ತಿದ್ದಿತು.

ಹೀಗೆ ಚಂದ್ರೋದಯವು ಲೋಕಾಹ್ಲಾದಕವಾಗಿ ತೋರುತ್ತಿರಲು, ಭೂಕಾಂತನಾದ ಬಿಜ್ಜಳನು ಆ ಬೆಳ್ದಿಂಗಳಿನಲ್ಲಿ ಪಟ್ಟಣದೊಳಗೆ ವಿಹರಿಸಿ ಬರಬೇಕೆಂದು ಯೋಚಿಸಿ, ಭೋಜನಾನಂತರ ಅರಮನೆಯಿಂದ ಹೊರಟನು. ಒಡನೆ ವಿಟ ವಿದೂಷಕ ನಾಗರಿಕ ಪೀಠಮರ್ದನರೆಂಬ ಚತುರ್ವಿಧದ ನರ್ಮಸಚಿವರುಗಳು ಹೊರಟರು. ಸೂಳೆಗೇರಿಗೆ ಸುಗ್ಗುವಾಗ ಮುಂಗಡೆಯಲ್ಲೇ ಹೂವಿನ ಸಂತೆಯು ಕಾಣಿಸಿತು. ಅಲ್ಲಿ ಹೂವಾಡಗಿತ್ತಿಯರು ಮೊಲ್ಲೆ ಮಲ್ಲಿಗೆ ಜಾಜಿ ಸಂಪಗೆ ತಾಳೆ ಪಾದರಿ ಮೊದಲಾದ ಹೂವುಗಳ ಸರಗಳನ್ನು ಹಿಡಿದು ಮಾರುತ್ತಿದ್ದರು. ಅದರಮುಂದೆ ಪರಿಮಳ ದ್ರವ್ಯಗಳನ್ನು ಮಾರುವ ಅಂಗಡಿಯಸಾಲುಗಳು ಘಮಘಮಿಸುತ್ತಿದ್ದುವು. ಅಲ್ಲಿ ಪಲವು ಬೆಡಗಿನ ಸುಂದರಿಯರು ಕುಳಿತು ಕಸ್ತೂರಿ ಕುಂಕುಮಕ್ಕೇಸರಿ ಪಚ್ಚಕರ್ಪೂರ ಪುನುಗು ಜವ್ವಾಜಿ ಪನ್ನೀರು ಶ್ರೀಗಂಧ ಲವಂಚ ಮೊದಲಾದುವುಗಳನ್ನು ಮಾರುತ್ತಿದ್ದರು. ಆ ಬೀದಿಯನ್ನು ನುಗ್ಗಿದವರೆಲ್ಲ ಪರಿಮಳ ಸಮುದ್ರದಲ್ಲಿ ಮುಳುಗಾಡಿದವರಂತೆ ಗಂಧಮಯರಾಗುತ್ತಿದ್ದರು. ಪರಿಮಳಸಮೇತವಾದ ತಂಗಾಳಿಯು ಹಿತಕರವಾಗಿ ಬೀಸುತ್ತಿದ್ದಿತು. ಅವರ ಮುಂದಿರುವ ಸೂಳೆಗೇರಿಯು ಮನ್ಮಥನ ಆಯುಧ

ಶಾಲೆಯೊ ! ಕಾಮನ ಪಟ್ಟದ ಆನೆಗಳ ಶಾಲೆಯೊ! ಮದನನ ನವನಿಧಿಗಳನ್ನು ತುಂಬಿದ ಬೊಕ್ಕಸವೊ ! ಸ್ಮರನ ಪುಣ್ಯಫಲದ ಉಪವನವೊ ! ಮೋಹದ ಜನ್ಮಸ್ಥಲವೊ ! ಚಾತುರ್ಯದ ಮನೆಯೊ ! ಸೌಖ್ಯದ ಆವಾಸವೊ! ಸೊಬಗಿ ನವಿಹಾರಾಂಗಣವೊ ! ಮಾರನೃಪನ ರಾಜಧಾನಿಯೊ! ಎಂಬಂತೆ ಒಪ್ಪುತ್ತಿ ದ್ದಿತು. ಅಲ್ಲಿ ಸುಳ್ಳನಂಗಡಿ, ಸ್ಪರ್ಧೆಯ ನೆಲೆವನೆ, ಮಾಯೆಗಳ ವಾಸ, ಆಸೆ ಯಾಶ್ರಮ, ದೋಷದ ಮಾರಕಟ್ಟು, ಪಂಥದ ಗೃಹ, ಜೂಜಿನ ಹೊಕ್ಕೆ, ಕಪಟದ ಸ್ಥಾನ, ನೆಪದ ಹಕ್ಕೆ, ಚಮರಿನ ತಾಣ, ವೋಸದ ಇಕ್ಕೆ, ಬ ಲಾತ್ಕಾರದ ಅರಮನೆ, ತಪ್ಪುಗಳ ತವರ್ಮನೆಗಳೆನಿಸಿ ಮೆರೆಯುತ್ತಿರುವ ಸೂಳೆಯರ ಮನೆಗಳು ತೋರುತ್ತಿದ್ದುವು. ಸಂಪತ್ತಿನಿಂದ ಭರಿತವಾಗಿರುವ ಆ ಕೇರಿಯ ಮನೆಗಳು ಚಿನ್ನಬೆಳ್ಳಿಯ ಕೆಲಸದಿಂದಲೂ ರತ್ನಗಳ ಕೆತ್ತುವಿಕೆ ಯಿಂದಲೂ ಶೋಭಾಯಮಾನವಾಗಿದ್ದುವು. ಅವುಗಳಲ್ಲಿ ಸಾಕಿದ ಗಿಳಿ ನವಿ ಲು ಪಾರಿವಾಳ ಹಕ್ಕಿಗಳ ಶಬ್ದವೂ ವೇಶ್ಯೆಯರ ಪಾದಕಟಕಧ್ವನಿಯೂ ಉಪ್ಪರಿಗೆಗಳ ಮೇಲೆ ಕಟ್ಟಿರುವ ಚಿನ್ನಬೆಳ್ಳಿಯ ಗಂಟೆಗಳ ನಾದವೂ ಸಹ ಕಿವಿಗಿಂಪಾಗಿ ಕೇಳಿಸುತ್ತಿದ್ದುವು. ಅಲ್ಲಿ ಮನ್ಮಥನ ಬಾಣಗಳಂತೆ ಮೋಹ ವನ್ನುಂಟುಮಾಡುತ್ತ, ಕಟಾಕ್ಷಪಾತದಿಂದ ಘನಜಿತೇಂದ್ರಿಯರ ಮನಸ್ಸ ನ್ನೂಕೂಡ ಸೆಳೆಯುವ ಚಮರಿನ ತರುಣಿಯರಾವ ವಾರಾಂಗನೆಯರು ಪರಿ ಪರಿಯ ಶೃಂಗಾರಗಳಿಂದೊಪ್ಪಿ ಜಗತಿಯ ಮೇಲೂ ಬಾಗಿಲುಗಳಲ್ಲೂ ಉ ಪ್ಪರಿಗೆಗಳಲ್ಲೂ ಕಿಟಕಿಗಳಲ್ಲೂ ನಿಂತು ಶೃಂಗಾರರಸವ ಅಧಿದೇವತೆಗಳಂತೆ ತೋರುತ್ತಿದ್ದರು. ಕೆಲರು ಉಯ್ಯಾಲೆಯಲ್ಲಿ ಕುಳಿತು ತೂಗಿಸಿಕೊಳ್ಳುತ್ತ ಲೂ, ಕೆಲರು ಚಂಡಾಡುತ್ತಲೂ, ಕೆಲರು ಹಾಡುತ್ತಲೂ, ಕೆಲರು ನ ರ್ತನವನ್ನಭ್ಯಸಿಸುತ್ತಲೂ, ಕೆಲರು ಕ್ರೀಡಾಶುಕಗಳನ್ನು ಮಾತನಾಡಿಸು ತ್ತಲೂ, ಕೆಲರು ಕಾಮುಕಾಸ್ತ್ರವನ್ನಭ್ಯಸಿಸುತ್ತಲೂ, ಕೆಲರು ಮುದಿಕೆಯ ರಿಂದ ವೇಶ್ಯಾವಿದ್ಯೆಯ ರಹಸ್ಯವನ್ನರಿಯುತ್ತಲೂ ಇದ್ದರು. ಅಲ್ಲೊಬ್ಬಳು ಕಮಲಮುಖ, ಪದ್ಮಗಂಧ, ಜಿಂಕೆಯ ನೋಟ, ಕೋಕಿಲೆಯ ಸ್ವರ, ಕಪ್ಪುಕೂದಲು, ಹಂಸಗಮನ, ಎಳ್ಳಗಸೆಹೂವಿನಂತಹ ಮೂಗು, ತೊಂಡೆ ದುಟಿ ಗುಂಡುಮೊಲೆ, ನಾಚಿಕೆ, ಗಾಂಭೀರ್ಯ, ಕೋಮಲಶರೀರ ಇವುಗಳು ಳವಳಾಗಿ ಬಿಳೀಸೀರೆಯನ್ನುಟ್ಟು ಬಳಬಾಗಿಲಲ್ಲಿ ನಿಂತಿರುವುದನ್ನು ನೋಡಿ

ಇವಳೇ ಪದ್ಮಿನಿ ಜಾತಿಯ ಸ್ತ್ರೀಯೆಂದು ನಾಗರಿಕನು ತೋರಿಸಲು ಎಲ್ಲರೂ ಅವಳನ್ನು ನೋಡಿ ಮುಂದಕ್ಕೆ ನಡೆದರು. ಮತ್ತೊಬ್ಬಳು ಕಮಲದಳನೇತ್ರ, ಚಂದ್ರಮುಖ, ಗುಂಗುರುಗೂದಲು, ಮದ್ಯಗಂಧ, ಕಠಿನವಾಗಿಯೂ ದಪ್ಪವಾಗಿಯೂ ಇರುವ ಮೊಲೆ, ಸ್ಥೂಲನಿತಂಬ, ಅಧಿಕಕಾಮರಸ, ಚಕೋರಧ್ವನಿ, ಗಜಗಮನ, ಶಂಖಕಂಠ, ಅತ್ಯಂತಕಾಮ, ಸಂಗೀತಪ್ರೀತಿ, ಸಣ್ಣನಡು—ಇವುಗಳುಳ್ಳವಳಾಗಿ ಚಿತ್ರಾಂಬರವನ್ನುಟ್ಟು ನಿಂತಿರುವುದನ್ನು ನೋಡಿ ಪೀಠಮರ್ದನನು ಇವಳು ಚಿತ್ತಿನಿಜಾತಿಯ ಸ್ತ್ರೀಯೆಂದು ತೋರಿಸಲು, ಎಲ್ಲರೂ ನೋಡಿ ಮುಂದಕ್ಕೆ ತೆರಳಿದರು. ಇನ್ನೊಬ್ಬಳು ತಾವರೆಮೊಗ್ಗಿನಂತಹ ಸ್ತನ, ದೀರ್ಘದೇಹ, ಉದ್ದವಾದಕಣ್ಣು, ಚಾಂಚಲ್ಯ, ಉದ್ದವಾದ ಕರಿಯ ಕೂದಲು. ಕೂಡಿದ ಹುಬ್ಬುಗಳು, ಸಣ್ಣಹೊಟ್ಟೆ, ಶಂಖಧ್ವನಿ, ಚಿಗುರುಮುಟಿ, ಸುಣ್ಣದ ಗಂಧ, ಕೆಂಪಾದ ಮತ್ತೂ ಮೃದುವಾದ ಕಾಲು., ಸ್ವಲ್ಪ ಕಾಮ, ಕೋಪ, ಮೋಹ, ಶೀಘ್ರಗಮನ ಇವುಗಳುಳ್ಳವಳಾಗಿ ಕೆಂಪ್ರಸೀರೆಯನ್ನುಟ್ಟು ನಿಂತಿರುವವಳೇ ಶಂಖಿನಿಯೆಂಬುದಾಗಿ ವಿಟನು ತೋರಿಸಲು, ಎಲ್ಲರೂ ನೋಡಿ ಮುಂದಕ್ಕೆ ಸರಿದರು. ಗಟ್ಟಿಮುಟ್ಟಾದ ದೇಹ, ಸಣ್ಣ ಕಣ್ಣು, ಕೆಂಪ್ರಕೂದಲು, ಉಬ್ಬಿದ ಮೊಲೆ, ಗದ್ಗದ ಸ್ವರ, ಗಾನಾಪ್ರೀತಿ, ಬುದ್ಧಿಹೀನತೆ, ಬಾಯ್ಬಡಿಕತನ, ದುಶ್ಚೇಷ್ಟೆ, ಕಠಿನ ತಂದ ಸುರತ, ಮದಗಂಧ, ವಿಶಾಲವಾದ ನಿತಂಬ, ದಪ್ಪನಡು, ಇಂಪಾದ ಮಾತು—ಇವುಗಳುಳ್ಳವಳಾಗಿ, ಎಲ್ಲರನ್ನೂ ನಗಿಸುತ್ತ ನಿಂತಿರುವವಳೇ ಹಸ್ತಿನಿ ಯೆಂಬುದಾಗಿ ವಿದೂಷಕನು ತೋರಿಸಲು ಎಲ್ಲರೂ ನೋಡಿ ಮುಂದಕ್ಕೆ ಹೊರಟರು. ಮುಂದೆ ಮುಂದೆ ಕಾಮಶಾಸ್ತ್ರಾನುಸಾರವಾಗಿ ನಾನಾವಿಧವಾದಂಬನಾಲಿಂಗನಬಂಧನಾದಿಗಳಿಂದ ವಿಧವಿಧವಾಗಿ ಸುರತಸೌಖ್ಯವನ್ನನುಭವಿಸಿರುವ ನಾಯಿಕೆಯರನ್ನೂ ಪ್ರಗಲ್ಭರಾದ ವಿಟರುಗಳನ್ನೂ ಅವರುಗಳ ನಾನಾಚೇಷ್ಟೆಗಳನ್ನೂ ನೋಡಿಕೊಂಡು ಬರುತ್ತಿದ್ದರು ಮುಪ್ಪಿನಿಂದ ತಲೆ ನರೆತು ಮೈ ಸುಕ್ಕು ಹಿಡಿದು, ಬೋಡುವಾಯ್ಬಿದ್ದಿರುವ ಮುದಿಕ ಮುದಿಕಿಯರು ಕೂಡ ಚಾಪಲ್ಯದಿಂದ ಅಲೆದಾಡುತ್ತಿರುವುದನ್ನು ನೋಡಿ ಎಲ್ಲರೂ ನಕ್ಕರು. ಅದರ ಮುಂದೆ ಶಿವಭಕ್ತಸೂಳೆಯರು ತಮ್ಮ ತಮ್ಮ ಮಿಂಡಹಿಂಗಮರೊಡನೆ ಸುರತಸು

ಖವನ್ನನುಭವಿಸುತ್ತಿರುವ ಮನೆಗಳು ಕಂಗೊಳಿಸಿದುವು. ಇವುಗಳನ್ನೆಲ್ಲ ನೋಡಿಕೊಂಡುಬರುವಷ್ಟರಲ್ಲಿ ಬೆಳಗಿನಜಾವವಾಯಿತು. ದೇವಾಲಯಗಳಲ್ಲಿ ಶಂಖ ಜಾಗಟೆ ಭೇರಿ ಮೊದಲಾದ ವಾದ್ಯಧ್ವನಿಯಾಯಿತು. ಕೋಳಿಗಳು ಕೂಗುತ್ತಿದ್ದುವು. ತಂಗಾಳಿ ಬೀಸಿತು. ಚಂದ್ರನು ಅಸ್ತಗಿರಿಯಂ ಸೇರಿದನು ರಾಜನು ತನ್ನ ಸಖರುಗಳೊಡನೆ ಆರಮನೆಯನ್ನು ಸೇರಿ, ಅವರುಗಳನ್ನು ಕಳುಹಿಕೊಟ್ಟು ಸುಖದಿಂದಿದ್ದನು. ಎಂಬಿಲ್ಲಿಗೆ ಎಂಟನೆಅಧ್ಯಾಯವು ಸಂಪೂರ್ಣವು.

೯ನೆ ಅಧ್ಯಾಯವು.

ಅಲ್ಲಮಪ್ರಭುವರಾಗಮನವು.

ಕಲ್ಯಾಣ ಪಟ್ಟಣದಲ್ಲಿ ಬಸವೇಶ ಚೆನ್ನಬಸವೇಶ್ವರರೀರ್ವರೂ ಘನತರವಾದ ಗೌರವದಿಂದ ಮೆರೆಯುತ್ತಿರಲು, ಇತ್ತ ಅಲ್ಲಮಪ್ರಭುದೇವರು ಸೊನ್ನಲಾಪುರದ ಸಿದ್ಧರಾಮೇಶನಿಗೆ ಲಿಂಗಮಹತ್ತ್ವವನ್ನು ತಿಳುಹಿಕೊಡುತ್ತೇನೆಂದು ಹೇಳಿ, ಒಡನೆ ಕರೆದುಕೊಂಡು ಕಲ್ಯಾಣಪಟ್ಟಣಕ್ಕೆ ಬಂದನು. ಆ ಪಟ್ಟಣದ ಒಳಗಲ್ಲಿ ಎತ್ತ ನೋಡಿದರೂ ಮಾವು ನೇರಿಲು ಹಲಸು ನೇರಿಲೆ ಬೇಲ ಕಿತ್ತಿಳೆ ಸಿಂಬಿ ದಾಳಿಂಬೆ ಪತ್ತಿ ಸೀಬೆ ಅಂಜೂರ ಸೇಬು ಬಾಳೆ ತೆಂಗು ಅಡಿಕೆ ಮೊದಲಾದ ನಾನಾಫಲಪ್ರಧಾನವಾದ ವೃಕ್ಷಗಳಿಂದಲೂ, ಮೊಲ್ಲೆ ಮಲ್ಲಿಗೆ ಜಾಜಿ ಸಂಪಗೆ ತಾಳೆ ಸೇವಂತಿಗೆ ಸುರಗಿ ಸುರಹೊನ್ನೆ ಪಾದರಿ ಮೊದಲಾದ ಪುಷ್ಪಪ್ರಧಾನಗಳಾದ ಗಿಡು ಬಳ್ಳಿ ಮರಗಳಿಂದಲೂ, ಮರುವಕ ಪಚ್ಚೆ ನಾಗವಲ್ಲಿ ಗೋರಂಟೆ ಶ್ರೀಚಂದನ ಬಿಲ್ವ ಅಶೋಕ ಮೊದಲಾದ ಪತ್ರಪ್ರಧಾನವಾದಗಡುಬಳ್ಳಿ ಮರಗಳಿಂದಲೂ, ಬಸರಿ ಬೂರಗ ಹೊಂಗೆ ಹಿಪ್ಪೆಅಲ ಅರಳಿ ಮೊದಲಾದ ಛಾಯಾಪ್ರಧಾನವಾದ ವೃಕ್ಷಗಳಿಂದಲೂ ಸಿಬಿತವಾದ ತೋಟಗಳೂ, ಒತ್ತಾದ ಕಬ್ಬಿನ ಗದ್ದೆಗಳೂ, ಅಲ್ಲಲ್ಲಿ ಹರಿಯುವ ಕಾಲಿವೆ ಕೊಳ ಹೊಳೆ ಕೆರೆ ಮೊದಲಾದುವುಗಳೂ ಎಸೆಯುತ್ತಿದ್ದುವು. ವನಲಕ್ಷ್ಮಿಯ ಕ್ರೀಡಾಸದನದಂತೆ ಎಸೆಯುತ್ತಿರುವ ಮುಂಗಳಮುಖವಾದ ಉಪವನಗಳಲ್ಲಿ ಗಿಳಿ ನವಿಲು ಕೋಗಿಲೆ ಗೀಜಗ ಮರಕುಟಿಗ ಸೋರೆಗೌಜಲ ಮೊದಲಾದ ನಾನಾಪಕ್ಷಿಗಳು ಇಂಪಾಗಿ ದನಿಮಾಡುತ್ತಿ

ದ್ದುವು. ಅಲ್ಲಲ್ಲಿಗೆ ದಾರಿಗಳ ಪಕ್ಕದಲ್ಲಿ ಪಥಿಕರಿಗೆ ಇಷ್ಟವಾದ ಶಾಕಪಾಕಭಕ್ಷ್ಯಭೋಜ್ಯಾದಿಗಳನ್ನೆಲ್ಲ ಉಣಿಡಿಸುವ ಧರ್ಮಸತ್ರಗಳೂ,ನೀರುಮಜ್ಜಿಗೆ ಪಾನಕ ಮೊದಲಾದುವುಗಳನ್ನು ಸುಂದರಿಯರಾದ ನಾರಿಯರು ಪಥಶ್ರಾಂತರಾಗಿ ಬಂದವರಿಗೆ ಎರೆಯುತ್ತ ನಿಂತಿರುವ ತಂಪಾದ ಅರವಟ್ಟಿಗೆಗಳೂ ಕಣ್ಣಿಗೆ ಕಾಣಿಸುತ್ತಿದ್ದುವು. ಅದರ ಮುಂದಕ್ಕೆ ಸಕಲ ಸಂಪತ್ತಿಗೂ ಆಕರವಾದ ಕಲ್ಯಾಣಪಟ್ಟಣವು ಮೆರೆಯುತ್ತಿದ್ದಿತು. ಆ ಪಟ್ಟಣದ ಸುತ್ತು ಕೋಟೆಗಳು ಮುಗಿಲನ್ನು ಸೋಂಕುತ್ತಿದ್ದುವು. ಅಗಳುಗಳು ಪಾತಾಳವನ್ನು ಕಂಡಿದ್ದುವು. ಅಲ್ಲಲ್ಲಿ ನೆಟ್ಟಿರುವ ಧ್ವಜಪಟಗಳು ಪಟಪಟಶಬ್ದವನ್ನು ಮಾಡುತ್ತ ಗಗನಚುಂಬಿಗಳಾಗಿದ್ದುವು. ರನ್ನ ಚಿನ್ನದ ಕೆಲಸದ ಉಪ್ಪರಿಗೆಗಳು ಪಟ್ಟಣದ ತುಂಬ ನಿಬಿಡೀಕೃತಗಳಾಗಿದ್ದುವು. ಎತ್ತನೋಡಿದರೂ ದೇವಾಲಯದ ಶಿಖರಗಳೂ ಅವುಗಳ ಮೇಲಣ ಕಲಶಗಳೂ ಮೆರೆಯುತ್ತಿದ್ದುವು. ಆ ಕಲ್ಯಾಣಪಟ್ಟಣದ ಸುತ್ತಲೂ ಉನ್ನತವಾಗಿರುವ ಕೋಟೆಯು ಸಾಲ್ವತ್ತೆಂಟುಯೋಜನದಳತೆಯುಳ್ಳುದಾಗಿದ್ದಿತು. ಅದಕ್ಕೆ ಮುನ್ನೂರರವತ್ತು ಬಾಗಿಲುಗಳಿದ್ದುವು. ಸೂರ್ಯಚಂದ್ರ ವೀಥಿಗಳು ನೂರಿಪ್ಪತ್ತಿದ್ದುವು. ಬೀದಿಬೀದಿಗಳಲ್ಲೂ ನಾನಾವಿಧದ ಅಂಗಡಿಗಳ ಸಾಲುಗಳು ಕಿಕ್ಕಿರಿದಿದ್ದುವು. ವ್ಯಾಪಾರಿಗಳ ಸಂದಣಿಯು ಬಲು ದಟ್ಟವಾಗಿದ್ದಿತು. ಎತ್ತನೋಡಿದರೂ ವಾದ್ಯಗಳಾಗುತ್ತ ತಳಿರುತೋರಣಗಳಿಂದ ಅಲಂಕರಿಸಿರುವ ಮನೆಗಳು ಮಂಗಳಮಯವಾಗಿ ತೋರುತ್ತಿದ್ದುವು. ಇದನ್ನೆಲ್ಲ ಪ್ರಭುಸಿದ್ಧರಾಮೇಶ್ವರರುಗಳು ನೋಡಿಕೊಂಡು ಮುಂದಕ್ಕೆ ಬರಲು, ಸಕಲಸಂಪತ್ತಿಗೂ ನೆಲೆಯಾದ ರಾಜಭವನವು ನಗರೀಕಾಂತೆಯ ನಿರ್ಮಲಮುಖಮಂಡಲದಂತೆ ಶೋಭಿಸುತ್ತಿದ್ದಿತು. ರೂಪದಲ್ಲಿ ಮನ್ಮಥನೂ, ಸಂಪತ್ತಿನಲ್ಲಿ ಕುಬೇರನೂ, ವೈಭವದಲ್ಲಿ ದೇವೇಂದ್ರನೂ, ಗಾಂಭೀರ್ಯದಲ್ಲಿ ಸಮುದ್ರನೂ, ಪರಾಕ್ರಮದಲ್ಲಿ ಅರ್ಜುನನೂ ಎನಿಸಿಕೊಂಡಿರುವ ಬಿಜ್ಜಳರಾಜನು ಅದರಲ್ಲಿರುತ್ತಿದ್ದನು. ಆ ಅರಮನೆಯನ್ನು ನೋಡಿಕೊಂಡು ಮುಂದೆಬರುವಲ್ಲಿ ಭಕ್ತಿಯ ತವ್ಮನೆಯಂತೆಯೂ, ಮುಕ್ತಿಶ್ರೀಯ ವಾಸಸ್ಥಲದಂತೆಯೂ, ಶುಭ್ರವರ್ಣದ ಉಪ್ಪರಿಗೆಯಿಂದ ಕೈಲಾಸಪರ್ವತದಂತೆಯೂ, ಶೋಭಿಸುತ್ತಿರುವ ಬಸವರಸನರಮನೆಯನ್ನು ಕಂಡು ಹೊರಬಾಗಿಲಬಳಿಗೆ

ಹೋದರು. ಅಷ್ಟರಲ್ಲಿ ಹಡಪದಪ್ಪಣ್ಣನು ನೋಡಿ ಥಟ್ಟನೆ ಒಳಗೆಹೋಗಿ ಗಣಸಮೂಹದೊಡನೆ ಶಿವಪೂಜೆಯನ್ನು ಮಾಡುತ್ತ ಕುಳಿತಿರುವ ಬಸವರಸನ ಬಳಿಯಲ್ಲಿ ನಿಂತು, ಅಪೂರ್ವರಾದ ಜಂಗಮರಿಬ್ಬರು ಬಂದು ತಲೆಬಾಗಿಲಲ್ಲಿ ನಿಂತಿರುವರೆಂದು ವಿಜ್ಞಾಪಿಸಿದನು. ಒಳಗೆ ಬರಮಾಡೆಂದು ಬೆಸಸಲು, ಹಿಂದಿರುಗಿ ಬಂದು, ಸ್ವಾಮಿ ಒಳಗೆ ಚಿತ್ತೈಸಬೇಕು; ನಿಮ್ಮ ಮಗನಾದ ಬಸವೇಶನು ಅತಿ ವಿಶ್ವಾಸದಿಂದ ತಮ್ಮ ಪಾದವನ್ನೇ ನಂಬಿಕೊಂಡಿರುವನು; ಆತನನ್ನು ಪರಿಪಾಲಿಸಬೇಕು; ಎಂದು ಶ್ರುತಪಡಿಸಿದನು. ಆಗ ಪ್ರಭುವು, ಅರಮನೆಯನ್ನು ನಾವು ಪ್ರವೇಶಿಸುವುದಿಲ್ಲವೆಂದು ನುಡಿದನು. ಅಪ್ಪಣ್ಣನು ಈ ಸಂಗತಿಯನ್ನು ಬಸವೇಶನಲ್ಲಿ ಅರಿಕೆ ಮಾಡಿದನು. ಅಷ್ಟರಲ್ಲಿ ಚೆನ್ನಬಸವೇಶನಿಗೆ ಅರಿವುಂಟಾಗಲು, ಥಟ್ಟನೆದ್ದು, ಬಸವೇಶ್ವರನ ಬಳಿಗೆ ಬಂದು—ಎಲೆ ಹುಚ್ಚಾ! ಅಲ್ಲಮಪ್ರಭುವೂ ಸಿದ್ಧರಾಮೇಶ್ವರನೂ ನಿನ್ನ ಮನೆಯ ಬಾಗಿಲಲ್ಲಿ ಬಂದು ನಿಂತಿರುವಾಗ ನೀನು ಹೀಗೆ ಮತ್ತನಾಗಿ ಒಳಗೆ ಕುಳಿತಿರಬಹುದೆ? ಎಂದನು. ಆಗ ಬಸವಣ್ಣನು ಧೈರ್ಯಗೆಟ್ಟು, ಕಗ್ಗನೆ ಕಸಿದುಹೋಗಿ, ಕಂಗೆಟ್ಟು, ತೊಳಲಿ, ಒಳಲಿ, ಇನ್ನೇನುಗತಿ! ಯೆಂದು ಚೆನ್ನಬಸವೇಶನ ಅಡಿದಾವರೆಗೆ ಬಿದ್ದು ಮರುಗಿದನು. ಆಗ ಚೆನ್ನಬಸವೇಶನು—ಅಯ್ಯಾ! ಹೆದರಬೇಡ; ನಿನ್ನ ಭಕ್ತಿಗಾಗಿಯೇ ಪ್ರೀತಿಸಿ ಪ್ರಭುವು ದಯೆಮಾಡಿರುವನು; ಆದುಕಾರಣ, ಅವನು ಒಳಗೆ ಬಂದೆ ಹೋಗುವುದಿಲ್ಲ; ಅವನನ್ನು ನಾನು ಕರೆದುಕೊಂಡು ಬರುತ್ತೇನೆ ಎಂದು ಪೇಳಿ, ಭರವಸೆಗೊಟ್ಟು, ಸಮಾಧಾನಪಡಿಸಿ, ನಾನಾಗಣಂಗಳನ್ನೆಲ್ಲ ಕರೆದುಕೊಂಡು ಪ್ರಭುವಿನ ಒಳಗೆ ಹೋಗಿ, ಭಕ್ತಿಸಂಧಾನದಿಂದಾತನನ್ನು ಬಲಿಸಿ, ಬಸವರಸನ ಮನೆಗೆ ಕರೆದುಕೊಂಡು ಬಂದನು. ಒಳಕ ಬಸವರಸನು ಸಿದ್ಧಮಾಡಿಟ್ಟ ಉನ್ನತಪೀಠದಲ್ಲಿ ಪ್ರಭುವನ್ನು ಕುಳ್ಳಿರಿಸಿ, ಅರ್ಘ್ಯಪಾದ್ಯಾದಿಗಳಿಂದರ್ಚಿಸಿ, ಸಂತೋಷಪಡಿಸಿ ಕೊಂಡಾಡಿದನು. ಆಗ ಪ್ರಭುವು ಮುಂದೆ ನಿಂತಿರುವ ಸಕಲ ಗಣಂಗಳನ್ನೂ ನೋಡಿ ಶಿವಾನುಭವಪ್ರಸಂಗದಿಂದ ಅವರ ಮನಸ್ಸಿನ ಸಂಶಯವನ್ನೆಲ್ಲ ತೊಲಗಿಸಿ ಸಂತೋಷಗೊಳಿಸಿದನು. ಎಂಬಿಲ್ಲಿಗೆ ಐಂಭತ್ತನೆ ಅಧ್ಯಾಯವು ಸಂಪೂರ್ಣವು.

ಐಂದನೆಯ ಕಾಂಡವು ಮುಗಿದುದು.

೨ನೆ ಕಾಂಡ.



೧ನೆ ಅಧ್ಯಾಯವು.

ಶೈವಸೃಷ್ಟಿಕ್ರಮಬೋಧೆ.

ಬಳಿಕ ಅಲ್ಲಮಪ್ರಭುವು ನಸುನಗುತ್ತ ಬಸವೇಶನನ್ನು ಕುರಿತು—ಚೆನ್ನಬಸವೇಶನ ಮನೆಗೆ ಹೋಗುವ ನಡೆಯಿರೆಂದು ಹೇಳಿ, ಅಲ್ಲಿದ್ದ ಶಿವಗಣಂಗಳೆಲ್ಲರನ್ನೂ ಕೂಡಿಕೊಂಡು ಬಂದು, ಚೆನ್ನಬಸವೇಶನರಮನೆಯ ಹೊರಬಾಗಿಲ ಚೆಲ್ವಿಕೆಯನ್ನು ನೋಡಿ ಸಂತೋಷಪಟ್ಟು, ಪಕ್ಕದಲ್ಲಿ ಶೋಭಿಸುತ್ತಿದ್ದ ಸಭಾಮಂಟಪವನ್ನು ತೋರಿಸಲು, ಎಲ್ಲರ ಸಮೇತನಾಗಿ ಅಲ್ಲಿ ಕುಳಿತುಕೊಂಡನು, ಚೆನ್ನಬಸವೇಶನನ್ನು ಕುರಿತು—ಇದೇನಯ್ಯಾ ! ನಮ್ಮನ್ನು ಕರೆತಂದು ಅಂತಃಪುರಕ್ಕೆ ಕರೆದುಕೊಂಡು ಹೋಗದೆ ಇಲ್ಲೇ ಕುಳ್ಳಿರಿಸಿದೆ ? ಎಂದು ಪ್ರಭುರಾಯನು ಕೇಳಿದನು. ಚೆನ್ನಬಸವೇಶನಾದರೊ ನಸುನಗುತ್ತ, ಎಲೈ ಜಗತ್ಪವಿತ್ರನೇ ! ಷಟ್ಸ್ಥಲತತ್ವಾರ್ಥವನ್ನು ಹೇಳಿದವರ ಹೊರತಾಗಿ ಇತರರನ್ನು ಒಳಗೆ ಬಿಡುವುದಿಲ್ಲವೆಂಬ ಕಟ್ಟಾಗಿರುವುದು. ತನ್ನೊಡನೆ ಒಂದಿರುವ ಸಿದ್ಧರಾಮಯ್ಯನಿಗೆ ಶರೀರದಲ್ಲಿ ಇಷ್ಟಲಿಂಗಧಾರಣೆಯೇ ಇಲ್ಲ. ಇಂಥ ಲಿಂಗವಿಹೀನರನ್ನು ಲಿಂಗಾಂಗಿಗಳು ತಮ್ಮ ಮನೆಯೊಳಗೆ ಬರಗೊಡಿಸರು. ಅದುಕಾರಣವೇ ಇಲ್ಲಿ ಕುಳಿತು ಕೊಳ್ಳಬೇಕಾದಿತೆಂದು ನುಡಿದನು. ಈ ಮಾತನ್ನು ಸಿದ್ಧರಾಮೇಶನು ಕೇಳಿ, ಎಲೈ ಚೆನ್ನಬಸವಣ್ಣನೇ ! ನಾನು ಪ್ರಾಣಲಿಂಗಿಯಾಗಿರುವಾಗ ಇನ್ನು ಇಷ್ಟಲಿಂಗವೇತಕ್ಕೆ ? ಎಂದನು. ಆಗ ಚೆನ್ನಬಸವೇಶನು ನಕ್ಕು, ಅಯ್ಯಾ ! ನೀನು ಅದು ಹೇಗೆ ಪ್ರಾಣಲಿಂಗಿಯಾದೆ ? ಇದು ಬರಿಯ ಭ್ರಾಂತಿಯೇಸರಿ. ಯಾವನು ಸ್ಥೂಲಸೂಕ್ಷ್ಮಕಾರಣವೆಂಬ ಶರೀರತ್ರಯಗಳನ್ನು ಧರಿಸಿರುವನೋ ಅವನ ತ್ರಿವಿಧದೇಹದಲ್ಲೂ ಇಷ್ಟಪ್ರಾಣಭಾವಲಿಂಗಗಳು ನೆಲಸಿರಲೇಬೇಕು. ನಿನ್ನ ಸ್ಥೂಲಕರೀರದಲ್ಲೇ ಇಷ್ಟಲಿಂಗವಿಲ್ಲದ ಬಳಿಕ ಇನ್ನು ಉಳಿದೆರಡು ದೇಹಗಳಲ್ಲಿ ಎರಡು ವಿಧದ ಲಿಂಗಗಳು ನೆಲಸಿರುವುದು ಹೇಗೆ ? ಎಂದನು. ಆಗ ಸಿದ್ಧರಾಮೇಶನು—

ಮೂರುವಿಧದ ಶರೀರವುಳ್ಳವರಿಗೆ ಹಾಗೆ ತ್ರಿವಿಧಲಿಂಗಸಂಗವಿರಬೇಕಾದುದು ಸಹಜವೇ ಸರಿ. ನನಗಾದರೊ ಎಲ್ಲರಂತೆ ಮೂರು ದೇಹಗಳಿಲ್ಲ. ನನ್ನ ದೇಹವೇ ಪೀಠ, ಪ್ರಾಣವೇ ಲಿಂಗವೆಂದು ನುಡಿದನು. ಅದಕ್ಕೆ ಚೆನ್ನ ಬಸವೇಶನು—ಹಾಗಾದಬಳಿಕ ಇಷ್ಟಲಿಂಗಧಾರಣವಿಲ್ಲದವನು ಭವಿಯೇ ಸರಿ. ಅವನು ಶೈವನೆನಿಸಿಕೊಳ್ಳುವನೇ ಹೊರತು ವೀರಶೈವನಲ್ಲವೆಂದನು. ಸಿದ್ಧರಾಮೇಶನು—ಶೈವವೇ ಇತರ ಸಕಲ ವಿಧದ ಶೈವಕ್ಕೂ ಆದಿಯಾದುದು. ಆ ಮಹಾಶೈವದಿಂದಲೇ ಈ ವೀರಶೈವ ಮೊದಲಾದ ಶೈವಪ್ರಭೇದಗಳೆಲ್ಲವೂ ಹುಟ್ಟಿರುವುವು, ಎನಲು, ಅದಕ್ಕೆ ಚೆನ್ನಬಸವೇಶನು—ಶೈವದ ಆದಿಸೃಷ್ಟಿಯೇ ಬೇರೆ; ವೀರಶೈವಸೃಷ್ಟಿಯೇ ಬೇರೆ, ಎಂದನು. ಹಾಗಾದರೆ ಆ ಶೈವದ ವಿಧಿಯನ್ನು ನನಗೆ ವಿಸ್ತರಿಸಿ ಹೇಳೆಂದು ಸಿದ್ಧರಾಮೇಶನು ಕೇಳಲು, ಚೆನ್ನಬಸವೇಶನು ಶೈವಸೃಷ್ಟಿಕ್ರಮವನ್ನು ಪ್ರಕಟಿಸಿದನದೆಂತೆಂದರೆ— ಅತ್ಯತಿಷ್ಠದ್ದಶಾಂಗುಲನಾದ ಆ ಪರಶಿವನು ನಾದ ಬಿಂದುಕಳಾದಿಗಳಿಗೆ ದೂರನಾಗಿ ಸರ್ವಶೂನ್ಯನಾಗಿ ಪರಮಾತ್ಮ, ಪರಂಜ್ಯೋತಿ, ಪರಮಕಾರಣ, ನಿರವಯವ, ನಿತ್ಯ, ಸಿದ್ಧಸಮ, ನಿಶ್ಶೂನ್ಯ, ನಿರಾಕಾರನೆಂಬ ಹೆಸರಿನಿಂದ ನಿಜಸುಖಸಮಾಧಿಯಲ್ಲಿರುತ್ತ ಎಚ್ಚರುಗೊಂಡಾಗ ಚಿತ್ತದಲ್ಲಿ ಬಂದು ವಿಧವ ಪ್ರವೃತ್ತಿಯುಂಟಾಗಲು, ಚಿತ್ಪೀಠಿಕ್ಷಿಕ್ತಿಯಾಗಿ ಆ ನಿರಂಜನಲಿಂಗಚಿಚ್ಛಕ್ತಿಗಳ ಯೋಗದಿಂದ ಮಹಾಲಿಂಗವುದಿಸಿತು. ಆ ಮಹಾಲಿಂಗಪರಾಶಕ್ತಿಗಳ ಯೋಗದಿಂದ ಸದಾಶಿವನುದಿಸಿದನು. ಆ ಸದಾಶಿವ ಆದಿಶಕ್ತಿಗಳ ಯೋಗದಿಂದ ಈಶ್ವರನುದಿಸಿದನು. ಆ ಈಶ್ವರ ಇಚ್ಛಾಶಕ್ತಿಗಳ ಮೇಳನದಿಂದ ಮಹೇಶ್ವರನಾವಿರ್ಭವಿಸಿದನು. ಆ ಮಹೇಶ್ವರ ಜ್ಞಾನಶಕ್ತಿಗಳ ಕೂಟದಿಂದಲೇ ಸಕಲ ಸೃಷ್ಟಿಯೂ ಆಯಿತು. ಹೇಗೆಂದರೆ— ಆ ಮಹೇಶ್ವರನ ವಿರಾಟ್ರೂಪವನ್ನು ಧರಿಸಲಾಗಿ, ಆತನ ಪಾದ, ಪಿರಡು, ಪುಂಡಿ, ಮೊಣಕಾಲು, ತೊಡೆ, ಕುಂಡಿ, ನಡು, ಎಂಬ ಸಪ್ತಸ್ಥಾನಗಳಿಂದ ಕ್ರಮವಾಗಿ ಪಾತಾಳ ಮಹಾತಳ ರಸಾತಳ ತಲಾತಲ ಸುತಲ ವಿತಲ ಅತಲವೆಂಬ ಏಳು ಅಧೋಲೋಕಗಳೂ, ಹೊಕ್ಕುಳು, ಹೊಟ್ಟೆ, ಭುಜ, ಎದೆ, ಕತ್ತು, ಮುಖ, ತಲೆಯೆಂಬ ಏಳು ಸ್ಥಾನಗಳಿಂದ ಕ್ರಮವಾಗಿ ಭೂಲೋಕ ಭುವರ್ಲೋಕ ಸುವರ್ಲೋಕ


ಮಹೋಲೋಕ ಜನರ್ಲೋಕ ತಪೋಲೋಕ ಸತ್ಯಲೋಕವೆಂಬ ಏಳು ಊರ್ಧ್ವಲೋಕಗಳೂ, ಆತನ ದೇಹಕಾಂತಿಯಿಂದ ಸಪ್ತಸಮುದ್ರಗಳೂ, ಕಿವಿಯಿಂದ ದಶದಿಕ್ಕುಗಳೂ, ಪಾದದ ಗಿಣ್ಣುಗಳಿಂದ ಸಕಲ ಪರ್ವತಗಳೂ ಮುಖದಿಂದ ರುದ್ರನೂ, ಎಡದೋಳಿನಿಂದ ವಿಷ್ಣುವೂ, ಬಲತೊಡೆಯಿಂದ ಬ್ರಹ್ಮನೂ, ಪಾದದಿಂದ ದೇವೇಂದ್ರನೂ, ಮನಸ್ಸಿನಿಂದ ಚಂದ್ರನೂ, ಕಣ್ಣಿನಿಂದ ಸೂರ್ಯನೂ, ಉಗುರಿನಿಂದ ದ್ವಾದಶಾದಿತ್ಯರೂ, ಹೆಕ್ಕತ್ತಿನಲ್ಲಿ ಸಪ್ತರ್ಷಿಗಳೂ, ಎದೆಯಲ್ಲಿ ನಕ್ಷತ್ರಗಳೂ, ಹಣೆಯಲ್ಲಿ ಏಕಾದಶರುದ್ರರೂ, ಬೆರಲುಗಳಿಂದ ನವಬ್ರಹ್ಮರುಗಳೂ, ಎರಡು ಪಕ್ಕೆಗಳಲ್ಲಿ ೧೪ ಮಂದಿ ಇಂದ್ರರುಗಳೂ, ಬೆರಲಸಂದಿಗಳಿಂದ ನಾನಾಶಕ್ತಿಯರುಗಳೂ, ಅಂಗೈಯಿಂದ ೧೪ ಮಂದಿ ಮನುಗಳೂ, ಆತನ ವಾಕ್ಕಿನಿಂದ ವೇದಾಗಮಪುರಾಣಶಾಸ್ತ್ರಗಳೂ, ಆತನ ಸಂತೋಷಬಾಷ್ಪದಿಂದ ಸಕಲ ನದಿಗಳೂ, ಆತನ ತಪಸ್ಸಿನಿಂದ ಗರುಡ ಗಾಂಧರ್ವ ಕಿನ್ನರ ಕಿಂಪುರುಷ ಸಿದ್ಧವಿದ್ಯಾಧರಾದಿ ೫೫ ಕೋಟಿ ದೇವತೆಗಳೂ, ಆತನ ರೋಮಕೂಪಗಳಿಂದ ೬೬ ಕೋಟಿ ರಾಕ್ಷಸರುಗಳೂ, ಆತನ ಅವಯವದಿಂದ ನಾಗಕನ್ನಿಕೆಯರು ಮೊವಲಾದ ಇತರ ನಾನಾಜನಗಳೂ, ಆತನ ಕಪೋಲಗಳಿಂದ ಅಷ್ಟದಿಕ್ಪಾಲಕರೂ ಅಷ್ಟವಸುಗಳೂ, ಪಾದದ ಬೆರಲುಗಳಿಂದ ಮೃಗಪಕ್ಷಿಜಲಚರಾದಿಗಳೂ, ಆ ಬೆರಲುಗಳ ಕೆಳಭಾಗದಿಂದ ಮರ ಬಳ್ಳಿ ಮೊದಲಾದುವುಗಳೂ, ಆತನ ಕೌಂಕುಳಿನಿಂದ ಸಕಲ ವಿಧದ ಪಶುಗಳೂ, ಸಹ ಹುಟ್ಟಿರುವುವು. ಅದುಕಾರಣ, ಈ ಚರಾಚರಾತ್ಮಕವಾದ ಪ್ರಪಂಚದ ಉತ್ಪತ್ತಿಗೆಲ್ಲ ಆ ಮಹೇಶ್ವರನೇ ಕಾರಣನಾಗಿರುವನು. ಬಳಿಕ ಪ್ರಳಯಕಾಲದಲ್ಲಿ ಆ ಮಹೇಶ್ವರನೇ ಗಣಸಮೂಹಮಧ್ಯದಲ್ಲಿ ಲೀಲೆಯಿಂದ ಪಟುತರವಾದ ತಾಂಡವವನ್ನು ಮಾಡಿ ಪ್ರಳಯವನ್ನುಂಟುಮಾಡಿದನು. ಆವನಿಂದುತ್ಪನ್ನರಾಗಿದ್ದ ವಿಷ್ಣು ಬ್ರಹ್ಮಾದಿಗಳೂ ಗಿರಿ ನದೀ ತರು ಖಗಮೃಗಾದಿ ಪ್ರಪಂಚವೆಲ್ಲವೂ ಭೀಕರವಾದ ಅವನ ಮಹಾನಾಟ್ಯದಿಂದ ನಷ್ಟವಾಗಿ ನಿರಾಕಾರವನ್ನೈದಿದುವು. ಸಮುದ್ರದಲ್ಲಿ ನೀರಿನ ಮಸಕದಿಂದುಂಟಾಗಿದ್ದ ನೊರೆ ಗುಳ್ಳೆಗಳೆಲ್ಲವೂ ತೆರೆಯ ಹೊಡೆತದಿಂದ ನಷ್ಟವಾಗುವಹಾಗೆ ಮಹೇಶನಿಂದುತ್ಪನ್ನವಾದ ಈ ಸ್ಥೂಲಪ್ರಪಂಚವೆಲ್ಲವೂ ಅವನ ಗಿರ್ರನೆ

ತಿರುಗುವಿಕೆಯ ರಭಸದಿಂದುಂಟಾದ ವಾಯುವಿನ ಪ್ರಹತಿಯಿಂದ ಅಳಿದು ಎಲ್ಲವೂ ಅವನಲ್ಲೇ ಐಕ್ಯವಾಯಿತು. ಹೀಗೆ ಆ ಪರಶಿವನು ಕಲ್ಪಾಂತದಲ್ಲಿ ತಾಂಡವಾಡಂಬರವನ್ನು ತೋರಿಸಿದುದರಿಂದ ಲೋಕವೆಲ್ಲವೂ ವಿಲಯವಾಗಲು, ಬಳಿಕ ಆ ಮಹೇಶನು ಸ್ಮಶಾನರುದ್ರನಾಗಿ ವಿಕಪಾದಲೀಲೆಯನ್ನು ಧರಿಸಿ ಸಂತೋಷದಿಂದ ವಿಹರಿಸಿದನು. ಎಂದು ಚೆನ್ನಬಸವೇಶನು ಸಿದ್ಧರಾಮೇಶ್ವರನಿಗೆ ಹೇಳಿದನೆಂಬಲ್ಲಿಗೆ ಒಂದನೆ ಅಧ್ಯಾಯವು ಮುಗಿದುದು.



೨ ನೆ ಅಧ್ಯಾಯವು.

ಮ ಹಾ ಸೃ ಷ್ಟಿಕ್ರ ಮ.



ಬಳಿಕ ಸಿದ್ಧರಾಮೇಶನು ಜಗತ್ತು ಉದಿಸಿದ ರೀತಿಯು ಹೇಗೆಂದು ಪುನಃ ಬಿಸಗೊಳ್ಳಲು, ಚೆನ್ನಬಸವೇಶನು ಹೇಳತೊಡಗಿದನೆಂತೆಂದರೆ—ಆ ಮಹೇಶ್ವರನಪ್ಪಣೆಯಿಂದ ಮೂಲಪ್ರಕೃತಿಯು ವಿಕಾರವನ್ನು ಹೊಂದಲು ಅದರಿಂದ ಮಹತ್ತುದಿಸಿತು. ಆ ಮಹತ್ತಿನಿಂದ ಅಹಂಕಾರವೂ ಅದರಿಂದ ಸತ್ವರಜಸ್ತಮಸ್ಸೆಂಬ ತ್ರಿವಿಧಗುಣಗಳೂ ವೈಕಾರಿಕವೂ ಉದಿಸಿದುವು. ಈ ಗುಣಗಳಲ್ಲಿ ತಮೋಗುಣವನ್ನನುಕರಿಸಿ ಮಹೇಶ್ವರನ ಹಣೆಯಿಂದ ರುದ್ರನು ಹುಟ್ಟಿದನು. ಆ ಮಹೇಶ್ವರನ ಎಡಭುಜದಿಂದ ಸಾತ್ವಿಕಗುಣವನ್ನನುಕರಿಸಿ ವಿಷ್ಣುವು ಹುಟ್ಟಿದನು. ಬಲಭುಜದಿಂದ ರಜೋಗುಣವನ್ನನುಸರಿಸಿ ಬ್ರಹ್ಮನು ಹುಟ್ಟಿದನು. ವೈಕಾರಿಕೆಯಿಂದ ಶಬ್ದಸ್ಪರ್ಶರೂಪರಸಗಂಧವೆಂಬ ೫ ಗುಣಗಳೂ; ಅವುಗಳಿಂದ ಆಕಾಶ ವಾಯು ಅಗ್ನಿ ಜಲ ಭೂಮಿ ಯೆಂಬ ೫ ಭೂತಗಳೂ ಸಹ ಹುಟ್ಟಿದುವು. ಶಿವಾಜ್ಞೆಯಿಂದ ಆ ವಾಯುವು ಚಲಿಸಿತು. ಆಕಾಶವು ತೆರಪುಗೊಂಡಿತು. ಅಗ್ನಿಯು ವಾಯುಸಂಗದಿಂದ ಜಲವನ್ನು ಕೂಡಲು, ಆ ಜಲವು ಕುದಿಕುದಿದು ಭೂಮಿಯೊಡನೆ ಸೇರಲು, ಆ ಭೂಮಿಯೂ ಜಲವೂ ಸಹ ತಪ್ತವಾಗಿ ಹಿರಣ್ಮಯವಾದ ತೇಜಸ್ಸಿನಿಂದ ಬಂದು ಅಂಡವಾಗಿ (ಗೊಳವು) ಪರಿಣಮಿಸಿತು.

ಆ ಅಂಡವು ೫೦ ಕೋಟಿ ಯೋಜನದ ವಿಸ್ತಾರವುಳ್ಳುದಾಯಿತು. ಅದಕ್ಕೆ ಹತ್ತರಷ್ಟು ಭಾಗದ ಜಲವು ಆ ಅಂಡವನ್ನು ಆವರಿಸಿಕೊಂಡಿರುವುದು. ಆ ಜಲಕ್ಕೆ ಹತ್ತರಷ್ಟು ಭಾಗದ ಅಗ್ನಿಯು ಆ ಜಲವನ್ನಾವರಿಸಿಕೊಂಡಿರುವುದು. ಅಗ್ನಿಗೆ ಹತ್ತರಷ್ಟು ಭಾಗದ ವಾಯುವು ಅದನ್ನು ಮುಸುಕಿಕೊಂಡಿರುವುದು. ಅದಕ್ಕೆ ಹತ್ತರಷ್ಟು ಭಾಗದ ಆಕಾಶವು ಅದನ್ನು ಸುತ್ತಿಕೊಂಡಿರುವುದು. ಅದನ್ನು ಅಹಂಕಾರವು ಒಳಸಿಕೊಂಡಿರುವುದು. ಅಹಂಕಾರವನ್ನು ಮಹತ್ತು ಸುತ್ತಿಕೊಂಡಿರುವುದು. ಆ ಮಹತ್ತನ್ನು ಅವ್ಯಕ್ತವು ಸುತ್ತುವರಿದಿರುವುದು. ಹೀಗೆ ಅಂಡವು ಶಿವಾಜ್ಞೆಯಿಂದ ಸಪ್ತಾವರಣವುಳ್ಳುದಾಗಿರುವುದು ಇದನ್ನು ಬ್ರಹ್ಮನು ಹೊಕ್ಕು ಅನಿಮಿ ಬಡೆಯಲಾಗಿ ಬ್ರಹ್ಮಾಂಡವೆಂಬ ಹೆಸರಿದಕ್ಕುಂಟಾಯಿತು. ಬಳಿಕಾ ಮಹೇಶ್ವರನು ತನ್ನ ಹಣೆಯಿಂದ ಹುಟ್ಟಿದ ರುದ್ರನನ್ನೇ ತನ್ನ ಸ್ವರೂಪನೆಂದು ತಿಳಿದು, ಸೃಷ್ಟಿ ಸ್ಥಿತಿ ಪ್ರಳಯಗಳನ್ನೆಲ್ಲ ಮಾಡುವ ಸಾಮರ್ಥ್ಯವು ಈತನಿಗಿರುವುದೆಂದು ಸಂತುಷ್ಟನಾಗಿ, ಇವನೇ ನಿಮ್ಮಿಬ್ಬರಿಗೂ ಸ್ವಾಮಿ ಯೆಂದು ವಿಷ್ಣು ಬ್ರಹ್ಮರೊಡನೆ ಹೇಳಿ, ರುದ್ರನಿಗೆ ಅಚ್ಯುತವಾದ ಪಟ್ಟವನ್ನು ಕಟ್ಟಿ, ತಾನು ಇಚ್ಛಾಕ್ರಿಯಾದಿ ಪಂಚಶಕ್ತಿಗಳೊಡನೆ ಕೂಡಿ, ಪರಶಿವ ಸದಾಶಿವಾದಿ ಪಂಚನಾಮಗಳನ್ನು ಧರಿಸಿದನು. ಆ ಪರಶಿವ ಶಿವರೀರ್ವರೂ ನಿಷ್ಕಲತತ್ತ್ವರು. ಸದಾಶಿವ ಈಶ್ವರರೀರ್ವರೂ ಸಕಲನಿಷ್ಕಲರು. ಮಹೇಶ್ವರ ಮತ್ತೂ ಆದಿರುದ್ರರೇ ಸಕಲ ತತ್ತ್ವರು. ಸಕಲನಾದ ಮಹೇಶ್ವರನು ಅಷ್ಟಮೂರ್ತಿಗಳನ್ನು ಧರಿಸಿ, ಸೋಮಶೇಖರಾದಿ ೫೫ ಲೀಲೆಗಳನ್ನು ಹೊಂದಿದನು, ಎಂದು ಹೇಳಲು; ಆ ಲೀಲೆಗಳನ್ನೆಲ್ಲ ವಿಸ್ತರಿಸಿ ನನಗೆ ಬೋಧಿಸಬೇಕೆಂದು ಸಿದ್ಧರಾಮೇಶನು ಪ್ರಾರ್ಥಿಸಲು, ಹೇಳತೊಡಗಿದನೆಂತೆಂದರೆ— ಕ್ರಿಯಾಶಕ್ತಿಯಿಂದ ಕೂಡಿ ಪಂಚವಿಂಶತಿ ಲೀಲೆಗಳನ್ನಾಂತ ಆ ಮಹಾರುದ್ರನು ಆದಿಯಲ್ಲಿ ಬ್ರಹ್ಮನನ್ನು ಕರೆದು ಜಗತ್ಸೃಷ್ಟಿಯನ್ನು ಮಾಡೆಂದು ನಿರೂಪಿಸಿದನು. ಅತನಾದರೂ ಸೃಜಿಸುವ ವಿಧಾನವನ್ನರಿಯದೆ ಅದನ್ನು ತಿಳಿದುಕೊಳ್ಳುವುದಕ್ಕಾಗಿ ಶಿವನನ್ನು ಕುರಿತು ತಪಸ್ಸನ್ನು ಮಾಡಿದನು. ಆಗ ಪರಶಿವನು ಈ ತಪಸ್ಸಿಗೆ ಮೆಚ್ಚಿ ಪ್ರತ್ಯಕ್ಷನಾಗಿ, ಯಾವ ವರವು ಬೇಕು? ಬೇಡೆಂದು ಬ್ರಹ್ಮನನ್ನು ಕೇಳಲು, ಸ್ವಾಮಿ! ನನ್ನಿಂದ ಲೋಕಸೃಷ್ಟಿ

ಯ ಕಾರ್ಯವನ್ನು ಮಾಡುವುದಸಾಧ್ಯ, ಅದಕ್ಕಾಗಿ ನನಗೆ ಪುತ್ರವರವನ್ನು ದಯೆಪಾಲಿಸಬೇಕೆಂದು ಬೇಡಿದನು. ಆಗ ಸನಕ ಸನಂದನ ಸನತ್ಕು ಮಾರ ಸನತ್ಸುಜಾತಾದಿಮಾನಸಪುತ್ರರನ್ನು ದಯೆಪಾಲಿಸಿ ಅದೃಶ್ಯನಾದನು. ಬ್ರಹ್ಮನು ಆ ಮಾನಸಪುತ್ರರನ್ನು ಕರೆದು ಸೃಷ್ಟಿಕಾರ್ಯವನ್ನು ನಡಸಿರಿಂದು ಅವರಿಗೆ ಅಪ್ಪಣೆಮಾಡಿದನು. ಅವರಾದರೊ ನಮ್ಮಿಂದ ಇದು ಅಸಾಧ್ಯ, ಸೃಷ್ಟಿಕೌಶಲ್ಯವು ನಮಗೆ ತಿಳಿಯದು, ಶಿವನ ವರದಿಂದ ನಾವು ನಿನಗೆ ಮಕ್ಕಳಾಗಿ, ಸಕಲ ರಹಸ್ಯವನ್ನೂ ನಿನ್ನಿಂದಲೇ ತಿಳಿದು. ಸಂಸಾರಬಂಧದಲ್ಲಿ ಹೇಗೆ ಸಿಕ್ಕಿ ಬಾಳುನೆವು ? ಎಂದು ಹೇಳಿ ತಿರಸ್ಕರಿಸಿ, ತಪಸ್ಸನ್ನಾಚರಿಸುವುದಕ್ಕಾಗಿ ವನಾಂತರಕ್ಕೆ ತೆರಳಿದರು. ಇತ್ತ ಬ್ರಹ್ಮನು ಮತ್ತೆ ದಿವ್ಯಸಪಸ್ರ ವರ್ಷ ತಪಸ್ಸನ್ನಾಚರಿಸಿ, ಶಿವನನ್ನು ಮೆಚ್ಚಿಸಿದನು. ಶಿವನು ಪ್ರತ್ಯಕ್ಷನಾಗಿ ಮತ್ತೇನೆಂದು ಕೇಳಲು, ಸ್ವಾಮಿ ತಾವು ದಯೆಪಾಲಿಸಿದ ಮಕ್ಕಳು ತಪಸ್ಸಿಗೆ ಹೊರಟುಹೋದರು, ನಿನ್ನಿಂದ ಸೃಷ್ಟಿಕಾರ್ಯವು ನಡೆಯದು, ಎಂದು ವಿಜ್ಞಾಪಿಸಿದನು. ಅದಕ್ಕೆ ಶಿವನು ನಿನ್ನ ಶರೀರದಿಂದಲೇ ಮಕ್ಕಳನ್ನು ಪಡೆಯೆಂದು ವರವನ್ನಿತ್ತು ಅಂತರ್ಹಿತನಾದನು. ಆ ಶಿವಪ್ರಸಾದನಿಂದ ಇತ್ತ ಬ್ರಹ್ಮನ ಮನಸ್ಸಿನಿಂದ ಮರೀಚಿಯೂ, ಕಣ್ಣಿನಿಂದ ಅತ್ರಿಯೂ, ಮುಖದಿಂದ ಅಂಗೀರಸನೂ, ಕಿವಿಯಿಂದ ಪುಲಸ್ತ್ಯನೂ, ಹೊಕ್ಕುಳಿಂದ ಪುಲಹನೂ, ಕೈಯಿಂದ ಕ್ರತುವೂ, ಚರ್ಮದಿಂದ ಭೃಗುವೂ, ಪ್ರಾಣದಿಂದ ವಸಿಷ್ಠನೂ, ಅಂಗುಷ್ಠದಿಂದ ದಕ್ಷನೂ, ಹೀಗೆ ಈ ಬಂಧತ್ತು ಮಂದಿ ಬ್ರಹ್ಮರುಗಳು ಜನಿಸಿದರು. ಇವರನ್ನು ಮಕ್ಕಳನ್ನು ಪಡೆಯಬೇಕೆಂಬಾಸೆಯು ಬ್ರಹ್ಮನಿಗುಂಟಾಗಲು, ಅವನ ತೊಡೆಯಿಂದ ಸಾಧನೂ, ಬಲಗಡೆಯ ಮೊಲೆಯಿಂದ ಧರ್ಮನೂ, ಸಳಲಿನಿಂದ ಪಾಪಪುರುಷನೂ, ಪೊಟ್ಟೆಯಿಂದ ಹಗಲು ರಾತ್ರಿಗಳು ಗಾಯತ್ರಿ ಮೊದಲಾದ ಛಂದಸ್ಸುಗಳು ಸಕಲ ವೇದಕಾರ್ತ್ರಗಳು ಸಹ ಜನಿಸಿದುವು. ಬ್ರಹ್ಮನು ಈ ಮಕ್ಕಳೆಲ್ಲರನ್ನು ಕರೆದು ಜಗತ್ಸೃಷ್ಟಿಯನ್ನು ಮಾಡಿರೆಂದು ಹೇಳಲು, ಅವರೂ ಕೂಡ ನಮ್ಮಿಂದಾಗದೆಂದು ನುಡಿದರು. ಅವನ್ನು ಕೇಳಿ ಬ್ರಹ್ಮನು ಚಿಂತಾಮಗ್ನನಾಗಿ ಮನಸ್ಸಿನಲ್ಲಿ ಶಿವನ ಕ್ರಿಯಾಶಕ್ತಿಯನ್ನು ಕುರಿತು ಧ್ಯಾನಮಾಡಿ ಮೆಚ್ಚಿಸಿ, ಪ್ರತ್ಯಕ್ಷಮಾಡಿಕೊಂಡು,

ಭಯಭಕ್ತಿಭರಿತನಾಗಿ ಕೊಂಡಾಡಿ, ತಾಯೆ! ನೀನು ಪರಶಿವನೊಡನೆ ಬೆರೆದಿರುವವರೆಗೂ ನನಗೆ ಸೃಷ್ಟಿಕಾರ್ಯವು ಅಘಟಿತವಾಗಿರುವುದು. ಅದು ಕಾರಣ, ನೀನು ನನ್ನ ಮಗನಾದ ದಕ್ಷಬ್ರಹ್ಮನ ಹೊಟ್ಟೆಯಲ್ಲಿ ಹುಟ್ಟಿ ಶಿವನಿಗೆ ಹೆಂಡತಿಯಾದರೆ ಆಗ ನಿನ್ನಲ್ಲಿರುವ ಶಕ್ತಿಯು ಕೂಡ ಸ್ತ್ರೀಯರಾಗಿ ಜನಿಸುವರು. ಅವರ ದೆಸೆಯಿಂದ ನಾನೀಜಗತ್ಸೃಷ್ಟಿಕಾರ್ಯವನ್ನು ಸುಲಭನಾಗಿ ಮಾಡಿಕೊಳ್ಳುವೆನು. ಈ ವರವನ್ನು ತಾವು ದಯೆ ಪಾಲಿಸಬೇಕೆಂದು ಪ್ರಾರ್ಥಿಸಿದನು. ಹಾಗೇ ಆಗಲೆಂದು ಆ ಕ್ರಿಯಾಶಕ್ತಿಯು ವರವಿತ್ತುದಲ್ಲದೆ, ನಿನ್ನ ವರಶಕ್ತಿಯನ್ನು ಹೊರಗೆಡಹಿದರೆ ಅವಳು ಸರಸ್ವತಿಯೆಂಬ ಹೆಸರಿನಿಂದವತರಿಸುವಳು, ಅವಳೊಡನೆ ಕೂಡಿ ನೀನು ಜಗತ್ಸೃಷ್ಟಿಯನ್ನು ಮಾಡೆಂದು ಹೇಳಿ ಬಯಲಾದಳು. ಬ್ರಹ್ಮನು ತನ್ನ ಸತಿಯಾದ ಸರಸ್ವತಿಯೊಡನೆ ಕೂಡಿ ಸುಖದಿಂದಿರುತ್ತ ಶತರೂಪೆ ಸ್ವಾಯಂಭುವೆಂಬಿಬ್ಬರನ್ನು ಸೃಜಿಸಿ, ಅವರಿಬ್ಬರನ್ನೂ ದಂಪತಿಗಳನ್ನು ಮಾಡಿದನು. ಅವರ ಹೊಟ್ಟೆಯಲ್ಲಿ ಪ್ರಿಯವ್ರತ, ಉತ್ತಾನಪಾದ, (ಗಂಡು) ಆಕೂತಿ, ದೇವಹೂತಿ, ಪ್ರಸೂತಿ, (ಹೆಣ್ಣು) ಎಂಬೈದುಮಂದಿ ಮಕ್ಕಳು ದಿನಿದರು. ಅವರಲ್ಲಿ ಆಕೂತಿ ಯೆಂಬುವಳನ್ನು ರುಚಿಯೆಂಬ ಬ್ರಹ್ಮನೂ, ಪ್ರಸೂತಿಯನ್ನು ದಕ್ಷಬ್ರಹ್ಮನೂ, ದೇವಹೂತಿಯನ್ನು ಕರ್ದಮನೂ, ಪತ್ನಿಯನ್ನಾಗಿ ಮಾಡಿಕೊಂಡರು. ದಕ್ಷಬ್ರಹ್ಮನಿಗೆ ಆ ಪ್ರಸೂತಿಯೆಂಬುವಳ ಹೊಟ್ಟೆಯಲ್ಲಿ ಶಿವನ ಕ್ರಿಯಾಶಕ್ತಿಯು ದಾಕ್ಷಾಯಣಿಯೆಂಬ ಹೆಸರಿನಿಂದ ಜನಿಸಿದಳು. ಈ ದಾಕ್ಷಾಯಣಿಯನ್ನು ಶಿವನಿಗೆ ಕೊಡಬೇಕೆಂಬ ಇಷ್ಟದಿಂದ ದಕ್ಷಬ್ರಹ್ಮನು ಶಿವನನ್ನು ಕುರಿತು ತಪಸ್ಸುಮಾಡಿ ಮೆಚ್ಚಿಸಿ, ಮಹಾದೇವನೇ! ನೀನು ನನ್ನ ಮಗಳನ್ನು ವರಿಸಬೇಕೆಂದು ಬೇಡಿಕೊಂಡನು. ಹಾಗೇ ಆಗಲೆಂದು ಒಪ್ಪಿ, ಶಿವನು ದಾಕ್ಷಾಯಣಿಯನ್ನು ಮದುವೆ ಮಾಡಿಕೊಂಡು, ಮಹಾ ವೈಭವದಿಂದ ಕೈಲಾಸಪುರದ ಮಹಾಮಂದಿರದಲ್ಲಿ ಉಮಾಮಹೇಶ್ವರನಾಗಿ ಒಪ್ಪುತ್ತಿದ್ದನು. ಇಂತು ಪರಮಾನಂದನಿಧಿಯಾದ ಮಹೇಶ್ವರನು ಇರುತ್ತ, ಬ್ರಹ್ಮಾಂಡ ಭಾರವನ್ನೆಲ್ಲ ಕುಕ್ಷಿಯಲ್ಲಿ ಧರಿಸಿರುವ ನನ್ನನ್ನು ಹೊರುವವರು ಇನ್ನಾರೂ ಇಲ್ಲವಲ್ಲ! ಎಂದು ನೆನೆದು, ತನ್ನ ಹೃದಯದಲ್ಲಿದ್ದ ಸದ್ಧರ್ಮವನ್ನೇ ಸ್ಮರಿಸಲು, ಅದು ಪರಮತೇಜೋ

ಮೂರ್ತಿಯಾಗಿ ಬಂದು ನಮಸ್ಕರಿಸಿ, ಮುಂದೆ ನಿಂತಿತು. ಆಗ ಶಿವನು—ಎಲೈ ಸದ್ಧರ್ಮವೇ ! ನಿನ್ನನ್ನು ನಾನು ಧರಿಸಿರುವೆನು. ನೀನು ನನ್ನನ್ನು ವೃಷಭಾಕಾರದಿಂದ ಹೊತ್ತುಕೊಳ್ಳುವನಾಗು; ನಿನಗೂ ನನಗೂ ಭೇದವಿಲ್ಲವೆಂದು ನುಡಿದನು. ಆಗ ಆ ಸದ್ಧರ್ಮವು ವೃಷಭಾಕಾರವನ್ನು ಧರಿಸಿತು. ನಾಲ್ಕು ವೇದಗಳೇ ನಾಲ್ಕು ಪಾದಗಳಾದುವು. ಆರು ಶಾಸ್ತ್ರಗಳೇ ಷಟ್ಕರಣಗಳಾದುವು. ನಾದಬಿಂದುಕಲೆಗಳೇ ತ್ರಿವಿಧಶರೀರಗಳಾದುವು. ಆದಿ ಅನಾದಿಗಳೇ ಎರಡು ಕೊಂಬುಗಳಾದುವು. ಓಂಕಾರವೇ ಶಿರಸ್ಸಾಯಿತು. ಪಂಚಾಕ್ಷರಮಂತ್ರವೇ ಮುಖವಾಯಿತು. ಉಪನಿಷತ್ತೇ ಹಿಳಿಲಾಯಿತು. ಧರ್ಮಶಾಸ್ತ್ರಮಂತ್ರತೀರ್ಥಗಳು ರೋಮಗಳಾದುವು. ಶಿವಾಗಮವೇ ಪ್ರಾಣವಾಯಿತು. ಈಯಾಕೃತಿಯು ವೃಷಭೇಶ್ವರನನ್ನು ಉಮಾಮಹೇಶ್ವರನು ಏರಿದುದರಿಂದಲೇ ವೃಷಭವಾಹನಲೀಲೆಯುಂಟಾಯಿತು. ಈ ಲೀಲೆಯಿಂದ ಮೆರೆದ ಪರಶಿವನು ಆತ್ಮಸಮರಾದ ಪ್ರಮಥರಸಂಕುಲವನ್ನು ತಾನೇ ಸೃಜಿಸಿ, ಅವರೊಡನೆ ಸಭೆಯಲ್ಲಿ ಕುಳಿತು ಸುಖಗೋಷ್ಠಿಯಿಂದಿದ್ದನು, ಎಂದು ಚೆನ್ನಬಸವೇಶನು ಸಿದ್ಧರಾಮೇಶನಿಗೆ ಬೋಧಿಸಿದನೆಂಬಲ್ಲಿಗೆ ಎರಡನೆ ಅಧ್ಯಾಯವು ಸಂಪೂರ್ಣವು.

ಮೂರನೆ ಅಧ್ಯಾಯವು.

ದಕ್ಷಸಂತತಿ.

ಬಳಿಕ ಬ್ರಹ್ಮನು ತನ್ನ ಮಗನಾದ ದಕ್ಷಬ್ರಹ್ಮನನ್ನು ಕರೆದು ನೀನು ಜಗತ್ಸೃಷ್ಟಿಯನ್ನು ಮಾಡೆಂದು ಬೋಧಿಸಿದನು. ಆಗ ದಕ್ಷನು ಪಂಚಜನನ ಮಗಳಾದ ಅಸಿಕ್ನಿ ಯೆಂಬವಳಲ್ಲಿ ೧೧ ಸಾವಿರ ಮಂದಿ ಹರ್ಯಶ್ವರೆಂಬ ಮಕ್ಕಳನ್ನು ಪಡೆದು, ನೀವು ಜಗತ್ಸೃಷ್ಟಿಯನ್ನು ಮಾಡಿರೆಂದು ನಿಯಮಿಸಿದನು. ಅದನ್ನು ನಾರದನು ಕಂಡು ನೀವು ಈ ಸಂಸಾರಬಂಧಕ್ಕೆ ಬಳಗಾಗಬೇಡಿರೆಂದು ಬೋಧಿಸಿ ತಕ್ಕನ್ನು ಮಾಡಿ ಆಮಕ್ಕ

ಳನ್ನು ತಪಸ್ಸಿಗಾಗಿ ವನಾಂತರಕ್ಕೆ ಕಳುಹಿಬಿಟ್ಟನು. ಆದನ್ನು ತಿಳಿದು ದಕ್ಷನು ಪುತ್ರವಿಯೋಗದಿಂದ ಎದೆಗೆಡದೆ ಪುನಃ ಚಪಲಾಶ್ವರೆಂಬ ಹಲವು ಮಕ್ಕಳನ್ನು ಹುಟ್ಟಿಸಿ; ಅವರಿಗೆ ಸೃಷ್ಟಿಕಾರ್ಯವನ್ನು ನಿಯಮಿಸಿದನು. ಪುನಃ ನಾರದನು ಬಂದು ದಕ್ಷಬ್ರಹ್ಮನ ಮಾತಿನ ಬಲೆಗೆ ಸಿಕ್ಕಬೇಡಿರೆಂದು ಅವರಿಗೂ ಬೋಧಿಸಿ, ಆ ಮಕ್ಕಳನ್ನೂ ತಪಸ್ಸಿಗೆ ಕಳುಹಿಬಿಟ್ಟನು. ಹೀಗೆ ತನ್ನ ಎರಡು ಗುಂಪಿನ ಮಕ್ಕಳುಗಳು ಕೂಡ ನಾರದನ ಕುಹಕಬೋಧೆಯಿಂದ ತನ್ನ ಮಾತನ್ನು ತಿರಸ್ಕರಿಸಿ ಹೊರಟುಹೋದುದನ್ನು ದಕ್ಷನು ತಿಳಿದು, ಕೋಪಗೊಂಡು, " ಎಲೈ ನೀಚನಾರದನೆ ! ನನ್ನ ಮಕ್ಕಳನ್ನು ನೀನು ಇರಗೊಡಿಸೆ. ಪುತ್ರವಿಯೋಗವನ್ನುಂಟುಮಾಡಿದ ಅಪರಾಧಕ್ಕಾಗಿ ನೀನು ಮೂರೂ ಮುಕ್ಕಾಲು ಗಳಿಗೆಯಹೊತ್ತು ಕೂಡ ಬಂದು ತಾಣವಲ್ಲಿ ನಿಲ್ಲದೆ ಜಗತ್ತನ್ನೆಲ್ಲಾ ಸದಾ ಸುತ್ತುತ್ತಿರ್ದು, ಎಲ್ಲೆಲ್ಲೂ ಜಗಳವನ್ನು ಗಂಟುಕ್ಕಿಸು " ಎಂದು ಶಾಪವನ್ನು ಕೊಟ್ಟು, ಬಳಿಕ ಹೆಣ್ಣುಮಕ್ಕಳನ್ನು ಪಡೆಯಬೇಕೆಂದು ನಿಶ್ಚೈಸಿ, ಆ ಅಸಕ್ನಿಯೆಂಬ ಪತ್ನಿಯಲ್ಲಿ ೬೦ ಮಂದಿ ಕುವರಿಯರನ್ನು ಪಡೆದು, ಅವರಲ್ಲಿ ೧೦ ಮಂದಿಯನ್ನು ಧರ್ಮನಿಗೂ ೨೭ ಮಂದಿಯನ್ನು ಚಂದ್ರನಿಗೂ ೧೩ ಮಂದಿಯನ್ನು ಕಶ್ಯಪನಿಗೂ, ಉಳಿದವರಲ್ಲಿ ಅನಸೂಯೆಯನ್ನು ಅತ್ರಿಗೂ, ಭೃಗುವಿಗೆ ಖ್ಯಾತಿಯನ್ನೂ, ಮರೀಚಿಗೆ ಸಂಭೂತಿಯನ್ನೂ, ಅಂಗಿರಸನಿಗೆ ಸ್ಮೃತಿಯನ್ನೂ, ಪುಲಸ್ತ್ಯನಿಗೆ ಪ್ರೀತಿಯನ್ನೂ, ಪುಲಹನಿಗೆ ಕ್ಷಮೆಯನ್ನೂ, ಕ್ರತುವಿಗೆ ಸನ್ನತಿಯನ್ನೂ, ವಸಿಷ್ಠನಿಗೆ ಊರ್ಜೆಯನ್ನೂ ಕೊಟ್ಟು, ಉಳಿದಿಬ್ಬರು ಮಕ್ಕಳುಗಳನ್ನು ಕೃಶಾಶ್ವನಿಗೆ ಕೊಟ್ಟು ಮದುವೆ ಮಾಡಿದನು. ಧರ್ಮನ ೧೦ ಮಂದಿ ಹೆಂಡತಿಯರಲ್ಲಿ ಕ್ರಮವಾಗಿ ಎಂದರೆ— ಅರುಂಧತಿಯಲ್ಲಿ ಕಿನ್ನರರೂ, ಯಾಮಿಯಲ್ಲಿ ನಾಗವೀಥಿಯೂ, ಲಂಬೆಯಲ್ಲಿ ಸಿಡಿಲ್ಮಿಂಚುಗಳೂ, ಮರುತ್ವತಿಯಲ್ಲಿ ಮರುತ್ತುಗಳೂ, ಸುಭಾನುವಿನಲ್ಲಿ ಸಿದ್ಧರುಗಳೂ, ಸಂಕಲ್ಪೆಯಲ್ಲಿ ಸಂಕಲ್ಪರೂ, ಮುಹೂರ್ತೆಯಲ್ಲಿ ಮುಹೂರ್ತರೂ; ಸಾಧ್ಯೆಯಲ್ಲಿ ಸಾಧ್ಯರೂ, ವಿಶ್ವೆಯಲ್ಲಿ ವಿಶ್ವೇದೇವತೆಗಳೂ, ವಸುವಿನಲ್ಲಿ ಅಷ್ಟವಸುಗಳೂ, ಮಕ್ಕಳಾಗಿ ಹುಟ್ಟಿದರು. ಆಪ, ಧ್ರುವ, ಸೋಮ, ಧರ, ಅನಿಲ, ಅನಲ, ಪ್ರತ್ಯೂಷ, ಪ್ರಭಾಸ, ಎಂಬಿವರುಗಳೇ ಅಷ್ಟ

ವಸುಗಳು. ಇವರಲ್ಲಿ ಆಪನಿಗೆ ವೈತಂಡ್ಯ, ಶ್ರಮ, ಶ್ರಾಂತ, ಧುನಿ ಯೆಂಬ ನಾಲ್ಕು ಮಕ್ಕಳು. ಧ್ರುವನಿಗೆ ಕಾಲ, ಸೋಮನಿಗೆ ಸುವರ್ಚ, ಧರನಿಗೆ ದ್ರವಿಣ. ಅನಿಲನಿಗೆ ಪುರೋಚನ, ಅನಲನಿಗೆ ಸೇನಾಪತಿ, ಪ್ರತ್ಯೂಷನಿಗೆ ದೇವಲ, ಪ್ರಭಾಸನಿಗೆ ವಿಶ್ವಕರ್ಮನೆಂಬ ಶಿಲ್ಪಕರ್ತನು ಮಕ್ಕಳುಗಳಾದರು. ಮರೀಚಿ ಬ್ರಹ್ಮಪುತ್ರನಾದ ಕಶ್ಯಪನಿಗೆ ಅದಿತಿ, ದಿತಿ, ದನು, ತಾಮ್ರೆ, ವಿನತೆ, ಸುರಸೆ, ಕದ್ರು, ಸುರಭಿ, ಕ್ರೋಧೆ ಮುನಿ, ಅರಿಷ್ಟೆ, ಇಳೆ, ಸಿಹ್ಮಿಕೆ ಯೆಂಬ ೧೩ ಮಂದಿ ಪತ್ನಿಯರು. ಇವರುಗಳ ಮಕ್ಕಳುಮೊದಲಾದ ವರ ಹೆಸರುಗಳು ಹೇಗೆಂದರೆ—ಅದಿತಿಗೆ ಧಾತ, ಅರ್ಯಮ, ಅಂಶುಮಾ೯ ವರುಣ, ಇಂದ್ರ, ಮಿತ್ರ, ರವಿ ತ್ವಷ್ಟ, ಭಗ, ವಿವಸ್ವಾ೯ ಪೂಷ, ವಿಷ್ಣು, ಎಂಬ ದ್ವಾದಶಾದಿತ್ಯರು ಮಕ್ಕಳು. ಇವರಲ್ಲಿ ಇಂದ್ರನಿಗೆ ಪತ್ನಿಯಾದ ಶಚಿಯ ಗರ್ಭದಲ್ಲಿ ವಿದುಷ, ಜಯಂತ, ಋಷಭ. ಎಂಬ ಮಕ್ಕಳಾದರು. ವರುಣನಿಗೆ ವಾಲ್ಮೀಕಿಋಷಿಯು ಮಗನಾಗಿ ಪುಟ್ಟಿದನು. ವಿವಸ್ವಂತನಿಗೆ ೪ ಮಂದಿ ಪತ್ನಿಯರು. ಅವರೊಳಗೆ ಸಂಜ್ಞೆಯೆಂಬ ಪತ್ನಿಯಲ್ಲಿ ವೈವಸ್ವತಮನುವು ಹುಟ್ಟಿದನು. ರಾಜ್ಞಿ ಯೆಂಬುವಳಲ್ಲಿ ಯಮ, ಯಮುನೆ, ರೈವತ ಹುಟ್ಟಿದರು. ಛಾಯೆ ಯೆಂಬ ಪತ್ನಿಯಲ್ಲಿ ಸಾವರ್ಣಿ, ಶನಿ, ತಪತಿ ವಿಷ್ಟಿಗಳು ಜನಿಸಿದರು. ಪ್ರಭೆಯೆಂಬ ಪತ್ನಿಯಲ್ಲಿ ಪ್ರಭಾತನು ಹುಟ್ಟಿದನು. ಸಿಮಿಯು ಶಾಪದಿಂದ ಮಿತ್ರವರುಣರಿಗೆ ದೇವಾಂಗನೆಯರ ಸಂಗದಿಂದ ಕಲಶದಲ್ಲಿ ವಸಿಷ್ಠನೂ ಅಗಸ್ತ್ಯರೂ ಹುಟ್ಟಿದರು.

ದಿತಿಯ ಹೊಟ್ಟೆಯಲ್ಲಿ ಕಶ್ಯಪನಿಗೆ ಹಿರಣ್ಯಕಶಿಪು, ಹಿರಣ್ಯಾಕ್ಷನೆಂಬ ಇಬ್ಬರು ಗಂಡುಮಕ್ಕಳೂ, ಸಿಹ್ಮಿಕೆಯೆಂಬ ಮಗಳೂ ಹುಟ್ಟಿದರು. ಹಿರಣ್ಯಕಶಿಪುವಿಗೆ ಪ್ರಹ್ಲಾದ, ಅನುಹ್ಲಾದ, ಸಂಹ್ಲಾದ, ಹ್ಲಾದ ಮೊದಲಾದ ನಾಲ್ವರುಮಂದಿ ಮಕ್ಕಳು ಹುಟ್ಟಿದರು. ಅವರಲ್ಲಿ ಪ್ರಹ್ಲಾದನಿಗೆ ಶಿಷ್ಕಾಲೆಯೆಂಬ ಪತ್ನಿಯಲ್ಲಿ ವಿಲೋಚನ, ನಿಕುಂಭ, ಕುಂಭ ಎಂಬ ಮಕ್ಕಳು ಹುಟ್ಟಿದರು ವಿಲೋಚನನ ಹೊಟ್ಟೆಯಲ್ಲಿ ಬಲಿಯು ಹುಟ್ಟಿದನು. ಬಲಿಗೆ ನೂರುಮಂದಿ ಮಕ್ಕಳು. ಅವರಲ್ಲಿ ಪ್ರಮುಖನು ಬಾಣಾಸುರನು. ಬಾಣನಿಗೆ ಧನದೆಯೆಂಬ ಪತ್ನಿಯಲ್ಲಿ ನಮುಚಿ, ಸಂವರುಣ, ವಿಪ್ರಜಿತು, ಪುಲೋಮ ಮೊದಲಾದ ನಲವತ್ತು ಮಂದಿ ಮಕ್ಕಳು ಜನಿಸಿದರು. ಅವ

ರಲ್ಲಿ ವಿಪ್ರಜಿತುವಿಗೆ ಸಿಹ್ಮಿಕೆಯೆಂಬ ಪತ್ನಿಯಲ್ಲಿ ನರಕ, ಸ್ವರ್ಭಾನು, ವಾತಾಪಿ ಇಲ್ವಲ ಮೊದಲಾದ ಮಕ್ಕಳು ಹುಟ್ಟಿದರು. ಹಿರಣ್ಯಾಕ್ಷನ ಹೊಟ್ಟೆಯಲ್ಲಿ ಅಂಧಕಾಸುರನು ಹುಟ್ಟಿದನು. ಅವನಿಗೆ ಉಪದಾನವಿಯೆಂಬವಳಲ್ಲಿ ಸಂತಾಪನ, ಶಕುನಿ, ಜರ್ಝರ, ಮಹಾನಾಭ ಮುಂತಾದವರು ಮಕ್ಕಳಾಗಿ ಹುಟ್ಟಿದರು. ಒಳಿಕ ಕಶ್ಯಪನಿಗೆ ದನು ಎಂಬ ಪತ್ನಿಯಲ್ಲಿ ತಾರಕ, ವಿಧಾತ, ಶಂಖಶಿರ, ಗಗನಮೂರ್ಧ, ಶಕುನಿ, ಸುರಾಂತಕ, ಮರೀಚಿ, ದುಂದುಭಿ, ವಜ್ರನಾಭ, ಶರಭ, ಶಂಬರ, ಶಬಲ, ವಿಪ್ರಜಿತು ಮೊದಲಾದ ನೂರು ಮಂದಿ ಮಕ್ಕಳು ಉದಿಸಿದರು. ಕಶ್ಯಪನಿಗೆ ತಾಮ್ರೆಯೆಂಬ ಪತ್ನಿಯಲ್ಲಿ ಬಂದು ಗೊರಸುಳ್ಳ ಕತ್ತೆ ಕುದುರೆ ಮೊದಲಾದುವುಗಳೂ ಪಕ್ಷಿಗಳೂ ಜನಿಸಿದುವು. ಕಶ್ಯಪನಿಗೆ ವಿನತೆಯಲ್ಲಿ ಅರುಣ ಗರುಡರೂ ಸೌದಾಮಿನಿಯೆಂಬ ಮಗಳೂ ಹುಟ್ಟಿದರು. ಅರುಣನಿಗೆ ಶ್ಯೇನಿತೆಯೆಂಬ ಪತ್ನಿಯಲ್ಲಿ ಸಂಪಾತಿ ಜಟಾಯುವೆಂಬುವರು ಹುಟ್ಟಿದರು. ಕಶ್ಯಪನಿಗೆ ಸುರಸೆಯಲ್ಲಿ ಅನೇಕ ಶಿರಸ್ಸುಗಳೂ ರಕ್ಕೆಗಳೂ ಉಳ್ಳ ಉರಗಗಳು ಬಂದುಸಾವಿರ ಹುಟ್ಟಿದುವು. ಕಶ್ಯಪನಿಗೆ ಕದ್ರುವಿನಲ್ಲಿ ಆದಿಶೇಷ, ವಾಸುಕಿ, ಕರ್ಕೋಟಕ, ಶಂಖಪಾಲ, ಐರಾವತ, ಕಂಬಳ, ಅಶ್ವತರ, ಪುಷ್ಪದಂಷ್ಟ್ರ, ನಹುಷ, ವಾವನ ಮೊದಲಾದ ಸಾವಿರ ನಾಗೇಂದ್ರರು ಜನಿಸಿದರು ಒಳಿಕ ಕಶ್ಯಪನಿಗೆ ಸುರಭಿಯೆಂಬುವಳಲ್ಲಿ ಅಮೃತವೂ, ಕಾಮಧೇನುವೂ, ಹಸು ಎಮ್ಮೆಗಳೂ, ಅಪ್ಸರಸ್ತ್ರೀಯರೂ, ಕ್ರೋಧೆಯಲ್ಲಿ ರಕ್ಷೋಗಣವೂ ಗಜ ಸಿಹ್ಮ ವ್ಯಾಘ್ರಾದಿಗಳೂ, ಮುನಿಯೆಂಬುವಳಲ್ಲಿ ಮುನಿಗಣವೂ, ನವರತ್ನವೂ, ಅರಿಷ್ಟೆಯಲ್ಲಿ ಕಿನ್ನರಗಂಧರ್ವರೂ, ತುಂಬುರರೂ, ಇಳೆಯೆಂಬುವಳಲ್ಲಿ ಗಿರಿ ತರು ಲತೆ ಮೊದಲಾದುವುಗಳೂ, ಸಿಹ್ಮಿಕೆಯೆಂಬುವಳಲ್ಲಿ ರಾಹು ವೆಂದಲಾದ ನಲವತ್ತು ಮಂದಿಗಳೂ ಮಕ್ಕಳಾಗಿ ಜನಿಸಿದರು. ಹೀಗೆ ಮರೀಚಿ ಬ್ರಹ್ಮನಿಂದ ಕಶ್ಯಪನ ಸಂತತಿಯು ಜಗತ್ತಿನಲ್ಲಿ ವೃದ್ಧಿಗೊಂಡಿರುವುದು.

ಒಳಿಕ ಅತ್ರಿ ಸಂತತಿಯು ಹೇಗೆಂದರೆ— ಅತ್ರಿ ಬ್ರಹ್ಮನಿಗೆ ಹತ್ತು ಮಂದಿ ಪತ್ನಿಯರು. ಅವರಲ್ಲಿ ಅನಸೂಯೆಯೆಂಬುವಳಿಗೆ ಚಂದ್ರನೂ, ದತ್ತಾತ್ರೇಯನೂ, ದೂರ್ವಾಸನೂ ಮಕ್ಕಳಾಗಿ ಹುಟ್ಟಿದರು.

ಆಂಗೀರಸಬ್ರಹ್ಮನಿಗೆ ಸ್ಮೃತಿಯೆಂಬುವಳಲ್ಲಿ ಗುರು, ಸಂವರ್ತ, ಯೋಗ ಸಿದ್ಧಿಗಳೆಂಬ ಮಕ್ಕಳು ಹುಟ್ಟಿದರು.

ಪುಲಸ್ತ್ಯಬ್ರಹ್ಮನಿಗೆ ಪ್ರೀತಿ ಅಥವಾ ಇಲಬಿಲೆಯೆಂಬ ಪತ್ನಿಯಲ್ಲಿ ವಿಶ್ರವಸ್ಸುವೆಂಬುವನು ಹುಟ್ಟಿದನು. ವಿಶ್ರವಸ್ಸುಗೆ ದೇವವರ್ಣಿಯೆಂಬುವಳಲ್ಲಿ ಕುಬೇರನೂ, ಕಿನ್ನರರೂ, ಕೈಕಸೆಯೆಂಬ ಪತ್ನಿ (ರಾಕ್ಷಸ ಕನ್ಯೆ) ಯಲ್ಲಿ ರಾವಣ, ಕುಂಭಕರ್ಣ, ವಿಭೀಷಣರೆಂಬ ಮೂವರು ಗಂಡುಮಕ್ಕಳೂ, ಪುಷ್ಪೋತ್ಕಟೆಯೆಂಬ ಪತ್ನಿ (ರಾಕ್ಷಸಕನ್ಯೆ) ಯಲ್ಲಿ ವಿಶ್ವವಸ್ಸುಗೆ ಖರ, ದೂಷಣ, ತ್ರಿಶಿರರೆಂಬ ಮೂವರು ಗಂಡುಮಕ್ಕಳೂ, ಶೂರ್ಪನಖಿಯೆಂಬ ಒಬ್ಬ ಹೆಣ್ಣುಮಗಳೂ ಜನಿಸಿದರು.

ಪುಲಹಬ್ರಹ್ಮನಿಗೆ ಕಿನ್ನರ ಕಿಂಪುರುಷರೂ ಹುಲಿ ಕರಡಿ ಕಪಿ ಆನೆ ಮೊದಲಾದ ಮೃಗಗಳೂ ಜನಿಸಿದುವು.

* ಕ್ರತು ಬ್ರಹ್ಮನಿಗೆ ಸನ್ನತಿಯೆಂಬ ಪತ್ನಿಯಲ್ಲಿ ಸಹಚರಿ ಪತಂಗರು ಜನಿಸಿದರು.

ಭೃಗು ಬ್ರಹ್ಮನಿಗೆ ಪುಲೋಮಿಯೆಂಬುವಳಲ್ಲಿ ಉಶನ, ಕವಿ, ಚ್ಯವನರೆಂಬುವರು ಮಕ್ಕಳು. ಅವರಲ್ಲಿ ಕವಿಗೆ ಶುಕ್ರನೆಂಬ ಮಗನಾದನು. ಚ್ಯವನನೆಂಬುವನಿಗೆ ಕರ್ದಿಕೆಯೆಂಬುವಳಲ್ಲಿ ಒಬ್ಬ ಮಗನು ಹುಟ್ಟಿದನು. ಅವನಿಗೆ ರುಚಿಕನು ಮಗನಾದನು. ಆ ರುಚಿಕನಿಗೆ ಜಮದಗ್ನಿಯೂ, ಅವನಿಂದ ಪರಶುರಾಮನೂ, ಜನಿಸಿದರು. ಈ ಪರಶುರಾಮನಿಗೆ ವಿಶ್ವಾಮಿತ್ರನು ಅಳಿಯನು.

ವಸಿಷ್ಠ ಬ್ರಹ್ಮನಿಗೆ ಅರುಂಧತಿಯೆಂಬ ಪತ್ನಿಯಲ್ಲಿ ನೂರುಮಂದಿ ಮಕ್ಕಳು. ಎಲ್ಲರೂ ವಿಶ್ವಾಮಿತ್ರನ ಶಾಪದಿಂದ ಹತರಾಗಿ ಶಕ್ತಿಯೆಂಬೊಬ್ಬನು ಮಾತ್ರ ಉಳಿದನು. ಆತನಿಂದ ಪರಾಶರನು ಜನಿಸಿದನು. ಅವನಿಂದ ಯೋಜನಗಂಧಿಯೆಂಬುವಳಲ್ಲಿ ವ್ಯಾಸನೂ, ಅವನಿಂದ ಶುಕಮುನಿಯೂ ಜನಿಸಿದರು.

ಅತ್ರಿ ಕರ್ದಮನು ಪರಿಗ್ರಹಿಸಿದ ದೇವಹೂತಿಯಲ್ಲಿ ಕಪಿಲ, ಕರ್ದಿಕೆಯೆಂಬ ಮಕ್ಕಳು ಹುಟ್ಟಿದರು. ಆವರಲ್ಲಿ ಕರ್ದಿಕೆಯನ್ನು ದೇವಹೂ

* ಕ್ರತುವಿಗೆ ಸಂತಾನವಿಲ್ಲವೆಂದು ಕೂರ್ಮಲಿಂಗ್ಯಪುರಾಣಗಳಲ್ಲಿ ಹೇಳಲ್ಪಟ್ಟಿದೆ.

ತಿಯು ಒಡಹುಟ್ಟಿದ ಪ್ರಿಯವ್ರತನಿಗೆ ಕೊಟ್ಟು ಮದಿವೆ ಮಾಡಿದರು. ಅವರ ಹೊಟ್ಟೆಯಲ್ಲಿ ಅಗ್ನಿಬಾಹು ಮೇಧಸ್ಸು ಮೊದಲಾದ ೧೦ ಮಂದಿ ಮಕ್ಕಳು ಹುಟ್ಟಿದರು. ಅವರಲ್ಲಿ ಮೊದಲನೆ ಮೂವರು ಯತಿಗಳಾದರು. ಸ್ವಾಯಂಭುವನ ಹಿರೀಮಗನಾದ ಉತ್ತಾನಪಾದನಿಗೆ ಧ್ರುವಸಂಜ್ಞೆಯ ಮಗ ನಾದನು.

ದಕ್ಷಬ್ರಹ್ಮನ ಕೊನೆಯ ಇಬ್ಬರು ಹೆಣ್ಣುಮಕ್ಕಳಲ್ಲಿ ಕೃಶಾಶ್ವನಿಗೆ ಧೂಮಕೇತು ಮೊದಲಾದುವುಗಳು ಹುಟ್ಟಿದುವು.

ಬ್ರಹ್ಮನಿಂದುತ್ಪನ್ನವಾದ ತಮಸ್ಸಿನಿಂದ ಅಧರ್ಮನು ಹುಟ್ಟಿದನು. ಆ ಅಧರ್ಮನ ಪತ್ನಿಯಾದ ಮೃಷೆಯಲ್ಲಿ ಡಂಭನೂ, ಮಾಯೆಯೂ ಹುಟ್ಟಿದರು. ಆ ಮಾಯೆಯ ಹೊಟ್ಟೆಯಲ್ಲಿ ನಿಋತಿಗೆ ಲೋಭ, ವಿಕೃತಿಗಳು ಹುಟ್ಟಿದುವು. ಆ ಲೋಭದಿಂದ ಕ್ರೋಧವೂ, ವಿಕೃತಿಯಿಂದ ಹಿಂಸೆ ಯೂ ಹುಟ್ಟಿದುವು. ಆ ಕ್ರೋಧದಿಂದ ದುರುಕ್ತಿಯೂ, ಹಿಂಸೆಯಿಂದ ದುಃಖವೂ, ಬಳಿಕ ದುರುಕ್ತಿಯಿಂದ ಭಯವೂ ದುಃಖದಿಂದ ಮೃತ್ಯು ವೂ, ಆ ಭಯಮೃತ್ಯುಗಳಿಂದ ನಾನಾ ಯಾತನೆಗಳೂ ಅವುಗಳಿಂದ ದು ರ್ನೀತಿ, ದುರ್ಮಾರ್ಗ, ಕಪಟ, ದ್ರೋಹ, ಮುನಿಸು ರೋಗ, ಜರೆ ಮೊ ದಲಾದುವುಗಳೂ ಹುಟ್ಟಿದುವು. ಇವಕ್ಕೆ ಹೆಂಡತಿ ಮಕ್ಕಳಿಲ್ಲ.

ವೀರಭದ್ರ, ಶಂಭು, ಗಿರೀಶ, ಅಜೈಕಪಾತ್, ಅಹಿಬುರ್ಧ್ನ್ಯ, ಉಗ್ರ, ಪಿನಾಕಿ, ಸ್ಥಾಣು, ಭವ, ಭೂವನಾಧೀಶ ಎಂಬಿವರು ಪರ ಶಿವನಿಂದಾದ ಏಕಾದಶರುದ್ರರು. ಮರೀಚಿ, ಕಶ್ಯಪ, ಗೌತಮ, ಅತ್ರಿ, ವಿಶ್ವಾಮಿತ್ರ, ಜಮದಗ್ನಿ, ವಸಿಷ್ಠ ಇವರೇ ಸಪ್ತರ್ಷಿಗಳು. ಸ್ವಾಯಂ ಭುವ, ಸ್ವಾರೋಚಿಷ, ವೈವಸ್ವತ, ಉತ್ತಮ, ರೈವತ, ತಾಮಸ, ಚಾ ಕ್ಷುಷ, ರೌಚ್ಯ, ಬ್ರಹ್ಮಸಾವರ್ಣಿ, ರುದ್ರಸಾವರ್ಣಿ, ಧರ್ಮಸಾವರ್ಣಿ, ದಕ್ಷಸಾವರ್ಣಿ, ಸೂರ್ಯಸಾವರ್ಣಿ, ಅಗ್ನಿಸಾವರ್ಣಿ ಎಂಬಿವರೇ ೧೪ ಮನುಗಳು. ಪ್ರತಿಯೊಂದು ಮನ್ವಂತರಗಳಲ್ಲೂ ಋಷಿಗಳೂ, ಇಂದ್ರ ರುಗಳೂ ದೇವತೆಗಳೂ ಬೇರೆಬೇರೆ ನಾಮದಿಂದಿರುವರು. ಎಂದು ಚೆನ್ನ ಬಸವೇಶನು ಸಿದ್ಧರಾಮೇಶನಿಗೆ ನಿರೂಪಿಸಿದನೆಂಬಲ್ಲಿಗೆ ಮೂರನೆ ಅಧ್ಯಾ ಯವು ಸಂಪೂರ್ಣವು.

೪೯ ನೆ ಅಧ್ಯಾಯವು.

ಲೋಕವರ್ಣನವು.

ಬ್ರಹ್ಮನು ಶಿವಾಜ್ಞೆಯಿಂದ ಬ್ರಹ್ಮಾಂಡದಲ್ಲಿ ಚರಾಚರಾತ್ಮಕವಾದ ಸೃಷ್ಟಿಯನ್ನು ಮೇಲೆ ತಿಳಿಸಿವಂತೆ ಮಾಡಿದ ಒಳಿಕ, ಇವುಗಳ ಆಶ್ರಯಕ್ಕಾಗಿ ಒಂದೊಂದು ಸ್ಥಾನಗಳನ್ನು ಕಲ್ಪಿಸಿದ ರೀತಿಯನ್ನು ವಿವರಿಸುವೆನೆಂದು ಚೆನ್ನಬಸವೇಶನು ಸಿದ್ಧರಾಮೇಶನನ್ನು ಕುರಿತು ಹೇಳತೊಡಗಿದನು ಬ್ರಹ್ಮಾಂಡಮಂಡಲದ ಕೆಳಭಾಗದಲ್ಲಿ ಇಪ್ಪತ್ತೈದು ಕೋಟಿ ಯೋಜನದಳತೆಯಲ್ಲಿ ಜಲವು ತುಂಬಿರುವುದು. ಆ ನೀರಿನಮೇಲೆ ಆದಿ ಕೂರ್ಮನು (ಆಮೆ) ಇರುತ್ತಿರುವನು. ಅದರಮೇಲೆ ಆದಿಶೇಷನು ಕುಳಿತಿರುವನು. ಅವನ ಸುತ್ತಲೂ ೪ ದಿಗ್ಗಜಗಳು ನಿಂತಿರುವುವು ಇವ-ಮೇಲೆ ಭೂಮಂಡಲವು ಐದು ಕೋಟಿ ಯೋಜನವಿಸ್ತಾರವಾಗಿಯೂ, ಅಯ್ವತ್ತು ಕೋಟಿ ಯೋಜನವಗಲವುಳ್ಳದಾಗಿಯೂ ಇರುವುದು. ಆ ಭೂಮಂಡಲದೊಳಗೆ ಬಂದರಲ್ಲೊಂದೊಂದರಂತೆ ಇಟ್ಟಿರುವ ಭರಣಿಗಳ ಹಾಗೆ ಲೋಕಗಳಿರುತ್ತಿರುವುವು. ಅವು ಏಳು ಸಾವಿರ ಯೋಜನವಿಸ್ತಾರ, ಹತ್ತು ಕೋಟಿ ಯೋಜನವಗಲವುಳ್ಳವಾಗಿರುವುವು. ಆ ಲೋಕಗಳಲ್ಲಿ ಬಂದರಿಂದೊಂದಕ್ಕೆ ಮಧ್ಯೆ ಇರುವ ಅವಕಾಶವು ೧೨೪೪೦೦೦ ಯೋಜನ. ಈ ಲೋಕಗಳನ್ನೆಲ್ಲ ಬಳಸಿಕೊಂಡಿರುವ ಭೂಮಿಯು ೨೦ ಕೋಟಿ ಯೋಜನವುಳ್ಳದಾಗಿ ಬ್ರಹ್ಮಾಂಡದ ಓಟೆಯನ್ನು ಕಚ್ಚಿಕೊಂಡಿರುವುದು. ಅದರ ಮೇಲ್ಭಾಗವೇ ಭೂಲೋಕವೆನಿಸಿಕೊಳ್ಳುವುದು. ಈ ಭೂತಲದ ಕೆಳಗೆ ಅತಲ ವಿತಲ ಸುತಲ ತಲಾತಲ ಮಹಾತಲ ರಸಾತಲ ಪಾತಾಳಗಳೆಂಬ ಏಳು ಲೋಕಗಳಿರುವುವು. ಇವು ಪ್ರತಿಯೊಂದೂ ಮೂರು ಮೂರು ಖಂಡಗಳಾಗಿ ಬಂದೊಂದಕ್ಕೆ ಕ್ರಮವಾಗಿ ದೈತ್ಯ, ಭುಜಂಗ, ರಾಕ್ಷಸರೊಬ್ಬೊಬ್ಬರು ಅಧಿಪತಿಗಳಾಗಿರುವರು. ಪ್ರತಿಯೊಂ

ದು ಲೋಕವೂ ಒಂದೊಂದು ಬಣ್ಣವುಳ್ಳುದಾಗಿರುವುದು. ಅಲ್ಲಿನ ಜನರು ಒಂದೊಂದು ಲಿಂಗವನ್ನು ಪೂಜಿಸುವರು. ಹೇಗೆಂದರೆ—ಪಾತಾಳಲೋಕವು ಸುವರ್ಣಛಾಯೆಯುಳ್ಳುದು. ಅದಕ್ಕೆ ಶೇಷ, ಬಲಿ, ಮುಚಕುಂದ ರೆಂಬುವರು ಅಧಿಪತಿಗಳಾಗಿರುವರು. ಅಲ್ಲಿನವರು ಶಿವಲಿಂಗವನ್ನು ಪೂಜಿಸುವರು. ರಸಾತಲವು ಬೆಳ್ಳಯ ಬಣ್ಣವುಳ್ಳುದು. ಅಲ್ಲಿಗೆ ವಾಸುಕಿ, ಸುಪರ್ಣರು ಅಧಿಪತಿಗಳು. ಅಲ್ಲಿನವರು ಶಂಭುಲಿಂಗವನ್ನಾರಾಧಿಸುವರು. ಮಹಾತಳವು ತಾಮ್ರವರ್ಣವುಳ್ಳುದಾಗಿ, ಹಿರಣ್ಯಾಕ್ಷ ನರಕಾಸುರರು ಅದಕ್ಕೆ ಅಧಿಪತಿಗಳಾಗಿರುವರು. ಅಲ್ಲಿನವರು ಶಂಕರಲಿಂಗವನ್ನು ಪೂಜಿಸುವರು. ತಳಾತಳಲೋಕವು ಕಂಚಿನಬಣ್ಣದುದು ಅಲ್ಲಿಗೆ ಮಯ ಕಾಲನೇಮಿ ಕರ್ಕೋಟಕಗಳು ಅಧಿಪತಿಗಳು. ನೀಲಕಂಠಲಿಂಗವನ್ನು ಅಲ್ಲಿನವರು ಪೂಜಿಸುವರು. ಸುತಳವು ಹವಳದ ಬಣ್ಣವುಳ್ಳುದು. ಅಲ್ಲಿಗೆ ತಾರಕ ಪ್ರಹ್ಲಾದರು ಅಧಿಪತಿಗಳು. ಅಲ್ಲಿನವರು ಉಮಾಪತಿಲಿಂಗವನ್ನು ಅರ್ಚಿಸುವರು ವಿತಳವು ನಿರ್ಮಲವರ್ಣವುಳ್ಳುದು. ಅದಕ್ಕೆ ಶಂಖಪಾಲ ಮೊದಲಾದ ಸರ್ಪಾಧಿಪತಿಗಳು ಒಡೆಯರು. ಅಲ್ಲಿನವರು ಸರ್ವೇಶ್ವರಲಿಂಗವನ್ನಾರಾಧಿಸುವರು. ಅತಳವು ನೀಲವರ್ಣವುಳ್ಳುದು. ಅಲ್ಲಿಗೆ ನಮುಚಿ ಅಧಿಪತಿ ಅಲ್ಲಿನ ಜನರು ಮಹಾದೇವಲಿಂಗವನ್ನಾರಾಧಿಸುವರು. ಈ ಪಾತಾಳಲೋಕಗಳ ಮೇಲೆ ಭೂಲೋಕವು ಭೂಮಿಗಳ ಮೇಲಿನ ಮುಚ್ಚಳದಂತೆ ಇರುವುದು ಅವರ ಮಧ್ಯದಲ್ಲಿ ಸುವರ್ಣದ ಮಹಾಲಿಂಗದಂತೆ ಮೇರುಪರ್ವತವು ಶೋಭಿಸುತಿರುವುದು. ಈ ಭೂಮಂಡಲದ ಸಾಮ್ರಾಜ್ಯಪಟ್ಟವನ್ನು ಸ್ವಾಯಂಭುವಮನುವು ಪ್ರಿಯವ್ರತನೆಂಬ ಮಗನಿಗೆ ಕಟ್ಟಿದನು. ಆತನು ಸಕಲ ಭೂಭಾರವನ್ನು ತಾನೇ ವಹಿಸಿ ರಾಜ್ಯವನ್ನಾಳುತ್ತ, "ನನ್ನ ರಾಜ್ಯದಲ್ಲಿ ಸೂರ್ಯನು ಸಂಚರಿಸಲವಶ್ಯಕವಿಲ್ಲ, ನನ್ನ ಲೋಕಕ್ಕೆ ನನ್ನ ದೇಹಕಾಂತಿಯೇ ಸಾಕು" ಎಂದು ನುಡಿಯಲು, ಸೂರ್ಯನು ರಥಾರೂಢನಾಗಿ ಮೇರುಪರ್ವತವನ್ನು ಏಳುಬಾರಿ ಸುತ್ತಿ ಬರಲು, ಅವನ ರಥದ ಬಂದೇ ಗಾಲಿಯು ಏಳು ಸುತ್ತಿನಲ್ಲೂ ಏಳು ಸಮುದ್ರಗಳೂ ಅದರ ಪರಸ್ಪರ ಮಧ್ಯಭಾಗಗಳು ಸಪ್ತದ್ವೀಪಗಳೂ ಆದುವು. ಮೊದಲನೆ ಜಂಬೂದ್ವೀಪವು ೧ ಲಕ್ಷ ಯೋಜನದಳತೆಯುಳ್ಳುದು. ಅದನ್ನು

ಬಳಸಿರುವ ಲವಣಸಮುದ್ರವು ೧ ಲಕ್ಷ ಯೋಜನವಳತೆಯುಳ್ಳುದು. ಅದರ ಹೊರಗೆ ೨ ಲಕ್ಷ ಯೋಜನದಳತೆಯುಳ್ಳ ಪ್ಲಕ್ಷದ್ವೀಪವೂ ಅದರ ಹೊರಗೆ ಅಷ್ಟೇ ಅಳತೆಯ ಇಕ್ಷುಸಮುದ್ರವೂ, ಅದರ ಹೊರಗೆ ನಾಲ್ಕುಲಕ್ಷ ಯೋಜನದಳತೆಯ ಶಾಲ್ಮಲಿದ್ವೀಪವೂ, ಅದನ್ನು ಬಳಸಿ ಅಷ್ಟೇ ಅಳತೆಯ ಸುರಾಸಮುದ್ರವೂ, ಅದರ ಸುತ್ತಿನಲ್ಲಿ ಎಂಟು ಲಕ್ಷ ಯೋಜನದಳತೆಯ ಕುಶದ್ವೀಪವೂ, ಅದರ ಹೊರಗೆ ಅಷ್ಟೇ ಅಳತೆಯ ಘೃತಸಮುದ್ರವೂ, ಅದರ ಹೊರಗೆ ೧೬ ಲಕ್ಷ ಯೋಜನದ ಕ್ರೌಂಚದ್ವೀಪವೂ, ಅದನ್ನು ಬಳಸಿ ಅಷ್ಟೇ ಅಳತೆಯ ದಧಿಸಮುದ್ರವೂ, ಅದರ ಹೊರಗೆ ೩೨ ಲಕ್ಷ ಯೋಜನದಳತೆಯ ಶಾಕದ್ವೀಪವೂ, ಅದನ್ನು ಬಳಸಿ ಅಷ್ಟೇ ಅಳತೆಯ ಕ್ಷೀರಸಮುದ್ರವೂ, ಅದರ ಹೊರಗೆ ೬೪ ಲಕ್ಷ ಯೋಜನದ ಪುಷ್ಕರದ್ವೀಪವೂ, ಅದನ್ನು ಬಳಸಿ ಅಷ್ಟೇ ಅಳತೆಯ ಸ್ವಾದೂದಕಸಮುದ್ರವೂ ಇರುತ್ತಿರುವುವು. ಅದರ ಹೊರಗೆ ೧೦ ಕೋಟಿ ಯೋಜನದಳತೆಯ ಲೋಕಾಲೋಕಪರ್ವತವೂ, ಅದರ ಹೊರಗೆ ಸೂರ್ಯಸಂಚಾರವಿಲ್ಲದ ಅಂಧಕಾರ ಭೂಮಿಯು ೨ ಕೋಟಿ ೪೦ ಲಕ್ಷ ಯೋಜನದಳತೆಯುಳ್ಳುದಾಗಿಯೂ ಇರುವುದು. ಮೇಲೆ ಹೇಳಿದ ಸಪ್ತದ್ವೀಪ ಸಪ್ತಸಮುದ್ರಗಳಗಲವು ಬಂದುಕತೆ ೨ ಕೋಟಿ ೫೪ ಲಕ್ಷ, ಮೇರುಪರ್ವತದಗಲ ೧೦ ಕೋಟಿ, ಲೋಕಾಲೋಕಪರ್ವತವಗಲ ೧೦ ಕೋಟಿ, ಅಂಧಕಾರಭೂಮಿ ೨ ಕೋಟಿ ೪೬ ಲಕ್ಷ, ಅಂತೂ ಮೇರುವಿಂದ ಇತ್ತ ೩೫ ಕೋಟಿ ಯೋಜನವಳತೆ ವಿರುವುದು. ಇದರಂತೆ ಯೋಜನಸಂಖ್ಯೆಯನ್ನೆಣಿಸಿದರೆ ನಾಲ್ಕು ದಿಕ್ಕಿಗೂ ೩೫—೩೫ ಕೋಟಿ ಯೋಜನದಂತೆ ಆಗುವುದರಿಂದ ಬ್ರಹ್ಮಾಂಡದಳತೆಯು ನೂರು ಕೋಟಿ ಯೋಜನವಾಗುವುದು.

ಹಿಂದೆ ಹೇಳಿದ ಸ್ವಾಯಂಭುವಮನುವಿನ ಇಬ್ಬರು ಮಕ್ಕಳಾದ ಉತ್ತಾನಪಾದ ಪ್ರಿಯವ್ರತರೆಂಬಿವರಲ್ಲಿ ಉತ್ತಾನಪಾದನ ಮಗನಾದ ಧ್ರುವನು ನಕ್ಷತ್ರಮಂಡಲಕ್ಕಾಶ್ರಯನಾಗಿ ಭವಲೋಕದಲ್ಲಿರುವನು. ೨ನೆ ಪ್ರಿಯವ್ರತನಿಗೆ ಅಗ್ನೀಧ್ರ, ಮೇಧಾತಿಥಿ, ವಪುಷ್ಮಾ೯, ಜ್ಯೋತಿಷ್ಮಾ೯, ದ್ಯುತಿಮಾ೯, ಹವ್ಯ, ಸವನ, ಎಂಬೇಳುಮಂದಿ ಮಕ್ಕಳು. ಪ್ರಿಯವ್ರತರಾಜನು ಏಳು ದ್ವೀಪಗಳನ್ನೂ ಈ ಏಳುಮಂದಿ ಮಕ್ಕಳಿಗೆ ಒಬ್ಬೊ

ಬ್ಬರಿಗೊಂದೊಂದರಂತೆ ಹಂಚಿಕೊಟ್ಟನು. ಹಿರಿಯ ಮಗನಾದ ಆಗ್ನೀಧ್ರನು ಜಂಬೂದ್ವೀಪಕ್ಕೊಡೆಯನಾದನು. ಅವನಿಗೆ ನಾಭಿ, ಕಿಂಪುರುಷ, ಹರಿ, ಇಳಾವೃತ, ರಮ್ಯಕ, ಹಿರಣ್ಮಯ, ಕುರು, ಭದ್ರಾಶ್ವ, ಕೇತುಮಾಲ್ಯರೆಂಬ ೯ ಮಂದಿ ಮಕ್ಕಳು. ಆಗ್ನೀಧ್ರನು ತನ್ನ ಜಂಬೂದ್ವೀಪವನ್ನು ೯ ಭಾಗ ಮಾಡಿ ೯ ಮಂದಿ ಮಕ್ಕಳಿಗೂ ಹಂಚಿಕೊಟ್ಟನು. ಇವೇ ೯ ವರ್ಷಗಳೆನಿಸಿಕೊಂಡು, ಅವರವರ ಹೆಸರಿನಿಂದಿರುವುವು. ಅವರಲ್ಲಿ ಮೊದಲನೆ ನಾಭಿ ಯೆಂಬುವನಿಗೆ ವೃಷಭನೆಂಬ ಮಗನಾದನು. ಇವನಿಗೆ ಭರತನೆಂಬ ಮಗನು ಹುಟ್ಟಿದನು. ಅವನಾಳಿದುದರಿಂದಲೇ ಈ ಭೂಭಾಗಕ್ಕೆ ಭರತಖಂಡವೆಂಬ ಹೆಸರಾಯಿತು. ಇದು ಚಿತ್ರವರ್ಣದ ಭೂಮಿಯನ್ನು ಹೊಂದಿರುವುದು. ಮೇರುಪರ್ವತದ ದಕ್ಷಿಣ ಭಾಗದಲ್ಲಿರುವ ಈ ಭಾರತವರ್ಷಭೂಮಿಯು ೧೨ ಸಾವಿರ ಯೋಜನದ ವಿಸ್ತೀರ್ಣವುಳ್ಳುದಾಗಿ ಬಿಲ್ಲಿನ ಆಕಾರವಿಂದಿರುವುದು. ಇದರ ೪ ದಿಕ್ಕಿಗೂ ಲವಣಸಮುದ್ರವೂ, ಉತ್ತರದಿಕ್ಕಿನಲ್ಲಿ ಹಿಮವತ್ಪರ್ವತವೂ ಮೇರೆಯಾಗಿರುವುವು. ಇದು ೧ ಸಾವಿರಯೋಜನದಗಲವೂ, ೨ ಸಾವಿರ ಯೋಜನದುದ್ದವೂ ವುಳ್ಳುದಾಗಿರುವುದು. ಆ ಹಿಮವತ್ಪರ್ವತದ ಉತ್ತರಕ್ಕೆ ಕಿಂಪುರುಷವರ್ಷವಿರುವುದು. ಇದು ಪೂರ್ವ ಪಶ್ಚಿಮಸಮುದ್ರಗಳವರೆಗೂ ವ್ಯಾಪಿಸಿ, ೧೦ ಸಾವಿರ ಯೋಜನ ವಿಸ್ತಾರದಿಂದ ಕೂಡಿ ಸುವರ್ಣವಿಂದೊಪ್ಪುತ್ತಿರುವುದು. ಅದರಿಂದುತ್ತರಕ್ಕೆ ಮೇರುಪರ್ವತವಿರುವುದು. ಅದು ೧ ಸಾವಿರ ಯೋಜನದುದ್ದವುಳ್ಳುದು, ಐನೂರು ಯೋಜನದಗಲವುಳ್ಳುದು. ಅದರಿಂದುತ್ತರಕ್ಕೆ ಹರಿವರ್ಷವಿರುವುದು. ಅದು ೧೦ ಸಾವಿರ ಯೋಜನದಳತೆಯೂ ಚಿನ್ನದಬಣ್ಣವೂ ಉಳ್ಳುದು. ಮೇರುವಿನ ಸುತ್ತಲೂ ಇರುವ ನೀಲಾದಿ ೪ ನೀವಾಪರ್ವತಗಳ ಒಳಭಾಗವೇ ಇಳಾವೃತವರ್ಷವಾಗಿರುವುದು, ಅದು ಸುವರ್ಣಭೂಮಿಯುಳ್ಳುದು. ಅದರ ಉತ್ತರಕ್ಕೆ ನೀಲಾಚಲವೂ, ದಕ್ಷಿಣಕ್ಕೆ ನಿಷಧಪರ್ವತವೂ, ಪಶ್ಚಿಮಕ್ಕೆ ಗಂಧಮಾದನ ಪರ್ವತವೂ, ಪೂರ್ವಕ್ಕೆ ಮಾಲ್ಯವತ್ಪರ್ವತವೂ ಇರುವುವು. ಇವುಗಳ ಪಕ್ಕಗಳಲ್ಲಿ ಮಂದರ ಮೊದಲಾದ ಕುಲಾಚಲಗಳಿರುವುವು. ಮೇಲೆ ಕಂಡ ನೀಲ ಪರ್ವತವು ೧ ಸಾವಿರ ಯೋಜನದುದ್ದವೂ ಅಷ್ಟೇ ಅಗಲವೂ ಉಳ್ಳುದಾ

ಗಿರುವುದು. ಅದರ ಉತ್ತರಕ್ಕೆ ಹತ್ತುಸಾವಿರಯೋಜನದುದ್ದವುಳ್ಳುದಾಗಿ ರಮ್ಯಕವರ್ಷವಿರುವುದು. ಅದು ಹೊಂಬಣ್ಣದುದು. ಅದರ ಬಡಗಲಲ್ಲಿ ಶ್ವೇತಶೈಲವು ಸಾವಿರಯೋಜನದುದ್ದವೂ, ಅಷ್ಟೇ ಅಗಲವೂ ಉಳ್ಳುದಾಗಿರುವುದು. ಅದರ ಉತ್ತರಕ್ಕೆ ಹಿರಣ್ಮಯವರ್ಷವಿರುವುದು ಅದು ೧೧ ಸಾವಿರಯೋಜನದುದ್ದವುಳ್ಳುದಾಗಿ ಪೂರ್ವ ಪಶ್ಚಿಮ ಸಮುದ್ರಗಳವರೆಗೆ ವ್ಯಾಪಿಸಿರುವುದು. ಅದರಿಂದಾಚೆಗೆ ಶೃಂಗವರ್ವತವು ಸಾವಿರಯೋಜನದುದ್ದವೂ ಅಷ್ಟೇ ಅಗಲವೂ ಉಳ್ಳುದಾಗಿರುವುದು. ಅದರ ಉತ್ತರಕ್ಕೆ ಕುರುವರ್ಷವಿರುವುದು. ಅದು ಪೂರ್ವಪಶ್ಚಿಮೋತ್ತರ ಸಮುದ್ರಗಳನ್ನು ವ್ಯಾಪಿಸಿ, ಹನ್ನೆರಡುಸಾವಿರ ಯೋಜನದ ವಿಸ್ತೀರ್ಣವುಳ್ಳುದಾಗಿರುವುದು. ಮೇರುಪರ್ವತದ ಪೂರ್ವದಿಕ್ಕಿನಲ್ಲಿ ಭದ್ರಾಶ್ವವರ್ಷವಿರುವುದು. ಅದರ ಪೂರ್ವಕ್ಕೆ ಪೂರ್ವಸಮುದ್ರವೂ, ಪಶ್ಚಿಮಕ್ಕೆ ಮಾಲ್ಯವಂತಗಿರಿಯೂ ಎಲ್ಲೆಯಾಗಿ, ಪೂರ್ವಪಶ್ಚಿಮ ೫೦ ಸಾವಿರ ಯೋಜನದಗಲವೂ, ದಕ್ಷಿಣೋತ್ತರ ೫೪ ಸಾವಿರ ಯೋಜನದಳತೆಯೂ ಉಳ್ಳುವಾಗಿರುವುದು. ಅದರ ಮಗ್ಗುಲಲ್ಲಿರುವ ಜಠರ ದೇವಕೂಟಪರ್ವತಗಳು ದಕ್ಷಿಣೋತ್ತರಕ್ಕೆ ಇಪ್ಪತ್ತೈದುಸಾವಿರಯೋಜನದಳತೆಯೂ, ಒಂದುಸಾವಿರ ಯೋಜನದೆತ್ತರವೂ ಉಳ್ಳುದಾಗಿರುವುವು. ಮೇರುಪರ್ವತದ ಪಶ್ಚಿಮಕ್ಕೆ ಕೇತುಮಾಲ್ಯವರ್ಷವಿರುವುದು. ಅದಕ್ಕೆ ಪಶ್ಚಿಮ ದಿಕ್ಕಿನಲ್ಲಿ ಪಶ್ಚಿಮ ಸಮುದ್ರವೂ, ಪೂರ್ವದಲ್ಲಿ ಗಂಧಮಾದನ ಪರ್ವತವೂ ಎಲ್ಲೆಯಾಗಿರುವುವು. ಇದರಳತೆ ಪೂರ್ವಪಶ್ಚಿಮಕ್ಕೆ ಮೂವತ್ತುಮೂರುಸಾವಿರ ಯೋಜನ, ದಕ್ಷಿಣೋತ್ತರಕ್ಕೆ ೫೪ ಸಾವಿರ ಯೋಜನವು. ಇದರ ಮಗ್ಗುಲಲ್ಲಿರುವ ಪವನಸಾರಿಯಾತ್ರಗಿರಿಗಳು ದಕ್ಷಿಣೋತ್ತರಕ್ಕೆ ಇಪ್ಪತ್ತೈದುಸಾವಿರ ಯೋಜನದುದ್ದವೂ, ೧ ಸಾವಿರ ಯೋಜನದೆತ್ತರವೂ ಉಳ್ಳವುಗಳಾಗಿರುವುವು. ಹರಿವರ್ಷದಲ್ಲಿರುವ ಕರವೀರ ಕೈಲಾಸಪರ್ವತಗಳು ಪೂರ್ವಸಮುದ್ರಮುಖವಾಗಿ ಇಪ್ಪತ್ತೈದುಸಾವಿರಯೋಜನದುದ್ದವೂ, ಮೂರುಸಾವಿರಯೋಜನದೆತ್ತರವೂ ಉಳ್ಳುವಾಗಿ ರಜತವರ್ಣನಿಂದಿರುವುವು. ರಮ್ಯಕವರ್ಷದೊಳಗಿರುವ ಶೃಂಗ, ಮಕರವೆಂಬ ಪರ್ವತಗಳು ಪಶ್ಚಿಮಸಮುದ್ರಮುಖವಾಗಿ ಇಪ್ಪತ್ತೈದುಸಾವಿರಯೋಜನದುದ್ದವೂ, ಮೂರುಸಾವಿರಯೋಜ

ನದೆತ್ತರವೂ, ಉಳ್ಳವುಗಳಾಗಿರುವುವು. ಮೇರುಪರ್ವತದ ಮೂಡಲಿನಲ್ಲಿ ರುವ ಮಂದರಪರ್ವತವು ಹನ್ನೆರಡುಸಾವಿರಯೋಜನದೆತ್ತರವೂ, ಮೂರು ಸಾವಿರಯೋಜನದಗಲವೂ, ನಾಲ್ಕುವರೆಸಾವಿರಯೋಜನದುದ್ದವೂ ಉ ಳ್ಳುದಾಗಿರುವುದು. ಅದರ ತುದಿಯಲ್ಲಿ ಸಾವಿರಯೋಜನದುದ್ದದ ಬಂದು ಕಡಹದ ಮರವೂ, ಚೈತ್ರರಥವೆಂಬ ವನವೂ, ಅರುಣೋದವೆಂಬ ಸರ ಸ್ಸೂ ಇರುವುವು. ಮೇರುಪರ್ವತದ ದಕ್ಷಿಣದಲ್ಲಿರುವ ಗಂಧಮಾದನ ಪ ರ್ವತವು ನಾಲ್ಕುವರೆಸಾವಿರಯೋಜನದುದ್ದವೂ, ಮೂರುಸಾವಿರಯೋಜ ನದಗಲವೂ, ೧೨ ಸಾವಿರಯೋಜನದೆತ್ತರವೂ ಉಳ್ಳುದಾಗಿರುವುದು. ಅದ ರಮೇಲೆ ಸಾವಿರಯೋಜನದುದ್ದನಾದ ಬಂದು ನೇರಿಲಮರವು ಆನೆಗಳಗಾ ತ್ರದ ಹಣ್ಣನ್ನು ಸದಾ ಬಿಡುತ್ತಿರುವುದು. ನೆಲದಮೇಲೆ ಬಿದ್ದು ಒಡೆದ ಆ ಹಣ್ಣುಗಳ ರಸವು ಜಾಂಬೂನದವೆಂಬ ಹೆಸರಿನ ಹೊಳೆಯಾಗಿ ಹರಿಯು ತ್ತಿರುವುದು. ಮತ್ತೂ ಗಂಧಮಾದನವೆಂಬ ವನವೂ, ಮಾನಸವೆಂಬ ಸರೋವರವೂ ಅಲ್ಲಿರುವುವು. ಮೇರುಪರ್ವತದ ಪಶ್ಚಿಮದಲ್ಲಿರುವ ವಿಪು ಲವೆಂಬ ಕುಲಪರ್ವತವು ಮೂರುಸಾವಿರಯೋಜನದಗಲವೂ, ೪ ಸಾವಿರ ದೆತ್ತರವೂ, ೪೫೦೦ ಸಾವಿರಯೋಜನದುದ್ದವೂ ಉಳ್ಳುದಾಗಿರುವುದು. ಅದರ ಮೇಲೆ ಸಾವಿರಯೋಜನದುದ್ದದ ಬಂದು ಅರಳಿಮರವೂ, ವೈಭ್ರಾಜವೆಂ ಬ ವನವೂ, ಸಿತೋದಕಸರೋವರವೂ ಇರುವುವು. ಮೇರುಗಿರಿಯ ಉತ್ತರದಲ್ಲಿರುವ ಸುಪಾರ್ಶ್ವವೆಂಬ ಕುಲಪರ್ವತವು ಮೂರುಸಾವಿರಯೋ ಜನದಗಲವೂ, ಹನ್ನೆರಡುಸಾವಿರಯೋಜನದೆತ್ತರವೂ, ನಾಲ್ಕುವರೆಸಾವಿ ರದುದ್ದವೂ ಉಳ್ಳುದಾಗಿರುವುದು. ಅದರ ತುದಿಯಲ್ಲಿ ಸಾವಿರಯೋಜನ ದುದ್ದದ ಬಂದು ಆಲದಮರವೂ, ಸವಿತೃವೆಂಬ ವನವೂ, ಮಹಾಭದ್ರ ವೆಂಬ ಸರೋವರವೂ, ಇರುವುವು. ಇವುಗಳೆಲ್ಲರ ಮಧ್ಯಭಾಗದಲ್ಲಿ ಸು ವರ್ಣಮಯವಾಗಿ ಥಳಥಳಿಸುತ್ತಿರುವ ಮೇರುಪರ್ವತವು ಭೂಮಿಯೊಳಗೆ ಹದಿನಾರುಸಾವಿರಯೋಜನದುದ್ದ ನಟ್ಟು, ಮೇಲೆ ೮೪ ಸಾವಿರಯೋಜನ ದುದ್ದವುಳ್ಳುದಾಗಿ ಅಂತೂ ಒಟ್ಟಿಗೆ ೧ ಲಕ್ಷಯೋಜನದೆತ್ತರವನ್ನು ಪೊಂ ದಿ, ಬುಡದಲ್ಲಿ ಹದಿನಾರುಸಾವಿರಯೋಜನವ ದಪ್ಪವೂ, ತುದಿಯಲ್ಲಿ ಮೂ ವತ್ತೆರಡುಸಾವಿರಯೋಜನದ ವೈಕಾಲ್ಯವೂ ಉಳ್ಳುದಾಗಿ ಉಮ್ಮತ್ತವ ಪೂ

ವಿನ ಆಕಾರದಂತೆ ತೋರುತ್ತಲಿರುವುದು. ಅದರ ಮೇಲಣ ೪ ಕೋಣಗಳಲ್ಲೂ ಅಷ್ಟದಿಕ್ಪಾಲಕರ ೪ ಪಟ್ಟಣಗಳಿರುವುವು. ಆದರೆ ಮಧ್ಯದಲ್ಲಿ ರತ್ನಖಚಿತವಾದ ಈಶ್ವರನ ಅರಮನೆಯಿರುವುದು.

ಇಂತಹ ಭೂಲೋಕದ ಮೇಲೆ ೧ ಲಕ್ಷಯೋಜನದಳತೆಯಲ್ಲಿ ಭುವರ್ಲೋಕವಿರುವುದು. ಅದಕ್ಕೆ ಸೂರ್ಯನು ಅಧಿಪತಿಯು. ಭೂಮಿಗೆ ೨ ಲಕ್ಷಯೋಜನದಳತೆಯಲ್ಲಿ ಚಂದ್ರನೂ, ೩ ಲಕ್ಷ ಯೋಜನದಲ್ಲಿ ನಕ್ಷತ್ರಗಳೂ, ೪ ಲಕ್ಷ ಯೋಜನದಲ್ಲಿ ಬುಧನೂ, ೫ ಲಕ್ಷ ಯೋಜನದಲ್ಲಿ ಶುಕ್ರನೂ, ೬ ಲಕ್ಷ ಯೋಜನದಲ್ಲಿ ಅಂಗಾರಕನೂ, ೧೦ ಲಕ್ಷ ಯೋಜನದಲ್ಲಿ ಬೃಹಸ್ಪತಿಯೂ, ೧೫ ಲಕ್ಷ ಯೋಜನವಲ್ಲಿ ಶನಿಯೂ, ೧೪ ಲಕ್ಷ ಯೋಜನವಲ್ಲಿ ಸಪ್ತರ್ಷಿಗಳೂ, ೧೫॥ ಲಕ್ಷಯೋಜನವಲ್ಲಿ ಧ್ರುವನೂ ಇರುತ್ತಿರುವರು. ಸೂರ್ಯನಿಂದ ಮೇಲೆ ೧೪ ಲಕ್ಷ ಯೋಜನದಲ್ಲಿ ಸ್ವರ್ಗಲೋಕವಿರುವುದು. ಅದಕ್ಕೆ ಇಂದ್ರನಧಿಪತಿಯು. ಧ್ರುವಮಂಡಲದ ಮೇಲೆ ೧ ಕೋಟಿಯೋಜನದಲ್ಲಿ ಮಹರ್ಲೋಕವಿರುವುದು. ಅದಕ್ಕೆ ಮಾರ್ಕಂಡೇಯನಧಿಪತಿಯು. ಅಲ್ಲಿಂದ ಮೇಲೆ ೨ ಕೋಟಿಯೋಜನವಲ್ಲಿ ಜನರ್ಲೋಕವಿರುವುದು. ಅದಕ್ಕೆ ಸನಕಸನಂದನಾದಿಗಳು ಅಧಿಪತಿಗಳು. ಅಲ್ಲಿಂದ ಸಾಲ್ಕುಕೋಟಿ ಯೋಜನದಲ್ಲಿ ತಪೋಲೋಕವಿರುವುದು. ಅದಕ್ಕೆ ವಿಷ್ಣುವು ಅಧೀಶ್ವರನು. ಅದರಿಂದಮೇಲೆ ೬ಕೋಟಿ ಯೋಜನದಲ್ಲಿ ಸತ್ಯಲೋಕವಿರುವುದು. ಅಲ್ಲಿಗೆ ಚತುರ್ಮುಖಬ್ರಹ್ಮನು ಅಧಿಪತಿಯು. ಅದರಮೇಲೆ ೧೦ ಕೋಟಿ ೪೫ ಲಕ್ಷ ಯೋಜನದಲ್ಲಿ ಐಕಾಶವಿರುವುದು. ಹೀಗೆ ಬ್ರಹ್ಮಾಂಡವು ೧೪ ಲೋಕಗಳಿಂದ ಸೇರಿ ೫೦ ಕೋಟಿ ಯೋಜನದಳತೆಯುಳ್ಳುದಾಗಿರುವುದು. ಚತುರ್ಮುಖಬ್ರಹ್ಮನು ಹೀಗೆ ಬ್ರಹ್ಮಾಂಡವೆಂಬ ಮನೆಯಲ್ಲಿ ದೇವ ರಾಕ್ಷಸ ಮಾನವ ನಾಗ ಸಿದ್ಧ ವಿದ್ಯಾಧರ ಮನು ಮುನಿ ಕಿನ್ನರ ಕಿಂಪುರುಷಾದಿ ಸಚರಾಚರರನ್ನೆಲ್ಲ ಅಲ್ಲಲ್ಲಿರಿಸಿ ಅವರಿಂದೆಲ್ಲ ಸೇವೆಗೊಳ್ಳುತ್ತಿದ್ದನು. ಎಂಬಲ್ಲಿಗೆ ನಾಲ್ಕನೆ ಅಧ್ಯಾಯವು ಸಂಪೂರ್ಣವು.



೫ನೆ ಅಧ್ಯಾಯವು.

ಮಹಾಲಿಂಗೋದ್ಭವಲೀಲೆ.

(1)

ಬ್ರಹ್ಮನು ತನ್ನ ಸತ್ಯಲೋಕದಲ್ಲಿ ಎಂದಿನಂತೆ ಬಂದಾನೊಂದುದಿವ
ಸ ರತ್ನಸಿಂಹಾಸನದಮೇಲೆ ಮೂರ್ತಿಗೊಂಡು ತನ್ನ ಪುತ್ರಪೌತ್ರಾದಿಗಳಾ
ಗಿರುವ ಮನುಮುನಿದೇವದಾನವಾದಿಗಳಿಂದೆಲ್ಲ ಸೇವೆಗೊಳ್ಳುತ್ತ ವೈಭವ
ದಿಂದಿರಲು, ಸಭೆಯಲ್ಲಿದ್ದ ಜನಸ್ತೋಮವೆಲ್ಲ ಅ—ನೀನೇ ಜಗದುತ್ಪತ್ತಿ
ಸ್ಥಿತಿಲಯಗಳಿಗೆ ಕರ್ತ, ನೀನೇ ದುಷ್ಟನಿಗ್ರಹಶಿಷ್ಟಪರಿಪಾಲನ ದಕ್ಷ;
ಲೋಕಪಾಲಕರೆಲ್ಲರೂ ನಿನ್ನಧೀನರು; ಸಕಲ ವಿದ್ಯಾಧಿದೇವತೆಯಾದ ಸರ
ಸ್ವತಿಯೇ ನಿನ್ನ ಪತ್ನಿ; ಅದುಕಾರಣ ನೀನೇ ಜಗದೊಡೆಯ; ನಿನಗಿಂತ
ಲೂ ಅಧಿಕನಾದ ಬೇರೊಬ್ಬ ದೇವನಿಲ್ಲವೆಂದು ಹೊಗಳುತ್ತಿದ್ದರು ಸ್ತುತಿ
ಪ್ರಿಯನಾದ ಬ್ರಹ್ಮನು ಕೇಳಿ ಹಿಗ್ಗಿ, ಅಹಂಕಾರದಿಂದ ಬುದ್ಧಿಗೆಟ್ಟು, ತನ್ನ
ಸಂಪತ್ತಿಗೆ ಸರಿಯಾವುದೆಂದು ತನ್ನನ್ನು ತಾನೇ ಹೊಗಳಿಕೊಂಡನು. ಈ
ರೀತಿಯಾದ ಬ್ರಹ್ಮನ ದುರ್ಗುಣದಿಂದಲೂ ಅಸತ್ಯದಿಂದಲೂ ಜಗತ್ತು ಅಳ
ಯುವ ಗತಿಯುಂಟಾಗಲು, ಅದನ್ನು ವಿಷ್ಣುವು ತಿಳಿದು, ಬ್ರಹ್ಮನ ಸಭೆಗೆ
ಬಂದನು. ಬ್ರಹ್ಮನು ನೀನಾರೆಂದು ಕೇಳಲು, ವಿಷ್ಣುವು—ಎಲೆ ಬ್ರಹ್ಮನೆ!
ನೀನು ಕುರಿಯಸವಾನ; ನಿನಗೂ ಈ ಜಗತ್ತಿಗೂ ನಾನು ಒಡೆಯ; ನಿನ್ನ
ಸಭಾಸದರು ನಿನ್ನನ್ನೇ ಸರ್ವಕರ್ತನೆಂದು ಹೊಗಳಿದ ಮಾತ್ರಕ್ಕೇ ನೀನು
ಬಿರೆತು ಮರೆತುಬಿಟ್ಟಿಯಾ? ಎಂದನು. ಬ್ರಹ್ಮನು ಕೋಪಗೊಂಡು ಎಲೊ
ರತ್ನಖಚಿತ ಸಿಹ್ಮಾಸನವಮೇಲೆ ಕುಳಿತು ಸುತ್ತಲೂ ದೇವತೆಗಳಿಂದ ಸೇವೆ
ಗೊಳ್ಳುತ್ತಲಿರುವ ನಾನು ಕುರಿಯೊ? ಮಾರಿ ಮಿಕ್ಕಿರುವ ಕುರಿಯಂತೆ ಒಂ
ಟಿಗನಾಗಿ ನಿಂತಿರುವ ನೀನು ಕುರಿಯೊ? ಹೇಳು, ಎಂದು ನುಡಿದು, ತನ್ನ
ಸಭಿಕರ ಕಡೆಗೆ ತಿರುಗಿ, ಎಲೈ ಮನಮುನಿಗಳಿರಾ! ಪರಿಹಾಸಾಸ್ಪದವಾದ
ಇವನ ಮಾತನ್ನು ಕೇಳಿರಿ, ತಾನು ಜಗತ್ತನ್ನೆಲ್ಲಾ ಪಾಲಿಸತಕ್ಕವನಂತೆ!
ನನಗೂ ಇವನೇ ಒಡೆಯನಂತೆ! ನನ್ನ ಸಭೆಯಲ್ಲಿ ಇವನೀಮಾತನ್ನು
ಆಡಬಹುದೆ? ಇವನ ನಾಲಿಗೆಯನ್ನು ಕತ್ತರಿಸಬೇಕಲ್ಲವೆ? ಕೊಬ್ಬಿರುವ
ಇವನನ್ನು ಈ ಕ್ಷಣವೇ ಯಮನ ಮನೆಗೆ ಕಳುಹುತ್ತೇನೆ, ಎಂದು ಗರ್ಜಿ

ಸಿ ನುಡಿಯುತ್ತ, ಪ್ರಳಯಕಾಲದ ರುದ್ರನಂತೆ ಬ್ರಹ್ಮನು ಮೇಲಕ್ಕೆದ್ದ ನು. 'ಆಗ ವಿಷ್ಣುವು ಕೇಳಿ—ಎಲೊ! ನೀನು ನನ್ನನ್ನು ಮಾರಿ ಮಿಕ್ಕ ಕುರಿಯೆಂದು ಹೀಯಾಳಿಸಿದೆ; ಇರಲಿ; ನನ್ನ ಸತ್ವವನ್ನು ತೋರಿಸುತ್ತೇನೆ. ನನ್ನ ನಿನ್ನ ಜಯಾಪಜಯಗಳು ಗೊತ್ತಾಗಲಿ, ಎಂದು ಹೇಳಿ, ಆ ಕೂಡಲೇ ಹಸ್ತ್ಯಶ್ವರಥಪದಾತಿ ಸೈನ್ಯವನ್ನೆಲ್ಲ ಸೃಷ್ಟಿಸಿದನು. ಅದರ ಭಾರಕ್ಕೆ ಭೂಮಿಯು ಕುಸಿಯುವಂತಾಯಿತು. ಆದಿಶೇಷನು ದಿಗಿಲುಬಿದ್ದನು. ಆ ಸೇನೆಯ ಪಾದಧೂಳಿಯು ದಿಙ್ಮಂಡಲವನ್ನೆಲ್ಲ ವ್ಯಾಪಿಸಿತು. ಯಾವ ದಿಕ್ಕಿನಲ್ಲಿ ನೋಡಿದರೂ ವಿಷ್ಣುವಿನ ಆನೆಗಳೇ, ಎತ್ತ ನೋಡಿದರೂ ವಿಷ್ಣುವಿನ ಕುದುರೆಗಳೇ, ರಥಗಳೇ, ಕಾಲಾಳುಗಳೇ ತುಂಬಿಕೊಂಡುವು. ಇದನ್ನೆಲ್ಲ ಬ್ರಹ್ಮನು ನೋಡಿ ಕಿಡಿಕಿಡಿಯಾಗಿ, ತನ್ನ ಸಭಿಕರ ಕಡೆಗೆ ದುರುದುರನೆ ನೋಡಿದನು. ಆ ಕೂಡಲೇ ಸಭೆಯಲ್ಲಿದ್ದವರೆಲ್ಲ ಎದ್ದರು. ಕೋಲಾಹಲವು ದಿಙ್ಮಂಡಲವನ್ನು ವ್ಯಾಪಿಸಿತು. ಎಲ್ಲರೂ ಆಯುಧವನ್ನು ಹಿಡಿದರು. ಸಮರಭೇರಿಯು ಹೊಡೆಯಲ್ಪಟ್ಟಿತು. ವೀರಾವೇಶವು ವಿಜೃಂಭಿಸಿತು. ಮನುಮುನಿಗಳೂ ದೈತ್ಯದಾನವರೂ ದಿಕ್ಪಾಲಕರುಗಳೂ ಕಿನ್ನರ ಗಂಧರ್ವಾದಿಗಳೆಲ್ಲರೂ ತಮ್ಮ ತಮ್ಮ ವಾಹನವನ್ನೇರಿ ಆಯುಧವಂ ಜಳಪಿಸಿ ಯುದ್ಧಸನ್ನದ್ಧರಾದರು ಎರಡು ಪಕ್ಕದಲ್ಲೂ ವಿಷ್ಣು ಬ್ರಹ್ಮರೀರ್ವರ ಸೇನೆಯೂ ನಿಂತಿತು. ಮುಂದಣ ಸೈನ್ಯಗಳು ತಮ್ಮ ತಮ್ಮ ಯಜಮಾನನ ಪ್ರಣಯವನ್ನು ಪಡೆದು ಕಾಳಗಕ್ಕಾರಂಭಿಸಿದುವು. ಒಬ್ಬರೊಬ್ಬರಲ್ಲಿ ಪಂಥವನ್ನು ಕಟ್ಟಿ, ಹೀಯಾಳಿಸಿ, ಕತ್ತಿ, ಗದೆ, ಕೊಡಲಿ, ಕುಂತ, ಪಾಶ, ಮುಸಲ ಮೊದಲಾದ ನಾನಾ ಆಯುಧಗಳಿಂದ ಹೊಡೆದಾಡುತ್ತಿದ್ದರು. ಸೇನೆಯ ಪದಘಟ್ಟನೆಯಿಂದೆದ್ದ ಧೂಳಿಯು ಆಕಾಶವನ್ನೆಲ್ಲ ವ್ಯಾಪಿಸಿ ಸೂರ್ಯನ ತೇಜಸ್ಸನ್ನೇ ಮರೆಮಾಡಿ ಕತ್ತಲೆಯನ್ನುಂಟುಮಾಡಿತು. ಸಮುದ್ರದ ನೀರನ್ನೆಲ್ಲ ಹೀರಿಬಿಟ್ಟಿತು. "ಸೃಷ್ಟಿರಕ್ಷಣಕರ್ತರಾದ ಬ್ರಹ್ಮವಿಷ್ಣುಗಳೇ ಈ ರೀತಿಯಲ್ಲಿ ಕಾದಾಡುವುದಕ್ಕೆ ನಿಂತ ಬಳಿಕ ಇನ್ನು ಜಗತ್ತು ಉಳಿಯುವುದು ಹೇಗೆ? ಈ ಕಷ್ಟವನ್ನು ಯಾರಿಗೆ ಹೇಳಿಕೊಳ್ಳಬೇಕು? ಇವರಿಬ್ಬರ ಜಗಳವನ್ನು ನಿಲ್ಲಿಸಿ ಲೋಕವನ್ನುದ್ಧರಿಸುವುದಕ್ಕೆ ಆ ಪರಮೇಶ್ವರನೊಬ್ಬನೇ ಸಮರ್ಥನು" ಎಂದು ಲೋಕದ ಜನವೆಲ್ಲವೂ ಚಿಂತಿಸು

ತ್ತಿದ್ದಿತು. ಇತ್ತ ವಿಷ್ಣು ಬ್ರಹ್ಮರೀರ್ವರ ಸೇನೆಯಲ್ಲೂ ಆನೆಆನೆಗಳೂ ಕುದುರೆಕುದುರೆಗಳೂ ರಥರಥಂಗಳೂ ಕಾಲಾಳುಕಾಲಾಳುಗಳೂ ಪರಸ್ಪರ ಸಂಧಿಸಿ ಆರ್ಭಟಿಸಿ, ಇರಿದು ತಿವಿದು ಕಡಿದು ಕತ್ತರಿಸಿ ಚುಚ್ಚಿ ಬಡಿದು ನೀಳ ಹೋಳ್ಮಾಡಿ ಜಜ್ಜಿ ಸಿಗಿದು ಬಗಿದು ರಣಾಂಗಣವೆಲ್ಲ ರಕ್ತಮಾಂ ಸಾದಿಮಯವನ್ನಾಗಿ ಮಾಡಿಬಿಟ್ಟುವು. ಆಗ ಬ್ರಹ್ಮವಿಷ್ಣುಗಳೀರ್ವರೂ ಸ್ವತಃ ಕಾದಲನುವಾಗಿ ಹಂಸ ಗರುಡಗಳನ್ನು ಹತ್ತಿ ನಿಂತರು. ತನ್ನ ಸುತ್ತಲೂ ಇರುವ ದೇವದಾನವಶ್ರೇಷ್ಠರ ತಿಂತಿಣಿಯನ್ನೆಲ್ಲ ನೋಡಿ ಬ್ರಹ್ಮನು ಹರಿಗೆ ತೋರಿಸಿ, ಈ ನವಬ್ರಹ್ಮರೂ, ದೈತ್ಯರೂ, ದಾನವರೂ, ಕಿನ್ನರರೂ, ಗಂಧರ್ವರೂ, ಕಿಂಪುರುಷರೂ, ಯಕ್ಷರೂ, ಚಾರರೂ ಸಹ ಜಗತ್ತಿನಲ್ಲಿ ಮತ್ತಿನ್ನಾರನ್ನು ಓಲೈಸುವರು? ನನ್ನ ಸಂಪತ್ತಿಗೆ ಎಣೆಯಾವುದು? ನೀನೂ ಕೂಡ ನನಗೆ ಸಮನೆ? ಹೇಳು, ಎಂದು ಕೇಳಿದನು. ವಿಷ್ಣುವು—ಎಲೆ ಮೂಢನೆ! ಹಾಗಾದರೆ ನೋಡೆಂದು ಹೇಳಿ, ತನ್ನ ವಿಶ್ವರೂಪದಿಂದ ಮನುಮುನೀಂದ್ರಾದಿ ಸಕಲದೇವತೆಗಳನ್ನೂ ರಾಕ್ಷಸರನ್ನೂ, ಚತುರಂಗಸೈನ್ಯವನ್ನೂ, ಎಷ್ಟೋ ಮಂದಿ ಬ್ರಹ್ಮರನ್ನೂ, ಅನಂತವಿಷ್ಣುಗಳನ್ನೂ ಸಹ ಸೃಜಿಸಿ ತೋರಿಸಿದನು. ಈ ಸೈನ್ಯವೂ ಬ್ರಹ್ಮನ ಸೈನ್ಯವೂ ಅತ್ಯಂತ ವೀರಾಟೋಪದಿಂದ ಕಾದಾಡಿದುವು. ಎತ್ತನೋಡಿದರೂ ರುಂಡಗಳು, ಎತ್ತನೋಡಿದರೂ ಮುಂಡಗಳು, ಎತ್ತನೋಡಿದರೂ ರಕ್ತಪ್ರವಾಹ, ಎತ್ತನೋಡಿದರೂ ಕಣಿಗಳಸರ, ಎತ್ತನೋಡಿದರೂ ಹೆಣಗಳ ರಾಶಿಯು ತೋರುವಂತಾಯಿತು. ಭೂತಪಿಶಾಚಗಳು ಮಾಂಸವನ್ನು ತಿಂದು ರಕ್ತವನ್ನು ಕುಡಿದು ಕರುಳಸರವನ್ನು ಹಾಕಿ ರುಂಡಗಳನ್ನು ಹಿಡಿದು ಕುಣಿಯುತ್ತಿದ್ದುವು. ಈ ರೀತಿಯಲ್ಲಿ ಉಭಯಸೇನಾಸವ ಎವ್ರೂ ಕಲಕಿಹೋಗಿ ಭಯಂಕರವಾಗಿ ಕಾದಾಡಿ, ಕ್ಷಣೇಕ್ಷಣೆ ಲಯವಾಗುತ್ತಲಿರುವುದನ್ನು ಹರಿಬ್ರಹ್ಮರು ನೋಡಿ, ತಮ್ಮತಮ್ಮ ವಾಹನಗಳನ್ನು ತೊಡೆ ಸನ್ನೆಯಿಂದ ಮುಂದಕ್ಕೆ ಸರಿಸಿದರು ಆ ಹಂಸಗರುಡಗಳು ರಕ್ಕೆಯನ್ನು ಕೊಡಹಿದ ರಭಸಕ್ಕೆ ಬ್ರಹ್ಮಾಂಡವೆಲ್ಲಾ ಕಂಪಿಸಿತು. ಹರಿಬ್ರಹ್ಮರು ತಮ್ಮ ತಮ್ಮ ಕೈಬಿಲ್ಲಸಿಂಜಿನಿಯನ್ನು ದನಿಮಾಡಿದರು ಆ ಶಬ್ದವನ್ನು ಕೇಳಿ ಎಲ್ಲರ ಎದೆಯೂ ಬಿರಿದಿತು. ಹರಿಬ್ರಹ್ಮರು ಬಾಣ

ವನ್ನು ಹೂಡಿ ಸಿಂಜಿನಿಯಲ್ಲಿ ಎರಡು ಬೆರಲನ್ನೂ ಸೇರಿಸಿ ಕರ್ಣಾಂತವಾಗಿ ಸೆಳೆದು, "ಎಲೋ ಬ್ರಹ್ಮನೆ, ಬ್ರಹ್ಮಹತ್ಯದೋಷವುಂಟಾಗುವುದೆಂದು ಯೋಚಿಸಿ, ಇದುವರೆಗೂ ನಾನು ಸುಮ್ಮನಿದ್ದೆ, ಅದನ್ನು ನೀನು ತಿಳಿದು ಕೊಳ್ಳದೆ ಹೋದೆ; ಮಾತುವುದೇನು? ಈ ಏಟನ್ನು ತಡೆದುಕೊ" ಎಂದು ಹೇಳಿ, ಬಾಣವನ್ನು ಪ್ರಯೋಗಿಸಿದನು. ಅದನ್ನು ಬ್ರಹ್ಮನು ಕತ್ತರಿಸಿ ಪ್ರತಿಬಾಣವನ್ನು ಬಿಟ್ಟನು. ಅದು ವಿಷ್ಣುವಿನ ಎದೆಗೆ ಹೊಕ್ಕು ಗಾಯವನ್ನು ಮಾಡಿತು ಅದರಿಂದ ಹರಿಯು ಕೋಪಗೊಂಡು— ಎಲೊ ನೀಚಬ್ರಹ್ಮನೇ! ನೀನೇ ದೊಡ್ಡವನೆಂಬಹಂಕಾರದಿಂದ ನಮ್ಮೊಡನೆ ಕಾದಾಡಿದುದಕ್ಕೆ ಈಗ ಫಲವನ್ನುಣ್ಣು ಎಂದು ಹೇಳಿ, ಭೀಕರವಾದ ತೀಕ್ಷ್ಣಬಾಣವೊಂದನ್ನು ಪ್ರಯೋಗಿಸಿದನು. ಅದನ್ನು ಬ್ರಹ್ಮನು ನಡುದಾರಿಯಲ್ಲೇ ಖಂಡಿಸಿ, ವೀರನಾದವನ್ನು ಮಾಡಿ, ಬೆನ್ನಿನ ಬತ್ತಳಿಕೆಯಿಂದ ಬ್ರಹ್ಮಾಸ್ತ್ರವನ್ನು ತೆಗೆದು ಧನುಸ್ಸಿಗೆ ಸೇರಿಸಿ ಎಳೆದು ಆರ್ಭಟಿಸಿ ಹೊಡೆದನು. ಅದನ್ನು ಕಂಡು "ಓಹೋ ಜಗತ್ತು ಹಾಳಾಗುವ ಕಾಲ ಬಂದಿತು! ಏಲೋ ಮೂರ್ಖಬ್ರಹ್ಮನೆ! ಈ ಕ್ರೂರಬಾಣವನ್ನು ಪ್ರಯೋಗಿಸಬೇಡ; ನಿಲ್ಲಿಸು ನಿಲ್ಲಿಸು" ಎಂದು ಎಲ್ಲರೂ ಕೂಗಿಕೊಂಡರು. ಆಷ್ಟರಲ್ಲಿ ವಿಷ್ಣುವು ತನ್ನ ಬತ್ತಳಿಕೆಯಿಂದ ವೈಷ್ಣವಾಸ್ತ್ರವನ್ನು ತೆಗೆದು ಸಿಂಜಿನಿಗೆ ಸೇರಿಸಿದನು. ಆ ಬಾಣದ ತೀಕ್ಷ್ಣಜ್ವಾಲೆಯು ಜಗತ್ತನ್ನೆಲ್ಲ ತಲ್ಲಣಗೊಳಿಸಿತು. ಆ ಬಾಣವು ಸಿಂಜಿನಿಯಿಂದ ಬಿಡಲ್ಪಟ್ಟ ಕೂಡಲೇ ಫಾಲಾಕ್ಷನ ಉರಿಗಣ್ಣಿನಂತೆ ಅಗ್ನಿಕಣವನ್ನು ಸುರಿಸುತ್ತ ಬಿರುಸಿನಿಂದ ನುಗ್ಗಿತು. ಮಧ್ಯಮಾರ್ಗದಲ್ಲಿ ಬ್ರಹ್ಮಾಸ್ತ್ರವೈಷ್ಣವಾಸ್ತ್ರಗಳಿರಡೂ ಸಂಧಿಸಿ ಖಣಿಖಣಿಲನೆ ಕಾದಾಡುತ್ತಿದ್ದವು. ಅವೆರಡರ ಪರಸ್ಪರ ಹತಿಯಿಂದ ಬೆಂಕಿಯು ಮಳೆಯೇ ಸುರಿಯುತ್ತಲಿದ್ದಿತು. ಅದರಿಂದ ಬ್ರಹ್ಮಾಂಡವೇ ಹೊತ್ತಿ ಉರಿಯುತ್ತಿದ್ದಿತು. ರಣಾಂಗಣದಲ್ಲಿ ಹರಿಬ್ರಹ್ಮರ ಮತ್ತೂ ಅವರ ವಾಹನಗಳ ಹೊರತು ಮತ್ತಾರೂ ನಿಲ್ಲಲಾರದೆ ಓಡಿಹೋದರು. ವಿಷ್ಣುವು ಗರುಡನಿಂದಿಳಿದು ಗದೆಯೆನ್ನು ತೆಗೆದುಕೊಂಡು ಮುಂದೆ ಬಂದನು. ಅದನ್ನು ಕಂಡು ಬ್ರಹ್ಮನೂ ಹಂಸದಿಂದಿಳಿದು ಗದೆಯನ್ನು ಗ್ರಹಿಸಿ ಹತ್ತಿರಕ್ಕೆ ಬಂದನು. ಓರ್ವರನ್ನೊರ್ವರು ವಂಚಿಸಿ ಪ್ರಹರಿಸಲು, ಆ ಏಟನ್ನ


ತಪ್ಪಿಸಿ ಗದೆಯನ್ನು ತಿರುಹಿ ಬರಸೆಳೆದು ಹೊಡೆವರು. ಆ ಪೆಟ್ಟಿಗೆ ಸಿಕ್ಕದೆ ತಪ್ಪಿಸಿಕೊಂಡು ಆರ್ಭಟಿಸಿ ಮತ್ತೆ ಹೊಡೆವರು. ಹೀಗೆ ಇ ಬ್ಬರೂ ನಿಂತಲ್ಲಿ ನಿಲ್ಲದೆ ಬುಗುರಿಗಳಂತೆ ಸುತ್ತುತ್ತ ಭುಜಬಲದಿಂದ ಕಾ ದಾಡಿ ಸೋಲುಗೆಲವುಗಳನ್ನು ಕಾಣದೆ ಸಾಕಾಗಿ, ಆ ಗದೆಗಳನ್ನೆ ಬಿ ಸುಟು, ಮಲ್ಲಗಾಳಗಕ್ಕೆ ಅಣಿಯಾದರು. ಅವರ ವಾಹನಗಳೂ ಕೂಡ ಪರಸ್ಪರ ಕಾದಾಡಲುನಿಂತು, ಘೋರವಾಗಿ ಸೆಣಸಿ ಎರಡೂ ಸತ್ತುವು. ಒಳಕ ವೀರರೀರ್ವರೂ ನಿಂತು ತೋಳ್ಕೊಡೆಗಳನ್ನು ತಟ್ಟಿ, ಸಿಹ್ಮನಾ ದವನ್ನು ಮಾಡಿ, ದಂಡೆಗೊಟ್ಟು ಎರಡು ಬೆಟ್ಟಗಳು ಗಿರುಗಿರನೆ ತಿರುಗಿ ದಂತೆ ಬಂದು ಜಾವದವರೆಗೆ ಸುತ್ತಿದರು. ಇವರ ಸುತ್ತಾಟಕ್ಕೆ ಭೂಮಿ ಯೆಲ್ಲ ನಡುಗಿತು. ಆಗ ಓರ್ವರನ್ನೊರ್ವರು ಹಿಡಿದು ಅಪ್ಪಳಿಸಿ, ಅ ಡ್ಡಗಾಲ್ಹೊಟ್ಟು ಕೆಡಹಿ, ಎದ್ದು, ಬೆನ್ನಿಗೆ ಬಂದು, ಸುತ್ತಿ ತಿರುಹಿ, ಸೆಳೆದು ಬಿಟ್ಟು, ಕೆಡಹಿ, ಮತ್ತೆ ಮೇಲೆದ್ದು, ನುಗ್ಗಿ, ಎತ್ತಿಹಾಕಿ, ಒಡ ನೆಯೇ ಹಾವುಗಳಂತೆ ಹೆಣೆದು, ಹೊರಳಾಡಿ, ಸಾಕಾದರು. ಆದರೂ ಒಬ್ಬ ರೂ ಸೋಲಲಿಲ್ಲ. ಆಗ ಹರಿಯು ಅತ್ಯಂತ ರೋಷವನ್ನು ತಾಳಿ ಈ ನೀಚ ಬ್ರಹ್ಮನು ನನ್ನೊಡನೆ ಸಮಾನನಾಗಿ ಹೋರಾಡುವುದಕ್ಕೆ ಎಷ್ಟರವನು? ಇವನಪಂಕಾರವನ್ನೆಲ್ಲ ನಿಲ್ಲಿಸುತ್ತೇನೆಂದು ನಿರ್ಧರಿಸಿ, ಬ್ರಹ್ಮನ ಮುಷ್ಟಿ ಘಾತಕ್ಕೆ ತನ್ನ ಮೆಯ್ಯೊಡ್ಡಿ, ಒಳಕ ತೋಳನ್ನೆತ್ತಿ ಬ್ರಹ್ಮನ ತಲೆಯಮೇ ಲೆ ಬಲವಾಗಿ ಮುಷ್ಟಿಯ ಪೆಟ್ಟೊಂದನ್ನು ಕೊಟ್ಟನು. ಅದರಿಂದ ಬ್ರ ಹ್ಮನ ತಲೆಯು ಸಮನಾಗಿ ನಾಲ್ಕು ಹೋಳಾಯಿತು. ಆದರೇನು? ಲೋಕ ವನ್ನೇ ಹುಟ್ಟಿಸುವ ಬ್ರಹ್ಮನಿಗೆ ತನ್ನ ತಲೆಯನ್ನು ಹುಟ್ಟಿಸಿಕೊಳ್ಳುವುದು ದೊಡ್ಡದೆ ? ಬ್ರಹ್ಮನು ಆ ನಾಲ್ಕು ಹೋಳುಗಳನ್ನೇ ನಾಲ್ಕು ತಲೆಯನ್ನಾ ಗಿ ಮಾಡಿಕೊಂಡು ಅತಿಕೋಪದಿಂದ ಮತ್ತೆ ಯುದ್ಧಕ್ಕೆನಿಂತು ಇವನನ್ನು ಒಂದೇ ಏಟಿಗೆ ಮುರಿದಿಕ್ಕುವೆನೆಂದು ಅರ್ಭಟಿಸಿ, ಎರಡು ತೋಳುಗಳ ನ್ನೂ ತಟ್ಟಿ, ಮೇಲೆ ಬೀಳಲನುವಾದನು. ಅಷ್ಟರಲ್ಲಿ ಆಕಾಶದಿಂದ ಒಂ ದು ಶಬ್ದವು ಕೇಳಬಂದಿತೆನೆಂದರೆ— "ಎಲೆ ವಿಷ್ಣುವೆ, ನೀನು ಅಜ್ಞನೆ? ಬ್ರಹ್ಮನೆ, ನೀನು ಮೂರ್ಖನೆ ? ನಿಮ್ಮಿಬ್ಬರಿಗೂ ಹೆಚ್ಚಿನ ವಸ್ತುವು ಬೇ ರೊಂದುಂಟು. ಅದು ಈಗ ನಿಮ್ಮಿಬ್ಬರ ಮಧ್ಯದಲ್ಲಿ ಮೂಡುತ್ತದೆ. ಅದ

ರ ಪಾದವನ್ನಾಗಲಿ ಮಸ್ತಕವನ್ನಾಗಲಿ ನಿಮ್ಮಿಬ್ಬರಲ್ಲಿ ಯಾರು ಕಂಡು ಬರುವರೋ ಅವರೇ ದೊಡ್ಡಸಾಹಸಿಗಳು." ಎಂಬ ಈ ವಚನವನ್ನು ಕೇಳಿ ಇಬ್ಬರೂ ಬೆರಗಾಗಿ, ಯುದ್ಧಕುತೂಹಲವನ್ನು ಬಿಟ್ಟು ನಿಂತರು. ಅಷ್ಟರಲ್ಲಿ ಆವರಿಬ್ಬರ ಮಧ್ಯದಲ್ಲಿ ಅನೇಕ ಸೂರ್ಯರನ್ನು ಕರಗಿಸಿ ಎರಕ ವೆರೆದ ದೊಡ್ಡಮೂಲಸ್ತಂಭವೋ ! ಎಂಬಂತೆಯೂ, ಪ್ರಪಂಚದ ಪಂಚ ಭೂತಗಳನ್ನೂ ಅಳಿಯುವುದಕ್ಕಾಗಿ ಮಾಡಿಟ್ಟ ಚಿನ್ನದ ಅಳತೆಯ ದಂ ಡವೋ! ಎಂಬಂತೆಯೂ, ಮುಂದೆ ಸೃಷ್ಟಿಸಲ್ಪಡುವ ಲೋಕಗಳು ಜರೆ ದು ಬೀಳಬಾರದೆಂಬುದಾಗಿ ಅವುಗಳ ಆಶ್ರಯಕ್ಕೆ ಕೊಡಲೋಸುಗ ಸಿ ದ್ಧಮಾಡಿಟ್ಟ ಚಿನ್ನದ ದೊಡ್ಡಮುಂಡಿಗೆಯೋ ಎಂಬಹಾಗೆಯೂ ಮಹಾ ಲಿಂಗವು ಉದಿಸಿತು ಆದಕ್ಕೆ ಭೂಮಿಯೇ ಪೀಠವಾಗಿದ್ದಿತು. ಪರ್ವತಗ ಳೇ ಭೂಜಗಳಾಗಿದ್ದುವು. ಸಪ್ತಸಮುದ್ರಗಳೇ ಹೊಟ್ಟೆಯಾಗಿದ್ದುವು. ಚಂದ್ರಸೂರ್ಯಾಗ್ನಿಗಳೇ ಮೂರು ಕಣ್ಣಾಗಿದ್ದುವು. ಪಾತಾಳವೇ ಜಾದ ವಾಗಿದ್ದಿತು. ನಕ್ಷತ್ರಗಳೇ ಹೂವಾಗಿದ್ದುವು. ಪ್ರಮಥಗಣರೇ ಓಲೈ ಸುವವರಾಗಿದ್ದರು. ಇಂತಹ ಮಹಾಲಿಂಗವನ್ನು ನೋಡಿ ವಿಷ್ಣುಬ್ರಹ್ಮರೀ ರ್ವರೂ ಬೆರಗಾದರು. ಆ ಲಿಂಗದ ಮಹಾತೇಜಸ್ಸಿನ ಮುಂದೆ ಇವರ ತೇಜ ಸ್ಸು ಸೂರ್ಯನಮುಂದಿನ ಮಿಂಚುಹುಳುವಿಗೆ ಸಮಾನವಾಗಿದ್ದಿತು. ಆಗ ಅವರೀ ರ್ವರಲ್ಲಿ ವಿಷ್ಣುವು ಲಿಂಗದ ಪಾದವನ್ನೂ, ಬ್ರಹ್ಮನು ಶಿರಸ್ಸನ್ನೂ ನೋಡಿ ಬ ರುತ್ತೇನೆಂದು ನಿಶ್ಚೈಸಿ, ವಿಷ್ಣುವು ಹಂದಿಯ ಆಕಾರವನ್ನು ಧರಿಸಿ, ಭೂ ಮಿಯನ್ನು ಕೊರೆದುಕೊಳ್ಳುತ್ತ ಹೋದನು. ಬ್ರಹ್ಮನು ಹಂಸನಾಗಿ ಆಕಾಶದಕಡೆಗೆ ಹಾರಿದನು. ಶಿವನ ಮಸ್ತಕದಿಂದ ನಿರ್ಮಾಲ್ಯವಾದ ಕೇ ತಕಿಯು (ತಾಳೆಯ ಹೂವು) ಇಳಿದು ಬರುತ್ತಿದ್ದಿತು ಆದನ್ನು ಬ್ರಹ್ಮ ನು ಮಧ್ಯಮಾರ್ಗದಲ್ಲಿ ಸಂಧಿಸಿ, ಎಲೆ ಮಹಾತ್ಮನೆ ನಮಸ್ಕಾರ, ನೀನಿ ಲ್ಲಿಂದ ದಯೆಮಾಡಿಸಿದೆ ? ಎಂದು ಕೇಳಲು, ಕೇತಕಿಯು—ತನ್ನ ಸಂಗತಿ ಯನ್ನು ಹೇಳಿ, ನೀನಾರೆಂದು ಕೇಳಿತು. ಅದಕ್ಕವನು—ನಾನುಬ್ರಹ್ಮ, ಶಿವನ ಶಿರಸ್ಸನ್ನು ಕಾಣುವುದಕ್ಕೆ ಹೋಗುತ್ತೇನೆಂದು ಹೇಳಿ, ಇನ್ನೆಷ್ಟು ಗಾವು ದದ ದೂರವಿರುವುದೆಂದು ಕೇಳಿದನು. ಅದಕ್ಕೆ ತಾಳೆಯು ನಕ್ಕು, ನೀನು ಇನ್ನೆಷ್ಟೇ ಯುಗಾಂತರಗಳು ಪ್ರಯಾಣ ಮಾಡಿದರೂ ಮಸ್ತಕದರ್ಶನ

ವಾಗುವುದು ದುರ್ಲಭವೆಂದಿತು. ಅದನ್ನು ಕೇಳಿದಳೂಡಲೇ ಬ್ರಹ್ಮನು ದಿಗಿಲು ಬಿದ್ದು ಬೆರಗಾದನು. ಮತ್ತೂ ಆ ಕೇತಕಿಯೊಡನೆ ಮೈತ್ರಿಯಿಂದ ಮೆಲ್ಲಗೆ ಬಂದು ಮಾತನಾಡತೊಡಗಿದನು-- ಎಲೆ ಕೇತಕಿಯೇ ನಾನು ಶಿವನ ಮಸ್ತಕವನ್ನು ಕಂಡು ಬರುತ್ತೇನೆಂದು ವಿಷ್ಣುವಿನೊಡನೆ ಭಾಷೆಗೊಟ್ಟು ಬಂದೆನು. ಈಗ ನಾನು ನೋಡದೆ ಬಂದೆನೆಂದರೆ ಬಹು ಅವಮಾನವಾಗುವುದು. ಆದಕ್ಕಾಗಿ ನೀನು ಈಗ ನನ್ನ ಮಾನವನ್ನು ಕಾಪಾಡಬೇಕು. ಇದರಮೇಲೆ ನಾನು ನಿನ್ನೊಡನೆ ಹೆಚ್ಚು ಹೇಳಿಕೊಳ್ಳಬೇಕಾದುದೇನಿದೆ ? ಎಂದನು. ಆಗ ತಾಳೆಯು ಆಗಲಿ ಬಾರೆಂದು ಹಿಂತಿರುಗಿ ಸೂರ್ಪವ ರಣ್ಣಾಂಗಣಕ್ಕೆ ಕರೆದುಕೊಂಡುಬಂದಿತು. ಅತ್ತ ವಿಷ್ಣುವು ಎಷ್ಟೋ ದೂರ ಭೂಮಿಯನ್ನು ಕೊರೆದುಕೊಂಡು ಹೋದರೂ ಕಡೆಗೆ ಮೂಲವನ್ನು ಕಾಣದೆ ಬೇಸತ್ತು, ಅಸಾಧ್ಯವೆಂದು ನಿಶ್ಚೈಸಿ, ಹಿಂತಿರುಗಿ ರಣ್ಣಾಂಗಣಕ್ಕೆ ಬಂದು, ತನಗಿಂತಲೂ ಮುಂದಾಗಿ ಬಂದು ನಿಂತಿರುವ ಬ್ರಹ್ಮನನ್ನು ಕಂಡು, ನೀನು ಶಿವನ ಶಿರಸ್ಸನ್ನು ಕಂಡುಬಂದೆಯಾ ? ಎಂದು ಕೇಳಲು, ಬ್ರಹ್ಮನು ಕಂಡೆನೆಂದು ನುಡಿದನು. ಅದಕ್ಕೆ ಸಾಕ್ಷಿಯಾರೆಂದು ಹರಿಯು ಕೇಳಲು, ಕೇತಕಿಯನ್ನು ತೋರಿಸಿದನು. ಬ್ರಹ್ಮನು ಶಿವನ ಶಿರಸ್ಸನ್ನು ನೋಡಿದುದು ಬಿಟವೆಂದು ಅದು ನುಡಿಯಲು, ನೀನು ಅನೃತವಾದಿ; ಅದು ಕಾರಣ, ಇನ್ನು ಮುಂದೆ ಪೂಜೆಗೆ ಅಯೋಗ್ಯನಾಗೆಂದು ವಿಷ್ಣುವು ಕೇತಕೀರಾಜನಿಗೆ ಶಾಪವನ್ನಿತ್ತನು. ಅದು ಗೋಳಾಡುತ್ತ ಹೊರಟು ಹೋಯಿತು. ಒಳಿಕ ಲಿಂಗವು ಭೀಕರಾಕಾರವನ್ನು ಧರಿಸಿತು. ಇದನ್ನು ನಾವು ನೋಡಿ ಸೈರಿಸಿಕೊಳ್ಳುವೆವೇ ! ಎಂದು ವಿಷ್ಣು ಬ್ರಹ್ಮರು ಬೆದರಿ ಸ್ತುತಿಮಾಡಿದರು. ಆಗ ಶಿವನು ಶಾಂತರೂಪವನ್ನು ಧರಿಸಿದನು ಹರಿಬ್ರಹ್ಮರೀರ್ವರೂ ಜಯಜಯ ! ಶಂಕರ ! ಮಹಾದೇವ ! ಎಂದು ಮೊದಲಾಗಿ ಸ್ತುತಿಸಿ, ನಮ್ಮನ್ನು ಉದ್ಧಾರ ಮಾಡಬೇಕೆಂದು ಪ್ರಾರ್ಥಿಸಿದರು ಅವರ ಸ್ತುತಿಗೂ ಭಕ್ತಿಭಾವಕ್ಕೂ ಈಶ್ವರನು ಮೆಚ್ಚಿ, ಕರುಣದಿಂದ ಪ್ರಸನ್ನನಾಗಿ, ಪಂಚಮುಖ ದಶಭುಜ ಜಟೂಪಟಲ ಚಂದ್ರರೇಖೆ ಮೊದಲಾದುವುಗಳನ್ನು ಧರಿಸಿ, ನಿಜರೂಪದಿಂದ ಪ್ರತ್ಯಕ್ಷನಾದನು. ಆಗ ಅವರೀರ್ವರೂ ಸಂತುಷ್ಟರಾಗಿ, ಅತಿಶಯಭಕ್ತಿಯಿಂದ

ಮತ್ತೆ ಕೊಂಡಾಡಿದರು. ಆಗ ಶಿವನು ವಿಷ್ಣುವನ್ನು ಕರೆದು, ಬ್ರಹ್ಮನ ಅ ಸತ್ಯದಿಂದ ಕರಗಿ ಬಿದ್ದುಹಾಳಾಗಿರುವ ಭೂಮಿಯನ್ನು ಮುನ್ನಿನಂತೆ ನಿ ರ್ಮಿಸಿ ರಕ್ಷಿಸಿಕೊಂಡಿರೆಂದುಹೇಳಿ ಅಪ್ಪಣೆ ಕೊಟ್ಟು, ಕಳುಹಿ, ಬಳಿಕ ಬ್ರ ಹ್ಮನನ್ನು ಸಮೀಪಕ್ಕೆ ಕರೆದು, ನೀನು ಇನ್ನು ಮುಂದೆ ಇಂತಹ ಅಹಂ ಕಾರವನ್ನು ಮಾಡಬೇಡ; ಅಸತ್ಯವನ್ನು ಬಿಡು; ಸ್ಥಿರಬುದ್ಧಿಯಿಂದ ಪೂ ರ್ವದಂತೆ ಜಗತ್ಸೃಷ್ಟಿಯನ್ನು ಮಾಡಿಕೊಂಡಿರು, ನಿಮ್ಮ ನಿಮ್ಮಲ್ಲಿ ಕಲ ಹವನ್ನು ಮಾಡಬೇಡಿರಿ, ಎಂದು ಆಜ್ಞಾಪಿಸಿ, ಅಂತರ್ಹಿತನಾದನು. ವಿ ಷ್ಣುವು ವರಾಹರೂಪಿನಿಂದಲೇ ತನ್ನ ಮೂತಿಯಿಂದ ಭೂಮಿಯನ್ನೆತ್ತಿ ನಿಲ್ಲಿಸಿ, ಸೃಷ್ಟಿಯನ್ನು ಮಾಡೆಂದು ಬ್ರಹ್ಮನಿಗೆ ಹೇಳಿ, ತಾನು ಕ್ಷೀರಸ ಮುದ್ರದ ಉತ್ತರ ಭಾಗದಲ್ಲಿ ಶೇಷನ ಮೇಲೆ ಮಲಗಿಕೊಂಡನು ಎಂದು ಚೆನ್ನಬಸವೇಶನು ನುಡಿದನೆಂಬಿಲ್ಲಿಗೆ ೪ನೆ ಅಧ್ಯಾಯವು

ಸಂಪೂರ್ಣವು.



೬ ನೆ ಅಧ್ಯಾಯವು.

ಅರ್ಧನಾರೀಶ್ವರಲೀಲೆ.



ಚತುರ್ಮುಖಬ್ರಹ್ಮನಿಗೆ ಜಗತ್ಸೃಷ್ಟಿಯು ಅವನ ಅಸತ್ಯದಿಂದ ಅಸಾಧ್ಯವಾಗಿರಲು, ಬಹು ಕಾಲ ಈಶ್ವರನನ್ನು ಕುರಿತು ತಪಸ್ಸು ಮಾ ಡಿದನು. ಶಿವನು ಪ್ರತ್ಯಕ್ಷನಾಗಿ, ಇಷ್ಟಾರ್ಥವೇನು? ಬೇಡೆನಲು, ಸ್ವಾ ಮಿ! ತಮ್ಮಪ್ಪಣೆಯಂತೆ ನಾನು ಜಗತ್ಸೃಷ್ಟಿಯನ್ನು ಮಾಡಬೇಕೆಂದು ಯಾವ ಯಾವ ವಿಧದಲ್ಲಿ ಪ್ರಯತ್ನಿಸಿದರೂ ತಮ್ಮ ಅವಲಂಬನವಿಲ್ಲದಕಾ ರಣ ಸಾಧ್ಯವಾಗದೆ ಇರುವುದು. ಅದುಕಾರಣ, ನೀವೇ ಮೊದಲು ನನ್ನ ದೇಹದಿಂದುದ್ಭವಿಸಿ ಸೃಷ್ಟಿಕಾರ್ಯಕ್ಕೆ ಸಹಾಯಗೊಳಿಸಬೇಕೆಂದು ಪ್ರಾ ರ್ಥಿಸಿಕೊಂಡನು. ಆಗ ಶಿವನು— ಅಯ್ಯಾ ನೀನೇನೋ ಈ ವರವನ್ನು ಕೇಳಿಕೊಂಡೆ. ನಿನ್ನಿಷ್ಟದಂತೆ ನಾನು ನಿನ್ನ ಶರೀರದಿಂದ ಮೂಡಿದೆನಾದ

ರೆ, ಆ ಕೂಡಲೇ ನಿನಗೆ ಹಾನಿಯು ತಪ್ಪುವುದಿಲ್ಲ. ಅದುಕಾರಣ ಈ ವರವು ಬೇಡವೆಂದರೂ ಬ್ರಹ್ಮನು ಕೇಳದೆ, ಆದರಾಗಲಿ ಅದನ್ನೇ ದಯಪಾಲಿಸೆಂದು ಕೇಳಿಕೊಂಡನು. ಶಿವನಾದರೊ ಹಾಗಾದರೆ ನಿನ್ನಿಷ್ಟ,ದಂತೆಯೇ ಆಗಲಿ: ನೀನು ಹೀಗೆಯೇ ನಿಶ್ಚಲಸಮಾಧಿಸ್ಥಿತನಾಗಿರು ಎಂದು ಹೇಳಿ ಬಯಲಾಗಿ, ಸ್ಫಟಿಕಕಲಶದಲ್ಲಿ ತೋರುವ ದೀಪದಂತೆ ಆ ಬ್ರಹ್ಮನ ಶರೀರದಲ್ಲಿ ಪರಶಿವನು ಉಮಾಶಕ್ತಿಸಮೇತನಾಗಿ ಷಟ್ಚಕ್ರವನ್ನೂ ಭೇದಿಸಿಕೊಂಡು ಅವನ ಹಣೆಯಿಂದ ಆವಿರ್ಭವಿಸಿದನು. ಶಕ್ತಿಸಮೇತವಾದ ಆ ತೇಜೋರಾಶಿಯು ಐದಿಯು ಮಹಾಂಧಕಾರದೊಡನೆ ಬೆರೆದು ಬಂದ ಶತಕೋಟಿಸೂರ್ಯರಂತೆ ತೇಜಸ್ಸುತ್ತಿದ್ದಿತು. ಬಡೆದು ಬಂದ ಆ ರಭಸಕ್ಕೆ ಬ್ರಹ್ಮನ ದೇಹವು ಇಬ್ಭಾಗವಾಯಿತು. ಆಗ ಪರಶಿವನು ಅತಿ ರೌದ್ರಾಕಾರದಿಂದ ರುದ್ರಮೂರ್ತಿಯೆನಿಸಿಕೊಂಡನು. ಉಮೆಯು ಕಾಳಿಯಾದಳು. ರುದ್ರನು ಆಕಾಳಿಯೊಡನೆ ಕ್ರೀಡಿಸುತ್ತ ಕೆಲವು ಕಾಲವನ್ನು ಕಳೆದನು. ಆಗ ರುದ್ರನು ಸ್ವಸದೃಶರಾದ ನೀಲಲೋಹಿತ ಮೊದಲಾದ ನೇಕ ರುದ್ರಗಣಗಳನ್ನೂ, ಬಲವಿಕರಣಿ ಬಲಪ್ರಮಥಿನಿ ಮೊದಲಾದ ಶಕ್ತಿದೇವಿಯರನ್ನೂ ಸೃಷ್ಟಿಸಿ, ಅವರವರಿಗೆ ದಾಂಪತ್ಯವನ್ನುಂಟುಮಾಡಿದನು. ಇತ್ತ ಅಳಿದುಳಿದ ಬ್ರಹ್ಮನಮೇಲೆ ದಯೆಗೊಂಡು ಅವನ ದೇಹದ ಎರಡು ಹೋಳುಗಳನ್ನೂ ಕೂಡಿಸಿ ಕಟಾಕ್ಷಿಸಲು, ಪುಲಗಿದ್ದವರೇಳ್ವಂತೆ ಬ್ರಹ್ಮನು ಎದ್ದು, ಮಹಾರುದ್ರಕಾಳಿಗಳ ರೌದ್ರರೂಪವನ್ನು ನೋಡಿ, ಭಯಪಟ್ಟು, ಹರಹರಾ ! ತವಿಷ್ಕಾರ್ಯರ ಭಯಂಕರಾಕೃತಿಯನ್ನು ನೋಡಿ ನನ್ನೆದೆಯು ಒಡೆದುಹೋಗುತ್ತಿದೆ; ನನ್ನಲ್ಲಿ ಕರುಣವಿಟ್ಟು, ಶಾಂತವಾದ ಏಕಮೂರ್ತಿಯನ್ನು ಧರಿಸಿ ದರ್ಶನವನ್ನು ಕೊಡಬೇಕೆಂದು ಬೇಡಲು, ಆಗ ಪರಶಿವನು ಅರ್ಧನಾರೀಶ್ವರರೂಪವನ್ನು ಧರಿಸಿದನು. ಎಡಗಡೆಯಲ್ಲಿ ಸ್ತ್ರೀರೂಪವನ್ನೂ, ಬಲಗಡೆಯಲ್ಲಿ ಪುಂರೂಪವನ್ನೂ ಧರಿಸಿದ್ದ ಆ ಮೂರ್ತಿಯು ಇಂದ್ರನೀಲವೂ, ರತ್ನವೂ ಬೆರಸಿದಂತೆ ತೋರುತ್ತಿದ್ದಿತು. ಆ ಮೂರ್ತಿಯಲ್ಲಿ ಬಂದು ಕಡೆ ತುರುಬೂ, ಬಂದು ಕಡೆ ಜಡೆಯೂ, ಆದರಂತೆಯೇ ಓಲೆಯೂ ಕರ್ಣಕುಂಡಲವೂ, ಕಂಠಹಾರವೂ ರುಂಡಮಾಲೆಯೂ, ಕನ್ನೈದಿಲೂ ಶೂಲವೂ, ರತ್ನದಸರವೂ ಸರ್ಪಮಾಲಿಕೆಯೂ,

ಪಟ್ಟಿಸೀರೆಯುಂ ಚರ್ಮಾಂಬರಂ, ಸಹ ಎಸೆಯುತ್ತಿದ್ದುವು. ಈ ಶಾಂತಮೂರ್ತಿಯನ್ನು ಬ್ರಹ್ಮನು ಕಂಡು ಸಂತೋಷದಿಂದ ಕೊಂಡಾಡಿ, ಸ್ವಾಮಿ! ಮುಂದೆ ಜಗತ್ಸೃಷ್ಟಿಯನ್ನು ಮಾಡುವುದು ಹೇಗೆಂಬ ವಿವರವನ್ನು ನನಗೆ ಬೆಸಸಬೇಕೆಂದು ಪ್ರಾರ್ಥಿಸಿದನು. ಶಂಕರನು–ಬ್ರಹ್ಮನೇ ಈ ನೀಲಲೋಹಿತಾದಿರುದ್ರಗಣಸಮೋತನಾಗಿ ಸೃಷ್ಟ್ಯಮಾಜೆನಲು, ಅವರ ರೌದ್ರರೂಪವನ್ನು ನೋಡಿ, ಹೆದರಿ, ಸ್ವಾಮಿ! ಸಾಕು ನನಗೆ ಇವರ ಸಹವಾಸವು ಸಲ್ಲದು ಎಂದು ನುಡಿದನು. ಆಗ ಶಿವನು ನಕ್ಕು, ನೀನು ಮೊದಲಿನಂತೆಯೇ ಜನನಮರಣಬದ್ಧವಾದ ಜಗತ್ತಿನ ಸೃಷ್ಟಿಯನ್ನು ಮಾಡೆಂದು ನಿರವಿಸಿ ಅಂತರ್ಹಿತನಾದನು. ಒಳಿಕ ಬ್ರಹ್ಮನು ಲೋಕಸೃಷ್ಟಿಯನ್ನು ಮೊದಲಂತೆಯೇ ಮಾಡಿ, ಸತ್ಯಲೋಕದಲ್ಲಿ ಸಕಲ ದೇವತೆಗಳೊಡನೆ ಅತಿಸೌಭವದಿಂದ ಒಡ್ಡೋಲಗಂಗೊಂಡು ಸುಖವಿಂದಿರ್ದನೆಂದು ಚೆನ್ನಬಸವೇಶನು ಸಿದ್ಧರಾಮೇಶನಿಗೆ ಪೇಳ್ದಸೆಂಬಿಲ್ಲಿಗೆ ಆರನೆಯಧ್ಯಾಯವು ಸಂಪೂರ್ಣವು.

ಏನೆ ಅಧ್ಯಾಯವು.

ಬ್ರಹ್ಮಶಿರಶ್ಛೇದನವು.

ಬ್ರಹ್ಮನು ಸಕಲ ಮುನಿಗಣಸಿದೇವತಾದಿಗಳಿಂದ ಸೇವೆಗೊಳ್ಳುತ್ತ ಸಭೆಯಲ್ಲಿರಲು, ಮುನಿಗಳೆದ್ದು ಬ್ರಹ್ಮನಿಗೆ ಕೈಮುಗಿದು, ಭಕ್ತಿಯಿಂ ಕೊಂಡಾಡಿ, ಎಲೈ ಸ್ವಾಮಿಯೇ! ಜಗತ್ತಿಗೆಲ್ಲ ವಂದ್ಯನೂ ನಿತ್ಯನೂ ಆದ ದೇವನಾರು? ಪೇಳು; ಅವನನ್ನು ನಾವು ಭಯಭಕ್ತಿಯಿಂದ ಸದಾ ಉಪಾಸಿಸುವೆವು ಎಂದು ಕೇಳಿಕೊಂಡರು. ಆಗ ಬ್ರಹ್ಮನು ಕೇಕೆಹಾಕಿ ನಕ್ಕು, ಸಕಲ ಲೋಕಪ್ರೇಕ್ಷ್ಯನಾದ ದೇವನಾರೆಂದು ನನ್ನನ್ನೇ ನೀವು ಕೇಳುವಿರಾ? ಈ ಸಕಲ ಜಗತ್ಸೃಷ್ಟಿಸ್ಥಿತಿಪ್ರಳಯಗಳೆಲ್ಲ ನನ್ನಧೀನವಾಗಿದ್ದು, ಇವರ ಭಾರವನ್ನೆಲ್ಲ ವಹಿಸಿಕೊಂಡಿರುವನು ನಾನಲ್ಲದೆ ಮತ್ತಾರುಂಟು? ಹರಿಹರೇಂದ್ರಾದಿಗಳೂ ಕೂಡ ನನ್ನನ್ನೇ ಸದಾ ಧ್ಯಾನಿ

ಸುತ್ತಿರುವರು. ಅವರಿಂದಲೇ ನನಗೆ ಸುರಜ್ಯೇಷ್ಠನೆಂಬ ಹೆಸರು ಬಂದಿರುವುದು. ಅದುಕಾರಣ ನಾನೇ ಪರಬ್ರಹ್ಮ, ನನಗಿಂತಲೂ ಪರವಾದ ದೈವವು ಬೇರೊಂದಿಲ್ಲವೆಂದು ತಿಳಿದುಕೊಳ್ಳಿರಿ, ಎಂದು ಹೇಳುತ್ತಿದ್ದನು. ಈ ವಾರ್ತೆಯನ್ನು ವಿಷ್ಣುವು ಕೇಳಿ, ಬ್ರಹ್ಮನ ಈ ಅಜ್ಞಾನವನ್ನು ತೊಲಗಿಸಬೇಕೆಂದು ಯೋಚಿಸಿ, ಬಂದು, ಮುಂದೆ ನಿಂತು, ಇದೇನಯ್ಯ ಬ್ರಹ್ಮ ! ನೀನು ವೀರವಿಪ್ಪ ಮಾತನಾಡಿದ ಬಳಿಕ ಇನ್ನು ಸಮಾಧಾನಪಡಿಸುವವರಾರು ? ಇವೇಕೆ ನಿನಗಿಂತಹ ಪುಚ್ಛ ಹಿಡಿದಿತು ? ಇದೆಲ್ಲ ಶಿವನ ಮಾಯೆಯಲ್ಲದಿದ್ದರೆ ನೀನು ತಾನೇ ಹೀಗಾಡುತ್ತಿದ್ದೆಯಾ ? ಚೆನ್ನಾಯಿತು ! ! ನೀನು ಜಗತ್ಸೃಷ್ಟಿಕರ್ತ; ನಾನು ಪಾಲನ ಕರ್ತ; ನಮ್ಮಿಬ್ಬರಿಗೂ ಶಿವನೇ ಸ್ವಾಮಿಯು; ಅವನೇ ಪರದೈವವು. ಸಕಲ ಲೋಕಾಧಾರನು. ನಾನು ನೀನು ಮೊದಲಾದ ಸಕಲರೂ ಅಸ್ವತಂತ್ರರು. ನಾವೆಲ್ಲರೂ ಆ ಪರಶಿವನ ಸೂತ್ರದ ಬೊಂಬೆಗಳು. ಹೀಗಿರುವಲ್ಲಿ ನೀನು ಅಹಂಕಾರದ ಮಾತನಾಡಬಹುದೆ ? ನನ್ನ ಮಾತಿನಲ್ಲಿ ನಿನಗೆ ನಂಬುಗೆಯಿಲ್ಲದಿದ್ದರೆ ವೇದಗಳನ್ನೇ ಕೇಳು ಎಂದನು. ಅಷ್ಟರಲ್ಲಿ ಋಗ್ಯಜುಸ್ಸಾಮಾಥರ್ವಣಗಳೆಂಬ ಚತುರ್ವೇದಗಳೂ ಸಾಕಾರವಾಗಿ ಬಂದು, ಮುಂದೆ ನಿಂತು—ಎಲೆ ಬ್ರಹ್ಮನೇ ! ಆ ಪರಶಿವನೊಬ್ಬನೇ ಅನ್ವಿತೀಯನು; ಅಭವನು, ಅತ್ಯಶ್ಚಿದ್ದಶಾಂಗುಲನು; ಅವನೇ ಸರ್ವಲೋಕಾಧಾರನು. ನಿನಗೆ ಈ ಮರುಳುತನವು ಸಲ್ಲದು, ಬಿಡು, ಎಂದು ನುಡಿದುವು. ಬಳಿಕ ವೇದಮೂಲವಾದ ಪ್ರಣವವೂ ಸಾಕಾರವಾಗಿ ಬಂದು,—ಎಲೆ ಬ್ರಹ್ಮನೇ ! ಶಿವನೊಬ್ಬನೇ ಅಜ, ಅಪ್ರಮೇಯ, ಅವ್ಯಯ, ತ್ರಿಜಗದ್ವಂದಿತ; ಸಾಕ್ಷಾತ್ಪರಬ್ರಹ್ಮ; ನೀನು ದೇವೋತ್ತಮನೆಂದು ಹೇಳಿಕೊಳ್ಳುವ ಅಹಂಕಾರದ ಮಾತು—ಹಿಂದೆ ಯಾವನೋ ಒಬ್ಬನು " ನನ್ನ ತಾಯಿ ಒಂಜೆ, ಇದು ಸತ್ಯ" ವೆಂದು ಸಾಧಿಸಿ ನುಡಿದ ಗಾಥೆಗೆ ಸಮನಾಗಿದೆ. ಸಾಕು; ನಿನ್ನ ಮರುಳ್ತನವನ್ನು ಬಿಡೆಂದು ಬೋಧಿಸಿ ಬಯಲಾಯಿತು. ಇದನ್ನೆಲ್ಲ ಬ್ರಹ್ಮನು ಕೇಳಿ, ಧಿಕ್ಕರಿಸಿ, ವಿಷ್ಣುವಿನ ಮುಖವನ್ನು ನೋಡಿ, ಏನಯ್ಯಾ ! ಹೆಂಡತಿಗೆ ಅರ್ಧದೇಹವನ್ನು ಕೊಟ್ಟು, ಚರ್ಮವನ್ನು ಹೊದೆದು, ಸ್ಮಶಾನದಲ್ಲಿ ಓಡಿಯಾಡುತ್ತ ಅಳುಚಿಯಾಗಿರುವ ಆ ತಿರಿಕನನ್ನು ದೇವೋತ್ತಮನೆಂದು

ಹೇಳಿದರೆ ಅದನ್ನು ಹೇಗೆ ನಂಬುವ್ರದು ? ಎಂದು ದೂಷಿಸುತ್ತಿರುವ ಲ್ಲಿ ಗಾಢಾಂಧಕಾರವನ್ನು ತೊಲಗಿಸಲು ಉದಯಿಸುವ ಮಾರ್ತಾಂಡಮಂ ಡಲದಂತೆಯೂ, ಅಜ್ಞಾನವನ್ನು ಹೋಗಲಾಡಿಸಲೈತಂದ ಸುಜ್ಞಾನದಂ ತೆಯೂ: ಪಂಚಮುಖ ದಶಭುಜ ಜಟಾಪಟಲ ಚಂದ್ರರೇಖೆ ಚರ್ಮಾಂಬ ರ ಮೊದಲಾದುವುಗಳಿಂದೊಪ್ಪುವ ಜ್ಯೋತಿರ್ಮಯನಾದ ಪರಶಿವನು ಬ್ರಹ್ಮನ ಮುಂದೆ ಪ್ರತ್ಯಕ್ಷನಾದನು. ಆಗ ಇಂದ್ರಾದಿದೇವತೆಗಳೆಲ್ಲರೂ ಅಭಿವಂದಿಸಿದರು. ಬ್ರಹ್ಮನು ಆ ಮಹಾಸ್ವಾಮಿಯನ್ನು ನೋಡಿ, ಇವನೆ ಯೋ ಜಗದೀಶ್ವರ ? ಬಲು ಚೆನ್ನಾಯಿತು ! ಇವನ ವೇಷವನ್ನು ನೋಡಿ ನಕ್ಕು ನಕ್ಕು ನನ್ನ ಹೊಟ್ಟೆಯೆಲ್ಲ ನೋಯುತ್ತಿರುವುದು ! ಸಾಕು, ನೀವೇ ನೋಡಿರಿ, ಎಂದು ಹೇಳಿ, ಕೆಲಬಲದವರ ಮೇಲೆ ಕೈಹೊಯ್ದು ನಕ್ಕು ಗೇಲಿ ಮಾಡಿ, ತಿರಿಕನಿಗೆ ಮಾನವೆಂದರೇನು ? ತಲೆಯ ಮಾಲಿಕೆಯನ್ನು ಕಟ್ಟಿಕೊಂಡಿರುವ ಗೊರವನಿಗೆ ಮಹಿಮೆಯೆಂದರೇನು ? ಸರ್ಪಾಭರಣನಿ ಗೆ ಸ್ಥಿರತ್ವವೆಲ್ಲಿರುವುದು ? ಸ್ಮಶಾನವಾಸಿಗೆ ಶುಭವೆಲ್ಲುಂಟು ? ಈ ಹುಚ್ಚ ನಿಗೆ ತಾನು ೫ ಮುಖವನ್ನು ಧರಿಸಿರುವೆನೆಂಬ ಅಹಂಕಾರವೊಂದಿರಬಹ ದು ! ಇದಾವ ಮಹಾಘನ ? ೫ ಶಿರಸ್ಸನ್ನ ನಾನೂ ಧರಿಸಿಕೊಳ್ಳುತ್ತೇನೆ ನೋಡಿರೆಂದು ಮತ್ತೊಂದು ಶಿರಸ್ಸನ್ನು ಸೃಜಿಸಿ ಸಂಚಕಿರಸ್ಕನಾಗಿ, ಮತ್ತೆ ಶಿವನನ್ನು ಹರೆಯಲು ತೊಡಗಿ— ನೀನೇ ಸಕಲ ಜಗದಾಧಾರನಂತೆ ! ಈ ದೇವತೆಗಳಿಗೆಲ್ಲ ನೀನೇ ಕರ್ತನಂತೆ ! ವೇದಗಳೆಲ್ಲ ನಿನ್ನನ್ನೇ ಹೊಗಳುವು ವಂತೆ! ನೀನೇ ಪರಬ್ರಹ್ಮನಂತೆ! ನೀನಲ್ಲಿ ಹುಟ್ಟಿದೆ? ನಿನಗೆ ತಾಯ್ತಂದೆ ಗಳಾರು ? ಎಂದು ಗೇಲಿಮಾಡಿದನು. (ಈ ನಿಂದಾಪರಿಹಾಸವಚನಗಳೆಲ್ಲ ಆ ಪರಬ್ರಹ್ಮನನ್ನು ಹೊಗಳುವ ವಚನವಾಗಿಯೇ ಕಾಣುತ್ತಿರುವಲ್ಲಿ ಆತ ನ ಘನಮಹಿಮೆಯು ಎಂತಹುದು !) ಬಳಿಕ ಬ್ರಹ್ಮನು ಇಷ್ಟೊಂದು ವಿ ಧವಾಗಿ ಹರೆದುದೂ ಸಾಲದೆ, ಮತ್ತೂ " ನೀನು ಈ ವೇಷಾಡಂಬರವನ್ನೆ ಲ್ಲ ಬಿಟ್ಟು ನನ್ನ ಮರೆಹೊಕ್ಕರೆ ನಿನಗೆ ಬೇಕಾದ ಉತ್ತಮಪದವಿಯನ್ನು ಕೊಡುತ್ತೇನೆ ಬದುಕು; ಹಾಗಲ್ಲದಪಕ್ಷದಲ್ಲಿ ಈಗಳೇ ನಿನ್ನನ್ನು ಬಡಿ ದು ಪ್ರಾಣವು ನೆತ್ತಿಯಿಂದ ಹೋಗುವಂತೆ ಮಾಡುತ್ತೇನೆ ನೋಡು " ಎಂ ದು ಹೇಳಿ, ಫುಟಿಫುಡಿಸಿ ಕೈಯನ್ನು ಮೇಲಕ್ಕೆತ್ತಿದನು. ಆಗ ದೇವತೆಗ

ಳೆಲ್ಲರೂ ಇನ್ನೇನನಾಹುತವಾಗುವ್ರದೋ ! ಎಂದು ಬೆದರಿದರು. ವಿಷ್ಣುವು ಬ್ರಹ್ಮನ ಮರುಳ್ತನವನ್ನು ಕುರಿತು ಜರೆಯುತ್ತಿದ್ದನು. ಆಗ ಪರಶಿವನು ರೌವ್ರರೂಪದಿಂದ ಕರದಾಯುಧಗಳನ್ನು ಜಳಪಿಸಲು, ಓಲಗದವರೆಲ್ಲರೂ ದಿಕ್ಕು ದಿಕ್ಕಿಗೆ ಓಡಿದರು. ಬ್ರಹ್ಮನು ಬೆದರಿದನು. ಶಿವನು ಬ್ರಹ್ಮನ ಳ್ಳೆ ಮುಖವನ್ನು ನೋಡಿ, " ಹಾಸ್ಯಮಾಡು, ಹಾಸ್ಯಮಾಡು " ಎಂದು ನುಡಿಯುತ್ತ, ಕ್ರೂರಾಸ್ತ್ರದಂತೆ ಕಾಂತಿಯನ್ನುಗಿಯುತ್ತಿರುವ ತನ್ನ ಎಡಗೈಯ ಕಿರುಬೆರಲಿನುಗುರಿನಿಂದ ಆ ಳ್ಳೆ ನೆಯತಲೆಯನ್ನು ಲೀಲಾಮಾತ್ರದಲ್ಲಿ ಜಿಗುಟಬಿಟ್ಟನು. ಕೂಡಲೇ ಆ ಬ್ರಹ್ಮನ ದೇಹದಿಂದ ರಕ್ತವು ಪ್ರವಾಹವಾಗಿ ಹರಿದು ಲೋಕವನ್ನೆಲ್ಲ ಮುಳುಗಿಸುತ್ತಿದ್ದಿತು. ಈ ಅನರ್ಥವನ್ನು ತಪ್ಪಿಸುವುದಕ್ಕಾಗಿ ಪರಶಿವನು ತನ್ನ ಫಾಲನೇತ್ರವನ್ನು ತೆರೆಯಲು, ಅಗ್ನಿಯು ಕ್ಷಣಮಾತ್ರದಲ್ಲಿ ಆ ರಕ್ತವನ್ನೆಲ್ಲ ಹೀರಿ ಬ್ರಹ್ಮನ ತಲೆಯೋಡನ್ನು ಪೊಳ್ಳುಮಾಡಿತು. ಆ ಕಪಾಲವನ್ನು ಶಿವನು ತನ್ನ ಕೈಗೆ ತೆಗೆದುಕೊಂತನು. ಬ್ರಹ್ಮನಾದರೊ ಶಿವನ ಕರದಲ್ಲಿರುವ ತನ್ನ ಶಿರಃಕಪಾಲವನ್ನೂ, ರಕ್ತವನ್ನೆಲ್ಲ ಶಿವನ ನೇತ್ರಾಗ್ನಿಯು ಹೀರಿಮವನ್ನೂ, ಶಿವನನ್ನು ಬಳಸಿ ಪೊಗಳುತ್ತಿರುವ ದೇವತೆಗಳನ್ನೂ, ಸ್ತುತಿಸುತ್ತಿರುವ ವೇದಗಳನ್ನೂ ಕೊಂಡಾಡುತ್ತಿರುವ ವಿಷ್ಣುವನ್ನೂ, ನೋಡಿ ಬೆರಗಾಗಿ, ಶಿವಶಿವಾ ! ಈ ಮಹಾದೇವದೇವೋತ್ತಮನ ಪ್ರಭಾವವನ್ನು ಅರಿಯದೆ ನಾನು ಇವನೊಡನೆ ಹೋರಾಡಿದೆನಲ್ಲ ! ಎಂದು ಚಿಂತಿಸಿ, ತಲೆಯಮೇಲೆ ಕೈಯನ್ನು ಹೊತ್ತುಕೊಂಡು, " ಅಕಟಕಟಾ ! ಇಂತಹ ಮಹಾದೇವನೊಡನೆ ನನಗೆ ಸೆಣಸಾಟವೆಂದರೇನು ? ಈ ವಿಶ್ವಭರಿತನೊಡನೆ ನನಗಹಂಕಾರವೆಂದರೇನು ? ಲೋಕಶಿಕ್ಷಕನಾದ ಇವನನ್ನು ನಿಂದಿಸುವುದೆಂದರೇನು ? ಕಂತೂ ಕಂಡು, ಕೇಳಿಯೂ ಕೇಳ, ನಾನು ಮರುಳಾಗಬಹುದೆ? ಈ ನನ್ನ ಶಿವದ್ರೋಹದ ಪ್ರಾಯಶ್ಚಿತ್ತಕ್ಕಾಗಿ ನನ್ನ ಉಳಿದ ಶಿರಸ್ಸುಗಳನ್ನೂ ಕತ್ತರಿಸಿ, ಧನ್ಯನಂ ಮಾಡು " ಎಂದು ಶಿವನ ಪಾದಕ್ಕೆ ನಮಸ್ಕರಿಸಿದನು. ಭಕ್ತಿಭರದಿಂದ ಆವನ ಕಣ್ಣಿನಲ್ಲಿ ಸುರಿಯುತ್ತಿದ್ದ ಬಾಷ್ಪವೇ ಶಿವನ ಪಾದಕ್ಕೆ ಅಭಿಷೇಕಜಲವಾಯಿತು. ಅವನ ಕಿರೀಟರತ್ನಗಳೇ ರತ್ನದ ಹೂವುಗಳಾದುವು. ಸ್ತೋತ್ರವಚನವೇ ಮಂತ್ರವಾಯಿತು. ನೇತ್ರಪ

ಬ್ಬಿಗಳೇ ದೀಪರಾಜಿಯಾದುವು. ಇದರಿಂದ ಬ್ರಹ್ಮನು ಶಿವನ ಪಾದವನ್ನು ಅರ್ಚಿಸುವಂತೆ ತೋರುತ್ತಿದ್ದನು. ಸಕಲದೇವತಾನಿಕುರುಂಬವೂ ಜಯ ಜಯವೆಂದು ನುತಿಸುತ್ತಿದ್ದಿತು. ಆಗ ಪರಶಿವನು ಸಕಲ ದೇವತೆಗಳನ್ನೂ ಕೃಪೆಯಿಂದ ನೋಡಿ, ಪಾದದಲ್ಲಿ ಮಣಿದಿರುವ ಬ್ರಹ್ಮನನ್ನು ಹಿಡಿದೆತ್ತಿ, ತಲೆಯಮೇಲೆ ಹಸ್ತವನ್ನಿಟ್ಟು, ಹೆದರಬೇಡವೆಂದು ಅಭಯವಾನ ಮಾಡಿ. ಮಂದಹಾಸದಿಂದ ವಿಷ್ಣುವನ್ನವಲೋಕಿಸಿ, ಸರ್ವರನ್ನೂ ಅನುಗ್ರಹಿಸಿದನು. ಎಂದು ಚೆನ್ನಬಸವೇಶನು ಸಿದ್ಧರಾಮೇಶನಿಗೆ ಬೋಧಿಸಿದನೆಂಬಲ್ಲಿಗೆ ೭ನೆ ಅಧ್ಯಾಯವು ಮುಗಿದುದು.

೮ನೆ ಅಧ್ಯಾಯವು.

ಭಿಕ್ಷಾಟನ ಲೀಲೆ.

ಬ್ರಹ್ಮಶಿರಃಕಪಾಲವನ್ನು ಕೈಯಲ್ಲಾಂತ ಪರಶಿವನು ಆ ಕಪಾಲಕ್ಕೆ ತೃಪ್ತಿಪಡಿಸುವ ವ್ಯಾಜದಲ್ಲಿ ವಿಷ್ಣ್ವಾದಿಗಳ ಭಕ್ತಿಭಾವವನ್ನು ಪರೀಕ್ಷಿಸಬೇಕೆಂದು ಭಿಕ್ಷಾಟನಲೀಲೆಯನ್ನು ಧರಿಸಿದನು. ಆತನ ನಗುಮೊಗವು ಕೋಟಿಚಂದ್ರರ ಕಿರಣವನ್ನು ಜರೆಯುತ್ತಿದ್ದಿತು. ದೇಹಕಾಂತಿಯು ಸೂರ್ಯಕೋಟಿತೇಜಸ್ಸನ್ನು ತಿರಸ್ಕರಿಸುತ್ತಿದ್ದಿತು. ದೇಹಲಾವಣ್ಯವು ಶತಕೋಟಿ ಮನ್ಮಥ ವಸಂತ ಜಯಂತ ನಳಕೂಬರರ ಸೌಂದರ್ಯವನ್ನು ವಿಡಂಬಿಸುತ್ತಿದ್ದಿತು. ರೂಪಾತಿಶಯವನ್ನು ಹೊಗಳುವುದಕ್ಕೆ ಕೋಟ್ಯನು ಕೋಟಿ ಅನಿಕ್ಷರಿಂದಲೂ ಅಸಾಧ್ಯವೆಂಬಂತೆ ತೋರುತ್ತಿದ್ದ ಪರಶಿವನು ಜಟಾಪಟಲವನ್ನೂ, ಹಣೆಯಲ್ಲಿ ಭಸಿತ ತ್ರಿರೇಖೆಯನ್ನೂ, ಕಿವಿಯಲ್ಲಿ ಕುಂಡಲಗಳನ್ನೂ, ಬಂದು ಕೈಯಲ್ಲಿ ತ್ರಿಶೂಲವನ್ನೂ, ಮತ್ತೊಂದರಲ್ಲಿ ಬ್ರಹ್ಮಶಿರಃಕಪಾಲವನ್ನೂ, ಧರಿಸಿ, ಸುಲಿಪಲ್ಲು, ಚೆಲ್ವನಾಸಿಕ, ತುಂಬಿದಗಲ್ಲ, ಕೆಂಪುಟಿ, ದೀರ್ಘನೇತ್ರಗಳನ್ನು ತಳೆದು, ಸ್ತ್ರೀ ಕುಲವನ್ನು ಜೈಯಿಸಲು ಧನುರ್ಧಾರಿಯಾಗಿ ಹೊರಟ ಮನ್ಮಥನಂತೆ ೧೬ ವರ್ಷದ ಪ್ರಾಯ

ದವನಾಗಿ, ಈತನೇನು ಶೃಂಗಾರರಸದ ಅಚ್ಚೊ್ಚೀ ! ಮುಕ್ತಿಯ ಗುರುವೋ ! ಮೋಹರಸದ ಸಮುದ್ರವೋ ! ಪುಣ್ಯದ ದೇಹವೋ ! ಸೌಖ್ಯವೆಂಬ ಬಳ್ಳಿಯ ಹೊಸಕುಡಿಯೋ ! ಸೊಗಸಿನ ಮನೆಯೋ ! ಪ್ರಣವದ ಜೋಡಿಯೋ ! ಶುಭದ ಆಕಾರವೋ ! ಶಿವತತ್ತ್ವದ ಸಾರವೋ ! ಮನ್ಮಥರಾಜ್ಯದ ಬೆಳಸೋ ! ಭಕ್ತಿಯ ಬೆಳಕೋ ! ಎಂಬಿದಾಗಿ ಶಿವಯೋಗಿಗಳು ಯೋಚಿಸುತ್ತಿರಲು, ಮೋಹಬ್ರಹ್ಮನಾದ ಆ ಪರಶಿವನು ನಡೆಗೊಂಡನು ಮೊದಲು ವಿಷ್ಣುವಿನ ವೈಕುಂಠಲೋಕಕ್ಕೆ ತೆರಳಿ, ಆ ಪಟ್ಟಣದ ರಾಜವೀಧಿಯಲ್ಲಿ ಬರುತ್ತಿರಲು, ಅಲ್ಲಿನ ಸ್ತ್ರೀ ಜನವು ಈ ಮಹಾದೇವನ ಸೌಂದರ್ಯ ಲಾವಣ್ಯಾದಿಗಳನ್ನು ನೋಡುವ ಆಸೆಯಿಂದ ತಮ್ಮ ಮನೆಗೆಲಸವನ್ನೆಲ್ಲ ಹಾಗೆ ಹಾಗೆಯೇ ಬಿಟ್ಟು, ಒಬ್ಬರಮೇಲೊಬ್ಬರು ಬಿದ್ದು ಓಡಿಬಂದು, ಸಾಲುಸಾಲಾಗಿ ನಿಂತು, ನೋಡಿ, ಆಶ್ಚರ್ಯಪಟ್ಟು, ಕಾಮವಿವ್ವಳೆಯರಾಗುತ್ತಿದ್ದರು. ಆಗ ಪರಶಿವನು ನೆಟ್ಟಗೆ ಹರಿಯ ಅರಮನೆಯ ಬಾಗಿಲಿಗೆ ಬಂದು ಬಳಹುಗುತ್ತಿದ್ದನು. ದ್ವಾರಪಾಲಕನಾಗಿದ್ದ ವಿಷ್ವಕ್ಸೇನನು ಒಳಕ್ಕೆ ಹೋಗಲಾಗದೆಂದು ಶಿವನನ್ನು ತಡೆಯಲು, ಆ ಕೂಡಲೇ ಅವನನ್ನು ಕರದ ಶೂಲದಿಂದಿರಿದು ಮೇಲಕ್ಕೆತ್ತಿದನು. ಶೂಲದ ಮೇಲಿರುವ ವಿಷ್ವಕ್ಸೇನನು ಆ ಪಟಿಗೆ ಹೆದರದೆ ಕೇಕೆಹಾಕಿ ನಕ್ಕನು. ನಗುವುದಕ್ಕೆ ಕಾರಣವೇನೆಂದು ಶಿವನು ಕೇಳಲು, ಬ್ರಹ್ಮನಿಗುಕೂಡ ಗೋಚರವಾಗದ ನಿನ್ನ ಶಿರಸ್ಸಿನ ದರ್ಶನವು ನನಗೆ ಆದುದೇ ನನ್ನ ಸಂತೋಷಕ್ಕೆ ಕಾರಣವೆಂದು ನುಡಿದನು. ಆಗ ಶಿವನು ಮೆಚ್ಚಿ, ಶೂಲದಿಂದವನನ್ನು ಕೆಳಕ್ಕಿಳುಹಲು ಪ್ರಯತ್ನಿಸಿದನು. ತನ್ನನ್ನು ಅಲ್ಲೇ ಇರಿಸಬೇಕೆಂದು ವಿಷ್ವಕ್ಸೇನನು ಪ್ರಾರ್ಥಿಸಿಕೊಂಡು ಶೂಲಾಗ್ರದ ಮೇಲೆಯೇ ನೆಲಸಿದನು. ಇಷ್ಟರಲ್ಲಿ ಒಬ್ಬನು ಒಳಕ್ಕೆ ಹೋಗಿ ನಡೆದ ಸಂಗತಿಯನ್ನೆಲ್ಲ ವಿಷ್ಣುವಿಗೆ ಅರಿಕೆಮಾಡಿದನು. ಆಗ ಹರಿಯು ಥಟ್ಟನೆದ್ದು ಓಡಿಬಂದು, ಬಾಗಿಲಲ್ಲಿ ನಿಂತಿರುವ ಶಿವನನ್ನು ಕಂಡು, ಹಿಗ್ಗಿ, ಭಕ್ತಿಯಿಂದ ದೂರದಲ್ಲೇ ಭೂಮಿಯಮೇಲೆ ಅಡ್ಡಬಿದ್ದು, ಕುಣಿದಾಡಿ, ಜಯ ಜಯ ! ವಿರೂಪಾಕ್ಷ ! ವಿಶ್ವೇಶ ! ಜನನಮರಣವಿನಾಶ ! ಕರುಣಾಕೋಶ ! ಜಯಜಯ ! ಎಂದು ಮೊದಲಾಗಿ ಸ್ತುತಿ ಮಾಡುತ್ತಿದ್ದನು. ಪರಶಿವನು


ಯೂ, ನಿಧಿಯನ್ನು ಕಂಡ ಬಡವನಂತೆಯೂ, ದೇವೇಂದ್ರನು ಮೈಯು ಬ್ಬಿ, ರೋಮಾಂಚವೇರಿ, ಆನಂದಬಾಷ್ಪಗಳನ್ನು ಸುರಿಸಿ, " ದೇವದೇ ವೋತ್ತಮನೇ ! ಈ ದಿವಸ ತಮ್ಮ ಆಗಮನದಿಂದ ನನ್ನ ಪುಣ್ಯಲತೆಯು ಫಲಿಸಿತು. ಮುಕ್ತಿನದೀಪ್ರವಾಹವೇ ಹರಿದುಬಂದಂತಾಯಿತು. ನನ್ನ ಜನ್ಮಾಂತರಗಳೆಲ್ಲ ಸಫಲವಾದುವು " ಎಂದು ನಾನಾವಿಧವಾಗಿ ಕೊಂಡಾ ಡಿ, ಮತ್ತೆ ನಮಸ್ಕರಿಸಿದನು. ದಂಪತಿಗಳೀರ್ವರನ್ನೂ ಪರಶಿವನು ಕರು ಣಾಕಟಾಕ್ಷದಿಂದ ನೋಡಿ ಪಿಡಿದೆತ್ತಿದನು. ಅಷ್ಟರಲ್ಲಿ " ಎಲ ದೇವೇಂ ದ್ರನೆ, ಪರಶಿವನ ಹಸ್ತಕಮಲದಲ್ಲಿರುವ ಬ್ರಹ್ಮನ ಕಪಾಲಕ್ಕೆ ನಿನ್ನ ಶಕ್ತಿ ವಂಚನೆಯಿಲ್ಲದಂತೆ ಭಿಕ್ಷೆಯಂ ನೀಡು " ಎಂದು ಆಕಾಶವಾಣಿಯಾಯಿ ತು. ಅದನ್ನು ಇಂದ್ರನು ಕೇಳಿ, ಎಚ್ಚತ್ತು, ಗಣನಾತೀತವಾದ ವಸ್ತುಗ ಳನ್ನು ತಂದು ಆ ಕಪಾಲಕ್ಕೆ ಭಿಕ್ಷೆಯ ನೀಡೆಂದು ಪತ್ನಿಯಾದ ಶಚಿಗೆ ಆಜ್ಞಾಪಿಸಿದನು. ಆಕೆಯು ೫೦ ಲಕ್ಷ ದೇವತಾಸ್ತ್ರೀಯರೊಡನೆ ಕೂ ಡಿ ರತ್ನಖಚಿತವಾದ ಬಂಗಾರದ ಬಟ್ಟಲುಗಳಲ್ಲಿ ತಮ್ಮ ಮನೆಯಲ್ಲಿದ್ದ ಧನ ಕನಕಾದಿ ಸಕಲೈಶ್ವರ್ಯವನ್ನೂ ತಂದು ನೀಡುತ್ತಿದ್ದಳು. ಎಷ್ಟನ್ನು ನೀಡಿ ದರೂ ಕಪಾಲವು ತುಂಬದೆ ಇರಲು, ಇಂದ್ರನು ಚಿಂತಾರತ್ನವನ್ನೂ ಅ ಮೃತಕಲಶವನ್ನೂ ನೀಡುವುದಕ್ಕೆ ಬಂದನು. ಆಗ ಶಂಕರನು— " ಓ ಹೋ ಸಾಕು ಸಾಕು ನಿಲ್ಲಿಸು, ಈ ಅಮೃತವು ದೇವತೆಗಳ ಜೀವನಕ್ಕೆ ಆಧಾರವಾದುದು. ಇದನ್ನು ಕಳೆಯದೆ ಜೋಕೆಯಿಂದಿಡಬೇಕು " ಎಂ ದು ಹೇಳಿ ನಿಲ್ಲಿಸಿ, ಅವರನ್ನನುಗ್ರಹಿಸಿ, ಅಲ್ಲಿಂದ ಅಗ್ನಿಯ ಪುರಕ್ಕೆ ಹೋ ಗಿ ಸತ್ಕಾರಗೊಂಡು, ಅಲ್ಲಿಂದ ಯಮಪುರದ ಕಡೆಗೆ ತೆರಳಿದನು. ಅಲ್ಲಿ ಹುಳುಗೊಂಡ ಮೊದಲಾದ ಅನೇಕ ಕೋಟ್ಯಂತರ ಸಾಮಾನ್ಯನರಕಗ ಳೂ, ಎಪ್ಪತ್ತೆಂಟುಕೋಟಿ ನಾಯಕನರಕಗಳೂ, ಅದರಲ್ಲೆಲ್ಲ ಯಾತನೆ ಗೊಳ್ಳುತ್ತಿರುವ ನಾರಕಿಗಳೂ ತುಂಬಿದ್ದರು. ಅವರೆಲ್ಲರೂ ಈ ಶಿವನ ದರ್ಶನಮಾತ್ರದಿಂದಲೇ ಬಂಧಮುಕ್ತರಾಗಿ ಶೈವಲೋಕಕ್ಕೆ ತೆರಳಿದರು. ಅಲ್ಲಿಂದ ನೆಟ್ಟಗೆ ಯಮನರಮನೆಗೆ ಹೋಗಿ, ಅವನಿಂದ ಸತ್ಕಾರಗೊಂಡು, ಅಲ್ಲಿಂದ ನಿಋತಿ, ವರುಣ, ವಾಯು, ಕುಬೇರ, ಈಶಾನರ ಲೋಕಗಳಿ ಗೆಲ್ಲ ಹೋಗಿ, ಅವರಿಂದ ಯಥೋಚಿತಭಿಕ್ಷೆಯನ್ನು ಪಡೆದು ಹೊರಟು,

ಸಕಲ ಗಿರಿ ನದೀ ವನಭೂಮಿಗಳನ್ನೆಲ್ಲ ತನ್ನ ಪಾದನ್ಯಾಸದಿಂದ ಪವಿತ್ರ ಮಾಡಿ ಹಿಮವತ್ಪರ್ವತದ ಬಳಿಗೆ ನಡೆತಂದನು. ಆ ಪರ್ವತದ ತಪ್ಪಲಿನಲ್ಲಿ ದಾರುಕಾವನವಿದ್ದಿತು. ಅಲ್ಲಿ ಗೌತಮ, ಭೃಗು, ಭಾರದ್ವಾಜ, ಅತ್ರಿ, ಗಾಲವ, ವಸಿಷ್ಠ, ಕೌಶಿಕ, ಕಾಶ್ಯಪ. ವ್ಯಾಸ, ಆಂಗೀರಸ, ಬಾಗುರಿ, ಪರಾಶರ, ಗಾರ್ಗ್ಯ, ಕಣ್ವ ಮೊದಲಾದ ಮಹರ್ಷಿಗಳೆಲ್ಲ ತಮ್ಮ ತಮ್ಮ ಯೋಗದಲ್ಲಿ ನಿರತರಾಗಿದ್ದರು ಅವರ ಬಳಿಯಲ್ಲಿ ದೇಹವನ್ನನುಸರಿಸಿರುವ ನೆಳಲಿನಂತೆಯೂ, ಕರ್ಮಕ್ಕನುಸಾರವಾದ ಬುದ್ಧಿಯಂತೆಯೂ, ನುಂಗಿದ ಪಾದರಸವು ದೇಹದಲ್ಲಿ ಚಿಚ್ಚಿದ ಬಳಿಗೆ ಬರುವಂತೆಯೂ, ಪತಿಗಳ ಆಜ್ಞಾನುವರ್ತಿಗಳಾಗಿದ್ದುಕೊಂಡು ಸೇವೆ ಮಾಡುತ್ತಿರುವ ಕೋಮಲಾಂಗಿಯರಾದ ಪತಿವ್ರತಾಸ್ತ್ರೀಯರು ರಂಜಿಸುತ್ತಿದ್ದರು. ಶಿವನು ಅವರಾಶ್ರಮವನ್ನು ಹೊಕ್ಕು, ತನ್ನ ರೂಪಾತಿಶಯದಿಂದ ಮುನಿಸ್ತ್ರೀಮನಸ್ಸೆಲ್ಲ ಬೆರಗುಗೊಳಿಸಿದನು. ಸ್ತ್ರೀಯರು ತಮ್ಮ ಮನೆಗೆಲಸದಲ್ಲಿದ್ದುಕೊಂಡಿರುವಲ್ಲಿ ಶಿವನು "ಭಿಕ್ಷಾಂದೇಹಿ" ಎಂಬದಾಗಿ ಮಾಡಿದ ಗಂಭೀರಧ್ವನಿಯನ್ನು ಕೇಳಿ, ಪಾತ್ರೆಯಲ್ಲಿ ಪಾಯಸಾನ್ನವನ್ನು ತಂದು ಭಿಕ್ಷಾಪಾತ್ರೆಗೆ ನೀಡಿ, ಕಣ್ಣನ್ನು ಮೇಲಕ್ಕೆತ್ತಿ ನೋಡಿ ತಲೆಬಗ್ಗಿಸಿಕೊಂಡು ಹೋಗುತ್ತಿರುವಲ್ಲಿ, ತಮ್ಮ ಕಾಲಬೆರಲಿನುಗುರಿನಲ್ಲಿ ಪ್ರತಿಬಿಂಬಿಸಿರುವ ಶಿವನ ರೂಪನ್ನು ನೋಡಿ ಥಟ್ಟನೆ ಮೋಹಪರವಶೆಯರಾದರು. ಆ ಕೂಡಲೇ ಮುನಿಸ್ತ್ರೀಯರು ಪಾತ್ರೆಗಳನ್ನು ಬೆಳಗುವ—ಗಂಧಾಕ್ಷತೆಗಳನ್ನರ್ಪಿಸುವ—ಸಮಿದ್ಧರ್ಭೆಗಳನ್ನು ಕೂಡಿಸಿಡುವ—ಕೆಲಸಗಳನ್ನೆಲ್ಲ ಬಿಟ್ಟು, ಅತ್ತೆ ಮಾವ ಮಕ್ಕಳುಗಳನ್ನು ಸಹ ಲಕ್ಷಿಸದೆ ಮನೆಯನ್ನು ಬಿಟ್ಟು—ಈ ಸುಂದರನಾರು? ಈ ಗಾಡಿಕಾರನಾರಾಗಿರಬಹುದು? ಶಿವಶಿವಾ! ಕಾಣೆವಲ್ಲ! ಎಂದು ಹಂಬಲಿಸುತ್ತ, ಈಶ್ವರನನ್ನೇ ಅನಿಮೇಷದೃಷ್ಟಿಯಿಂದ ನೋಡುತ್ತಿದ್ದರು. ಶಿವನ ಆ ಜಗನ್ಮೋಹಕರೂಪಿನಿಂದ ಮೋಹಿತೆಯರಾದ ಮುನಿಸ್ತ್ರೀಯರುಗಳು ಕಾವಾತುರಂಗೊಂಡು, ಬೆವರೇರಿ, ಬಾಯ್ಬಿಟ್ಟು, ನಡೆಗೆಟ್ಟು, ಮರುಳಾಗಿ, ಬಿಣ್ಣೆಯಂತೆ ಕರಗಿ, ಸೊರಗಿ, ಸೂಜಿಗಲ್ಲು ತಿರುಗಿದ ಕಡೆಗೆ ತಿರುಗುವ ಸೂಜಿಯಂತೆ ಅವನನ್ನೇ ಹಿಂಬಾಲಿಸಿ ಬರುತ್ತಿದ್ದರು. ಆಗ ಶಿವನು ಮುನಿಜನಕ್ಕೆ ಕೋಪವನ್ನುಂಟುಮಾಡಿ ನೋಡಬೇಕೆಂ

ಬ ವಿನೋದಕ್ಕೆಳಸಿ, ತನ್ನ ಪವಿತ್ರಹಸ್ತದಿಂದ ಋಷಿಸ್ತ್ರೀಯರನ್ನು ಸ್ಪರ್ಶಿಸಿದನು. ಆ ಕೂಡಲೇ ಮುನಿಕಾಂತೆಯರ ಗರ್ಭದಿಂದ ಶಿವಸಮಾನ ರೂಪುಳ್ಳ ಶಿಶುಗಳು ಕಳಚಿಬಿದ್ದುವು! (ಆ ಶಿವನ ಮಹಿಮೆಯನ್ನು ತಿಳಿಯುವರಾರು!) ಆಗ ಅಲ್ಲಿದ್ದ ಬ್ರಹ್ಮಚಾರಿಗಳು ಈ ಆಶ್ಚರ್ಯಕೃತ್ಯವನ್ನು ಕಂಡು, ತಮ್ಮ ಗುರುಗಳ ಒಳಗೆ ಓಡಿಹೋಗಿ ಅಡ್ಡಬಿದ್ದು ನಿಂತು, ಕೈ ಮುಗಿದು "ನಿಮ್ಮ ಜಪತಪೋಧ್ಯಾನಗಳೆಲ್ಲ ಉರಿದುಹೋದುವು! ಎದ್ದು ನೋಡಿರಿ, ಯಾವನೋ ಒಬ್ಬ ಮಾಯಾವಿಯು ಬಂದು ನಿಮ್ಮ ಸತಿಯರೆಲ್ಲರನ್ನೂ ಮರುಳ್ಮಾಡಿ ಕರೆದುಕೊಂಡು ಹೋಗುತ್ತಿರುವನು" ಎಂದು ದೂರಿದರು. ಆ ಮಾತನ್ನು ಕೇಳಿ ಋಷಿಗಳು ಕಣ್ಣನ್ನು ತೆರೆದು, ಜಪದಿಂದೆದ್ದು, ಕೋಪಗೊಂಡು, ಕಿಡಿಕಿಡಿಯಾಗಿ, ಆಹಾ! ಇಂತಹ ನೀಚಕೃತ್ಯವನ್ನು ಮಾಡಿದವರಾರು? ತೋರಿಸು, ಅವನನ್ನೆಲ್ಲಿದ್ದರೂ ಹುಡುಕಿ ಎಳೆದುಕೊಂಡಬಾರೆಂದು ಹೇಳಿ ಸಿಪ್ಮಾಗ್ನಿಯೆಂಬ ಬ್ರಹ್ಮಚಾರಿಗೆ ನಿಯಮಿಸಿ ಕಳುಹಿದರು. ಅವನು ಕಡುಕೋಪದಿಂದ ಕೆಂಗಣ್ಣನ್ನು ಬಿರುಬಿರನೆ ಬಿಡುತ್ತ, ಭಿಕ್ಷುಕನಿದ್ದ ಒಳಗೆ ಓಡಿಬಂದು, ಎಲೆ ಮಾಯಾಕಾರ! ಮಹರ್ಷಿಗಳು ನಿನ್ನನ್ನು ಕರೆದುಕೊಂಡು ಬರಹೇಳಿರುವರು ಬಾರೆಂದು ನುಡಿದನು. ಶಿವನಾದರೊ— "ಋಷಿಗಳು ಕರೆದುಕೊಂಡುಬಾರೆಂದು ಹೇಳಿಕಳುಹಿದ ಮಾತ್ರದಿಂದಲೇ ನಾವು ಬರಬೇಕಾದುದೇನು? ಭಿಕ್ಷೆಯ ಉದ್ದೇಶವಿಲ್ಲದ ಒಳಗೆ ಹೋಗಬೇಕಾದ ಅವಶ್ಯಕತೆಯು ನಮಗೇನೂ ಇಲ್ಲ; ಬಂದ ದಾರಿಯನ್ನ ಹಿಡಿದು ನಮ್ಮನೆ ಹೋಗು" ಎಂದು ಉತ್ತರಕೊಟ್ಟನು. ಆಗ ಸಿಪ್ಮಾಗ್ನಿಯು ಕೋಪಗೊಂಡ ಸಿಪ್ಮದಂತೆ ಆರ್ಭಟಿಸಿ, ಎಲೆ ಮೂಢವಮನುಷ್ಯನೇ! ಪ್ರತ್ಯುತ್ತರವನ್ನು ಕೊಡುವೆಯಾ? ಹಾಗಾದರೆ ನೀನೀಗಳೇ ಭಸ್ಮವಾಗಿ ಹೋಗು, ಎಂದು ಶಾಪವನ್ನಿತ್ತನು. ಆವರೇನು? ನರಿಯ ಕೋಪಕ್ಕೆ ಆನೆಯ ಮೈಯ್ಯ ರೋಮವಾದರೂ ನಡುಗುವುದೆ? ಋಷಿವಟುವು ಶಪಿಸಿವರೆ ಪರಶಿವನಿಗೆ ಆಗುವ ಹಾನಿಯೇನು? ಶಿವನು ತನ್ನಷ್ಟಕ್ಕೆ ತಾನು ನಸುನಗುತ್ತ ಹೋಗುತಿದ್ದನು ಇದನ್ನು ಕಂಡು ಋಷಿಪುತ್ರನು ಹಿಂದಿರುಗಿ, ಮುನಿಗಳ ಬಳಿಗೆ ಬಂದು ನಡೆದ ಸಂಗತಿಯನ್ನೆಲ್ಲ ಹೇಳಿದನು. ಅವರದನ್ನು ನಂಬದೆ, ಮತ್ತಷ್ಟು


ಕೋಪಾಕ್ರಾಂತರಾಗಿ, ತಾವೇ ಎದ್ದು ಬಂದು, ಈ ಭಿಕ್ಷುಕನನ್ನು ನೋಡಿ, ಒಟ್ಟಿಗೆ ಶಾಪವನ್ನು ಕೊಟ್ಟರು. ಅದಕ್ಕೆ ಶಿವನು ಲೇಶಮಾತ್ರವೂ ಲಕ್ಷಿಸಲಿಲ್ಲ. ಪುನಃ ಮಂತ್ರಿಸಿ ದರ್ಭಾಸ್ತ್ರವನ್ನು ಬಿಟ್ಟರು. ಅದು ಕಾಲಾಗ್ನಿಯಂತೆ ಉರಿಯುತ್ತ ಬಂದು, ಶಿವನ ಬಳಿಗೆ ಹೋಗಿ, ಹಾಗೆಯೇ ನಂದಿಹೋಯಿತು. ಋಷಿಗಳು ಇದನ್ನು ಕಂಡು, ಅತ್ಯಂತ ಕೋಪವೇರಿ, ಮಾರಣಹೋಮವನ್ನು ಮಾಡುವುದಕ್ಕೆ ಜ್ಜುಗಿಸಿದರು. ಬಂದು ಯೋಜನದಗಲಕ್ಕೆ ಕುಂಡವನ್ನು ಮಾಡಿಸಿದರು. ನಾನಾಸಿದ್ಧಿಗಳುಳ್ಳ ಸಮಿತ್ತುಗಳನ್ನೆಲ್ಲ ಕೂಡಿಸಿದರು. ೪೮ ಸಾವಿರ ಮುನಿಗಳು ಬಂದುಗೂಡಿ ಘೋರಮಂತ್ರಗಳಿಂದ ಕೋಟಿ ಕೋಟಿ ಆಜ್ಯಾಹುತಿಯನ್ನು ಕೊಡುತ್ತ, ಆ ಭಿಕ್ಷುಕನನ್ನು ದಹಿಸೆಂದು ಪ್ರಾರ್ಥಿಸುತ್ತಿದ್ದರು. ಆಗ ಮಹಾಗ್ನಿಜ್ವಾಲೆಯಲ್ಲಿ ಭಯಂಕರವಾವ ಹುಲಿಗಳು ಸರ್ಪಗಳು ಆಯುಧಗಳು ಭೂತಗಣಗಳು ಶಕ್ತಿಗಳು ಸಪ ಹುಟ್ಟಿ, "ನಮಗಪ್ಪಣೆಯೇನು? ಆಹುತಿಯನ್ನು ಕೊಡಿ" ಎಂದು ಕೇಳುತ್ತಿದ್ದುವು. ಮಹರ್ಷಿಗಳು ಭಿಕ್ಷುಕನ ಕಡೆಗೆ ಸನ್ನೆ ಮಾಡಿ ತೋರಿಸಿ, ಅವನನ್ನು ನುಂಗುವಂತೆ ಆಜ್ಞಾಪಿಸಿದರು. ಅವು ಶಿವನನ್ನೇ ಬೀಳಲು, ಶಂಕರನು ನಸುನಗುತ್ತ, ಜಿಂಕೆಯನ್ನು ಕೈಯಲ್ಲಿ ಹಿಡಿದು, ಪುಲಿಯನ್ನು ಸೀಳಿ ಚರ್ಮವನ್ನು ಸುಲಿದುಟ್ಟು, ಸರ್ಪಗಳನ್ನು ಹಿಡಿದು ಆಭರಣ ಮಾಡಿಕೊಂಡು ಧರಿಸಿ, ಆಯುಧಗಳನ್ನು ಕೈಯಲ್ಲಿ ಹಿಡಿದು, ಶಕ್ತಿಗಳನ್ನು ಕಾಲಲ್ಲಿ ಮೆಟ್ಟಿ, ಉರಿಯನ್ನು ಕೈಯಲ್ಲಿ ಹಿಡಿದು, ಅಪಸ್ಮಾರವನ್ನು ಮುಂದಲೆಹಿಡಿದು ಕೆಡಹಿ, ಪಾದದಿಂ ತುಳಿದು, ಕುಣಿದಾಡುತ್ತಿದ್ದನು ಭೂತಗಳು ತಾಳಮದ್ದಳೆಗಳನ್ನು ಬಾಜಿಸಿ ಹಾಡುತ್ತಿದ್ದುವು. ಇದನ್ನೆಲ್ಲ ಋಷಿಗಳು ಕಂಡು, ಬೆರಗಾಗಿ, ಇವನೇ ಸಾಕ್ಷಾತ್ ಶಿವನೆಂದು ತಿಳಿದುಕೊಂಡು ಹೊಗಳಲಾರಂಭಿಸಿದರು. ಶಿವನೇ! ಹಲವು ಕಾಲ ಕಣ್ಣನ್ನು ಮುಚ್ಚಿ ತಪಸ್ಸನ್ನು ಮಾಡಿದರೆ ಬಂದ ಭಾಗ್ಯನೇನು? ನೀನಾಗಿ ನಮ್ಮ ಆಶ್ರಮಕ್ಕೆ ದಯೆಮಾಡಿಸಿದ್ದರೂ ನಾವು ತಿಳಿಯಲಾರದೆ ಹೋದೆವು. ನಮ್ಮಂತಹ ಮರುಳರಾರೂ ಇಲ್ಲ. ನಾವು ಮಾಡಬಾರದ ಅಪರಾಧಗಳನ್ನು ಮಾಡಿದೆವು. ಇದನ್ನೆಲ್ಲ ನೀನು ಕ್ಷಮಿಸಿ ರಕ್ಷಿಸಬೇಕು. ಎಂದು ನಾನಾವಿಧವಾಗಿ ದೈನ್ಯೋಕ್ತಿಯಿಂದ ಬೇಡಿ

ಕೊಂಡರು. ಆಗ ಶಿವನು ಪ್ರಸನ್ನನಾಗಿ ಕೃಪಾದೃಷ್ಟಿಯಿಂದ ನೋಡಿ ಸರ್ವರನ್ನೂ ಅನುಗ್ರಹಿಸಿದನು. ಅವರು ತಮಗೆ ಜ್ಞಾನೋಪದೇಶವನ್ನು ಮಾಡಬೇಕೆಂದು ಪ್ರಾರ್ಥಿಸಿಕೊಂಡರು. ಶಿವನು ತನ್ನ ಕೈಯಲ್ಲಿದ್ದ ಭಿಕ್ಷಾಪಾತ್ರೆಯನ್ನು ಭೈರವನ ಕೈಗೆ ಕೊಟ್ಟು, ಮುನೀಶ್ವರರಿಗೆ ತತ್ತ್ವೋಪದೇಶವನ್ನು ಮಾಡುವುದಕ್ಕಾಗಿ ತಾನು ದಕ್ಷಿಣಾಮೂರ್ತಿ ರೂಪವನ್ನು ಧರಿಸಿ, ವಟವೃಕ್ಷದಡಿಯಲ್ಲಿ ಕುಳಿತು, ಬೋಧಿಸಿ, ಮುನೀಶ್ವರರ ಮನಸ್ಸನ್ನೆಲ್ಲ ಸಮಾಧಾನಗೊಳಿಸಿ, ಅವರೆಲ್ಲರನ್ನೂ ಪತ್ನೀಸಮೇತರನ್ನಾಗಿ ಕಳುಹಿಸಿಕೊಟ್ಟು, ತಾನು ಪಾರ್ವತಿಯನ್ನು ನೆನೆದು ಕೈಲಾಸವನ್ನು ಕುರಿತು ತೆರಳಿದನು. ಎಂದು ಚೆನ್ನಬಸವೇಶನು ನುಡಿದನೆಂಬಲ್ಲಿಗೆ ೯ನೆಅಧ್ಯಾಯವು ಮುಗಿದುದು.



೧೦ ನೆ ಅಧ್ಯಾಯ.

ಕಂಕಾಳಧರ ಲೀಲೆ.



ಒಳಿಕ ಚೆನ್ನಬಸವೇಶನು ಸಿದ್ಧರಾಮೇಶನನ್ನು ಕುರಿತು ಹೇಳತೊಡಗಿದನೆಂತೆಂದರೆ—ಹಿಂದೆ ತಮನೆಂಬ ರಾಕ್ಷಸನೊಬ್ಬನು ವೇದವನ್ನು ಕದ್ದು ಸಮುದ್ರದಲ್ಲಿ ಮುಳುಗಿಕೊಂಡನು. ಆಗ ಭೂಮಿಯಲ್ಲಿ ಸದಾಚಾರತಪೋಧರ್ಮ ಜಪ ಹೋಮಾದಿ ಕ್ರಿಯೆಗಳಿಲ್ಲ ನಡೆಯಲವಕಾಶವಿಲ್ಲದೆ ನಿಂತುಹೋದುವು. ಇದರಿಂದ ದೇವತೆಗಳ ಹವಿಸ್ಸಿಗೆ ಭಂಗಬಂದು ಅವರೆಲ್ಲರೂ ಅಸಂತುಷ್ಟರಾಗಿ ಕ್ಲೇಶಪಡುತ್ತಿದ್ದರು. ಹೀಗೆ ಕೆಲವುಕಾಲ ಕಳೆದ ಒಳಿಕ ತಮ್ಮ ಸಂಕಟಕ್ಕೆ ಪರಿಹಾರವನ್ನು ಕಲ್ಪಿಸಿಕೊಳ್ಳಬೇಕೆಂದು ದೇವತೆಗಳೆಲ್ಲರೂ ಬ್ರಹ್ಮನ ಬಳಿಗೆ ಹೋಗಿ ಮೊರೆಯಿಟ್ಟರು. ಅವನು, ಇದು ಶಿವನಿಂದ ಪರಿಹೃತವಾಗಬೇಕಾಲ್ಲದೆ ನನ್ನಿಂದ ಸಾಧ್ಯವಲ್ಲವೆಂದು ನುಡಿಯಲು, ಸರ್ವರೂ ಒಟ್ಟಾಗಿ ಸೇರಿ, ಪರಶಿವನ ಬಳಿಗೆ ಬಂದು ನಮಸ್ಕರಿಸಿ, ತಮ್ಮ ವೃತ್ತಾಂತವನ್ನೆಲ್ಲ ಹೇಳಿಕೊಂಡರು. ಶಿವನು ಕೇಳಿ, ತತ್ಪರಿಹಾರಕ್ಕಾಗಿ ವಿಷ್ಣುವಿಗಾಜ್ಞಾಪಿಸಿದನು. ಆ ಕೂಡಲೇ

ಹರಿಯು ಶಿವನಿಗೆ ನಮಸ್ಕರಿಸಿ, ಅಪ್ಪಣೆಯನ್ನು ಪಡೆದು, ಮಹಾಮತ್ಸ್ಯ ರೂಪವನ್ನು ಧರಿಸಿ, ಸಮುದ್ರವನ್ನು ಹೊಕ್ಕು, ಅಲ್ಲಿದ್ದ ತಮನೆಂಬ ದೈತ್ಯಾರಿಯನ್ನು ಕೊಂದು, ವೇದಗಳನ್ನು ಕಿತ್ತು ತಂದು ದೇವತೆಗಳಿಗಿತ್ತು ಆ ಮಹಾವಿರಾಡ್ರೂಪದಿಂದಲೇ ಅಹಂಕರಿಸಿ ಸಮುದ್ರದಲ್ಲಿ ಚಲಿಸಾಡುತ್ತಿದ್ದನು. ಆ ಮಹಾಮತ್ಸ್ಯದ ಚಲನದ ರಭಸಕ್ಕೆ ಸಪ್ತಸಮುದ್ರಗಳೆಲ್ಲ ಕದಡಿ, ಮೇರೆದಪ್ಪಿ ಉಕ್ಕಿ ಭೂಸಮುದ್ರಗಳೆಲ್ಲ ಬಂದಾದುವು. ಇದರಿಂದ ಪ್ರಳಯಕಾಲವು ಸಮೀಪಿಸಿದಂತಾಗಲು, ಬ್ರಹ್ಮನು ದೇವತೆಗಳನ್ನೆಲ್ಲ ಕಟ್ಟಿಕೊಂಡು ಶಿವನಬಳಿಗೆ ಬಂದು ಈ ವೃತ್ತಾಂತವನ್ನೆಲ್ಲ ಅರುಹಿದನು. ಶಂಕರನು ಸಮುದ್ರದ ಬಳಿಗೆ ಬಂದು ಮತ್ಸ್ಯವನ್ನು ನೋಡಿ, ಆಹಾ ! ಇಂತಹ ಮಹಾಮತ್ಸ್ಯವನ್ನು ಹೀಗೆಯೇ ಬಿಟ್ಟು ಬಿಟ್ಟರೆ ಇದರಿಂದ ಜಗತ್ತಿಗೆ ಹಾನಿಯಾಗುವುದೇ ನಿಜವೆಂದು ಯೋಚಿಸಿ, ಪಾದದಿಂದವನ್ನು ಮೆಟ್ಟಿ ಕಟವಾಯ್ಗೆ ಹಸ್ತವನ್ನಿಟ್ಟು ಎರಡು ಹೋಳಾಗಿ ಸೀಳಿ, ಅದರ ಬೆನ್ನಿನ ಮೂಳೆಯನ್ನು ಮುರಿದು ಕಂಕಾಳಾಯುಧವನ್ನು ಮಾಡಿ ಕೈಯಲ್ಲಿ ಹಿಡಿದುಕೊಂಡನು ಎಂದು ಹೇಳಲು; ಸಿದ್ಧರಾಮೇಶನು— ಶಿವನಪ್ಪಣೆಯುಮೇರೆಯೇ ಆ ವಿಷ್ಣುವು ಲೋಕಹಿತಾರ್ಥವಾಗಿ ಮತ್ಸ್ಯರೂಪವನ್ನು ಧರಿಸಿ, ತಮನನ್ನು ಕೊಂದು ವೇದವನ್ನು ತಂದು ಕೊಟ್ಟಬಳಿಕ ಅಂತಹ ವಿಷ್ಣುವು ಅಜ್ಞಾನದಿಂದ ಅಹಂಕರಿಸಿ ಮತ್ತೆ ಸಮುದ್ರವಲ್ಲಿ ಸಂಚರಿಸುತ್ತಿದ್ದುದೇಕೆ ? ಈಶ್ವರನು ಅದನ್ನು ಕೊಂದುದೇತಕ್ಕೆ ? ಎಂದು ಕೇಳಿದನು. ಅದಕ್ಕೆ ಕಾರಣವನ್ನು ಬೆಸ್ಸಬಸವೇಶನು ಹೇಳತೊಡಗಿದನೆಂತೆಂದರೆ— ಆದಿಕಾಲದಲ್ಲಿ ದೇವದಾನವರುಗಳು ತಮ್ಮ ತಮ್ಮ ಜನ್ಮದ್ವೇಷದಿಂದ ೧೦ ದಿವ್ಯಸಹಸ್ರವರ್ಷಗಳವರೆಗೆ ಯುದ್ಧವನ್ನು ಅವಿಚ್ಛಿನ್ನವಾಗಿ ಮಾಡಲು, ಆ ಮಧ್ಯದಲ್ಲಿ ಪುತ್ರಮಿತ್ರರು ಅಣ್ಣತಮ್ಮಂದಿರು ಮೊದಲಾದವರೆಲ್ಲರೂ ಸಾಯಲು, ಇದನ್ನು ದೇವೇಂದ್ರನು ನೋಡಿ ಸಂಕಟಪಟ್ಟು, ತಮ್ಮ ಗುರುವಾದ ಬೃಹಸ್ಪತಿಯೊಡನೆ ಈ ವಿಪತ್ತನ್ನು ಉಸುರಿದನು. ಅದಕ್ಕವನು— ಅಯ್ಯಾ ದೇವೇಂದ್ರನೆ ! ಯದ್ಧವೆಂದರೆ ಚಿತ್ರಪಟದೊಳಗಣ ಬೊಂಬೆಗಳ ಜಗಳದಂತೆಯೊ ? ನೀನು ಪುತ್ರಮಿತ್ರ ಬಾಂಧವಾದಿಗಳೆಲ್ಲ ಅಳಿದರೆಂದು ವ್ಯಸನಪಟ್ಟರೆ ಇನ್ನು ನಿನಗೆ ದೇವೇಂದ್ರ

ತ್ವವು ಏತಕ್ಕೆ ? ಸುಮ್ಮನೆ ಯಜ್ಞಯಾಗಾದಿಗಳ ಹವಿಸ್ಸನ್ನುಂಡು ತೃಪ್ತಿಪಟ್ಟರಬಹುದಲ್ಲವೆ ? ಯದ್ಧದಲ್ಲಿ ಸೋಲುಗೆಲವುಗಳು ಯಾವಧೀನವಾಗಿರುವುವು ? ಶಿವಕುಮಾರನಿಗಾದರೂ ಆಗಬೇಕಾದುದು ಆಗದೆ ಬಿಟ್ಟೀತೆ? ಅದುಕಾರಣ, ನಾನು ಈಗ ಹಿಮವತ್ಪರ್ವತದ ತಪ್ಪಲಿಗೆ ಹೋಗಿ ಅಲ್ಲಿ ಶಿವನನ್ನು ಕುರಿತು ತಪಸ್ಸನ್ನಾಚರಿಸಿ, ಸತ್ತವರನ್ನು ಬದುಕಿಸುವ ಸಂಜೀವಿನೀಮಂತ್ರವನ್ನು ಉಪದೇಶ ಮಾಡಿಸಿಕೊಂಡು ಬರುತ್ತೇನೆಂದು ಹೇಳಿ ಹೊರಟುಹೋಗಿ ತಪಸ್ಸಿನಲ್ಲಿದ್ದನು. ಈ ಸುದ್ದಿಯನ್ನು ರಾಕ್ಷಸಗುರುವಾದ ಶುಕ್ರನು ಕೇಳಿ, ಬೃಹಸ್ಪತಿಯು ಕುಳಿತಿದ್ದ ಬಳಿಗೆ ಹೋಗಿ, ಇದಿರಾಗಿ ಕುಳಿತು, ಸಂಜೀವಿನೀಮಂತ್ರವನ್ನು ಪಡೆಯಬೇಕೆಂದು ತಾನೂ ಶಿವನನ್ನು ಕುರಿತು ಉಗ್ರತಪಸ್ಸನ್ನಾಚರಿಸುತ್ತಿದ್ದನು. ಹೀಗೆ ಹಲವುಕಾಲವಿರಲು, ಶಿವನು ಪ್ರಸನ್ನನಾಗಿ, ಎಲೆ ಗುರುಶುಕ್ರರುಗಳಿರಾ ನಿಮ್ಮಿಷ್ಟಾರ್ಥವೇನು ? ಏತಕ್ಕೆ ತಪಸ್ಸನ್ನು ಮಾಡುವಿರಿ ? ಎಂದು ಕೇಳಲು, ಅವರೀರ್ವರೂ ತಮ್ಮ ತಮ್ಮ ಬಯಕೆಗಳನ್ನು ವಿಜ್ಞಾಪಿಸಿದರು. ಅವರಿಬ್ಬರ ಇಷ್ಟವೂ ಒಂದೇ ಆಗಿರುವುದನ್ನು ಈಶ್ವರನು ಕೇಳಿ, ಇನ್ನು ನಾನು ಇವರಿಗೆ ಮಂತ್ರೋಪದೇಶವನ್ನು ಮಾಡದೆ ಇರುವುದಕ್ಕೂ ಆಗುವುದಿಲ್ಲ, ಮಾಡಿಬಿಟ್ಟರೆ ದೈತ್ಯರಿಂದ ಮಹಾಬಾಧೆಯು ಸಂಭವಿಸದೆ ಹೋಗುವುದಿಲ್ಲ; ಅದಕ್ಕಾಗಿ ಒಂದುಪಾಯವನ್ನು ಮಾಡಿ ಇವರಿಂದ ಅಸಾಧ್ಯವೆನಿಸಿಬಿಡಬೇಕೆಂದು ಯೋಚಿಸಿ, ಅವರಿಬ್ಬರ ಹೆಸರನ್ನೂ ಹಿಡಿದು ಕರೆದು, ನಿಮ್ಮಿಷ್ಟಾರ್ಥವನ್ನು ನಾನು ಕೊಡುತ್ತೇನೆ, ನಾನು ಹೇಳಿದಂತೆ ಮಂತ್ರಪುರಶ್ಚರಣೆ ಮಾಡಲು ನಿಮ್ಮಿಂದ ಸಾಧ್ಯವಾದರೆ ಮಾಡಿರಿ; ಹೇಗೆಂದರೆ—ಚಕ್ರಾಕಾರವಾಗಿ ಒಂದು ದೊಡ್ಡ ಕುಂಡವನ್ನು ತೆಗೆಯಬೇಕು, ಆದರಲ್ಲಿ ದೊಡ್ಡ ಬೆಂಕಿಯನ್ನೊಟ್ಟಬೇಕು, ಅದರೊಳಗೆ ನೀವಿಬ್ಬರೂ ನುಗ್ಗಿ ಉರಿಯ ಮಧ್ಯದಲ್ಲಿ ತಲೆಯನ್ನು ಕೆಳಗು ಮಾಡಿ ಆಕಾಶದಲ್ಲಿ ನಿಶ್ಚಲರಾಗಿ ನಿಂತು, ಅಗ್ನಿಯ ಹೊಗೆಯನ್ನು ಉಚ್ಛ್ವಾಸಿಸುತ್ತ ಈ ಮಂತ್ರಪುನಶ್ಚರಣೆಯನ್ನು ದಿವ್ಯಸಹಸ್ರವರ್ಷಗಳವರೆಗೆ ಮಾಡುತ್ತಿದ್ದರೆ ಸಂಜೀವಿನೀಮಂತ್ರವು ನಿಮಗೆ ಸಿದ್ಧಿಸುವುದು ಎಂದು ನುಡಿದನು. ಅದನ್ನು ಕೇಳಿ ಬೃಹಸ್ಪತಿಯು ಗಡಗಡನೆ ನಡುಗಿ, ನನ್ನಿಂದಿದು ಅಸಾಧ್ಯವೆಂದು ಜೇಳಿ, ಶಿವನ

ಪಾದಕ್ಕೆ ನಮಸ್ಕರಿಸಿ, ಹಿಂತೆಗೆದನು. ಶುಕ್ರನಾದರೊ– ತನ್ನ ಜಾಣ್ಮು ಡಿಯಿಂದ ಶಿವನನ್ನು ಮೆಚ್ಚಿಸಿದನು. (ಎಂದರೆ– ನಾನು ಹಾಗೆಯೇ ಮಾ ಡುತ್ತೇನೆಂದು ಬಿನ್ನೈಸಿದನು.) ಅವನ ಧೈರ್ಯಕ್ಕೆ ಸರಶಿವನು ಮೆಚ್ಚಿದನು. ಮೂಗಿನಮೇಲೆ ಬೆರಲಿಟ್ಟು ತಲೆದೂಗಿ, ನೀನೇ ಜಾಣನೆಂದು ಶ್ಲಾಘಿಸಿದ ನು. ಬಳಿಕ ದಯೆಯಿಂದ ಅವನಿಗೆ ಮಂತ್ರೋಪದೇಶವನ್ನು ಮಾಡಿ ಕೈ ಲಾಸಕ್ಕೆ ತೆರಳಿದನು. ಇತ್ತ ಶುಕ್ರನು ಪರಮಸಂತೋಷಯುಕ್ತನಾಗಿ ಬಂದು, ತನ್ನ ಶಿಷ್ಯರೆಲ್ಲರನ್ನೂ ಕರೆದು– ನಮಗೆ ಈಗ ಶಿವನ ಕರುಣೆ ಯುಂಟಾಯಿತು. ಆ ಮಂತ್ರವು ನನಗೆ ಸಿದ್ಧಿಸುವವರೆಗೂ ನೀವೆಲ್ಲರೂ ಭ ಸ್ಮರುದ್ರಾಕ್ಷಜಟಾದಿಗಳನ್ನು ಧರಿಸಿ, ಅಲ್ಲಲ್ಲಿ ತಪಸ್ಸನ್ನು ಮಾಡಿಕೊಂಡಿ ರಿ; ಆ ಸಮಯದಲ್ಲಿ ನಿಮ್ಮ ಶತ್ರುಗಳು ನಿಮ್ಮಮೇಲೆ ಬಿದ್ದು ಕೊಲ್ಲುವು ದಕ್ಕೆ ಬಂದರೆ ಆಗ ನಮ್ಮ ತಂದೆಯಾದ ಭೃಗುವನ್ನು ನೀವುಗಳು ಮರೆ ಹುಗಿ, ಎಂದು ಹೇಳಿ, ಎಲ್ಲರನ್ನೂ ಕಳುಹಿಬಿಟ್ಟು, ತಂದೆಯ ಆಶ್ರಮ ಕ್ಕೆ ತಾನು ಹೋಗಿ ಈ ವೃತ್ತಾಂತವನ್ನೆಲ್ಲ ಅವನೊಡನೆ ಬಿನ್ನೈಸಿ! ಅವ ನಪ್ಪಣೆಯನ್ನು ಪಡೆದು ಹೋಗಿ ತಪಸ್ಸನ್ನಾಚರಿಸುತ್ತಿದ್ದನು. ಈ ಸು ದ್ದಿಯನ್ನೆಲ್ಲ ದೇವತೆಗಳು ಕೇಳಿ, ದಿಗಿಲು ಬಿದ್ದು, ಬುದ್ಧಿ ತೋರದೆ, ವಿಷ್ಣು ವಿನ ಬಳಿಗೆ ಹೋಗಿ, ಶುಕ್ರಾಚಾರ್ಯನ ಪ್ರಯತ್ನವನ್ನೆಲ್ಲ ಬಿನ್ನೈಸಿದರು. ಆಗ ವಿಷ್ಣುವು– ಶಿವನು ಕೊಟ್ಟಪ್ಪಣೆಯು ಹುಸಿಯುವುದಿಲ್ಲ; ಆದುಕಾರ ಣ ಬಲಾಢ್ಯನಾದ ಶುಕ್ರನು ತಪಸ್ಸನ್ನು ಮಾಡಿ ಮಂತ್ರಸಿದ್ಧಿಯನ್ನು ಪ ಡೆದುಕೊಂಡು ಬರುವುದರೊಳಗಾಗಿ ರಾಕ್ಷಸಕುಲವನ್ನೆಲ್ಲ ನಿರ್ಮೂಲವಾ ಡಿಬಿಡಬೇಕು. ಆದುದರಿಂದ ಅವರೆಲ್ಲೆಲ್ಲಿ ತಪಸ್ಸನ್ನಾಚರಿಸುತ್ತಿದ್ದರೂ ಹುಡುಕಿ ಮೇಲೆ ಬಿದ್ದು ಕೊಲ್ಲಿರೆಂದು ಅಷ್ಟದಿಕ್ಪಾಲಕರಿಗೆ ಆಜ್ಞಾಪಿಸಿ ದನು. ಆ ಕೂಡಲೇ ಇಂದ್ರಾದಿಗಳೆಲ್ಲರೂ ಚತುರಂಗಸೈನ್ಯಸಮೇತ ರಾಗಿ ಹೊರಟು, ಗಿರಿ ನದೀ ಗುಹಾದಿಗಳೆನ್ನೆಲ್ಲ ತಡಕಿ, ಸಿರಾಯುಧರಾಗಿ ಶಿವಧ್ಯಾನದಲ್ಲಿ ಕುಳಿತಿರುವ ರಾಕ್ಷಸರನ್ನೆಲ್ಲ ತರಿದು, ಇರಿದು, ಕೊರೆದು, ಸಿಗಿದು, ಬಿಗಿದು, ಬಗದು, ಕೊಲ್ಲುತ್ತ ಬರುತ್ತಿದ್ದರು. ಆಗ ಉಳಿದಿ ದ್ದ ರಾಕ್ಷಸರೆಲ್ಲರೂ ತಪಸ್ಸನಿಂದೆದ್ದು ಓಡಿಬಂದು, "ಆಹಾ! ಹುಟ್ಟು ದಂದಿನಿಂದ ನಮ್ಮನ್ನು ಕಂಡಕೂಡಲೇ ದಿಕ್ಕುಗೆಟ್ಟು ಓಡುತ್ತಿದ್ದ

ಈ ಬಡದೇವತೆಗಳು ಈಗ ನಮ್ಮ ಗುರುವಿನಾಜ್ಞೆಯಿಂದ ನಾವು ನಿರಾಯುಧರಾಗಿರುವಾಗ್ಗೆ ನಮ್ಮಮೇಲೆ ಬಿದ್ದು ಕೊಲ್ಲುತ್ತಿರುವುದು ಹುಲಿಯು ವಿಾಸೆಯನ್ನು ನರಿಯು ಕಿತ್ತಂತಾಯಿತು ! ಏನುಮಾಡುವುದು ! ಗುರುವಿನಪ್ಪಣೆಗಾಗಿ ನಮ್ಮನಿರಬೇಕಾಗಿದೆ; ಇಲ್ಲದಿದ್ದರೆ ಬೆಟ್ಟಗಳನ್ನೇ ಕಿತ್ತು ಇವರ ಮೇಲಿಟ್ಟು ಓಡಿಸುತ್ತಿದ್ದೆವಲ್ಲ ! " ಎಂದು ಮುಚ್ಚರಿಸಿ, ಹಲ್ಲನ್ನು ಕಡಿದುಕೊಳ್ಳುತ್ತ ಬಂದು. ಭೃಗುಋಷಿಯ ಆಶ್ರಮವನ್ನು ಹೊಕ್ಕು "ಫೋಳ" ಎಂದು ಮೊರೆಯಿಟ್ಟರು ಆಗ ಶಕ್ರನು ಶಿವೈಕಾಯತ್ತಚಿತ್ತನಾಗಿ ಬಾಹ್ಯವ್ಯಾಪಾರವನ್ನು ಮರೆತಿದ್ದನು. ಆತನ ಪತ್ನಿಯು ಈ ಕೂಗೇನೆಂದು ಬಂದು ಕೇಳುವಲ್ಲಿ, ರಾಕ್ಷಸರೆಲ್ಲರೂ ಅಡ್ಡಬಿದ್ದು, ತಾಯಿಾ ! ನಿರಾಯುಧರಾಗಿ ನಿರಪರಾಧಿಗಳಾಗಿದ್ದ ನಮ್ಮನ್ನು ದೇವತೆಗಳು ಓಡಿಸಿಕೊಂಡುಬಂದು ಕೊಲ್ಲುತ್ತಿರುವರು; ಎಷ್ಟೋವುಂದಿಗಳು ಆಗಳೇ ಹತರಾದರು; ಅಗೋ ಇಂದ್ರಾಗ್ನಿಯಮಾದಿಗಳೆಲ್ಲ ಆಯುಧಗಳನ್ನು ಜಳಪಿಸುತ್ತ ಮೇಲೇರಿ ಬರುತ್ತಿರುವರು; ನಾವೂ ಹತರಾಗಬೇಕಾಗುವುದು; ಕರುಣಿಸಿ ಕಾಪಾಡಿ, ಕಾಪಾಡಿ: ಎಂದು ಬೇಡಿಕೊಂಡರು, ದೇವತೆಗಳ ಭಯದಿಂದ ನಡುಗುತ್ತ, ಹಿಂತಿರುತಿರುಗಿ ನೋಡುತ್ತ, ಕಣ್ಣಾಬ್ಬಿಯ್ಬಿಡುತ್ತಿರುವ ದೈತ್ಯರಿಗೆ ಆ ಭೃಗುಪತ್ನಿಯು ಹೆದರಬೇಡಿರೆಂದು ಅಭಯದಾನವಮಾಡಿ ಸನುಾಧಾನಪಡಿಸಿ, ಕ್ಷಣಾರ್ಧದಲ್ಲಿ ಶಿವನಾಮಸ್ಮರಣಪೂರ್ವಕವಾಗಿ ಮಂತ್ರಪುನಶ್ಚರಣೆ ಮಾಡಿದಳು. ಆಗ ಸಕಲ ದೇವತೆಗಳಿಗೂ ಕೈ ಕಾಲು ಸೇದಿಹೋಗಲು, ಚಿತ್ರದ ಬೊಂಬೆಗಳಂತೆ ಸ್ತಬ್ಧರಾಗಿ ನಿಂತುಕೊಂಡರು. ಇಷ್ಟರಲ್ಲಿ ದೇವೇಂದ್ರನು ತನ್ನ ಹಿಂದುಗಡೆಯಲ್ಲಿ ಬರುತ್ತಿರುವ ವಿಷ್ಣುವನ್ನು ನೋಡಿ, " ಇವಳೀಗ ಮಹಾ ಮಾಯಾದೇವಿ; ಇವಳಿಂದಲೇ ನಮ್ಮ ಕೈಕಾಲುಗಳೆಲ್ಲ ಕಟ್ಟಿಕೊಂಡಿರುವುವು; ಇವಳನ್ನು ಮೊದಲು ಚಕ್ರಾಯುಧದಿಂದ ಕೊಲ್ಲು " ಎಂದು ಹೇಳಿ ಮುಗಿಸುವಷ್ಟರಲ್ಲಿ. ವಿಷ್ಣುವು ಚಕ್ರಾಯುಧವನ್ನು ಭೃಗುಪತ್ನಿಯಮೇಲೆ ಪ್ರಯೋಗಿಸಲು, ಅದು ಕ್ಷಣಾರ್ಧದಲ್ಲಿ ಇವಳ ತಲೆಯನ್ನು ತೆಗೆದಿತು. ದೇವತೆಗಳೆಲ್ಲರೂ ಜೋ ! ಎಂದು ಕೂಗಿದರು. ರಾಕ್ಷಸರು ಹಾಹಾಕಾರವನ್ನು ಮಾಡುತ್ತ, ಬಾಯ್ಬಡಿದುಕೊಳ್ಳುತ್ತ, ಹೊಟ್ಟೆಯನ್ನು ಹಿಸುಕಿಕೊ

ಳ್ಳುತ್ತ, ಭೂಮಿಯ ಮೇಲೆ ಬಿದ್ದು ತಲೆಯೊಡೆದುಕೊಂಡು ಅಳುತ್ತ, ಅಯ್ಯೋತಾಯೆ ! ಪಾಪಾತ್ಮರಾದ ನಮ್ಮನ್ನು ಕಾಯುವುದಕ್ಕಾಗಿ ಬಂದ ನಿನಗೆ ಈ ವಿಧವಾದ ಮರಣವಾಗಬಹುದೆ ? ಇನ್ನು ನಮ್ಮ ಗುರುವು ನಮ್ಮ ಮೇಲೆ ಎಷ್ಟು ಕೋಪವನ್ನಾದರೂ ಮಾಡಿಕೊಳ್ಳಲಿ, ನಾವು ದೇವತೆಗಳನ್ನೆಲ್ಲ ಕೊಂದುಬಿಟ್ಟು ಸಾಯುವುದೇ ನಿಜವೆಂದು ನಿರ್ಧರಮಾಡಿ ಕೋಟಿ ಸಿಡಿಲಿನಂತೆ ಗರ್ಜನೆಮಾಡಿದರು. ಆ ಕೂಗು ಸಮಾಧಿಸ್ಥಿತನಾಗಿದ್ದ ಭೃಗುಮುನಿಯ ಕಿವಿಯಲ್ಲಿ ತುಂಬಿ, ಅವನನ್ನು ಬಹಿರ್ಮುಖಗೊಳಿಸಿತು. ಅವನು ಮಲಗಿದ್ದವರೆದ್ದಂತೆ ಕಣ್ಣನ್ನು ಬಿಟ್ಟು, ಮುಂದೆ ಸತ್ತು ಮಲಗಿರುವ ತನ್ನ ಪತ್ನಿಯನ್ನು ನೋಡಿದನು. ಹಾ ! ತರುಣೀ ! ಇದೇನು ? ಎಂದು ಹಂಬಲಿಸಿದನು. ಅಯ್ಯೋ ! ಸತಿಯೇ ! ನಾನೀ ತಪಸ್ಸಿನಲ್ಲಿ ಕುಳಿತು ಬಹು ದಿನದಿಂದ ಸಿನ್ನನ್ನಗಲಿದ್ದುದರಿಂದ ನೀನು ಕೋಪಿಸಿಕೊಂಡು ಪ್ರಾಣವನ್ನೀಗಿದೆಯೊ ? ಇಗೋ ನಾನು ಬಂದಿದ್ದೇನೆ, ನೋಡು, ಏಳು, ಆಲಿಂಗಿಸು, ಎಂದು ಹೇಳುತ್ತ, ತಲೆಯನ್ನೆತ್ತಿ, ಮುಂಡಾಡಿ, ಅವಳ ರೂಪಗುಣಶೀಲಾದಿಗಳನ್ನು ನೆನೆನೆನೆದು ಪ್ರಲಾಪಿಸುತ್ತಿದ್ದನು. (ಸ್ತ್ರೀವಿಯೋಗವು ಎಂಥವರನ್ನೂ ಭ್ರಾಂತಿಗೀಡು ಮಾಡುವುದಲ್ಲವೆ ?) ಮತ್ತೂ " ನಾನು ಸ್ನಾನವನ್ನು ಮಾಡಿಕೊಂಡು ಬಂದಿದ್ದೇನೆ, ಹೋಮಕ್ಕಣಿಮಾಡು, ದೇವಪೂಜಾಸಾಮಗ್ರಿಗಳನ್ನು ತಂದಿಡು, ಋಷಿಶ್ರೇಷ್ಠರು ನಮ್ಮಾಶ್ರಮಕ್ಕೆ ಬಂದಿದ್ದಾರೆ, ಅವರಿಗೆ ಅರ್ಘ್ಯ ಪಾದ್ಯಾಚಮನಗಳನ್ನು ನೀಡು, ಇದೇಕೆ ಮಾತಾಡದಿರುವೆ ? ಇದುವರೆಗೆ ನಿನ್ನಿಂದಲೇ ನನ್ನ ತಪಸ್ಸೆಲ್ಲ ನಡೆದು ಬರುತ್ತಿದ್ದಿತು, ಮುಂದೆ ನಾನು ಶಿವನನ್ನ ತಪಸ್ಸಿನಿಂದ ಮೆಚ್ಚಿಸಿ ಸಂಜೀವಿನೀಮಂತ್ರಸಿದ್ಧಿಯನ್ನು ಪಡೆದು ಬರುವ ಮಗನೊಡನೆ ನಿನ್ನ ಸುದ್ದಿಯನ್ನು ಏನೆಂದು ಹೇಳಲಿ ? ನನ್ನ ಒಡಹುಟ್ಟಿದವರಿಗೆ ನೀನಳಿದ ಸುದ್ದಿಯನ್ನು ಹೇಗೆತಾನೇ ಹೇಳಲಿ ? ಅಯ್ಯೋ ! ಶಿವಶಿವಾ ! " ಎಂದು ದುಃಖಿಸುತ್ತಿದ್ದನು. ಅಷ್ಟರಲ್ಲಿ ರಾಕ್ಷಸರು ಮುಂದೆ ಬಂದು ಅಡ್ಡಬಿದ್ದು, ನಿಂತು, ಕೈ ಜೋಡಿಸಿ, ಗುರುವರ್ಯನೇ ! ನಿಮ್ಮ ಕೈಮಕ್ಕಳನ್ನು ವಿಷ್ಣು ಮೊದಲಾದ ದೇವತೆಗಳು ಆಟ್ಟಿಕೊಂಡು ಬಂದು ಕೊಂದರು: ಎಷ್ಟೋಮಂದಿ ದೈತ್ಯರು ಸತ್ತರು; ನಾ

ವು ತಪ್ಪಿಸಿಕೊಂಡು ಉಳಿದುಬಂದು ನಿಮ್ಮ ಆಶ್ರಮವನ್ನು ಹೊಕ್ಕು ಮೊರೆಯಿಟ್ಟುಕೊಂಡೆವು; ಆಗ ಈ ಮಹಾಮಾತೆಯು ನಮಗೆ ಅಭಯವನು ಮಾಡಿ, ದೇವತೆಗಳಿಗೆಲ್ಲ ಹಸ್ತಪಾದಸ್ತಂಭನಗೊಳಿಸಿದಳು; ಅಷ್ಟರಲ್ಲಿ ಈಕೆಯು ಶಿರಸ್ಸು ಕತ್ತರಿಸಿ ಭೂಮಿಯುಮೇಲೆ ಬಿದ್ದುದನ್ನು ನಾವು ಕಂಡೆವು; ಇಗೋ ನೋಡಿ; ದೇವತಾಸಮೂವೆಲ್ಲಾ ಇಲ್ಲೇ ನಿಂತಿದೆ, ಎಂದು ತೋರಿದರು. ಆಗ ಭೃಗುವಿನ ದುಃಖವು ಅಡಗಿಹೋಯಿತು. ರೋಷವು ಉಕ್ಕೇರಿತು. ಭೃಗುಭೃಗಿಲ್ಲೆಂದು ಋಷಿಯ ಮೈಯಲ್ಲಿ ಉರಿಯೆದ್ದಿತು. ಆ ಉರಿಯು ದೇವತೆಗಳಮೇಲೆ ನುಗ್ಗಿ ಹಬ್ಬಿಕೊಂಡಿತು. ಋಷಿಯು ತಿರುತಿರುಗಿ ನೋಡಿದಕಡೆಯಲ್ಲೆಲ್ಲ ಉರಿದು ಕರಕುಬಡಿಯುತ್ತಿದ್ದಿತು. ವಿಷ್ಣುದೇವೇಂದ್ರಾದಿಗಳೆಲ್ಲರೂ ಕಾಡಿನಲ್ಲಿ ಅರೆಬೆಂದು ನಿಂತಿರುವ ಕೊರಡುಗಳಂತೆ ಕಾಣುತ್ತಿದ್ದರು. ಅವರನ್ನು ಭೃಗುವು ನೋಡಿ, ಎಲೆ ಪಾಪಿಗಳಿರಾ ! ಈ ಮಹಾಪತಿವ್ರತೆಗೆ ಇಂಥ ಕೇಡನ್ನುಂಟುಮಾಡಿದವರಾರು ? ಎಂದು ಗರ್ಜಿಸಿ ಕೇಳಿದನು. ಋಷಿಯ ಆ ಭಯಂಕರಕೋಪವಚನವನ್ನು ಕೇಳಿ ದೇವತೆಗಳು ಕಣ್ಣಾಬ್ಬಿಟ್ಟರು. ಆಗ ವಿಷ್ಣುವು ಗಡಗಸಿ ನಡುಗುತ್ತ, " ಮುನಿವರ್ಯನೇ ! ಈಸತಿಗೆ ಕೇಡು ನನ್ನಿಂದ ಸಂಭವಿಸಿತು. ನೀನು ಪರಮಮಹರ್ಷಿಯಾದುದರಿಂದ ನನ್ನಪರಾಧವನ್ನು ಕ್ಷಮಿಸಿ ಕಾಪಾಡು " ಎಂದು ಅತಿವಿನಯದಿಂದ ಬೇಡಿಕೊಳ್ಳಲು, ಋಷಿಯು ಕೋಪಾತಿಶಯದಿಂದ ವಿಷ್ಣುವನ್ನು ಕುರಿತು— ನೀನು ಸಕಲ ಜಗತ್ತನ್ನೂ ಸಲಹುತ್ತಿದ್ದೂ, ಪುಣ್ಯಪಾಪಸ್ವರೂಪವನ್ನೆಲ್ಲಾ ತಿಳಿದುಕೊಂಡಿದ್ದೂ, ಭಸ್ಮಾಗುದ್ರಾಕ್ಷಧಾರಕರನ್ನು ಶಿವಸ್ವರೂಪರೆಂದು ತಿಳಿದಿದ್ದೂ, ನಿರಾಯುಧರನ್ನು ಕೊಲ್ಲಬಾರದೆಂಬ ನೀತಿಯನ್ನು ಬಲ್ಲವನಾಗಿದ್ದೂ, ನಮ್ಮನ್ನು ದೈತ್ಯಾ ವರೆಹೊಕ್ಕಿರುವರೆಂಬುದನ್ನು ತಿಳಿದಿದ್ದೂ, ಸ್ತ್ರೀಹತ್ಯವನ್ನು ಮಾಡುವುದು ವೀರನಿಗೆ ನಾಚಿಕೆಗೇಡೆಂಬುದನ್ನು ಅರಿತಿದ್ದೂ, ಹೇಸಿಕೆಯಿಲ್ಲದೆ ಇವಕ್ಕೆಲ್ಲ ವಿರುದ್ಧವಾಗಿ ಆಚರಿಸಿದೆಯಲ್ಲಾ ! ಛಲಾ ! ಛಲಾಢ್ಯಾ ! ಛೀ ! ಹೋಗು ! ಎಂದು ಹೀಯಾಳಿಸಿದನು. ಆಗ ವಿಷ್ಣುವು ಮತ್ತಷ್ಟು ಭಯಾಕ್ರಾಂತನಾಗಿ, ಎಲೈ ಶಿವಸ್ವರೂಪನೆ ! ಅಜ್ಞಾನದಿಂದ ನಾನು ಮಾಡಿದಪರಾಧವನ್ನು ಹೇಗಾದರೂ ಮನ್ನಿಸಬೇಕು;

ಎಂದು ಪ್ರಾರ್ಥಿಸಿದನು. ಆಗ ಋಷಿಯು ಘಡುಘಡಿಸಿ ಕೈಯೆತ್ತಿ— ಎಲೈ ಭ್ರಾಂತನೆ ! ಈಗ ಅಜ್ಞಾನದಿಂದ ನನ್ನ ಪ್ರಾಣಕಾಂತೆಯನ್ನು ಕೊಂದೆಯಾದ ಕಾರಣ ನೀನೂ ಅಜ್ಞಾನವನ್ನು ಹೊಂದಿ ಮತ್ಸ್ಯಾದಿದಶಜನ್ಮಗಳಲ್ಲಿ ಹುಟ್ಟು ಹೋಗು ಎಂದು ಶಪಿಸಿದನು. ಆಗ ವಿಷ್ಣುವು ಬೆದರಿ, ಮಾಡಿದುದಕ್ಕೆ ತಕ್ಕಫಲವಾಯ್ತೆಂದು ಯೋಚಿಸಿ, ಮುನಿವರ್ಯನೇ ಈ ಶಾಪಕ್ಕೆ ವಿಮೋಚನವೆಂದಿಗೋ ಅದನ್ನಪ್ಪಣೆ ಕೊಡಿಸಬೇಕೆಂದು ಕೇಳಿಕೊಂಡನು. ಆಗ ಋಷಿಯು— " ಮತ್ತೆ ನನ್ನಿದಿರಿಗೆ ನಿಂತು ಮಾತನಾಡಬೇಡ, ಸುಟ್ಟುಬಿಡುತ್ತೇನೆ ನೋಡು ! ಮುಂದಣ ನಿನ್ನಗತಿಯನ್ನು ಶಿವನೇ ನೋಡಿಕೊಳ್ಳುತ್ತಾನೆ " ಎಂದು ಗಜರಿ ನುಡಿದನು. ಅತ್ತ ತನ್ನ ಸತಿಯ ಮೇಲೆ ಕಲಶೋದಕವನ್ನು ಅಭಿಮಂತ್ರಿಸಿ ಪ್ರೋಕ್ಷಿಸಿ ಬದುಕಿಸಿಕೊಂಡನು. ಇತ್ತ ವಿಷ್ಣುವು ತಪಸ್ಸನ್ನು ಮಾಡಿ ಶಿವನನ್ನು ಮೆಚ್ಚಿಸಿದನು. ನಿನ್ನಿಷ್ಟವೇನೆಂದು ಶಂಕರನು ಕೇಳಲು; ಸ್ವಾಮಿ ! ಭೃಗುಋಷಿಯು ಕೋಪದಿಂದ ನನಗೆ ಮತ್ಸ್ಯಾದಿದಶಜನ್ಮವನ್ನೆತ್ತೆಂದು ಶಾಪವನ್ನು ಕೊಟ್ಟಿರುವನು; ಇದರಿಂದ ನಾನು ನಿಮ್ಮ ಪಾದಕ್ಕೆ ದೂರನಾಗುವುದು ಮಾತ್ರವಲ್ಲದೆ, ಈ ಹತ್ತು ಜನ್ಮಗಳನ್ನೆತ್ತುವುದು ಹೇಗೆ ? ಕೆಟ್ಟೆನಲ್ಲ ! ಇನ್ನು ಗತಿಯೇನು ! ಎಂದು ಹಂಬಲಿಸಿದನು. ಆಗ ಶಿವನು ತಲೆದಡವಿ, " ಚಿಂತಿಸಬೇಡ, ನಿನ್ನ ಹತ್ತು ಜನ್ಮಗಳೂ ಭೂಮಿಗೆ ಹಿತಕರಗಳಾಗುವಂತೆ ನಾನು ಮಾಡುತ್ತೇನೆ; ಎಂದು ಹೇಳಲು, ವಿಷ್ಣುವು— ಆ ನನ್ನ ಜನ್ಮಗಳಲ್ಲಿ ನನಗೆ ಅಹಂಕಾರವಾವಿರ್ಭವಿಸಿ ಬಹುಕಾಲವಿರುವಂತಾದರೆ, ನನ್ನ ಗತಿಯೇನು ? ಎಂದು ಕೇಳಲು, " ಅಂಥ ಕಾಲದಲ್ಲಿ ನಾನೇ ಬಂದು ಆ ಅಹಂಕಾರವನ್ನು ಹೋಗಲಾಡಿಸಿ, ಆಯಾ ಜನ್ಮಗಳನ್ನು ಕಡೆಗಾಣಿಸಿ, ಆಯಾ ಜನ್ಮದ ಮೂರ್ತಿಗಳ ಕುರುಹೊಂದೊಂದನ್ನು ನಾನು ಧರಿಸಿ, ನಿನಗೆ ದೇಹಸಾರ್ಥಿಕ್ಯವನ್ನುಂಟುಮಾಡುತ್ತೇನೆ " ಎಂದು ಹೇಳಿ ಸಮಾಧಾನಪಡಿಸಿ, ಕೈಲಾಸಕ್ಕೆ ತೆರಳಿದನು.

ಪೂರ್ವದಲ್ಲಿ ಹೀಗೆ ಕಾರ್ಯಕಾರಣ ಸಂಬಂಧವಿದ್ದುದರಿಂದಲೇ ಮತ್ಸ್ಯಾವತಾರದ ವಿಷ್ಣುವನ್ನು ಶಿವನು ದಂಡಿಸಬೇಕಾಯ್ತು. ಇದರಂತೆಯೇ ಇನ್ನುಳಿದ ೯ ಜನ್ಮಗಳಲ್ಲೂ ಶಿವನು ವಿಷ್ಣುವಿಗೆ ಜನ್ಮೋತ್ತರಣವ

ನ್ನುಂಟುಮಾಡಿರುವನೆಂದು ಚೆನ್ನಬಸವೇಶನು ಸಿದ್ಧರಾಮೇಶನಿಗೆ ಹೇಳಿದ ನೆಂಬಿಲ್ಲಿಗೆ ೧೦ನೆ ಅಧ್ಯಾಯವು

ಸಂಪೂರ್ಣವು.

೧೧ನೆ ಅಧ್ಯಾಯವು.

ವಿಷಕಂಠಲೀಲೆ.

ಎಲೆ ಸಿದ್ಧರಾಮೇಶನೇ ಕೇಳು, ಒಂದು ದಿವಸ ದೇವೇಂದ್ರನು ಸಕಲ ದೇವಸ್ತ್ರೀಯರೊಡನೆ ಕೂಡಿ ಉದ್ಯಾನವನದಲ್ಲಿ ವಿನೋದದಿಂದ ಕಾಲಹರಣವನ್ನು ಮಾಡಿಕೊಂಡು, ಹಿಂತಿರುಗಿ ಐರಾವತವನ್ನೇರಿ ವೈಭವದಿಂದ ಪಟ್ಟಣಕ್ಕೆ ಬರುತ್ತಿರುವಲ್ಲಿ, ದೂರ್ವಾಸ ಮಹರ್ಷಿಯು ಕೈಲಾಸಕ್ಕೆ ಹೋಗಿ, ಶಿವದರ್ಶನವನ್ನು ಮಾಡಿಕೊಂಡು, ಅವನಿಂದನುಗ್ರಹಿಸಲ್ಪಟ್ಟಿದ್ದ ಮಂದಾರಪುಷ್ಪದ ಪ್ರಸಾದಮಾಲಿಕೆಯನ್ನು ತೆಗೆದುಕೊಂಡು ಬರುತ್ತಿದ್ದು, ದೇವೇಂದ್ರನನ್ನು ಕಂಡು, ಹರಪ್ರಸಾದಮಾಲಿಕೆಯನ್ನು ಆ ದೇವರಾಜನಿಗೆ ಕೊಟ್ಟನು. ಅದನ್ನು ಇಂದ್ರನು ಅಂಕುಶಾಗ್ರದಿಂದ ಹಿಡಿದು ತೆಗೆದುಕೊಂಡು, ಆನೆಯ ಕುಂಭಸ್ಥಲದಮೇಲೆ ಇಟ್ಟು ಬಿಟ್ಟನು. ಅದರ ಪರಿಮಳಕ್ಕೆ ಭ್ರಮರಗಳು ಬಂದು ಮುತ್ತಿ ಸುತ್ತುತ್ತಿರಲು, ಐರಾವತವು ತನ್ನ ಕಿವಿಯಿಂದ ಬಡಿದುಕೊಳ್ಳುತ್ತ, ಸುಂಡಿಲಿನಿಂದ ಆ ಮಾಲಿಕೆಯನ್ನು ತೆಗೆದುಕೊಂಡು ಭೂಮಿಗೆ ಹಾಕಿ, ಕಾಲಿನಿಂದ ಹೊಸಗಿಬಿಟ್ಟಿತು. ಇದನ್ನೆಲ್ಲ ದೂರ್ವಾಸನು ನೋಡಿದನು. ಕೂಡಲೇ ಪ್ರಳಯಕಾಲದ ರುದ್ರನಂತೆ ಕೋಪನೇರಿ, ಹಾ ಹಾ ! ಶಿವನು ಅನುಗ್ರಹಿಸಿದ ಪ್ರಸಾದಮಾಲಿಕೆಗೆ ಈಗತಿ ಬಂದಿತೆ ? ಎಂದು ಖೇದಗೊಂಡನು. (ದೂರ್ವಾಸನು ಕೋಪಗೊಂಡು ನಿಂತರೆ ವಿಷ್ಣುಬ್ರಹ್ಮಾದಿಗಳು ಕೂಡ ತಡೆವುದುಂಟೆ ?) ಆ ಕೂಡಲೇ ಎದ್ದು ನಿಂತು, ಕಣ್ಣನ್ನು ಕೆಂಪಗೆ ಮಾಡಿ, ಎಲೆ ನೀಚನೆ ! ಶಿವನು ನನಗೆ ಅನುಗ್ರಹಿಸಿಕೊಟ್ಟಿದ್ದ ಮಹಾಪ್ರಸಾದವನ್ನು ನಿನಗೆ ನಾನು

ಕೊಟ್ಟರೆ, ನೀನದನ್ನು ವಿಶ್ವಾಸದಿಂದ ಪರಿಗ್ರಹಿಸದೆ, ಅಹಂಕಾರದಿಂದ ಆನೆಯ ತಲೆಯ ಮೇಲಿಟ್ಟು ಹೊಸಗಿಸಿಬಿಟ್ಟೆ, ಇದರಂತೆಯೇ ನಿನ್ನ ಐಶ್ವರ್ಯವೂ ಸಮುದ್ರದಲ್ಲಿ ಮುಳುಗಿ ಹಾಳಾಗಲಿ ಎಂದು ಶಪಿಸಿದನು. (ಮಹಾತ್ಮರ ವಿರೋಧವು ಒಳಿದ ಬಳಿಕ ಸಿರಿಗೆ ಕೊನೆಯಾಗದಿದ್ದೀತೆ)? ಆಗ ಇಂದ್ರನು ಮರುಗಿ, ಕೊರಗಿ, ಆನೆಯಿಂದಿಳಿದು, ಋಷೀಶನ ಪಾದಕ್ಕೆ ನಮಸ್ಕರಿಸಿ, ನನ್ನ ತಪ್ಪನ್ನು ಕ್ಷಮಿಸಿ ಕಾಪಾಡಬೇಕೆಂದು ಬೇಡಿಕೊಳ್ಳಲು, "ನಿನಗೆ ಶಿವನನುಗ್ರಹದಿಂದ ಎಲ್ಲ ಸಂಪತ್ತೂ ದೊರೆಯಲಿ" ಎಂದು ವಿಶಾಪವನ್ನು ಕೊಟ್ಟು, ತೆರಳಿದನು. ದೇವೇಂದ್ರನು ಮಹಾದುಃಖಸಮುದ್ರದಲ್ಲಿ ಮುಳುಗಿದ್ದನು. ಇತ್ತ ಐರಾವತ ಉಚ್ಚೈಃಶ್ರವಸ್ಸು ಕಾಮಧೇನು ಕಲ್ಪವೃಕ್ಷ ಚಿಂತಾಮಣಿ ಮೊದಲಾದ ಸಕಲ ಸಂಪತ್ತೂ ಬಯಲಾಯಿತು. ಆಗ ಇಂದ್ರನು ಶಿವನನ್ನು ಕುರಿತು ದೀರ್ಘತಪಸ್ಸನ್ನಾಚರಿಸಿದನು. ಪರಶಿವನು ಪ್ರತ್ಯಕ್ಷನಾಗಿ ತಪಸ್ಸಿಗೆ ಕಾರಣವೇನೆಂದು ಕೇಳಲು, ತನ್ನ ವಿಪತ್ತನ್ನು ಇಂದ್ರನು ಬಿನ್ನೈಸಿದನು. ಅದಕ್ಕೆ ಶಿವನು— ವಿಷ್ಣು ಬ್ರಹ್ಮಾದಿ ಸಕಲ ದೇವತೆಗಳೂ ರಾಕ್ಷಸರೂ ಸಹ ಕೂಡಿ ಕ್ಷೀರಸಮುದ್ರವನ್ನು ಕಡೆದರೆ ನಿನ್ನ ಸಂಪತ್ತೆಲ್ಲ ಪುನಃ ಹುಟ್ಟಬರುವುವು, ಎಂದು ಅಪ್ಪಣೆ ಕೊಟ್ಟು ತೆರಳಿದನು. ಇತ್ತ ದೇವೇಂದ್ರನು ಶಿವನಪ್ಪಣೆಯನ್ನು ಬ್ರಹ್ಮ ವಿಷ್ಣುಗಳಿಗೆ ಹೇಳಲು, ಅವರು ಸಕಲ ದೇವತೆಗಳನ್ನೂ ರಾಕ್ಷಸರನ್ನೂ ಬರಮಾಡಿ, ಸರ್ವರೂ ಕ್ಷೀರಸಮುದ್ರಕ್ಕೆ ಹೋದರು. ಮಂದರಪರ್ವತವನ್ನೇ ಕಿತ್ತು ಕಡೆಗೋಲಾಗಿ ನಿಲ್ಲಿಸಿದರು. ಆದಿಶೇಷನನ್ನು ಕಡೆಯುವ ಹಗ್ಗವನ್ನಾಗಿ ಮಾಡಿ ಸುತ್ತಿದರು. ಒಂದು ಕಡೆ ರಾಕ್ಷಸರೂ ಒಂದು ಕಡೆ ದೇವತೆಗಳೂ ಹಿಡಿದು ಸಮುದ್ರವನ್ನು ಮಥಿಸಿದರು. ಮೊದಲು ಹುಟ್ಟಿದ ವಸ್ತುವು ವಿಷ್ಣುವಿಗೆಂತಲೂ, ಆಮೇಲೆ ಹುಟ್ಟಿದ ವಸ್ತುವು ಸಮುಗೆ ತಮಗೆಂತಲೂ ಆಲೋಚಿಸಿಕೊಳ್ಳುತ್ತಿದ್ದರು. ಆಗ ಉಂಟಾದ ಆಶ್ಚರ್ಯವನ್ನೇನು ಹೇಳಲಿ! ಮೊದಲು ಹುಟ್ಟಿದ ವಸ್ತುವು ಶಿವನಿಗಾಗಲಿ ಎಂದು ಹೇಳದೆ ಆರಂಭಿಸಿದ ಕಾರ್ಯವು ಶುಭಮುಖವಾಗುವುದೆ? ಎಂದಿಗೂ ಇಲ್ಲ. ಕೆಡೆಯುವಿಕೆಯು ಬಲವಾದಂತೆಲ್ಲ ಆದಿಶೇಷನಿಗೆ ದಣಿವು ಹೆಚ್ಚಿತು. ಅದು

ವಿಷವನ್ನು ಕಾರುವುದಕ್ಕಾರಂಭಿಸಿತು. ಧಗಧಗ ಭುಟಿಲ್ಲಿ ಟಿಲ್ಲುಗಿಲೆಂದು ವಿಷಾಗ್ನಿಯು ಭೋರ್ಗರೆದೆದ್ದು ಎಲ್ಲ ಕಡೆಯೂ ಪ್ರಸರಿಸುತ್ತ ಬಂದಿತು. ವಿಷ್ಣು ಬ್ರಹ್ಮರು ತಮ್ಮ ತಮ್ಮ ವಾಹನವನ್ನೇರಿ ಓಡಿದರು. ಉಳಿದ ದೇವದಾನವರೆಲ್ಲ ತಮ್ಮ ಗತಿಯೇನೆಂದು ಚಿಂತಿಸುತ್ತ ದಿಕ್ಕು ದಿಕ್ಕಿಗೆ ಕೆಡೆದೋಡಿದರು. ಕ್ಷಣಕಾಲದಲ್ಲಿ ಆ ಮಹಾ ಕಾಲಕೂಟದ ಬೇಗೆಯು ಸಕಲಲೋಕವನ್ನೂ ವ್ಯಾಪಿಸಿ ಸುಡುತ್ತಿದ್ದಿತು. ಅಯ್ಯೋ! ಋಷಿಶಾಪಕ್ಕೆ ಗುರಿಯಾಗಿ ಐಶ್ವರ್ಯವನ್ನು ನೀಗಿಕೊಂಡು ಮರುಳನಾಗಿರುವ ಇಂದ್ರನ ಮಾತನ್ನು ನಂಬಿ ದೇವರಾಕ್ಷಸರನ್ನೆಲ್ಲ ಕೂಡಿಸಿ ಸಮುದ್ರವನ್ನು ಕಡೆದು ಜಗತ್ತಿಗೆ ಹೀಗೆ ಕೇಡನ್ನುಂಟುಮಾಡಬಹುದೆ? ಅಯ್ಯೋ ಪಾಪಿಗಳಿರಾ! ಸೃಷ್ಟಿರಕ್ಷಣಕರ್ತರಾದ ನೀವಾದರೂ ಈ ವಿಪತ್ತನ್ನು ಪರಿಹರಿಸಬಾರದೆ? ಎಂದು ಬ್ರಹ್ಮ ವಿಷ್ಣುಗಳನ್ನು ಕುರಿತು ಜಗತ್ತಿನವರೆಲ್ಲರೂ ಮೊರೆಯಿಟ್ಟರು. ಕೆಲವರು ಇಂದ್ರನ ಶಿವದ್ರೋಹವನ್ನು ಕುರಿತು ವಾಚಾಮಗೋಚರವಾಗಿ ಬೈದರು. ಕೆಲವರು ಶಿವನನ್ನು ಪ್ರಾರ್ಥಿಸಿದರು. ಕೆಲವರು ದಿಕ್ಕು ದಿಕ್ಕಿಗೆ ಓಡಿ ಎಲ್ಲೂ ಉಳಿವಿಲ್ಲದೆ ತರಹರಿಸುತ್ತಿದ್ದರು. ಇಂದ್ರಾದಿ ದೇವತೆಗಳೆಲ್ಲರೂ ಶಿವನಿಂದಲೇ ಇದರ ಪರಿಹಾರವಾಗಬೇಕೆಂದು ಯೋಚಿಸಿ, ಗುಂಪುಕೂಡಿ ಕೈಲಾಸಕ್ಕೆ ಹೋಗಿ, ಶಿವನಿದಿರಿಗೆ ನಿಂತು ಅಡ್ಡಬಿದ್ದು, ಎಲೈ ಸಕಲಲೋಕಶರಣ್ಯನೇ! ಕೃಪಾಮಯನೇ! ನಿನ್ನ ಜೊರತು ರಕ್ಷಕರು ಬೇರೊಬ್ಬರಿಲ್ಲ; ನಾವೆಲ್ಲರೂ ವಿಷಾಗ್ನಿಭೀತಿಯಿಂದ ಕಂಠಗತಪ್ರಾಣರಾಗಿರುವೆವು; ನಿನ್ನ ಪಾದಕಮಲಕ್ಕೆ ಏನೋ ದ್ರೋಹವನ್ನು ಮಾಡಿದ್ದುದರಿಂದ ನಮಗೀವಿಪತ್ತು ಸಂಭವಿಸಿರುವುದು; ನಮ್ಮ ಪರಾಧವನ್ನು ಮನ್ನಿಸಿ ಕಾಪಾಡು, ಎಂದು ಪ್ರಾರ್ಥಿಸಿಕೊಂಡರು. ಆಗ ಶಂಕರನು ವಿಷವನ್ನು ನಾನೀಗಳೇ ಪರಿಹರಿಸದಿದ್ದರೆ ಜಗತ್ತೆಲ್ಲ ಹಾಳಾಗುವುದೆಂದು ಯೋಚಿಸಿ, ಅವರಿಗೆಲ್ಲ ಅಭಯದಾನ ಮಾಡಿ, ತಾನು ಪಾರ್ವತೀಸಮೇತನಾಗಿ ವೃಷಭವಾಹನವನ್ನೇರಿ ನಡೆಗೊಂಡು, ದಾರಿಯುದ್ದಕ್ಕೂ ವಿಷದ ಬೇಗೆಯಿಂದ ಬೇಯುತ್ತಿರುವವರನ್ನೂ, ಚೀರುತ್ತಿರುವವರನ್ನೂ, ಶಿವನೇ ಕಾಪಾಡು ಎಂದು ಮೊರೆಯಿಡುತ್ತಿರುವವರನ್ನೂ, ಕರುಣಾಕಟಾಕ್ಷದಿಂದ ನೋಡುತ್ತ, ಹೆದರಬೇಡಿರೆಂದು ಸಕಲ ದಿವಿಜದನುಜಮಾನ

ವಾದಿಗಳಿಗೆಲ್ಲ ಅಭಯವನ್ನು ಕೊಟ್ಟು, ಆ ಕ್ರೂರಮಹಾವಿಷವನ್ನು ನೋಡಿ, ಬಾರೆಂದು ಕರೆಯಲು, ಅದು ಮಹಾ ಭೀತಿಯಿಂದ ಒಟ್ಟುಗೂಡಿ ಬಂದು, ಶಿವನ ಅಂಗೈಯಲ್ಲಿ ಕೃಷ್ಣಮಣಿಯಂತೆ ನಿಂತಿತು. ಲೋಕವೆಲ್ಲ ಹರ್ಷಾಬ್ಧಿಯಲ್ಲಿ ಮುಳುಗಿ, ಶಿವನನ್ನು ಹೊಗಳಿತು. ಆಗ ಶಿವನು ಕರದಲ್ಲಿರುವ ವಿಷವನ್ನು ನೋಡುವಲ್ಲಿ ಅದರೊಳಗೆ ತನ್ನ ಪ್ರತಿಬಿಂಬವು ಕಾಣಿಸಿಕೊಂಡಿತು. ಅದನ್ನು ಹೊರಹೋಗೆಂದು ನಿಯಮಿಸಲು, ಅದು ಪುಷ್ಪದತ್ತನೆಂಬ ಹೆಸರಿನಿಂದ ಹೊರನಿಂತಿತು. ಆ ವಿಷವನ್ನು ಕುಡಿದು ಬಿಟ್ಟರೆ ಹೊಟ್ಟೆಯಲ್ಲಿರುವ ಲೋಕವು ದಹಿಸಿಹೋದೀತೆಂದು ಯೋಚಿಸಿ, ಶಂಕರನು ಅದನ್ನು ತನ್ನ ಗಂಟಲಲ್ಲಿ ಧರಿಸಿಕೊಂಡನು. ಒಳಿಕ ವಿಷ್ಣು ಬ್ರಹ್ಮಾದಿಗಳೆಲ್ಲರನ್ನೂ ಹತ್ತಿರಕ್ಕೆ ಕರೆದು, ಅಗ್ರಭಾಗವು ನಮಗೆ ಸಂದಂತಾಯಿತು; ಇನ್ನು ಮೊದಲಿನಂತೆಯೇ ಸಮುದ್ರವನ್ನು ಕಡೆಯಿರಿ; ನಿಮ್ಮಿಷ್ಟಾರ್ಥವು ಜನಿಸುವುದು, ಎಂದು ಅನುಗ್ರಹಿಸಿ, ಅಂತರ್ಹಿತನಾದನು. ಒಳಿಕ ದೇವಾಸುರರೆಲ್ಲರೂ ಶಿವನಪ್ಪಣೆಯನ್ನು ನಂಬಿ, ಮುನ್ನಿನಂತೆ ಶೇಷನ ತಲೆ ಬಾಲಗಳ ಕಡೆಗೆ ಹಿಡಿದು ಕಡೆಯಲಾರಂಭಿಸಿದರು. ಆಗ ಶೀತಮಯವಾದ ಚಂದ್ರಮಂಡಲವು ಆವಿರ್ಭವಿಸಿತು. ಅದರ ಶೈತ್ಯದಿಂದ ಸಕಲರ ಕೈಕಾಲ್ಗಳೂ ಸೆಳೆದುಕೊಂಡುವು ಇದರ ರೀತಿಯು ವಿಷದ ಭೀತಿಗೇನೂ ಕಡಿಮೆಯಾಗಲಿಲ್ಲ. ಆಗ ದೇವಾಸುರರು ಮತ್ತೆ ಶಿವನನ್ನು ಧ್ಯಾನಿಸಿದರು. ಸ್ವಾಮಿಯು ಪ್ರತ್ಯಕ್ಷನಾಗಿ, ಚಂದ್ರನ ಹದಿನಾರನೆಯೊಂದು ಭಾಗವನ್ನು ತನ್ನ ಶಿರಸ್ಸಿನಲ್ಲಿ ಧರಿಸಿ, ಚಂದ್ರನನ್ನು ಕುರಿತು— ನೀನಿನ್ನು ಭೂತಲಕ್ಕೆ ಸವಿಾಪದಲ್ಲಿರದೆ ೨ ಲಕ್ಷ ಯೋಜನದಲ್ಲಿರು; ಮತ್ತೂ ಭೂಮಿಯ ಸಕಲೌಷಧಿಗಳನ್ನೂ ದೇವತೆಗಳನ್ನೂ ನಿನ್ನ ಕಿರಣಾವೃತದಿಂದ ರಕ್ಷಿಸಿಕೊಂಡಿರು; ಎಂದು ನಿಯಮಿಸಿ ಕೈಲಾಸಕ್ಕೆ ತೆರಳಿದನು. ಒಳಿಕ ದೇವಾಸುರರು ಸಂತುಷ್ಟರಾಗಿ, ಯಥಾಪ್ರಕಾರವಾಗಿ ಕಡೆಯಲು, ಲಕ್ಷ್ಮಿ, ಐರಾವತ, ಕಾಮಧೇನು, ಕಲ್ಪವೃಕ್ಷ, ಚಿಂತಾರತ್ನ, ಅಮೃತಕಲಶ, ಉಚ್ಚೈಶ್ರವಸ್ಸು, ಮೊದಲಾದ ಸಂಪತ್ತುಗಳೆಲ್ಲವೂ ಬಂದೊಂದಾಗಿ ಆವಿರ್ಭವಿಸಿದುವು. ವಿಷ್ಣುವು ಲಕ್ಷ್ಮಿಯನ್ನು ಪರಿಗ್ರಹಿಸಿದನು. ಉಳಿದುವನ್ನೆಲ್ಲ ದೇವೇಂದ್ರನಿಗೆ ಕೊಟ್ಟನು. ಆಗ ರಾಕ್ಷಸರು ಎಲ್ಲವನ್ನೂ ಬಿಟ್ಟು

ಅಮೃತಕಲಶವನ್ನು ಮಾತ್ರ ಕದ್ದುಕೊಂಡು ಎದ್ದರು. ಇನ್ನು ರಾಕ್ಷಸರು ಅಮೃತವನ್ನು ಕುಡಿದುಬಿಟ್ಟರೆ ಮರಣವಿಲ್ಲದವರಾಗಿ ತಮಗೆ ನಿತ್ಯವೈರಿಗಳಾಗಿ ನಿಲ್ಲುವರೆಂಬ ಭಯದಿಂದ ದೇವತೆಗಳೆಲ್ಲ ಎದೆಯಾರಿ ಬಾಯ್ಬಾಯ್ಬಿಟ್ಟರು. ವಿಷ್ಣುವು ಉಪಾಯಾಂತರದಿಂದದನ್ನು ತರಬೇಕೆಂದು ಯೋಚಿಸಿ, ಮೋಹಿನೀರೂಪವನ್ನು ಧರಿಸಿ, ಆ ರಾಕ್ಷಸರಿದ್ದ ವನಕ್ಕೆ ಹೋದನು. ರಾಕ್ಷಸರೆಲ್ಲರೂ ಈ ಮೋಹಿನಿಯ ಸೌಂದರ್ಯದಿಂದ ಬೆರಗಾದರು. ದೇವರಾಕ್ಷಸರು ಅಮೃತಕಲಶಕ್ಕಾಗಿ ವಾಗ್ವಾದ ಮಾಡುತ್ತಿದ್ದರು. ಆ ಕಲಶವನ್ನು ನಿಲ್ಲಿಸುತ್ತೇನೆಂದು ಮೋಹಿನಿಯು ಪ್ರವರ್ತಿಸಿ, ದೈತ್ಯರ ಕೈಯಲ್ಲಿದ್ದ ಅಮೃತಕಲಶವನ್ನು ತೆಗೆದುಕೊಂಡು, ದೇವತೆಗಳನ್ನೊಂದುಸಾಲಾಗಿಯೂ ರಾಕ್ಷಸರನ್ನೊಂದುಸಾಲಾಗಿಯೂ ಕುಳ್ಳಿರಿಸಿ, ಇಬ್ಬರಿಗೂ ಪಕ್ಷಪಾತವಿಲ್ಲದಂತೆ ಅಮೃತವನ್ನೆರೆಯುತ್ತೇನೆಂದು ಅಭಿನಯಿಸಿ, ದೇವತೆಗಳ ಸಾಲಿಗೆಲ್ಲ ಅಮೃತವನ್ನೂ, ಅದರ ಬಣ್ಣದಿಂದಲೇ ಇದ್ದ ಮದ್ಯವನ್ನು ರಾಕ್ಷಸರ ಸಾಲಿಗೂ, ಹೀಗೆ ಎರಡು ಕೈಯಲ್ಲಿ ಎರಡು ಕಲಶವನ್ನು ಹಿಡಿದು ಎರೆಯುತ್ತಿದ್ದನು. ಈ ಕಪಟವನ್ನು ರಾಹುವೆಂಬ ರಾಕ್ಷಸನು ತಿಳಿದು ರೂಪಾಂತರದಿಂದ ದೇವತೆಗಳ ಪಙ್ತಿಯಲ್ಲಿ ಕುಳಿತುಕೊಂಡು ಅಮೃತವನ್ನು ಕುಡಿದನು. ಇದನ್ನು ಸೂರ್ಯಚಂದ್ರರು ತಿಳಿದು ವಿಷ್ಣುವಿಗೆ ಸನ್ನೆಮಾಡಿ ತಿಳಿಸಿಬಿಟ್ಟರು. ಅವನು ಚಕ್ರವನ್ನು ಬಿಟ್ಟು ರಾಕ್ಷಸನ ಕತ್ತನ್ನು ಕತ್ತರಿಸಿದನು. ಅಮೃತರಸಪ್ರಭಾವದಿಂದ ಆ ರುಂಡಮುಂಡಗಳಿರಡೂ ಸಜೀವಿಗಳಾಗಿ ರಾಹು ಕೇತುಗಳೆಂಬ ಹೆಸರಿನಿಂದ ನಿಂತು ಸೂರ್ಯಚಂದ್ರರ ಮೇಲಣ ದ್ವೇಷವನ್ನು ತೀರಿಸಿಕೊಳ್ಳುವುದಕ್ಕಾಗಿ ಈಗಲೂ ಅವರನ್ನು ಪೀಡಿಸುತ್ತಿರುವುದರಿಂದಲೇ ಗ್ರಹಣಗಳುಂಟಾಗುತ್ತಿರುವುವು ಎಂದು ಚೆನ್ನಬಸವೇಶನು ನುಡಿದನೆಂಬಲ್ಲಿಗೆ ೧೧ನೆ ಅಧ್ಯಾಯವು ಮುಗಿದುದು.

೧೨೨ನೆ ಅಧ್ಯಾಯ.

ಜಲಂಧರಾಸುರನ ಕಥೆ.



ಎಲೈ ಸಿದ್ಧರಾಮೇಶನೆ! ಒಳಿಕ ದೇವೇಂದ್ರನು ಶಿವಪಾದಪೂಜಾ ಫಲಾತಿಶಯದಿಂದ ದೇವಲೋಕವನ್ನಾಳುತ್ತ ಸುಖದಿಂದಿರುವಲ್ಲಿ, ರಾಹ್ಷಸರುಗಳು ದಾಯಾದಮತ್ಸರದಿಂದ ದೇವತೆಗಳ ಮೇಲೆ ಬಿದ್ದು, ಮಹಾಯುದ್ಧವನ್ನು ಮಾಡಿದರು. ಇಂದ್ರನು ಅವರೆಲ್ಲರನ್ನೂ ಗೆದ್ದು ನಿರಾತಂಕದಿಂದೆಷ್ಟೋಕಾಲ ವಿಭವದಿಂದಿದ್ದನು. ಹೀಗಿರುವಲ್ಲಿ ತನ್ನನ್ನು ಜಯಿಸುವರಾರೂ ಇಲ್ಲವೆಂಬ ಅಹಂಕಾರವು ಇಂದ್ರನಿಗೆ ಮೂಡಲು, ಯುದ್ಧಕಾರ್ಯವಿಲ್ಲದೆ ಸುಮ್ಮನೆ ಬೇಸತ್ತಿರುವುದು ಚೆನ್ನಾಗಿಲ್ಲವೆಂದು ಯೋಚಿಸಿ, ಶಿವನನ್ನು ಕೇಳಿ ಒಬ್ಬ ಶತ್ರುವನ್ನು ಪಡೆಯಬೇಕೆಂದು ಕೈಲಾಸಕ್ಕೆ ಹೊರಟನು. ಮಹಾಸಭೆಯ ಮಧ್ಯದಲ್ಲಿ ಸೇವೆಗೊಳ್ಳುತ್ತಿರುವ ಪರಶಿವನಿಗೆ ನಮಸ್ಕರಿಸಿ, ಕೈಮುಗಿದು ನಿಂತು, ಸ್ವಾಮಿಾ! ನನಗೆ ಪ್ರತಿಭಟಿಸಿ ನಿಂತು ಯುದ್ಧಕೊಡುವ ಕಡುಗಲಿಯಾವ ಶತ್ರುವನ್ನು ದಯೆಪಾಲಿಸಬೇಕೆಂದು ಬೇಡಿದನು. ಇದನ್ನು ಕೇಳಿ ಶಿವನು ನಸುನಗುತ್ತ, ಮುಂದುಗಾಣದೆ ಇದೇನಿಂತಹ ವರವನ್ನು ಬೇಡುವೆ? ಎನಲು, ದೇವೇಂದ್ರನು ವಿನಮ್ರತೆ ತಾಳಿದು, ಮಹಾದೇವನೇ! ನಾನು ಹಿಂದೆ ಯುದ್ಧದಲ್ಲಿ ಜಂಭ ಬಲ ನಮುಚಿ ವೃತ್ರ ಮೊದಲಾದ ದೈತ್ಯರನ್ನೆಲ್ಲ ಸೋಲಿಸಿ ಓಡಿಸಿದೆನು. ಅಂದಿನಿಂದ ಯುದ್ಧಕಾರ್ಯವು ನನಗೆ ಸ್ವಪ್ನೇಪಿ ದುರ್ಲಭವಾಗಿ ಹಂಬಲಿಸಿಕೊಳ್ಳುವಂತಾಗಿದೆ. ಅದುಕಾರಣ, ಅವಶ್ಯಕವಾಗಿ ನನಗೊಬ್ಬ ಶತ್ರುವನ್ನು ಅನುಗ್ರಹಿಸಬೇಕೆಂದು ವಿನ್ನೈಸಿದನು. ಇದನ್ನು ಕೇಳಿ ಶಿವನಿಗೆ ಕೋಪವಾವಿರ್ಭವಿಸಲು, ದೇವೇಂದ್ರನನ್ನು ಸುಟ್ಟುಬಿಡುವುದಕ್ಕಾಗಿ ಫಾಲನೇತ್ರದಿಂದೊಂದು ಕಿಡಿಯನ್ನು ಉಗುಳಿಸಿದನು. ಆಗ ಸಭೆಯಲ್ಲೇ ಇದ್ದ ದೇವಗುರುವಾದ ಬೃಹಸ್ಪತಿಯು ನೋಡಿ, ಓಹೋ! ಇಂದ್ರನು ಕೆಡುವನೆಂದು ಯೋಚಿಸಿ, ಸಾಕು ಸಾಕು; ದೇವದೇವೋತ್ತಮನೇ! ನೀನು ಕೋಪಿಸಿ ಫಾಲನೇತ್ರಾಗ್ನಿಯನ್ನು ಇಂದ್ರನಮೇಲೆ ಪ್ರಯೋಗಿಸಿದರೆ ಅವ

ನು ಉಳಿಯುವುದುಂಟೆ? ನೀನೇ ಅದನ್ನು ಉಪಸಹ್ಮರಿಸಿಕೊಳ್ಳಬೇಕೆಂ ದು ಪ್ರಾರ್ಥಿಸಲು, ಶಂಕರನು ಆ ಕಿಡಿಯನ್ನು ಸೆಳೆದು ಕೈಯಲ್ಲಿ ಹಿಡಿದು ಸಮುದ್ರಕ್ಕೆ ಬಿಸುಟು "ಇಂದ್ರನೆ, ನಿನಗೆ ಶತ್ರುವನ್ನು ದಯೆಪಾಲಿಸಿರು ವೆನು ಹೋಗು" ಎಂದು ಹೇಳಿ ಕಳುಹಿದನು. ಇಂದ್ರನು ಸಂತೋಷ ದಿಂದಮರಾವತಿಯನ್ನು ಸೇರಿದನು. ಅತ್ತ ಶಿವನು ಬಿಸುಡಿದ ಅಗ್ನಿಕಣವು ಶಿಶುವಾಗಿ ಗಂಗಾಸಮುದ್ರ ಸಂಗಮಸ್ಥಲದಲ್ಲಿ ಮಲಗಿ ಅಳುತ್ತಿದ್ದಿತು. ಸಮುದ್ರರಾಜನು ಶುಂಭನೆಂಬ ತನ್ನ ಮಗನು ಅಳಿದುಹೋಗಲು, ದೇ ವೇಂದ್ರನನ್ನು ಗೆಲ್ಲುವ ಪರಾಕ್ರಮದ ಮಗನೊಬ್ಬನನ್ನು ಪಡೆಯಬೇಕೆಂ ದು ಶಿವನನ್ನು ಕುರಿತು ತಪಸ್ಸನ್ನಾಚರಿಸುತ್ತಿದ್ದು, ಅಕಸ್ಮಾತ್ತಾಗಿ ಅಳು ತ್ತಿರುವ ಈ ಶಿಶುವನ್ನು ಕಂಡು ಸಂತೋಷದಿಂದೆತ್ತಿ ತೊಡೆಯಮೇಲೆ ಮಲಗಿಸಿಕೊಂಡನು. ಆ ಶಿಶುವಾದರೊ ಬ್ರಹ್ಮಾಂಡಕಟಾಹವು ಸಿಡಿದೊ ಡೆಯುವಂತೆ ಅಬ್ಬರಿಸಿಕೊಂಡಿತು. ಬ್ರಹ್ಮನು ಇದೆಲ್ಲಿಯ ಶಬ್ದವೆಂದು ಆಶ್ಚರ್ಯಪಟ್ಟು, ಈ ಮಗುವಿದ್ದ ಒಳಗೆ ಒಂದನು. ಸಮುದ್ರರಾಜನು ಬ್ರಹ್ಮನನ್ನು ನೋಡಿ, ಭಕ್ತಿಯಿಂದ ನಮಸ್ಕರಿಸಿ, ಈ ಮಗನಿಗೆ ನಾಮ ಕರಣವನ್ನು ಮಾಡಿ ಲೋಕದಲ್ಲಿ ಯಾರಿಂದಲೂ ಮರಣ ವುಂಟಾಗದಂತೆ ಆಶೀರ್ವದಿಸಿರೆಂದು ಹೇಳಿ, ಅವನ ಕೈಗೆ ಮಗುವನ್ನು ಕೊಟ್ಟನು. ಬ್ರ ಹ್ಮನು ಮಗುವನ್ನು ತೊಡೆಯಮೇಲೆ ಮಲಗಿಸಿಕೊಂಡು ಆ ಮಗುವಿನ ಶುಭಾಕೃತಿಯ ಚೆಲ್ವಿಕೆಯನ್ನು ನೋಡುತ್ತಿರಲು, ಮಗುವು ಬ್ರಹ್ಮನ ಗಡ್ಡವನ್ನು ಹಿಡಿದು ಸೆಳೆದಿತು. ಅದರಿಂದ ನೋವುಂಟಾಗಲು, ಬ್ರಹ್ಮನ ಕಣ್ಣಿನಿಂದ ನೀರು ಸುರಿದು ಮಗುವಿನ ಮೇಲೆ ಬಿದ್ದಿತು. ಬ್ರಹ್ಮನು ಗಡ್ಡವನ್ನು ಮೆಲ್ಲಗೆ ಬಿಡಿಸಿಕೊಂಡು, ಎಲೆ ಸಮುದ್ರನೇ! ಈ ಮಗನು ನನ್ನ ಕಣ್ಣಿನ ಜಲವನ್ನು ಧರಿಸಿಕೊಂಡನಾದಕಾರಣ ಇವನಿಗೆ "ಜಲಂ ಧರ" ನೆಂಬ ನಾಮವು ಸಲ್ಲುವುದು, ಇವನು ಸಾಮಾನ್ಯನಲ್ಲ. ಯಾರಿಂ ದಿವನ ಜನನವಾಯಿತೋ ಅವನಿಂದಲೇ ಅಪೂರ್ವವಾದಾಯುಧದಿಂದ ಇವ ನಿಗೆ ಮರಣವಲ್ಲದೆ, ಉಳಿದ ಈ ಸಣ್ಣ ದೇವಾಸುರ ಮನುಜಕುಲದಿಂದ ಮರಣವಿಲ್ಲವೆಂದು ಆಶೀರ್ವದಿಸಿ, ಶುಕ್ರಾಚಾರ್ಯನ ಮೂಲಕವಾಗಿ ಅವ ನಿಗೆ ಅಸುರರಾಜಪಟ್ಟವನ್ನು ಕಟ್ಟಿಸಿ, ಬೀಳ್ಕೊಂಡು ತೆರಳಿದನು. ಇತ್ತ

ಜಲಂಧರನು ದಿನೇ ದಿನೆ ಪ್ರವರ್ಧಮಾನನಾದನು. ಶುಕ್ರನು ಈ ಜಲಂಧರಾಸುರನಿಗೆ ಕಾಲಾಂಚಾಸುರನ ಮಗಳಾದ ವೃಂದೆಯನ್ನು ತಂದು ದೇವೇಂದ್ರನೈಭವದಿಂದ ವಿವಾಹ ಮಾಡಿದನು. ಈತನು ಜಾಳಂಧರವೆಂಬ ಹೆಸರಿನಿಂದ ಬಂದು ಹೊಸಪಟ್ಟಣವನ್ನು ಕಟ್ಟಿಸಿ, ಗಿರಿಗುಹಾದಿಗಳಲ್ಲಡಗಿ ಕೊಂಡಿದ್ದ ರಾಕ್ಷಸರನ್ನೆಲ್ಲ ಬರವಾಡಿ ಆ ಪಟ್ಟಣದಲ್ಲಿರಿಸಿಕೊಂಡು ಪತ್ನೀ ಸಮೇತನಾಗಿ ಸುಖದಿಂದಿರುತ್ತಿದ್ದನು. ಇವನು ಸಭೆಯಲ್ಲಿ ಒಡ್ಡೋಲಗಂಗೊಟ್ಟಿರುವಾಗ ಶುಕ್ರಾಚಾರ್ಯನು ಬಲಗಡೆಯಲ್ಲೂ, ಬಂಧುವರ್ಗವೆಲ್ಲವೂ ಹಿಂಗಡೆಯಲ್ಲೂ ಕುಳಿತಿರಲು, ಕೆವಿಮ್ಮಾಸೆ, ಕಾರೊಡಲು, ಕೆಂಗಣ್ಣು, ಜುಂಜರುದಲೆ, ಕೋರೆದಾಡೆ, ಕೊಬ್ಬಿದ ಮುಖ, ತುಂಬಿದ ಖಂಡ, ಕರ್ಕಶರೋಮಗಳನ್ನು ಹೊಂದಿ, ಭೀಕರಾಯುಧಗಳನ್ನು ಧರಿಸಿ, ಬಿರುದಾಂಕನಗಳನ್ನೂ ಮಣಿಕಿರೀಟಭುಜಕೀರ್ತಿಗಳನ್ನೂ ಧರಿಸಿ, ಸಿಡಿಲಂತೆ ಗರ್ಜಿಸುತ್ತ, ಶ್ವೇತದಂತ, ಸುಪಾರ್ಶ್ವ, ಪ್ರಜಂಘ, ಮಯ, ವಿಪ್ರಜಿತು, ವಿರೂಪಾಕ್ಷ, ವಿದ್ಯಾವಣ, ಮಹಾನಾಭ, ಪ್ರಲೋಮ, ಮರೀಚಿ, ಮದಿರ, ಕೇತು, ಜರ್ಝರ, ವಾಮನ, ಗಜಶಿರ, ಕೇತುವೀರ್ಯ, ನಮುಚಿ, ಚಂಡ, ತಟಿತ್ಕೇತು, ಶುಂಭ, ಧೂಮ್ರಾಕ್ಷ, ಮಧುಮತ್ತ, ಪ್ರಹೇತಿ, ಹೇತಿ ದೀರ್ಘಬಾಹು, ಖಡ್ಗರೋಮ, ಭೀಮ, ಮೊದಲಾದ ರಾಕ್ಷಸರ ಸ್ತೋಮವು ಸಭೆಗೆ ಬರುತ್ತಿದ್ದಿತು. ಯಮಧರ್ಮನ ಕರದಂಡವನ್ನೂ ಸೆಳೆಯುವ-ಪ್ರಳಯಕಾಲದ ಭೈರವನ ಕೋರೆದಾಡೆಯನ್ನೂ ಮುರಿಯುವ—ಕಾಲವೃತ್ಯುವಿನ ಗಂಟಲನ್ನೂ ಕೊಯ್ಯುವ—ಜೆಟ್ಟಗಳನ್ನೂ ಕಿತ್ತು ಆಟವಾಡುವ—ಪ್ರಳಯಕಾಲದ ಸಿಡಿಲನ್ನೂ ಹಿಡಿದು ಧರಿಸಿಕೊಳ್ಳುವ—ಮಹಾಶೂರರಾಕ್ಷಸರೆಲ್ಲರೂ ಬಂದು ಸಭೆಯಲ್ಲಿ ನಿಂತು, ಓಲೈಸುತ್ತಿದ್ದರು. ಹೀಗಿರುವಲ್ಲಿ ತನ್ನ ಸಭೆಯಲ್ಲಿದ್ದ ರಾಹುಕೇತುಗಳಿಬ್ಬರ ಇರುವಿಕೆಯನ್ನು ಜಲಂಧರನು ನೋಡಿ, ಒಂದೇ ದೇಹವು ಎರಡಾಗಿರುವುದಕ್ಕೆ ಕಾರಣವೇನೆಂದು ಕೇಳಲು, ಶುಕ್ರಾಚಾರ್ಯನು ಪೂರ್ವದ ಸಮುದ್ರಮಥನದ ಸುದ್ದಿಯನ್ನೂ ಅಮೃತದ ಹಂಚುವಿಕೆಯನ್ನೂ, ವಿಷ್ಣುವು ಮೋಹಿನ್ಯವತಾರದಿಂದ ಚಕ್ರವನ್ನು ಬಿಟ್ಟು ಮೋಸದಿಂದ ಅಮೃತಪಾನಮಾಡಿದ್ದ ರಾಕ್ಷಸನೊಬ್ಬನನ್ನು ಎರಡು ತುಂಡು ಮಾಡಿದುದನ್ನೂ ವಿವರವಾಗಿ ಹೇಳಿದನು.

ಇದನ್ನು ಜಲಂಧರನು ಕೇಳಿ, ಕೋಪವೇರಿ, ಘುಡುಘುಡಿಸಿ, ಕೆಂಗಣ್ಣಿನಿಂದ ಕಿಡಿಯನ್ನು ಸುರಿಸುತ, ಆಹಾ ! ಖೂಳದೇವೇಂದ್ರನು ನನ್ನ ತಂದೆಯಾದ ಸಮುದ್ರನನ್ನು ಮಥಿಸಿ ಸಕಲೈಶ್ವರ್ಯವನ್ನೂ ದೋಚಿಕೊಂಡನೆ ? ಅವನ ಹೊಟ್ಟೆಯನ್ನು ನಾನು ಬಗಿದು ಕರುಳನ್ನು ಭೂತಗಣಕ್ಕೆಣ್ಣಿಸಿ ತೃಪ್ತಿಪಡಿಸದೆ ಇರುವೆನೆ ? ಇರಲಿ; ಸೈನ್ಯವೆಲ್ಲ ಸಿದ್ಧವಾಗುವಂತೆ ಹೇಳು, ಎಂದು ಗರ್ಜಿಸಿದನು. ಇದನ್ನು ಶುಕ್ರಾಚಾರ್ಯನು ಕೇಳಿ, ಸಾಮ ದಾನ ಭೇದ ದಂಡವೆಂಬ ಚತುರುಪಾಯದಿಂದಲೂ ಪ್ರವರ್ತಿಸುವುದು ರಾಜನೀತಿಯಾದ ಕಾರಣ, ಮೊದಲು ಸಾಮೋಪಾಯವನ್ನನುಸರಿಸಿ, ಅದಕ್ಕೆ ಇಂದ್ರನು ಒಗ್ಗದಿದ್ದರೆ ಮುಂದಣ ಕೆಲಸವನ್ನು ಮಾಡೆಂದು ಬೆಸಸಲು, ಹಾಗೆಯೇ ಆಗಲೆಂದೊಪ್ಪಿ, ಒಬ್ಬ ಚಾರನನ್ನು ಕರೆದು, " ನೀನು ದೇವೇಂದ್ರನ ಒಳಿಗೆ ಹೋಗಿ, ನಮ್ಮ ತಂದೆಯಿಂದ ದೋಚಿಕೊಂಡಿರುವ ಕಾಮಧೇನು ಕಲ್ಪವೃಕ್ಷಾದಿವಸ್ತುಗಳನ್ನೆಲ್ಲ ನಮಗೆ ತಂದೊಪ್ಪಿಸಿ ವಿಧೇಯತೆಯಿಂದ ಬದುಕೆಂದು ಅವನಿಗೆ ತಿಳಿಸು ಹೋಗು " ಎಂಬುದಾಗಿ ಹೇಳಿಕಳುಹಿದನು. ದೂತನು ಅಲ್ಲಿಂದ ಹೊರಟು, ಬೇಗನೆ ಅಮರಾವತಿಗೆ ಬಂದು, ಅರಮನೆಯ ಬಾಗಿಲಲ್ಲಿ ತಡೆದ ಕಾವಲುಗಾರರನ್ನು ಲಕ್ಷ್ಯಮಾಡದೆ ಒಳಹೊಕ್ಕು, ಸಭೆಗೆ ಬಂದನು. ಇವನು ಇಷ್ಟು ಧೈರ್ಯದಿಂದ ಸಭೆಗೆ ಬಂದುದನ್ನು ದೇವಮಂತ್ರಿಯಾದ ಬೃಹಸ್ಪತಿಯು ನೋಡಿ-- ನೀನು ಯಾರಕಡೆಯದೂತ ? ನಮ್ಮೂರಿಗೆ ಏತಕ್ಕೆ ಬಂದೆ ? ಯಾರು ಕಳುಹಿದರು ? ಎಂದು ಕೇಳಿದನು. ಅದಕ್ಕೆ ಚಾರನು-- " ನಾನು, ಸಕಲ ದೇವತಾಸ್ತೋಮನೆಂಬ ಸಮುದ್ರಕ್ಕೆ ಬಡಬಾಗ್ನಿಯೂ ರಾಕ್ಷಸಕುಲರಾಜಶೇಖರನೂ ಆದ ಜಲಂಧರಾಸುರನ ದೂತ; ನಮ್ಮೊಡೆಯನ ತಂದೆಯಾದ ಸಮುದ್ರನನ್ನು ನೀವುಗಳು ಕಡೆದು, ಅದರಿಂದ ಹುಟ್ಟಿದ ಅನರ್ಘವಾದ ವಸ್ತುಗಳನ್ನೆಲ್ಲ ತೆಗೆದುಕೊಂಡಿರುವಿರಿ, ಆ ವಸ್ತುವನ್ನೆಲ್ಲ ನಿಮ್ಮಿಂದ ಕೇಳಿ ಈಸಿಕೊಂಡುಬರುವುದಕ್ಕಾಗಿ ನಮ್ಮೊಡೆಯನು ನನ್ನನ್ನು ಕಳುಹಿರುವನು. ಅವನ್ನು ಕೊಟ್ಟು ಕಳುಹುವುದೇ ನಿಮಗೆ ಶ್ರೇಯಸ್ಸು. ಇಲ್ಲದಿದ್ದರೆ ಯುದ್ಧಕ್ಕೆ ಸನ್ನಾಹಗೊಳ್ಳಿರಿ " ಎಂದನು. ಆಗ ಗುರುವು---ದೂರ್ವಾಸಮಹರ್ಷಿಯು ಶಾಪವಂ ಕೊಟ್ಟುದರಿಂದ ಈ ನಮ್ಮ

ದೇವೇಂದ್ರನ ವಸ್ತುವಾಹನಗಳೆಲ್ಲ ಸಮುದ್ರದಲ್ಲಿ ಮುಳುಗಿದ್ದುವು. ಬಳಿಕ ಶಿವನಪ್ಪಣೆಯನ್ನು ಪಡೆದು ಸಮುದ್ರವನ್ನು ಕಡೆದು ಕಳೆದುಕೊಂಡಿದ್ದ ನಮ್ಮ ವಸ್ತುಗಳನ್ನೆಲ್ಲ ತೆಗೆದುಕೊಂಡು ಬಂದಿರುವೆವು. ಅಷ್ಟೇ ಹೊರತು ದೇವರಾಜನು ಹೆರರ ಒಡವೆಗೆ ಆಸೆ ಮಾಡತಕ್ಕವನೆ ? ಎನ್ನಲು, ದೂತನು ಕೇಳಿ, ಹಾಗಾದರೆ ನೀವು ಯುದ್ಧವನ್ನೇ ಕೋರುವವರಲ್ಲಿ ? ಬೇಡಿದಿ, ಸುಮ್ಮನೆ ನಮ್ಮ ವಸ್ತುಗಳನ್ನು ನಮಗೆ ಕೊಟ್ಟು ಬದುಕಿ, ಎಂದು ಮತ್ತೆ ಹೇಳಿ, ಅವರು ಒಪ್ಪದಿರಲು, ಹಿಂದಿರುಗಿ ತಮ್ಮೊಡೆಯನ ಬಳಿಗೆ ಬಂದು, ಮಣಿದು, ಜೀಯಾ ! ನಿಮ್ಮಪ್ಪಣೆಯಾದಂತೆ ದೇವೇಂದ್ರನ ಬಳಿಯಲ್ಲಿ ತಿಳಿಸಿ ವಸ್ತುವನ್ನು ಬೇಡಿದೆನು. ಅದಕ್ಕೆ ಅವರು ವಿರೋಧಾಭಿಪ್ರಾಯವನ್ನು ತಿಳಿಸುವರೇ ಹೊರತು ಕೊಡುತ್ತೇವೆಂಬ ಮಾತನ್ನೇಆಡುವುದಿಲ್ಲ, ಎಂದು ಬಿನ್ನೈಸಿದನು. ಇದನ್ನು ಕೇಳಿದ ಕೂಡಲೇ ಜಲಂಧರನ ದೇಹದಲ್ಲಿ ಕೋಪಾಗ್ನಿಯು ಭುಗುಭುಗನೆ ಸ್ಫುರಿಸಿತು. " ಸಕಲ ದೈತ್ಯನಾಯಕರನ್ನೂ ಒರಮಾಡು, ಸೇನಾಪ್ರಯಾಣಸೂಚಕವಾದ ಭೇರಿಯನ್ನು ಹೊಡೆ " ಎಂದು ಆಗಳೇ ಅಪ್ಪಣೆಯನ್ನು ಮಾಡಿದನು. ಒಡನೆಯೇ ಭೇರಿಯನ್ನು ತಾಡಿಸಲು, " ದೇವದಾನವರ ಸಂಧಿಯು ತಪ್ಪಿತು. ದಾನವರು ಯುದ್ಧಸನ್ನದ್ಧರಾಗಿ ಹೊರಡುತ್ತಿರುವರು ! ಶತ್ರು ಮದಗಜಗಳಿಗೆ ಸಿಂಹನಾದ ಜಲಂಧರಾಸುರನು ಇಗೋ ಬರುತ್ತಿರುವನು, ದಿಕ್ಪಾಲಕರೆಲ್ಲ ಕಂಡ ಕಂಡ ಕಡೆಗೆ ಓಡಿಹೋಗಿ ತಲೆಯನ್ನುಳುಹಿಕೊಳ್ಳಿರಿ " ಎಂದು ಸಾರುತ್ತಿರುವಹಾಗೆ ಭೇರೀಶಬ್ದವು ದಿಙ್ಮಂಡಲವನ್ನೆಲ್ಲ ವ್ಯಾಪಿಸಿತು. ಚತುರಂಗಸೈನ್ಯವೂ ಸಿದ್ಧವಾಯಿತು. ವಾದ್ಯಗಳು ಮುಂಗಡೆಯಲ್ಲಿ ಆರ್ಭಟಿಸುತ್ತಿದ್ದುವು. ಈ ಅಬ್ಬರಕ್ಕೆ ಮೂರುಲೋಕವೂ ತಲ್ಲಣಿಸಿತು. ತನ್ನ ಗುರುವಾದ ಶುಕ್ರಾಚಾರ್ಯನು ಗೊತ್ತುಮಾಡಿದ್ದ ಸುಮುಹೂರ್ತದಲ್ಲಿ ಜಲಂಧರಾಸುರನು ಪ್ರಯಾಣಮಾಡಿದನು. ಕಾಲಾಳುಗಳ ಹೂಂಕಾರವೂ, ಆನೆಗಳ ಗರ್ಜನೆಯೂ, ಅವುಗಳ ಗಂಟೆಯ ಶಬ್ದವೂ, ಕುದುರೆಗಳ ಕೆನೆಯುವಿಕೆಯೂ, ಕಡಿವಾಣದ ಖಣಖಣಧ್ವನಿಯೂ, ಗೊರಸಿನ ಶಬ್ದವೂ, ರಥಗಳ ಚೀರುವಿಕೆಯೂ, ವೀರರ ಹಸ್ತಾಯುಧಪ ಖಣಿಖಣಿಯೆಂಬ ಶಬ್ದವೂ, ತಮ್ಮಟೆ ನಗಾರಿ ಮೊದಲಾದ ವಾದ್ಯಗಳ

ಹೆದ್ದನಿಯೂ ಒಟ್ಟುಗೂಡಿ ಬ್ರಹ್ಮಾಂಡವನ್ನೇ ಅಲ್ಲಾಡಿಸಿಬಿಟ್ಟುವು. ಎಲೆ ಸಿದ್ಧರಾಮನೇ ಕೇಳು— ರಥಗಳು ೫ ಪದ್ಮಗಳಿದ್ದುವು. ಮದವೇರಿದಾನೆಗಳು ೧೦೦ ಪದ್ಮಗಳಿದ್ದುವು. ವೇಗಶಾಲಿಗಳಾದ ಕುದುರೆಗಳು ೧೦೦೦ ಪದ್ಮವಿದ್ದುವು. ಕಾಲಾಳುಗಳು ೧೦,೦೦೦ ಪದ್ಮವಿದ್ದರು. ಇಷ್ಟು ಸೇನೆಯೂ ಒಬ್ಬೊಬ್ಬ ದೈತ್ಯನಾಯಕನ ಬಳಿಯಲ್ಲಿದ್ದಿತು. ಅಂತಹ ದೈತ್ಯನಾಯಕರು ಶತಕೋಟಿ ಪದ್ಮಸಂಖ್ಯಾಕರಾಗಿದ್ದರು. ಇಂತಹ ಅಮಿತ ಬಲದೊಡನೆ ಕೂಡಿ ರಾಕ್ಷಸರಾಜನು ಹೊರಟನು. ಅವನ ಸುತ್ತಲೂ ಅವನಿಗೆ ಸರಿತೂಕದ ಬಲವುಳ್ಳ ಮುಖ್ಯದೈತ್ಯರು ಹೋಗುತ್ತಿದ್ದರು. ಮುಂಗಡೆಯಲ್ಲಿ ಸ್ತುತಿಪಾಠಕರು ಉಗ್ಗಡಿಸುತ್ತಿದ್ದರು ಸೇನೆಯು ತೂಕಕ್ಕೆ ಭೂಮಿಯು ಕುಸಿಯುವೆ ಉಳಿಯುವುದಿಲ್ಲವೆಂಬಂತೆ ತೋರುತ್ತಿದ್ದಿತು. ಸೈನ್ಯದಲ್ಲಿ ಎತ್ತನೋಡಿದರೂ ಕೆಂದೂಳಿ, ಎಲ್ಲಿ ನೋಡಿದರೂ ಆನೆ ಕುದುರೆ ರಥಗಳು, ಆವಕಡೆ ನಿರೀಕ್ಷಿಸಿದರೂ ರಾಕ್ಷಸರ ಆರ್ಭಟ, ಯಾವಲ್ಲಿ ಗಮನಿಸಿದರೂ ಛತ್ರ ಚಾಮರಗಳು, ಎತ್ತ ತಿರುಗಿದರೂ ಕತ್ತಿ ಬಾಣ ಮೊದಲಾದ ಆಯುಧಗಳ ಹೊಳಪು ತುಂಬಿ ತುಳುಕುತ್ತಿದ್ದಿತು. ಈ ಸೇನಾಪ್ರಯಾಣದಿಂದ ಧೂಳಿಯೆದ್ದು ಸಮುದ್ರವನ್ನೆಲ್ಲ ಹೀರಿ ಬತ್ತಿಸಿತು. ತೂಕಕ್ಕೆ ಆದಿಶೇಷನ ಕುತ್ತಿಗೆಯು ಕುಗ್ಗಿತು. ಆದಿಕೂರ್ಮನ ಬೆನ್ನೊಟೆಯು ತಗ್ಗಿಹೋಯಿತು. ವಾದ್ಯಧ್ವನಿಯು ಬ್ರಹ್ಮಾಂಡವನ್ನೆಲ್ಲ ವ್ಯಾಪಿಸಿ ಶತ್ರುರಾಜರ ಎದೆಯನ್ನು ಬಿರಿಸಿತು. ದೇವಲೋಕದ ಗಡಿಗಳಲ್ಲಿದ್ದ ಸೇನೆಯು ಈ ಮಹಾಸೈನ್ಯವನ್ನು ನೋಡಿದಕೂಡಲೇ ದಿಗಿಲು ಬಿದ್ದು ಎದ್ದು ಓಡಿತು. ಈ ಜಲಂಧರನ ಸೈನ್ಯವು ದಾರಿಯಲ್ಲಿ ವಿನಯದಿಂದ ಕಂಡವರನ್ನು ಉಚಿತವಾಗಿ ಮನ್ನಿಸುತ್ತಲೂ, ಭೀತರಾದವರಿಗೆ ಅಭಯದಾನವನ್ನು ಮಾಡುತ್ತಲೂ, ಮದಿಸಿದ್ದವರನ್ನು ಶಿಕ್ಷಿಸುತ್ತಲೂ, ಪ್ರತಿಭಟಿಸಿದವರ ಕೋಟೆಗಳನ್ನು ಧೂಳಿಪಟಲಮಾಡಿ, ಅವರ ಹೆಂಡಿರನ್ನೂ ವಸ್ತುವಾಹನಗಳನ್ನೂ ಸೂರೆಮಾಡಿ ದಂಡಿಸುತ್ತಲೂ, ಬೇಗಬೇಗನೆ ಅಮರಾವತಿಯ ದಾರಿಯನ್ನು ಹಿಡಿದು, ಗಿರಿ ವನ ಜಲ ದುರ್ಗಗಳನ್ನೆಲ್ಲ ದಾಟಿ, ದೇವನಗರಿಯ ಸಮೀಪವನ್ನು ಸಾರಿತು. ಈ ಸುದ್ದಿಯನ್ನು ದೇವೇಂದ್ರನು ಕೇಳಿದ ಕೂಡಲೇ ರೋಷದಿಂದ ಕಣ್ಣುಗಳಲ್ಲಿ ಕಿಡಿಯನ್ನು

ಸುರಿಸಿದನು. ಸಕಲ ದಿಕ್ಪಾಲಕರನ್ನೂ ಯಕ್ಷ ಗಂಧರ್ವ ಕಿನ್ನರ ಕಿಂಪುರುಷಾ
ದಿದೇವನಿಚಯವನ್ನೂ, ಹಸ್ತ್ಯಶ್ವರಥಪದಾತಿಸೇನಾಸಮೇತವಾಗಿ ಜಲಂ
ಧರನಮೇಲೆ ಯುದ್ಧ ಮಾಡುವುದಕ್ಕಾಗಿ ಬರಬೇಕೆಂದು ಆಜ್ಞಾಪಿಸಿದನು. ಆ
ಕೂಡಲೇ ಅಮರಾವತಿಯೊಳಗೆಲ್ಲ ಆನೆಗೆ ಹೊದಿಕೆಯನ್ನು ಹಾಕು, ಕುದು
ರೆಗೆ ಕಡಿವಾಣವನ್ನು ಜೋಡಿಸು, ತೇರನ್ನು ಕಟ್ಟು, ಕವಚ ಟೊಪ್ಪಿಗೆ
ಗಳನ್ನು ತೊಡು, ಬೇಗನೆ ಚೆಲ್ಲಣವನ್ನಿಕ್ಕು, ಮುಸಲ ಮುದ್ಗರ ತೋಮ
ರ ಕುಂತ ಮೊದಲಾದ ಆಯುಧಗಳನ್ನು ಕೊಡು, ಬೇಗ ನಡೆ, ಎಂಬ
ನಾನಾವಿಧ ಯುದ್ಧಕುತೂಹಲದ ಗಜಬಜಹವು ತುಂಬಿಕೊಂಡಿತು. ತ
ನ್ನನ್ನು ರಾಕ್ಷಸನ ಸೈನ್ಯವು ಮುತ್ತುವುದಕ್ಕೆ ಬರಲಾಗಿ ಅಮರಾವತಿಯು
ಕಂಡು, ಅದನ್ನು ಜೈಸುವುದಕ್ಕಾಗಿ ಪ್ರತಿ ಸೇನೆಯನ್ನೇ ಪೆತ್ತಿರುವಳೋ
ಎಂಬಂತೆ ನಾನಾವಾದ್ಯಧ್ವನಿಗಳಿಂದ ಭೋರ್ಗರೆಯುತ್ತ, ಕತ್ತಿ ಗುರಾಣಿ
ಬಿಲ್ಲು ಬಾಣ ಗದೆ ಮೊದಲಾದುವುಗನ್ನು ಹಿಡಿದು ಆರ್ಭಟಿಸುತ್ತಲಿರುವ
ಶೂರಭಟರುಗಳು ಕೋಟ್ಯನುಕೋಟಿಯಾಗಿ ಪಟ್ಟಣದಿಂದ ಹೊರ
ಟರು. ಆಗ ದೇವೇಂದ್ರನು ಶೃಂಗರಿಸಿದ ಐರಾವತವನ್ನೇರಿ, ಸ್ತುತಿಪಾಠಕರಿಂ
ದ ಹೊಗಳಿಸಿಕೊಳ್ಳುತ್ತ, ಛತ್ರಚಾಮರಗಳಿಂದುಪಚರಿಸಿಕೊಳ್ಳುತ್ತ, ದಿ
ಕ್ಪಾಲಕರ ಕರಾವಲಂಬನವನ್ನು ಸ್ವೀಕರಿಸುತ್ತ, ಮುನಿಮುನಿಗಳ ಆಶೀ
ರ್ವಾದವನ್ನು ಪಡೆಯುತ್ತ, ಅತ್ಯಂತವೈಭವದಿಂದ ಯುದ್ಧಕ್ಕೆ ಹೊರಟ
ನು. ಬಳಿಕ ಅಗ್ನಿಯು ಟಗರನ್ನೂ, ಯಮನು ಕೋಣನನ್ನೂ, ನಿಋತಿ
ಯು ಮನುಷ್ಯನನ್ನೂ, ವರುಣನು ಮೊಸಳೆಯನ್ನೂ, ವಾಯುವು
ಎರಳೆಯನ್ನೂ, ಕುಬೇರನು ಕುದುರೆಯನ್ನೂ, ಈಶಾನನು ವೃಷಭನ
ನ್ನೂ, ಹತ್ತಿಕೊಳ್ಳಲು, ಉಳಿದ ಸುರರೋರಗಗರುಡಗಂಧರ್ವ ಕಿನ್ನರಕಿಂಪು
ರುಷಾದಿಗಳೆಲ್ಲ ತಮ್ಮ ತಮ್ಮ ವಾಹನವನ್ನೇರಿ ಸಡಗರದಿಂದ ದೇವೇಂದ್ರನ
ಎರಡು ಪಕ್ಕಗಳಲ್ಲೂ ಹೊರಟರು. ಆ ದೇವಸೇನೆಯಲ್ಲಿ ಪೃಷ್ಟಾಸ್ತ್ರ
ಣಗಳನ್ನು ಹೊದ್ದಿಸಿ, ಗಂಟೆಗಳನ್ನು ಜೋಲುಬಿಟ್ಟು, ಮೇಲೆ ಧ್ವಜವ
ನ್ನು ಎತ್ತಿ ಹಿಡಿದು; ಮುಖದಮೇಲೂ ಕಿವಿಯಮೇಲೂ ಚಿತ್ರರೇಖೆಯಂ
ಬರೆದು, ಕಿವಿಗೆ ಶ್ವೇತಚಾಮರಗಳನ್ನು ಇಳಿಯಬಿಟ್ಟು, ಅಲಂಕರಿಸಿದ ಆ
ನೆಗಳು ಮದದಿಂದ ತೂಗಾಡುತ್ತ ಕಿವಿಯನ್ನು ಝಾಡಿಸುತ್ತ ಸುಂಡಿಲನ್ನು

ಒಲೆಯುತ್ತ ಹೋಗುತ್ತಿದ್ದುವು ಕಡಿವಾಣವನ್ನೂ ಮೊಗವಾಡವನ್ನೂ ಹಾಕಿ ಸಬರವನ್ನಿಟ್ಟು ವಾಘೆಗಳಿಂದ ಸೆಳೆಯಲ್ಪಡುತ್ತಿರುವ ಕುದುರೆಳು ಚಪಲತರಗಳಾಗಿ ತಲೆಯನ್ನು ಕುಲುಕುತ್ತ ನಿಂತಲ್ಲಿನಿಲ್ಲದೆ ಗೊರಸಿನಿಂದ ಭೂಮಿಯನ್ನು ಕೆರೆಯುತ್ತ ಬಾಯಿಂದ ನೊರೆಯನ್ನು ಸುರಿಸಿ ಕೆನೆಯುತ್ತ ನಡೆಯುತ್ತಿದ್ದುವು. ಒಳಗೆ ಬಾಣಗಳನ್ನು ತುಂಬಿ ಮೇಲೆ ಕಲಶವನ್ನಿಟ್ಟು ಭಂಗಾರದ ಮುಲಾವ್ರವಮಾಡಿ ದಿವ್ಯಾಶ್ವಗಳನ್ನು ಹೂಡಿರುವ ರಥಗಳು ಚೀತ್ಕಾರವನ್ನು ಮಾಡುತ್ತ ಸಾರಥಿಯು ನಡಸಿದ ಕಡೆಗೆ ಹರಿಯುತ್ತಿದ್ದುವು. ಭುಜಕೀರ್ಟವನ್ನೂ ಲೋಹಕವಚವನ್ನೂ ತೊಟ್ಟು. ತಲೆಗೆ ಟೊಪ್ಪಿಗೆಯನ್ನಿಟ್ಟು ಕೈಯಲ್ಲಿ ಬಿಲ್ಲು ಬಾಣ ಕತ್ತಿ ಗದೆ ಮೊದಲಾದ ಆಯುಧಗಳನ್ನು ಹಿಡಿದು ವೀರನಾದವನ್ನು ಮಾಡುತ್ತಲಿರುವ ಕಾಲಾಳುಗಳ ಸಾಲುಗಳು ಹೋಗುತ್ತಿದ್ದುವು. ಹೀಗೆ ಅಮರಾವತಿಯಿಂದ ಹೊರಟ ಸಕಲ ಸೇನೆಯೊಡನೆಯೂ ದೇವೇಂದ್ರನು ಸಾಗಿ, ಪಟ್ಟಣದ ಹೊರಬಾಗಿಲಿನ ಮುಂದಣ ಬೈಲಿನಲ್ಲಿ ಸೇನೆಯನ್ನೆಲ್ಲ ನಿಲ್ಲಿಸಿ. ವಿಸ್ತಾರವಾಗಿ ಸುತ್ತಲೂ ಸನ್ನದ್ಧವಾಗಿ ನಿಂತಿರುವ ಆ ದೊಡ್ಡ ಸೇನೆಯನ್ನು ನೋಡಿ ಅಚ್ಚರಿಗೊಂಡು. ಇಂಥ ಮಹಾಸೇನೆಯ ಇದಿರಿಗೆ ನಿಂತು ಕಾಯುವ ಶೂರನು ಯಾರಿರುವನು ? ಎಂದು ಉಬ್ಬಗೊಳ್ಳುತ್ತ, ಸೇನೆಯನ್ನು ಮುಂದಕ್ಕೆ ಸಾಗಿಸಿದನು, ಎಂದು ಚೆನ್ನಬಸವೇಶನು ನುಡಿದನೆಂಬಲ್ಲಿಗೆ ಹನ್ನೆರಡನೆ ಅಧ್ಯಾಯವು ಸಂಪೂರ್ಣವು.

೧೩ನೆ ಅಧ್ಯಾಯವು.

ಜಲಂಧರನಿಂದ ದೇವೇಂದ್ರನಪಜಯ.

ಬಳಿಕ ಚೆನ್ನಬಸವೇಶನು ಸಿದ್ಧರಾಮೇಶನನ್ನು ಕುರಿತು ಮುಂದಣ ಸಂಗತಿಯನ್ನು ಹೇಳತೊಡಗಿದನೆಂತೆಂದರೆ— ದೇವೇಂದ್ರನು ಮುಂದು ಮುಂದೆ ತನ್ನ ಸೇನೆಯನ್ನು ನಡಸಿಕೊಂಡುಹೋಗುತ್ತಿರುವಲ್ಲಿ ಇದಿರಿಗೆ

ಜಲಂಧರಾಸುರನ ಮಹಾಸೇನೆಯು ಅತ್ಯದ್ಭುತವನ್ನು ಸೂಸುತ್ತ, ಅಗಣಿತ ಯುಗಸ್ಫೋಟದಂತೆಯೂ, ಮೃತ್ಯುವಿನ ಸೈನ್ಯದಂತೆಯೂ, ಪರಶಿವನ ಫಾಲನೇತ್ರಜ್ವಾಲೆಯಂತೆಯೂ, ಕಾಲಭೈರವನ ಪಡೆಯಂತೆಯೂ, ಸಿಡಿಲ ಗುಂಪಿನಂತೆಯೂ ಭಯಂಕರವಾಗಿ ಬರುತ್ತಿದ್ದಿತು. ರಾಕ್ಷಸಸೈನ್ಯವೂ ದೇವಸೈನ್ಯವೂ ಬಂದನ್ನೊಂದು ನೋಡಿದುವು. ಎರಡು ಕಡೆಯ ವಾದ್ಯಗಳೂ ಜಗದ್ಭಾಂಡವನ್ನೇ ಒಡೆದುಬಿಡುವಮಟ್ಟಿಗೆ ಭೋರೆಂದು ಮಹಾಶಬ್ದ ಮಾಡಿದುವು. ಶೂರಭಟರುಗಳು ಸಿಹ್ಮನಾದವನ್ನು ಮಾಡಿ ತೋಳ್ತೊಡೆಗಳನ್ನು ತಟ್ಟಿದರು. ಆನೆ ಕುದುರೆಗಳು ವಿಜೃಂಭಿಸಿ ಮುಂದೆ ಸರಿದುವು. ಧನುರ್ಧಾರಿಗಳು ಬಿಲ್ಲಿಗೆ ಸಿಂಜಿನಿಯನ್ನು ಹವಣಿಸಿ, ಧ್ವನಿಗೈದರು ತೇರಿನ ಮೇಲಿನ ಧ್ವಜಪಟಗಳ ಕಟ್ಟು ಬಿಚ್ಚಲ್ಪಟ್ಟು ಗಾಳಿಗೆ ಬೀಸುತ್ತ ಪರಬಲವನ್ನು ಕೈಬೀಸಿ ಕರೆಯುವಂತೆ ತೋರುತ್ತಿದ್ದುವು. ಎರಡು ಬಲವೂ ಬಂದನ್ನೊಂದು ಸಂಧಿಸುತ್ತ ಬಂದುವು ಗಗನಮಂಡಲವನ್ನೆಲ್ಲ ಧೂಳಿಯು ಕವಿದುಕೊಂಡಿತು. ದಿಙ್ಮಂಡಲವನ್ನೆಲ್ಲ ಶಬ್ದವು ಆವರಿಸಿಕೊಂಡಿತು. ಪ್ರತಾಪಾಗ್ನಿಯ ಔಷ್ಣ್ಯವು ಅವರ ದೇಹರಕ್ತವನ್ನೂ ಅದರ ಆರುಣ್ಯವು ಕಣ್ಣುಗಳನ್ನೂ ಆಕ್ರಮಿಸಿಕೊಂಡುವು. ಯುದ್ಧಭೇರಿಯು ಮಹಾಘೋಷವನ್ನೆಸಗಲು ಸೈನಿಕರೆಲ್ಲರೂ ದೇಹಾಭಿಮಾನವನ್ನು ಮರೆತರು. ಮೊದಲು ಉಭಯ ಸೈನ್ಯಗಳ ಮುಂಗಡೆಯು ಬಂದನ್ನೊಂದು ದುರುದುರನೆ ನೋಡುತ್ತ ಕಾದಾಡ ಹತ್ತಿದುವು. ಮುಂಗಡೆಯಲ್ಲಿದ್ದವರು ಅಬ್ಬರಿಸಿ, ಕತ್ತಿ ಈಟಿ ಭಲ್ಲೆಯ ಕೊಡಲಿ ಗದೆ ಮೊದಲಾದುವುಗಳಿಂದ ಒಬ್ಬರನ್ನೊಬ್ಬರು ಕತ್ತರಿಸಿ, ತಿವಿದು, ಇರಿದು, ಕೊಚ್ಚಿ, ಬಡಿದು, ತುಳಿದು, ಕೊರೆದು, ಪ್ರತಿಬಲವನ್ನು ಧ್ವಂಸ ಮಾಡುತ್ತ ಬಂದರು. ಪರಸ್ಪರವಾಗಿ ಹೀಯಾಳಿಸುತ್ತಲೂ, ಕಡಿ, ಸಿಡಿ, ಜಡಿ, ಹಿಡಿ, ಮಿಡಿ, ಮುಡಿ, ಉಡಿ. ಇಡಿ, ಕುಡಿ, ಒಡಿ, ಹೊಡೆ, ತಡೆ, ನಡೆ, ಕೆಡೆ, ಇರಿ, ಮುರಿ, ಸರಿ, ತರಿ, ಕೊಚ್ಚು, ಎಚ್ಚು, ಬಿಚ್ಚು, ಕಚ್ಚು. ಚುಚ್ಚು, ಉಗಿ, ಬಗಿ, ಬಿಗಿ, ಸುಗಿ, ಚಿಗಿ, ನೆಗೆ, ತೆಗೆ, ತಾಗು, ಬಾಗು, ಕೂಗು, ಬೀಗು, ನೂಕು, ತಾಕು, ಔಕು, ಇರುಕು, ತುರುಕು, ತೊಡಕು, ಅಡಕು, ಕುಲಕು, ಬೆದಕು, ಇಕ್ಕು, ಒಕ್ಕು, ಕುಕ್ಕು, ಎಕ್ಕು, ಎಂದು ಮೊದಲಾಗಿ

ಒಬ್ಬರಿಗೊಬ್ಬರು ಹೇಳಿ ಪ್ರೋತ್ಸಾಹಿಸುತ್ತ, ಆಯುಧಗಳಿಂದ ಬಡಿದು ಕೆಡೆದಾಡುತ್ತಿದ್ದರು. ಎರಡು ಕಡೆಯ ಶೂರಭಟರುಗಳೂ ಕತ್ತಿಯಿಂದ ಕತ್ತರಿಸಿ, ಭಲ್ಲೆಯದಿಂದ ತಿವಿದು, ಈಟಿಯಿಂದಿರಿದು, ಕುಂತದಿಂದ ಬಡಿದು, ಗದೆಯಿಂದ ಹೊಡೆದು, ಕತ್ತನ್ನು ಕೊರೆದು, ತೊಡೆಯನ್ನು ಮುರಿದು, ಹೊಟ್ಟೆಯನ್ನು ಬಗಿದು, ಕರುಳನ್ನು ಸೆಳೆದು, ರಕ್ತವನ್ನೂ ಮಾಂಸವನ್ನೂ ಭೂತಗಣಕ್ಕುಣ್ಣಿಸಿ, ವೀರಾವೇಶದಿಂದ ಬೊಬ್ಬಿರಿಯುತ್ತ, ಮೂದಲಿಸಿದವರನ್ನು ಹಾರಿ ತಲೆ ಮೆಟ್ಟಿ ಕೆಡಹಿ, ಎದೆಯ ಮೇಲೆ ಕುಳಿತು, ಹಂಗಿಸಿ, ಯಮಲೋಕಕ್ಕೆ ಕಳುಹುತ್ತ, ಪ್ರಚಂಡಪರಾಕ್ರಮದಿಂದ ಕಾದಾಡುತ್ತಿದ್ದರು. ರಾವುತರು ವಾಘೆಗಳನ್ನು ಸಡಿಲಬಿಟ್ಟು ಕುದುರೆಗಳನ್ನು ಚಿಮ್ಮಿಸಿ, ಭಲ್ಲೆಯಗಳಿಂದ ತಿವಿದಾಡಿ, ಕೆಡಹಿ ಯುದ್ಧಭೂಮಿಗಳನ್ನು ರಕ್ತಜಲದಿಂದಭಿಷೇಕಿಸಿದರು. ಮಾವುತರು ಅಂಕುಶವನ್ನಿಕ್ಕಿ ಆನೆಗಳನ್ನು ಮುಂದಕ್ಕೆ ಸರಿಸಿ ಇದಿರಾನೆಗಳನ್ನು ಬತ್ತರಿಸಿ ಕೊಂಬುಗಳಿಂದ ಚುಚ್ಚಿಸಿ,ಕಾಲಿಗೆ ಸಿಕ್ಕಿದವರನ್ನು ಹೊಸಗಿ ಸಾಯಿಸಿ, ಸುಂಡಿಲಿಗೆ ಸಿಕ್ಕಿದವರನ್ನು ಸೆಳೆದು ಮೇಲಕ್ಕೆಸೆಯಿಸಿ, ಕೊಲ್ಲಿಸುತ್ತಿದ್ದರು. ರಥಿಕರು ಮುಂದಕ್ಕೆ ರಥಗಳನ್ನು ಸಾರಥಿಗಳಿಂದ ಸಾಗಿಸಿ, ಪ್ರಾಂಖಾನುಪ್ರಾಂಖವಾಗಿ ಬಾಣಾವಳಿಗಳನ್ನು ಬಿಡುತ್ತ ಸರಳವಳಿಯಿಂದಲೇ ಇದಿರುಬಲವನ್ನೆಲ್ಲ ಮುಕ್ಕಿ ವೀರನಾದವನ್ನು ಮಾಡುತಲಿದ್ದರು. ಆನೆಗೆ ಆನೆ, ಕುದುರೆಗೆ ಕುದುರೆ, ಕಾಲಾಳಿಗೆ ಕಾಲಾಳು, ರಥಿಕರಿಗೆ ರಥಿಕರು. ಇದಿರಾಗಿ ಮಹಾಪರಾಕ್ರಮದಿಂದ ಕಾಯುತ್ತಿರಲು, ಆಯುಧಪ್ರಹಾರಗಳ ಶಬ್ದವು ಛಿಳಿಛಿಳಿಲ್ಲಿಟಿಲೆಂದು ಕಿವಿಯನ್ನು ಕಿವ್ವುಮೂಡುತ್ತಿದ್ದುವು. ಅಂತರಿಕ್ಷಕ್ಕೆ ಹಾರಿಹಾರಿ ಬೀಳುತಿದ್ದ ತಲೆಬುರುಡೆಗಳೂ ಚಿಮ್ಮುತ್ತಿದ್ದ ರಕ್ತಧಾರೆಯೂ ಪ್ರತಿಕ್ಷಣದಲ್ಲೂ ಹೆಚ್ಚುಹೆಚ್ಚಾಗುತ್ತಿದ್ದುವು. ದೇವಬಲವು ಮುಂದಕ್ಕಿಟ್ಟ ಹಜ್ಜೆಯನ್ನು ಹಿಂದೆಗೆಯದೆಯೂ, ಹಿಂದೆಗೆದವರನ್ನು ಜರೆದು ಬೈದು ಉಬ್ಬಿಸುತ್ತಲೂ, ಕೆಳಗೆ ಬಿದ್ದವರನ್ನು ಸರಕುಗೊಳ್ಳದೆ ತುಳಿದು ಮುಂಜರಿಯುತ್ತಲೂ, ಇದಿರಾದವರನ್ನು ಮೋರೆ ನೋಡದೆ ಒಡಿದು ಸೆಳೆದು ತುಳಿದು ನುಗ್ಗುತ್ತಲೂ, ಕ್ಷಣೇ ಕ್ಷಣೇ ಪುಂಕರಿಸಿ ಶೌರ್ಯವನ್ನು ಹೆಚ್ಚಿಸುತ್ತಲೂ, ಕಡಿಮೆ ಸೀಳಿ ಪರಸೈನ್ಯದ ಚೂಣಿಯವರನ್ನು ಮುಖತಿರುಗುವಂತೆ ಮಾಡಿ,

ಓಡಿಸಿದರು. ಎತ್ತ ನೋಡಿದರೂ ಹೆಣಗಳ ರಾಶಿ, ಎತ್ತ ನೋಡಿದರೂ ಕರುಳುಗಳ ಮಾಲೆ, ಎತ್ತ ನೋಡಿದರೂ ರಕ್ತದ ಕಾಲಿವೆ. ಎಲ್ಲಿ ನೋಡಿದರೂ ಮುರಿದಾಯುಧಗಳ ಗುಡ್ಡೆ, ಎಲ್ಲಿ ನೋಡಿದರೂ ಸುಂಡಿಲು ಮುರಿದು ತೊಡೆಯು ಕಡಿದು ಬಿದ್ದು ಕಿರುಚುತ್ತಿರುವ ಆನೆಗಳು, ಎತ್ತ ನೋಡಿದರೂ ರಕ್ತವನ್ನು ಕಾರುತ್ತ ಕುಂಟುತ್ತ ಬದ್ದಾಡುತ್ತಲಿರುವ ಕುದುರೆಗಳು, ಎಲ್ಲಿ ನೋಡಿದರೂ ಅಚ್ಚು ಮುರಿದು ನುಚ್ಚು ನೂರಾಗಿ ಬಿಟ್ಟಲಾಗಿರುವ ತೇರುಗಳು ಕಾಣುತ್ತ, ರಣಾಂಗಣವು ಬಹು ಭಯಂಕರವಾಗಿದ್ದಿತು ಅಷ್ಟರಲ್ಲಿ ದೈತ್ಯಬಲವು ದೇವತೆಗಳ ಪೆಟ್ಟನ್ನು ತಾಳಲಾರದೆ, ಧೈರ್ಯಗುಂದಿ ಹಿಂತಿರುಗಿ ಓಡುತ್ತಿರುವುದನ್ನು ರಾಕ್ಷಸದಳಪತಿಯಾಗಿದ್ದ ಶುಂಭಾಸುರನು ನೋಡಿ, ಬಹುಕೋಪಾಟೋಪದಿಂದ ಕಣ್ಣಿನಲ್ಲಿ ಕೆಂಡವನ್ನು ಕರೆಯುತ್ತ, ಹುಬ್ಬು ಗಂಟಿಕ್ಕಿ. ಆರ್ಭಟಿಸಿ, ಕೈಕತ್ತಿಯನ್ನು ಝಳಪಿಸಿ, ಮೊರೆದು, ಭೂಮಿಯನ್ನು ಝಾಡಿಸಿ, ತುಳಿದು, ತನ್ನ ಬಲವನ್ನೆಲ್ಲ ಕೈಬೀಸಿ ಮುಂದಕ್ಕೆ ದೇವತೆಗಳ ಮೇಲೆ ಸಾಗಿಸಿದನು. ಮತ್ತೂ—ಎಲೆ ಜಂಭಾಸುರನೆ ನಡೆ, ಎಲೆ ನಿಶುಂಭನೆ ಸೇನೆಯನ್ನು ನಡಸು, ಚಂಡನೆ ಮುಂದಕ್ಕೆ ಸಾಗು, ಖಡ್ಗರೋಮನೆ ಪರಸೇನೆಯನ್ನು ಹಿಡಿ, ವಾಮನನೆ ನಿನ್ನ ಪೌರ್ಯವನ್ನು ತೋರಿಸು, ಲೋಮಾಸುರನೆ ನಿನ್ನ ಶಕ್ತಿಯೇನಾಯಿತು? ವಿರೂಪಾಕ್ಷನೆ ನಿನ್ನ ಕೈತೋರಿಸು, ದೀರ್ಘಬಾಹುವೆ ಏನು ಅಳ್ಳಾಡದೆ ಸುಮ್ಮನಿರುವೆ? ಮದಿರಾಸುರನೆ ಅದೇಕೆ ನಿಂತಿರುವೆ? ಕಾಲನೇಮಿಯೆ ತಡವೇಕೆ? ಎಲೈ ರಾಕ್ಷಸಭಟಸ್ತೋಮವೆ ನಿಮ್ಮ ಶೌರ್ಯಧೈರ್ಯಸಾಮರ್ಥ್ಯಾದಿಗಳೆಲ್ಲ ಎಲ್ಲಿ ಹೋದುವು? ಎಂದು ಮೊದಲಾಗಿ ಹೀಯಾಳಿಸಿ ಉಬ್ಬಿಸಿ ದೇವತೆಗಳ ಮೇಲೆ ಸಾಗಿಸಿದನು. ರಾಕ್ಷಸನ ಚತುರಂಗಸೈನ್ಯವೂ ಕಪಟುಪಟೂಟೋಪದಿಂದ ಮುರಿದೆದ್ದು, ತೋಳ್ಗಳನ್ನು ತಟ್ಟಿ, ಆರ್ಭಟಿಸಿ ಮಿಸೆಗಳನ್ನು ಹುರಿಮಾಡಿ, ಕೈಕತ್ತಿಗಳನ್ನು ಜಳಪಿಸಿ, ತಮ್ಮ ತಮ್ಮ ವಾಹನಗಳನ್ನು ಹತ್ತಿ, ಅರಣ್ಯವನ್ನು ಮುತ್ತಿದ ಕಾಳ್ಗಿಚ್ಚಿನಂತೆ ದೇವವಾಹಿನಿಯಮೇಲೆ ಬಿದ್ದಿತು. ಈ ಅಬ್ಬರವನ್ನು ಕೇಳಿದಕೂಡಲೇ ದೇವೇಂದ್ರನು ಆರ್ಭಟಿಸಿ, ತನ್ನ ಸುತ್ತಲಿನ ದೇವಶ್ರೇಷ್ಠರನ್ನೆಲ್ಲ ಕೈಬೀಸಿ ಕರೆದು, ಉತ್ಸಾಹಗೊಳಿಸಿ, ದೈತ್ಯರ ಮೇಲೆ ಸಾಗಿಸಿದನು. ಸಕಲ

ದಿಕ್ಪಾಲಕರೂ ತಮ್ಮ ತಮ್ಮ ಸೇನೆಯೊಡನೆ ಅತಿ ರಭಸದಿಂದ ರಾಕ್ಷಸರ ಮೇಲೆ ಬಿದ್ದರು. ಆಗ ಎರಡು ದಳಗಳಲ್ಲೂ ಶುಂಭಾಸುರನು ದೇವೇಂದ್ರನನ್ನೂ, ನಿಶುಂಭನು ಅಗ್ನಿಯನ್ನೂ, ವಾಮನನು ಯಮನನ್ನೂ, ಮದಿರನು ನಿಋತಿಯನ್ನೂ, ದೀರ್ಘಬಾಹುವು ವರುಣನನ್ನೂ, ಖಡ್ಗರೋಮನು ವಾಯುವನ್ನೂ, ಪ್ರಚಂಡನು ಕುಬೇರನನ್ನೂ, ಚಂಡನು ಈಶಾನನನ್ನೂ ಇದಿರಾಗಿ ಮೂದಲಿಸಿ ಪರಸ್ಪರವಾಗಿ ಬಾಣದ ಮಳೆಯನ್ನು ಕರೆಯಹತ್ತಿದರು. ರಣಾಂಗಣವನ್ನೆಲ್ಲ ಈ ಬಾಣಗಳು ಕವಿಯಲು, ಭೂಮ್ಯಂತರಿಕ್ಷಗಳೊಂದೂ ಕಾಣದಂತಾದುವು. ರಿಪುಗಳು ಮಾಡುವ ಬಾಣ ಪ್ರಯೋಗಕೌಶಲ್ಯಕ್ಕೆ ಮನಸ್ಸಿನಲ್ಲಿ ಮೆಚ್ಚುತ್ತ ಅದಕ್ಕಿಮ್ಮಡಿಯಾದ ಕರ ಚಮತ್ಕಾರದಿಂದ ತೀಕ್ಷ್ಣವಾದ ಬಾಣಗಳನ್ನು ಹೂಡಿ ಪ್ರತಿಬಾಣವನ್ನು ಮಧ್ಯದಲ್ಲೇ ಖಂಡಿಸಿ ರಿಪುವಿನ ಎದೆಯನ್ನು ಭೇದಿಸುತ್ತಲೂ, ಕಣ್ಣುಗಳನ್ನು ಕೆಂಪಗೆ ಮಾಡಿ ಹುಬ್ಬು ಗಂಟಿಕ್ಕಿ ಮೂದಲಿಸಿ, ಪ್ರತಿಬಲವನ್ನು ಬಾಣಾಹತಿಯಿಂದ ಭೂಮಿಗುರುಳಿಸಿ, ಭೂತಬೇತಾಳಗಳಿಗೆ ಅವರ ರಕ್ತ ಮಾಂಸಗಳನ್ನು ಔತಣ ಮಾಡಿಸುತ್ತಲೂ, ರಥವು ಮುರಿದುಹೋದರೆ ಭೂಮಿಗಿಳಿದು ಕತ್ತಿಯಿಂದಲೂ ಗದೆಯಿಂದಲೂ ಕುಂತಾಯುಧದಿಂದಲೂ ಹೋರಾಡುತ್ತಲೂ, ಪೂರ್ವರನ್ನೋರ್ವರು ಜರೆದು, ಮುಸದು, ಮೇಲೆ ಬಿದ್ದು, ಹೊಡೆದು, ಕೆಡಹಿ, ಮೆಟ್ಟಿ, ಕೊಲ್ಲುತ್ತಲೂ, ಉಭಯಪಕ್ಷದವರೂ ಭಯಂಕರವಾಗಿ ಯುದ್ಧಮಾಡಿದರು. ಈ ರೀತಿಯಲ್ಲಿ ಘನಸಂಗ್ರಾಮ ವೆಸಗಿರಲು ಕಡೆಕಡೆಗೆ ರಾಕ್ಷಸಭಟರುಗಳ ಪ್ರಹಾರಗಳು ಮಿತಿಮೀರುತ್ತ ಬಂದುವು. ರಣಾಂಗಣದ ಭೀಕರ ರೂಪನ್ನು ನೋಡುತ್ತ, ರಾಕ್ಷಸರು ವೀರಾವೇಶವಶರಾದರು. ಅವರ ಏಟುಗಳ ಮುಂದೆ ದಿಕ್ಪಾಲಕರ ಸೈನ್ಯವು ಎದೆಗೊಟ್ಟು ನಿಲ್ಲಲಾರದೆ ಹೋಯಿತು. ದೇವೇಂದ್ರನು ಪಲಾಯನಸೂಕ್ತವನ್ನೋದಿದನು. ಅಗ್ನಿಯು ಕಾಲಿಗೆ ಬುದ್ಧಿ ಹೇಳಿದನು. ಯಮನು ಶತ್ರುಗಳಿಗೆ ಬೆನ್ನು ತೋರಿಸಿದನು. ನಿಋತಿಯು ನಗರಾಭಿಮುಖನಾದನು. ವರುಣನು ವಿಶ್ರಾಂತಿಯನ್ನಪೇಕ್ಷಿಸಿದನು. ವಾಯುವಿಗೆ ಶೈತ್ಯೋಪಚಾರ ಬೇಕಾಯಿತು. ಕುಬೇರನು ಚಿಕಿತ್ಸೆ ಮಾಡಿಸಿಕೊಳ್ಳುವು ದಕ್ಕೆ ಹೋದನು. ಈಶಾನನು ಶಕ್ತಿಗುಂದಿ ರಥದಲ್ಲಿ ಮಲಗಿದನು. ಹೀಗೆ

ದೇವನಾಯಕರೆಲ್ಲರೂ ಹಿಮ್ಮೆಟ್ಟಿ ಓಡಿಹೋಗುತ್ತಿರಲು, ಅವರ ಚತುರಂಗಬಲವೂ ಅವರನ್ನೇ ಹಿಂಬಾಲಿಸಿತು. ಬಿರುಗಾಳಿಯು ಸಣ್ಣ ಕಸ ಕಡ್ಡಿಯನ್ನೆಲ್ಲ ಬಡಿದೋಡಿಸಿಕೊಂಡು ಹೋಗುವಂತೆ ಅವರ ಹಿಂದಿನಿಂದ ರಾಕ್ಷಸಸೇನೆಯು ಜಡಿದು ಬಡಿದು ಓಡಿಸಿಕೊಂಡು ಹೋಗುತ್ತಿದ್ದಿತು. ದಿಕ್ಕುಗೆಟ್ಟು ದೇವತೆಗಳೋಡುತ್ತಿರುವುದನ್ನು ನೋಡಿ ರಾಕ್ಷಸರು ಕೇಕೆಹಾಕುತ್ತಲೂ, ಜರೆಯುತ್ತಲೂ, ಬೈಯುತ್ತಲೂ, ಕೈಗೆ ಸಿಕ್ಕಿದವರನ್ನು ಗುದ್ದಿ ತುಳಿದು ಕೊಲ್ಲುತ್ತಲೂ, ಅವರ ಆನೆ ಕುದುರೆ ರಥಗಳಮೇಲೆ ಕುಳಿತು ಬೊಬ್ಬಿರಿಯುತ್ತಲೂ, ರಕ್ತವನ್ನು ಹೀರಿ ಚಪ್ಪರಿಸುತ್ತಲೂ ಯಥೇಚ್ಛವಾಗಿ ರಣಾಂಗಣದಲ್ಲಿ ವಿಹರಿಸುತ್ತಿದ್ದರು. ದಿಕ್ಕುಗೆಟ್ಟು ಓಡುತ್ತ ಕೈಗೆ ಸಿಕ್ಕಿದವರನ್ನು ತರಿಯುವುದಕ್ಕಾಗಿ ರಾಕ್ಷಸರು ಕೈಕತ್ತಿಯನ್ನೆತ್ತಿದರೆ ದೇವತೆಗಳು ಆ ಕತ್ತಿಯ ಕಡೆಗೇ ಕಣ್ಣನ್ನು ತಿರುಗಿಸಿ ದೈನ್ಯದಿಂದ ಹಲ್ಲಿರಿಯುತ್ತಲೂ, ಕೈಗಳನ್ನು ಚಾಚಿ ಕೊಲ್ಲಬೇಡಿರೆಂದು ಬೇಡಿ, ಕಾಲ್ಗೆ ಬೀಳುತ್ತಲೂ, ಬಾಯಲ್ಲಿ ಹುಲ್ಲನ್ನು ಕಚ್ಚಿ, ನಮ್ಮ ತಲೆಯನ್ನುಳುಹಿ ಕಾಪಾಡಯ್ಯ ! ನಿನ್ನ ಮನೆಯಾಳಾಗಿರುತ್ತೇವೆಂದು ಕೇಳಿಕೊಳ್ಳುತ್ತಲೂ, ತಲೆಯನ್ನುಳುಹಿಕೊಂಡು, ಸತ್ತು ಬಿದ್ದಿರುವ ಆನೆ ಕುದುರೆಗಳ ಮರೆಯಲ್ಲಿ ಅವಿತಿದ್ದ ಓಡಿಹೋಗುತ್ತಿದ್ದರು. ದೇವತೆಗಳ ಕಳೆದುಳಿದ ಚತುರಂಗ ಸೈನ್ಯವು ಬಂದರಮೇಲೊಂದು ಬಿದ್ದು ಕೈಕಾಲನ್ನು ಮುರಿದುಕೊಂಡು ರಕ್ತವನ್ನು ಸುರಿಸುತ್ತ ಓಡಿಬಂದು ಅಮರಾವತಿಯ ಕಂದಕವನ್ನು ಬಂದು ಸೇರಿತು. ಪಟ್ಟಣದ ಕಿರಿದಾದ ಬಾಗಿಲಲ್ಲಿ ನಾನು ಮುಂದು ತಾನು ಮುಂದೆಂದು ಪಟ್ಟಣವನ್ನು ಹೊಕ್ಕಿಕೊಳ್ಳುವ ರಭಸದಲ್ಲಿ ಎಷ್ಟೋಮಂದಿಗಳು ಆನೆ ಕುದುರೆ ರಥಗಳಿಗೆ ಸಿಕ್ಕಿ ಅಂಗವಿಕಲರಾಗಿ ಅನೇಕರು ಪ್ರಾಣ ಕೊಟ್ಟರು. ಆಳ್ವೀರಿಗಳ ಮೇಲೆ ಹೆಂಗುಸರು ನಿಂತು ನೋಡುತ್ತಿರಲು, ಕೆಳಗಿನಿಂದ ಅವರಿಗೆ ಕೈಮುಗಿದು ದಯೆಯಿಟ್ಟು ಬೇಗನೆ ನಮ್ಮನ್ನು ಮೇಲಕ್ಕೆ ಸೇದಿಕೊಳ್ಳಿರೆಂದು ಕೆಲವರು ಬೇಡಿಕೊಳ್ಳುತ್ತಿದ್ದರು. ಇಷ್ಟರಲ್ಲಿ ರಾಕ್ಷಸಸೇನೆಯು ಅಮರಾವತಿಯ ಬಾಗಿಲಿಗೆ ಓಡಿಸಿಕೊಂಡು ಬಂದಿತು. ಕಾವಲುಗಾರರು ಥಟ್ಟನೆ ಕೋಟೆಯ ಬಾಗಿಲನ್ನು ಮುಚ್ಚಿ ಬಂಧಿಸಿದರು.

ಆಗ ರಾಕ್ಷಸನ ಸೈನಿಕರು ಹೊರಗಿದ್ದವರ ಮೇಲೆ ಬಿದ್ದು ಎರಡೆರಡು ಹೋಳಾಗಿ ಸೀಳಿ, ಶುಂಭಾಸುರನ ಅಪ್ಪಣೆಯ ಮೇರೆ ಆಳ್ವೀರಿಯನ್ನು ಹತ್ತಲನುವಾದರು. ಕೋಟೆಯ ಮೇಲೆ ದಿಕ್ಪಾಲಕರು ನಿಂತು ಕೆಳಗಿನಿಂದೇರಿಬರುವ ರಾಕ್ಷಸರಮೇಲೆ ಬಾಣವರ್ಷವನ್ನು ಕರೆಯುತ್ತಿದ್ದರು. ಅವರೇಟಿಗೆ ರಾಕ್ಷಸರು ಉರುಳುರುಳಿ ಅಗಳಿನೊಳಗೆ ಬೀಳುತ್ತಿದ್ದರು. ಆಗ ಶುಂಭನು ತನ್ನ ಸೈನಿಕರನ್ನು ಜರೆದು ಹೀಯಾಳಿಸಲು ಕಲಿಭಟರುಗಳು ಬಾಣಹತಿಗೆ ಹೆದರದೆ, ಬಿದ್ದವರನ್ನೇ ಒಟ್ಟು ಮೆಟ್ಟಲನ್ನು ಮಾಡಿ ಕೋಟೆಗಳನ್ನೇರಿ ಮೇಲಿದ್ದ ದೇವತೆಗಳ ತಂಡವನ್ನೆಲ್ಲ ತರಿದು ತರುಬಿ ಅಬ್ಬರಿಸಿ, ಮಹಾಭೇರೀರವವನ್ನು ಮಾಡಿದರು. ಈ ಧ್ವನಿಯನ್ನು ಕೇಳಿ ಪ್ರತಿಗೃಹದಲ್ಲೂ ಹೆಂಗುಸರು ಬಾಗಿಲುಗಳನ್ನು ಮುಚ್ಚಿ, ಒಳಗೆ ಅಡಗಿಕೊಂಡು ಕಣ್ಣಾಬ್ಬಿಯ್ಬಿಡುತ್ತ, ಬೆರಲುಗಳನ್ನು ನಟಿಕಗೊಳ್ಳುತ್ತ, ವಸ್ತ್ರಾಭರಣಾದಿಗಳನ್ನು ಮುಚ್ಚಿಡುತ್ತ, ಕಳವಳಿಸುತ್ತಿದ್ದರು. ಇನ್ನು ಕೆಲವರು "ರಾಕ್ಷಸರು ತಮ್ಮ ವಸ್ತುಗಳನ್ನು ಕೊಟ್ಟುಬಿಡಿರೆಂದು ನ್ಯಾಯವಾಗಿ ಹೇಳಿಕಳುಹಿದ್ದರೆ ಈ ಪಾಪಿ ದೇವೇಂದ್ರನು ಕೊಟ್ಟುಬಿಡದೆ ನಮ್ಮನ್ನೆಲ್ಲ ಈ ಅವಸ್ಥೆಗೆ ಗುರಿಮಾಡಬಹುದೆ ? ಅಯ್ಯೋ ! ಕೆಟ್ಟೆವಲ್ಲ !" ಎಂದು ಆಡಿಕೊಳ್ಳುತ್ತಿದ್ದರು. ಅತ್ತ ಬಂದು ಕಡೆ ಬೀದಿಯಲ್ಲಿ ರಾಕ್ಷಸಸ್ತೋಮವು ಕೋಟೆಯನ್ನು ಕೆಡಹುತ್ತಿರುವರೆಂಬುದನ್ನು ಕೇಳಿ, ದೇವೇಂದ್ರನು ಕೆರಳಿ, ಆಯುಧವನ್ನೆತ್ತಿ ಹೊರಟನು. ದೇವತೆಗಳು ಕಿಡಿಗಣ್ಣಾದರು. ದಿಕ್ಪಾಲಕರೆಲ್ಲರೂ ಮುತ್ತೊಂದು ವೇಳೆ ರೋಷಾವೇಶದಿಂದ ಆಯುಧಗಳನ್ನು ಝಳಪಿಸುತ್ತ ರಾಕ್ಷಸಸ್ತೋಮದಮೇಲೆ ಬಿದ್ದು, ಇರಿದು ಕೊಚ್ಚುತ್ತ ಬಂದರು. ಸಿಕ್ಕಿದವರ ಜುಟ್ಟುಗಳನ್ನು ಹಿಡಿದು ತಿರುಹಿ ಕೋಟೆಯಿಂದಾಚೆಗೆ ಬಿಸುಡುತ್ತಿದ್ದರು. ತಲೆಗಳನ್ನು ಒಡೆದು ಹೊಟ್ಟೆಗಳನ್ನು ಬಗಿದು, ನಡುಗಳನ್ನು ಮುರಿದು, ಎದೆಯನ್ನು ಸೀಳಿ, ರಾಕ್ಷಸ ಸೈನ್ಯವನ್ನು ನಾಶಗೊಳಿಸಿ, ಕೋಟೆಯಿಂದ ಎಲ್ಲರನ್ನೂ ಕೆಡಹಿದರು. ಅಷ್ಟರೊಳಗೆ ಸಂಧ್ಯಾಕಾಲವಾಯಿತು. ರಾಕ್ಷಸರು ಕೋಟೆಯ ಸುತ್ತಲೂ ಬೀಡನ್ನು ಬಿಟ್ಟು ಪಟ್ಟಣವನ್ನು ಮುತ್ತಿಗೆ ಹಾಕಿದ್ದರು. ಇತ್ತ ಪಟ್ಟಣದೊಳಗೆ ದೇವೇಂದ್ರನು ಚಿಂತಾಕುಲನಾಗಿ ಸಕಲ ದಿಕ್ಪಾಲಕ

ರೊಡನೆ ಕೂಡಿ ಅರಮನೆಗೆ ಬಂದು, ರಹಸ್ಯವಾಗಿ ಕುಳಿತು, ದೇವಗುರು ವಾದ ಬೃಹಸ್ಪತ್ಯಾಚಾರ್ಯರೊಡನೆ ಯುದ್ಧದ ಸಂಕಟವನ್ನು ಕುರಿತು ಪ್ರಸ್ತಾಪಿಸಲನುವಾಗಿ "ಈ ನಮ್ಮ ಕೋಟೆಯು ಸಾಮಾನ್ಯವಾದುದಲ್ಲ, ಇದನ್ನು ಕಾಪಾಡಿಕೊಂಡಿರುವ ಭಟರ ಶೌರ್ಯವೂ ಸಾಧಾರಣವಾದುದಲ್ಲ, ನಮ್ಮಲ್ಲಿರತಕ್ಕ ಯುದ್ಧಸಾಮಗ್ರಿಗಳಾವರೂ ಸ್ವಲ್ಪವಾಗಿವೆಯೆ? ಹೀಗಿದ್ದರೂ ಶತ್ರುಗಳು ನಿಮಿಷಮಾತ್ರದಲ್ಲಿ ನಮ್ಮನ್ನು ಪರಾಭವಗೊಳಿಸಿದರು. ಈ ದಿವಸವೇ ಕೋಟೆಯು ಅವರ ವಶವಾಗದೆ ಉಳಿದಿರುವುದು ಶಿವಕಟಾಕ್ಷವೇ ಹೊರತು ಶೂರರಾದ ಆ ರಾಕ್ಷಸರನ್ನು ಕೊಂದು ನಾವಿದನ್ನು ಉಳುಹಿಕೊಳ್ಳುವುದು ಸಾಧ್ಯವೆ? ಇನ್ನು ನಾವು ಈ ಪಟ್ಟಣವಲ್ಲಿರುವುದು ಸರಿಯಲ್ಲ; ಬೆಳಿಗಾವರೆ ರಾಕ್ಷಸರ ಹಾವಳಿಯನ್ನು ನಾವು ತಾಳಲಾರೆವು; ಇದಕ್ಕೆ ಹೇಗೆ ಮಾಡುವ?" ಎಂದನು. ಆಗ ಗುರುವು— ಎಲೈ ದೇವೇಂದ್ರನೇ! ಬಳ್ಳಿಯವಾತನ್ನಾಡಿದೆ; ಇನ್ನು ನಾವಿಲ್ಲಿದ್ದರೆ ರಾಕ್ಷಸರಿಂದ ಗಾಸಿಗೊಳ್ಳುವುದೇ ನಿಜ; ನಾವು ನಮ್ಮ ವಸ್ತುವಾಹನಧನಕನಕಾದಿಗಳಿಗೆ ಅಪೇಕ್ಷೆ ಮಾಡದೆ ಬ್ರಹ್ಮಲೋಕಕ್ಕೆ ಹೊರಟುಹೋಗುವುದೇ ಯೋಗ್ಯವೆಂದು ಹೇಳಲು, ಇಂದ್ರಾದಿದಿಕ್ಪಾಲಕರೆಲ್ಲರೂ ಆ ಕೂಡಲೇ ತಮ್ಮ ತಮ್ಮ ರಾಣಿವಾಸದವರೊಡನೆ ಗೂಢದ್ವಾರದಿಂದ ಅಮರಾವತಿಯನ್ನು ಬಿಟ್ಟು ಬ್ರಹ್ಮನ ಸತ್ಯಲೋಕಕ್ಕೆ ಹೋದರು. ಅಲ್ಲಿ ಬ್ರಹ್ಮನು ಇವರೆಲ್ಲರನ್ನೂ ಕಂಡು ಸಂಗತಿಯೇನೆಂಬುದನ್ನು ತಿಳಿದು, ಇದರ ಪರಿಹಾರೋಪಾಯಚಿಂತನೆಗಾಗಿ ವಿಷ್ಣುವಿನಲ್ಲಿಗೆ ಹೋಗುವುದೇ ಸರಿಯೆಂದು ನಿರ್ಧರಿಸಿ, ಎಲ್ಲರೂ ಬಟ್ಟುಗೂಡಿ ವೈಕುಂಠಕ್ಕೆ ಹೋದರು. "ನೀಚ ಜಲಂಧರಾಸುರನು ಅಮರಾವತಿಗೆ ದಂಡೆತ್ತಿ ಬಂದು ಸ್ವರ್ಗಲೋಕವನ್ನು ಸ್ವಾಧೀನಪಡಿಸಿಕೊಂಡುದರಿಂದ ಈ ದಿಕ್ಪಾಲಕರೆಲ್ಲರೂ ದಿಕ್ಕುಗೆಟ್ಟು ನನ್ನ ಬಳಿಗೆ ಬಂದರು. ನಾನು ನಿಮ್ಮ ಬಳಿಗೆ ಕರೆದುಕೊಂಡು ಬಂದೆನು" ಎಂಬದಾಗಿ ಬ್ರಹ್ಮನು ವಿಷ್ಣುವನ್ನು ಕುರಿತು ಹೇಳಿದನು. ಆಗ ವಿಷ್ಣುವು ಚೆನ್ನಾಗಿ ಯೋಚಿಸಿ, ಬಲಶಾಲಿಯಾದ ಜಲಂಧರನು ಹರನಿಂದಲ್ಲದೆ ಇತರರಿಂದ ಸಾಯುವವನಲ್ಲವೆಂಬುದನ್ನು ತಿಳಿದುಕೊಂಡನಾದರೂ, ದೂರು ಹೇಳಿಕೊಂಡವರನ್ನು ಸುಮ್ಮನೆ ಕಳುಹಿಬಿಡುವುದು ಯೋಗ್ಯವಲ್ಲ

ವೆಂದರಿತು, ಯುದ್ಧಕ್ಕೆ ತಕ್ಕ ಸನ್ನಾಹವನ್ನು ಮಾಡಿಕೊಂಡನು. ಇತ್ತ ಬೆಳಗಾದ ಕೂಡಲೇ ರಾಕ್ಷಸರು ಯುದ್ಧಸನ್ನದ್ಧರಾದರು. ಅಷ್ಟರಲ್ಲಿ ಒಬ್ಬ ದೂತನು ಓಡಿಬಂದು, ದೇವತೆಗಳೆಲ್ಲರೂ ರಾತ್ರಿಯೇ ಪಟ್ಟಣವನ್ನು ಬಿಟ್ಟು ಓಡಿಹೋದರೆಂದು ತಿಳಿಸಿದನು. ಅದನ್ನು ಕೇಳಿ ಜಲಂಧರನು ಅತಿಸಂತೋಷಗೊಂಡು, ತನ್ನ ಸೇನೆಯೊಡನೆ ಅಮರಾವತಿಯ ಸಂಪತ್ತನ್ನು ನೋಡುವುದಕ್ಕಾಗಿ ಹೊರಟನು. ಸುವರ್ಣರಜತಮಯವಾಗಿ ಕಟ್ಟಲ್ಪಟ್ಟಿರುವ ಉಪ್ಪರಿಗೆಗಳ ಸಾಲುಗಳಿಂದ ಸಂಪತ್ತನ್ನು ಬೀರುತ್ತಿರುವ ರಾಜವೀಥಿಗಳನ್ನೂ, ಸೌಂದರ್ಯವೇ ಮೂರ್ತಿಮತ್ತಾಗಿರುವ ದೇವಸ್ತ್ರೀಯರ ಸಾಲುಗಳನ್ನೂ, ತಂಡತಂಡವಾಗಿ ನಿಂತಿರುವ ಹಸ್ತ್ಯಶ್ವರಥಪದಾತಿಗಳನ್ನೂ ನೋಡುತ್ತ ಬಂದು, ಅಮರಸೆಯನ್ನು ಹೊಕ್ಕು, ಸಭಾಮಂದಿರದಲ್ಲಿ ಕುಳಿತು, ಪಟ್ಟಣದ ಜನರನ್ನೆಲ್ಲ ಬರಮಾಡಿಕೊಂಡು, ಅವರಿದಿರಿಗೆ ಶುಂಭಾಸುರನಿಗೆ ಸ್ವರ್ಗಲೋಕದ ಆಧಿಪತ್ಯವನ್ನು ವಹಿಸಿ, ಪಟ್ಟವನ್ನು ಕಟ್ಟಿ, ಎಲ್ಲ ದಿಕ್ಪಾಲಕರುಗಳ ಠಾಣೆಯುಗಳಮೇಲೂ ತನ್ನ ಕಡೆಯ ಕಾವಲನ್ನಿರಿಸಿ, ದೇವೇಂದ್ರನ ಸಕಲ ವಸ್ತುವಾಹನಗಳೂ ಎಲ್ಲಿವೆ ಯೆಂದು ವಿಚಾರಿಸಲು, ಅಲ್ಲಿದ್ದ ಆಳುಗಳು ಇಗೋ ಸಕಲ ವಸ್ತುಗಳೂ ಇಲ್ಲೀಇವೆ, ಚಿಂತಾಮಣಿಯೊಂದನ್ನು ಮಾತ್ರ ಅವರು ಸಂಗಡ ತೆಗೆದುಕೊಂಡು ಹೋದರು, ಎಂದು ಹೇಳಿದರು. ಹಾಗಾದರೆ ದೇವೇಂದ್ರಾದಿಗಳು ಎತ್ತ ಹೋದರೆಂದು ಜಲಂಧರನು ಖಿನ್ನನಾಗಿ ಕೇಳುತ್ತಿದ್ದನು. ಅಷ್ಟರಲ್ಲಿ ಕೆಮಂಡಲು ಕಾಷಾಯವಸ್ತ್ರವನ್ನು ಧರಿಸಿ, ವೀಣೆಯಂ ಪಿಡಿದು, ಶಿವನಾಮಸಂಕೀರ್ತನವನ್ನು ಮಾಡುತ್ತ, ಬಿಳಿಯಮೋಡವು ಆಕಾಶದಿಂದಿಳಿದುಬಂದಂತೆ ನಾರದಮಹರ್ಷಿಯು ಅಂತರಿಕ್ಷಮಾರ್ಗವಾಗಿ ಜಲಂಧರನ ಮುಂದೆ ಬಂದಿಳಿದನು. ಆಗ ರಾಕ್ಷಸೇಶ್ವರನು ಜಗ್ಗನೆದ್ದು, ಋಷಿಯ ಪಾದಕ್ಕೆ ನಮಸ್ಕರಿಸಿ ಆಶೀರ್ವಾದವನ್ನು ಪಡೆದು, ಅರ್ಧಾಸನದಲ್ಲಿ ಮುನೀಶ್ವರನನ್ನು ಕುಳ್ಳಿರಿಸಿಕೊಂಡನು. ನಾರದನು ಜಲಂಧರನಮುಖವನ್ನು ನೋಡಿ, ನಿನಗೆ ಚಿಂತೆಯೇಕೆಂದು ಕೇಳಲು, ನಿನಗೆ ತಿಳಿಯದೆ ? ನಾವಿಷ್ಟುಸಾಹಸವನ್ನು ಮಾಡಿದುದೂ ವ್ಯರ್ಥವಾಯಿತು; ದೇವೇಂದ್ರನು ಮುಖ್ಯವಾದ ಚಿಂತಾಮಣಿಯನ್ನೆತ್ತಿಕೊಂಡು ಎಲ್ಲಿಗೋ ಹೊರಟು

ಹೋದನು, ಎಂದು ರಾಕ್ಷಸನು ಹೇಳಲು, ಅವರೆಲ್ಲರನ್ನೂ ನಾನು ವೈಕುಂಠದಲ್ಲಿ ಕಂಡೆನೆಂದು ನಾರದನು ನುಡಿದನು. ಆ ಕೂಡಲೇ ಜಲಂಧರನು ಘುಡುಘುಡಿಸಿ ಎದ್ದು, ಆಹಾ ! ಆ ವಿಷ್ಣುವು ಇಂದ್ರನನ್ನು ಬೆನ್ನು ಹಾಕಿಕೊಂಡು ನಮ್ಮೊಡನೆ ಕಾದಿ ಒದುಕುವನೆ ? ನೋಡುವ ! ಏಳಿರಿ ಎಂದು ತನ್ನ ಸಕಲ ಬಲವನ್ನೂ ವೈಕುಂಠಲೋಕಕ್ಕೆ ತೆರಳಲು ಅಪ್ಪಣೆ ಮಾಡಿದನು. ಪ್ರಯಾಣದ ಭೇರಿಯಾಗಲು, ರಾಕ್ಷಸಸೇನೆಯು ಮಹಾ ಸಮುದ್ರದಂತೆ ಮೊರೆಯುತ್ತ ಹೊರಟು. ವೈಕುಂಠಪುರವನ್ನು ಸಮೀಪಿಸಿತು. ಎಂದು ಚೆನ್ನಬಸವೇಶನು ಸಿದ್ಧರಾಮೇಶನನ್ನು ಕುರಿತು ನುಡಿದನೆಂಬಲ್ಲಿಗೆ ಹದಿಮೂರನೆ ಅಧ್ಯಾಯವು ಸಂಪೂರ್ಣವು.

೧೪ ನೆ ಅಧ್ಯಾಯ.

ವಿಷ್ಣುಬ್ರಹ್ಮೇಂದ್ರಾದಿಗಳ ಪರಾಜಯ.

ಜಲಂಧರಾಸುರನ ಸೈನ್ಯವು ಅತ್ಯಂತ ಸಮೀಪಿಸಿತೆಂಬ ವಾರ್ತೆಯನ್ನು ವಿಷ್ಣುವು ಕೇಳಿದಕೂಡಲೇ ರೋಷದಿಂದ ಕೆಂಪೇರಿದ ಕಣ್ಣುಗಳನ್ನು ಬಿರುಬಿರನೆ ಬಿಡುತ್ತ, ತನ್ನ ಸಕಲ ಸೈನ್ಯವೂ ಯುದ್ಧಕ್ಕೆ ಸಿದ್ಧವಾಗಲಿಯೆಂದು ಅಪ್ಪಣೆಮಾಡಿದನು. ವಿಷ್ಣುವಿನ ಮತ್ತೂ ಬ್ರಹ್ಮನ ಚತುರಂಗಸೈನ್ಯವೂ ಸಡಗರದಿಂದ ಅಣಿಯಾಗಿ ನಿಂತಿತು. ವಿಷ್ಣುಬ್ರಹ್ಮರುಗಳು ತಮ್ಮ ತಮ್ಮ ವಾಹನವನ್ನೇರಿ ಹೊರಟರು. ದೇವತೆಗಳ ಅಪರಿಮಿತವಾದ ಮಹಾಸೇನೆಯು ರಭಸದಿಂದ ಬರುತ್ತಿರುವ ವರ್ತಮಾನವನ್ನು ಧಾನವೇಶ್ವರನು ಕೇಳಿ, ಕೋಪಾವೇಶಗೊಂಡು ವೈಕುಂಠಪುರದಕಡೆಗೆ ಬೇಗ ಬೇಗನೆ ತನ್ನ ಸೈನ್ಯವನ್ನು ಸಾಗಿಸಿದನು. ಉಭಯಸೇನೆಗಳೂ ಮಹಾಸಮುದ್ರದಂತೆ ಭೋರ್ಗರೆಯುತ್ತ ಬಂದನ್ನೊಂದು ಸಂಧಿಸಿದುವು. ಬೆಟ್ಟ ಬೆಟ್ಟಗಳಿಗೆ ಗುದ್ದಾಟವೆಸಗಿದಂತೆ ಸೇನೆಯ ಮುಂಭಾಗದವರಿಗೆ ಪರಸ್ಪರ ಯುದ್ಧವಾರಂಭಿಸಿತು. ಕತ್ತಿಯನ್ನು ಹಿಡಿದವರು ಕತ್ತಿಯವರೊಡನೆಯೂ, ಭಲ್ಲೆಯದವರು ಭಲ್ಲೆಯದವರೊಡನೆಯೂ, ಧನುರ್ಧಾರಿಗಳು ಧನುರ್ಧಾರಿ

ಗಳೊಡನೆಯೂ, ಗದಾಧಾರಿಗಳು ಗದಾಯುಧದವರೊಡನೆಯೂ, ಆನೆ ಆನೆಗ
ಳೂ, ಕುದುರೆ ಕುದುರೆಗಳೂ, ಕಾಲಾಳು ಕಾಲಾಳುಗಳೂ, ರಥಿಕರಥಿ
ಕರುಗಳೂ ಒಬ್ಬರಮೇಲೊಬ್ಬರು ಬಿದ್ದು ಅತ್ಯಂತ ಶೌರ್ಯಸಾಹಸಗಳಿಂ
ದ ಯುದ್ಧ ಮಾಡುತ್ತಿದ್ದರು. ರಾಕ್ಷಸರು ದೇವತೆಗಳನ್ನು ಕುರಿತು— ಓ
ಹೋ ! ಈ ಮುಂದೆ ನಿಂತಿರುವ ನೀವಾರು ? ದೇವನಾಯಕರೊ? ಅಹು
ದಹುದು ! ಮಹಾವೀರರು ! ! ನಿಮ್ಮ ಪಟ್ಟಣದ ಸೂಳೆಗೇರಿಯಲ್ಲಿ ನಿಂ
ತು ಹೆಣ್ಗಳ ಮುಂದೆ ಪೌರುಷದ ಪಂಥವನ್ನು ಕೊಚ್ಚಿಕೊಂಡು ಬಂ
ದು ಯುದ್ಧದಲ್ಲಿ ಎದೆಗೊಟ್ಟುನಿಲ್ಲದೆ ಓಡಿಹೋದ ಮೂಗುಮಾರಿಗಳೇ ನೀ
ವಲ್ಲವೆ ? ಎಲೆ ವಿಷ್ಣುವೆ ! ಈ ಬಡಪಾಯಿಗಳನ್ನು ಮುಂದಕ್ಕೆ ಬಿಟ್ಟು ರ
ಣದೇವತೆಗೆ ಬಲಿಯನ್ನಾಗಿ ಅದೇಕೆ ಅರ್ಪಿಸುವೆ ? ಎಂದು ವಿಧವಿಧವಾಗಿ
ಮೂದಲಿಸುತ್ತ ದೇವತೆಗಳನ್ನು ಹೊಡೆದು ಲಯಗೊಳಿಸುತ್ತಿದ್ದರು. ದೇ
ವತೆಗಳು ರಾಕ್ಷಸರನ್ನು ಕುರಿತು— " ಹೆಂಡವನ್ನು ಕುಡಿದು ಬಾಯ್ಗೆ
ಬಂದಂತೆ ನೀವು ಬಗುಳಿಬಿಟ್ಟರೆ ಆಯಿತೆ ? ಯುದ್ಧದಲ್ಲಿ ನಿಂತು ಹೋರಾ
ಡ ವಷ್ಟು ಬಲಶಾಲಿಗಳೇ ನೀವು? ನಿಮ್ಮ ದೊಡ್ಡದೊಡ್ಡ ದೇಹಗಳಸ್ತೆಲ್ಲ ನೀ
ಳ ಭೂತಬೇತಾಳಗಳಿಗೆ ಉಣ್ಣಿಸುತ್ತೇವೆ ನಿಂತುಕೊಳ್ಳಿರಿ " ಎಂದು ಪ್ರ
ತಿಯಾಗಿ ಮೂದಲಿಸಿ, ಕೈಕತ್ತಿಗಳನ್ನು ಜಳಪಿಸಿ, ಮಹಾಪರಾಕ್ರಮದಿಂ
ದ ರಾಕ್ಷಸರ ಮೇಲೆ ಬಿದ್ದು, ಕಡಿದು, ಕೊಲ್ಲುತ್ತ ಬಂದರು. ದೇವತೆಗಳ
ಅಬ್ಬರವನ್ನು ನೋಡಿ ಶುಂಭಾಸುರ ಧೂಮ್ರಾಕ್ಷಾದಿಗಳು ರೋಷವೇರಿ,
ಸೇನೆಯನ್ನು ಹಿಂದು ಮಾಡಿ, ಮುಂದೆ ಬಂದು ನಿಂತರು. ಹೀಗೆ ದಾನವಾ
ಧಿನಾಯಕರು ಮುಂದೆ ಬಂದುದನ್ನು ಕಂಡು ಸುರನಾಯಕರು ತಮ್ಮ ಸೇ
ನೆಯನ್ನು ಹಿಂದಕ್ಕೆ ತಳ್ಳಿ ಮುಂಗಡೆಗೆ ಬಂದು ನಿಂತರು. ಮತ್ತೂ ಮ
ಹಾವೀರನಾವವನ್ನು ಮಾಡಿ, ಪರಬಲವು ಅಚ್ಚರಿಪಡುವಂತೆ ದಿವ್ಯಾಸ್ತ್ರ
ಗಳನ್ನು ಸಂಧಾನ ಮಾಡಿ, ಶತ್ರುಗಳ ಮೇಲೆ ಪ್ರಯೋಗಿಸುತ್ತ ಬಂದರು.
ರಾಕ್ಷಸರುಗಳು ಪ್ರತ್ಯಸ್ತ್ರವನ್ನು ಪ್ರಯೋಗಿಸುತ್ತ ಮಹಾಘೋರಯುದ್ಧವನ್ನು ಮಾಡಿದರು. ಉಭಯಸೇನೆಯೂ ಒಬ್ಬರನ್ನೊಬ್ಬರು ಜರೆ
ಯುತ್ತಲೂ, ಬಾಣವೆಸುಗೆಯು ಸ್ವಲ್ಪ ತಗ್ಗಿದಾಗ ಮೇಲೆ ಬಿದ್ದು ಹಿಂದ
ಕ್ಕೆಟ್ಟುತ್ತಲೂ, ಪ್ರತಿಪಕ್ಷದ ಕೈಬಲವಾದಾಗ ಸ್ವಲ್ಪ ಹಿಂಜರಿಯುತ್ತ

ಲೂ, ತೀಕ್ಷ್ಣತರವಾದ ಬಾಣಗಳಿಂದ ಶತ್ರುಗಳ ತಲೆಯನ್ನು ಚಂಡಾಡಿ ಸಿದಾಗ ಅತ್ಯಂತವಾಗಿ ಆರ್ಭಟಿಸುತ್ತಲೂ ಕಾದಾಡುತ್ತಿದ್ದರು. ಬಾಣ ಗಳ ಛಿಣಿಲೆಂಬ ಧ್ವನಿ, ಸಿಂಜಿನಿಯ ನಾದ, ವೀರಭಟರ ಕೋಲಾಹಲ, ಭೇರಿಯ ಮಹಾಶಬ್ದ, ಆನೆ ಕುದುರೆಗಳ ಉಚ್ಚಸ್ವನ, ಆಯುಧಪ್ರಹಾ ರಗಳ ಕಟುತರಧ್ವನಿ—ಇವುಗಳೆಲ್ಲ ಸೇರಿ ಆಕಾಶವನ್ನು ಶಬ್ದಾಯಮಾನ ವಾಗಿ ಮಾಡಿದ್ದವು. ರಣಾಂಗಣದಲ್ಲಿ ಎತ್ತನೋಡಿದರೂ ಹೆಣಗಳು, ರುಂ ಡಮುಂಡಗಳು, ತೋಳು ತೊಡೆ ಕಾಲು ಕೈ ತುಂಡುಗಳು, ಕರುಳು ಮಾಂಸಗಳ ರಾಶಿಗಳು, ರಕ್ತದ ಕಾಲ್ವೆಗಳು, ಮೂಳೆಗಳ ಬಿಟ್ಟಿಲುಗಳು, ತುಂಬಿದ್ದಿತಲ್ಲದೆ, ಬಂದಂಗೈಯಗಲದ ಬರಿಯ ಭೂಮಿಯು ಎಲ್ಲೂ ಕಾ ಣುತ್ತಿರಲಿಲ್ಲ. ಇಷ್ಟಾಗುವುದರೊಳಗೆ ರಾಕ್ಷಸಸೇನೆಯ ಕಾರ್ಯಾಟೋಪ ದ ಮುಂದೆ ದೇವಸೇನೆಯು ನಿಲ್ಲಲಾರದೆ ಹಿಮ್ಮೆಟ್ಟುತ್ತ ಬಂದಿತು. ಆದ ನ್ನು ವಿಷ್ಣುವು ಕಂಡು,—ಇವರು ಅಮರಾವತಿಯ ಕೋಟೆಯೊಳಗಿದ್ದು ಕೊಂಡೂ ರಾಕ್ಷಸರೊಡನೆ ಕಾದಾಡಲಾರದೆ ನಡುರಾತ್ರಿಯಲ್ಲಿ ಅಂಜಿ ಓ ಡಿಬಂದವರಲ್ಲವೆ ? ಇಂಥವರು ಬೈಲಿನಲ್ಲಿ ನಿಂತು ಎದೆಗೊಟ್ಟು ಕಾದಾಡು ವುದುಂಟೆ ? ಪೀಡಿಗಳು ಬೀಡಿಬಿರುವುದನ್ನು ನೋಡಿರಿ ಎಂದು ಹೀಯಾ ಳಿಸಿ, ತನ್ನ ಪುಣಿರಥವನ್ನು ರಾಕ್ಷಸಸೇನೆಗೆದಿರಾಗಿ ನಡಸಿದನು. ಹೀಗೆ ಮಹಾವಿಷ್ಣುವೇ ಕೋಪದಿಂದ ಯುದ್ಧಕ್ಕೆ ಬಂದು ನಿಲ್ಲಲು, ಚೂಣಿಯ ಲ್ಲಿದ್ದ ದೈತ್ಯನಾಯಕರೆಲ್ಲರೂ ಅಂಜಿ, ಜಲಂಧರಾಸುರನ ಮರೆಹೊಕ್ಕು ಕೊಂಡರು. ಅದನ್ನು ಕಂಡು ಜಲಂಧರನು—ಓಹೋ ! ನಮ್ಮೊಡನೆ ಸೆ ಣಸುವುದಕ್ಕೆ ವಿಷ್ಣುವೇ ಬಂದನೊ ? ಒಳ್ಳೀದು, ಎಂದು ಹೂಂಕರಿಸಿ, ತನ್ನ ಧನುಸ್ಸಿನ ಸಿಂಜಿನಿಯನ್ನು ಮಿಡಿದು, ಶಬ್ದ ಮಾಡಿ, ರಥವನ್ನು ವಿಷ್ಣು ವಿಗಿದಿರಾಗಿ ಬಿಡಿಸಿದನು. ಆಗ ವಿಷ್ಣುವು ಧನುಸ್ಸನ್ನು ಸೆಳೆದು ದನಿ ಮಾ ಡಿ, "ಎಲೆ ದಾನವನೆ ! ಇದುವರೆಗೆ ನನ್ನೊಡನೆ ಯುದ್ಧಕ್ಕೆ ನಿಂತು ಹಾ ನಿಯನ್ನು ಪಡೆಯದೆ ಹೋದ ದೈತ್ಯರೊಬ್ಬರೂ ಪ್ರಪಂಚದಲ್ಲಿಲ್ಲ; ಅದರಿಂದ ಲೇ ನನಗೆ ದನುಜಾರಿಯೆಂಬ ಹೆಸರು ಬಂದಿರುವುದು; ಇದನ್ನು ತಿಳಿದಿದ್ದ ರೂ ನೀನು ನನ್ನಮೇಲೆ ಯುದ್ಧಕ್ಕೆ ನಿಂತಿರುವುದು ಅಜ್ಞಾನವಲ್ಲವೆ ? ಚಿಂ ತೆಯಿಲ್ಲ; ನೀನು ಯಾರು ? ನಿನ್ನ ಪೆಸರೇನು ? ಸ್ಥಲವಾವುದು ? ನಿಜ

ವಾಗಿ ಹೇಳು, ಮರೆಮಾಜಬೇಡ " ಎಂದು ಕೇಳಿದನು. ಆಗ ದಾನವೇಂ
ದ್ರನು ಹುಸಿನಗೆ ನಕ್ಕು, " ನಿನಗೆ ದಾನವಾರಿಯೆಂಬ ಹೆಸರಿರುವುದೆಂಬು
ದನ್ನು ಕೇಳಿ ಅದನ್ನು ಅಸಾರ್ಥಕಪಡಿಸಿ ತಪ್ಪಿಸುವುದಕ್ಕಾಗಿಯೇ ನಾನು
ಬಂದಿರುವೆನು; ನನ್ನ ಹೆಸರು ಜಲಂಧರ; ನನ್ನ ಪಟ್ಟಣವು ಜಾಲಂಧರವು
ದೇವೇಂದ್ರನನ್ನು ನೀನು ಮರೆಹಾಕಿಕೊಂಡಿರುವ ರೋಗಕ್ಕಾಗಿ ತಕ್ಕ ಔ
ಷಧವಂ ಪ್ರಯೋಗಿಸುವುದನ್ನು ನಾನುಬಲ್ಲೆನು; ನೋಡು" ಎಂದು ಹೇಳಿ,
ಒಂದು ಬಾರಿಗೆ ೧೧ ಬಾಣಗಳನ್ನು ಜೋಡಿಸಿ, ವಿಷ್ಣುವಿನಮೇಲೆ ಪ್ರ
ಯೋಗಿಸಿದನು. ಅವನ್ನು ಹರಿಯು ಪ್ರತಿಬಾಣದಿಂದ ಮಧ್ಯದಲ್ಲೇ ಕಡಿ
ದು_ " ಆಹಾ ! ಬಡದೇವತೆಗಳ ಕೋಟೆಯನ್ನು ಹಿಡಿದುಕೊಂಡು ಅ
ವರನ್ನು ಓಡಿಸಿಬಿಟ್ಟವಾತ್ರದಿಂದಲೇ ನೀನು ಜಗಕ್ಕೆಲ್ಲಾ ದೊಡ್ಡವನೆ ?
ಬಡಬಾಗ್ನಿಯಮೇಲೆ ಸಮುದ್ರವು ಉಕ್ಕಿಬಂದು ಬಿದ್ದಂತೆ ನೀನು ನನ್ನ
ಮೇಲೆ ಬಿದ್ದಿರುವೆ. ಇದು ನಿನಗೆ ಯೋಗ್ಯವಲ್ಲ; ಈಗಲಾ ನನ್ನ ಪಿತ
ವಾದವನ್ನು ಕೇಳಿ ನೀನು ಹಿಂದಿರುಗಿ ಹೋಗುವೆಯಾದರೆ ತೊಟ್ಟಿರುವ
ಬಾಣವನ್ನು ನಾನು ನಿಲ್ಲಿಸಿಬಿಡುವೆನು. ಹಾಗಲ್ಲದಪಕ್ಷದಲ್ಲಿ ರಕ್ತದೋ
ಕುಳಿಗೆ ಸಿದ್ಧನಾಗು" ಎಂದು ಹೇಳಿ, ೫ ಬಾಣಗಳನ್ನು ದೈತ್ಯನಮೇಲೆ ಪ್ರ
ಯೋಗಿಸಿದನು. ಆ ಯೇಟಿನ ಗಾಯದಿಂದ ದೈತ್ಯನು ಬಾಣಘಾತಕ್ಕೆ ಗುರಿ
ಯಾದ ಹಂದಿಯಂತೆ ನೊಂದು, ಅಬ್ಬರಿಸಿ, ನಿಮಿಷಮಾತ್ರದಲ್ಲಿ ಒಂದೆರ
ಡು ಮೂರು ಸಾಲ್ಕೈದು ಸೂರು ಸಾವಿರ ಲಕ್ಷಾಂತರಬಾಣಗಳನ್ನು ಹರಿ
ಯಮೇಲೆ ಕರೆಮಬಿಟ್ಟನು. ಒಡನೆಯೇ ವಿಷ್ಣುವೂ ಅದಕ್ಕೆ ದ್ವಿಗುಣ
ವಾಗಿ ಬಾಣವರ್ಷವನ್ನು ಕರೆದನು. ಈ ಉಭಯಸುರ ಬಾಣಗಳೂ ಉ
ಭಯಸೈನ್ಯಾಮಂಡಲವನ್ನೆಲ್ಲ ಹೊಕ್ಕು ಸೀಳಿ ಆಕಾಶಮಂಡಲದಲ್ಲೆಲ್ಲ ತುಂ
ಬಿಕೊಂಡುವು. ದಾನವ ಮಾಧವರಿಬ್ಬರೂ ಒಬ್ಬರ ಬಾಣ ಧನುಸ್ಸುಗಳ
ನೊಬ್ಬರು ಕತ್ತರಿಸುತ್ತಲೂ, ಪ್ರತಿಧನುರ್ಬಾಣಗಳನ್ನು ಸ್ವೀಕರಿಸುತ್ತ
ಲೂ, ಓರ್ವರೋರ್ವರ ರಥಗಳನ್ನು ಮುರಿದು ಹೊಸಹೊಸತೇರುಗಳನ್ನು
ಹತ್ತುತ್ತಲೂ, ಪಲ್ಟೇಪಡೆ ಮೂವಲೆಯ ಮಾತುಗಳನ್ನಾಡಿ ಬಾಣಗಳನ್ನೆ
ಚ್ಚು, ಕರಚಾತುರ್ಯವನ್ನು ತೋರಿಸುತ್ತಲೂ, ಪರಸ್ಪರ ಘಾತದಿಂದ
ಮೂರ್ಛೆ ಹೊಂದುತ್ತಲೂ, ಒಬ್ಬರೊಬ್ಬರ ಏಟನ್ನು ಮೆಚ್ಚಿಕೊಳ್ಳುತ್ತ

ಲೂ, ಒಬ್ಬರನ್ನೊಬ್ಬರು ಗಾಯಗೊಳಿಸುತ್ತಲೂ ಅತ್ಯಂತ ವಿಕ್ರಮದಿಂ
ದ ಕಾದಾಡಿದರು. ಆಗ ಹರಿಯು ಬಂದೇಸಮನಾಗಿ ಸೆಣಸುತ್ತಿರುವ
ದೈತ್ಯೇಂದ್ರನನ್ನು ನೋಡಿ, ಬಹು ರೋಷವೇರಿ, ಪ್ರಬಲತರವಾದ ಮ
ಹಾಬಾಣವೊಂದನ್ನು ಚಾಪಕ್ಕೆ ಹೂಡಿ, ಕಿವಿಯವರೆಗೆ ಸೆಳೆದು, ದೈತ್ಯ
ನ ರಥಕ್ಕೆ ಪ್ರಯೋಗಿಸಿ, ಸಿಹ್ಮನಾದವನ್ನು ಮಾಡಿದನು. ಆ ಬಾಣವು
ದೈತ್ಯನನ್ನು ರಥಸಮೇತವಾಗಿ ಆಕಾಶಕ್ಕೆ ಹಾರಿಸಿತು. ಅದರಿಂದವನು
ಕತುಕೋಪವೇರಿ, ಅಂತಹ ಪ್ರತ್ಯಸ್ತ್ರದಿಂದಲೇ ವಿಷ್ಣುವಿನ ರಥವನ್ನು
ಹೊಡೆಯಲು, ಅದೂ ಆಕಾಶಮಂಡಲಕ್ಕೆ ಹಾರಿ, ಗಿರ್ರನೆ ತಿರುಗುತ್ತ
ನಿಂತುಕೊಂಡಿತು. ಇಬ್ಬರೂ ಅಂತರಿಕ್ಷದಲ್ಲೇ ನಿಂತು ಕಾದಾಡಲುಪ
ಕ್ರಮಿಸಿದರು. ಅವರಿಬ್ಬರೂ ಪ್ರಯೋಗಿಸುವ ಬಾಣಾವಳಿಗಳು ಪ್ರಳ
ಯಕಾಲದಲ್ಲಿ ಮೇಘದಿಂದ ಸುರಿಯುವ ದೊಡ್ಡಮಳೆಯಂತೆ ಕಾಣಿಸುತ್ತಿ
ದ್ದುವು. ಹೀಗೆ ಸಮನಾಗಿ ಕಾದಾಡುತ್ತಿದ್ದು ಇಬ್ಬರೂ ಭೂಮಿಗಿಳಿದ
ರು. ಅಲ್ಲೂ ಕೆಲಹೊತ್ತು ಎಚ್ಚಾಡಿದರು. ಒಬ್ಬರೂ ಸೋಲಲಿಲ್ಲ. ಕೊ
ನೆಗೆ ರಾಕ್ಷಸನು ಅತ್ಯಂತ ರೋಷವೇರಿ ಬಂದೇಪ್ರಹಾರದಿಂದ ವಿಷ್ಣುವ
ನ್ನು ಧರೆಗುರುಳಿಸುವೆನೆಂದು ನಿಶ್ಚೈಸಿ, ತನ್ನ ಬತ್ತಳಿಕೆಯಲ್ಲೆಲ್ಲ ಹುಡು
ಕಿ ಅಗ್ನ್ಯಸ್ತ್ರವನ್ನು ತೆಗೆದು, ಧನುಸ್ಸಿನಲ್ಲಿ ಹೂಡಿ, ವಿಷ್ಣುವಿನಮೇಲೆ ಪ್ರ
ಯೋಗಿಸಿದನು. ಅದು ಶಿವನ ಜಣಿಗಣ್ಣಿನಂತೆ ಅಗ್ನಿಯನ್ನು ಕಾರುತ್ತ ಜ
ಗತ್ತನ್ನೆಲ್ಲ ತಲ್ಲಣಗೊಳಿಸಿತು. ಅದರ ಜ್ವಾಲೆಗೂ ಬೇಗೆಗೂ ಉಭಯಸೇ
ನೆಯೂ ನಿಸ್ಸತ್ವಗೊಂಡು ಬೆರಗಾಯಿತು. ಇದನ್ನು ಹರಿಯು ನೋಡಿ
ತನ್ನ ಸೇನೆಗೆ ಅಭಯವನ್ನು ಹೇಳುತ್ತ, ಬತ್ತಳಿಕೆಯಿಂದ ಜಲಾಸ್ತ್ರವ
ನ್ನು ತೆಗೆದು ಹೂಡಿ ಪ್ರಯೋಗಿಸಿದನು.. ಅದು ಪ್ರಳಯಕಾಲದ ಮೇಘ
ಗಳಂತೆ ಜಲವನ್ನು ಕರೆದು ಕ್ಷಣಕಾಲದಲ್ಲಿ ಬೆಂಕಿಯನ್ನಾರಿಸಿ, ರಣಾಂಗ
ಣವನ್ನು ನೀರಿನಲ್ಲಿ ತೇಲಾಡುವಂತೆ ಮಾಡಿತು. ಬಳಿಕ ದಾನವೇಂದ್ರ
ನು ಮತ್ತಷ್ಟು ರೋಷದಿಂದ ಸರ್ಪಾಸ್ತ್ರವನ್ನು ಪ್ರಯೋಗಿಸಿದನು.
ಅದಕ್ಕೆ ಹರಿಯು ಗರುಡಾಸ್ತ್ರವನ್ನು ಬಿಟ್ಟು ಖಂಡಿಸಿದನು. ಜಲಂ
ಧರನು ಗಿರಿಬಾಣವನ್ನು ಬಿಡಲು, ವಿಷ್ಣುವು ವಜ್ರಾಸ್ತ್ರವನ್ನು ಬಿ
ಟ್ಟು ಕಡಿದುಹಾಕಿದನು. ದೈತ್ಯನು ಅಂಧಕಾರಾಸ್ತ್ರವನ್ನು ಬಿಡಲು, ಮಾ

ಧವನು ಸೂರ್ಯಾಸ್ತ್ರವನ್ನು ಬಿಟ್ಟು ಕತ್ತಲೆಯನ್ನು ತೊಲಗಿಸಿದನು. ವ್ಯೋಮಾಸ್ತ್ರವನ್ನು ರಾಕ್ಷಸನು ಪ್ರಯೋಗಿಸಲು, ಹರಿಯು ಮಾರುತಾಸ್ತ್ರವನ್ನು ಬಿಟ್ಟು ಮೋಡಗಳನ್ನು ಓಡಿಸಿಬಿಟ್ಟನು. ಮತ್ತೂ ತನ್ನ ಬಾಣದಿಂದ ದೈತ್ಯನ ಕೈಬಿಲ್ಲನ್ನೂ ಬಾಣವನ್ನೂ ರಥ ತುರಗ ಸಾರಥಿಗಳನ್ನೂ ಕಡಿದು ಹಾಕಿದನು. ಇದನ್ನು ದೈತ್ಯಾಧಿಪತಿಯು ನೋಡಿ, ಕಡು ಕೋಪವೇರಿ, ಸಿಹ್ಮದಂತೆ ಆರ್ಭಟಿಸಿ, ಭೂಮಿಗಿಳಿದು ಬಂದು ಮಹಾ ರೋಷದಿಂದ ಹರಿಯು ರಥವನ್ನೆತ್ತಿ ಬುಗುರಿಯಂತೆ ತಿರುಗಿಸಿ ಆಕಾಶಕ್ಕೆಸೆದುಬಿಟ್ಟನು. ಸಕಲ ದೇವಾಸುರರೂ ಇದನ್ನು ನೋಡಿ ಆಶ್ಚರ್ಯಪಟ್ಟರು. ಆಗ ವಿಷ್ಣುವು ಭೂಮಿಗಿಳಿದು ಹೊಸದೊಂದು ರಥವನ್ನು ವಿರಿದನು. ಅದನ್ನೂ ದೈತ್ಯನು ಮೊದಲಿನಂತೆ ಇಟ್ಟನು. ಹರಿಯು ಮತ್ತೆ ಹೊಸರಥವನ್ನೇರಲು, ತಿರಿಗಿ ದೈತ್ಯನು ಆಕಾಶಕ್ಕಿಡುತ್ತಿದ್ದನು. ಹೀಗೆ ೨೧ ಬಾರಿ ಆಕಾಶಕ್ಕೆಸೆದನು. ಇದರಿಂದ ಹರಿಗೆ ಅತ್ಯಂತ ಖತಿಯುಂಟಾಯಿತು. ರಥವನ್ನು ಬಿಟ್ಟು ಕೈಯಲ್ಲಿ ಕೌಮೋದಕಿಯೆಂಬ ಗದೆಯನ್ನು ಹಿಡಿದು ದೈತ್ಯನ ಮುಂದೆ ನಿಂತು— "ಇಂತಹ ಯಕ್ಷಿಣೀವಿದ್ಯೆಯನ್ನು ನೀನು ಯುದ್ಧದಲ್ಲಿ ತೋರಿಸದಿದ್ದರೆ ಶೂರರು ಮೆಚ್ಚಿಕೊಳ್ಳುವರೆ? ಇಗೋ ನೋಡು, ಈ ಗದೆಯು ಮಧುಕೈಟಭ ಮೊದಲಾದ ಅನೇಕ ದೈತ್ಯರನ್ನು ಬಡಿದು ಕೊಂದಿರುವುದು. ಇದರ ರುಚಿಯನ್ನು ನೀನು ಯಾವಾಗಳೂ ಕಂಡಿಲ್ಲ; ಎಡಬಲಕ್ಕೆ ಹಾರಿ ತಪ್ಪಿಸಿಕೊಳ್ಳದೆ ಗದೆಯನ್ನು ಹಿಡಿದು ಇದಿರಾಗು, ಇಬ್ಬರ ಶೌರ್ಯವನ್ನೂ ಈ ಮಹಾಸೇನೆಯು ನೋಡಲಿ" ಎಂದು ನುಡಿದನು. ಆಗ ದೈತ್ಯನಾಥನೂ ಗದೆಯನ್ನು ಹಿಡಿದು ಮುಂದಾದನು. ಇಬ್ಬರೂ ಸಜ್ಜಾಗಿ ನಿಂತು, ತಮ್ಮ ತಮ್ಮ ಗದೆಗಳನ್ನು ತಿರುಹುತ್ತ ಬಬ್ಬರಮೇಲೊಬ್ಬರು ಪ್ರಯೋಗಿಸುತ್ತ ಬಂದರು. ಬಬ್ಬರೇಟನ್ನು ಮತ್ತೊಬ್ಬರು ತಪ್ಪಿಸಿಕೊಳ್ಳುತ್ತ, ಆಯವರಿದು ಹೊಡೆಯುತ್ತ, ಚಿಮ್ಮುತ್ತ, ತಿರುಹುತ್ತ, ಹಾರಿ ಬಡಿಯುತ್ತ, ಸ್ವರೂ ಅಚ್ಚರಿಗೊಳ್ಳುವಂತೆ ಹೋರಾಡಿದರು. ಅದರಲ್ಲೂ ದೈತ್ಯನು ಸೋಲದೆ ಹೋಗಲು, ವಿಷ್ಣುವು ಬೇಸರುಗೊಂಡು, ಈ ದುಷ್ಟನನ್ನು ಮಲ್ಲಗಾಳಗದಿಂದಲಾದರೂ ಸೋಲಿಸಬೇಕೆಂದು ಯೋಚಿಸಿ, ಎಲೆ ಖಳನೆ, ಮಲ್ಲಯುದ್ಧಕ್ಕೆ ನಿಲ್ಲು; ಎಂದು ಹೇಳಲು,

ದೈತ್ಯನು "ಆಗಲಿ" ಎಂದು ನಕ್ಕು, ಗದೆಯನ್ನು ಬಿಸುಟು, ತೋಳ್ತೊಡೆಗಳನ್ನು ತಟ್ಟಿ ಮುಷ್ಟಿಯುದ್ಧಕ್ಕೆ ಸಿದ್ಧನಾದನು. ಇಬ್ಬರೂ ಕೈ ಕೈ ಕೂಡಿಸಲು, ಎರಡಾನೆಗಳು ಸುಂಡಿಲನ್ನು ಸೇರಿಸಿ ಹೆಣಗಾಡುವಂತೆ ತೋರಿದರು. ಈರ್ವರೂ ಕತ್ತು ಕೌಂಕುಳು ನಡು ಬೆನ್ನು ತೊಡೆ ಪಕ್ಕ ಮೊದಲಾದುವುಗಳನ್ನು ಪಟ್ಟಾಗಿ ಹಿಡಿದು ನುಲಿದು ಕೆಡಹಿ ಉರುಳಿ ಹೆಣಗಾಡುತ್ತಿದ್ದರು. ಒಂದೊಂದುಬಾರಿ ಹರಿಯು ಪಟ್ಟಗೆ ಸಿಕ್ಕಿಹೋಗಿ ಬಿದ್ದುಕೊಳ್ಳುವಂತೆ ತೋರುತ್ತಿದ್ದು, ಅಷ್ಟರಲ್ಲಿ ನುಣುಚಿಕೊಂಡು ದೈತ್ಯನನ್ನು ಕೆಡಹಿ ಸೋಲಿಸುವ ಸ್ಥಿತಿಗೆ ತರುವನು. ದೈತ್ಯನು ಬಿಡಿಸಿಕೊಂಡೆದ್ದು ಹರಿಯನ್ನು ತಬ್ಬಿ ಎತ್ತಿ ಕೆಳಕ್ಕೆ ಕುಕ್ಕುವನು. ಹಾಗೆಯೇ ಹರಿಯು ರಕ್ಕಸನ ನಡುವಿಗ ನುಗ್ಗಿ ಎತ್ತಿಹಾಕಿ ಮುಷ್ಟಿಘಾತವನ್ನು ಮಾಡಿ ಬೊಬ್ಬಿರಿಯುತ್ತಿದ್ದನು. ಹೀಗೆ ಸೆಣಸುತ್ತಿರುವಲ್ಲಿ ದೈತ್ಯನು ರೋಷದಿಂದ ಅತ್ಯಂತಾವೇಶಗೊಂಡು ತನ್ನ ಬಾಹುಯುಗ್ಮದಿಂದ ವಿಷ್ಣುವನ್ನು ಬಲವಾಗಿ ತಬ್ಬಿ ಕೊಸರಾಡಿ ಗಟಗಟನೆ ತಿರುಗಿಸಿ ಬೀಸಿ ಅಪ್ಪಳಿಸಿಬಿಟ್ಟನು. ಆ ರಭಸದೇಟಿನಿಂದ ಹರಿಯು ನಿಶ್ಚೇತನನಾಗಿ ಧರೆಯಮೇಲೆ ಉರುಳಿಕೊಂಡನು. ರಕ್ಕಸನನ್ನು ಗೆಲ್ಲುವ ಆಸೆಯು ಅಲ್ಲಿಗೆ ಬಿಟ್ಟುಹೋಯಿತು. ಇಂದ್ರಾದಿದೇವತೆಗಳೆಲ್ಲರೂ ತಲ್ಲಣಿಸಿದರು. ಆಗ ವಿಷ್ಣುವು ಒಂದುಪಾಯವನ್ನು ಯೋಚಿಸಿ, ಮುಗುಳ್ನಗೆ ನಕ್ಕು, ವಿನಯದಿಂದ ದೈತ್ಯೇಂದ್ರನನ್ನು ಕುರಿತು— "ಎಲೆ ದೈತ್ಯನಾಯಕನೇ! ನಿನ್ನ ಪರಾಕ್ರಮಕ್ಕೆ ಮೆಚ್ಚಿದೆನು; ನಿನ್ನ ಇಷ್ಟಾರ್ಥವೇನಿರುವುದು ಹೇಳು, ಕೊಡುತ್ತೇನೆ" ಎಂದನು. ಅದಕ್ಕೆ ದಾನವೇಂದ್ರನು ನಕ್ಕು— "ಕಪಟದಿಂದ ನೀನು ಮಧುಕೈಟಭಾದಿರಾಕ್ಷಸರನ್ನು ಗೆದ್ದಹಾಗಲ್ಲ; ಈಗ ನೀನು ಮೆಚ್ಚಿಕೊಂಡರೆ ಒಳ್ಳೆಯದಾಯಿತು. ನೀನು ಪತ್ನೀಸಮೇತನಾಗಿ ಬಂದು ನನ್ನ ಮನೆಯಲ್ಲಿ ಸೆರೆಯಾಳಾಗಿರಬೇಕು" ಎಂದು ಹೇಳಿದನು ಈ ದೈತ್ಯನು ಹಾಗೆ ಮಾಡದೆ ಬಿಡುವನಲ್ಲನೆಂದು ಹರಿಯು ನಿರ್ಧರಿಸಿ, ಲಕ್ಷ್ಮಿಯನ್ನು ಕರೆದುಕೊಂಡು ಇಬ್ಬರೂ ಜಲಂಧರನ ರಥದಲ್ಲೇ ಕುಳಿತು ಹೊರಟರು. ಇಂದ್ರಾದಿದಿಕ್ಪಾಲಕರೆಲ್ಲರನ್ನೂ ಒತ್ತೆ ಹೊರಡಿಸಿಕೊಂಡು ಜಲಂಧರಾಸುರನು ಸಕಲ ಸೇನೆಯೊಡನೆ ವಿಜೃಂಭಣೆಯಿಂದ ತನ್ನ ಪಟ್ಟಣಕ್ಕೆ ತಿರು

ಗಿದನು. ಸಕಲಾಲಂಕಾರಪೂರ್ಣವಾಗಿದ್ದ ಪಟ್ಟಣವನ್ನು ಸಂತೋಷದಿಂದ ಪ್ರವೇಶಿಸಿ, ಲಕ್ಷ್ಮೀನಾರಾಯಣರನ್ನು ಒಂದು ಅರಮನೆಯಲ್ಲಿರಿಸಿ, ಅವರಮೇಲೆ ನೂರು ಕೋಟಿ ರಾಕ್ಷಸರ ಕಾವಲನ್ನಿಟ್ಟು, ಬ್ರಹ್ಮೇಂದ್ರಾದಿ ದೇವನಾಯಕರನ್ನೆಲ್ಲ ಕರೆದು, ನೀವುಗಳು ನನ್ನ ಸೇವೆಯನ್ನು ಮಾಡಿಕೊಂಡಿರಿ ಎಂದು ಆಜ್ಞಾಪಿಸಲು, ಅವರು ಹಾಗೆಯೇ ಆಗಲೆಂದೊಪ್ಪಿ ನಡಸುತ್ತಿದ್ದರು. ಪ್ರತಿದಿನವೂ ಬ್ರಹ್ಮನು ಜಲಂಧರನಿಗೆ ಮಂತ್ರಾಕ್ಷತೆಯನ್ನು ಕೊಟ್ಟು ಆಶೀರ್ವದಿಸುವನು. ದೇವೇಂದ್ರಾದಿದಿಕ್ಪಾಲಕರು ರಾಕ್ಷಸನ ಇಷ್ಟಾನುಸಾರವಾಗಿ ತಮತಮಗೆ ಕೊಟ್ಟಿದ್ದ ಊಳಿಗವನ್ನು ಮಾಡಿಕೊಂಡಿದ್ದರು. ಜಗತ್ತಿನಲ್ಲಿ ಶಿವನ ಕೈಲಾಸವೊಂದು ಹೊರತು ಉಳಿದ ಭೂಸ್ವರ್ಗಲೋಕವೆಲ್ಲವೂ ಜಲಂಧರನ ವಶವಾಗಿದ್ದಿತು. ಈ ರೀತಿಯಾದ ಆಧಿಪತ್ಯದಿಂದ ಸಕಲ ಸಂಪತ್ತನ್ನೂ ಪಡೆದು ಜಲಂಧರನು ಮೂರಬ್ಬಿದ ವರ್ಷಗಳ ವರೆಗೆ ನಿಶ್ಚಿಂತನಾಗಿ ಆಳಿಕೊಂಡಿರುತ್ತಿದ್ದನು. ಹೀಗಿರುವಲ್ಲಿ ದೇವನಾಯಕರೆಲ್ಲರೂ ತಮ್ಮ ಸ್ಥಿತಿಯನ್ನು ಕುರಿತು ಅತಿಶಯವಾಗಿ ಚಿಂತಿಸಿ ಕೊರಗುತ್ತ, ಬಂದು ದಿನ ವಿಷ್ಣು ಬ್ರಹ್ಮರ ಬಳಿಯಲ್ಲಿಗೆ ಗುಪ್ತವಾಗಿ ಹೋಗಿ, ಈ ದೈತ್ಯನ ಸಂಪತ್ತಿಗೆ ಕೊನೆಯೂವಾಗ? ನೀವು ನಿರ್ಬಂಧದಿಂದ ಬಿಡುಗಡೆ ಹೊಂದಿ ಸುಖವಾಗಿ ಬಾಳುವುದಾವಾಗ? ಎಂದು ಯೋಚಿಸಿ, ಕೊನೆಗೆ "ಈ ನಮ್ಮ ದುರವಸ್ಥೆಯನ್ನೆಲ್ಲ ಪರಮೇಶ್ವರನೊಡನೆ ಹೇಳಿಕೊಂಡರೆ ಆ ಸ್ವಾಮಿಯು ನಮ್ಮ ಕಷ್ಟವನ್ನು ಪರಿಹರಿಸಬಹುದು. ಆತನಿಂದಲೂ ಸಾಧ್ಯವಲ್ಲದೆ ಹೋದರೆ ನಾವುಗಳು ಹೀಗೆ ಬಾಳುವುದಕ್ಕಿಂತಲೂ ಪ್ರಾಣತ್ಯಾಗ ಮಾಡಿಕೊಳ್ಳುವುದೇ ಲೇಸು" ಎಂದು ನಿಶ್ಚೈಸಿದರು. ಸಮಯವನ್ನು ನಿರೀಕ್ಷಿಸಿಕೊಂಡಿದ್ದು, ಒಂದು ದಿನ ರಾತ್ರಿ ವಿಷ್ಣು ಬ್ರಹ್ಮೇಂದ್ರಾದಿಗಳೆಲ್ಲರೂ ರಹಸ್ಯವಾಗಿ ತಪ್ಪಿಸಿಕೊಂಡು ಹೊರಟು ಕೈಲಾಸವನ್ನು ಸೇರಿದರು. ಸಭೆಯಲ್ಲಿ ಕುಳಿತಿರುವ ಪರಮಶಿವನಿಗೆ ಸರ್ವರೂ ಸಾಷ್ಟಾಂಗವಾಗಿ ನಮಸ್ಕರಿಸಿದರು. ಪರಮೇಶ್ವರನು ಇವರೆಲ್ಲರನ್ನೂ ನೋಡಿ, ಪ್ರೀತಿಯಿಂದ ವಿಷ್ಣುವನ್ನು ಕುರಿತು— ಇದೇನು ಸರ್ವರೂ ಬಂದಿರುವಿರಿ? ಎಂದು ಕೇಳಿದನು. ಅದಕ್ಕೆ ಹರಿಯು— ಸ್ವಾಮಿಯೆ! ನಮ್ಮ ವಿಜ್ಞಾಪನವನ್ನು ಲಾಲಿಸಬೇಕು. ನೀಚನಾದ ಜಲಂಧರನೆಂಬ ದೈ

ತ್ಯನು ಪ್ರಬಲಿಸಿ ನಮ್ಮ ಪಟ್ಟಣಗಳನ್ನೆಲ್ಲ ಹಿಡಿದು ಸುಲಿದು ನಮ್ಮನ್ನು ತನ್ನ ಮನೆಯ ಸೆರೆಯಲ್ಲಿಟ್ಟುಕೊಂಡಿದ್ದನು; ಅಲ್ಲಿಂದ ತಪ್ಪಿಸಿಕೊಂಡು ಈಗ ತಮ್ಮ ಬಳಿಗೆ ಬಂದಿರುವೆವು; ನಮ್ಮನ್ನುದ್ಧರಿಸಬೇಕು, ಎಂದು ಬೇಡಿಕೊಂಡನು. ಶಿವನಾದರೊ— ಆ ದೂರ್ತನನ್ನು ನಾನು ಸಹ್ಯರಿಸುವೆನು, ಹೆದರಬೇಡಿರಿ. ಎಂದು ನಂಬುಗೆಯನ್ನು ಕೊಟ್ಟು, ಸಮಾಧಾನಪಡಿಸಿದನೆಂದು ಚೆನ್ನಬಸವೇಶನು ಸಿದ್ಧರಾಮೇಶನಿಗೆ ನಿರೂಪಿಸಿದನೆಂಬಿಲ್ಲಿಗೆ

ಹದಿನಾಲ್ಕನೆ ಅಧ್ಯಾಯವು ಸಂಪೂರ್ಣವು.



೧೫ನೆ ಅಧ್ಯಾಯವು.



ಜಲಂಧರಸಂಹಾರ.

ಇತ್ತ ಜಲಂಧರಾಸುರನು ಮರುದಿವಸ ಒಡ್ಡೋಲಗದಲ್ಲಿ ಕುಳಿತು ಸೆರೆಯಲ್ಲಿದ್ದ ದೇವತೆಗಳೊಬ್ಬರೂ ಇಲ್ಲನೆಂಬ ವಾರ್ತೆಯನ್ನು ಕೇಳಿ, ಅತ್ಯಂತ ರೋಷಾಕ್ರಾಂತನಾಗಿ, ಸತ್ಯಲೋಕ ವೈಕುಂಠಲೋಕಗಳಿಗೆ ಚಾರರನ್ನು ಕಳುಹಿ, ಅಲ್ಲಿಯೂ ಒಬ್ಬರೂ ಇಲ್ಲನೆಂಬ ವರ್ತಮಾನವನ್ನು ತಿಳಿದು, ಸಿಡಿದುಬಿದ್ದೆದ್ದು, ಸ್ವರ್ಗಮರ್ತ್ಯಪಾತಾಳಗಳಲ್ಲಿ ನನ್ನಪ್ಪಣೆಯು ತಡೆಯಿಲ್ಲದೆ ನಡೆಯುತ್ತಿರುವುದು, ಮೋಸದಿಂದ ತಪ್ಪಿಸಿಕೊಂಡು ಹೋಗಿರುವ ಈ ದೇವತೆಗಳನ್ನು ಮರೆಹಾಕಿಕೊಳ್ಳುವ ಸಮರ್ಥರಾರನ್ನೂ ನಾನು ಕಾಣೆ, ಹೀಗಿರುವಲ್ಲಿ ಇವರೆಲ್ಲಿ ಹೋದರು ? ಎಂದು ಕೇಳಲು, ಶುಕ್ರಾಚಾರ್ಯನು— ಎಲೆ ಹುಚ್ಚಾ ! ಸಕಲ ಬ್ರಹ್ಮಾಂಡವನ್ನೂ ಹೊಟ್ಟೆಯಲ್ಲಿಟ್ಟುಕೊಂಡು ರಕ್ಷಿಸುವ ಜಗದೇಕನಾಯಕನಾದ ಪರಮೇಶ್ವರನನ್ನು ದೇವತೆಗಳೆಲ್ಲರೂ ಮರೆಹೊಕ್ಕಿರುವರು ಎಂದು ಹೇಳಿದನು. ಜಲಂಧರನು ಕೇಳಿ, ಕಡುಕೋಪವೇರಿ, ಆಹಾ ! ನನ್ನನ್ನು ಬಿಟ್ಟು ಲೋಕಕ್ಕೆಲ್ಲ ಅಧಿಪತಿಯಾದವನು ಬೇರೊಬ್ಬನಿರುವನೆಂಬ ಅಚ್ಚರಿಯು ಮಾ

ತನ್ನು ಈಗ ಕೇಳಿದೆ! ಜಗತ್ತಿನಲ್ಲಿ ಅಂಥವನು ಯಾರೂ ಇಲ್ಲವೆಂದು ತಿಳಿದು ಯದ್ಧಪ್ರಸಕ್ತಿಯನ್ನು ಬಿಟ್ಟುಬಿಟ್ಟಿದ್ದೆ; ಹಾಗಾದರೆ ನನ್ನ ಹಸ್ತ್ಯಶ್ವರಥಪದಾತಿಸೈನ್ಯವೆಲ್ಲ ಯುದ್ಧಕ್ಕೆ ಸಿದ್ಧವಾಗಲಿ, ಎಂದು ಅಪ್ಪಣೆಮಾಡಿದನು. ಶಿವದ್ವೇಷವು ಕೆಟ್ಟುದೆಂದು ಶುಕ್ರಾಚಾರ್ಯನು ಬೋಧಿಸಿದರೂ ಖಳರಾಕ್ಷಸೇಂದ್ರನು ಕೇಳಿಕೆಹೋದನು. ಸಕಲದಾನವಸೇನೆಯೂ ಸಿದ್ಧವಾಗಿ ಕೈಲಾಸಪರ್ವತದ ಕಡೆಗೆ ಸಾಗಿತು. ಅಲ್ಲಿನ ಜನವೆಲ್ಲವೂ ಬೆದರಿ ಬೆನ್ದೆದ್ದು ಶಿವಪುರಕ್ಕೆ ಓಡಿತು. ಪರಶಿವನು ಅವರಿಂದ ರಾಕ್ಷಸನ ಸೈನ್ಯದ ಬರುವಿಕೆಯನ್ನು ಕೇಳಿ, ನಕ್ಕು, ನಂದೀಶನನ್ನು ಕುರಿತು—ಜಲಂಧರಾಸುರನೊಡನೆ ಸೆಣಸುವ ಸಂಧಿಯು ಬಿದ್ದಿದೆ, ಸೈನ್ಯವು ಸಿದ್ಧವಾಗಲಿ, ಎಂದು ಅಪ್ಪಣೆ ಮಾಡಿದನು. ಅದರಂತೆಯೇ ನಂದಿನಾಥನು ಡಂಗುರವನ್ನು ಹೊಡೆಯಿಸಿದನು. ಶಿವನು ಥಟ್ಟನೆ ಸರ್ವಸನ್ನಾಹದಿಂದ ಕೂಡಿ ವೃಷಭನನ್ನೇರಿದನು. ಎಡಬಲದಲ್ಲಿ ಚತುರ್ವೇದಪುರುಷರು ಉದ್ಘೋಷಿಸುತ್ತಿದ್ದರು. ಹರಿಬ್ರಹ್ಮರು ಪಕ್ಕಗಳಲ್ಲಿ ತಮ್ಮ ತಮ್ಮ ವಾಹನವನ್ನೇರಿ ಹೊರಟರು. ಸಕಲ ಗಣಸ್ತೋಮವೂ ಪಯಣಗೊಂಡಿತು. ಮಹಾಧ್ವನಿಯು ದಿಕ್ತಟವನ್ನೆಲ್ಲ ತುಂಬಿತು. ಮಹಾದಿಗ್ಗಜಗಳಂತೆ ಪರ್ವತಾಕಾರದ ಆನೆಗಳು ಲೆಕ್ಕವಿಲ್ಲದಷ್ಟು ಹೊರಟುವು. ಸುವರ್ಣದ ಕೆಲಸದ ಕೋಗಿಲೆರನ್ನು ಹಾಕಿರುವ ಕುದುರೆಗಳು ಮಿತಿಯಿಲ್ಲದಷ್ಟು ನಡೆದುವು. ರನ್ನದ ತೇರುಗಳ ಸಾಲಿಗೆ ಗಣನೆಯೇ ಇಲ್ಲವಾಯಿತು. ಶೂರರಾದ ಕಾಲಾಳುಗಳು ಪಾರವೇ ಇಲ್ಲದಂತೆ ತೆರಳುತ್ತಿದ್ದರು. ಆ ಸೇನಾಮಧ್ಯದಲ್ಲಿ ಬೀಸುವ ಚಾಮರಗಳು, ಕಂಪಿಸುವ ಧ್ವಜಪಟಗಳು, ಕೊಭಿಸುವ ಛತ್ರಗಳು, ವಿರುಗುವ ಆಯುಧಗಳು, ಕಿವುಡುಗೊಳಿಸುವ ವಾದ್ಯಗಳು, ಎತ್ತೆತ್ತಲೂ ಕಾಣುತ್ತಿದ್ದುವು. ಆ ಸೇನೆಯ ಭಾರಕ್ಕೆ ಆದಿಕೂರ್ಮನೂ ದಿಗ್ಗಜಗಳೂ ಕುಗ್ಗಿಹೋದುವು. ಅವರ ಧೂಳಿಯು ಧ್ರುವಲೋಕಪರ್ಯಂತವೂ ವ್ಯಾಪಿಸಿ ಮಬ್ಬನ್ನುಂಟುಮಾಡಿತು. ಇಷ್ಟೆಂದು ಅಪಾರವಾದ ಸೇನೆಯು ಕೈಲಾಸಪರ್ವತದಿಂದ ಹೊರಡಲು, ಅದಕ್ಕೆದಿರಾಗಿ ಜಲಂಧರಾಸುರನ ಮಹಾಸೈನ್ಯವು ನುಗ್ಗುತ್ತಿದ್ದಿತು. ಮುಂಗಡೆಯವರು ಪರಸ್ಪರವಾಗಿ ಮಾರ್ಬಲವನ್ನು ನೋಡಿ ವೀರನಾವನನ್ನು ಮಾತಕತೊಡಗಿದರು. ಮೊದಮೊ

ದಲು ಪರಸ್ಪರವಾಗಿ ಮನಸ್ಸೂ ನೋಟವೂ ಕಾದಾಡ ಹತ್ತಿದುವು. ಬಳಿಕ ಕೈಕತ್ತಿಗಳು ಹೊಳಹೊಳೆದು ಹೋರಾಡಲಾರಂಭಿಸಿದುವು ರೋಷದಿಂದ ಉಭಯಪಕ್ಷದ ಮುಂದಾಳುಗಳಲ್ಲೂ ಪರವಶತೆಯುಂಟಾಯಿತು. ಆನೆ ಆನೆಗಳೂ ಕುದುರೆ ಕುದುರೆಗಳೂ ರಥ ರಥಗಳೂ ಪ್ರತಿಭಟಿಸಿ ಕಾದಾಡನಿಂತುವು. ಆನೆಗಳ ಬೃಂಹಿತವೂ, ಕುದುರೆಗಳ ಹೇಷಾಧ್ವನಿಯೂ, ರಥಗಳ ಚೀತ್ಕಾರವೂ, ಕಾಲಾಳುಗಳ ಭುಜಾಸ್ಫಾಲನ ವೀರನಾದಗಳೂ, ಸಿಂಜಿನಿಯ ಠಂಕಾರವೂ, ಖಡ್ಗಗಳ ಝಣತ್ಕಾರವೂ, ಕಾಳಿಗಳ ಛೀಂಕಾರವೂ, ಭೇರಿಗಳ ಭಾಂಕಾರವೂ, ಒಡನೆ ಕೂಡಿ, ರಣಾಂಗಣವನ್ನು ಶಬ್ದಾಯಮಾನವಾಗಿ ಮಾಡಿದ್ದುವು. ವಾದ್ಯಧ್ವನಿಯು ಪ್ರತಿಕ್ಷಣದಲ್ಲಿಯೂ ಸೈನಿಕರನ್ನು ಉತ್ಸಾಹಗೊಳಿಸಿತು. ಕಾಲಾಳ್ಗಳು ಒಬ್ಬರನ್ನೊಬ್ಬರು ಹೆಣಗಿ ಎಡಗೈಯಲ್ಲಿ ಮುಂದಲೆಯನ್ನು ಹಿಡಿದು ಜಡಿದು ಬಗ್ಗಿಸಿ ಬಲಗೈಯ ಕತ್ತಿಯಿಂದ ಕತ್ತರಿಸುತ್ತಲೂ, ನಡುವಿಗೆ ನುಗ್ಗಿ ತಬ್ಬಿ ಸುತ್ತಿ ಕೆಡಹಿ ಮೇಲೆ ಕುಳಿತು ಸುರಗಿಯಿಂದ ಹೊಟ್ಟೆಯನ್ನು ಬಗಿಯುತ್ತಿಲೂ, ಮೇಲೆಬೀಳುವ ಪ್ರಹಾರಕ್ಕೆ ಗುರಾಣಿಯನ್ನೊಡ್ಡಿ ತಪ್ಪಿಸಿಕೊಳ್ಳುತ್ತಲೂ, ಕಾಲ್ಗೆಸಿಕ್ಕಿದ ಹೆಣಗಳನ್ನು ಓರೆನೂಕಿ ಬಲವಾಗಿ ನಿಂತು ಪ್ರತಿಭಟನನ್ನು ಮೂದಲಿಸುತ್ತಲೂ, ಪುಗ್ಗುಲಿಗೆ ಬಂದವನನ್ನು ಹಿಡಿದು ಕೌಂಕುಳಲ್ಲಿ ಇರುಕುತ್ತಲೂ, ಕೈಗೆ ಸಿಲ್ಕದವನನ್ನು ಬಾಣದಿಂದ ಹೊಡೆದು ಕೆಡಹುತ್ತಲೂ. ಕ್ಷಣಕಾಲದಲ್ಲಿ ವೀರಾವೇಶದಿಂದ ಬುಗುರಿಯಂತೆ ತಿರುಗುತ್ತಲೂ, ಕೋಪಾವೇಶದಿಂದ ತರಿದಾಡುತ್ತಲೂ. ಯುದ್ಧಾಂಗಣವನ್ನು ರುಂಡಮುಂಡ ರಕ್ತಮಾಂಸಾದಿಗಳಿಂದ ತುಂಬಿಸಿಬಿಟ್ಟರು. ಹೀಗೆ ಕಾಲಾಳ್ಗಳು ಕಾದಾಡಿ ನಷ್ಟವಾಗಲು, ಹಿಂದಣ ಸೈನ್ಯವು ಮುಂದೆ ಸಾಗಿ, ಆನೆಗಳು ಆನೆಗಳಮೇಲೂ, ಕುದುರೆಗಳು ಕುದುರೆಗಳಮೇಲೂ, ತೇರುಗಳು ತೇರುಗಳಮೇಲೂ, ಭಟರು ಭಟರಮೇಲೂ ಬಿದ್ದು ಹೋರಾಡಲಾರಂಭಿಸಿದರು. ಒಳಿಕ ಮಹಾತುಮುಲಯುದ್ಧವೆಸಗಿ ಅತ್ಯಂತ ಭೀಕರವೂ ಆಶ್ಚರ್ಯವೂ ಆಯಿತು. ಕ್ಷಣಮಾತ್ರದಲ್ಲಿ ಸಕಲ ಸೇನೆಯೂ ರಕ್ತವೃಷ್ಟಿಯಿಂದ ನನೆದಿತು. ಕಣ್ಣು ಮುಚ್ಚಿ ತೆರೆಯುವುದರೊಳಗೆ ಲಯವಾಗಹತ್ತಿತು. ಆನೆಗಳು ಕಡಿವೊಡೆದು ಬೆಟ್ಟಗುಡ್ಡಗಳಂತೆ ಒಟ್ಟೊಟ್ಟಲಾಗಿ ಬಿ

ದ್ದುಕೊಂಡುವು. ಕುದುರೆಗಳು ನೀಳ್ಗೊಂಡು ರಣಾಂಗಣವನ್ನೆಲ್ಲ ಮುಚ್ಚಿ ಬಿದ್ದಿದ್ದುವು. ರಥಗಳು ಸುಚ್ಚುನೂರಾಗಿ ದಿಕ್ಕು ದಿಕ್ಕಿಗೆ ಚದರಿಹೋದುವು. ಕಾಲಾಳುಗಳ ದೇಹವು ಕಡಿತುಂಡಾಗಿ ಅಣ್ಣೆಕಲ್ಲಾಡಿದಂತೆ ಚೆಲ್ಲಾಡಿದುವು. ರುಧಿರಮಾಂಸಮಜ್ಜಾದಿಗಳು ರಣಾಂಗಣದಮೇಲೆಲ್ಲ ಹಾಸುಗೆಯನ್ನು ಹಾಸಿದಂತೆ ಹರಡಿ ಭೂಮಿಯನ್ನೇ ಕಾಣದಂತೆ ಮಾಡಿದ್ದುವು. ಹೀಗೆ ಉಭಯಬಲವೂ ನಷ್ಟವಾದುದನ್ನು ಕಂಡು, ರಾಕ್ಷಸಸೈನ್ಯದಲ್ಲಿ ವಾಮನ, ವಿರೂಪಾಕ್ಷ, ಜಂಭ, ಶುಂಭ, ಖಡ್ಗರೋಮ, ವಜ್ರನಾಭ, ಕಾಲನೇಮಿ ಮೊದಲಾದ ದೈತ್ಯೇಂದ್ರರು ತಾವೇ ಯುದ್ಧಕ್ಕೆ ಮುಂದೆ ಬಂದರು. ಇದನ್ನು ಕಂಡು ಹರಿಬ್ರಹ್ಮೇಂದ್ರಾದಿಗಳು ಭಯಪಟ್ಟು ಓಡಿಹೋಗುತ್ತಿದ್ದರು. ಶಿವನು ನೋಡಿ ಅವರನ್ನು ತಡೆದು, ರಾಕ್ಷಸೇಂದ್ರನ ಸೇನೆಯಮೇಲೆ ಬೀಳುವುದಕ್ಕೆ ತನ್ನ ಗಣಸ್ತೋಮಕ್ಕೆ ಅಪ್ಪಣೆಮಾಡಿದನು. ಆಗ ನಂದಿ, ಮಹಾಕಾಳ, ಕಾಲಹರ, ಕಂಕಾಳಧರ, ರೇಣುಕ, ಭೈರವ ಮೊದಲಾದ ಗಣವರರು ಧನುರ್ಬಾಣಗಳನ್ನು ಧರಿಸಿ, ಕಾದಲನುವಾಗಿ ನಿಂತು, ಬಾಣವೃಷ್ಟಿಯನ್ನು ಕರೆದರು. ದೈತ್ಯಸೈನಿಯಲ್ಲಿ ಕ್ಷುದ್ರಸೈನ್ಯವು ಕ್ಷಣಕಾಲ ಕಾದಾಡಿ ಹಿಮ್ಮೆಟ್ಟಿ ಓಡಿತು ಪ್ರಮುಖರಾದ ಶುಂಭ, ಧೂಮ್ರಾಕ್ಷ, ವೃತ್ರಾಸುರಾದಿಗಳು ಮುಂಬೆರಂದು, ಕಾಳೆಯುಗ್ಗೊಟ್ಟರು. ಜಂಭನಿಗೆ ಉಗ್ರನೂ, ಶುಂಭನಿಗೆ ವೃಷಭನೂ, ನಿಶುಂಭನಿಗೆ ಭೈರವನೂ, ವೃತ್ರಾಸುರನಿಗೆ ದಂಡಧರನೂ, ಕುಂಭನಿಗೆ ಕಾಲಹರನೂ, ನಿಕುಂಭನಿಗೆ ಕಂಕಾಳಧರನೂ, ಇದಿರಾಗಿ ಕಾದಾಡಿದರು. ಅವರೆಲ್ಲರಿಗಿಂತಲೂ ಶುಂಭಾಸುರ ನಂದೀಶ್ವರರ ಯುದ್ಧವು ಮಹಾಘೋರವಾಗಿದ್ದಿತು. ಅಬ್ಬರಕ್ಕೆ ಅಬ್ಬರ, ಏಟಿಗೆ ಏಟು, ಗಾಯಕ್ಕೆ ಗಾಯ, ಮೂದಲೆಗೆ ಮೂದಲೆಗಳನ್ನು ಸಮನಾಗಿ ಮಾಡುತ್ತಿದ್ದರು. ಒಬ್ಬರ ಬಾಣವನ್ನೂ ಬಿಲ್ಲನ್ನೂ ಮತ್ತೊಬ್ಬರು ಕತ್ತರಿಸುತ್ತಲೂ, ಅದಕ್ಕೆ ಪ್ರತಿಯಾಗಿ ಹಾಗೆಯೇ ಇದಿರಾಳು ಮಾಡುತ್ತಲೂ, ಒಬ್ಬರೊಬ್ಬರ ರಥಸಾರಥಿಅಶ್ವಾದಿಗಳನ್ನು ಸುಚ್ಚುಗೆಡಹುತ್ತಲೂ, ಅದರಂತೆಯೇ ಪ್ರತಿಕ್ರಿಯು ಮಾಡಿ ಮಾಡಿ ಹೊಸರಥವನ್ನೇರುತ್ತಲೂ ಕಾದಲು, ಲೆಕ್ಕವಿಲ್ಲದಷ್ಟು ಬಿಲ್ಲು ಬಾಣ ಬತ್ತಳಿಕೆ ರಥಾಶ್ವಾದಿಗಳು ಕಡಿತುಂಡಾಗಿ ಬೆಟ್ಟದಂತೆ ಗುಡ್ಡೆಯಾಗಿ

ಬಿದ್ದುವು. ಇವರುಗಳು ಬಿಟ್ಟ ಬಾಣವು ಸಕಲ ದಿಗಂತವನ್ನೂ ತುಂಬಿ ಕೊಂಡುವು.

ಕೊನೆಗೆ ನಂದೀಶನು ಅತ್ಯಂತ ರೋಷಾವೇಶದಿಂದ ಭೀಕರವಾದೊಂದು ಬಾಣವನ್ನು ಕರ್ಣಾಂತವಾಗಿ ಸೆಳೆದು ಬಿಡಲು, ಅದು ಶುಂಭನ ರಥಪತಾಕಛತ್ರಚಾಮರಸಾರಥಿಗಳನ್ನೆಲ್ಲ ನುಚ್ಚು ಮಾಡಿ ರಾಕ್ಷಸನ ದೇಹಕ್ಕೆ ಜ್ವಾಲೆಯನ್ನು ತುಂಬಿಸಿತು. ಅದುವರೆಗೂ ಹಿಮ್ಮೆಟ್ಟದೆ ಕಾದಾಡಿದ ಶುಂಭನಿಗೆ ಮುಂದೆ ನಿಂತು ಕಾದಲು ಅಳವಿಲ್ಲದೆ ಹೋಗಲು, ಅವನು ಪೌರುಷಗೆಟ್ಟು ಪಾಪಕ್ಕೆ ಹೆದರದೆ ರಣಾಂಗಣದಿಂದ ಕಾಲ್ತೆಗೆದು ಹಿಮ್ಮೆಟ್ಟಿ ಓಡಿಹೋದನು. ಇವನಂತೆಯೇ ಕಾದುತ್ತಿದ್ದ ದೈತ್ಯೇಂದ್ರರೆಲ್ಲರೂ ಶೌರ್ಯಗೆಟ್ಟು ಭೀತಿಪಟ್ಟು ಕಾಲಿಗೆ ಬುದ್ಧಿ ಹೇಳಿದರು. ಶಿವಗಣಾಗ್ರಗಣ್ಯರೆಲ್ಲರೂ ಜಯಘೋಷವನ್ನು ಮಾಡುತ್ತ ರಾಕ್ಷಸರನ್ನು ಅಟ್ಟಕೊಂಡು ಕರ್ಣಾಂತವಾಗಿ ಸೆಳೆದು ಬಾಣಗಳನ್ನು ಪ್ರಯೋಗಿಸುತ್ತ ಹೋದರು. ಆಗ ರಾಕ್ಷಸರು ತೋಳಸಿಗೆ ಹೆದರಿ ಓಡುವ ಕುರಿಗಳಂತೆ ದಿಕ್ಕು ದಿಕ್ಕಿಗೆ ಚದರಿ ಓಡಿಹೋಗಿ, ಘೋಳೆಂದು ಕೂಗಿ, ಜಲಂಧರನು ನಿಂತಿದ್ದ ಸ್ಥಾನದಲ್ಲಿ ಹೋಗಿ ಬಿದ್ದರು. ಸೋತು ಕೆಟ್ಟು ಬಂದ ಈ ರಾಕ್ಷಸರ ಅವಸ್ಥೆಯನ್ನು ದೈತ್ಯಾಧಿರಾಜನು ನೋಡಿ, ಕೋಪವೇರಿ, ಹುಬ್ಬುಗಂಟಿಕ್ಕಿ, ಕೆಂಗಣ್ಣಿನಲ್ಲಿ ಕಿಡಿಯನ್ನು ಸುರಿಸುತ್ತ, ತಾನೇ ಯುದ್ಧಕ್ಕೆ ಸನ್ನದ್ಧನಾಗಿ ಹೊರಟನು. ಅವನ ಸನ್ನೆಯಂತೆ ಬಲಶಾಲಿಯಾದ ಮುಖ್ಯಸೇನೆಯು ಅವನ ಸುತ್ತಲೂ ಆವರಿಸಿ ತೆರಳಿತು. ಕರಾಳಕಾಲಸ್ತೋಮದಂತೆ ಕೆರಳಿ ಈ ಉಗ್ರರಾಕ್ಷಸಸೈನ್ಯವು ಬರುವುದನ್ನು ಪರಶಿವನು ಕಂಡು, ನಸುನಗುತ್ತ, ತನ್ನ ಪಿನಾಕವೆಂಬ ಧನುಸ್ಸನ್ನು ಎಡಗೈಗೆ ತೆಗೆದುಕೊಂಡು, ಮುಂದಕ್ಕೆ ಸರಿದು, ಬಂದೇಬಂದು ಬಾಣವನ್ನು ಹೂಡಿ ಲೀಲೆಯಿಂದ ಪ್ರಯೋಗಿಸಿದನು. ಆ ಬಾಣವು ದನುಜೇಂದ್ರನ ಚತುರಂಗಸೈನ್ಯವನ್ನೂ ತರಿದು ಮಲಗಿಸಿತು. ಮುಖ್ಯ ಮುಖ್ಯ ರಾಕ್ಷಸರನ್ನೆಲ್ಲ ಸೀಳಿತು. ಕೆಲವರಿಗೆ ಮೂರ್ಛೆಯನ್ನುಂಟುಮಾಡಿತು. ಕ್ಷಣಕಾಲದಲ್ಲಿ ಇಂದ್ರಜಾಲದಂತೆ ರಾಕ್ಷಸಸೈನ್ಯದಲ್ಲಿ ಅಮಿತವಾದ ಲಯವುಂಟಾಯಿತು. ಹೀಗೆ ತನಗಾದ ಪರಿಭವವನ್ನು ಜಲಂಧರನು ನೋಡಿ ಅತ್ಯಂತ ಕೋಪವೇರಿ, ತನ್ನ ತೇರನ್ನು

ಶಿವನ ಮುಂದುಗಡೆಗೆ ಸರಿಸಿ, ಧನುಸ್ಸನ್ನು ನಾದ ಮಾಡಿ, ಬಾಣವನ್ನು ತೊಡಿಸಿ, ಶಿವನನ್ನು ಕುರಿತು— ನೀನೆಯೊ ಮಹೇಶನೆಂಬುವನು? ಎಂದು ಕೇಳುತ್ತ, ಒಂದರಹಿಂದೊಂದಾಗಿ ಅಗಣಿತವಾದ ಬಾಣಗಳನ್ನು ಅತಿ ಕರ ಚಮತ್ಕಾರದಿಂದ ಪ್ರಯೋಗಿಸುತ್ತ ಒಂದನು. ದಾನವನ ಅದ್ಭುತಕರಚ ಮತ್ಕಾರವನ್ನು ಶಿವನು ಕಂಡು, ಮತ್ತೊಂದು ಬಾಣವನ್ನು ತಾನು ಪ್ರ ಯೋಗಿಸಿ, ಲೀಲಾಮಾತ್ರದಿಂದ ರಾಕ್ಷಸನ ಬಾಣಗಳನ್ನೆಲ್ಲ ನಡುದಾರಿಯ ಲ್ಲೇ ಛೇದಿಸಿ ಅವನನ್ನು ಬೆರಗುಗೊಳಿಸಿದನು. ಜಲಂಧರನಾದರೊ "ಆಹಾ! ಈಗ ನಿನ್ನ ಪೌರುಷವನ್ನು ನೋಡುತ್ತೇನೆ, ಮತ್ತೆ ನನ್ನ ಬಾಣಗಳನ್ನು ಕಡಿ, ನೋಡುವ" ಎಂದು ಹೇಳಿ, ರೋಷಾವೇಶದಿಂದ ಬಾಣಾಸಾರ ವನ್ನು ಕರೆದು, ಸಕಲ ದಿಕ್ಕುಗಳನ್ನೂ ತುಂಬಿಬಿಟ್ಟನು. ಶಿವನು ಪ್ರತಿಬಾ ಣವನ್ನೆಸೆದು ಅವುಗಳನ್ನೆಲ್ಲ ಕತ್ತರಿಸಿದುದಲ್ಲದೆ ಜಲಂಧರನ ಅತುಲಪ್ರತಾ ಪಕ್ಕೆ ಮೆಚ್ಚಿ ತಲೆದೂಗಿ, ಪ್ರಸನ್ನನಾಗಿ, ನಿಜರೂಪವನ್ನು ತೋರಿಸಿದನು. ಆ ಕೂಡಲೇ ದಾನವೇಶ್ವರನು ತನ್ನ ಹೃದಯದಲ್ಲಿ ಧ್ಯಾನಗೋಚರವಾಗಿ ರುವ ಪರವಸ್ತುವೇ ಮುಂದೆ ಒಂದು ನಿಂತಿರುವುದನ್ನು ನೋಡಿದನು. ಬಾ ಣಗಳನ್ನು ಬಿಸುಟು ದೀರ್ಘದಂಡವಾಗಿ ನಮಸ್ಕರಿಸಿ, ಭಯಭಕ್ತಿಯಿಂದ ಪರಶಿವನನ್ನು ಸ್ತುತಿಸಿದನು. ಶಿವನಾದರೊ— ಮಗನೆ! ನಿನ್ನ ಭಕ್ತಿಗೆ ನಾನು ಮೆಚ್ಚಿರುನೆನು, ನಿನ್ನ ಇಷ್ಟಾರ್ಥವೇನು? ಕೇಳೆಂದು ನುಡಿದನು. ಆಗ ದೈತ್ಯನು— "ಸ್ವಾಮಿ! ದುರಹಂಕಾರದಿಂದ ಅಜ್ಞನಾದ ನಾನು ಸಚ್ಚಿದಾನಂದಸ್ವರೂಪನಾದ ನಿನ್ನಮೇಲೆ ಕೈಮಾಡಿದೆನು. ಈ ನನ್ನ ದು ಷ್ಟ ಶರೀರವನ್ನು ನೀನು ಈಗಲೇ ಸೀಳಿ ಬಿಸುಟು ನನ್ನ ಆತ್ಮನನ್ನು ನಿನ್ನೊ ಡನೆ ಐಕ್ಯಮಾಡಿಕೊ" ಎಂದು ಪ್ರಾರ್ಥಿಸಿದನು. ಆಗ ಶಿವನು ಆ ಪ್ರಾ ರ್ಥನೆಯಂತೆಯೇ ಅವನಿಗೆ ಸಾಯುಜ್ಯಪದವಿಯನ್ನೀಯಲು ಕೃಪೆಮಾಡಿ ದನು. ತನ್ನ ಪಾದದ ಹೆಬ್ಬೆರಲಿನಿಂದ ಭೂಮಿಯಮೇಲೆ ಒಂದು ಚಕ್ರ ವನ್ನು ಬರೆದು ಅದನ್ನು ತನ್ನ ಮೂರು ಕಣ್ಣಿನಿಂದಲೂ ನೋಡಿದನು. ಸೂ ರ್ಯಚಂದ್ರರೇ ಆ ಚಕ್ರದ ಹಲ್ಲುಗಳೂ, ಅಗ್ನಿಯೇ ಅದರ ಸುತ್ತುಪಟ್ಟಿ ಯೂ ಆದುವು. ಆ ಚಕ್ರವನ್ನು ಶಿವನು ಎತ್ತಿ ಜಲಂಧರನ ಕೊರಲಿಗೆ ಪ್ರಯೋಗಿಸಲು, ಥಟ್ಟನೆ ಶಿರಸ್ಸನ್ನು ಛೇದಿಸಿತು. ಅವನ ಆತ್ಮವು ಜ್ಯೋ

ತಿರಾಕಾರವಾಗಿ ಶಿವನ ನೇತ್ರದಲ್ಲಿ ಐಕ್ಯಗೊಂಡಿತು. ಕೂಡಲೇ ಅಂತರಿಕ್ಷದಿಂದ ಶಿವನ ಮಕುಟದಮೇಲೆ ಹೂವಿನ ಮಳೆಯು ಸುರಿದಿತು. ದೇವದುಂದುಭಿಯು ಮೊಳಗಿತು. ವಿಷ್ಣುಬ್ರಹ್ಮೇಂದ್ರಾದಿಗಳೆಲ್ಲರೂ ಸಂತೋಷದಿಂದಲೂ ಭಕ್ತಿಯಿಂದಲೂ ಶಿವನ ಪಾದಕ್ಕೆರಗಿ ವೇದಮಂತ್ರದಿಂದ ಕೊಂಡಾಡಿದರು. ಶಿವನು ಆ ಸಕಲ ದೇವತೆಗಳನ್ನೂ ಕರುಣಾದೃಷ್ಟಿಯಿಂದ ನೋಡಿ, ಉಚಿತವಚನಗಳಿಂದ ಎಲ್ಲರನ್ನೂ ಸಮಾಧಾನಗೊಳಿಸಿ, ಅವರವರ ಲೋಕಕ್ಕೆ ಅವರವರನ್ನು ಕಳುಹಿಕೊಟ್ಟನು. ಗಣಸ್ತೋಮವು ದೊಡನೆ ಕೂಡಿ ತಾನು ಕೈಲಾಸಪರ್ವತಕ್ಕೆ ಒಂದು ಅಮಸೆಯಲ್ಲಿ ನಿಜಾನಂದಮಯನಾಗಿದ್ದನೆಂದು ಚೆನ್ನಬಸವೇಶನು ನುಡಿದನಂಬಿಲ್ಲಿಗೆ ಪದಿನೈದನೆ ಅಧ್ಯಾಯವು ಸಂಪೂರ್ಣವು.



೧೬ನೆ ಅಧ್ಯಾಯವು.

ಚಕ್ರಪ್ರದಾನ.



ಜಲಂಧರಾಸುರನನ್ನು ಕೊಂದ ಚಕ್ರವು ಶಿವನ ವಶದಲ್ಲಿರಲು, ಅದನ್ನು ಶಿವನಿಂದ ತಾನು ಪಡೆದುಕೊಳ್ಳಬೇಕೆಂದು ವಿಷ್ಣುವು ಯೋಚಿಸಿ, ಅದಕ್ಕಾಗಿ ಪರಶಿವನನ್ನು ಕುರಿತು ಅತ್ಯಂತ ನಿಷ್ಠೆಯಿಂದ ಉಗ್ರತಪಸ್ಸನ್ನು ಮಾಡಿದನು. ಪರಶಿವನು ಆ ತಪಸ್ಸಿಗೆ ಮೆಚ್ಚಿ ಪ್ರಸನ್ನನಾಗಿ ನಿನ್ನಿಷ್ಟವೇನೆಂದು ಕೇಳಿದನು. ವಿಷ್ಣುವು ಎದ್ದು ಭಕ್ತಿಯಿಂದ ನಮಸ್ಕರಿಸಿ, ಎಲೈ ಸ್ವಾಮಿಯೆ! ನಿನ್ನಪ್ಪಣೆಯಮೇರೆ ನಾನು ಲೋಕಸಂರಕ್ಷಣೋದ್ಯೋಗವನ್ನು ಮಾಡಿಕೊಂಡಿರುತ್ತಿರುವಲ್ಲಿ ಬಬ್ಬೊಬ್ಬ ನೀಚರು ಮಧ್ಯೆ ಮಧ್ಯೆ ಹುಟ್ಟಿ ಲೋಕಕಂಟಕರಾಗಿ ವರ್ತಿಸುವರು. ಅವರನ್ನು ಶಿಕ್ಷಿಸುವುದಕ್ಕಾಗಿ ನನಗೆ ಪ್ರಬಲತರವಾದ ಆಯುಧವೊಂದು ಬೇಕು; ಅದಕ್ಕಾಗಿ ಮಹಾಸ್ವಾಮಿಯ ಬಳಿಯಲ್ಲಿರುವ ಚಕ್ರಾಯುಧವನ್ನು ದಯೆಪಾಲಿಸಬೇಕೆಂದು ಬೇಡಿದನು. ದಯಾಳುವಾದ ಶಿವನು ಅವನಿಷ್ಟಾರ್ಥವನ್ನು ಕೊ

ಟ್ಟು ಸ್ವಸ್ಥಾನಕ್ಕೆ ತೆರಳಿದನು. ಇತ್ತ ವಿಷ್ಣುವು ತನ್ನ ವೈಕುಂಠದಲ್ಲಿ ಸುಖವಾಗಿರುತ್ತ ದುಷ್ಟನಿಗ್ರಹಶಿಷ್ಟರಕ್ಷಣವನ್ನು ಮಾಡಿಕೊಂಡಿರಲು, ಕೆಲವು ಕಾಲಾನಂತರ ಕ್ಷುಪನೆಂಬ ವಿಷ್ಣುಭಕ್ತ ರಾಜನೊಬ್ಬನು ದಧೀಚಿ ಮುನಿಯೊಡನೆ ಪಗಡೆಯಾಡುವುದಕ್ಕೆ ಕುಳಿತನು. ಮುನಿಯು ಪರಮ ಶಿವಭಕ್ತನು. ಇವರಿಬ್ಬರಿಗೂ ನೀನು ಸೋತರೆ ವಿಷ್ಣುಭಕ್ತನಾಗಬೇಕೆಂತಲೂ ನೀನು ಸೋತರೆ ಶಿವಭಕ್ತನಾಗಬೇಕೆಂತಲೂ ಶಪಥವಾಯಿತು. ಕಡೆಗೆ ೪ ಬಾರಿಯೂ ವೈಷ್ಣವರಾಜನೇ ಸೋತನು. ಪಂಥದ ಪ್ರಕಾರ ಶಿವಭಕ್ತನಾಗಬೇಕೆಂದು ಮುನಿಯು ರಾಜನನ್ನು ಕೇಳಿದನು. ಅವನಾ ದರೊ ಧಿಕ್ಕರಿಸಿ, ಚಾರರಿಂದ ಮುನಿಯನ್ನು ಹೊರಕ್ಕೆ ದಬ್ಬಿಸಿದನು. ಆ ಋಷೀಶನು ತಪಸ್ಸನ್ನಾಚರಿಸಿ ಶಿವನಿಂದ ವಜ್ರಕಾಯವನ್ನು ಪಡೆದು ಒಂದು ಕ್ಷುಪರಾಜನನ್ನು ಯುದ್ಧಕ್ಕೆ ಕರೆದನು. ದೊರೆಯು ಚತುರಂಗಸೇನಾಸಮೇತನಾಗಿ ಬಂದನು. ವಜ್ರಾಂಗಿಯಾದ ಮುನಿಯು ಯಾವ ಆಯುಧಪ್ರಹಾರಕ್ಕೂ ಜಗ್ಗದೆ, ದರ್ಭೆಗಳನ್ನು ಅಭಿಮಂತ್ರಿಸಿ ಬಾಣದಂತೆ ಪ್ರಯೋಗಿಸುತ್ತ ದೊರೆಯ ಸೇನೆಯನ್ನೆಲ್ಲ ಲಯಗೊಳಿಸಿದನು. ದೊರೆಯು ದಿಕ್ಕುಗೆಟ್ಟು ಓಡಿ, ತನ್ನ ಉಪಾಸ್ಯದೇವತೆಯಾದ ವಿಷ್ಣುವನ್ನು ಮರೆಹೊಕ್ಕನು. ಹರಿಯು ಭಕ್ತೋದ್ಧಾರಕ್ಕಾಗಿ ಋಷಿಯಮೇಲೆ ಯುದ್ಧಕ್ಕೆ ನಿಲ್ಲಬೇಕಾಯಿತು. ನಾನಾ ಆಯುಧಗಳನ್ನು ಋಷಿಯಮೇಲೆ ಪ್ರಯೋಗಿಸಿದನು. ಯಾವುದೂ ಫಲಕಾರಿಯಾಗಲಿಲ್ಲ. ಕೊನೆಗೆ ವಿಷ್ಣುವು ಕೆರಳಿ ಚಕ್ರಾಯುಧವನ್ನೇ ಪ್ರಯೋಗಿಸಿದನು. ಋಷೀಶನು ರಭಸದಿಂದ ಬಂದ ಆ ಚಕ್ರವನ್ನು ಆತು ಕೈಯಲ್ಲಿ ಹಿಡಿದು, ಹೊಸೆದು, ನುಚ್ಚು ಮಾಡಿ ಬಿಸುಟು, ಹರಿಯ ಮೇಲೆ ಯುದ್ಧಮಾಡಿದನು ವಿಷ್ಣುವು ಸೋತು ತಲೆಯನ್ನು ಕೆದರಿ ಓಡಿದನು. ದೊರೆಯು ಗತಿಗಾಣದೆ ಗಡಗಡನೆ ನಡುಗಿ ಶಿವಭಕ್ತರೇ ದಿವ್ಯವರೆಂದು ಮುನೀಶನ ಪಾದಕ್ಕೆ ಮರೆಹೊಕ್ಕು ಶಿವದೀಕ್ಷೆಯನ್ನು ಪಡೆದುಕೊಂಡನು. ಇತ್ತ ಹರಿಯು ಕಳೆದುಕೊಂಡ ಚಕ್ರವನ್ನು ಮತ್ತೆ ಪಡೆಯುವುದಕ್ಕಾಗಿ ಶಿವನನ್ನು ಕುರಿತು ತಪಸ್ಸನ್ನು ಮಾಡುತ್ತ ಪ್ರತಿ ದಿನವೂ ತಪ್ಪದೆ ಶಿವನನ್ನು ಸಹಸ್ರ ಕಮಲಗಳಿಂದ ಪೂಜಿಸುವ ನಿಯಮವುಳ್ಳವನಾಗಿದ್ದನು. ಒಂದು ದಿನ ಭಕ್ತನ ಮನೋದೃಢತ್ವವನ್ನು

ನೋಡುವುದಕ್ಕಾಗಿ ಶಿವನು ಆ ಎಣಿಕೆಯ ಕಮಲಗಳಲ್ಲಿ ಒಂದನ್ನು ಕಾಣದಂತೆ ಮಾಡಿದನು. ಅರ್ಚನೆಯನ್ನು ಮಾಡುವಾಗ ಒಂದು ಕಡಿಮೆಯಾಗಿರಲು, ವಿಷ್ಣುವು ತನ್ನ ವ್ರತಗೆಡುವುದೆಂದು ಯೋಚಿಸಿ, ಕೂಡಲೇ ಹೆದರದೆ ಆ ಕಮಲಕ್ಕೆ ಪ್ರತಿಯಾಗಿ ತನ್ನ ದಕ್ಷಿಣನೇತ್ರಕಮಲವನ್ನು ಕೊರೆದು ಸಮರ್ಪಿಸಿದನು. ಆಗ ಶಂಕರನು ಮೆಚ್ಚಿ ಪ್ರತ್ಯಕ್ಷನಾಗಿ, ನಿನ್ನ ಇಷ್ಟವೇನು ಕೇಳೆನಲು, ಹರಿಯು ತಾನು ಚಕ್ರವನ್ನು ಕಳೆದುಕೊಂಡುದನ್ನು ವಿವರಿಸಿ ಹೇಳಿ, ಮತ್ತೆ ಅದನ್ನು ದಯೆಪಾಲಿಸಬೇಕೆಂದು ಬೇಡಿದನು. ಪಾರ್ವತೀಪತಿಯಾದರೊ ಮತ್ತೆ ಚಕ್ರವನ್ನು ದಾನ ಮಾಡಿ, ಎಲೆ ವಿಷ್ಣುವೇ! ಕೇಳು, ನಾನು ಯಾವಾಗಳೂ ನನ್ನ ಭಕ್ತರ ಹೃದಯದಲ್ಲಿಯೇ ವಾಸಮಾಡಿಕೊಂಡಿರುವೆನು; ಅವರೇ ನನಗೆ ಪ್ರಾಣವು; ಅಂತಹ ನನ್ನ ಭಕ್ತರಾಗಿರುವ ಶಿವಚಿಹ್ನಧಾರಿಗಳಮೇಲೆ ನೀನು ಇನ್ನಾವಾಗಳೂ ಈ ಚಕ್ರವನ್ನು ಪ್ರಯೋಗಿಸಕೂಡದು" ಎಂದು ಹೇಳಿ, ಕಟ್ಟುಮಾಡಿ, ವಿಷ್ಣುವನ್ನು ಕಳುಹಿಕೊಟ್ಟು, ತಾನು ಪಾರ್ವತೀಸಮೇತನಾಗಿ ಕೈಲಾಸವನ್ನು ಸೇರಿ, ಶಿವಗಣಸಭೆಯಲ್ಲಿ ಸುಖದಿಂದಿದ್ದನೆಂದು ಚೆನ್ನಬಸವೇಶನು ಅಪ್ಪಣೆ ಕೊಡಿಸಿದನೆಂಬಲ್ಲಿಗೆ ಹದಿನಾರನೆ ಅಧ್ಯಾಯದೊಡನೆ ತನೆ ಕಾಂಡವು ಮುಗಿದುದು.

ಮಂಗಳವಾಗಲಿ.

(ತನೆಯ ಕಾಂಡ.)

೧ನೆ ಅಧ್ಯಾಯವು.

ಗಜಾಸುರಸಹ್ಮಾರ.

ಬಳಿಕ ಚೆನ್ನಬಸವೇಶನು ಸಿದ್ಧರಾಮೇಶನನ್ನು ಕುರಿತು ಮರಳಿ ಹೇಳತೊಡಗಿದನೆಂತೆಂದರೆ—ಸೌರ್ಯವಲ್ಲಿ ಅಗಸ್ತ್ಯಮಹರ್ಷಿಯು ಕಾವೇರೀನದಿಯ ಮೂಲಸ್ಥಲದಲ್ಲಿ ತಪಸ್ಸನ್ನಾಚರಿಸುತ್ತಿರಲು, ಒಬ್ಬ ಗಂಧರ್ವ

ನು ಪತ್ನೀಸಮೇತನಾಗಿ ವಿಮಾನದಲ್ಲಿ ಕುಳಿತು ಆಕಾಶದಲ್ಲಿ ಹೋಗುತ್ತಿದ್ದು, ತಪಸ್ಸಿನಲ್ಲಿರುವ ಋಷಿಯನ್ನು ಕಂಡು ಹಾಸ್ಯಮಾಡಿ, ತನ್ನ ಹೆಂಡತಿಯು ತಲೆಯ ಹೂವಿನಸರದಿಂದ ಹೊಡೆದನು. ಋಷಿಯು ಕಣ್ಣನ್ನು ತೆರೆದು, ಮೇಲೆ ನೋಡಿ, ಗಂಧರ್ವನನ್ನು ಕಂಡು ಕೋಪವೇರಿ, ಕಯ್ಯೆತ್ತಿ, "ಎಲಾ ಮದಾಂಧನೇ! ನೀನು ಗರ್ವದಿಂದ ನನ್ನನ್ನು ಮುಡಿದ ಹೂವಿನಿಂದಿಟ್ಟ ಕಾರಣದಿಂದ ಭೂವಿಯಲ್ಲಿ ಮತ್ತಗಜವಾಗಿ ಹುಟ್ಟು ದುಷ್ಟತನದಿಂದ ಲೋಕಕ್ಕೆ ಕಂಟಕನಾಗಿರು" ಎಂದು ಶಾಪವನ್ನು ಕೊಟ್ಟನು. ಅದನ್ನು ಕೇಳಿ ಗಂಧರ್ವನು ಬೆದರಿ ಚಿಂತೆಯಿಂದ ಇಳಿದು ಬಂದು, ಋಷಿಯ ಪಾದಕ್ಕೆ ನಮಸ್ಕರಿಸಿ, ಮುನಿವರ್ಯನೆ! ಶಾಪವನ್ನು ವಿಮೋಚನಗೊಳಿಸಿ ರಕ್ಷಿಸು ಎಂದು ಬೇಡಿಕೊಳ್ಳಲು, ಮಹರ್ಷಿಯು ನೀನು ದುಷ್ಟಗಜವಾಗಿ ಹುಟ್ಟಿ ಯಾರಿಗೂ ಜಗ್ಗದೆ ಇರು; ಕೊನೆಗೆ ಶಿವನಿಂದ ನಿನಗೆ ಮುಕ್ತಿಯಾಗುವುದು ಹೋಗು ಎಂದು ನುಡಿದನು. ಅಗಸ್ತ್ಯರ್ಷಿಯು ಸಾವಾನ್ಯನೆ? ಶಾಪಶಕ್ತಿಯಿಂದ ಕೂಡಲೇ ಗಂಧರ್ವನ ವಿಮಾನವು ಲಯಲಾಯಿತು. ಹೆಂಡತಿಯು ಕಾಣದಂತಾದಳು. ಗಂಧರ್ವನಾದರೊ ಪರ್ವತಾಕಾರದ ಮಹಾಗಜವಾದನು. ಅದರ ಭೀಕರಸ್ವರೂಪವು ಜಗದಾಶ್ಚರ್ಯಕರವಾಗಿದ್ದಿತು. ಆಕಾಶದ ನಕ್ಷತ್ರಪಙ್ತಿಗಳು ಆ ಆನೆಗೆ ಕಟ್ಟಿದ ಗೆಜ್ಜೆಯ ಸರಗಳಂತೆ ಕಾಣುತ್ತಿದ್ದವು. ಅದು ನಾಲ್ಕು ಸಮುದ್ರದ ನೀರನ್ನೂ ಒಂದೇಬಾರಿಗೆ ಸುಂಡಿಲಿಂದ ಸುರ್ರನೆ ಹೀರುವಂತೆಯೂ, ಮೇಲಕ್ಕೆ ಸುಂಡಿಲನ್ನು ನೀಡಿ ಉಸುರನ್ನು ಬಿಟ್ಟರೆ ಸತ್ಯಲೋಕದಲ್ಲಿರುವ ಬ್ರಹ್ಮನ ಪೀಠವಾದ ಕಮಲವನ್ನೂ ನಡುಗಿಸುವಂತೆಯೂ ಇದ್ದಿತು. ಸೂರ್ಯಚಂದ್ರಬಿಂಬಗಳೆರಡೂ ಆ ಗಜದ ಪಕ್ಕಗಳಲ್ಲಿ ನೇತುಗಟ್ಟಿರುವ ದೊಡ್ಡ ಗಂಟೆಗಳಂತೆ ಕಾಣುತ್ತಿದ್ದುವು. ಅದರ ಓಟಕ್ಕೆ ಬ್ರಹ್ಮಾಂಡವೆಲ್ಲಾ ಅದಿರುತ್ತಿದ್ದಿತು. ಅದರ ಗರ್ಜನೆಯು ಲೋಕಕ್ಕೆಲ್ಲ ಮೂರ್ಛೆಯನ್ನುಂಟುಮಾಡುತ್ತಿದ್ದಿತು. ಅದರ ಕುಂಭಸ್ಥಲಗಳು ಪರ್ವತಕ್ಕೆ ಸಮನಾಗಿದ್ದುವು. ಅದರ ಉದ್ದನಾದ ಬಾಲವು ಕಾಲನ ದಂಡದಂತೆ ಭಯಂಕರವಾಗಿದ್ದಿತು. ಅದರ ನೋಟವು ಎಲ್ಲರ ಎದೆಯನ್ನೂ ಬಿರಿಸುತ್ತಿದ್ದಿತು. ಅದರ ಕೊಂಬಿನ ತಿವಿತಕ್ಕೆ ಕುಲಾಚಲಗಳೆಲ್ಲ ಪುಡಿಪುಡಿಯಾಗಿ ಹೋದುವು. ಅದರ ಓಡಾಡುವ ರಭಸಕ್ಕೆ

ಪ್ರಾಣಿತತಿಗಳೆಲ್ಲ ತೂರಿಬಿದ್ದು ಸಾಯುತ್ತಿದ್ದುವು. ಅದರಿದಿರಿಗೆ ನಿಲ್ಲುವುದಕ್ಕೆ ಸ್ವರ್ಗಮರ್ತ್ಯಪಾತಾಳದಲ್ಲಾರಿಗೂ ಎದೆಯಿಲ್ಲದಂತಾಯಿತು. ಅದರ ಸುದ್ದಿಯನ್ನು ಕೇಳಿದಕೂಡಲೇ ಜನಗಳು ದಿಕ್ಕುಗೆಟ್ಟು ಓಡುವಂತಾಯಿತು. ಮೂರು ಲೋಕವೂ ಈಮಹಾಗಜದ ಭೀತಿಯಿಂದ ಕೊರಗಿ ತಮ್ಮನ್ನುದ್ಧರಿಸುವರಾರೆಂದು ಚಿಂತಾಕುಲವಾಯಿತು. ಅಷ್ಟದಿಕ್ಪಾಲಕರು ಈ ಆನೆಯ ಸುದ್ದಿಯನ್ನು ಕೇಳಿ ಯಾವಮೂಲೆಗೋಡಿಹೋದರೋ ಗೊತ್ತೇ ಯಿಲ್ಲದಂತಾದರು. ಪಾತಾಳಲೋಕದ ಸರ್ಪಗಳೆಲ್ಲವೂ ಹೆಡೆಯನ್ನು ಮುಚ್ಚಿ ದರಿಗಳಲ್ಲಿ ಸೇರಿ ಈಚೆಗೆ ತಲೆಯಿಕ್ಕದಂತಾದುವು. ಜಗತ್ತೆಲ್ಲ ಗಜಾಸುರನ ಬಾಧೆಗೀಡಾಗಿ ರೋದನಮಯವಾಯಿತು. ದೇವೇಂದ್ರಾದಿಗಳು ಕಂಗೆಟ್ಟು ಬ್ರಹ್ಮವಿಷ್ಣುಗಳ ಬಳಿಗೆ ಓಡಿಬಂದು ಮಹಾಗಜಾಸುರನ ಹಾವಳಿಯನ್ನು ಅವರೊಡನೆ ದೂರಲು,ಅವರು ಸೇನಾಸಮೇತರಾಗಿ ಹೊರಟು, ಮತ್ತಗಜಕ್ಕೆ ಇದಿರಾಗಿ ಕಾಳೆಯುಗವಾಡಿದರು. ಪ್ರಚಂಡವಾಯುತಕ್ಕೆ ಇದಿರಾದ ತರಗಲೆಗಳಂತೆ ಇವರ ಸೇನೆಯು ಕ್ಷಣಕಾಲದಲ್ಲಿ ಗಜಾಸುರನ ಹೊಯ್ಲಿಗೆ ತಡೆಯುವಾರದೆ ತೂರಿಹೋಯಿತು. ಕಳೆದುಳಿದವರು ದಿಕ್ಕು ದಿಕ್ಕಿಗೆ ಪಲಾಯನಗೊಂಡರು. ಕಡೆಗೆ ಹರಿಬ್ರಹ್ಮರೇ ಇದಿರಾಗಿ ಕಾದು, ಏಟನ್ನು ತಿಂದು, ನಿಲ್ಲಲಾರದೆ, ಅವರೂ ಪರಶಿವನ ಬಳಿಗೆ ಓಡಿದರು. ಸರ್ವರೂ ಶಂಕರನಿಗೆ ವೀರ್ಘದಂಡನಮಸ್ಕಾರವಾಡಿ ಎದ್ದುಕೈಮುಗಿದು ನಿಂತು ಸ್ವಾಮಿ ! ಗಜಾಸುರನೆಂಬ ನೀಚದೈತ್ಯನು ಹೆಚ್ಚಿಕೊಂಡು ನಮ್ಮನ್ನೆಲ್ಲ ಕಾಳೆಯುಗದಲ್ಲಿ ಸೋಲಿಸಿ ಓಡಿಸಿ,ಲೋಕಗಳನ್ನೆಲ್ಲ ಸಹ್ಮರಿಸುತ್ತಿರುವನು ; ನೀನು ಜಗತ್ತಿಗೆಲ್ಲ ಉಳಿಗಾಲವನ್ನುಂಟುಮಾಡಬೇಕು. ಎಂದು ಪ್ರಾರ್ಥಿಸಿದರು. ಶಂಕರನು ದಯೆಗೊಂಡು ಹೆದರಬೇಡಿರೆಂದು ಅವರೆಲ್ಲರಿಗೂ ಅಭಯದಾನವಾಡಿ, ವೃಷಭನನ್ನು ಹತ್ತಿ ಕೈಲಾಸದಿಂದ ಹೊರಟನು. ಹರಿಬ್ರಹ್ಮಾದಿಗಳೆಲ್ಲರೂ ತಮ್ಮತಮ್ಮ ವಾಹನಗಳನ್ನೇರಿ ಚತುರಂಗಸೇನಾಸಮೇತರಾಗಿ ಹೊರಟರು. ಗರುಡ ಗಂಧರ್ವ ಕಿನ್ನರ ಕಿಂಪುರುಷ ವಿದ್ಯಾಧರ ಯಕ್ಷಾದಿಗಳೂ ಭೂತಗಣ ರುದ್ರಗಣಗಳೂ ಶಿವನ ಸುತ್ತುವರಿದು ನಡೆಗೊಂಡರು. ಈ ಮಹಾದೇವಸೇನಾಸಮುದ್ರದಲ್ಲಿ ಆಗುತ್ತಿದ್ದ ಭೇರೀ ಕಹಳಾದಿವಾದ್ಯಧ್ವನಿಯೂ ಹಸ್ತ್ಯಶ್ವಾದಿಗಳ ಕೂಗೂ ಒಟ್ಟುಗೂಡಿ ದಿ

ಬ್ರಹ್ಮಾಂಡಲವನ್ನೆಲ್ಲ ಕಿವುಡುಗೊಳಿಸುತ್ತಿದ್ದುವು. ಈ ಸೇನಾಪಾದಘಟ್ಟನೆಯಿಂದ ಭೂಮಿಯೆಲ್ಲ ಧೂಳಿಮಯವಾಗಿ ಕಂಪಿಸುತ್ತಿದ್ದಿತು. ಆಗ ಇದಿರಿನಲ್ಲಿ ನೀಲಗಿರಿಯು ಕೈಕಾಲುಮೂಡಿ ನಡೆದರುತ್ತಿರುವಂತೆಯೂ, ಪ್ರಳಯಕಾಲದ ಮೇಘಗಳು ಗಜಾಕೃತಿಯನ್ನು ತಾಳಿ ಬರುವಂತೆಯೂ, ಗಜಾಸುರನು ಮಹಾಗರ್ಜನೆಯನ್ನು ಮಾಡಿಕೊಂಡು ಬ್ರಹ್ಮಾಂಡವೆಲ್ಲ ನಡುಗುವಂತೆ ಶ್ವಾಸೋಚ್ಛ್ವಾಸಗಳನ್ನು ಮಾಡುತ್ತ ಬರುತ್ತಿದ್ದನು. ಇದಿರಿಗೆ ಸಿಕ್ಕಿದ ಬೆಟ್ಟಗಳ ಬುಡಕ್ಕೆ ಕೊಂಬನ್ನು ಚುಚ್ಚಿ ಕಿತ್ತುತ್ತಲೂ, ಮಗ್ಗುಲಲ್ಲಿದ್ದ ಮರಗಳನ್ನು ಸುಂಡಿಲಿನಿಂದ ಸುತ್ತಿ ಬುಡಸಹಿತ ಕಿತ್ತು ಬಿಸುಡುತ್ತಲೂ, ದೊಡ್ಡದೊಡ್ಡ ಗುಂಡುಗಳನ್ನು ಸುಂಡಿಲಿನಿಂದ ಪಿಡಿದು ದಿಕ್ಕುದಿಕ್ಕಿಗೆ ಬೀರುತ್ತಲೂ, ಧೂಳಿಯನ್ನೆತ್ತಿ ಬಿರುಸಾಗಿ ಬೀಸುತ್ತಲೂ ಆರ್ಭಟಿಸುತ್ತಲೂ ನೀಚ ಸೇನೆಯನ್ನು ಸಂಘಟಿಸಿದನು. ಆಗ ಸೈನಿಕರೆಲ್ಲರೂ_" ಶಿವನೇ ! ಈತನೇ ಲೋಕವನ್ನೆಲ್ಲ ತಿಂದು ತೇಗಿದ ಮಹಾಗಜಾಸುರನು ! " ಎಂದು ಕೂಗಿಕೊಂಡು, ಬಡಬಾಗ್ನಿಯನ್ನು ಸಮುದ್ರದ ನೀರು ಮುತ್ತುವಂತೆ ಎಲ್ಲರೂ ಶೌರ್ಯಾಟೋಪದಿಂದ ಅನೆಯನ್ನು ಮುತ್ತಿದರು. ಬಂದು ಕಜೆಯಲ್ಲಿ ಕತ್ತಿ ಕೊಡಲಿ ಈಟಿ ಮೊದಲಾದ ಆಯುಧಗಳ ಪ್ರಹಾರವೂ ಬಂದುಕಜೆ ಕುಂತಗನೆ ದಂಡಾಯುಧಗಳ ಪೊಡೆತವೂ, ಬೀರೊಂದು ಕಜೆಯಲ್ಲಿ ಬಾಣ ಅಂಕುಶ ಮೊದಲಾದುವುಗಳ ಏಟೂ, ಅವಿಚ್ಛಿನ್ನವಾಗಿ ಅನೆಯುಮೇಲೆ ಸುರಿಯುತ್ತಿದ್ದುವು. ವೈಯತುಂಬ ಬಾಣಗಳು ಕವಿದಿದ್ದ ಆ ಗಜರಾಜನು ಬೆತ್ತದ ಮೆಳೆಗಳು ಮುತ್ತಿದ ದೊಡ್ಡ ಬೆಟ್ಟದಂತೆ ಕಾಣುತ್ತಿದ್ದನು. ಹೀಗೆ ಬಲವಾದ ಪೆಟ್ಟುಗಳಿಸಿಕ್ಕಿದ ದಾನವನು ಕ್ಷಣಕಾಲವೂ ನಿಂತಲ್ಲಿ ನಿಲ್ಲದೆ ಬಾಲವನ್ನು ಬೀಸಿ ಅಪ್ಪಳಿಸುತ್ತಲೂ, ಸುಂಡಿಲನ್ನು ಝಾಡಿಸಿ ಸದೆಬಡಿಯುತ್ತಲೂ, ಕೊಂಬಿನಿಂದ ಇರಿಯುತ್ತಲೂ, ಕಾಲಿಗೆ ಸಿಕ್ಕಿದವರನ್ನು ತುಳಿಯುತ್ತಲೂ, ಸಿಕ್ಕಿದವರನ್ನು ಹಿಡಿಹಿಡಿದು ಚಂಡಿನಂತೆ ಆಕಾಶಕ್ಕೆ ಎಸೆಯುತ್ತಲೂ, ಲೀಲಾಜಾಲದಿಂದ ಸೇನೆಯನ್ನು ಬರಿದುಮಾಡುತ್ತಿದ್ದನು. ಮತ್ತೆ ಮತ್ತೆ ಹೊಸಸೇನೆಯು ಕವಿಯುವುದಕ್ಕೂ, ಗಜರಾಜನು ಅದನ್ನು ಬಯಲುಮಾಡುವುದಕ್ಕೂ ಕೊನೆಮೊದಲಿಲ್ಲವಾಯಿತು. ಎಲ್ಲಿ ನೋಡಿದರೂ ಕೈಕಾಲುಡಿಮು,ರಕ್ತವನ್ನು ಕಾರಿ,ಪ್ರಾಣವನ್ನು ಬಿಟ್ಟುಬಿಡುತ್ತಲೂ ಇರುವ

ಕಾಲಾಳುಗಳೂ, ನುಚ್ಚು ನುರಿಯಾದ ತೇರುಗಳೂ, ಸದ್ದಡಗಿ ಕಣ್ಮುಚ್ಚಿ ಉಬ್ಬರಿಸಿ ಉರುಳಿರುವ ಆನೆಗಳೂ, ಕತ್ತರಿಸಿ ಕಡಿತುಂಡಾಗಿ ಬಿಟ್ಟಲಾಗಿರುವ ಕುದುರೆಗಳೂ, ರಣಾಂಗಣದಲ್ಲೆಲ್ಲ ಬಿದ್ದು ಭೀಕರವಾಗಿದ್ದುವು. ಎತ್ತ ನೋಡಿದರೂ ರಕ್ತಪ್ರವಾಹವೂ, ಮಾಂಸಖಂಡಗಳೂ, ರುಂಡಮುಂಡಗಳೂ, ಕಿರೀಟಬಾಹುಶಿರಗಳೂ, ಮುರಿದ ಛತ್ರಚಾಮರಗಳೂ ಹರಡಿಕೊಂಡಿದ್ದುವು. ಇವನ್ನೆಲ್ಲ ನೋಡಿ ಹರಿಬ್ರಹ್ಮರಿಗೂ ಇಂದ್ರಾದಿದಿಕ್ಪಾಲಕರಿಗೂ ರೋಷವು ನೂರ್ಮಡಿಯಾಯಿತು. ಈ ದೇವನಾಯಕರುಗಳೇ ಸ್ವತಃ ಯುದ್ಧಕ್ಕೆ ಅಣಿಯಾಗಿ, ಸುತ್ತಲೂ ಗಜಾಸುರನನ್ನು ಮುತ್ತಿ, ಮುಸಲ ಮುದ್ಗರ ಕುಂತ ಗದಾ ಬಾಣ ಪರಶುಗಳಿಂದ ಹೊಡೆದು ಬಡಿದು ಕಡಿದು ಬೊಬ್ಬಿರಿಯುತ್ತ ಬಂದರು. ಗಜರಾಜನು ಬುಗುರಿಯಂತೆ ಬಿರುಬಿರನೆ ತಿರುಗುತ್ತ ಸುಂಡಿಲನ್ನು ನಾಲ್ಕುಕಡೆಯೂ ರಭಸದಿಂದ ತಿರುಗಿಸುತ್ತ, ಪ್ರಳಯಕಾಲದ ಮೇಘದಂತೆ ಗರ್ಜಿಸುತ್ತ, ಮೇಲೆಬಿದ್ದು, ಬಬ್ಬೊಬ್ಬರನ್ನಾಗಿ ರಥದಿಂದೆಳೆದು ಸುಂಡಿಲಿನಲ್ಲಿ ಸುತ್ತಿ ಅವರವರ ನಿಕ್ಕಿಗೆ ಬಗೆದು,ರಥಗಳನ್ನು ನೂಕಿ ಉರುಳಿಸುತ್ತಿದ್ದಿತು. ಬ್ರಹ್ಮನಮೇಲೆ ಬಲವಾಗಿ ಉಸುರನ್ನು ಬಿಟ್ಟು ಘೂತ್ಕರಿಸಿ " ಸತ್ಯಲೋಕದಲ್ಲಿ ಸುಖವಾಗಿರು ಹೋಗು " ಎಂದು ಅಟ್ಟಿದಂತೆ ಆಕಾಶಕ್ಕೆ ಹಾರಿಸಿಬಿಟ್ಟಿತು. ಅಷ್ಟರಲ್ಲಿ ವಿಷ್ಣುವು ಗಜಾಸುರನ ಮಹಾಪ್ರಳಯವನ್ನು ನೋಡಿ ಅತ್ಯಂತ ರೋಷಾವಿಷ್ಟನಾಗಿ, ತನ್ನ ಸುವರ್ಣರಥವನ್ನು ಗಜಾಸುರನ ಮುಂದಕ್ಕೆ ಸರಿಸಿ, ಪುಂಖಾನುಪುಂಖವಾಗಿ ಬಾಣಗಳನ್ನು ಆನೆಯಮೇಲೆ ವರ್ಷಿಸಿದನು. ಇದನ್ನು ಕಂಡಕೂಡಲೇ ದೈತ್ಯನು ಸರ್ರನೆ ಬಂದು, ಆವನ ರಥವನ್ನೇ ಸುಂಡಿಲಿನಿಂದ ಸುತ್ತಿ ಗರಗರನೆ ತಿರುಗಿಸಿ ಬೀಸಿ ಎಸೆದನು. ಹರಿಯು ಕೈಯಲ್ಲಿ ಗದೆಯನ್ನು ಹಿಡಿದು ರಥದಿಂದ ದುಮಿಕಿ ಸಿಂಹನಾದವನ್ನುಮಾಡಿ, ಆನೆಯ ಕುಂಭಸ್ಥಲದಮೇಲೆ ಬಲವಾಗಿ ಅಪ್ಪಳಿಸಿದನು. ಆಯೇಟನ್ನು ಆನೆಯು ಲಕ್ಷಿಸದೆ ಛರ್ರನೆ ಹರಿಯನ್ನು ಅಟ್ಟಕೊಂಡುಹೋಗಿ ಹಿಡಿದುಕೊಂಡಿತು. ವಿಷ್ಣುವು ಅದರ ಸುಂಡಿಲಿನಿಂದ ನುಣುಚಿಕೊಂಡು ಹಾರಿ, ದೂರದಲ್ಲಿ ನಿಂತು ಗರ್ಜಿಸಿದನು. ಹರ್ಯಜೇಂದ್ರಾದಿಗಳ ಅವಸ್ಥೆಯೆಲ್ಲವೂ ಹೀಗಾದುದನ್ನು ಲೋಕದ ಜನವು ನೋಡಿ,ಭೀತಿಪಟ್ಟು ನಮಗಿನ್ನುಳಿಗಾಲವು ಬರಲಿಲ್ಲವೆಂದು ಚಿಂತಿಸುತ್ತ, ಶಿವನ ಮರೆಹೊಕ್ಕು

ಮೊರೆಯಿಟ್ಟರು. ಆಗ ಶಂಕರನೇ ಚಿತ್ತೈಸಿ, ಗಜಾಸುರನಿಗಿದಿರಾಗಿ, ತನ್ನ ಪಿನಾಕವೆಂಬ ಧನುಸ್ಸಿನ ಸಿಂಜಿನಿಯನ್ನು ಸೆಳೆದು, ಧ್ವನಿಮಾಡಿ,ಇದಿರಲ್ಲಿರುವ ಗಜಾಸುರನನ್ನು ಕರುಣಾಕಟಾಕ್ಷದಿಂದ ನೋಡಿ,ಗುರಿಯಿಟ್ಟು ಪ್ರಯೋಗಿಸಿದನು. ಕೂಡಲೇ ಗಜದ ರುಂಡವು ಕಡಿತುಂಡಾಗಿ ಹಾರಿತು. ಮುಂಡವು ಭೂಮಿಯ ಮೇಲೆ ಬಿದ್ದಿತು. ಇದನ್ನು ಕಂಡು ಜಗತ್ತೆಲ್ಲವೂ ಆನಂದಾಬ್ಧಿಯಲ್ಲಿ ಮುಳುಗಿ ಕೋಲಾಹಲವನ್ನು ಮಾಡಿತು. ಕೂಡಲೇ ಗಜಾಸುರನಾಗಿದ್ದ ಗಂಧರ್ವನು ತನ್ನ ಪೂರ್ವದ ಗಾಂಧರ್ವರೂಪನ್ನು ಧರಿಸಿ, ಚಂದ್ರಶೇಖರನ ಪಾದಾರವಿಂದಕ್ಕೆ ಭಕ್ತಿಯಿಂದ ನಮಸ್ಕರಿಸಿ, ಸ್ತುತಿಸಿ, ನನ್ನ ಜನ್ಮವಾಗಿದ್ದ ಈ ಆನೆಯ ಶರೀರದ ಯಾವುದಾದರೊಂದು ಚಿಹ್ನವನ್ನು ಸ್ವಾಮಿಯು ಧರಿಸಬೇಕೆಂದು ಬೇಡಿಕೊಂಡನು. ಭಕ್ತಸುಲಭನಾದ ಸ್ವಾಮಿಯು ಹಾಗೆಯೇ ಆಗಲೆಂದು ನುಡಿದು, ಆನೆಯ ಚರ್ಮವನ್ನು ಸುಲಿದು, ಹೊದೆದು, ಆ ಗಂಧರ್ವನಿಗೆ ಗಣಪದವಿಯನ್ನು ದಯೆಪಾಲಿಸಿ, ದೇವತೆಗಳಿಗೆ ಸುಖಗೊಳಿಸಿ, ಕೈಯಲ್ಲಿ ಗಜದ ರುಂಡವನ್ನು ಹಿಡಿದು ನರ್ತಿಸುತ್ತ ಕೈಲಾಸಕ್ಕೆ ತೆರಳಿದನು. ಅಂತಃಪುರದಲ್ಲಿದ್ದ ಪಾರ್ವತಿಯು ತನ್ನ ದೇಹದ ಮೇಲಣ ಕೊಳೆಯನ್ನು ತೆಗೆದು, ಬೊಂಬೆಯನ್ನು ಮಾಡಿ, ಪ್ರಾಣವನ್ನು ತುಂಬಿ, ಅವನನ್ನು ಬಾಗಿಲ ಕಾವಲಿಗೆ ಇರಿಸಿರಲು, ಅಂತಃಪುರಪ್ರವೇಶವನ್ನು ಮಾಡುತ್ತಿದ್ದ ಶಿವನನ್ನು ಕಂಡು ಒಳಹೋಗಬೇಡವೆಂದು ಆತನು ತಡೆದನು. ಶಿವನಾದರೊ ಥಟ್ಟನೆ ಆತನ ತಲೆಯನ್ನು ಕಡಿದುರುಳಿಸಿ ಒಳಹೊಕ್ಕನು. ತನ್ನ ಪುತ್ರನು ಶಿವನ ಹಸ್ತದಿಂದ ಹೀಗೆ ಅಳಿದನೆಂಬ ಸುದ್ದಿಯನ್ನು ಪಾರ್ವತಿಯು ಕೇಳಿ, ಮನಸ್ಸಿನಲ್ಲಿ ಬಹುಳವಾಗಿ ನೊಂದು, ಪರಶಿವನೊಡನೆ ಕೋಪಿಸಿಕೊಂಡಳು. ಶಂಕರನಾದರೊ— ದೇವಿಯೆ ! ನಿನ್ನ ಮಗನು ಬದುಕಿರುವನು; ನೋಡು ಬಾರೆಂದು ಹೇಳಿ, ಕರೆತಂದು, ತನ್ನ ಕೈಯಲ್ಲಿದ್ದ ಆನೆವಲೆಯನ್ನು ಬಾಗಿಲಲ್ಲಿ ಬಿದ್ದಿದ್ದ ಪಾರ್ವತಿಯ ನಂದನನ ಮುಂಡಕ್ಕೆ ಜೋಡಿಸಲು, ಪ್ರಾಣವಳಿದಿದ್ದ ಆ ಶರೀರದಲ್ಲಿ ಮುನ್ನಿನಂತೆ ಪ್ರಾಣವು ಕೂಡಿಕೊಂಡಿತು. ಆದರೆ ಮಗನಿಗೆ ಉಂಟಾದ ಮುಖವಿಕಾರವನ್ನು ಪಾರ್ವತಿಯು ನೋಡಿ, ಖೇದಗೊಂಡಳು. ಆಗ ಶಿವನು— ಎಲಾ ಪಾರ್ವತಿಯೆ ! ನಿನ್ನ ಕುಮಾರನ ಮುಖವು ವಿಕಾರವಾಯ್ತೆಂದು ಚಿಂತಿಸ

ಬೇಡ; ಇತಃಪರಃ ಇವನಿಗೆ ನನ್ನ ಗಣಸಮೂಹದಮೇಲೆ ಆಧಿಪತ್ಯವನ್ನು ಕೊಟ್ಟಿರುವೆನು; ವಲ್ಲಾ ಇವನನ್ನು ಭಜಿಸಿಸವರೆಲ್ಲರಿಗೂ ಸಕಲೇಷ್ಟಾರ್ಥಗಳೂ ಸಿದ್ಧಿಸುವಂತೆ ವರವನ್ನು ದಯೆಪಾಲಿಸಿರುವನು; ಎಂದು ಹೇಳಿ, ಪಾರ್ವತಿಯು ಮನಸ್ಸನ್ನು ಸಮಾಧಾನಪಡಿಸಿ, ಸಂತೋಷಗೊಳಿಸಿ, ಸುತ್ತಲೂ ನಿಂತಿರುವ ವಿಷ್ಣು ಬ್ರಹ್ಮಾದಿಗಳೆಲ್ಲರಿಗೂ ಅಪ್ಪಣೆಯನ್ನಿತ್ತು ಕಳುಹಿ, ಸರ್ವಮಂಗಳೆಯೊಡನೆ ಅಂತಃಪುರಕ್ಕೆ ತೆರಳಿದನೆಂದು ಚೆನ್ನಬಸವೇಶನು ನುಡಿದನೆಂಬಿಲ್ಲಿಗೆ ೧೨ನೆ ಅಧ್ಯಾಯವು ಸಂಪೂರ್ಣವು.

೧೩ನೆ ಅಧ್ಯಾಯವು.

ಶಿವಲೋಕ ಶಿವಸಭಾ ವರ್ಣನವು.

ಎಲೈ ಸಿದ್ಧರಾಮೇಶನೆ! ಏಕಾಗ್ರಚಿತ್ತದಿಂದ ಕೇಳು, ಈ ಬ್ರಹ್ಮಾಂಡವನ್ನೆಲ್ಲ ಬಂದು ಸುವರ್ಣವೇವಾಲಯವನ್ನಾಗಿ ಭಾವಿಸಿದರೆ, ಅದರ ಮೇಲೆ ಮುತ್ತಿನಕಲಶವನ್ನಿಟ್ಟಿರುವಂತೆ ನಿರ್ಮಲಸ್ಫಟಿಕವರ್ಣವಾದ ಶಿವಲೋಕವು ಬ್ರಹ್ಮಾಂಡವೆಲ್ಲಕ್ಕೂ ಇಷ್ಟಾರ್ಥವನ್ನು ಕೊಡುವ ಕಲ್ಪವೃಕ್ಷದಂತೆ ಕಾಣಿಸುತ್ತಿರುವುದು. ಅದರ ಮಹಿಮೆಯು ವೇದಗಳ ಊಹೆಗೂ ಕೂಡ ಗೋಚರವಾಗದೆ ಇರುವುದು. ಅದರಲ್ಲಿರುವ ಶಿವನ ರಾಜಧಾನಿಯು ೧೬ ಕೋಟಿಯೋಜನದ ವಿಸ್ತಾರವುಳ್ಳುದಾಗಿರುವುದು. ಅದರ ಸುತ್ತಲೂ ತೇಜೋಮಯವಾದ ಕೋಟೆಯು ಆವರಿಸಿರುತ್ತಿರಲು, ಬ್ರಹ್ಮಾನಂದದಿಂದ ಪರಿಪೂರ್ಣವಾದ ದೊಡ್ಡ ಬೊಕ್ಕಸದಂತೆ ತೋರುತ್ತಿರುವುದು. ಅದಕ್ಕೆ ಎಂಟು ಬಾಗಿಲುಗಳಿರುವುವು. ಅವುಗಳೊಳಗೆ ಇಂದ್ರದಿಕ್ಕಿನಬಾಗಿಲಲ್ಲಿ ಸಿತಾಂಗನೆಂಬ ಭೈರವನು ಕೆಂಬಣ್ಣದ ಶರೀರದವನಾಗಿ ಹಂಸವನ್ನೇರಿ ಬ್ರಾಹ್ಮಿಯೆಂಬ ಶಕ್ತಿಯೊಡನೆ ಕೂಡಿ ಕಾವಲಿರುವನು. ಅಗ್ನಿದಿಕ್ಕಿನ ಬಾಗಿಲಲ್ಲಿ ರುರು ಎಂಬ ಭೈರವನು ಹೇಮವರ್ಣದವನಾಗಿ ಮಾಹೇಶ್ವರಿಯೆಂಬ ಶಕ್ತಿಯೊಡನೆ ಕೂಡಿ, ಆಡನ್ನು ಹತ್ತಿ ಕಾವಲಿರುವನು. ಯಮದಿ

ಕ್ಕಿನಲ್ಲಿ ಚಂಡನೆಂಬ ಭೈರವನು ಹಳದಿಯಬಣ್ಣವುಳ್ಳವನಾಗಿ ಕೌಮಾರಿ ಯೆಂಬ ಶಕ್ತಿಯೊಡನೆ ಕೂಡಿ ನವಿಲನ್ನೇರಿ ವಾಸಿಸುವನು. ನಿಋತಿದಿಕ್ಕಿನಲ್ಲಿ ಕ್ರೋಧನೆಂಬ ಭೈರವನು ಹೊಂಬಣ್ಣದವನಾಗಿ ವೈಷ್ಣವಿಯೆಂಬ ಶಕ್ತಿಯಿಂದ ಕೂಡಿ ಗರುಡನನ್ನೇರಿ ಕಾದಿರುವನು. ವರುಣದಿಕ್ಕಿನಲ್ಲಿ ಉನ್ಮತ್ತನೆಂಬ ಭೈರವನು ಕಪ್ಪುಬಣ್ಣದವನಾಗಿ ವಾರಾಹಿಯೆಂಬ ಶಕ್ತಿಯೊಡನೆಕೂಡಿ ಕೋಣನನ್ನೇರಿ ಕಾವಲಿರುವನು. ವಾಯುದಿಕ್ಕಿನಲ್ಲಿ ಕಾಪಾಲಿ ಭೈರವನು ಬೆಣ್ಣೆಯ ಬಣ್ಣವುಳ್ಳವನಾಗಿ ಮಾಹೇಂದ್ರಿಯೆಂಬ ಶಕ್ತಿಯೊಡನೆಕೂಡಿ ಆನೆಯನ್ನೇರಿ ವಾಸವಾಗಿರುವನು. ಕುಬೇರದಿಕ್ಕಿನಲ್ಲಿ ಭೀಷಣನೆಂಬ ಭೈರವನು ಬೂದಿಬಣ್ಣದವನಾಗಿ ಚಾಮುಂಡಿಯೆಂಬ ಶಕ್ತಿಯೊಡನೆ ಕೂಡಿ ನಿಷ್ಮಾವಾಹನನಾಗಿ ಕಾದಿರುವನು ಈಶಾನದಿಕ್ಕಿನಲ್ಲಿ ಸಹ್ಮಾರ ಭೈರವನು ಹೇಮವರ್ಣದವನಾಗಿ ಕಾಳಿಯೆಂಬ ಶಕ್ತಿಯಿಂದ ಕೂಡಿ ಇಲಿಯನ್ನೇರಿ ಕಾವಲಿರುವನು. ಪ್ರತಿಯೊಬ್ಬ ಭೈರವನೂ ತ್ರಿನೇತ್ರಚತುರ್ಭುಜಗಳುಳ್ಳವರಾಗಿ ಆಯುಧಗಳನ್ನು ಪಿಡಿದು ಸಮಾನಶಕ್ತಿಯವರಾದ ೨೦ ಕೋಟಿ ಪರಿವಾರದಿಂದ ಕೂಡಿರುತ್ತಿರುವರು. ಇಂತಹ ಬಾಗಿಲನ್ನು ಕಳೆದು ಒಳಗೆ ನುಗ್ಗಿ ನೋಡಿದರೆ ಕಣ್ಣಿಗೆ ಹಬ್ಬವಾಗಿ ಪುಣ್ಯದ ಪ್ರವಾಹದಂತೆ ತೋರುತ್ತಿರುವ ಬೀದಿಗಳು ೧ ಲಕ್ಷವಿರುವುವು. ಪ್ರತಿಯೊಂದು ಬೀದಿಯಲ್ಲೂ ಮುಂಚೆ ಹೊನ್ನಿನ ಬಾಗಿಲು ಶೋಭಿಸುತ್ತ, ಇಕ್ಕೆಲದಲ್ಲೂ ಸುವರ್ಣರಚಿತನಿರ್ಮಿತವಾದ ರತ್ನಖಚಿತಮಂದಿರಗಳು ಅಗಣಿತವಾಗಿ ಸಾಲುಸಾಲಾಗಿ ಥಳಥಳಿಸುತ್ತಿರುವುವು ಪ್ರತಿಯೊಂದು ಬೀದಿಯಲ್ಲೂ ಅಲ್ಲಿಗಲ್ಲಿಗೆ ವೃಷಭಧ್ವಜಗಳನ್ನು ನಿಲ್ಲಿಸಿ ತೋರಣಗಳನ್ನು ಕಟ್ಟಿ ಭೂಮಿಯನ್ನು ಕಸ್ತೂರೀಕುಂಕುಮಾದಿಗಳಿಂ ಸಾರಿಸಿ ಮುತ್ತಿನ ರಂಗವಲ್ಲಿಯನ್ನಿಕ್ಕಿ ಅಲಂಕರಿಸಿರುವರು. ಅಲ್ಲಲ್ಲಿ ಮಂಗಳವಾದ್ಯಗಳು ಮೊಳಗುತ್ತಿರುವುವು. ನಿಷ್ಠಾಮಿಗಳೂ, ನಿಗಮಾಗಮವೇತ್ತರೂ, ನೀತಿಕೋವಿದರೂ, ನಿರ್ಜಿತಮಾಯರೂ, ನಿರ್ಲಿಪ್ತಮೋಹರೂ, ನಿರ್ಜೀತಬೋಧರೂ, ನಿರ್ಧೂತಪಾಪರೂ, ನಿಶ್ಚಲಚಿತ್ತರೂ, ನಿಃಭಕ್ತರೂ ಆದ ಮಹಾಶಿವಗಣರ ಸ್ತೋಮವು ದಟ್ಟವಾಗಿ ಸಂಚರಿಸುತ್ತಿರುವುದು. ಮಾಂಗಲ್ಯ ಲಾವಣ್ಯ ಶೃಂಗಾರಸರ್ವಸ್ವದಂತಿರುವ ರುದ್ರಗಣಿಕೆಯರು ವಿಲಾಸವೈಭವದಿಂದ ತಿರುಗಾಡುತ್ತಿರುವರು.

ಇಂತಹ ಆನಂದಶೋಭಾಪುಣ್ಯಮಯವಾದ ನಗರದ ಮಧ್ಯದಲ್ಲಿರುವ ಪರ
ಶಿವನರಮನೆಯು, ಎಲ್ಲ ಬೆಟ್ಟಗಳ ಮಧ್ಯದಲ್ಲೂ ಮೇರುಪರ್ವತವು ಶೋಭಿ
ಸುವಂತೆಯೂ, ನಕ್ಷತ್ರಮಧ್ಯದಲ್ಲಿ ಚಂದ್ರಮಂಡಲವಿರುವಂತೆಯೂ, ನಾ
ನಾರತ್ನಗಳ ನಡುವೆ ಚಿಂತಾಮಣಿಯಿರುವಂತೆಯೂ ಗ್ರಹಮಂಡಲದ ಮ
ಧ್ಯೆ ಸೂರ್ಯನೆಸೆಯುವಂತೆಯೂ, ಕ್ಷೇತ್ರಗಳೊಳಗೆಲ್ಲ ಕಾಶೀನಗರವು ಮೆ
ರೆಯುವಂತೆಯೂ, ಶಿವಗಣಂಗಳ ಮಂದಿರಗಳ ಮಧ್ಯದಲ್ಲೆಲ್ಲ ತಾನೇ
ತಾನಾಗಿ ತೋರುತ್ತ ೫ ಕೋಟಿ ಯೋಜನದಗಲವುಳ್ಳುದಾಗಿರುವುದು. ಆ
ಅರಮನೆಯಸುತ್ತಲೂ ಪರಮಶಿವತತ್ತ್ವವೇ ೧೦ ಸಾವಿರ ಯೋಜನದೆತ್ತರ
ದ ನಿರ್ಮಲಸ್ಫಟಿಕವರ್ಣದ ಕೋಟೆಯಾಗಿ ಆವರಿಸಿರುವುದು. ಅದರಮೇಲೆ
ನೂರುಯೋಜನದೆತ್ತರದ ರತ್ನಮಯವಾದ ಕೋಟೆದೆನೆಗಳಿರುವುವು. ಆ
ಕೋಟೆಗೆ ಭಕ್ತಿ ಜ್ಞಾನ ವೈರಾಗ್ಯ ಮುಕ್ತಿಗಳೇ ನಾಲ್ಕು ಮಹಾದ್ವಾರಗ
ಳಾಗಿರುವುವು. ಪೂರ್ವದಿಕ್ಕಿನ ಮಹಾದ್ವಾರದಮೇಲೆ ಋಗ್ವೇದವು ೧
ಲಕ್ಷಯೋಜನದೆತ್ತರದಿಂದ ಸುವರ್ಣಮಯವಾದ ಗೋಪುರವಾಗಿ ರಂಜಿ
ಸುತ್ತಿರುವುದು. ಅಲ್ಲಿ ನಂದೀಶ್ವರನು ಕಾದಿರುವನು. ದಕ್ಷಿಣದಿಕ್ಕಿನ
ದ್ವಾರದಮೇಲೆ ಯಜುರ್ವೇದವು ೧ ಲಕ್ಷಯೋಜನದೆತ್ತರದಗೋಪುರವಾಗಿ
ಇಂದ್ರನೀಲರತ್ನಮಯವಾಗಿ ಶೋಭಿಸುವುದು. ಅಲ್ಲಿ ವೀರಭದ್ರೇಶ್ವರನ
ಕಾವಲಿರುವುದು. ಪಶ್ಚಿಮದ್ವಾರದಮೇಲೆ ಸಾಮವೇದವು ೧ ಲಕ್ಷಯೋ
ಜನದೆತ್ತರದಿಂದ ಮುಕ್ತಾಮಯವಾದ ಗೋಪುರವಾಗಿ ಮೆರೆಯುತ್ತಿರುವು
ದು. ಅಲ್ಲಿ ಮಹಾಕಾಳನು ಕಾವಲುಗೊಂಡಿರುವನು. ಉತ್ತರದ್ವಾರದ
ಮೇಲೆ ಅಥರ್ವಣವೇದವು ೧ ಲಕ್ಷಯೋಜನದೆತ್ತರದಿಂದ ರತ್ನಮಯವಾದ
ಗೋಪುರವಾಗಿ ತೋರುತ್ತಿರುವುದು. ಅಲ್ಲಿ ನೀಲಲೋಹಿತನು ರಕ್ಷಕನಾ
ಗಿರುವನು. ಈ ದ್ವಾರಪಾಲಕರು ಕೈಯಲ್ಲಿ ಬೆತ್ತವನ್ನು ಹಿಡಿದು, ಶಿವ
ನಪ್ಪಣೆಯಾದವರನ್ನು ಒಳಕ್ಕೆ ಬಿಡುತ್ತಲೂ, ಇಲ್ಲದವರನ್ನು ತಡೆಯುತ್ತ
ಲೂ ಕಾದು ನಿಂತಿರುವರು. ಇಂತಪ್ಪ ಅರಮನೆಯೊಳಗೆ ವೇದಾಂತವೇ
ಅಂತಃಪುರವಾಗಿ ಕೋಟಿಯೋಜನದಳತೆಯಿಂದ ಒಪ್ಪುತ್ತಿರುವುದು. ಓಂ
ಕಾರವೇ ಸಭಾಸ್ಥಲವಾಗಿ ರಂಜಿಸುತ್ತಿರುವುದು. ಆ ಮಹಾಸಭೆಯ ದಿವ್ಯ
ತೇಜಸ್ಸಿನ ಮುಂದೆ ೧ ಸಾವಿರಕೋಟಿಸೂರ್ಯರ ಮಂಡಲಗಳು ಕೂಡ ಹ

ಳೆಯ ಕಂಚಿನಕನ್ನಡಿಯಂತೆ ಮಾಸಲಾಗಿ ತೋರುವುವು. ಅದರ ಕಾಂತಿಯಿಂದ ವಿಷ್ಣುವಿನ ದೇಹದ ಕಪ್ಪುಬಣ್ಣವೆಲ್ಲವೂ ಹೊಂಬಣ್ಣವಾಗಿ ಮಾರ್ಪಟ್ಟಿರುವುದು. ಬ್ರಹ್ಮಾಂಡಗಳೆಲ್ಲವೂ ಮಹಾಕ್ಷೀರಸಮುದ್ರದಲ್ಲಿ ಪ್ರತಿಫಲಿಸಿರುವ ಕೋಳಿಯ ಮೊಟ್ಟೆಗಳಂತೆ ತೋರುತ್ತಿರುವುವು. ಇಂತಹ ಆಶ್ಚರ್ಯಕರವಾದ ಮಹತ್ತ್ವವುಳ್ಳ ಆ ಸಭೆಯ ಮಧ್ಯಭಾಗದಲ್ಲಿ ದೇವತಾಸಾರ್ವಭೌಮನಾದ ಮಹಾದೇವನ ಮುಕ್ತಿಯ ಗದ್ದುಗೆಯಾದ ದಿವ್ಯಸಿಂಹಾಸನವು ೧ ಲಕ್ಷಯೋಜನದಗಲವಾಗಿ ತೇಜೋಮಂಡಲದಂತೆ ವಿರಾಜಿಸುತ್ತಿರುವುದು. ಅದಕ್ಕೆ ಅಣಿಮಾದ್ಯಷ್ಟಸಿದ್ಧಿಗಳೇ ಎಂಟುಪಾದಗಳಾಗಿರುವುವು. ಆ ಮಹಾಪೀಠದಮೇಲೆ ಮೃದುಳತಮವಾದ ಚಿತ್ರಾಸನವು ಹಾಸಲ್ಪಟ್ಟಿರುವುದು. ಅದರಮೇಲೆ ಸರ್ವಮಂಗಳವಿಗ್ರಹನೂ ಚಂದ್ರಶೇಖರನೂ ಸೃಷ್ಟಿಸ್ಥಿತಿಪ್ರಳಯಕರನೂ ಬ್ರಹ್ಮವಿಷ್ಣ್ವಾದಿಹೃದಯಮಧ್ಯವಾಸಿಯೂ ಆದ ಪರಶಿವನು ಪಾರ್ವತೀಸಮೇತನಾಗಿ ಕೋಟಿಸೂರ್ಯತೇಜಸ್ಸಿನಿಂದ ಝಗಝಗಿಸುತ್ತ ಮೂರ್ತಿಗೊಂಡಿರುವನು. ಆ ದೇವದೇವೋತ್ತಮನ ಪೂರ್ವಭಾಗದ ತತ್ಪುರುಷಮುಖವು ಹೊಂಬಣ್ಣವಾಗಿಯೂ, ದಕ್ಷಿಣಭಾಗದ ಅಘೋರಮುಖವು ಇಂದ್ರನೀಲವರ್ಣವಾಗಿಯೂ, ಉತ್ತರಭಾಗದ ವಾಮದೇವಮುಖವು ರತ್ನವರ್ಣವಾಗಿಯೂ, ಪಶ್ಚಿಮದ ಸದ್ಯೋಜಾತಮುಖವು ಮುಕ್ತಾಫಲದಂತೆ ಶುಭ್ರವರ್ಣವಾಗಿಯೂ, ಊರ್ಧ್ವಭಾಗದಲ್ಲಿರುವ ಈಶಾನವಕ್ತ್ರವು ಸ್ಫಟಿಕವರ್ಣವಾಗಿಯೂ ಶೋಭಿಸುತ್ತಿರಲು, ಆಯಾಮುಖಗಳಮುಂದೆ ಆಯಾ ಹೆಸರಿನ ಪಂಚಬ್ರಹ್ಮಪುರುಷರು ನಿಂತು ಸದ್ಯೋಜಾತಾದಿ ಆಯಾ ಮಂತ್ರಗಳಿಂದ ಸ್ತುತಿಸುತ್ತಿರುವರು. ಹೀಗೆ ೫ ಮುಖಗಳಿಂದಲೂ ೧೫ ಕಣ್ಣುಗಳಿಂದಲೂ, ೧೦ ಭುಜಗಳಿಂದಲೂ ಮೆರೆಯುತ್ತಿರುವ ಶಂಕರನು ಕಂಠದಲ್ಲಿ ವಿಷವನ್ನೂ ಕೈಯಲ್ಲಿ ಶೂಲವನ್ನೂ, ಸರ್ಪಾಭರಣವನ್ನೂ, ಗಜಚರ್ಮದ ಹೊದ್ದಿಕೆಯನ್ನೂ, ವ್ಯಾಘ್ರಚರ್ಮದ ಉಡೆಯನ್ನೂ, ರುಂಡಮಾಲೆಯನ್ನೂ ಧರಿಸಿ, ಭಸ್ಮಲಿಪ್ತಾಂಗನಾಗಿ ಒಲಗಂಗೊಂಡಿರುವನು. ಆ ಮಹೇಶ್ವರನ ಎಡಗಡೆಯ ಅರ್ಧಪೀಠದಲ್ಲಿ ಜಗತ್ಪಾವನೆಯಾದ ಶಂಕರಿಯು ರತ್ನಮುಕ್ತಾಹಾರಗಳನ್ನೂ, ಕಟಕಕುಂಡಲನೂಪುರಕಾಂಚೀಪ್ರಮುಖಾಭರಣಗಳನ್ನೂ, ಪೀತಾಂಬರವನ್ನೂ ಧರಿಸಿ, ಹರಿದ್ರಾಕುಂಕುಮಶೋಭಿ

ತೆಯಾಗಿ ಮಂದಾರಕುಸುಮಮಾಲಿಕೆಯಂ ಮುಡಿದು, ಪ್ರಸನ್ನಕಟಾಕ್ಷ ದಿಂದಾಶ್ರಿತಜನರನ್ನನುಗ್ರಹಿಸುತ್ತ ಬಲಗಡೆಗೆ ತುಸುಬಗ್ಗಿದ ಶಿರೋಭಾಗೆ ಯಾಗಿ, ಸರ್ವಾವಯವಲಾವಣ್ಯಸೌಂದರ್ಯಸೌಕುಮಾರ್ಯ ಶೃಂಗಾರಸರ್ವಸ್ವದಂತೆ ರಾಜಿಸುತ್ತಿದ್ದಳು. ವಿದ್ಯಾಧರಕಿನ್ನರಕಿಂಪುರುಷ ಗರುಡ ಗಂಧರ್ವಾದಿದೇವನಿತಂಬಿನೀನಿಕುರುಂಬವು ಸಾಲುಸಾಲಾಗಿ ನಿಂತು ಮಹಾದೇವಿಯನ್ನೋಲೈಸುತ್ತಿದ್ದಿತು. ಲಕ್ಷ್ಮೀಸರಸ್ವತೀ ಶಚೀವಮುಖಾದಿದೇವಾಂಗನಾಪ್ರಮುಖೆಯರು ಚಾಮರವ್ಯಜನಾದಿಗಳಿಂದುಪಚರಿಸುತ್ತ ಮಗ್ಗುಲಲ್ಲಿದ್ದರು. ಶಿವನ ಪೀಠದ ಎಡಗಡೆಯಲ್ಲಿ ಗರುಡಗಳನ್ನೇರಿ ಶಂಖಚಕ್ರಗಳನ್ನು ಪಿಡಿದು ಪೀತಾಂಬರವನ್ನು ಧರಿಸಿರುವ ನೀಲವರ್ಣದ ಕೋಟಿ ವಿಷ್ಣುಗಳೂ, ಬಲಗಡೆಯಲ್ಲಿ ಹಂಸವನ್ನೇರಿ ಕಮಂಡಲು ದಂಡಗಳನ್ನು ಹಿಡಿದು ನಾಲ್ಕು ಮುಖಗಳನ್ನು ಹೊಂದಿದ ರಕ್ತವರ್ಣದ ಕೋಟಿಬ್ರಹ್ಮರುಗಳೂ ಕುಳಿತಿದ್ದರು. ಆ ಬ್ರಹ್ಮರ ಬಲಕ್ಕೆ ಜಟಾಧಾರಿಗಳಾಗಿ ಶಾಂತಮೂರ್ತಿಗಳಾಗಿ ಭಸ್ಮಲಿಪ್ತಾಂಗರಾಗಿ ನಾರುಡೆಗಳನ್ನುಟ್ಟು ಜಪಮಾಲಿಕೆಯಂ ಪಿಡಿದು ಮಂತ್ರಪುನಶ್ಚರಣವನ್ನು ಮಾಡುತ್ತಿರುವ ಜ್ಞಾನಮಯರಾದ ಮುನಿಗಳ ಸ್ತೋಮವು ನಿರ್ಮಲವಾಗಿ ಮೂರ್ತಿಗೊಂಡಿದ್ದಿತು. ಪಂಚಮುಖ ದಶಭುಜ ಫಾಲನೇತ್ರ ಫಣಿಹಾರ ಮೊದಲಾದುವುಗಳಿಂದ ಶಿವಸಮಾನರೂಪನ್ನು ಧರಿಸಿರುವ ರುದ್ರರ ಕೋಟಿಯು ಶಿವನಿದಿರಿಗೆ ಮೂರ್ತಿಗೊಂಡಿದ್ದಿತು. ನಂದಿ, ಭೃಂಗಿ, ವೀರಭದ್ರ, ಗಣೇಶ, ಷಣ್ಮುಖ, ನೀಲಲೋಹಿತ, ಮಹಾಕಾಳ, ರುಂಡಧರ, ಗಜಕರ್ಣ, ಘಂಟಾಕರ್ಣ, ಗೋಕರ್ಣ, ಶಂಕುಕರ್ಣ, ವಿರೂಪಾಕ್ಷ, ಗಗನಾಂಗ, ಧೂಮ್ರಾಂಗ, ಮೊದಲಾದ ಮಹಾಪ್ರಮಥರುಗಳು ಒಬ್ಬೊಬ್ಬರು ಒಂದೊಂದು ಪದ್ಮಸಂಖ್ಯಾಕವಾದ ತಮ್ಮ ಸೇನೆಯೊಡನೆ ಕೂಡಿ ಓಲೈಸುತ್ತಿದ್ದರು. ಪರ್ವತಾಭರಣ, ವಿಕಟಾಂಗಭೈರವ, ಚಂಡಕೀರ್ತಿ, ಕಂಕಾಳಧರ ಮೊದಲಾದ ಶೂರಭಟರು ಒಬ್ಬೊಬ್ಬರು ಇಪ್ಪತ್ತು ಪದ್ಮಸೇನೆಯೊಡನೆಯೂ, ಕಾಲಮರ್ದನ, ವಜ್ರಕಾಯ, ರುಂಡಾಭರಣ ಮೊದಲಾದ ಮಹಾಭಟರು ಒಬ್ಬೊಬ್ಬರು ಅರುವತ್ತು ಪದ್ಮಸೇನೆಯೊಡನೆಯೂ, ಸೋಮಪಾತನ, ಸೂರ್ಯಪಾತನ, ಅಂಡಾಭರಣ, ಧೂಮಕೇತು, ಸಹಸ್ರಕರ್ಣ, ರೇಣುಕ, ದಾರುಕ, ಮೊದಲಾದ ಶಿವಗಣಾಧೀಶರು

ಒಬ್ಬೊಬ್ಬರು ನೂರು ಕೋಟಿ ಸೈನಿಕರೊಡನೆಯೂ,ನಕ್ಷತ್ರಕ್ಯಂತನ, ಮಹಾಕೇಶ, ಶತಸಹಸ್ರಾಕ್ಷ, ಅಂಗಾರಭಕ್ಷಣ, ವಿಶ್ವವಮಾಲಿ, ವಜ್ರದಂತ ಮೊದಲಾದ ಕ್ಷೇತ್ರಪಾಲಕರೊಬ್ಬೊಬ್ಬರು ಏಳುನೂರು ಪದ್ಮಸೇನೆಯೊಡನೆಯೂ, ದಂಡಧರ, ದಂಡಬಾಹು, ದಂಡನಾಥ, ಮದೋದ್ದಂಡ ಮೊದಲಾದ ಸೇನಾಪ್ರಮುಖರು ಒಬ್ಬೊಬ್ಬರು ಹತ್ತರ್ಬುದ ಸೇನೆಯೊಡನೆಯೂ ಕೂಡಿ ಶಿವನಾಜ್ಞೆಯನ್ನೇ ನಿರೀಕ್ಷಿಸಿಕೊಂಡು ಸೇವಿಸುತ್ತಿದ್ದರು. ವಾಮ ದೇವರು, ಜ್ಯೇಷ್ಠರು, ಶ್ರೇಷ್ಠರು, ಕಲವಿಕರಣರು, ಕಲರು, ಬಲರು, ಬಲಪ್ರಮಥರು, ಮನೋನ್ಮನರು, ಸರ್ವಭೂತದಮನರು ಮೊದಲಾದ ಅಸಂಖ್ಯರುದ್ರಗಣವು ತಮ್ಮ ತಮ್ಮ ಹೆಸರಿನ ಶಕ್ತಿಯರೊಡನೆಯೂ, ಅಪರಿಮಿತವಾದ ತಮ್ಮ ಗಣಸೇನೆಯೊಡನೆಯೂ ಕೂಡಿ, ಆ ಸಭೆಯಲ್ಲಿ ಓಲೈಸುತ್ತಿದ್ದರು. ಅವರಲ್ಲದೆ ಅಷ್ಟವಸುಗಳು, ನವಗ್ರಹಗಳು, ಏಕಾದಶರುದ್ರರು, ಚತುರ್ದಶಮನುಗಳು, ತಂಡತಂಡವಾಗಿ ಅಸಂಖ್ಯಾಕವಾದ ತಮ್ಮ ಸೇನೆಯೊಡನೆ ಕೂಡಿ ಬಂದು ಕಾದಿದ್ದರು. ಮತ್ತೂ ಅಷ್ಟದಿಕ್ಪಾಲಕರು ತಮ್ಮ ತಮ್ಮ ಕೋಟ್ಯನುಕೋಟಿ ಸೈನಿಕರಸ್ತೋಮದಿಂದ ಕೂಡಿಯೂ, ಸುತನತೋರಗಸಿದ್ಧವಿದ್ಯಾಧರಗರುಡಗಂಧರ್ವಕಿನ್ನರಕಿಂಪುರುಷಗುಹ್ಯಕಪಿಶಾಚಾಪ್ಸರರುಗಳು ಕೋಟಿಗಟ್ಟಲೆಯಾಗಿ ಗುಂಪನ್ನು ಕಟ್ಟಿ ತಮ್ಮ ತಮ್ಮ ಆಯುಧಗಳನ್ನು ಹಿಡಿದೂ ನಿಂತಿದ್ದರು. ಬೆಟ್ಟ, ಮರ, ವೃಗ, ಪಕ್ಷಿ ಮೊದಲಾದ ಚರಾಚರವಸ್ತುಗಳಲ್ಲಿ ಅಗ್ರಗಣ್ಯವಾದುವುಗಳೆಲ್ಲ ಕೋಟ್ಯನುಕೋಟಿಯಾಗಿ ಬಂದು ಸೇವಿಸುತ್ತಿದ್ದುವು. ಆ ಮಹಾ ಶಿವಸಭೆಯ ವೈಭವವನ್ನು ವರ್ಣಿಸುವುದಕ್ಕೆ ಸಾವಿರ ನಾಲಿಗೆಗಳುಳ್ಳ ಆದಿಶೇಷನಿಗೂ ಕೂಡ ಶಕ್ಯವಲ್ಲ. ಎಲೆ ಸಿದ್ಧರಾಮೇಶನೇ ! ಜಗನ್ನೇಕಶರಣ್ಯನೂ, ಜಗದೇಕವಂದ್ಯನೂ, ದೇವದೇವೋತ್ತಮನೂ, ಅಖಿಲಾಂಡಕೋಟಿಬ್ರಹ್ಮಾಂಡನಾಯಕನೂ ತಾನೇ ಎಂಬುದನ್ನು ಈ ಮಹಾಸಭಾಧಿಪತ್ಯದಿಂದಲೇ ಜಗತ್ತಿಗೆಲ್ಲ ಬಿತ್ತರಿಸುತ್ತಿರುವ ಅನಂತಮಹಿಮಮೂರ್ತಿಯಾದ ಶ್ರೀ ಪರಮೇಶ್ವರನು ಪ್ರಸನ್ನಮುಖಮಂಡಲನಾಗಿ ಕಟಾಕ್ಷದಿಂದ ಕರುಣಾರಸಪ್ರವಾಹವನ್ನು ಕೆದರುತ್ತ ಭಕ್ತವಾತ್ಸಲ್ಯವಂ ಪ್ರಕಟಿಸುತ್ತಿರಲು, ಸಭೆಯಲ್ಲಿದ್ದವರೆಲ್ಲರೂ ತಮ್ಮ ತಮ್ಮ ಊಳಿಗವನ್ನು ಮಾಡುತ್ತಿದ್ದರು. ಹೇಗೆಂ

ದರೆ— ಓಂಕಾರಪ್ರಣವವೇ ಪರಶಿವನಿಗೆ ಪೀಠವು. ಜಗಜ್ಜನನಿಯೇ ಪಟ್ಟ ಮಹಿಷಿಯು, ಚಂದ್ರ ಆದಿಶೇಷರುಗಳೇ ಆಭರಣವು, ಭಸ್ಮವೇ ಸುಗಂಧವು, ಆನೆಯ ಚರ್ಮವೇ ವಸ್ತ್ರವು, ಮುಕ್ತಿಯೇ ಮೃಷ್ಟಾನ್ನಭೋಜನವು, ತತ್ತ್ವರಸಾಸ್ವಾದನವೇ ತಾಂಬೂಲಚರ್ವಣವು, ಕಿವಿಯಲ್ಲಿ ಕೇಳಿದುವೆಲ್ಲವೂ ಕಂಬಳಾಶ್ವತರ ಗಾನೋಪಚಾರವು ಆಗಿರಲಾಗಿ, ಈ ವಿಧವಾದ ಅಷ್ಟಭೋಗಭಾಗ್ಯದಿಂದ ಕೂಡಿ ಮೆರೆಯುತ್ತಿದ್ದನು. ಷಣ್ಮುಖನು ಯುವರಾಜಪಟ್ಟದ ಮಗನು, ವಿನಾಯಕನು ಶಿವಗಣದ ದಳವಾಯಿ, ವೀರಭದ್ರನು ದುಷ್ಟನಿಗ್ರಹಶಿಷ್ಟಪರಿಪಾಲನ ಮಾಡುವ ದಂಡಾಧಿಕಾರಿ, ಬ್ರಹ್ಮನು ಉತ್ಪತ್ತಿಕರ್ತನು, ಸೂರ್ಯನು ಜ್ಯೋತಿಷ್ಕನು ಆಗಿರಲು, ಶಿವನು ಈ ಪೂರ್ವೋಕ್ತ ರಾಜವೈಭವದಿಂದೊಪ್ಪಿದ್ದನು. ವಿಷ್ಣುವೇ ಮುಖ್ಯಾಮಾತ್ಯನಾಗಿ, ಬ್ರಹ್ಮಾಂಡಗಳೇ ದೇಶಗಳಾಗಿ, ಮೇರುಮಂದರಕೈಲಾಸಗಳೇ ಗಿರಿದುರ್ಗಗಳಾಗಿ, ಮಹಾಶಿವಧರ್ಮವೇ ಬೊಕ್ಕಸವಾಗಿ, ಶಿವಗಣಂಗಳೇ ಪರಿವಾರವಾಗಿ, ಶಿವಜ್ಞಾನವೇ ಬಲವಾಗಿ, ಕುಬೇರನೇ ಮಿತ್ರನಾಗಿ ಇರಲು, ದೇವಾಧಿರಾಜನು ಈ ಪೂರ್ವೋಕ್ತ ಸಪ್ತಾಂಗದಿಂದ ರಾಜಿಸುತ್ತಿದ್ದನು. ನಂದಿಮಹಾಕಾಳರು ಚಡೀಮರಿಗಳು, ವೇದಗಳು ಸ್ತುತಿಪಾಠಕರು, ರಂಭಾದಿಅಪ್ಸರಸ್ತ್ರೀಯರು ನರ್ತಕಿಯರು, ಭೃಂಗಿಯು ಪಾಸ್ಯಗಾರನು, ಬೃಹಸ್ಪತಿಯು ಪುರೋಹಿತ, ಶಿವಭಕ್ತರೇ ನಂಟರು, ವಿಶ್ವಕರ್ಮನೇ ಶಿಲ್ಪಿಯು, ಕೃಪೆಯೇ ನಿಧಿ, ಚಿತ್ರಗುಪ್ತರೇ ಗಣಕರು (ಮುತ್ಸದ್ದಿಗಳು) ಜ್ಞಾನಿಗಳೇ ಸಂಧಿವಿಗ್ರಹಕಾರರು ಆಗಿ, ಊಳಿಗವನ್ನು ಮಾಡುತ್ತಿದ್ದರು. ಇಂದ್ರನು ಚಾಮರವನ್ನು ಹಾಕುವವನು, ಅಗ್ನಿಯು ಅಡುಗೆಯವನು, ಯಮನು ಪಾಪ ಪುಣ್ಯ ವಿಚಾರಕನು, ನಿಋತಿಯು ಹಾವುಗೆಯನ್ನು ಹಿಡಿವವನು, ವರುಣನು ನೀರ್ಗಿಂಡಿಯವನು, ವಾಯುವು ಬೀಸಣಿಗೆಯವನು, ಕುಬೇರನು ತಾಂಬೂಲದವನು, ಈಶಾನನು ಗಂಧದ್ರವ್ಯವನ್ನೊಪ್ಪಿಸುವವನು ಆಗಿ ಸೇವಿಸುತ್ತಿದ್ದರು. ವರ್ಷ ಋತು ಮಾಸ ನಕ್ಷತ್ರ ತಿಥಿ ಚಂದ್ರ ಮೇಷಗಳು ಜಗತ್ತಿಗೆ ಆಯಾಯ ಕಾಲೋಚಿತವಾಗಿ ಮಳೆ ಬೆಳೆಗಳನ್ನುಂಟುಮಾಡಿ ಸುಖಪಡಿಸುವ ಪ್ರಜೆಗಳಾಗಿದ್ದರು. ಆ ಮಹಾದೇವನಿಗೆ ದಿಗ್ಗಜಗಳ ಸ್ತೋಮವೂ, ಉಚ್ಚೈಶ್ರವಸ್ಸುಗಳ ತಿಂ

ತಿಣಿಯೂ, ಪುಷ್ಪವಿಮಾನಾರೂಢರಾದ ಸುರಭಟರ ಗುಂಪೂ, ಸುರನ ರೋರಗಕಿನ್ನರಾದಿಗಳ ಸಮೂಹವೂ, ಚತುರಂಗ ಸೈನ್ಯವಾಗಿದ್ದುವು. ಮೇರುಪರ್ವತವು ಧನುಸ್ಸಾಗಿಯೂ, ತ್ರಿಶೂಲವೇ ಆಯುಧವಾಗಿಯೂ, ವ್ಯಾಘ್ರಾಜಿನವೇ ವೀರಕಾಸೆಯಾಗಿಯೂ ಇದ್ದುವು. ಸಪ್ತ ಸಮುದ್ರಗಳು ಶಿವನ ಉಗ್ರಾಣದ ಮನೆಯು,ಸಪ್ತ ದ್ವೀಪಗಳೇ ಶಿವನ ಕುದುರೆಗಳನ್ನು ಸುತ್ತಿಸುವಬೈಲು,ಸ್ವಾದೂದಕಸಮುದ್ರವು ಹರನಕ್ರೀಡಾಸರೋವರವು,ರೋಹಣಾಚಲವು ರತ್ನವನ್ನು ತುಂಬಿದ ಬೊಕ್ಕಸವು, ಕಾಮಧೇನು ಸಮೂಹವು ಶಿವನ ಕರೆವ ಹಟ್ಟಿಯ ದನಗಳು ಆಗಿದ್ದುವು. ಮನ್ಮಥನೆಂಬ ದುಷ್ಟಶತ್ರುವು, ಅಷ್ಟಮದಗಳು—ಸಪ್ತವ್ಯಸನಗಳು—ಅರಿಷಡ್ವರ್ಗ— ಪಂಚೇಂದ್ರಿಯಗಳು— ಕರಣಚತುಷ್ಟಯ—ಇವುಗಳೆಂಬ ಕಳ್ಳಬಿಳ್ಳಕಾಕ ಪೋಕರನ್ನು ಕಟ್ಟಕೊಂಡು ಲೋಕಕ್ಕೆಲ್ಲ ಹಿಂಸಕನಾಗಿರುತ್ತಿರಲು, ಆ ಭ್ರಷ್ಟನನ್ನು ಗೆದ್ದು ಶಿವತತ್ತ್ವನಿಷ್ಠೆಯನ್ನು ಜಗತ್ತಿನಲ್ಲೆಲ್ಲ ಸ್ಥಾಪಿಸುವುದಕ್ಕಾಗಿ ಪರಶಿವನು ರಾಜ್ಯಭಾರ ಮಾಡುತ್ತಿರುವಂತೆ ತೋರುತ್ತಿದ್ದನು. ಪರಶಿವನು ಪೂರ್ವೋಕ್ತವಾದ ಬ್ರಹ್ಮಾಂಡ ಸಾರ್ವಭೌಮಪದವಿಯಿಂದೊಪ್ಪುತ್ತ, ಜಗತ್ತಿನ ಚರಾಚರವಸ್ತುವರ್ಗಗಳನ್ನೆಲ್ಲ ಅಲ್ಲಲ್ಲೇ ಪರಿಪಾಲಿಸುವುದಕ್ಕೆ ಬೇರೆ ಬೇರೆ ಅವಸರವನ್ನು ಗೊತ್ತುಮಾಡಿ, ಆ ನಾಯಕರೆಲ್ಲರಿಂದಲೂ ತಾನು ಸೇವಿಸಿಕೊಳ್ಳುತ್ತ ಪರಮಸುಖಿಯನಾಗಿ ಒಪ್ಪಿದ್ದನೆಂದು ಚೆನ್ನಬಸವೇಶನು ಅಪ್ಪಣೆಕೊಡಿಸಿದನೆಂಬಲ್ಲಿಗೆ ಏಸೆ ಅಧ್ಯಾಯವು

ಸಂಪೂರ್ಣವು.

ಏಸೆ ಅಧ್ಯಾಯವು.

ದಕ್ಷಯಾಗವು.

ಎಲೆ ಸಿದ್ಧರಾಮೇಶನೆ ಕೇಳು, ದಕ್ಷಬ್ರಹ್ಮನು ತನ್ನ ಹೊಟ್ಟೆಯಲ್ಲಿ ಹುಟ್ಟಿದ ೬೦ ಮಂದಿ ಹೆಣ್ಣುಮಕ್ಕಳನ್ನೂ ಅವರ ಗಂಡಂದಿರನ್ನೂ ನೋಡಿ ಬರಬೇಕೆಂದು ಯೋಚಿಸಿ, ಅತ್ರಿ, ಭೃಗು, ಧರ್ಮ ಮೊದಲಾದ ತನ್ನ ಅಳಿಯಂದಿರ ಪಟ್ಟಣಗಳಿಗೆ ಹೊರಟನು. ಅವರುಗಳು ತಮ್ಮ ಮಾವನು

ಬರುವನೆಂಬ ಸುದ್ದಿಯನ್ನು ಕೇಳಿ, ಬಹು ಸಂತೋಷದಿಂದ ತಮ್ಮ ತಮ್ಮ ಪಟ್ಟಣವನ್ನೆಲ್ಲ ಗುಡಿ ತೋರಣ ಮೊದಲಾದುವುಗಳಿಂದಲಂಕರಿಸಿ, ಕಲಶ ಕನ್ನಡಿಗಳನ್ನು ಹಿಡಿದ ಮುತ್ತೈದೆಯರೊಡಗೂಡಿ ಬಂದು ಇದಿರ್ಗೊಂಡು, ಬಹು ಸಂಭ್ರಮದಿಂದ ಮನೆಗೆ ಕರೆದುಕೊಂಡು ಹೋಗಿ ಉಚಿತಾಸನದಲ್ಲಿ ಕುಳ್ಳಿರಿಸಿ, ಅತ್ಯಂತ ಭಕ್ತಿಯಿಂದ ಅರ್ಘ್ಯಪಾದ್ಯಾಚಮನಗಳನ್ನಿತ್ತು ಸತ್ಕರಿಸಿದರು. ಹೆಣ್ಣುಮಕ್ಕಳು ತಮ್ಮ ತಂದೆಯು ಬಹುದಿನಕ್ಕೆ ಬಂದನೆಂಬ ಆನಂದದಿಂದ ಉಬ್ಬಿ ಸಂತೋಷಾಶ್ರುಗಳನ್ನು ಕಣ್ಣಿನಲ್ಲಿ ತಂದು ಪಿತೃವಿನ ಬಳಿಗೆ ಬಂದು ಪಾದಕ್ಕೆ ನಮಸ್ಕರಿಸಿದರು. ದಕ್ಷನು ಅವರಿಗೆ ಆಶೀರ್ವದಿಸಿ, ವಾತ್ಸಲ್ಯದಿಂದ ಎತ್ತಿ ತಬ್ಬಿ, ಅವರಿಗಾಗಿ ತಂದಿದ್ದ ವಸ್ತ್ರಾಭರಣಾದಿಗಳನ್ನು ಕೊಟ್ಟು, ಕೆಲ ಕೆಲ ದಿನ ಅವರ ಮನೆಯಲ್ಲಿದ್ದು ಬೀಗನ ಉಡುಗೊರೆಗಳನ್ನು ಮಾಡಿಸಿಕೊಂಡು, ಸಂತೋಷಪಟ್ಟು, ಬಳಿಕ "ಈ ಅಳಿಯಂನಿಗ ಮನೆಯಲ್ಲೆಲ್ಲ ಸತ್ಕಾರಗೊಂಡುದಾಯಿತು. ಇನ್ನೊಬ್ಬ ಮಗಳ (ಶಿವನ ಹೆಂಡತಿ ದಾಕ್ಷಾಯಣಿಯ) ಮನೆಯಿರುವುದು; ಅಲ್ಲಿಗೂ ಹೋದರೆ ಇವೆಲ್ಲಕ್ಕಿಂತಲೂ ಅತಿಶಯವಾದ ಮರ್ಯಾದೆಯು ನಡೆಯಬಹುದು" ಎಂದು ಯೋಚಿಸಿ, ಅಲ್ಲಿಂದ ಹೊರಟು ಕೈಲಾಸದ ಕಡೆಗೆ ತೆರಳಿದನು. ಸಕಲ ವಿಭವಾದ ಪುಣ್ಯದ ಬೆಳಸಿನ ಕೊಟ್ಟಾರವೋ, ವೇದಾಗಮ ಪುರಾಣಾರ್ಥಗಳ ಮಂದಿರವೋ, ಶಿವಯೋಗಾನಂದ ಸಮುದ್ರವೋ, ಸರ್ವ ಮುನಿಶ್ರೇಷ್ಠರ ತಪಃಫಲದ ಆವಾಸಭೂಮಿಯೋ, ಸಕಲ ಗ್ರಹನಕ್ಷತ್ರಾದಿಗಳ ತೇಜೋಮಂದಿರವೋ, ಸಕಲ ನಿಷ್ಕಲವಾದ ಪರತತ್ತ್ವದ ರಾಜಗೃಹವೋ ಎಂಬಂತಿರುವ ಶಿವಲೋಕವು ದಕ್ಷನ ಕಣ್ಣಿಗೆ ಕಾಣಿಸಿತು. ಇಂದ್ರಾದಿದಿಕ್ಪಾಲಕರ ಮತ್ತು ಅನಂತಬ್ರಹ್ಮವಿಷ್ಣ್ವಾದಿಗಳ ವಾಹನಗಳಾದ ಬಿಳಿಯಾನೆ ತಗರು ಕೋಣ ಮೊದಲಾದುವೂ, ಹಂಸಗರುಡಗಳೂ, ಲೆಕ್ಕವಿಲ್ಲದಷ್ಟು ಸಾಲುಸಾಲಾಗಿ ಪಟ್ಟಣದ ಹೊರಗೆ ಕಟ್ಟಿರುವುದನ್ನು ನೋಡಿ, ಅಳಿಯನ ಅಪರಿಮಿತೈಶ್ವರ್ಯಕ್ಕೆ ಬೆರಗಾದನು. ಆ ಪಟ್ಟಣದ ಕೋಟೆಬಾಗಿಲಿಂದ ಹೋಗಿಬರುತ್ತಿರುವವರಲ್ಲಿ ಎತ್ತನೋಡಿದರೂ ಐದುಮೊಗದವರು ಹತ್ತುತೋಳಿನವರು ಹಣೆಗಣ್ಣಿನವರು ಸರ್ಪಾಭರಣರು ಚಂದ್ರಶೇಖರರುಗಳು ಅನಂತವಾಗಿ ಕಾಣಿಸುತ್ತಿದ್ದರು. ಇವರೆಲ್ಲರನ್ನೂ

ನೋಡಿ ಆಶ್ಚರ್ಯಪಡುತ್ತ, ಪುರದ್ವಾರದ ಒಳಗೆ ಬಂದು, ತನ್ನ ವಿಮಾನದಿಂದಿಳಿದನು. ಎಷ್ಟೋಮಂದಿ ಮನುಮುನಿಗಳು ದ್ವಾರಪ್ರವೇಶವಿಲ್ಲದೆ ಕಾದು ನಿಂತಿದ್ದರು. ದ್ವಾರಪಾಲಕರು ಈತನನ್ನು ಕಂಡು ಶಿವನ ಮೂವನೆಂದರಿತು ತಡೆಯದೆ ಬಿಟ್ಟು ಬಿಟ್ಟರು. ಬಂದಾದಮೇಲೊಂದರಂತೆ ಬಾಗಿಲುಗಳನ್ನೆಲ್ಲ ಕಳೆದು ಒರಲು, ಇದಿರಿಗೆ ಶಿವನ ಸಭಾಮಂಟಪವು ಕಾಣಿಸಿತು. ವೇದಾಗಮೋಪನಿಷತ್ತುಗಳ ಘೋಷವೂ ವಾದ್ಯದ ಮೊರೆತವೂ ಸ್ತುತಿಪಾಠಕರ ಗಂಭೀರಧ್ವನಿಯೂ ಮುನಿಗಳ ಜಯಜಯಕಾರವವೂ ಕೂಡಿ ಸಭೆಯು ಮಹಾನಾದಮಯವಾದುದೆಂಬುದನ್ನು ನಿದರ್ಶನಪಡಿಸುತ್ತಿದ್ದಿತು. ವಿಷ್ಣುಬ್ರಹ್ಮೇಂದ್ರಾದಿಗಳ ಮಧ್ಯದಲ್ಲಿ ಉನ್ನತಾಸನದಮೇಲೆ ಪತ್ನೀಸಮೇತನಾಗಿ ಕುಳಿತು ಸಕಲದೇವತಾನಿಕುರುಂಬದಿಂದ ಸೇವೆಗೊಳ್ಳುತ್ತಲಿರುವ ಪರಮಶಿವನನ್ನು ದಕ್ಷಬ್ರಹ್ಮನು ಕಂಡನು. ಆ ಮಹಾಶಿವಸಭೆಯು ಬಂದುನೂರುಲಕ್ಷಯೋಜನದ ವೈಶಾಲ್ಯವುಳ್ಳದಾಗಿದ್ದರೂ, ಬಂದಂಗುಲದಷ್ಟಾದರೂ ಬಿಡುವಿಲ್ಲದೆ ಸುರಾಸುರೋರಗಯಕ್ಷಕಿನ್ನರಕಿಂಪುರುಷಮುನಿವಿದ್ಯಾಧರಾದಿಗಳಿಂದ ದಟ್ಟವಾಗಿದ್ದಿತು. ಆ ಸಭೆಯಲ್ಲಿ ನುಗ್ಗುವುದಕ್ಕೆ ಸ್ಥಲವಿಲ್ಲದೆ ದಕ್ಷನು ದೂರದ ಬಂದು ಮೂಲೆಯಲ್ಲೇ ನಿಲ್ಲಬೇಕಾಯಿತು. ಹಾಡುವ ತುಂಬುರನಾರದರಿಂದಲೂ, ಕುಣಿಯುವ ಭೃಂಗೀಶನಿಂದಲೂ, ಸಭೆಯವರನ್ನು ಎಚ್ಚರಿಸುವ ನಂದಿಮಹಾಕಾಳರಿಂದಲೂ, ಚಾಮರವನ್ನು ಬೀಸುವ ದೇವನಾರೀರತ್ನಗಳಿಂದಲೂ, ಸ್ತುತಿಸುವ ಮುನಿಗಳಿಂದಲೂ, ಕೈಕಟ್ಟಿ ಓಲೈಸುವ ಹರಿಬ್ರಹ್ಮರಿಂದಲೂ, ಸೇವೆಗೊಂಡು ಮೆರೆಯುತ್ತಿರುವ ಜಗದೇಕಾರಾಧ್ಯನ ಮಹಾವೈಭವವನ್ನು ನೋಡಿನೋಡಿ ದಕ್ಷನು ಬೆರಗಾಗಿ ತಲೆದೂಗಿದನು. ಮತ್ತೂ ಅಷ್ಟೊಂದು ವಿಭವದಲ್ಲಿರುವ ತನ್ನ ಮಗಳೂ ಅಳಿಯನೂ ಕೂಡ ಇಂತಹ ದೊಡ್ಡ ಸಭೆಗೆ ತಾನು ಬಂದಿದ್ದರೂ ತನ್ನನ್ನು ಸ್ವಲ್ಪವಾದರೂ ಮರ್ಯಾದಿಸದೆ ಅಲಕ್ಷ್ಯದಿಂದ ಕುಳಿತಿದ್ದುದನ್ನು ಕಂಡು ಕೋಪಾವಿಷ್ಟನೂ ಆದನು. "ಇಷ್ಟೊಂದು ಜನದವುರೆ ನನ್ನನ್ನು ಅವಮರ್ಯಾದೆಗೊಳಿಸಿದ ಈ ದುರಹಂಕಾರಿ ಶಿವನನ್ನೂ ಇವನ ಪತ್ನಿಯನ್ನೂ ನನ್ನ ಅಳಿಯ—ನನ್ನ ಮಗಳು—ಎಂದು ಇನ್ನು ಪರಿಭಾವಿಸಬಹುದೆ? ಇಂಥ ಸುತೆಯು ನನ್ನ ಹೊಟ್ಟೆಯಲ್ಲಿ ಜನಿಸಬಹುದೆ? ಐ

ಶ್ವರ್ಯವುದವು ಈ ದಂಪತಿಗಳನ್ನು ಕಣ್ಣಾಗ್ಣಿದಂತೆ ಮಾಡಿರುವುದು ! ಇವರ ಬಾಂಧವ್ಯವು ನನಗೆ ಸಾಕು ; ಇನ್ನು ಇವರ ದುಷ್ಟಸಂಪತ್ತಿಗೆ ಕೊನೆಗಾಣಿಸುವುದೇ ನನಗೆ ಕರ್ತವ್ಯವು ; ಅದಕ್ಕಾಗಿಯೇ ಈಗ ತಡಮಾಡದೆ ಒಂದು ಯಾಗವನ್ನು ಮಾಡುವುದೇ ಯೋಗ್ಯವಾದುಪಾಯವು" ಎಂದು ಯೋಚಿಸಿ, ಮನಸ್ಸಿಗೆ ತೋಚಿದಂತೆಲ್ಲ ಶಿವನನ್ನು ನಿಂದಿಸುತ್ತ, ಥಟ್ಟನೆ ಕೈಲಾಸದಿಂದ ಹಿಂತಿರುಗಿ ತನ್ನ ಪಟ್ಟಣವನ್ನು ಸೇರಿದನು. ತನ್ನ ಅಂತರಂಗಕ್ಕೆ ಸೇರಿದ ಮಂತ್ರಾಲೋಚಕರನ್ನು ಕೂಡಲೇ ಕರಸಿದನು. " ನೋಡಿದಿರಾ ಆ ಯಾಚಕನು ನನಗೆ ಮಾಡಿದ ಮಾಟವನ್ನು ! " ಎಂದು, ಅಳಿಯನಾದ ಶಿವನ ಸಭೆಯಲ್ಲಿ ತನಗೆ ಆದ ಅಪಮಾನವನ್ನು ದುಗುಡದಿಂದ ಅವರೊಡನೆ ಹೇಳಿದನು. ಮತ್ತೂ " ಅಯೋಗ್ಯನಾದ ಗೊರವನಿಗೆ ಮಗಳನ್ನು ಕೊಟ್ಟು ನಾನು ಮಾಡಿದ ಅವಿವೇಕಕಾರ್ಯಕ್ಕೆ ತಕ್ಕ ಫಲವಾಯ್ತು ! ಆದರೇನು ? ಅವನು ತೋರಿಸಿದ ಅಹಂಕಾರಕ್ಕೆ ಪ್ರತಿಕ್ರಿಯೆಯನ್ನು ಮಾಡಿ ಅವನ ಸೊಕ್ಕನ್ನು ಮುರಿಯದೆ ಬಿಡುವೆನೆ ? ಇರಲಿ. " ಎಂದು ಹೇಳುತ್ತ, ಅತ್ತಿತ್ತ ತಿರುಗಿ ಕೆಂಗಣ್ಣನ್ನು ದುರುದುರನೆ ಬಿಟ್ಟು ತೂಗಾಡುತ್ತ, " ಅಕಟಕಟಾ ! ಇಂಥ ಅವಮಾನವನ್ನು ತುಂಬಿದ ಸಭೆಯಲ್ಲಿ ತಮಗೆ ಮಾತಬಹುದೆ ? " ಎಂದು ಮಂತ್ರಿಗಳು ಪಶ್ಚಾತ್ತಾಪಪಡಲು, ದಕ್ಷನು ಮತ್ತಷ್ಟು ಉದ್ವಿಗ್ನನಾಗಿ ಝಗ್ಗನೆದ್ದು, ತನ್ನ ತಂದೆಯಾದ ಬ್ರಹ್ಮನಬಳಿಗ ಹೋದನು. ದೂರದಲ್ಲೇ ದೀರ್ಘದಂಡವಾಗಿ ನಮಸ್ಕರಿಸಿ, ಜನಕನೇ ! ಬೂದಿಬಡಕನಾವ ಹುಡಿವಲೆಯ ಗೊರವನಿಗೆ ನನ್ನ ಮಗಳನ್ನು ನೀನು ಕೊಡಿಸಿಬಿಟ್ಟುದರಿಂದ ನನಗಾದ ತಿರಸ್ಕಾರವನ್ನು ಕೇಳಿದೆಯಾ ? ಅಳಿಯನೂ ಮಗಳೂ ಸುಖದಿಂದ ಬಾಳುವುದನ್ನು ನೋಡಿ ಬರುವಣವೆಂದು ನಾನು ಅವನಲ್ಲಿಗೆ ಹೋದರೆ ಜಂಭದಿಂದ ಕೂಟವನ್ನು ಮಾಡಿ ಕುಳಿತುಕೊಂಡಿದ್ದ ಅವನು ನನ್ನನ್ನು ಕಂಡು ಎದ್ದು ಮರ್ಯಾದಿಸದಿದ್ದರೆಹೋಗಲಿ ; " ಹೀಗೆ ಕುಳಿತುಕೊ " ಎಂದಾದರೂ ಕರೆಯಬಾರದೆ ? ಮಗಳನ್ನು ಕೊಟ್ಟವರು ಅಳಿಯನಿಂದ ಇಂಥ ಅಪಮಾನ ಪಡೆದರೆಂಬುದನ್ನು ಹಿಂದೆ ಎಲ್ಲಾದರೂ ನೀವು ಕೇಳಿರುವಿರಾ, ? ಎಂದು ಕಣ್ಣೀರ್ಗರೆಯುತ್ತ ಹೇಳಿಕೊಂಡು, ನಿಟ್ಟುಸುರು ಬಿಟ್ಟದಲ್ಲದೆ, ನನ್ನನ್ನು ಅವನು ಹೇಗೆ ತಿರಸ್ಕರಿಸಿದನೋ ಅದ

ಕ್ಕೆ ತಕ್ಕಂತೆಯೇ ನಾನೂ ಅವನಿಗೆ ಮುಯ್ಯಾಡದಿದ್ದರೆ ಈ ಬಾಳನಿಂದ ಫಲವೇನು? ನನಗೆ ಸೃಷ್ಟಿಕರ್ತೃತ್ವವು ತಾನೇ ಏತಕ್ಕೆ? ಕಾಡಿಗೆ ಹೋಗಿ ಸೇರಿ ತಪಸ್ಸನ್ನುಮಾಡುತ್ತ ಕುಳಿತುಕೊಳ್ಳುವುದೇ ಮೇಲು; ಅದಕ್ಕಾಗಿ ನನಗೆ ಅಪ್ಪಣೆಯನ್ನು ಕೊಡು, ಎಂದು ಕೈಮುಗಿದು ಬೇಡುತ್ತ ನಿಂತಿದ್ದನು. ಬ್ರಹ್ಮನಾದರೊ–" ಅಯ್ಯಾ! ಶಿವನಿಗೆ ಪ್ರತೀಕಾರವನ್ನು ಮಾಡುವುದೆಂದರೆ ನನಗೂ ನಿನಗೂ ಅದು ಸಾಧ್ಯವೆ? ಸುಲಭವಾಗಿ ನುಂಗುವ ಕೈತುತ್ತೇ ಅದು? ಈ ಸಂಗತಿಯನ್ನೆಲ್ಲ ವಿಷ್ಣುವಿಗೆ ಹೇಳಿ ಅವನುತ್ತರವನ್ನು ಕೇಳುವ" ಎಂದು ದಕ್ಷನೊಡನೆ ಕೂಡಿ, ಬ್ರಹ್ಮನು ನಾರಾಯಣನ ಒಳಗೆ ಹೋದಳು. ಇಬ್ಬರೂ ಕಂಡು ನಮಸ್ಕರಿಸಿದರು. ಶಿವನಿಂದ ದಕ್ಷನಿಗೆ ಆದ ಅಪಮಾನವನ್ನೆಲ್ಲ ಬ್ರಹ್ಮನು ತಿಳಿಸಿದುದಲ್ಲದೆ, ಅಶ್ವಮೇಧಯಾಗವನ್ನುಮಾಡಿ. ಅಲ್ಲಿಗೆ ಶಿವನನ್ನು ಕರೆಯದೆ ಅವನಿಗೆ ಅಗ್ರಹವಿರ್ಭಾಗವನ್ನು ಕೊಡದೆ, ನಿಮಗೆ ಪುರೋಭಾಗವನ್ನು ಕೊಟ್ಟು, ಆ ಯಜ್ಞಸಮಯದಲ್ಲಿ ಸಕಲದೇವತೆಗಳ ಮಧ್ಯದೊಳಗೆ "ಶಿವನು ಬಹಿಷ್ಕೃತನು" ಎಂದು ಸಾರಿ ರುದ್ರನಿಗೆ ಅಪಮಾನಪಡಿಸಬೇಕೆಂದು ಯೋಚಿಸಿ, ಈ ದಕ್ಷನನ್ನು ನಿಮ್ಮ ಒಳಗೆ ಕರತಂದಿರುವೆನು; ಇದರ ವಿಷಯದಲ್ಲಿ ನಿಮ್ಮಭಿಪ್ರಾಯವೇನು? ಎಂದು ಕೇಳಿದನು. ನಾರಾಯಣನಾದರೊ–ಶಿವಶಿವಾ! ಸಕಲ ಯಜ್ಞಾಧಿಕರ್ಮಗಳಿಗೆಲ್ಲ ಶಿವನೇ ಅಧಿಪತಿ; ಅಂಥವನನ್ನು ಬಿಟ್ಟು ಯಾಗದಲ್ಲಿ ನನಗೆ ಅಗ್ರಪೂಜೆಯನ್ನು ಕೊಡಬೇಕೆಂದು ಯೋಚಿಸುವುದು ನ್ಯಾಯವಲ್ಲ; ಅತನೇ ಜಗದೇಕಾರಾಧ್ಯ; ನಮಗೂ ಅತನೇ ಯಜಮಾನ; ಎಂದು ನುಡಿಯಲು, ಬ್ರಹ್ಮನು– ತಾವು ಹಾಗೆ ಹೇಳಕೂಡದು, ನಿಮ್ಮನ್ನು ಮರೆಹೊಕ್ಕವರನ್ನು ಕೈಬಿಡದೆ ಉದ್ಧರಿಸಬೇಕು ಎಂದು ಮೊದಲಾಗಿ ಹೇಳಿ ಒತ್ತಾಯಿಸಿ, ಕೊನೆಗೆ "ಇಷ್ಟೇನುಮಾತುವುದು? ಶಿವನು ಇದನ್ನು ಕೇಳಿದರೆ ಕೋಪಿಸಿಕೊಳ್ಳದೆ ಬಿಡುವುದಿಲ್ಲ, ಆದುದಾಗಲಿ, ಯಜ್ಞಕಾರ್ಯವನ್ನಾರಂಭಿಸಿರಿ, ನಾನೂ ಬರುತ್ತೇನೆ" ಎಂದು ವಿಷ್ಣುವು ಉತ್ತರ ಕೊಡಲು, ದಕ್ಷನೂ ಬ್ರಹ್ಮನೂ ಹೊರಟುಬಂದರು. ಮುಂದಾಗಿ ದಕ್ಷನು ಹೋಗಿ ತನ್ನ ಪಟ್ಟಣದಲ್ಲಿ ಯಾಗದ ಸುದ್ದಿಯನ್ನು ಸಾರಿಸಿ, ಹಿಮಾಲಯದ ಗಂಗಾದ್ವಾರದ ಹತ್ತಿರ ಯಜ್ಞಶಾಲೆಯನ್ನು ವಿರಚಿಸಿದನು. ಬ್ರಹ್ಮ

ನು ಚತುರಂಗಸೈನ್ಯಸಮೇತನಾಗಿ ಅಲ್ಲಿಗೆ ಬಂದನು. ಸಕಲ ಮುನಿ ಮುನಿಸುರೋರಗಾದಿಗಳಿಗೆಲ್ಲ ಸುದ್ದಿಯನ್ನು ಕಳುಹಿ ಬರಮಾಡಿದರು. ದೇಶದ ಮೇಲೆ ತುರಗವನ್ನು ಕಳುಹಿದರು. ಋತ್ವಿಜರೇ ಮೊದಲಾದವರನ್ನು ಕರಸಿದರು. ಮೇಲಣ ರಕ್ಷಣೆಗೆ ವಿಷ್ಣುವನ್ನು ನಿಯಮಿಸಿದರು. ಬ್ರಹ್ಮತ್ವಕ್ಕೆ ಚತುರ್ಮುಖನೇ ನಿಂತನು. ದಕ್ಷನು ಮುಖ್ಯದೀಕ್ಷಿತನಾದನು. ಚರು ಪುರೋಡಾಶಗಳು, ದರ್ಭೆ, ಎಳ್ಳು, ಬತ್ತ, ತುಪ್ಪ, ಜೇನು, ಅಕ್ಕಿ ಸುಕ್, ಸ್ರುವ, ಕಲಶ, ಯೂಪ ಮೊದಲಾದ ಪರಿಕರಗಳೆಲ್ಲವೂ ಪರ್ವತೋಪಮಾನವಾಗಿ ಬಂದು ನೆರೆದುವು. ದೇವಶ್ರೇಷ್ಠರು ವೇದಮಂತ್ರಗಳನ್ನು ದೊಘೋಷಿಸುತ್ತಿದ್ದರು. ಅಗ್ನಿತ್ರಯಗಳ ಹೊಗೆಯು ಆಕಾಶಮಂಡಲಕ್ಕೆದ್ದಿತು. ಮಹಾಸಂಭ್ರಮದಿಂದ ಯಾಗಕಾರ್ಯವು ನಡೆಯುತ್ತಿರುವಲ್ಲಿ ಬಿನ್ನಹಗೊಂಡಿದ್ದ ದಧೀಚಿಮಹರ್ಷಿಯು ಯಾಗಮಂಟಪಕ್ಕೆ ಬಂದನು. ನಿಂತಹಾಗೆಯೇ ಯಾರುಯಾರು ಸಭೆಗೆ ಬಂದಿರುವರೆಂಬುದನ್ನು ನೋಡಿದನು. ಎಲ್ಲರೂ ಇದ್ದರು. ಮಹಾದೇವನುಮಾತ್ರ ಇರಲಿಲ್ಲ; ಋಷಿಯಮನಸ್ಸು ಕ್ಷೋಭೆಗೊಂಡಿತು. ದೀಕ್ಷಿತನ ಮುಂಗಡೆಗೆ ಋಷಿಯು ಬಂದು, ಏನಯ್ಯಾ ! ಪರಮೇಶ್ವರನೀತಕ್ಕೆ ಬರಲಿಲ್ಲ ? ಬ್ರಹ್ಮಾದಿಪಿಶಾಚಾಂತರಾದವರೆಲ್ಲರೂ ಯಾವ ಮಹಾದೇವನ ಆಜ್ಞಾನುಯಾಯಿಗಳಾಗಿರುವರೊ, ಸಕಲ ಕರ್ಮಗಳಿಗೂ ಯಾವನು ಅಗ್ರಪೂಜ್ಯನೋ, ಅಂಥ ಪಾರ್ವತೀಪತಿಯು ಇಲ್ಲಿಗೆ ಅನೇಕೆ ಬರಲಿಲ್ಲ ? ಅವನನ್ನುಳಿದ ಯಜ್ಞವು ಸಾಂಗವಾಗುವುದಿಲ್ಲವೆಂಬುದನ್ನು ನೀನು ಕಾಣೆಯಾ ? ಅದನ್ನು ವೇದಪುರುಷರಿಂದಾದರೂ ಕೇಳಿ ತಿಳಿದುಕೊ " ಎಂದು ನುಡಿದನು. ಆಗ ಚತುರ್ವೇದಗಳೂ ಕೂಡ ಸಾಕಾರವಾಗಿ ಬಂದು ನಿಂತು,— " ಯಾಗಕ್ಕೆ ಶಿವನೇ ಅಧಿಪತಿಯು, ಶಿವನಿಲ್ಲದಿದ್ದರೆ ಅದು ದುಷ್ಟಯಜ್ಞವೆನಿಸಿಕೊಳ್ಳುವುದು, ಅದಕ್ಕೆ ಹಾನಿಯು ತಪ್ಪದು " ಎಂದು ಹೇಳಿ ಬಯಲಾದುವು. ದಕ್ಷನಾದರೊ— ಪತ್ನೀಸಹಿತನಾದ ಆ ಗೊರವನೊಬ್ಬನನ್ನು ನಾವು ಕರೆದಿಲ್ಲ; ಉಳಿದ ವಿಷ್ಣು ಬ್ರಹ್ಮಾದಿ ಸಕಲ ದೇವತೆಗಳು ಮನುಮುನಿಗಳು ಕಿನ್ನರ ಕಿಂಪುರುಷರು ಮೊದಲಾದವರೆಲ್ಲ ಬಂದಿರುವರು. ಆ ಶಿವನು ಬಂದಲ್ಲದೆ ಯಜ್ಞವು ಮುಗಿಯಲಾರದೆ ? ಸಾಕ್ಷಾತ್ ಭಗವಂತನಾದ ನಾರಾಯಣನೇ ಅಗ್ರಹವಿಸ್ಸಿಗೆ

ಅರ್ಹನಾಗಿ ಇಲ್ಲಿ ಇರುತ್ತಿರುವುದಿಲ್ಲವೆ? ಇನ್ನೇನಾಗಬೇಕು? ಯಾವ ಯಜ್ಞಾದಲ್ಲೂ ಶಿವನಿಗೆ ಅಗ್ರಹವಿಸ್ಸು ಕೊಡಲ್ಪಡುವುದಿಲ್ಲ; ಅವನು ತಾವು ಸನು; ಅವನು ಸಹ್ಕಾರಕಾರಣನು; ತಲೆ ಬುರುಡೆಯನ್ನು ಹಿಡಿದು ನಗ್ನಾಂಗಿಯಾಗಿರುವ ವಿಕಾರಿ; ಅದುಕಾರಣ ಅವನು ಪೂಜ್ಯನಲ್ಲ. ಸರ್ವವಿಧದಿಂದಲೂ ಸಾತ್ವಿಕನಾದ ಈ ನಾರಾಯಣನೇ ಲೋಕರಕ್ಷಕನು; ಅಗ್ರಪೂಜೆಗೆ ಅರ್ಹನು" ಎಂದು ಶಿವನನ್ನು ತಿರಸ್ಕರಿಸಿದನು. ಆ ಕೂಡಲೇ ಋಷಿಗೆ ಕೋಪನೇರಿತು. ಕೆಂಗಣ್ಣನ್ನು ಬಿಟ್ಟು, ಯಾಗಶಾಲೆಯಲ್ಲಿ ಕುಳಿತಿದ್ದ ಎಲ್ಲ ಋಷಿಗಳನ್ನೂ ದೇವತೆಗಳನ್ನೂ ನೋಡಿದನು. ಮತ್ತೂ ಕೈಯೆತ್ತಿ— "ಎಲ್ಲಿ ಪೂಜ್ಯರಾದವರ ಪೂಜೆಯು ತಪ್ಪಿಹೋಗಿ ಅಯೋಗ್ಯರಿಗೆ ಪೂಜೆಯಾಗುವುದೋ, ಉತ್ತಮರಿಗೆ ತಿರಸ್ಕಾರವೂ, ಅಧಮರಿಗೆ ಪುರಸ್ಕಾರವೂ ಎಲ್ಲಿ ನಡೆಯುವುದೋ, ಆ ಸ್ಥಲಕ್ಕೆ ತಕ್ಕ ಶಿಕ್ಷೆಯನ್ನು ದೈವವು ಉಂಟುಮಾಡುವುದು. ಈ ಯಾಗವು ಶಿವನನ್ನು ಬಿಟ್ಟು ಆಚರಿಸಲ್ಪಡುವುದು. ಅದುಕಾರಣ, ಇದು ಶಿವದ್ವೇಷಯುಕ್ತವಾದುದು. ಇದಕ್ಕೆ ಸಹಾಯಕರಾಗಿ ಬಂದಿರುವವರೆಲ್ಲರೂ ಶಿವದ್ವೇಷಿಗಳೇ ಆದರು. ಯಾವಾಗ ಶಿವನನ್ನು ಇವರೆಲ್ಲರೂ ತಿರಸ್ಕರಿಸಿದರೋ ಅದರಿಂದಲೇ ಶಿವನಿಗೆ ಅಗ್ರಭಾಗನನ್ನು ಕೊಡಬೇಕೆಂದು ವಿಧಿಸುವ ವೇದವನ್ನೂ ದ್ವೇಷಿಸಿದಂತೆಯೇ ಆಯಿತು. ಅದುಕಾರಣ, ಶಿವರಹಿತವಾದ ಈ ಯಾಗವು ಹಾಳಾಗಲಿ; ಇದಕ್ಕೆ ಸಹಾಯಕರಾಗಿ ಬಂದಿರುವವರಿಗೆಲ್ಲ ಅಜ್ಞಾನವಾವರಿಸಲಿ; ಎಲ್ಲರೂ ಪರಿಭ್ರಮಗೊಳ್ಳಲಿ; ವೇದಬಾಹ್ಯರಾಗಿ ಕಲಿಯುಗದಲ್ಲಿ ಹುಟ್ಟಿ, ಶಿವನನ್ನು ದೂಷಿಸಿ ನರಕಗಾಮಿಗಳಾಗಲಿ" ಎಂದು ಶಪಿಸಿ, ಥಟ್ಟನೆ ಯಾಗಶಾಲೆಯನ್ನು ಬಿಟ್ಟು ಹೊರಟನು. ಅನೇಕ ಋಷಿಸ್ತೋಮವು ಎದ್ದು ಅವನೊಡನೆಯೇ ಹೊರಟುಹೋಯಿತು. ಅವರೆಲ್ಲ ಹೋದರೆ ಹೋಗಲಿ ಯೆಂದು ನಿಂದಿಸಿ, ದಕ್ಷನು ಯಜ್ಞಕಾರ್ಯವನ್ನು ಮುಂದೆ ಸಾಗಿಸುತ್ತಿದ್ದನು. ವಿಷ್ಣ್ವಾದಿಗಳೆಲ್ಲರೂ ತಮ್ಮ ತಮ್ಮ ನಿಯುಕ್ತಕಾರ್ಯವನ್ನು ನೆರವೇರಿಸುತ್ತಿದ್ದರು. ನಾರದನು ಇದೆಲ್ಲವನ್ನೂ ನೋಡಿ ಶಿವನಿಗೆ ಬಿನ್ನೈಸಬೇಕೆಂದು ಕೈಲಾಸಕ್ಕೆ ಬಂದನು. ಪಾರ್ವತೀಸಮೇತನಾಗಿ ಕುಳಿತಿರುವ ಪರಶಿವನಿಗೆ ನಮಸ್ಕರಿಸಿ, ದಕ್ಷನ ಕಪಟಯಾಗದ ಆದ್ಯಂತಸಂಗತಿಯನ್ನೂ ಬಿನ್ನೈಸಿದನು. ಶಿವನು

ಎಲ್ಲವನ್ನೂ ಕೇಳುತ್ತ ಹುಸಿನಗೆನಗುತ್ತಿದ್ದನು. ತಂದೆಯ ದುಷ್ಟಸಂಕಲ್ಪವನ್ನು ಪಾರ್ವತಿಯು ಕೇಳಿ, ಮನದಲ್ಲಿ ನೊಂದು, ಏನನ್ನಾದರೂ ಮಾಡಿ, ಇವರಿಂದ ಮುಂದೆ ಬರುವ ತಂದೆಯ ವಿಪತ್ತನ್ನು ಪರಿಹರಿಸಬೇಕೆಂದು ಯೋಚಿಸಿ, ಪೀಠದಿಂದೆದ್ದು, ಶಿವನ ಪಾದಕ್ಕೆ ನಮಸ್ಕರಿಸಿ, ಯಾಗಶಾಲೆಗೆ ಹೋಗಿ, ತಂದೆಗೆ ಹಿತವಾದವನ್ನು ಹೇಳಿ, ಅವನ ದುರ್ಬುದ್ಧಿಯನ್ನು ಬಿಡಿಸಿ, ಜ್ಞಾನೋದಯವನ್ನು ಮಾಡಿ ಬರುತ್ತೇನೆಂತಲೂ, ಅದಕ್ಕೆ ಅಪ್ಪಣೆ ಕೊಡಬೇಕೆಂತಲೂ ಬೇಡಿದಳು. ಶಂಕರನು— ಸತಿಯೆ! ಕರೆಯದವನ ಬಳಿಗೆ ಹೋಗಬಹುದೆ? ನಿನ್ನ ಮಾತನ್ನು ಆ ಮೂರ್ಖನು ಕೇಳುವನೆ? ಅಂತಹ ಸುಮತಿಯೇ ಅವನು? ಆ ದುರುಳನ ಬಳಿಗೆ ಹೋಗುವುದು ನಿನಗೆ ತಕ್ಕುದಲ್ಲ, ಹೋಗಿ ಅವಮಾನಪಡಿಸಿಕೊಂಡು ಬರಬಾರದು, ಬೇಡ ಬೇಡ; ನಮ್ಮ ಮಾತನ್ನು ಕೇಳು" ಎಂದು ನುಡಿದನು. ಆದರೂ ದಾಕ್ಷಾಯಣಿಯು ಮತ್ತೆ ಮಣಿದು,— ತಂದೆಯ ಮನೆಗೆ ಮಗಳು ಹೋದರೆ ಅಪಮಾನವಾಗುವುದೆ? ಎಂದಿಗೂ ಇಲ್ಲ, ಹೇಗಾದರೂಮಾಡಿ ತಂದೆಯ ಮೂಢಬುದ್ಧಿಯನ್ನು ಬಿಡಿಸಿ ಬರುವೆನು ಎಂದು ಬಹು ವಿಧವಾಗಿ ಬೇಡಿದಳು. ಕೊನೆಗೆ ಶಿವನು— ಹಾಗಾದರೆ ಮುಂದೆ ಆದುದಾಗಲಿ; ನಾವೇನು ಮಾಡುವುದು? ಹೋಗು, ಎಂದು ಅಪ್ಪಣೆಯಿತ್ತು, ನಂದಿ ಮೊದಲಾದ ಅಮರಗಣಂಗಳನ್ನು ಜತೆಯಲ್ಲಿ ಕಳುಹಿಕೊಟ್ಟನು. ಶಂಕರಿಯು ಬೇಗ ಬೇಗನೆ ಯಾಗಶಾಲೆಗೆ ಒರುತ್ತಿದ್ದಳು. ಒಬ್ಬ ಗಣವರನು ಮುಂದಾಗಿ ಯಾಗಶಾಲೆಗೆ ನಡೆದು ವಿಷ್ಣು ಬ್ರಹ್ಮಾದಿಗಳ ಮಧ್ಯದಲ್ಲಿ ಯಜ್ಞದೀಕ್ಷೆಯನ್ನು ಹೊಂದಿ ಕುಳಿತಿದ್ದ ದಕ್ಷನ ಮುಂಗಡೆಗೆ ಹೋಗಿ, ದೇವಾಧಿದೇವನಾದ ಪರಶಿವನ ಪತ್ನಿಯು ನಿನ್ನ ಯಾಗವನ್ನು ನೋಡುವುದಕ್ಕಾಗಿ ವಯ ಮಾಡಿಸುತ್ತಿರುವಳು, ಎಂದು ನುಡಿದನು. ದಕ್ಷನು ಕೇಳಿದವನಂತೆ ಗರ್ವದಿಂದ ಸುಮ್ಮನಿದ್ದನು. ಆ ಗಣವರನಾದರೊ— ಅಯ್ಯೋ ಮರುಳೇ! ಇದೇಕೆ ಸುಮ್ಮನಿರುವೆ? ನಾನು ಹೇಳಿದ ಮಾತು ಕೇಳಿಸಲಿಲ್ಲವೆ? ಜಗದೀಶನ ಪತ್ನಿಯು ನಿನ್ನ ಪುಣ್ಯದ ಫಲವೇ ಆಕಾರವನ್ನು ಧರಿಸಿಬಂದಂತೆ ನಿನ್ನ ಮನೆಗೆ ಬರುತ್ತಿರುವಲ್ಲಿ ಇದಿರ್ಗೊಳ್ಳದೆ, ಅಮೃತವನ್ನೊದೆದು ಹೆಂಡವನ್ನು ಪರಿಗ್ರಹಿಸುವ ನೀಚರಂತೆ ನೀನು ನಡೆದುಕೊಳ್ಳಬಹುದೆ? ಏಳು,

ಬೇಗನೆ ಮಾರ್ಗಗಳನ್ನಲಂಕರಿಸು, ಎಂದು ಹೇಳಲು, ದಕ್ಷನು ಕೋಪ ದಿಂದ ಹುಬ್ಬು ಗಂಟಿಕ್ಕಿ, "ಯಾರೊ ಇವನು? ಕೆತ್ತನ್ನು ಹಿಡಿದು ನೂ ಕಿಬಿಡಿ" ಎಂದು ಗರ್ಜಿಸಿ ನುಡಿದನು. ಅಷ್ಟರಲ್ಲಿ ಸಪರಿವಾರಳಾದ ಭವಾ ನಿಯೇ ಯಾಗಶಾಲೆಗೆ ಬಂದಳು. ಯಜ್ಞಕುಂಡದ ಬಳಯಲ್ಲಿ ಕುಳಿತಿದ್ದ ತಂದೆಯ ಬಳಗೆ ಹೋಗಿ, ವಿನಯದಿಂದ ತಲೆವಾಗಿ, "ಅಯ್ಯಾ! ಸಕಲ ವೇದಾಗಮತಪಸ್ಸಾರ್ಥಗಳನ್ನು ಅರಿತೂ ಅರಿತು ಪ್ರಾಜ್ಞನಾದ ನಿನಗೆ ನಾನು ಹೇಳುವುದೇನಿವೆ? ನೀನು ಅಜ್ಞನಂತೆ ಈ ಕಾರ್ಯವನ್ನಾಚರಿಸ ಬಹುದೆ? ಪರಶಿವನನ್ನು ಬಿಟ್ಟು ಯಜ್ಞವನ್ನಾಚರಿಸಿದರೆ ಅದು ಸಾಂಗ ವಾಗುವುದೆ? ಇದರಿಂದ ನಿನಗೆ ಶ್ರೇಯಸ್ಸಾದೀತೆ? ಬೇಡ ಬೇಡ, ಈ ಪ್ರಯತ್ನವನ್ನು ನಿಲ್ಲಿಸು, ವಿಶ್ವಾಸದಿಂದ ನುಡಿಯುವ ನನ್ನ ಮಾತನ್ನು ಲಾ ಲಿಸು" ಎಂದು ಮಧುರೋಕ್ತಿಗಳಿಂದ ಬೋಧಿಸಿದಳು. ದಕ್ಷನಾದರೊ— "ಓಹೋ! ಗಂಡನ ಗೊಡ್ಡು ಬೆದರಿಕೆಯನ್ನು ತೋರಿಸುವುದಕ್ಕೆ ಇಲ್ಲಿಗೆ ಬಂದೆಯೊ? ನಿನ್ನ ಗಂಡನೂ ನೀನೂ ಬರದಿದ್ದರೆ ನಮ್ಮ ಯಜ್ಞವು ನಡೆ ಯದೆ ನಿಂತುಹೋಗುವುದೊ? ಅವನೊಬ್ಬನಿಲ್ಲದಿದ್ದರೆ ಜಗತ್ತೇ ನಮಗಿ ಲ್ಲವೆ? ಇಲ್ಲಿ ಕುಳಿತಿರುವವರೆಲ್ಲ ಯಾರೆಂದು ನೋಡು; ಈ ವಿಷ್ಣು! ಈ ಬ್ರಹ್ಮ! ಈ ದಿಕ್ಪಾಲಕರು! ಈ ಗರುಡಗಂಧರ್ವರು! ಈ ಮುನಿ ಗಳು! ಈ ಸೂರ್ಯಚಂದ್ರರು! ಮೊದಲಾದವರೆಲ್ಲ ನಮಗೆ ಸಹಾಯಕ ರಾಗಿ ನಿಂತಿರುವಾಗ, ಚಂದ್ರ ಅತ್ರಿ ಕಶ್ಯಪ ಮೊದಲಾದ ಇಂಥ ಘನವಂ ತರೆಲ್ಲ ನನಗೆ ಅಳಿಯಂದಿರಾಗಿರುವಾಗ ನನಗೇನು ಕಡಿಮೆ? ಯಾರ ಭೀತಿ ಯು ನನಗೇನು? ಸ್ಮಶಾನವನ್ನು ಕಾಯುವ—ಮೂಳಿಯ ಮಾಲಿಯ— ಆ ಬಡಗೊರವನು ನನಗೆ ಸಮಾನನೆ? ಯಾವ ಮಾ ದೊಡ್ಡ ವಿಷಯವನ್ನು ನನ್ನೊಡನೆ ಹೇಳುವುದಕ್ಕೆ ಬಂದೆ? ಬಿಡು; ನೀನೂ ನಿನ್ನ ಗಂಡನೂ ಮಾ ಡುವುದನ್ನು ನೋಡಿಕೊಳ್ಳುತ್ತೇನೆ, ನಡೆ ನಡೆ, ಎಂದು ಗಜರಿ ನುಡಿದು, ತಿರಸ್ಕರಿಸಿಬಿಟ್ಟನು. ಈ ಶಿವನಿಂದೆಯನ್ನು ಕೇಳಿದ ಕೂಡಲೇ ಯಾಗಶಾಲೆ ಯಲ್ಲಿದ್ದವರಲ್ಲಿ ಕೆಲವು "ಶಿವಶಿವಾ" ಎಂದು ಕಿವಿ ಮುಚ್ಚಿಕೊಂಡರು. ಕೆಲರು ಶಿವನಿಂದೆಯನ್ನು ಕೇಳಬಾರದೆಂದು ಎದ್ದು ತಮ್ಮ ತಮ್ಮ ಮನೆಗೆ ಹೊರಟುಹೋದರು. ಕೆಲರು ಇದು ಸರಿಯಲ್ಲವೆಂದು ದಕ್ಷನಿಗೆ ಬುದ್ಧಿ

ಹೇಳಿ, ಅವನು ಕೇಳದೆ ಹೋಗಲು ಜರೆಯುತ್ತ ನಡೆದರು. ಹೀಗೆ ಯಾ ಗಶಾಲೆಯಲ್ಲಿದ್ದ ಎಷ್ಟೋ ಜನರು ಜಾರಿಕೊಂಡರು. ದಕ್ಷನಾದರೊ— ಯಾರು ಹೋದರೆತಾನೇ ಆಗುವುದೇನು ? ಎಂದುಕೊಂಡು, ತನ್ನ ಕೆಲಸ ದಲ್ಲಿ ತಾನು ತೊಡಗಿದನು. ರುದ್ರಾಣಿಯಾದರೊ—ಪ್ರಾಣಕಾಂತನಿಂದೆ ಯನ್ನು ಕೇಳಿ ಕಿವಿ ಮುಚ್ಚಿ, ಶಿವನು ನುಡಿದ ಭಾಷೆಯು ನಿಜವಾಯ್ತೆಂ ದು ಯೋಚಿಸಿ, ತಂದೆಯಿಂದ ತಿರಸ್ಕಾರವನ್ನು ಹೊಂದಿ ಶಿವನಿಗೆ ಮತ್ತೆ ತನ್ನ ಮುಖವನ್ನು ತೋರಿಸಬೇಕಲ್ಲ ! ಎಂದು ಲಜ್ಜಿಸಿ, ಇಂಥ ಶಿವದೂ ಷಕನ ಸಂಬಂಧವನ್ನು ಪಡೆದಿದ್ದ ತನ್ನ ದೇಹವನ್ನೇ ಇನ್ನು ಧರಿಸಿರುವುದು ಸರಿಯಲ್ಲವೆಂದು ಚಿಂತಿಸಿ, ಯೋಗಾಗ್ನಿಯಲ್ಲಿ ದೇಹವನ್ನು ವಿಸರ್ಜಿಸಿದ ಳು. ಮತ್ತೂ ಹಿಮವಂತನ ಪತ್ನಿಯಾದ ಮೇನಕಿಗೆ ಕೊಟ್ಟಿದ್ದ ವರದ ಫಲನೆಗಾಗಿ ಆಕೆಯ ಗರ್ಭವನ್ನು ಪ್ರವೇಶಿಸಿ ಪಿಂಡವಾಗಿ ಬೆಳೆದಳು.

ಎಂದೆ ಚೆನ್ನಬಸವೇಶನು ನುಡಿದನೆಂಬಲ್ಲಿಗೆ ಮೂರನೆ ಅಧ್ಯಾಯವು ಮುಗಿದುದು.

೪ ನೆ ಅಧ್ಯಾಯವು.

ವೀರಭದ್ರವಿಜಯವು.

ದಾಕ್ಷಾಯಣಿಯು ಶರೀರವನ್ನು ಬಿಟ್ಟುದನ್ನು ನಂದೀಶನು ಕಂಡು ಕೋಪವೇರಿ, ಪರಶಿವನಿಗೆ ಈ ಸುದ್ದಿಯನ್ನು ತಿಳಿಸಿ ಮುಂದಣ ಕಾರ್ಯವ ನ್ನು ಮಾಡಬೇಕೆಂದು, ಯಾಗಶಾಲೆಯಿಂದ ಕಡುಬೇಗನೆ ಕೈಲಾಸಕ್ಕೆ ಬಂದು, ಪರಮೇಶನಿಗೆ ನಮಸ್ಕರಿಸಿ, " ಜೀಯಾ ! ತವ್ಮ ಅರ್ಧಾಂಗಿ ಯಾದ ಜಗನ್ಮಾತೆಯು ದಕ್ಷಬ್ರಹ್ಮನಿಂದ ಪರಿಭೂಷಣೆಯನ್ನು ಕೇಳಿ ಸೈ ರಿಸಲಾರದೆ ತನ್ನ ಕೋಪಾಗ್ನಿಗೆ ದೇಹವನ್ನು ಸಮರ್ಪಿಸಿಬಿಟ್ಟಳು " ಎಂ ದು ವಿಜ್ಞಾಪಿಸಿದನು. ಕೇಳಿದ ಕೂಡಲೇ ಪರಶಿವನ ಕೋಪಾಗ್ನಿಯು ವೇ ಲಾತೀತವಾಯಿತು. ಪ್ರಳಯಕಾಲದಲ್ಲಿ ಮಹಾಪರ್ವತಗಳನ್ನು ಸುಡು

ತ್ತಿರುವ ಬೆಂಕಿಗೆ ಬೇಸಗೆಯೂ ಬಿರುಗಾಳಿಯೂ ಸಹಾಯಕವಾದರೆ ಅದನ್ನು ಆರಿಸುವುದಕ್ಕೆ ಯಾರಿಂದಾದೀತು ? ರುದ್ರನು ಮೊದಲೇ ವಿಷಗ್ರೀವ, ಅದರಮೇಲೆ ಉಗ್ರ, ಇದರಮೇಲೂ ಕಿಡಿಗಣ್ಣ, ಮತ್ತೂ ಸಹ್ಯಾದ್ರಿ ಕಾರಣಮೂರ್ತಿ; ಇಂಥ ಸ್ವಾಮಿಯು ತನ್ನ ಮೆಚ್ಚಿನ ಹೆಂಡತಿಯು ದೇಹ ತ್ಯಾಗ ಮಾಡಿದಳೆಂಬ ಸುದ್ದಿಯನ್ನೂ ಅದರಮೇಲೂ ಪತಿದೂಷಣೆಯನ್ನು ಕೇಳಲಾರದೆ ಹಾಗಾದಳೆಂಬುದನ್ನೂ ಕಿವಿಯಿಂದ ಕೇಳಿದ ಬಳಿಕ ಸೈರಿಸುವುದುಂಟೆ ? ಕೋಪಾಗ್ನಿಯಿಂದ ಆದ್ಯಂತವಾಗಿ ಪರಶಿವನ ದೇಹದಿಂದ ಮಹಾಜ್ವಾಲೆಯು ಹೊರಟಿತು. ಶಾಂತಿರಸವು ಬಣಗಿಹೋಯಿತು. ಕಣ್ಣುಗಳಿಂದ ಕಿಡಿಯು ಸುರಿಯುತ್ತಿದ್ದಿತು. ಬೆವರು ಮೂಡಿತು. ಹಣೆಗಣ್ಣಿನಿಂದ ಜ್ವಾಲೆಯು ಹೊರಚೆಲ್ಲಿತು. ಕಣ್ಣಾಲಿಗಳು ಚಪಲವಾದುವು. ಮಿಸುಕಗಳು ಕೆದರಿದುವು. ಶ್ವಾಸವು ಬಿಸಿಯಾಯಿತು. ಮುಖವು ಕೆಂಪಾಯಿತು. ರುಂಡಮಾಲೆಯು ಕಿರಿಚಿತು ಆಭರಣದ ಸರ್ಪಗಳು ವಿಷವನ್ನು ಕಾರಿದುವು. ಜಟಾಪಟಲವು ಬಿಚ್ಚಿ ಕೆದರಿತು. ಇವೆಲ್ಲವೂ ಜಗತ್ತಿನ ಲಯಕ್ಕೆ ಸೂಚಕವಾಗಿದ್ದುವು. ಅಂತರಿಕ್ಷದಲ್ಲಿ ನಕ್ಷತ್ರಗಳು ಪಳಪಳನೆ ಉದುರಿಕೊಂಡುವು. ಬೆಟ್ಟಗಳು ಛಿಟಿಛಿಟಿಲೆಂದು ಸೀಳುಬಿಟ್ಟುವು. ಸಮುದ್ರಗಳು ತಳಮಳನೆ ಕುದಿದುವು. ಭೂಮಿಯು ಧಗಧಗನೆ ಉರಿದಿತು. ದಿಗ್ಗಜಗಳ ಮತ್ತೂ ಆದಿಶೇಷನ ತಲೆಯೂ ಹೆಡೆಯೂ ಒಡೆದು ಮುತ್ತುಗಳೂ ರತ್ನಗಳೂ ಸಿಡಿಸಾಡಿದುವು. ಬ್ರಹ್ಮಾಂಡಮಂಡಲವನ್ನೆಲ್ಲ ಪರಶಿವನ ಕೋಪಾಗ್ನಿಯು ಆವರಿಸಿ ಸುಡುತ್ತಿದ್ದಿತು. ಯಾವಮಹಾದೇವನೊಬ್ಬನು ಒಲಿದರೆ ಜಗತ್ತೇ ಉದ್ಧಾರಗೊಳ್ಳುವುದೋ, ಆ ದೇವನು ಮುಳಿದರೆ ಲೋಕವೆಲ್ಲ ನಾಶಗೊಳ್ಳುವುದರಲ್ಲಾಶ್ಚರ್ಯವೇನು ? ಕಾದ ಹಂಚು ಒಡೆದಂತೆ ಬ್ರಹ್ಮಾಂಡವು ಬಿರಿದುಹೋಯಿತು. ತನ್ನ ಪ್ರಾಣಪ್ರಿಯೆಯು ದೇಹವನ್ನು ಬಿಟ್ಟ ಅಗ್ನಿಯಿಂದಲೇ ಜಗತ್ತನ್ನೆಲ್ಲ ಸುಡಬೇಕೆಂದು ಶಿವನು ಯೋಚಿಸಿರುವನೋ ಎಂದು ಲೋಕವೆಲ್ಲ ತಲ್ಲಣಿಸುತ್ತಿದ್ದಿತು. ಆ ಮಹಾದೇವನ ಮಹಾಕೋಪಾಗ್ನಿಯಿಂದೊಗೆದ ಭಯಂಕರವಾದ ಹೊಗೆಯೇ ಮಹಾಪುರುಷರೂಪನ್ನು ಧರಿಸಿದಂತೆ ಬಳಿವರ್ಧವಾದ ಪ್ರಚಂಡಮೂರ್ತಿಯೊಂದು ಶಿವನ ಶ್ವಾಸೋಚ್ಛ್ವಾಸದಿಂದ ಉದ್ಭವಿಸಿದಂತೆ ಉದಿಸಿ ನಿಂತಿತು.

ನಕ್ಷತ್ರಮಾಲೆಯನ್ನು ತಳೆದಿರುವ ಮೇಘಜಾಲದಂತೆ ತೋರುತ್ತಿದ್ದ ಆ ಮೂರ್ತಿಗೆ ಒಂದು ಸಹಸ್ರ ಮುಖಗಳೂ, ಎರಡು ಸಾವಿರ ತೋಳುಗಳೂ, ಮೂರು ಸಾವಿರ ಕಣ್ಣುಗಳೂ ಭೀಕರವಾದ ಕೋರೆದಾಡೆಗಳೂ ವಿರಾಜಿಸುತ್ತಿದ್ದುವು. ಆ ಮಹಾವಿರಾಡ್ರೂಪನಿಗೆ ಬ್ರಹ್ಮಾಂಡದ ಉಪರಿಭಾಗವೇ ಶಿರಸ್ಸಿನಂತೆಯೂ, ಸೂರ್ಯಮಂಡಲವೇ ಎದೆಯ ಮೇಲಣ ಪದಕದಂತೆಯೂ, ನಕ್ಷತ್ರಪಙ್ಕ್ತಿಯೇ ಕಂಠಸರದಂತೆಯೂ ತೋರುತ್ತಿದ್ದುವು. ಆ ಮಹಾಮೂರ್ತಿಯು ಕೋಟಿಸಿಡಿಲಿನಂತೆ ಆರ್ಭಟಿಸಿ ನಿಂತು ಅತ್ತಿತ್ತ ಅಲೆದಾಡಿದನು. ಪಾದವಿನ್ಯಾಸಕ್ಕೆ ಜಗತ್ತೆಲ್ಲ ತೂಗಾಡಿತು. ಸರ್ಪಮಾಲೆ ರುಂಡಮಾಲೆಗಳನ್ನು ಧರಿಸಿ, ಹಸ್ತಗಳಲ್ಲಿ ಹಲಗೆ ಕತ್ತಿ ತೋಮರ ಕುಂತ ಮುಸಲ ಚಕ್ರ ಮುದ್ಗರ ಧನುರ್ಬಾಣ ಪ್ರಾಸ ಪಟ್ಟಸ ಕುಂತ ಕುಠಾರ ಮೊದಲಾದ ಆಯುಧಗಳನ್ನು ಹಿಡಿದು, ಆದಿಶೇಷನನ್ನು ವೀರಗಾಸೆಯಾಗಿ ಕಟ್ಟಿ, ಸುರನರೋರಗ ರಾಕ್ಷಸಾದಿಗಳಲ್ಲಿ ಯಾರು ಪ್ರತಿಭಟಿಸಿದರೂ ಸೀಳಿ ತೋರಣಗಟ್ಟುವ ಬಿರುದಿನ ಪೆಂಡೆಯನ್ನು ಪಾದದಲ್ಲಿ ಕಟ್ಟಿ, ಶೂರಾಗ್ರೇಸರನಾದ ಆ ಘೋರಮೂರ್ತಿಯು ಪರಶಿವನ ಪಾದಕ್ಕೆ ನಮಸ್ಕರಿಸಿ, ಕೈಮುಗಿದು ನಿಂತು, "ಸ್ವಾಮಿ! ಅಪ್ಪಣೆಯನ್ನು ಕೊಡು, ಭೂಮಿಯನ್ನು ಸೀಳಲೊ? ಬೆಟ್ಟಗಳನ್ನು ಕೀಳಲೊ? ಸೂರ್ಯನನ್ನು ತುಳಿದು ಹಾಕಲೊ? ಸಮುದ್ರಗಳನ್ನು ಮುಚ್ಚಿ ಬಿಡಲೊ? ಬ್ರಹ್ಮಾಂಡವನ್ನು ಹೊಳ್ಳುವಾಡಲೊ? ಹೇಳು; ಇದಿರಾಗುವವರು ಯಾರಿದ್ದರೂ ಸೀಳ ತಂದೊಪ್ಪಿಸುತ್ತೇನೆ; ಬ್ರಹ್ಮನ ಮೂಳೆಯನ್ನಾದರೂ ಮುರಿದು ತರುತ್ತೇನೆ; ಬ್ರಹ್ಮಾಂಡವನ್ನೆಲ್ಲ ಪುಡಿಮಾಡಿ ತಂದೊಪ್ಪಿಸುತ್ತೇನೆ; ವಿಷ್ಣುವಿನ ಪ್ರಾಣವನ್ನಾದರೂ ತೆಗೆದುಕೊಳ್ಳುತ್ತೇನೆ; ಇಂದ್ರಾದಿದಿಕ್ಪಾಲಕರ ಸಂಪತ್ತನ್ನಾದರೂ ಸುಟ್ಟು ಬರುತ್ತೇನೆ; ಪಾತಾಳಲೋಕದವರನ್ನೆಲ್ಲ ಕಾಲಿನಿಂದ ಹೊಸಗಿ ಬರುತ್ತೇನೆ, ದಿಗ್ಗಜಗಳ ಕೊಂಬುಗಳನ್ನೂ ಕಿತ್ತು ತರುತ್ತೇನೆ; ಆದಿಶೇಷನ ಎದೆಯನ್ನೂ ಸೀಳುತ್ತೇನೆ; ಉತ್ತರ ಕೊಡು; ಈ ಏಳು ಲೋಕಗಳಲ್ಲಿ ಮಲತವರು ಯಾರಿದ್ದರೂ ಹೇಳು, ಕ್ಷಣಕಾಲದಲ್ಲಿ ಎದೆ ಮೆಟ್ಟಿ ತುಳಿದು ಪ್ರಾಣವನ್ನು ತೆಗೆದುಕೊಳ್ಳುತ್ತೇನೆ; ಬೆಸನಕೊಡು ಕೊಡು" ಎಂದು ಪ್ರಾರ್ಥಿಸುತ್ತಿರುವ ಮಗನ ಶೌರ್ಯಾಟೋಪವನ್ನು ಪ

ರಶಿವನು ನೋಡಿ, ಹುಸಿನಗೆ ನಕ್ಕು, " ಎಲೆ ಸುತನೇ ! ನೀನು ಜಗತ್ತನ್ನೆಲ್ಲ ಗೆದ್ದು ಬರುವ ವೀರತ್ವವುಳ್ಳವನಾದಕಾರಣ ವೀರನಾಗಿಯೂ, ಈ ನಿನ್ನ ಶರೀರವು ಭದ್ರ (ಮಂಗಳ) ಮಯವಾಗಿರುವುದರಿಂದ ಭದ್ರನಾಗಿಯೂ ಇರುತ್ತೀಯೆ, ಅದುಕಾರಣ, ನೀನು ' ವೀರಭದ್ರನು ' ಎಂದು ಶಿವನು ಹೆಸರುಕರೆದು, ಬಳಿಕ— ಎಲೆ ಮಗನೇ ! ದಕ್ಷನೆಂಬುವನು ನಮ್ಮನ್ನು ಓಲೈಸುತ್ತಿದ್ದ ವಿಷ್ಣು ಬ್ರಹ್ಮೇಂದ್ರಾದಿಗಳನ್ನೆಲ್ಲ ಕಟ್ಟಕೊಂಡು ಯಜ್ಞವನ್ನು ಮಾಡುತ್ತಿರುವನು; ನನ್ನ ಪತ್ನಿಯು ಅಲ್ಲಿಗೆ ಹೋಗಿ ಅವನಿಂದ ಪತಿದೂಷಣೆಯನ್ನು ಕೇಳಿ ದೇಹವನ್ನು ತ್ಯಜಿಸಿದಳು; ನೀನು ಈಗಲೇ ಅಲ್ಲಿಗೆ ಹೋಗಿ, ಯಜ್ಞದಲ್ಲಿ ಅಗ್ರಭಾಗವನ್ನು ನಮಗೆ ಕೊಟ್ಟು ಬಿಡುವಂತೆ ಅವನಿಗೆ ಮೊದಲು ಬುದ್ಧಿ ಹೇಳು; ಅವನ್ನು ಕೇಳದಿದ್ದರೆ ಯಾಗವನ್ನು ಹಾಳ್ಮಾಡಿ, ಅಲ್ಲಿದ್ದವರೆಲ್ಲರನ್ನೂ ಸೆರೆಕಟ್ಟಿ ತೆಗೆದುಕೊಂಡು ಬಾ " ಎಂದು ನೇಮಿಸಿ ಕಳುಹಿಕೊಟ್ಟನು. ಆಗ ವೀರಭದ್ರೇಶ್ವರನು ಕೋಟಿ ಸಿಡಿಲಿನಂತೆ ಆರ್ಭಟಿಸಿ ಶೌರ್ಯದಿಂದ ಹೂಂಕರಿಸಿದನು. ಆ ಶಬ್ದದೊಡನೆಯೇ ಮಹಾಭದ್ರಕಾಳೀಶಕ್ತಿಯು ಉದಿಸಿ ನಿಂತಳು. ಮತ್ತೂ ತನ್ನ ಸಂಕಲ್ಪಮಾತ್ರದಿಂದಲೇ ಸಮಾನರೂಪದ ಅಸಂಖ್ಯಾತಕೋಟಿ ಚತುರಂಗಸೈನ್ಯವನ್ನು ಸೃಜಿಸಿ, ಎಲ್ಲರನ್ನೂ ಒಡನೆ ಕರೆದುಕೊಂಡು ಭದ್ರಕಾಳಿಯೊಡನೆ ತಾನು ವೃಷಭವನ್ನೇರಿ ದಕ್ಷಾಧ್ವರದಕಡೆಗೆ ನಡೆದನು. ಈ ಮಹಾಸೇನೆಯು ಛತ್ರ ಚಾಮರ ಧ್ವಜ ಪತಾಕ ವಾದ್ಯ ವೈಭವಾದಿಗಳಿಂದ ಕೂಡಿ ನರ್ತಿಸುತ್ತಿರಲು, ಅವರ ಭಾರವನ್ನು ಹೊರಲಾರದೆ ದಿಗ್ಗಜಗಳು ತಲೆಯನ್ನು ಕುಗ್ಗಿಸಿದುವು. ದಾರಿ ನಡೆದು ಹೋಗುತ್ತಿರುವಲ್ಲಿ ವೀರಭದ್ರೇಶನು ಒಬ್ಬ ಗಣನಾಯಕನನ್ನು ಕರೆದು " ನೀನು ದಕ್ಷನ ಯಾಗಶಾಲೆಗೆ ಹೋಗಿ, ನಾವು ಬರುತ್ತಾರೆಂಬುದನ್ನು ತಿಳಿಸದೆ, ಯಜ್ಞದ ಅಗ್ರಹವಿರ್ಭಾಗವನ್ನು ಶಿವನಿಗೆ ಸಮರ್ಪಿಸೆಂದು ಅವನಿಗೆ ಹೇಳು; ಅದಕ್ಕೇನು ಉತ್ತರ ಬರುವುದೋ ಅವನ್ನು ನಮಗೆ ತಿಳಿಸು " ಎಂದು ಹೇಳಿ ಕಳುಹಿದನು. ಆತನು ಆಯುಧಧಾರಿಯಾಗಿ ವಾಯುವೇಗದಿಂದ ಬಂದು, ಜನಸ್ತೋಮವನ್ನು ದಾರಿ ಬಿಡಿಸಿಕೊಂಡು ನುಗ್ಗಿ ದಕ್ಷನ ಮುಂದೆ ನಿಂತು " ಅಯ್ಯಾ ದಕ್ಷನೇ ! ನಿನ್ನ ನಡತೆಯು ಸಿಹ್ಮನನ್ನು ಕೆಣಕಿ ದನಗಳನ್ನು

ಮುರಿಹೊಕ್ಕು ಬಾಳುವೆನೆಂದು ಯೋಚಿಸಿದ ದಡ್ಡನ ಸ್ಥಿತಿಯಹಾಗಾಗಿದೆ; ಯಾರನ್ನು ವೆಚ್ಚಿಸಿಕೊಳ್ಳುವುದಕ್ಕಾಗಿ ನೀವು ಯಜ್ಞವನ್ನಾಚರಿಸುತ್ತಿರುವಿರಿ? ಈ ವಿಷ್ಣು ಬ್ರಹ್ಮಾದಿಗಳೆಲ್ಲರೂ ಯಾರಿಂದ ಹುಟ್ಟಿದರು? ನೀವು ಆಜ್ಯಾಹುತಿಯನ್ನು ಕೊಡುವುದಕ್ಕೆ ಯಾವ ವೇದಮಂತ್ರಗಳನ್ನು ಉಪಯೋಗಿಸುವಿರೋ ಆ ವೇದಗಳು ಯಾರನ್ನು ಸ್ತುತಿಸುವುವು? ಇದನ್ನೆಲ್ಲ ನೀವು ಅಹಂಕಾರದಿಂದ ಮರೆತುಬಿಟ್ಟು ಕೆಟ್ಟುಹೋದಿರಿ; ಕ್ಷಾವು ಒರಲಾಗಿ ಕುದುರೆಯ ಮರಿ ಕತ್ತೆಯಾದಂತೆ ನಿಮ್ಮವಸ್ಥೆಯಾಯಿತು." ಎಂದನು. ಇದನ್ನು ಕೇಳಿ ಸಭಿಕರೆಲ್ಲರೂ ಕಿಡಿಕಿಡಿಯಾದರು. ದಕ್ಷನು ಕೆಂಗಣ್ಣನ್ನು ಬಿಟ್ಟು, ದುರುದುರನೆ ಗಣನಾಯಕನನ್ನು ನೋಡಿ, "ಎಲೊ! ನೀನಾರು? ಏಕೆ ಬೊಗಳುತ್ತೀಯೆ? ನಿನ್ನನ್ನು ಇಲ್ಲಿಗೆ ಬರಹೇಳಿದವರಾರು? ಈ ಮಂತ್ರದ ಸುದ್ದಿಯು ನಿನಗೇಕೆ? ಬಂದ ಕಾರ್ಯವೇನು?" ಎಂದು ನುಡಿದನು. ಗಣನಾಯಕನ ಮೈರಕ್ತವು ಕಾವೇರಿತು. ಸಭಿಕರನ್ನೆಲ್ಲ ಕ್ಷಣಕಾಲದಲ್ಲಿ ಧೂಳೀಪಟಲವನ್ನು ಮಾಡಿಬಿಡಲೆ? ಎಂದು ಮನಸ್ಸಿನಲ್ಲಿ ಸ್ಫುರಿಸಿತು. ಆದರೆ ತನ್ನ ಯಜಮಾನನು ಮಾಡಿದ್ದ ಅಪ್ಪಣೆಯನ್ನು ನೆನೆದು ಶಾಂತನಾಗಿ, ದಕ್ಷನನ್ನು ಕುರಿತು— "ನಾನು ಯಾರೆಂಬುದನ್ನು ಕಾಣಿರಾ? ನಿಮ್ಮ ಮತ್ಸ್ಯಾವತಾರದ ಮೂರ್ತಿಯ ಸೊಕ್ಕನ್ನು ಮುರಿದ—ಬ್ರಹ್ಮನ ಶಿರವನ್ನು ತರಿದ—ಜಗದೇಕಾರಾಧ್ಯನಾದ ಫಾಲಾಕ್ಷನ ದೂತನು. ನಮ್ಮೊಡೆಯನ ಅಪ್ಪಣೆಯಮೇರೆ ಈ ಯಜ್ಞದಲ್ಲಿ ಆತನ ಅಗ್ರಹವಿರ್ಭಾಗದ ಸ್ವಾಮ್ಯವನ್ನು ಕೇಳಿ ತೆಗೆದುಕೊಂಡು ಹೋಗುವುದಕ್ಕಾಗಿ ಬಂದಿರುವೆನು; ಅದನ್ನು ಕೊಡದಿದ್ದರೆ ಬೊಗಳುವ ನಾಯಿನರಿಗಳಿಗೆ ನಿಮ್ಮ ದೇಹದ ಮಾಂಸಪೌತಣವಾಗುವುದು ಎಂಬುದನ್ನು ನಿಮಗೆ ಎಚ್ಚರಿಸುವುದಕ್ಕಾಗಿ ನಾನು ಬಂದೆನಲ್ಲದೆ ಬೊಗಳತಕ್ಕವನಲ್ಲ" ಎಂದು ನುಡಿದನು. ದಕ್ಷನಾದರೊ— "ಎಲ್ಲಿಯ ರುದ್ರ? ಭಾಗವನ್ನು ಕೊಡುವುದೆಂದರೇನು? ಈ ಬಾಯ್ಬಡಿಕನನ್ನು ಕತ್ತು ಹಿಡಿದು ನೂಕಿಬಿಡಿ" ಎಂದನು. ಬಳಿಯಲ್ಲಿದ್ದ ದೂತನು ಕೊರಳಿಗೆ ಕೈಯನ್ನು ಹಾಕುವುದಕ್ಕೆ ಬರಲು, ಗಣನಾಯಕನು ಕೈಕತ್ತಿಯಿಂದ ಅವನ ಕೈಯನ್ನೇ ಕತ್ತರಿಸಿಬಿಟ್ಟನು. ಅದನ್ನು ಕಂಡು ಸಭಿಕರೆಲ್ಲರೂ ಮೊರೆದೆದ್ದರು. ಗಣವರನು ಅವ

ರೆಲ್ಲರನ್ನೂ ಲಕ್ಷಿಸದೆ ನುಗ್ಗಿ ಈಚೆಗೆ ಬಂದು, ವೀರಭದ್ರೇಶನನ್ನು ಕಂಡು ಕೈಜೋಡಿಸಿ, ನಡೆದ ಸಂಗತಿಯನ್ನೆಲ್ಲ ಬಿನ್ನಯಿಸಿದನು. ಕೇಳಿದಕೂಡಲೇ ವೀರಭದ್ರೇಶನು ರೋಷಾವೇಶದಿಂದ ಭೂಮಿಯನ್ನು ಝಾಡಿಸಿ ಒದೆದು, ಕೈಯಲ್ಲಿನ ಸಿಂಜಿನಿಯನ್ನು ಮಿಡಿದನು. ಅದರ ಧ್ವನಿಗೆ ಜಗತ್ತೆಲ್ಲ ತಲ್ಲಣಿಸಿತು. ಸೂರ್ಯಚಂದ್ರಾದಿಗಳು ಅಡಗಿ ಹೋದರು. ವಿಷ್ಣು ಬ್ರಹ್ಮಾದಿಗಳು ನಡುಗಿದರು. ಯಜ್ಞಶಾಲೆಯಲ್ಲಿ ದುಶ್ಶಕುನಗಳು ನಡೆದುವು. ಎಲ್ಲರೂ ಕಂಡು ಚಕಿತರಾದರು. (ಪಾಪಾಚರಣೆಯು ಯಾರಿಗೆ ತಾನೇ ಕೇಡನ್ನು ತರುವುದಿಲ್ಲ?) ಬಳಿಕ ವೀರೇಶನಪ್ಪಣೆಯಮೇರೆ ಮಹಾಸೇನೆಯು ವಾದ್ಯವನ್ನು ಮೊಳಗಿಸುತ್ತ ಬಂದು ಯಾಗಶಾಲೆಯನ್ನು ಮುತ್ತಿತು. ಅಲ್ಲಿ ರಕ್ಷಕವಾಗಿ ನಿಂತಿದ್ದ ದಕ್ಷನ ಕಡೆಯ ಚತುರಂಗಸೈನ್ಯಕ್ಕೂ ಇವರಿಗೂ ಮೊದಲು ಯುದ್ಧವಾರಂಭಿಸಿತು. ಓಹೋ! ಯಾಗಶಾಲೆಗೆ ಕಿಚ್ಚನ್ನಿಕ್ಕುವುದಕ್ಕೆ ಕಳ್ಳರು ಬಂದಿರುವರು, ಹಿಡಿಯಿರಿ ಹೊಡೆಯಿರಿ ತಿವಿಯಿರಿ ಎಂದು ಕೂಗಿ ಹೊಡೆಯಲುಪಕ್ರಮಿಸಿದರು. ಆಯುಧಗಳು ಖಣಿಖಣಿಲನೆ ಶಬ್ದಗೊಳ್ಳುತ್ತಿದ್ದುವು. ರುಂಡಗಳು ಕಿರೀಟಸಹಿತವಾಗಿ ಹಾರಾಡುತ್ತಿದ್ದುವು. ಹಸ್ತ್ಯಶ್ವರಥಾದಿಗಳು ತುಂಡುತುಂಡಾಗಿ ಉರುಳುತ್ತಿದ್ದುವು. ಈ ಮಹಾರಣಸಂಕುಲವನ್ನು ಬಳಗಿದ್ದ ಮನುಮುನಿಸುರಸ್ತೋಮವು ಕೇಳಿ, ಕೆಟ್ಟೆನೆಂದು ಚಿಂತಿಸಿ, ಮೋರೆಯನ್ನು ಸೊರಗಿಸಿ, ಬಾಯೊಣಗಿ ಗಹಬಜಿಸಿತು. ಯಜ್ಞವೆಲ್ಲ ಭಗ್ನವಾಗಿ ಹೋಯಿತು. ಈ ಉತ್ಪಾತವನ್ನು ವಿಷ್ಣುವು ಕಂಡು, ಓಡಿಹೋಗುತ್ತಿದ್ದ ದೇವತಾಸ್ತೋಮವನ್ನು ತಡೆದು, "ಹೆದರಿಕೊಳ್ಳುವುದೇತಕ್ಕೆ? ಬಂದುದು ಬರಲಿ; ನಾನು ನೋಡಿಕೊಳ್ಳುತ್ತೇನೆ." ಎಂದು ಧೈರ್ಯಕೊಟ್ಟು, ಹುರಿ ಮಾಡಿದನು. ವಿಷ್ಣು ಬ್ರಹ್ಮರೂ ಸಕಲದಿಕ್ಪಾಲಕರೂ ಕಿನ್ನರ ಕಿಂಪುರುಷ ವಿದ್ಯಾಧರರುಗಳೂ ತಮ್ಮ ತಮ್ಮ ಚತುರಂಗಸೇನೆಯಿಂದ ಕೂಡಿ ಯುದ್ಧಕ್ಕೆ ನಿಂತರು. ಉಭಯಮಹಾಸೇನೆಗಳೂ ರೋಷೋದ್ರೇಕದಿಂದ ಸಂಧಿಸಿ ಕಾದಾಡಲುಪಕ್ರಮಿಸಿದುವು. ಆನೆಗೆ ಆನೆ, ಕುದುರೆಗೆ ಕುದುರೆ, ರಥಕ್ಕೆ ರಥ, ಕಾಲಾಳಿಗೆ ಕಾಲಾಳು, ದಳಪತಿಗಳಿಗೆ ದಳಪತಿಗಳು ಇದಿರಾಗಿ, ಕ್ಷಣಕಾಲ ಸಮನಾಗಿ ಯುದ್ಧ ಮಾಡಿದರು. ಎರಡು ಕಡೆಯಲ್ಲೂ ವೀರನಾದಗಳೂ, ಮೂದಲೆ

ಯ ಮಾತುಗಳೂ, ಉತ್ಸಾಹವಾಕ್ಯಗಳೂ ಮೊಳಗುತ್ತಿದ್ದುವು. ರಕ್ತಪ್ರವಾಹವು ಮಾಂಸದೊಟ್ಟಲನ್ನು ಕೊಚ್ಚಿ ಹರಿಯುತ್ತಿದ್ದಿತು. ಭೂತಬೇತಾಳ ಪೈಶಾಚ ಶಾಕಿನಿ ಡಾಕಿನಿಯರು ಮಾಂಸವನ್ನು ತಿಂದು ರಕ್ತವನ್ನು ಹೀರಿ ತೇಗಿ, ಮೂಳೆಯ ಸರವನ್ನು ಹಾಕಿ, ಕೈಯಲ್ಲಿ ರುಂಡವನ್ನು ಹಿಡಿದು, ತಲೆಗೆ ಕರುಳನ್ನು ಸುತ್ತಿ, ಮೈಗೆ ಚರ್ಮವನ್ನುಟ್ಟು, ಕೋರೆದಾಡೆಗಳನ್ನು ಕಿರಿದು ಕುಣಿದಾಡುತ್ತಿದ್ದುವು. ವೀರೇಶನ ಮಹಾಗರ್ಜನೆಯು ಕ್ಷಣಕ್ಷಣಕ್ಕೆ ತನ್ನ ಸೇನೆಯ ಶೌರ್ಯವನ್ನು ಉಕ್ಕಿಸುತ್ತಲಿದ್ದಿತು. ರುದ್ರಗಣದ ಹೊಡೆತದಿಂದ ಗಗನತಟದಲ್ಲಿ ರುಂಡಮುಂಡಗಳ ಹಾರಾಟವು ಹೆಚ್ಚಿತು. ಬರಬರುತ್ತ ರುದ್ರಸೇನೆಯ ಹೊಡೆತವು ಪ್ರತಿಪಕ್ಷದವರಿಗೆ ದುಸ್ಸಹವಾಯಿತು. ಕಿಚ್ಚನ್ನು ಕಂಡ ಇರುವೆಗಳಂತೆ ದೇವತೆಗಳು ಮುಖವನ್ನು ಹಿಂದಿರುಗಿಸಿದರು. ಕೆಲರು ದಿಕ್ಕುಗೆಟ್ಟು ಓಡಿದರು. ಕೆಲರು ಗಡಗಡನೆ ಕೈಕಾಲ್ನಡುಗಿ ಶರಣಾಗತರಾದರು. ಕೆಲರು ಹುಲ್ಲನ್ನು ಕಚ್ಚಿ ಹಲ್ಲನ್ನು ಕಿರಿದು ಪ್ರಾಣದಾನವನ್ನು ಬೇಡಿದರು. ಮತ್ತೆ ಕೆಲರು ಕೈಕಾಲ್ಮುರಿದು ರಕ್ತವನ್ನು ಸುರಿಸಿ ಕುಂಟುತ್ತ ಕುಪ್ಪರಿಸುತ್ತ ಬ್ರಹ್ಮನಬಳಿಗೆ ಹೋಗಿ, ಓ ! ಯೆಂದು ಕೂಗಿಕೊಂಡು ಬಿದ್ದು ಅತ್ತು, ತಮಗಾದ ಪರಿಭವವನ್ನೆಲ್ಲ ಹೇಳಿಕೊಂಡು, ಅಯ್ಯೋ ! ನಮಗೇನು ವಿಪತ್ತನ್ನು ತಂದಿರಿ ? ಇದೆಲ್ಲಿಯ ಹಾಳುಯೂಗ ! ಅವನೇನು ಪ್ರಳಯಕಾಲದರುದ್ರನೋ ! ಕರಿಯ ಮೋಡದ ತಾತನೋ ! ಭೂತನಾಥನೋ ! ಶಿವನೇಬಲ್ಲ. ಅವನಿದಿರಿಗೆ ನಿಂತು ಉಳಿದು ಬರುವವರಾರು ? ಇನ್ನು ನಮಗೆ ಗತಿಯೇನು ? ಎಂದು ಮೊರೆಯಿಟ್ಟರು. ಬ್ರಹ್ಮನು— ಇದೇನು ಮಹಾಸುದ್ದಿಯೆಂದು ತತ್ತರಿಸುವಿರಿ ? ಬಿಡಿ; ಎಂದು ತಿರಸ್ಕರಿಸಿ, ರೋಷದಿಂದ ಹುಂಕರಿಸಿ ಹಂಸವನ್ನೇರಿ ತನ್ನ ಮುಖ್ಯಸೇನೆಯೊಡನೆ ತಾನೇ ವೀರಭದ್ರನಮೇಲೆ ಯುದ್ಧಕ್ಕೆ ಸಾಗಿದನು. ಇವನ ಸೈನಿಕರು ಮುರಿದುಬಿದ್ದೋಡುತ್ತಿದ್ದ ಕಿನ್ನರ ಯಕ್ಷ ವಿದ್ಯಾಧರ ಗಂಧರ್ವಾದಿಗಳನ್ನೆಲ್ಲ ಜರೆದು, ಹುರಿಮಾಡಿ ಒಟ್ಟುಗೂಡಿಸಿ, ರುದ್ರಗಣಸೈನ್ಯದ ಮೇಲೆ ಬಿದ್ದರು. ಆದರೇನು ? ಹಾವುಗಳ ಗುಂಪು ಗರುಡನ ಮೇಲೆ ಬಿದ್ದರೆ ಅದು ಅಂಜುವುದೆ ? ತರಗೆಲೆಗಳು ಅಗ್ನಿಯನ್ನು ಮುತ್ತಿ ಆರಿಸಬಲ್ಲುವೆ ? ಕುರಿಗಳ ಹಿಂಡು ಹುಲಿಯನ್ನು ಕೆಣಕಿ ಬದುಕಿರುವು

ವೆ ? ಅದರಂತೆಯೇ ಕ್ಷಣಕಾಲದಲ್ಲಿ ಬ್ರಹ್ಮನ ಸೇನೆಯು ರುದ್ರಗಣದ ಹತಿಯಿಂದ ಲಯವಾಗುತ್ತ ಬಂದಿತು. ಆ ರುದ್ರನು ರೌದ್ರಾವೇಶದಿಂದ ಚುಚ್ಚುತ್ತ, ಕೊಚ್ಚುತ್ತ, ಇರಿಯುತ್ತ, ತರಿಯುತ್ತ, ಕಡಿಯುತ್ತ, ಬಡಿಯುತ್ತ ಬರುತ್ತಿರುವಲ್ಲಿ, ಬಂದು ಕಡೆಯಿಂದ ಕುಯ್ಲಾಗುತ್ತ ಬಂದ ಗದ್ದೆಯಂತೆ ಬಹ್ಮನ ಪಾಳೆಯವು ಬಯಲಾಯಿತು. ಇದರಿಂದ ಚತುರ್ಮುಖನು ಅತ್ಯಂತ ರುಷ್ಟನಾಗಿ ಆರ್ಭಟಿಸಿ, ತಾನೇ ವೀರೇಶನ ಸೇನೆಗೆ ಇದಿರಾದನು. ಇದೋ ಜಗತ್ಕರ್ತನು ಬಂದ ! ಇದೋ ಪರವಾದಿಭೀಕರ ಬಂದ ! ಎಂದು ಕೂಗುವಂತೆ ಕಹಳೆಗಳು ಕೂಗಿದುವು. " ಇದುವರೆಗೂ ದೇವತಾಸೇನೆಯನ್ನು ಸದೆಬಡಿದ ರುದ್ರಸೇನೆಯ ನಾಯಕನು ಎಲ್ಲಿರುವನು ? ತೋರಿಸಿರಿ; ಅವನು ಪರಾಕ್ರಮವನ್ನು ನನ್ನಿದಿರಿಗೆ ಬಿಚ್ಚಿ ಬದುಕಲಿ " ಎಂದು ಹೇಳುತ್ತ, ಬಾಣದ ಮಳೆಯನ್ನು ರುದ್ರನಮೇಲೆ ಕರೆದನು. ಅವನ ಶೌರ್ಯಕ್ಕಿದಿರಾಗದೆ ಗಣಸೇನೆಯು ಇಬ್ಭಾಗವಾಯಿತು. ಇದನ್ನು ಕಂಡು ವೀರೇಶನು ತಾನೇ ಬ್ರಹ್ಮನ ಮುಂದೆ ಬಂದು ನಿಂತನು. ಮತ್ತೂ ಚತುರಾಸ್ಯನನ್ನು ಕುರಿತು— " ಎಲೆ ಬ್ರಹ್ಮನೇ ! ನೀನು ಮಹಾನಿಪುಣ ! ಶಿವನು ನಿನ್ನನ್ನು ಪರಮಭಕ್ತನೆಂದು ತಿಳಿದು ಕೃಪೆಯಿಂದ ಜಗತ್ಸೃಷ್ಟಿಯ ಯಜಮಾನಿಕೆಯನ್ನು ನಿನಗೆ ಕೊಟ್ಟನು; ಹೀಗಿರುವಲ್ಲಿ ಆ ಪೂರ್ವಾಪರವನ್ನು ಯೋಚಿಸಿಕೊಳ್ಳದೆ, ನಿನ್ನ ಮಗನ ಅಹಂಕಾರಕ್ಕೆ ನೀನೂ ಸಹಾಯಕನಾಗಿ ಲೋಕನಾಶಕಾರಣವಾದ ಈ ಯಜ್ಞಕಾರ್ಯದಲ್ಲಿ ಸೇರಬಹುದೆ ? ಚಿಂತೆಯಿಲ್ಲ; ಈಗಳಾದರೂ ನಿನ್ನ ಅಜ್ಞಾನವನ್ನು ಬಿಟ್ಟು ಶರಣಾಗತನಾಗು, ಇಲ್ಲದಿದ್ದರೆ ಯುದ್ಧಕ್ಕೆ ನಿಲ್ಲು " ಎಂದನು. ಬ್ರಹ್ಮನು ಕೇಕೆಹಾಕಿ ನಕ್ಕು " ಎಲೆ ಧೀರಾ ! ಶಹಬಾಸ್; ಜಗತ್ಕರ್ತೃವಾದ ನನ್ನನ್ನು ಯುದ್ಧಕ್ಕೆ ಕರೆಯುವ ಎದೆಗೆಚ್ಚಿನ ಅಹಂಕಾರಿಯಾದ ನೀನಾರು ? ನನಗೆ ಬ್ರಹ್ಮತ್ವವನ್ನು ಕೊಟ್ಟವರಾರು ? ಈ ಸುಳ್ಳನ್ನೆಲ್ಲ ಎಲ್ಲಿ ಕಲಿತೆ ? ಯಾವ ಮುಂದೆ ಇದನ್ನೆಲ್ಲ ಹರಟುವೆ ? ಬಾಯ್ಮುಚ್ಚು " ಎಂದು ಗರ್ಜಿಸಿ ನುಡಿದು, ಬಾಣಗಳ ಸಂದೋಹದಿಂದ ವೀರೇಶನನ್ನು ಮುಚ್ಚಿಬಿಟ್ಟನು. ಅದನ್ನು ಕಂಡು ವೀರೇಶನು ನಕ್ಕು, ಪ್ರತಿಬಾಣದಿಂದ ಖಂಡಿಸಿ,—ಎಲೊ ಬ್ರಹ್ಮನೆ, ಭಾಪು ! ನಾವು ಸಟ್ಟ ಸಸಿ

ಯೆಂದು ತಿಳಿದು ಇದುವರೆಗೂ ನಿನ್ನಾಟವನ್ನು ಸೈರಿಸಿಕೊಂಡು ಬಂದುದ
ಕ್ಕೆ ನೀನು ನಮಗೇ ಬಾಣಪ್ರಯೋಗವನ್ನು ಮಾಡಿದೆ; ಒಳ್ಳೀದು; ನಿನ್ನ
ಉಳಿದಿರುವ ನಾಲ್ಕು ತಲೆಗಳನ್ನೂ ತರಿದು ಶಿವನ ರುಂಡಮಾಲೆಗೆ ಸೇರಿಸು
ವುದಕ್ಕೆ ಕಳುಹಿಕೊಡುತ್ತೇನೆ, ಇದೋ ಈ ಬಾಣದ ರುಚಿಯನ್ನು ನೋ
ಡು; ಎಂದು ಕರ್ಣಾಂತವಾಗಿ ಸೆಳೆದ ಬಾಣವನ್ನು ಬ್ರಹ್ಮನ ಮೇಲೆ ಪ್ರ
ಯೋಗಿಸಿದನು. ಅದು ಮಾರುಮಾರಿಗೆ ೧ ಕ್ಕೆ ಹತ್ತು ನೂರು ಸಾವಿರವಾ
ಗಿ ಹೆಚ್ಚಿ, ರಥ ಸಾರಥಿ ಅಶ್ವಗಳನ್ನೆಲ್ಲ ಕೊಚ್ಚಿ ಬ್ರಹ್ಮನ ಸರ್ವಾಂಗದ
ಲ್ಲೂ ಚುಚ್ಚಿ ಭೇದಿಸಿಕೊಂಡುಹೋಯಿತು. ಬ್ರಹ್ಮನು ಅದರಿಂದ ಗಾ
ಯವನ್ನು ಪಡೆದ ಕಾಡಹಂದಿಯಂತೆ ಘುರುಘುರಿಸಿ, ಬೇರೊಂದು ರಥವ
ನ್ನು ಹತ್ತಿ, ಭಲರೇ! ಪಂಥಗಾರ! ಈ ಯೇಟನ್ನು ನೋಡು ಎಂದು ತೀಕ್ಷ್ಣ
ವಾದ ಅನಂತಬಾಣಗಳನ್ನು ತೆರವಿಲ್ಲದಂತೆ ವೀರಭದ್ರನ ಮೇಲೆ ಪ್ರಯೋ
ಗಿಸಿದನು ಅವಷ್ಟನ್ನೂ ವೀರೇಶನು ಕಡಿದು ಸಿಂಹನಾದ ಮಾಡಿ, ಮು
ತ್ತೆ ನಿಶಿತಾಸ್ತ್ರಗಳನ್ನು ಬ್ರಹ್ಮನ ಮೇಲೆ ಬಿಟ್ಟನು. ಅವು ಮತ್ತೆ ಬ್ರಹ್ಮ
ನ ದೇಹದಿಂದ ರಕ್ತವನ್ನು ಕಾರಿಸಿದುವು. ಇದರಿಂದ ಬ್ರಹ್ಮನು ಕೋಪ
ವೇರಿ, ಬತ್ತಳಿಕೆಯಿಂದ ಬ್ರಹ್ಮಾಸ್ತ್ರವನ್ನು ತೆಗದು ಹೂಡಿ ಪ್ರಯೋಗಿಸಿ
ದನು. ಅದು ಕಿಡಿಯನ್ನು ಕಾರುತ್ತ, ಗಣಸೈನ್ಯವನ್ನೆಲ್ಲ ಸುಡುತ್ತ ತನ್ನ
ಬಳಿಗೆ ಬರುವಷ್ಟರಲ್ಲಿ, ವೀರೇಶನು ರುದ್ರಾಸ್ತ್ರವನ್ನು ಬಿಟ್ಟು ಅದ
ನ್ನು ತುಂಡು ಮಾಡಿ, ಬ್ರಹ್ಮನ ಸಾರಥಿರಥಾಶ್ವಾದಿಗಳನ್ನು ಹಾಳ್ಮಾಡಿ, ಕಿ
ರೀಟವನ್ನು ಹಾರಿಸಿ, ಹಣೆಯಲ್ಲಿ ಗಾಯಮಾಡಿ ಮೂರ್ಛೆಗೊಳಿಸಿದನು.
ಮತ್ತೆ ಬೇರೆ ಬೇರೆ ಬಾಣಗಳಿಂದ ಇಂದ್ರನ ತೋಳ್ಗಳನ್ನು ಕತ್ತರಿಸಿ, ಅ
ಗ್ನಿಯ ನಾಲಿಗೆಯನ್ನು ಏಳು ಭಾಗವಾಗಿ ಸೀಳಿ, ಪೂಷನೆಂಬ ಸೂರ್ಯನ
ಹಲ್ಲುಗಳನ್ನು ಮುರಿದು, ಭಗನೆಂಬ ಸೂರ್ಯನ ಕಣ್ಣುಗಳನ್ನು ಕಳೆದು, ಚಂ
ದ್ರನನ್ನು ಹೊಸಗಿ, ಉಳಿದ ಗ್ರಹಗಳಿಗೂ ದಿಕ್ಪಾಲಕರಿಗೂ ವಸುಗಳಿಗೂ
ದೇಹದಲ್ಲಿ ಒಂದೊಂದು ಗುರ್ತನ್ನುಂಟುಮಾಡಿ, ಎಲ್ಲರನ್ನೂ ಸೆರೆ ಹಿಡಿದು,
ಭೂತಗಳ ವಶಕ್ಕೆ ಕೊಟ್ಟನು. ಇದರಿಂದಲೂ ಪರಾಭವಗೊಂಡು, ಉ
ಳಿದ ದೇವತೆಗಳು ವಿಷ್ಣುವಿನ ಬಳಿಗೆ ಓಡಿಹೋಗಿ ತಮ್ಮವಸ್ಥೆಯನ್ನೆಲ್ಲ
ಹೇಳಿಕೊಂಡು, "ಇನ್ನು ನಿನ್ನ ಕೈಲಾದರೆ ಯುದ್ಧಮಾಡಿ, ನಿನ್ನ ಮತ್ತೂ

ನಮ್ಮ ಮಾನಪ್ರಾಣಗಳನ್ನುಳುಹು, ಇಲ್ಲದಿದ್ದರೆ ತಲೆಯನ್ನು ತಪ್ಪಿಸಿಕೊಂಡು ಬಾಳುವುದಕ್ಕೆ ಸ್ಥಲವನ್ನು ತೋರಿಸು, ಈ ಹಾಳು ಯಜ್ಞಾದ ಹವಿಸ್ಸಿನ ಆಸೆಗಾಗಿ ಬಂದುದೂ ಸಾಕು, ಈ ಪ್ರಾಣಭೀತಿಯೂ ಸಾಕು, ನಿಮ್ಮನ್ನು ನಂಬಿ ನಾವು ಬಂದುದಕ್ಕೆ ಇದೇ ಫಲ" ಎಂದು ದುಗುಡದಿಂದ ಬಿಕ್ಕಡಿಸುತ್ತ ಹೇಳಿಕೊಂಡರು. ಆಗ ಹರಿಯು— ಕ್ಷಣಮಾತ್ರದಲ್ಲಿ ಆ ಯಜ್ಞ ವೈರಿಯನ್ನು ಗೆದ್ದು ಬರುವೆನು, ನಿಮಗೇಕೆ ಇಷ್ಟು ಚಿಂತೆ? ಎಂದು ಧೈರ್ಯವನ್ನು ಹೇಳಿ, ಸಮಾಧಾನಗೊಳಿಸಿ, ತಾನೇ ಯುದ್ಧಕ್ಕೆ ಸನ್ನದ್ಧನಾದನು. ಇಂದ್ರಾದಿದಿಕ್ಪಾಲಕರ ಪುತ್ರರೂ ಸೂರ್ಯಾದಿಗ್ರಹಗಳ ಮಕ್ಕಳುಗಳೂ ಕಳೆದುಳಿದ ಸೈನ್ಯವನ್ನು ಕಟ್ಟಿಕೊಂಡು ಹರಿಗೆ ಸಹಾಯಕರಾಗಿ ನಡೆದರು. ಎಂದು ಚೆನ್ನಬಸವೇಶನು ನುಡಿದನೆಂಬಿಲ್ಲಿಗೆ ೪ನೆ ಅಧ್ಯಾಯವು ಸಂಪೂರ್ಣವು.



೫ನೆ ಅಧ್ಯಾಯವು.



ದಕ್ಷಶಿರಶ್ಛೇದನವು.

ಎಲೆ ಸಿದ್ಧರಾಮೇಶನೆ ಕೇಳು, ವಿಷ್ಣುವು ಯುದ್ಧಸನ್ನದ್ಧನಾಗಿ ಹೊರಟ ಕೂಡಲೇ ಅವನ ಎಡತೋಳು ತೊಡೆ ಕಣ್ಣುಗಳು ಹಾರಿದುವು. ಹಾವು ಮೊಲ ಕಾಗೆಗಳು ದಾರಿಗೆ ಅಡ್ಡಲಾದುವು. ಆದರೂ ಹರಿಯು ದುರ್ಬುದ್ಧಿಯಿಂದ ಅದನ್ನು ಲಕ್ಷ್ಯ ಮಾಡದೆ ನಡೆಗೊಂಡನು. ಮುಂಗಡೆಯಲ್ಲಿ ವೀರಭದ್ರೇಶನ ಬಾಣಸ್ತೋಮದಿಂದ ತುಂಬಿದ ಯುದ್ಧಾಂಗಣವನ್ನೂ, ಹತವಾಗಿರುವ ದೇವಸ್ತೋಮವನ್ನೂ, ಹೆಣಗಳನ್ನು ಮೆಟ್ಟಿ ಕೈ ಕಾಲ್ಗಳ ತುಂಡುಗಳನ್ನು ಪಿಡಿದು ರಕ್ತವನ್ನು ಕುಡಿದು ಕುಣಿದಾಡುತ್ತಿರುವ ಭೂತ ಬೇತಾಳ ಪಿಶಾಚಾದಿಗಳನ್ನೂ ನೋಡಿ ಕೋಪವೇರಿದನು. "ಇದುವರೆಗೂ ದೇವತಾಸ್ತೋಮವನ್ನೆಲ್ಲ ಪರಾಜಯಗೊಳಿಸಿದ ವೀರನಾರೋ ಆತನನ್ನು ಮುಂಗಡೆಗೆ ಬರಹೇಳಿರಿ, ಪುಡಿಯಾಳುಗಳು ತಲೆಯು

ಳುಹಿಕೊಳ್ಳಿರಿ" ಎಂದು ವಿಷ್ಣುವು ಗರ್ಜಿಸಿ ನುಡಿಯುತ್ತ, ತೀಕ್ಷ್ಣವಾದ ಬಾಣಾವಳಿಗಳನ್ನು ಹೂಡಿ, ಕರ್ಣಾಂತವಾಗಿ ಸೆಳೆದು ವೀರಭದ್ರೇಶನ ಸೇನೆಯ ಮೇಲೆ ಪ್ರಯೋಗಿಸುತ್ತ ಬಂದನು. ಆ ಯೇಟಿನಿಂದ ಪ್ರತಿಪಕ್ಷದ ಸೇನೆಯಲ್ಲಿ ಆನೆ ಕುದುರೆ ಕಾಲಾಳು ರಥಗಳೆಲ್ಲ ನುಚ್ಚುನೂರಾಗಿ, ಕಳೆಮುಳಿದವರು ಪ್ರಾಣಭೀತಿಯಿಂದ ವೀರಭದ್ರೇಶನ ಮರೆಹೊಕ್ಕು ಗೋಳಿಟ್ಟರು. ಅದನ್ನು ನೋಡಿ ವೀರೇಶನು ಪ್ರಳಯಕಾಲದ ರುದ್ರನಂತೆ ಕೆರಳಿ, "ನನ್ನ ಸೇನೆಗೆ ಇಷ್ಟು ಭೀತಿಯನ್ನುಂಟುಮಾಡಿದ ಆ ಕಡುಗಲಿ ಯಾರು? ಅವನನ್ನೀಗಳೇ ಸೀಳುವೆನು" ಎಂದು ಹೇಳಿ, ಕಿಡಿಕಿಡಿಯಾಗಿ, ರಥವನ್ನು ಮುಂಗಡೆಗೆ ಸರಿಸಿದನು. ಇದೋ ಅಷ್ಟದಿಕ್ಪಾಲಭೈರವನು ಬಂದನು! ಇದೋ ಬ್ರಹ್ಮಾಂತಕನು ಬಂದನು! ಎಂದು ಮೊದಲಾಗಿ ಕೂಗಿದಂತೆ ಕಹಳೆಗಳು ಭೋರ್ಗರೆದುವು. ಆಗ ವೀರೇಶನು ಹರಿಯ ಮುಂಗಡೆಗೆ ಬಂದು, ಭಲಾ ಭಲಾ! ಧೀರನೇ! ಈ ಸೈನ್ಯದಲ್ಲೆಲ್ಲ ನೀನೊಬ್ಬನೇ ಶೂರನಾಗಿ ಕಾಣುತ್ತೀಯೆ! ನನ್ನ ಸೇನೆಯನ್ನು ಹಿಮ್ಮೆಟ್ಟುವಂತೆ ಮಾಡಿದ ನಿನ್ನ ಬಾಣಪ್ರಯೋಗಶಕ್ತಿಗೆ ನಾನು ಮೆಚ್ಚಿದೆನು, ನಿನ್ನ ಹೆಸರೇನು? ಎಂದು ಕೇಳುತ್ತ, ಬಾಣವರ್ಷವನ್ನು ವಿಷ್ಣುವಿನ ಮೇಲೆ ಕರೆದನು. ಹರಿಯು ನಸುನಗೆ ನಗುತ್ತ, "ವೀರನೇ! ನೀನು ನನ್ನ ಸಾಹಸವನ್ನು ಮೆಚ್ಚಿದರೆ ಫಲವೇನು? ನೀನು ಮಾನವನ್ನುಳುಹಿಕೊಳ್ಳಬೇಕಾದರೆ ಸೆರೆಯಲ್ಲಿಟ್ಟಿರುವ ನಮ್ಮ ದೇವಸೇನೆಯವರನ್ನು ಬಿಟ್ಟು, ಶರಣಾಗತನಾಗು" ನಾನೇ ಲೋಕರಕ್ಷಕನಾದ ಅಚ್ಯುತನು, ಎಂದು ಹೇಳುತ್ತ, ಪ್ರತಿಬಾಣಗಳಿಂದ ವೀರೇಶನ ಬಾಣಗಳನ್ನೆಲ್ಲ ಖಂಡಿಸಿದನು. ವೀರೇಶನಾದರೊ— ವಿಷ್ಣುವಿನ ಮಾತನ್ನು ಕೇಳಿ, ನಕ್ಕು, ದೇವತೆಗಳನ್ನು ಬಿಡಿಸಿಕೊಳ್ಳುವ ಶಕ್ತಿಯು ನಿನಗಿದೆಯೆ? ನಿನ್ನ ದಶಾವತಾರಗಳಿಂದಲೇ ನಿನ್ನ ಅಚ್ಯುತತ್ವವು ಗೊತ್ತಾಗಿದೆಯಷ್ಟೆ! ಈಗ ಮೊದಲು ನಿನ್ನನ್ನು ನೀನು ಕಾಪಾಡಿಕೊಂಡರೆ ನಿನ್ನ ಲೋಕರಕ್ಷಕತ್ವವು ಗೊತ್ತಾಗುವುದು! ಯಾಗದಲ್ಲಿ ಪಶುಗಳನ್ನು ಒಪ್ಪಿಸಿಕೊಂಡ ಕೊಬ್ಬು ನಿನಗೆ ಹೆಚ್ಚಾಗಿರಬಹುದು! ಅದನ್ನೆಲ್ಲ ಕಕ್ಕಿಸುತ್ತೇನೆ" ಎಂದು ಹೇಳಿ, ಬಂಭರತ್ತು ಬಾಣಗಳನ್ನು ಬಂದೇ ಆವೃತ್ತಿ ವಿಷ್ಣುವಿನ ಮೇಲೆ ಪ್ರಯೋಗಿಸಿ, ಮು

ಯೋಗಕ್ಕೆ ಬರುವಂತೆ ಅನುಗ್ರಹಿಸಬೇಕು" ಎಂದು ಬೇಡಿಕೊಂಡನು. ವೀರಭದ್ರೇಶನು "ಅದರ ಚರ್ಮವು ಕರ್ಮಚಾರಿಗಳಿಗೆ ಉಪಯುಕ್ತವಾಗಿರಲಿ" ಎಂದು ವರವಿತ್ತು, ಅವರ ಚರ್ಮವನ್ನು ಸುಲಿಸಿ, ತನ್ನ ಬಿರುದಿನ ಕರಡಿಯ ವಾದ್ಯಕ್ಕೆ ಕಟ್ಟಿಸುವುದಕ್ಕಾಗಿ ಪರಿಗ್ರಹಿಸಿದನು. ಇತ್ತ ದಕ್ಷನ ದೂತರು ಬಂಗಾರದ ನಾಲಿಗೆಯಿಂದಲೂ, ನಡುಗುತ್ತಿರುವ ಕಾಲ್ಗಳಿಂದಲೂ, ಹೋಮಕುಂಡದ ಬಳಿಗೆ ಓಡಿ ಬಂದು, ದಕ್ಷಬ್ರಹ್ಮನಿಗೆ ಕೈಮುಗಿದು—ಜೀಯಾ! ನಿನ್ನ ದೀಕ್ಷೆಗೀಕ್ಷೆಯೆಲ್ಲ ಹಾಗಿರಲಿ, ವೀರಭದ್ರೇಶನೆಂಬುವನು ಪ್ರಳಯಕಾಲದ ರುದ್ರನಂತೆ ಬಂದು, ದೇವಕುಲವನ್ನೆಲ್ಲ ಹೊರಗೆ ನಾಕಗೊಳಿಸಿದನು. ಹರಿಯು ಅವನಿಗೆ ಇದಿರಾಗಿ ನಿಂತು, ಸೋತು ಶರಣಾಗತನಾದನು. ಇನ್ನು ನಿನ್ನ ರಕ್ಷಣೋಪಾಯವನ್ನು ನೀವು ನೋಡಿಕೊಳ್ಳಬೇಕು" ಎಂದು ಹೇಳಲು, ಬೆಂಕಿಯಮೇಲೆ ತುಪ್ಪವನ್ನೆರೆದಂತೆ ದಕ್ಷನ ಕೋಪಾಗ್ನಿಯು ಮಿಗಿಲಾಯಿತು. ಎಡಬಲದಲ್ಲಿರುವ ತನ್ನ ಮಂತ್ರಿಗಳನ್ನು ನೋಡಿ, "ನೋಡಿದಿರಾ! ಆ ಶಿವನ ಅಹಂಕಾರವನ್ನು? ಆತನೇ ಇವನನ್ನು ನಮ್ಮ ಯಜ್ಞವನ್ನು ಕೆಡಿಸುವುದಕ್ಕಾಗಿ ಕಳುಹಿರಬಹುದು! ಇರಲಿ; ಅವನ ಸೊಕ್ಕಿಗೆ ಪ್ರತಿಕ್ರಿಯೆಯನ್ನು ನಾನು ಮಾಡಿ ತೋರಿಸುತ್ತೇನೆ, ಇಮವರೆಗೆ ಯಾರು ಸತ್ತಿದ್ದರೆ ತಾನೇ ಏನು? ಮರಳಿ ಸೃಷ್ಟಿಸುವ ಶಕ್ತಿಯು ನನಗಿರುವಾಗ ಕೊರತೆ ಯೇನು? ಅತ್ತ ಗಮನಿಸದೆ ನಾನು ಯಜ್ಞದ ಕಾರ್ಯವಲ್ಲಿ ಮನವಿಟ್ಟು ಕುಳಿತುಕೊಂಡುದರಿಂದ ಇಷ್ಟು ಅನರ್ಥವಾಯಿತು; ಚಿಂತೆಯಿಲ್ಲ; ಈಗ ಆ ವೀರನ ಶೌರ್ಯವನ್ನು ನಾನು ವಿಚಾರಿಸಿಕೊಳ್ಳುತ್ತೇನೆ, ನನ್ನ ಶಕ್ತಿಯನ್ನು ಅವನ ಯಜಮಾನನಿಗೆ ಹೋಗಿ ತಿಳಿಸಿಕೊಳ್ಳುವಂತೆ ಮಾಡಿ ಕಳುಹುವೆನು" ಎಂದು ಹೇಳುತ್ತ, ಮಂತ್ರತಂತ್ರಗಳನ್ನೆಲ್ಲ ತೊರೆದು, ಯುದ್ಧಕ್ಕೆ ಅಣಿಯಾದನು. ಇವನ ಪ್ರಯತ್ನವು ಅಗ್ನಿಯಮೇಲೆ ಬೂದುಗವು ಸವುವು ಸೆಣಸುವುದಕ್ಕೆ ನಿಂತಂತೆಯೂ, ಹಿಮವು ಸೂರ್ಯನಮೇಲೆ ಕಾಳೆಯಗಕ್ಕೆ ನಿಂತಂತೆಯೂ ಆಯಿತು. ದಕ್ಷನು ತನ್ನ ಸೃಷ್ಟಿಸಾಮರ್ಥ್ಯದಿಂದ ಅಪರಿಮಿತವಾದ ಚತುರಂಗಸೈನ್ಯವನ್ನು ಆಗಳೇ ಸೃಜಿಸಿದನು. ಸ್ಮರಣಮಾತ್ರದಿಂದ ಅಪರಿಮಿತಬಲರಾದ ರಾಕ್ಷಸರುಗಳ ಕೋಟಿಯನ್ನು ಸಿದ್ಧಮಾಡಿದನು. ಅವರೆಲ್ಲರನ್ನೂ ವೀರಭದ್ರನಮೇಲೆ

ಬೀಳುವುದಕ್ಕೆ ಅಪ್ಪಣೆ ಕೊಟ್ಟು ಕಳುಹಿದನು. ಅಷ್ಟರಲ್ಲಿ ವೀರೇಶನ ಕಡೆಯ ಶಾಕಿನಿ ಡಾಕಿನಿ ಭೂತ ಬೇತಾಳ ಪೈಶಾಚಾದಿಗಳೆಲ್ಲರೂ ಯಾಗ ಶಾಲೆಯನ್ನು ಮುರಿಯುತ್ತಲೂ, ಕದಗಳನ್ನು ನಗ್ಗುತ್ತಲೂ, ಬೆಂಕಿಯ ನ್ನಿಕ್ಕುತ್ತಲೂ ಬರುತ್ತಿದ್ದರು. ದಕ್ಷನ ಸೈನ್ಯವು ಅವರ ಮೇಲೆ ಬಿದ್ದು ಕಾದಾಡಹತ್ತಿತು. ಉಭಯಸೇನೆಗೂ ಕ್ಷಣಕಾಲದಲ್ಲಿ ಘೋರಯುದ್ಧ ವಾಯಿತು. ಆಯುಧಗಳ ಪ್ರಹಾರದಿಂದ ರಾಕ್ಷಸರುಗಳು ಕಡಿಮಡೆದು ನೀ ಲಗಿರಿಗಳಂತೆ ಬಿದ್ದುಕೊಂಡರು. ರಕ್ಕಸರ ಹೊಟ್ಟೆಗಳನ್ನು ಶಾಕಿನಿ ಡಾ ಕಿನಿಯರು ಬಗಿದು ಕರುಳ್ಗಳನ್ನು ಚೆಲ್ಲಾಡಿದರು. ಶುಂಭ ನಿಶುಂಭ ಧೂ ಮ್ರಾಕ್ಷ ನೊದಲಾದ ಮಹಾವೀರರಾಕ್ಷಸರು ತಮ್ಮ ಸೇನೆಯಲ್ಲುಂಟಾದ ಹಾನಿಯನ್ನು ಕಂಡು, ರಕ್ತಾಕ್ಷರಾಗಿ, ವೀರನ ಸೈನ್ಯದಮೇಲೆ ಗಿರಿಗಳ ನ್ನೂ ಮರಗಳನ್ನೂ ಎಸೆದು ನುಗ್ಗುಮಾಡುತ್ತ ತರುಬಿಕೊಂಡು ವೀರೇಶನ ನ್ನು ಸಂಧಿಸಿದರು. ಕಾಳೀವರನು ಇವರನ್ನು ಕಂಡು, ದಕ್ಷನ ಸಾಹಸ ವನ್ನು ಮಗ್ಗುಲಲ್ಲಿರುವ ಹರಿಗೆ ತೋರಿಸಿ, ನಸುನಕ್ಕು, ಧನುರ್ಬಾಣಗ ಳನ್ನು ತೆಗೆದುಕೊಂಡು, ಪ್ರತಿಯೊಬ್ಬ ರಾಕ್ಷಸೇಶ್ವರನಿಗೂ ಅವರವರ ಶೌ ರ್ಯಾನುಸಾರವಾಗಿ ಬಾಣಗಳನ್ನೆಣಿಸಿ ಪ್ರಯೋಗಿಸಿದನು. ಕ್ಷಣಾರ್ಧದಲ್ಲಿ ರಾಕ್ಷಸಸೈನ್ಯವು ಮುಬ್ಬುಹರಿದ ಆಕಾಶದಂತೆ ಬಯಲಾಯಿತು. ಓ ಡುವವರು ಓಡಿದರು. ನೀರಿನಲ್ಲಿ ಮುಳುಗುವವರು ಮುಳುಗಿದರು. ಪ ಶು ಪಕ್ಷಿ ಮೃಗಗಳ ರೂಪವನ್ನು ಧರಿಸಿ ಅವಿತುಕೊಳ್ಳುವವರು ತಲೆತ ಪ್ಪಿಸಿಕೊಂಡರು. ಕೆಲವು ಓಡಿಹೋಗಿ ದಕ್ಷನಿಗೆ ಈ ಸುದ್ದಿಯನ್ನು ತಿಳು ಹಿದರು. ಅಷ್ಟರಲ್ಲಿ ವೀರೇಶನು ಕೂಡ ಇನ್ನು ತಡಮಾಡಬಾರದೆಂದು ಯೋಚಿಸಿ ಪತ್ನೀಸಮೇತನಾಗಿ ರಥದಿಂದಿಳಿದು ಕೈಕತ್ತಿಯನ್ನು ಜಳ ಪಿಸಿ, ಧೀಂಕಿಡುತ್ತ ಬೊಬ್ಬಿರಿದು ಯಾಗಮಂಟಪದೊಳಗೆ ನುಗ್ಗಿದನು. ಹಿಂದೆ ಮುಂದೆ ವಾದ್ಯಧ್ವನಿಗಳೂ ಸ್ತುತಿಪಾಠಕರ ಉದ್ಘೋಷವೂ ಮೊ ರೆಯುತ್ತಿದ್ದುವು. ಕೂಡಲೇ ವೀರೇಶನು ಬಾಗಿಲಲ್ಲಿ ನಿಂತಿದ್ದ ಭೈರವನಿಗೆ ತೇಜೋವಧೆಯನ್ನು ಮಾಡಿ. ಉಳಿದ ಕಾವಲುಗಾರರನ್ನು ನೆಲಕ್ಕೆ ಬೀ ಳುಸೆಂತೆ ಬಡಿದು, ಚೌಡೇಶ್ವರಿಯ ಕಿವಿಯನ್ನು ಕಿತ್ತು, ಲಕ್ಷ್ಮಿಯ ಮುಂ ದಲೆಯನ್ನು ಕತ್ತರಿಸಿ, ಸರಸ್ವತಿಯ ಮೂಗನ್ನು ಕೊಯ್ದು, ಶಚೀದೇವಿ

ಗೆ ಮುದ್ರೆಯನ್ನೊತ್ತಿ, ಸ್ವಾಹಾದೇವಿಯ ಮೊಲೆಯನ್ನು ಕಡಿದು, ಇದ ರಂತೆಯೇ ಉಳಿದ ದೇವಸ್ತ್ರೀಯರನ್ನೂ ಭಂಗಗೊಳಿಸಿದನು. ಅವನ ಸೇನೆಯು ಹೋಮಕುಂಡದ ಸುತ್ತಲೂ ಗೋಪೀಮಣ್ಣಿನ ತಿಲಕವನ್ನಿ ಟ್ಟು ಕುಳಿತಿದ್ದ ವಿಪ್ರರ ಬಟ್ಟೆಗಳನ್ನು ಕಿತ್ತು, ಕೆನ್ನೆಗೆ ಬಡಿದು, ಬಬ್ಬನ ಜುಟ್ಟಿಗೆ ಮತ್ತೊಬ್ಬನ ಜುಟ್ಟನ್ನು ಸೇರಿಸಿ ಕಟ್ಟಿ, ಓಡಿಸಿ (ಮುನಿಸ್ತೋ ಮಕ್ಕೆ ಮಾತ್ರ ಯಾವಕೇಡನ್ನೂ ಮಾಡಕೂಡದೆಂದು ವೀರೇಶನು ಕಟ್ಟು ಮಾಡಿರಲು) ಅವರನ್ನು ಕೆಣಕದೆ ಬಿಟ್ಟು, ಯಾಗಶಾಲೆಯನ್ನೆಲ್ಲ ಕಿತ್ತು ಕುಣಿದಾಡಿ ಬೊಬ್ಬಿರಿದಿತು. ಅಷ್ಟರಲ್ಲಿ ವೀರೇಶನು ದಕ್ಷನ ಮುಂಗಡೆ ಗೆ ಬಂದು, ಕೈಕತ್ತಿಯ ಬಂದೇ ಯೇಟಿನಿಂದ ಅವನ ತಲೆಯನ್ನು ಹೋ ಮಕುಂಡಕ್ಕೆ ಹೋಗಿ ಬಿಳುವಂತೆ ಕತ್ತರಿಸಿ ಬೊಬ್ಬಿರಿದನು. ಆಕಾಶ ದಲ್ಲಿ ದೇವದುಂದುಭಿಯಾಯಿತು. ವೀರೇಶನ ಸೇನೆಯೆಲ್ಲ ಕೋಲಾಹಲ ವನ್ನು ಮಾಡಿತು. ದಕ್ಷನ ರಾಣಿವಾಸದವರು ಓ ! ಎಂದು ಗೋಳಿಟ್ಟರು. ಆಗ ದಕ್ಷನ ಪತ್ನಿಯರು ರೋದಿಸುತ್ತ ಬಂದು, ವೀರೇಶನ ಮತ್ತೂ ಭ ದ್ರಕಾಳಿಯ ಪಾದದ ಮೇಲೆ ಬಿದ್ದು, ತಮಗೆ ಮುತ್ತೈದೆತನವನ್ನು ಕೊ ಟ್ಟು ಕಾಪಾಡಬೇಕೆಂದು ಬೇಡಿಕೊಂಡರು. ಮಹಾಕಾಳಿಯು ಕರುಣ ಗೊಂಡು, ಶರಣಾಗತರನ್ನುದ್ಧರಿಸಬೇಕೆಂದು ಪತಿಗೆ ವಿನ್ನಯಿಸಿದಳು. ಮು ಗ್ಗುಲಲ್ಲಿ ಕೈಕಟ್ಟಿ ನಿಂತಿದ್ದ ಪರ್ಯಾಜರು ಹಸಾದ ಹಸಾದವೆಂದು ನುಡಿ ಯುತ್ತಿದ್ದರು. ಇದರಿಂದ ವೀರಭದ್ರೇಶ್ವರನು ಶಾಂತನಾಗಿ, ಒಳಿಯಲ್ಲಿ ಬಿದ್ದಿದ್ದ ಯಜ್ಞದ ತಗರಿನ ತಲೆಯನ್ನೆತ್ತಿ ದಕ್ಷನ ಮುಂಡದ ಮೇಲಿಟ್ಟು ಸವರಿದನು. ಕೂಡಲೇ ದಕ್ಷನ ದೇಹದಲ್ಲಿ ಪ್ರಾಣವು ಕೂಡಿತು. ಅಜ ಪುತ್ರ– (ಆಡಿನ ಮಗ = ಬ್ರಹ್ಮನ ಮಗ) ಎಂಬ ನಾಮವು ಸಾರ್ಥಕ ವಾವ ಹಾಗೆ ದಕ್ಷನು ತೋರಿದನು, ಥಟ್ಟನೆದ್ದು ವೀರೇಶನ ಪಾದಕ್ಕೆ ನ ಮಸ್ಕರಿಸಿ, ತನ್ನಪರಾಧವನ್ನು ಕ್ಷಮಿಸಬೇಕೆಂದು ಬೇಡಿದನು. ವೀರೇಶ ನು ಅಲ್ಲಿದ್ದವರೆಲ್ಲರನ್ನೂ ಕರೆದುಕೊಂಡು ಕೈಲಾಸಕ್ಕೆ ಬಂದನು.. ಬಾ ಗಿಲಲ್ಲಿ ಎಲ್ಲರನ್ನೂ ನಿಲ್ಲಿಸಿ, ನಾರದರೊಡನೆ ವೀರೇಶನು ಶಿವನ ಬಳಿಗೆ ಹೋಗಿ, ನಮಸ್ಕರಿಸಿದನು. ಪರಶಿವನು ನಾರದನ ಮುಖದಿಂದ ನಡೆದ ಸಂಗತಿಯನ್ನೆಲ್ಲ ಕೇಳಿ ಸಂತುಷ್ಟನಾಗಿ, ಪ್ರೇಮಪುತ್ರನನ್ನು ಕರೆದು ಆ

ಲಿಂಗಿಸಿ, ಮೈದಡವಿ, ಬಾಗಿಲಲ್ಲಿ ನಿಂತಿದ್ದವರನ್ನೆಲ್ಲ ಕರೆಸಿದನು. ಅವರುಗಳು ಶಿವಪಾದವನ್ನು ಕಂಡು ಪರಮಾನಂದದಿಂದುಬ್ಬಿ ಭಯ ಭಕ್ತಿಯಿಂದ ನಮಸ್ಕರಿಸಿ ಸ್ತುತಿಸಿದರು. ಮತ್ತೂ ವಿರುದ್ಧವಾಗಿ ಆಚರಿಸಿದ ಯಜ್ಞಕಾರ್ಯದಲ್ಲಿ ಸೇರಿದ್ದ ತಮ್ಮ ತಪ್ಪನ್ನೆಲ್ಲ ಕ್ಷಮಿಸಬೇಕೆಂದು ಬೇಡಿದರು. ಶಿವನಾದರೊ— ಇನ್ನು ಮುಂದೆ ಇಂಥ ವಿರುದ್ಧಕೃತ್ಯದಲ್ಲಿ ತೊಡಗಬೇಡಿರೆಂದು ಹೇಳಿ, ಎಚ್ಚರಿಸಿ, ಎಲ್ಲರನ್ನೂ ಅನುಗ್ರಹಿಸಿ ಕಳುಹಿಕೊಟ್ಟು, ವೀರೇಶನ ಉಗ್ರತ್ವವನ್ನು ಶಾಂತಿಗೊಳಿಸಿ ಸುಖದಿಂದಿದ್ದನು. ಎಂದು ಚೆನ್ನಬಸವೇಶನು ನುಡಿದನೆಂಬಲ್ಲಿಗೆ ಈ ಅಧ್ಯಾಯವು ಸಂಪೂರ್ಣವು.

ಒನೆ ಅಧ್ಯಾಯವು.

ನೃಸಿಂಹಾವತಾರಲೀಲೆ.

ಎಲೈ ಸಿದ್ಧರಾಮೇಶನೆ ಕೇಳು,— ಒಳಿಕ ದೇವತೆಗಳು ಕೆಲಕಾಲ ಸುಖನಿಂದಿರುತ್ತಿರಲು, ಅವರಿಗೆ ಮೃತ್ಯುಸ್ವರೂಪನಾದ ಮತ್ತೊಬ್ಬ ಹಿರಣ್ಯಕಶಿಪುವೆಂಬ ಕ್ರೂರರಾಕ್ಷಸನು ಪ್ರಬಲಿಸಿ, ದೇವತೆಗಳನ್ನೆಲ್ಲ ತನ್ನ ಭುಜಪರಾಕ್ರಮದಿಂದ ಜೈಸಿ, ಅಪ್ರತಿಹತನಾಗಿ ಜಗತ್ತಿಗೆ ಹಿಂಸೆಗೊಳಿಸುತ್ತಿದ್ದನು. ದೇವೇಂದ್ರನು ಅವನ ಹಾವಳಿಯನ್ನು ತಡೆಯಲಾರದೆ ಸಕಲಪರಿವಾರದೊಡನೆ ಈಶ್ವರನ ಬಳಿಗೆ ಓಡಿಬಂದು, "ಸ್ವಾಮಿ! ಹಿರಣ್ಯಕಶಿಪುವೆಂಬ ಮಹಾರಾಕ್ಷಸನು ಬ್ರಹ್ಮನನ್ನು ಕುರಿತು ತಪಸ್ಸನ್ನಾಚರಿಸಿ, ಸುರಸರೋರಗರಾಕ್ಷಸಾದಿಗಳಿಂದಲೂ ಯಾವ ಆಯುಧಗಳಿಂದಲೂ, ಹಗಲು ರಾತ್ರಿಯಲ್ಲೂ ಮನೆಯ ಒಳಗೂ ಹೊರಗೂ ಮರಣವಾಗದಂತೆ ವರವನ್ನು ಪಡೆದುಕೊಂಡು, ಮರಣಭೀತಿಯಿಲ್ಲದೆ ನಮ್ಮೆಲ್ಲರಮೇಲೂ ಬಿದ್ದು ಜೈಸಿ, ದೇವತಾಂಗನೆಯರನ್ನೆಲ್ಲ ಸೆರೆಹಿಡಿದುಕೊಂಡು ಹೋ

ಗಿರುವನು. ಈ ವಿಪತ್ತನ್ನು ಪರಿಹರಿಸಿ ಕಾಪಾಡಬೇಕು" ಎಂದು ಬಿನ್ನೈಸಿ, ದೀರ್ಘದಂಡವಾಗಿ ಸರ್ವರೂ ನಮಸ್ಕರಿಸಿದರು. ಆಗ ಶಿವನು ದಯೆಯಿಂದ ಸರ್ವರನ್ನೂ ಏಳಿಸಿ, ವಿಷ್ಣುವನ್ನು ಕುರಿತು— ನೀನು ಹೋಗಿ ಜಗತ್ಕಂಟಕನಾದ ಆ ನೀಚರಾಕ್ಷಸನ ಪ್ರಾಣವನ್ನು ತೆಗೆದುಕೊಂಡು ಬಾರೆಂದು ಬೆಸಸಲು, ಆತನು "ಅಪ್ಪಣೆ" ಯೆಂದು ಹೇಳಿ, ನಮಸ್ಕರಿಸಿ ಹೊರಟನು. ಬ್ರಹ್ಮನಿಂದ ರಾಕ್ಷಸನಿಗೆ ದೊರೆದಿರುವ ವರದ ಸ್ವರೂಪವನ್ನೆಲ್ಲ ಯೋಚಿಸಿಕೊಂಡನು. ಆ ವರಕ್ಕೆ ಭಂಗಬಾರದಂತೆಯೂ, ಹಿರಣ್ಯಕಶಿಪುವಿನ ಮರಣವಾಗುವಂತೆಯೂ ಮಾಡುವುದಕ್ಕೆ ಉಪಾಯವೇನೆಂಬುದನ್ನು ಆಲೋಚಿಸಿಕೊಂಡನು. ಅಷ್ಟರಲ್ಲಿ ತನ್ನ ಕಾರ್ಯಸಾಧನೆಗೆ ಅನುಕೂಲ ಸಂಧಿ ದೊರೆದುದನ್ನೂ ಕಂಡುಕೊಂಡನು. (ಎಂದರೆ— ಹಿರಣ್ಯಕಶಿಪುವಿಗೆ ಪ್ರಹ್ಲಾದನೆಂಬ ಮಗನಿದ್ದನು. ಅವನು ಪರಮವೈಷ್ಣವನು; ತಂದೆಯಾದರೊ ಪರಮಶೈವ, ಮಗನ ವಿಷ್ಣುಭಕ್ತಿಯು ತಂದೆಗೆ ಸೇರುತ್ತಿರಲಿಲ್ಲ, ವಿಷ್ಣುಭಕ್ತಿಯನ್ನು ತಪ್ಪಿಸಿ ಶಿವಭಕ್ತಿಯನ್ನುಂಟುಮಾಡಬೇಕೆಂದು ಮಗನಿಗೆ ಸಾಮದಾನದಂಡೋಪಾಯಗಳನ್ನೆಲ್ಲ ಉಪಯೋಗಿಸಿದರೂ ಫಲವಾಗಲಿಲ್ಲ. ಕೊನೆಗೆ ಮಗನು "ವಿಷ್ಣುವೇ ಸರ್ವವ್ಯಾಪಿ" ಯೆಂದು ಹೇಳುತ್ತಿರಲು, "ಹಾಗಾದರೆ ನಿನ್ನ ದೈವವು ಈ ಕಂಬದಲ್ಲೂ ಇರುವುದನ್ನು ತೋರಿಸು" ಎಂದು ತಂದೆಯು ನುಡಿದನು. ಮಗನು ಪ್ರಾರ್ಥಿಸಲು, ಭಕ್ತೇಷ್ಟದಾತೃತ್ವದಿಂದ ಇದೇ ಸಮಯವೆಂದರಿತು) ಹರಿಯು ಕೇವಲ ಮನುಷ್ಯ ಅಥವಾ ಕೇವಲ ಮೃಗಾಕಾರನಾಗಿರದೆ ಎರಡೂ ಸೇರಿರುವ ನೃಸಿಂಹರೂಪವನ್ನು ತಾಳಿ, ಕಂಬವನ್ನು ಒಡೆದು, ಈಚೆಗೆ ಬಂದು, ಗರ್ಜಿಸಿ, ಹಿರಣ್ಯಕಶಿಪುವನ್ನು ಸೆಳೆದು, ತನ್ನ ತೊಡೆಯಮೇಲಿಟ್ಟುಕೊಂಡು, ಮನೆಯೊಳಗೂ ಹೊರಗೂ ನಿಲ್ಲದೆ, ಹೊಸ್ತಿಲಮೇಲೆ ಕುಳಿತು, ಹಗಲು ರಾತ್ರಿಗಳನ್ನು ಬಿಟ್ಟು, ಮುಳ್ಳದ ಸಂಧ್ಯಾಕಾಲದಲ್ಲಿ, ಯಾವ ಆಯುಧವನ್ನೂ ಉಪಯೋಗಿಸದೆ ಕೈಯುಗುರುಗಳಿಂದಲೇ ಅವನ ಹೊಟ್ಟೆಯನ್ನು ಸೀಳಿ, ರಕ್ತವನ್ನು ಕುಡಿದು ಕೊಂದುಬಿಟ್ಟನು. ಭಕ್ತನಾದ ಪ್ರಹ್ಲಾದನನ್ನು ಉದ್ಧರಿಸಿದನು. ಲೋಕವು ನಿಷ್ಕಂಟಕವಾಯಿತು. ಭೃಗುಶಾಪದಂತೆ ಬಂದು ಜನ್ಮವನ್ನೆತ್ತಿ ಅದನ್ನೂ ನೆರವೇರಿಸಿದಂತಾ

ಯಿತು. ದೇವತೆಗಳೆಲ್ಲರೂ ನಿರ್ಭೀತರಾಗಳಾದೆವೆಂದು ಸಂತೋಷಗೊಂಡರು. ಇತ್ತ ನೃಸಿಂಹ್ಮನು ದೈತ್ಯನ ರಕ್ತವನ್ನು ಮಿತಿಮೀರಿ ಪಾನಮಾಡಿದುದರಿಂದ ಅತ್ಯಂತ ಮತ್ತನಾಗಿ, ಹಿರಣ್ಯಕಶಿಪುವಿಗಿಂತಲೂ ಎಂಟುಭಾಗ ಹೆಚ್ಚಾಗಿ ಜಗತ್ತಿಗೆ ಹಿಂಸೆಗೊಡುತ್ತಿರಲು, ಈ ಸಂಕಟದಿಂದ ಬೇಸತ್ತ ದೇವತೆಗಳು ಮತ್ತೆ ಶಿವನ ಬಳಿಗೆ ಓಡಿಬಂದು, ಅಡ್ಡಬಿದ್ದು, "ಜೀಯಾ! ಒಬ್ಬ ರಾಕ್ಷಸನ ಹಿಂಸೆಯನ್ನು ತಾಳಲಾರದೆ ತಮ್ಮ ಬಳಿಗೆ ಬಂದು ದೂರು ಪೇಳಿಕೊಳ್ಳಲಾಗಿ ತಾವು ವಿಷ್ಣುವನ್ನು ಕಳುಹಿಕೊಟ್ಟುದು, ಹಳೆಯ ರೋಗವನ್ನು ಪರಿಹರಿಸುವುದಕ್ಕಾಗಿ ಕೊಟ್ಟ ಔಷಧವು ಹೊಸದೊಂದು ರೋಗವನ್ನು ಹುಟ್ಟಿಸಿದಂತೆಯೂ, ಮೊದಲ ಗಂಡನು ಕೆಟ್ಟವನೆಂದು ಬಿಟ್ಟು ಮತ್ತೊಬ್ಬನನ್ನು ವರಿಸಲು, ಅವನು ಮಾತು ಮಾತಿಗೆ ಪ್ರಹರಿಸುವ ಕಟುಗನಾದಂತೆಯೂ, ರಾಕ್ಷಸನ ಭಯವು ನಮಗೆ ತಪ್ಪಿದರೂ ಅವನಿಗಿಂತಲೂ ಮಿಗಿಲಾಗಿ ಹಿಂಸಿಸುವ ಸಿಹ್ಮಾಕೃತಿಯ ಭೂತವು ನಮ್ಮನ್ನು ಬಾಳಗೊಡಿಸದೆ ಇರುವುದು" ಎಂದು ಬಿನ್ನೈಸಿಕೊಂಡರು. ಶಿವನು ಕೇಳಿ ನಕ್ಕು, "ಹೆದರಬೇಡಿರಿ ಹೋಗಿರಿ, ನೃಸಿಂಹ್ಮನ ಬಾಧೆಯನ್ನು ತಪ್ಪಿಸುತ್ತೇವೆ" ಎಂದು ಸಮಾಧಾನಮಾಡಿ ಕಳುಹಿ, ವೀರೇಶನನ್ನು ಕರೆದು, "ನೀನು ನೃಸಿಂಹ್ಮನ ಬಳಿಗೆ ಹೋಗಿ ಬಳ್ಳಿಯ ಮಾತಿನಿಂದ ಬಾರೆಂದು ಕರೆದುಕೊಂಡು ಬಾ; ಅದರಂತೆ ನಡೆಯದಿದ್ದರೆ ಅವನನ್ನು ಕೊಂದು ತಲೆಯನ್ನೂ ಮೈ ತೊಗಲನ್ನೂ ತೆಗೆದುಕೊಂಡು ಬಾರೆಂದು ಅಪ್ಪಣೆಯಾಗಿ ಕಳುಹಿಕೊಟ್ಟನು. ಕೂಡಲೇ ವೀರಭದ್ರೇಶನು ತನ್ನ ಸೇನೆಯೊಡನೆ ಕೂಡಿ ನೃಸಿಂಹ್ಮನಿದ್ದ ಬಳಿಗೆ ಬಂದನು. ಮತ್ತೂ ಇದಿರಿಗೆ ನಿಂತು, ಅಯ್ಯಾ! ಲೋಕಕಂಟಕನನ್ನು ಶಿಕ್ಷಿಸುವುದಕ್ಕಾಗಿ ಬಂದ ನೀನು ಶಿವನಾಜ್ಞೆಯನ್ನು ನೆನೆವೇರಿಸಿಬಿಟ್ಟ ಬಳಿಕ, ಹಿಂತಿರುಗಿ ಕೈಲಾಸಕ್ಕೆ ಬರುವುದನ್ನು ಮರೆತು, ಲೋಕಕ್ಕೆ ಮತ್ತಷ್ಟು ಹಿಂಸೆಗೊಳಿಸುತ್ತ ನಿಂತುಕೊಳ್ಳಬಹುದೆ? ಲೋಕರಕ್ಷಕ—ಸತ್ವಗುಣಶಾಲಿ—ಯೆನಿಸಿಕೊಳ್ಳುವ ನೀನು ಹೀಗೆ ತಾಮಸ ಸ್ವಭಾವದಿಂದ ನಡೆಮಾಡಿಕೊಳ್ಳುತ್ತಿರುವುದನ್ನು ನೋಡಿ ಲೋಕವೆಲ್ಲ ಪರಿಹಾಸಮಾಡುವುದಿಲ್ಲವೆ? ಇದು ನಿನಗೆ ಸರಿಯಲ್ಲ; ಬಿಡು; ನಿನ್ನನ್ನು ಕರೆದುಕೊಂಡು ಬರುವುದಕ್ಕೆ ಪರಶಿವನಪ್ಪಣೆಯಾಗಿರುವುದು; ನಡೆ, ಎಂದು

ನುಡಿದನು. ಇದನ್ನು ಕೇಳಿ ನೃಸಿಹ್ಮನು ಘುಡುಘುಡಿಸಿ, ಎದ್ದು, ಗರ್ಜಿಸಿ, " ಅವನಾರು ಪರಶಿವನೆಂಬುವನು ? ನನ್ನನ್ನು ಕರೆಸುವುದಕ್ಕೆ ಅವನಿಗೆ ಅಂಥ ದೊಡ್ಡ ಅಧಿಕಾರವೇನು ? ನನ್ನ ಬಳಿಗೆ ಬಂದು, ಸಮನಾಗಿ ನಿಂತು ಮಾತನಾಡಿಸುವುದಕ್ಕೆ ನೀನಾರು ? ಯಮನ ಕಡೆಯವರು ನಿನ್ನನ್ನು ಕರೆದುಕೊಂಡು ಹೋಗುವುದಕ್ಕೆ ಬಂದಿರಬಹುದು ! ಅದುಕಾರಣ, ಪ್ರಾಣವನ್ನು ಕೊಟ್ಟು ಹೋಗುವುದಕ್ಕೆ ನೀನು ಇಲ್ಲಿಗೆ ಬಂದಿರುವಂತಿದೆ. ನಮ್ಮ ಶೌರ್ಯವನ್ನು ಕೇಳಿ ಕೇಳಿಯೂ ನಮ್ಮ ಮುಂದೆ ಬಂದು ನಿಂತುಕೊಳ್ಳಬಹುದೆ ?" ಎಂದು ಕೊಬ್ಬಿದ ಮಾತನ್ನಾಡಿದನು. ವೀರೇಶನು ನಕ್ಕು, ಕೋಪವನ್ನು ತಾಳಿ, " ಎಲೊ ವಿಷ್ಣುವೆ ! ನಿನಗೆ ಜನ್ಮಾಂತರವುಂಟಾಗಿರುವುದರಿಂದ ಗುಣಾಂತರವೂ ಉಂಟಾಗಿದೆ; ಅದು ನಿನ್ನ ತಪ್ಪಲ್ಲ; ತಾಮಸಪ್ರಕೃತಿಯ ದೈತ್ಯನ ರಕ್ತವನ್ನು ಕುಡಿದುದರಿಂದ ಮದವೇರಿದ ನೀನೂ ತಾಮಸಾತ್ಮಕನಾಗಿ ಪೂರ್ವಸ್ಮರಣೆಯಿಲ್ಲದೆ ಬಾಯ್ಗೆ ಬಂದಂತೆ ಹರಟುತ್ತಿರುವೆ; ನಿನಗೆ ಜ್ಞಾನೋದಯವಾಗುವುದಕ್ಕಾಗಿ ಎಚ್ಚರಿಸುತ್ತೇನೆ ಕೇಳು— " ಜಗತ್ತಿಗೆಲ್ಲ ಸೃಷ್ಟಿಕರ್ತನು ಬ್ರಹ್ಮನು; ನಿನ್ನ ಮೂಲ ಜನ್ಮದ ಕೆಲಸವು ರಕ್ಷಣಕಾರ್ಯ; ನೀನೇಪರಿ; ನಿನ್ನನ್ನೂ ಈ ಜಗತ್ತನ್ನೂ, ಸೃಷ್ಟಿಸಿ ಸಲಹಿ ಕೊಲ್ಲುವುದಕ್ಕೆಲ್ಲ ಮುಖ್ಯಾಧಿಪತಿಯಾದವನು ರುದ್ರನು; ಆತನ ಮಗನೇ ನಾನು; " ಎಂದು ನುಡಿಯಲು, ನೃಸಿಹ್ಮನು ಅಹ ಹಾ ! ಪರಮಾಶ್ಚರ್ಯ ! ಇದೀಗ ಪರಮಕೌತುಕ ! ಬೂದಿಬಡಕ ಗೊರವ ಅರೆಗಂಡುಸು ಆದವನೊಬ್ಬನನ್ನು ಜಗತ್ತಿಗೇ ದೊಡ್ಡವನೆಂದು ಹೇಳಿ, ನಮ್ಮನ್ನು ಬೆದರಿಸುವುದಕ್ಕೆ ಬಂದಿರುವ ಈ ಎದೆಗಾರನು ಅವನ ಮಗನಂತೆ ! ನಮ್ಮನ್ನು ಕರೆದುಕೊಂಡು ಹೋಗುತ್ತಾನಂತೆ ! ನೋಡಿದಿರಾ ? ಎಂದು ತನ್ನ ಮಗ್ಗುಲಲ್ಲಿದ್ದವರೊಡನೆ ಪರಿಹಾಸವಾಡಿ, ನುಡಿದು, ಕೈಪೊಯ್ದು ನಕ್ಕು, ವೀರೇಶನನ್ನು ಕುರಿತು— ಎಲಾ ! ಮಾತಿನಲ್ಲಿ ದೊಡ್ಡವನೆಂದು ನೀನು ಹೇಳಿಕೊಂಡರೆ ಫಲವೇನು ? ಅದು ಹಾಗಿರಲಿ; ಇಗೋ ನೋಡು; ನಾವು ಜಗತ್ತನ್ನು ಉಳುಪುವುದಕ್ಕೂ ಹಾಳ್ಮಾಡುವುದಕ್ಕೂ ಹೊಸದಾಗಿ ಸೃಷ್ಟಿಸುವುದಕ್ಕೂ ಶಕ್ತರು; ಇಂದ್ರ ಬ್ರಹ್ಮರುದ್ರಾದಿಗಳೆಲ್ಲರೂ ನಮ್ಮ ಆಜ್ಞೆಗಧೀನರಾಗಿ ಬಾಳುವರು; ಕೇಳದವರಿಗೆ

ಇಷ್ಟಾರ್ಥವನ್ನು ಕೊಡಬಲ್ಲೆವು; ನಮಗೆ ಮಿಾರಿದವರಾರಿರುವರು? ಸಾಕು; ನಿನ್ನ ಹರಟೆಯನ್ನು ಮುಚ್ಚು; ಹೆಚ್ಚು ಮಾತನಾಡಿ ಪ್ರಾಣವನ್ನು ಕಳೆದುಕೊಳ್ಳಬೇಡ; ಬಂದ ದಾರಿಯನ್ನು ಹಿಡಿದು ಹೋಗು, ಎಂದು ನುಡಿದನು. ವೀರೇಶನು ಕೇಳಿ, ಕಾಲಾಗ್ನಿಯಂತೆ ಕೆರಳಿದರೂ, ಶಿವನ ಪ್ಪಣೆಯಂತೆ ಮತ್ತೊಂದು ಬಾರಿಯೂ ಹಿತೋಪದೇಶವನ್ನು ಮಾಡಿ ನೋಡಬೇಕೆಂದು ಯೋಚಿಸಿ, ಶಾಂತನಾಗಿ, ಎಲೆ ನೃಸಿಹ್ಮನೆ! ಕೇಳು; ನಿನ್ನ ಮೂರ್ಖತನವನ್ನು ಬಿಡು; ಈ ಹುಚ್ಚುತನದಿಂದ ಫಲವಿಲ್ಲ; ನೀನು ಜಗತ್ತನ್ನೆಲ್ಲ ಪಾಲಿಸುವವನೇ ನಿಜ; ಆದರೆ ಹೀಗೆ ಶಿವನಪ್ಪಣೆಯನ್ನು ಮಿಾರಿ ನಡೆಯುವುದು ನಿನಗೆ ಶ್ರೇಯಸ್ಕರವಲ್ಲ; ಶಿವನಾಜ್ಞೆಯಂತೆಯೇ ನೀನು ಮತ್ಸ್ಯ ಕೂರ್ಮ ವರಾಹ ನಿಹ್ಮಾದಿ ರೂಪಗಳನ್ನೆಲ್ಲ ಧರಿಸಿ, ಜಗತ್ಕಂಟಕತ್ವವನ್ನು ಪರಿಹರಿಸಿದೆ; ಈಗ ಅದೆಲ್ಲವನ್ನೂ ಮರೆತು, ಲೋಕಕ್ಕೆ ನೀನೇ ಕಂಟಕನಾಗಿ ದೇವತೆಗಳನ್ನೆಲ್ಲ ಗೋಳಿಡಿಸುತ್ತಲಿರುವೆ; ಇದು ನಿನಗೆ ಯೋಗ್ಯವಲ್ಲ" ಎಂದು ನುಡಿದರೂ ಆ ವೀರೇಶನ ಶಾಂತಿವಚನಾಮೃತದಿಂದ ನೃಸಿಹ್ಮನ ಕಲ್ಲುಮನವು ನೆನೆಯಲಿಲ್ಲ. ಆದರೂ ವೀರೇಶನು— ಅಯ್ಯಾ! ಜೇಡ; ಜೇಡ; ನನ್ನ ಮಾತನ್ನು ಕೇಳು, ಶಿವನು ನಿನಗೆ ಕೇಡನ್ನು ಬಯಸುವುದಿಲ್ಲ; ಅಲ್ಲಿಗೆ ಬಂದು ಕಂಡು ಬದುಕು" ಎಂದು ವಿಧವಿಧವಾಗಿ ಪೇಳುತ್ತಿದ್ದರೂ, ನೃಸಿಹ್ಮನು ಕೇಳದೆ ಕೋಪಾವೇಶಗೊಂಡು, ಥಟ್ಟನೆ ವೀರೇಶನ ಮೇಲೆ ಹಾರಿ, ಅಪ್ಪಳಿಸಿದನು. ಆಗ ವೀರೇಶನ ಶಾಂತಿಯು ಬರಿದಾಯಿತು. ರೋಷವು ಉಕ್ಕೇರಿತು. "ಇನ್ನು ನಮ್ಮಲ್ಲಿ ತಪ್ಪಿಲ್ಲ; ನೀವೆಲ್ಲರೂ ನೋಡಿರಿ" ಎಂದು ಸುರರಿಗೆ ಹೇಳಿ, ಪುಟನೆಗೆದು ಹಾರಿ, ಎಡಗಾಲಿನಿಂದ ನೃಸಿಹ್ಮನ ತಲೆಗೆ ಝಾಡಿಸಿ ಒದೆದನು. ನಿಹ್ಮನು ಮೂರ್ಛೆಯೊಂದಿ ಭೂಮಿಗೆ ಬಿದ್ದು, ಚೇತರಿಸಿಕೊಂಡೆದ್ದು, ಗರ್ಜಿಸಿ, ಕೈಗಳನ್ನು ಎತ್ತಿ ವೀರೇಶನನ್ನು ಹಿಡಿದು ಬಗಿಯುವುದಕ್ಕಾಗಿ ರಭಸದಿಂದ ಬರುತ್ತಿರಲು, ಈ ನೃಸಿಹ್ಮನ ಮದಕ್ಕೆ ಸರಿಯಾದ ಔಷಧವನ್ನು ಕೊಡುತ್ತೇನೆಂದು ಹೇಳಿ, ವೀರೇಶನು ಕೂಡಲೇ ಶರಭಾವತಾರವನ್ನು ಧರಿಸಿದನು. ಮೇರುಪರ್ವತಕ್ಕೆ ರಕ್ಕೆಗಳೂ ಎಂಟು ಪಾದಗಳೂ ಮೂಡಿದಂತೆ ಕಾಣುತ್ತಿದ್ದ ಆ ಮಹಾಶರಭಮೂರ್ತಿಯು, ಆಕಾಶ

ದಲ್ಲಿ ಹಾರಿದರೆ ರಕ್ಕೆಯ ಬಡಿತದ ಗಾಳಿಯಿಂದ ಸಮುದ್ರಗಳೆಲ್ಲ ಉಕ್ಕಾಡದೆ ಇರುವುವೆ? ಗಿರಿಗಳು ಹಾರಾಡದೆ ಹೋಗುವುವೆ? ಸೂರ್ಯ ಚಂದ್ರ ನಕ್ಷತ್ರಮಂಡಲಗಳು ಜೆಲ್ಲಾಡದೆ ಉಳಿಯುವುವೆ? ಎಂದು ಲೋಕವೆಲ್ಲವೂ ಯೋಚಿಸಿಕೊಳ್ಳುತ್ತಿರಲು, ತನ್ನ ಕೊಕ್ಕಿನಿಂದ ನೃಸಿಹ್ಮನ ಕತ್ತನ್ನು ಕಚ್ಚಿ ಅಂತರಿಕ್ಷಕ್ಕೆ ಭರ್ರನೆ ಹಾರಿದನು. ನೃಸಿಹ್ಮನು ತಪ್ಪಿಸಿಕೊಳ್ಳುವುದಕ್ಕಾಗಿ ಒಮ್ಮೆಮ್ಮೆ ಒದರಾಡುವನು; ಶರಭನು ಪಾದಗಳಿಂದಿರುಕಿ ಕುಸುರುವನು; ಸಿಹ್ಮನು ನಖಗಳಿಂದ ಪರಚುವನು, ಶರಭನು ಗಾಳಿಗಿರಗನಂತೆ ಸುತ್ತಾಡಿಸುವನು, ಸಿಹ್ಮನು ತಲೆಯನ್ನು ತಿರುಹಿ ಕಡಿಯುವುದಕ್ಕೆ ಬಾಯ್ದೆಗೆವನು, ಶರಭನು ರಕ್ಕೆಗಳಿಂದ ಝಾಡಿಸಿ ಮೂರ್ಛೆಗೊಳಿಸುವನು. ಹೀಗೆ ಆಕಾಶದಲ್ಲೇ ಪರಸ್ಪರ ಕಾದಾಡುತ್ತಿರಲು, ನೃಸಿಹ್ಮನ ಶಕ್ತಿಯು ಕುಗ್ಗಿ ನಿಶ್ಚೇಷ್ಟನಾಗುತ್ತ ಬಂದನು. ವೀರೇಶನಾದರೊ— ಎಲೆ ಹರಿಯೆ! ನಿನ್ನ ಜಗತ್ಕರ್ತೃತ್ವವೆಲ್ಲಿ? ಈಗ ತೋರಿಸು! ಶಿವನ ಒಳಗೆ ಬರುವುನಿಲ್ಲವೆಂದು ಸೊಲ್ಲುತ್ತಿದ್ದ ನಿನ್ನ ನಾಲಿಗೆ ಯೆಲ್ಲಿ? ಶಿವನನ್ನು ಜರೆಯುತ್ತಿದ್ದ ನಿನ್ನ ಪೌರುಷವೆಲ್ಲಿ? ಪರಿಹಾಸವಚನವನ್ನಾಡುತ್ತಿದ್ದ ನಿನ್ನ ಕೊಬ್ಬೇನಾಯಿತು? ಈಗಳಾದರೂ ಬುದ್ಧಿ ಬಂದಿತೊ? ಎಂದು ಮೂದಲಿಸುತ್ತಿರಲು, ನೃಸಿಹ್ಮನ ದೇಹದಿಂದೆಲ್ಲ ರಕ್ತವು ಮೋಡದಿಂದ ಮಳೆ ಸುರಿಯುವಂತೆ ಸುರಿಯುತ್ತಿದ್ದಿತು.

ಆದರೂ ವೀರೇಶನು ಬಿಡದೆ, ಲೀಲೆಯಿಂದ ಸಿಹ್ಮನನ್ನು ಕಚ್ಚಿ ಬೆಟ್ಟಗಳ ಮೇಲಕ್ಕೆ ಎಸೆಯುತ್ತಲೂ, ಅಲ್ಲಿಂದ ಬೀಸಿ ಭೂಮಿಗೆ ಅಪ್ಪಳಿಸುತ್ತಲೂ, ಬಾಲವನ್ನು ಕಚ್ಚಿ ದರದರನೆ ನೆಲದಮೇಲೆ ಎಳೆಯುತ್ತಲೂ ಅಂತ್ಯಾವಸ್ಥೆಗಿಳಿಸಿದನು. ಕಡೆಗೆ ನೃಸಿಹ್ಮನು ಕೊರಗಿ ಸುರುಗಿ ಪ್ರಾಣವನ್ನು ಬಿಟ್ಟನು. ದೇವತೆಗಳು ಹೂಮಳೆಗಳನ್ನು ಸುರಿಸಿದರು. ದೇವದುಂದುಭಿಯು ಮೊಳಗಿತು. ಲೋಕವೆಲ್ಲ ಹರ್ಷಗೊಂಡಿತು. 'ಶಿವನಪ್ಪಣೆಯುಮೇರೆ ವೀರೇಶನು ಅವರ ತಲೆಯನ್ನು ಕೊಯ್ದು ಹಿಡಿದು, ಚರ್ಮವನ್ನು ಸುಲಿದು, ಪರಶಿವನಬಳಿಗೆ ತೆಗೆದುಕೊಂಡು ಬಂದು ಒಪ್ಪಿಸಿ ನಮಸ್ಕರಿಸಿದನು. ಶಿವನು ನೋಡಿ ಸಂತೋಷಪಟ್ಟು ಮಗನನ್ನು ಆಶೀರ್ವದಿಸಿ ತಬ್ಬಿ ಮುದ್ದಾಡಿ, ಆ ನೃಸಿಹ್ಮನ ಮುಖಕ್ಕೆ ಕೀರ್ತಿಮುಖವೆಂದು ಹೆಸರನ್ನು ಕೊಟ್ಟು,

ತನ್ನ ಪೀಠದ ಬಲಗಿನ ಮೇಲ್ಗಡೆಯಲ್ಲಿ ಅಲಂಕರಿಸಿ, ಚರ್ಮವನ್ನು ಹಾಸಿ ಆಸನವನ್ನು ಮಾಡಿ ಕುಳಿತು, ದೇವತೆಗಳಿಗೆಲ್ಲ ಅಪ್ಪಣೆ ಕೊಟ್ಟು ಕಳುಹಿ, ಸುಖಮಯನಾಗಿದ್ದನೆಂದು ಚೆನ್ನಬಸವೇಶನು ನುಡಿದ ಸೆಂಬಿಲ್ಲಿಗೆ ಆರನೆ ಅಧ್ಯಾಯವು ಸಂಪೂರ್ಣವು.

೭ ನೆ ಅಧ್ಯಾಯವು.

ಪಾರ್ವತೀತಪಶ್ಚರಣವು.

ಎಲೆ ಸಿದ್ಧರಾಮೇಶನೆ ! ಪೂರ್ವದಲ್ಲಿ ಹಿಮವಂತನ ಪತ್ನಿಯಾದ ಮೇನಕೆಯು ಶಂಕರಿಯನ್ನು ಕುರಿತು ಕಠಿನವಾದ ತಪಸ್ಸನ್ನಾಚರಿಸಿದಳು. ಶಿವೆಯು ಮೆಚ್ಚಿ ಪ್ರತ್ಯಕ್ಷಳಾಗಿ, ನಿನ್ನಿಷ್ಟವೇನೆಂದು ಕೇಳಲು, " ನೀನು ಮಗಳಾಗಿ ನನ್ನ ಹೊಟ್ಟೆಯಿಂದ ಜನಿಸಬೇಕು " ಎಂದು ಬೇಡಿದಳು. ಭವಾನಿಯು ಹಾಗೆಯೇ ಆಗಲೆಂದೊಪ್ಪಿ ವರವನ್ನು ಕೊಟ್ಟದ್ದಳು. ಇತ್ತ ದಕ್ಷಯಾಗದಲ್ಲಿ ದಕ್ಷನ ಸಂಬಂಧದ ತನ್ನ ದೇಹವನ್ನು ಯೋಗಾಗ್ನಿಗೆ ಆಹುತಿಯಾಡಿ ವಿಸರ್ಜಿಸಿದ ಬಳಿಕ, ಮೇನಕೆಗೆ ಮುಂಚೆ ಕೊಟ್ಟದ್ದ ವರದ ಪರಿಪಾಲನಾರ್ಥವಾಗಿ ಆಕೆಯ ಗರ್ಭವನ್ನು ಪ್ರವೇಶಿಸಿ ಪಿಂಡವಾಗಿ ಬೆಳೆದಳು. ನವಮಾಸವು ತುಂಬಿದ ಬಳಿಕ ಶುಭಮಾಸ ಶುಭತಿಥಿ ಶುಭನಕ್ಷತ್ರ ಶುಭಲಗ್ನದಲ್ಲಿ ಮೇನಕೆಯು ಲಿಂಗಧಾರಿಣಿಯಾದ ಸುಕುಮಾರಿಯನ್ನು ಹಡೆದಳು. ಜನನವಾದ ವಾರ್ತೆಯನ್ನು ಗಿರಿರಾಜನು ಕೇಳಿ ಬಂದು ಶಿಶುವನ್ನು ನೋಡಿ ಸಂತೋಷಪಟ್ಟು, ತಮ್ಮ ಕುಲಗುರುವಿನಿಂದ ದೀಕ್ಷೆಯಾಡಿಸಿ, ಉಮೆ ಯೆಂದು ನಾಮಕರಣವನ್ನು ಮಾಡಿದನು. ಈ ಗಿರಿಜಾತೆಯು ನಗರಾಜನ ಮನೆಯಲ್ಲಿ ಶಿವನ ಪುಣ್ಯವೇ ಸಾಕಾರವಾಗಿ ವೃದ್ಧಿಗೊಳ್ಳುತ್ತಿರುವಂತೆಯೂ, ಶಂಕರನ ಮೋಹನಮಂತ್ರಶಕ್ತಿಯೇ ಬೆಳೆಯುತ್ತಿರುವಂತೆಯೂ, ಶಿವನ ಸೌಖ್ಯಸಾರವೇ ಹೆಣ್ಣಿನ ರೂಪದಿಂದ ಅಭಿವೃದ್ಧವಾಗುತ್ತಿರುವಂತೆಯೂ, ಸೌಂದರ್ಯತೇಜೋವೈಭವದಿಂದ ಬೆಳೆಯು

ತ್ತಿದ್ದಳು. ಬಾಲ್ಯವನ್ನು ಕಳೆದು ಯೌವನಾವಿರ್ಭಾವಗೊಂಡ ಪಾರ್ವತಿಯು ಕಪೋಲಗಳಲ್ಲಿ ಕೆಂಪು ಮೂಡಿತು. ಕೌಂಕುಳಲ್ಲಿ ಪದ್ಮವಾಸನೆಯ ಬೆಮರು ಹುಟ್ಟಿತು. ಮುಖದಲ್ಲಿ ಲಾವಣ್ಯವೀಚಿಯು ತೇಲಾಡಹತ್ತಿತು. ದೀರ್ಘವಾದ ನಯನಗಳು ತುದಿಯಲ್ಲಿ ಕೆಂಪನ್ನು ತಾಳಿದುವು. ನಡುವು ಸಣ್ಣನಾಯಿತು. ತೊಡೆಗಳು ನುಣುಪಾದುವು. ಮೂತಿನಲ್ಲಿ ಸೊಗಸು ಹೆಚ್ಚಿತು. ನಡಗೆಯು ಮಂದವಾಯಿತು. ನಗೆಯಲ್ಲಿ ನಾಚಿಕೆಯು ಬೆರೆದಿತು. ಎದೆಗಳು ಉಬ್ಬೀರಿದುವು. ಪ್ರತಿಯೊಂದು ಅಂಗವೂ ಸಲ್ಲಕ್ಷಣಕ್ಕೆ ತಕ್ಕಂತೆ ದುಂಡಾಗಿ ಮಿರುಗುತ್ತಿರಲು, ಅಗಜಾತೆಯು ಶೃಂಗಾರದ ಗಣಿಯಾಗಿಯೂ, ಲಾವಣ್ಯದ ಹೊಳೆಯಾಗಿಯೂ, ಸೌಂದರ್ಯದ ನಿಧಿಯಾಗಿಯೂ, ಮಾಂಗಲ್ಯದ ಮನೆಯಾಗಿಯೂ, ಸೊಂಪಿನ ಬೀಡಾಗಿಯೂ, ಮೆರೆಯುತ್ತಿದ್ದಳು. ಆಗಳೊಂದಾನೊಂದು ದಿವಸ ನಾರದ ಮಹರ್ಷಿಯು ವೀಣೆಯನ್ನು ಬಾಜಿಸುತ್ತ ಆಕಾಶಮಾರ್ಗದಿಂದಿಳಿದು ನಗರಾಜನರಮನೆಗೆ ಬಂದನು. ಅರಸನು ಋಷಿಯನ್ನು ಕಂಡು ನಮಸ್ಕರಿಸಿ, ಅಂತಃಪುರಕ್ಕೆ ಕರೆದುಕೊಂಡು ಹೋಗುತ್ತಿರಲು, ಇದಿರಾಗಿ ಪಾರ್ವತಿಯು ಬಂದಳು. ನಾರದನು ಕಂಡು ಥಟ್ಟನೆ ದೇವಿಯ ಪಾದಾರವಿಂದಕ್ಕೆ ನಮಸ್ಕರಿಸಿದನು. ಪರ್ವತರಾಜನಾದರೊ ಇದೇನಾಶ್ಚರ್ಯವೆಂದು ಬೆರಗಾಗಿ,– ವಂದ್ಯರಾಪ ತಾವು ನನ್ನ ಮಗಳಿಗೆ ನಮಸ್ಕರಿಸುವುದೆಂದದೇನು ? ಎಂದು ಕೇಳಿದನು. ಅದಕ್ಕೆ ನಾರದರ್ಷಿಯು –" ಗಿರಿರಾಜನೆ, ದೇವಗಂಗೆಯು ಆಕಾಶದಿಂದಿಳಿದುಬಂದವಾತ್ರದಿಂದಲೇ ಅದಕ್ಕೆ ಆಕಾಶವು ತಾಯಿಯಾಯಿತೆ ? ಕಲ್ಪವೃಕ್ಷವು ಹುಟ್ಟಿರುವ ಮಾತ್ರದಿಂದಲೇ ಅದಕ್ಕೆ ನಂದನವನವು ಜನನಿಯಾಗುವುದೆ ? ಅದರಂತೆಯೇ ಜಗದಂಬಿಕೆಯು ಕಾರ್ಯಕಾರಣಸಂಬಂಧದಿಂದ ನಿಮ್ಮ ಮನೆಯಲ್ಲಿ ನೆಲಸಿದ್ದ ಮಾತ್ರದಿಂದಲೇ ನಿಮಗೆ ಮಗಳಾಗಿ ಹೋದಳೆ ? ಶಿವಪತ್ನಿಯು ದಕ್ಷಯಾಗದಲ್ಲಿ ದೇಹವನ್ನು ಬಿಟ್ಟಬಳಿಕ ನಿನ್ನ ಪತ್ನಿಗೆ ಕೊಟ್ಟಿದ್ದ ವರವನ್ನು ಸರಿಪಾಲಿಸುವುದಕ್ಕಾಗಿ ಆಕೆಯು ಗರ್ಭವನ್ನು ಪ್ರವೇಶಿಸಿದ್ದಳು; ದೇವಿಯು ವಿಯೋಗದಿಂದ ಪರಶಿವನು ಹೇಮಕೂಟಪರ್ವತದೊಳಗೆ ತುಂಗಭದ್ರಾತೀರದಲ್ಲಿ ಆತ್ಮಾರಾಮನಾಗಿ ತಪಸ್ಸಿನಲ್ಲಿ ಕುಳಿತಿರುವನು; ನೀನು ಈ ತಾಯಿಯನ್ನು ಸಾಮಾನ್ಯಳೆಂದು ತಿಳಿಯಬೇಡ,

ಈಕೆಯ ಸಂಬಂಧದಿಂದ ನಿಮ್ಮ ವಂಶವೆಲ್ಲ ಪಾವನವಾಯಿತು. ನೀವು ಸತಿ ಪತಿಗಳು ಕೃತಾರ್ಥರಾದಿರಿ. ಶಿವನ ಬಳಿಗೆ ಈ ಮಹಾದೇವಿಯನ್ನು ಕಳುಹಿಕೊಡಿ" ಎಂದು ಪೂರ್ವಸಂಬಂಧವನ್ನೆಲ್ಲ ತಿಳಿಸಿ, ಮರ್ಯಾದೆಯಿಂದ ಬೀಳ್ಕೊಂಡು ಹೊರಟು ಹೋದನು. ಸತಿಪತಿಗಳು ಪಾರ್ವತಿಯನ್ನು ಪರಾಶಕ್ತಿಯ ಪರಾವತಾರವೆಂದು ತಿಳಿದು, ಭಯಭಕ್ತಿಯಿಂದಾದರಿಸಿ, ಆಕೆಯು ಇಷ್ಟಾನುಸಾರವಾಗಿ ತಪೋವನಕ್ಕೆ ಕಳುಹಿಕೊಟ್ಟರು. ಗಿರಿಜೆಯು ತಾಯಿಯ ಪಾದಕ್ಕೆ ನಮಸ್ಕರಿಸಿ, ತಂದೆಯೊಡನೆ ಪುಷ್ಪವಿಮಾನಾರೂಢಳಾಗಿ, ಸಖಿಯರೊಡನೆ ಹೇಮಕೂಟಪರ್ವತಕ್ಕೆ ಬಂದಳು. ಆ ಪರ್ವತವು ನಾನಾತರುಲತಾನಿಕುರುಂಬದಿಂದ ನಿಬಿಡವಾಗಿ, ಶಾಂತಗಳಾದ ಹುಲಿ ಕರಡಿ ಕಾಡೋಣ ಕಪಿ ಕಡವೆ ಕಾಡಾನೆ ಮೊದಲಾದ ಮೃಗಗಳಿಂದಲೂ, ಗಿಳಿ ನವಿಲು, ಹಂಸೆ, ಕೋಗಿಲೆ, ಚಕ್ರ, ಚಕೋರ, ಗೌಜಿಗ ಮೊದಲಾದ ಪಕ್ಷಿಗಳ ಸಮೂಹದಿಂಲೂ ಕೂಡಿ ಮನೋಹರವಾಗಿದ್ದಿತು. ಆ ಬೆಟ್ಟದಮೇಲೆ ಕವಿದು ಚಿಗುರೇರಿ ಕೆಂಪಾದ ಮರಗಳೇ ಜಡೆಗಳಂತೆಯೂ, ಸೂರ್ಯ ಚಂದ್ರಕಾಂತಶಿಲೆಗಳೇ ಕಣ್ಣುಗಳಂತೆಯೂ, ಕಾಳ್ಗಿಚ್ಚೇ ಫಾಲನೇತ್ರದಂತೆಯೂ, ಕಂಠಪ್ರದೇಶದಲ್ಲಿರುವ ಕಗ್ಗಲ್ಲೇ ಕತ್ತಿನ ವಿಷದಂತೆಯೂ, ಮುಚ್ಚಿಕೊಂಡಿರುವ ಹಿಮವೇ ತೊಡೆದ ವಿಭೂತಿಯಂತೆಯೂ, ದೊಡ್ಡದೊಡ್ಡ ಗುಂಡುಗಳ ಸಾಲೇ ರುಂಡಮಾಲೆಯಂತೆಯೂ ಇರುತ್ತಿರಲು, ಹೇಮಕೂಟವು ಸಮಾನರೂಪದಿಂದ ಶಿವನಹಾಗೆ ಕಾಣುತ್ತಿದ್ದಿತು. ಅದರ ಸೌಂದರ್ಯವನ್ನು ದೂರದಿಂದಲೂ ನೋಡುತ್ತ ತಾಳುಬೆಟ್ಟಕ್ಕೆ ಬರಲು, ನಾನಾಜಲಚರಗಳಿಂದಲೂ ತೆರೆನೊರೆಗಳಿಂದಲೂ ಕೂಡಿ ಮಂಗಳಮಯವಾಗಿ ಹರಿಯುತ್ತಿರುವ ತುಂಗಭದ್ರಾನದಿಯು ಕಾಣಿಸಿತು. ಅದರಲ್ಲಿರುವ ದೊಡ್ಡ ದೊಡ್ಡ ನೊರೆಗಳ ಗುಡ್ಡೆಯೇ ಕೈಯ ಕಲಶದಂತೆಯೂ, ದುಂಡಾದ ಬಿಳಿದಾವರೆಹೂವುಗಳು ದರ್ಪಣಗಳಂತೆಯೂ, ನೀರಿನ ಹನಿಗಳು ಮುತ್ತಿನ ಅಕ್ಷತೆಯಂತೆಯೂ, ನೀರಿನ ಮೊರೆತವೇ ವಾದ್ಯಧ್ವನಿಯಂತೆಯೂ, ಜಲಚರಗಳೇ ಪರಿಜನರಂತೆಯೂ, ಸುಳಿಗಳೇ ಆರತಿಯ ತಟ್ಟೆಗಳಂತೆಯೂ ಕಾಣುತ್ತಿರಲು, ಶಿವನ ಪಟ್ಟದರಾಣಿಯು ತಾನಿರುವ ಬಟ್ಟಕ್ಕೆ ಬರುತ್ತಿರುವಳೆಂಬುದನ್ನು ಕೇಳಿ ಸಂತೋಷದಿಂದ ಸಕಲಮಂಗಳದ್ರವ್ಯ

ಗಳೊಡನೆ ನದೀನಾರಿಯು ಇವರ್ಗಿಳ್ಳುವುದಕ್ಕೆ ಸಿದ್ಧಳಾಗಿರುವಂತೆ ತೋರುತ್ತಿದ್ದಳು. ಆ ನದಿಯ ಇಕ್ಕೆಲದಲ್ಲೂ ಫಲಭಾರದಿಂದ ಹಲಸು ನಿಂಬೆ ಮಾವು ನೇರಿಲು ದಾಳಿಂಬೆ ಖರ್ಜೂರ ಕಿತ್ತೀಳೆ ಬಾಳೆ ತೆಂಗು ಅಡಕೆ ಬೇಲ ಹತ್ತಿ ಮೊದಲಾದ ಮರಗಳು ಬಾಗಿ ನಿಂತಿರಲು, ತುಂಗಭದ್ರೆಯು ಪಾರ್ವತಿಯ ಪಾದಕ್ಕೆ ವಿವಿಧಫಲಾವಳಿಗಳನ್ನರ್ಪಿಸಿ ದೀರ್ಘದಂಡವಾಗಿ ನಮಸ್ಕರಿಸುವಂತೆ ತೋರುತ್ತಿದ್ದಳು. ಆ ನದಿಯ ಸೊಗಸನ್ನು ನೋಡಿ ಮುಂದಕ್ಕೆ ಸಾಗಲು, ಶಿವನು ನೆಲಸಿರುವ ಮಹಾಮಹಿಮಾಶ್ರಯವಾದ ಪಂಪಾಕ್ಷೇತ್ರವು ಕಾಣಿಸಿತು ಅಲ್ಲಿ ವಿಮಾನವನ್ನು ನಿಲ್ಲಿಸಿ ಇಳಿದರು. ಪರ್ವತರಾಜನು ಮುಂದಾಗಿ ಹೋಗಿ, ಶಿವನು ಕುಳಿತಿದ್ದ ಆಶ್ರಮದ ಹೊರಬಾಗಿಲಲ್ಲಿ ಕಾವಿದ್ದ ನಂದೀಶ್ವರನನ್ನು ಕಂಡು, ಪಾದಕ್ಕೆ ನಮಸ್ಕರಿಸಿ, ತನ್ನ ಆಗಮನದ ಉದ್ದೇಶವನ್ನು ವಿಜ್ಞಾಪಿಸಿ, ಆತನಪ್ಪಣೆಯನ್ನು ಪಡೆದು, ಒಳಕ್ಕ ಮಗಳನ್ನು ಕರೆತಂ– ತಾಯೀ ! ಇದುವರೆಗೆ ನಿನ್ನ ಪವಿತ್ರಪಾದಾಶ್ರಯದಿಂದ ನಾವು ಸುಖಿಸಿದೆವು, ನಮ್ಮ ವಂಶವು ಉದ್ಧಾರವಾಯಿತು; ನಿನ್ನ ಪತಿಯು ಯೋಗಿಯಾಗಿ ಈ ಗುಹಾಂತರದಲ್ಲಿರುವನು. ಆತನನ್ನೊಲಿಸಿಕೊಂಡು ನಿನ್ನಿಷ್ಟಾರ್ಥವನ್ನು ಸಾಧಿಸಿಕೊಳ್ಳುವುದಕ್ಕಾಗಿ ನೀನು ಹೇಗೆ ನಡೆದುಕೊಳ್ಳಬೇಕೋ ಅದನ್ನು ತಿಳಿದು ನಡೆದುಕೊಳ್ಳೆಂದು ಹೇಳಿ, ಜಯೆ– ವಿಜಯೆ ಎಂಬ ಇಬ್ಬರು ಸಖಿಯರನ್ನು ಜತೆಗೆ ಬಿಟ್ಟು, ತಾನು ಅಪ್ಪಣೆಯನ್ನು ಪಡೆದು ಹಿಂದಿರುಗಿದನು. ಪಾರ್ವತಿಯು ಪಂಪಾಕ್ಷೇತ್ರದ ಮಹಾಋಷ್ಯಾಶ್ರಮದ ಚೆಂದವನ್ನೆಲ್ಲ ನೋಡಿ ಹರ್ಷಗೊಂಡಳು. ಎತ್ತ ನೋಡಿದರೂ ಹೋಮಕುಂಡದಿಂದ ಆಕಾಶಕ್ಕೇಳುವ ಹೊಗೆ, ಎಲ್ಲಿ ನೋಡಿದರೂ ವೇದಮಂತ್ರಘೋಷ, ಎತ್ತ ತಿರುಗಿದರೂ ಪೂಜೋಪಕರಣಗಳನ್ನಣಿಮಾಡುವ ಋಷಿಸಾರಿಯರು. ರುದ್ರಾಕ್ಷಿಗಳನ್ನು ಪೋಣಿಸುವ ತರುಣರು, ನಾರುಡಿಗಳನ್ನು ತೊಳೆಯುವ ಅಂಗನೆಯರು, ದರ್ಭಾಸನಗಳನ್ನು ಸಿದ್ಧಮಾಡುವ ವೃದ್ಧರುಗಳು, ಹೂವುಗಳನ್ನೆತ್ತುತ್ತಿರುವ ಬಾಲಿಕೆಯರು. ಕಣ್ಣಿಗೆ ಕಾಣಿಸುತ್ತಿದ್ದರು. ಅಲ್ಲಿರುವ ಕಪಿಗಳು ಋಷಿಗಳಾಶ್ರಮಕ್ಕೆ ನಾನಾವಿಧಫಲಗಳನ್ನೂ ದರ್ಭಗಳನ್ನೂ ಸಮಿತ್ತುಗಳನ್ನೂ ತೆಗೆದು ಕೊಂಡು ಹೋಗಿ ಒಪ್ಪಿಸಿ, ವೃದ್ಧರ ಪಾದಗಳನ್ನೊತ್ತಿ ಸೇವಿಸಿ, ಮುನಿಗ

ಳಪ್ಪಣೆಯಂತೆ ನಡೆದುಕೊಳ್ಳುತ್ತಿದ್ದವು. ಅಲ್ಲಿ ಗಾಳಿಯು ಬಿರುಸಾಗಿ ಬೀಸುತ್ತಿರಲಿಲ್ಲ, ತುಂಬಿಯು ಹೂವುಗಳನ್ನು ತುಳಿದು ಕಂದಿಸುತ್ತಿರಲಿಲ್ಲ, ಸೂರ್ಯನು ಬಿಸಿಲನ್ನು ತೀಕ್ಷ್ಣವಾಗಿ ಚೆಲ್ಲುತ್ತಿರಲಿಲ್ಲ, ಕಾಳ್ಕಚ್ಚು ಹೊತ್ತಿ ಬೇಯಲು ಧೈರ್ಯಗೊಳ್ಳುತ್ತಿರಲಿಲ್ಲ, ಮೋಡಗಳು ಬಿರುಮಳೆಯನ್ನು ಹೊಯ್ಯುತ್ತಿರಲಿಲ್ಲ; ಸಣ್ಣಿಲಿಗಳು ಬೆಕ್ಕುಗಳು ಹಾವುಗಳು ಕೀರಗಳು ಒಂದು ಕಡೆ ಕೂಡಿ ಆಟವಾಡುತ್ತಿರುವುವು. ತೋಳ ನರಿ ಮೊಲಗಳು ಒಂದು ಕಡೆಯೂ, ಆನೆ ಸಿಹ್ಮಗಳು ಬೇರೊಂದು ಕಡೆಯೂ, ಹುಲ್ಲೆ ಹುಲಿಗಳು ಮಗುಳೊಂದು ಸ್ಥಲದಲ್ಲೂ, ಶರಭ ಭೇರುಂಡಗಳು ಇನ್ನೊಂದು ಒಳಯಲ್ಲಿಯೂ ಜಾತಿ ವೈರವನ್ನು ಬಿಟ್ಟು ಪರಸ್ಪರ ವಿನೋದಗಳಿಂದ ಕಾಲಹರಣ ಮಾಡುತ್ತಿರುವುವು. ಆ ಪುಣ್ಯಾಶ್ರಮದ ಪ್ರಭಾವವು ಹೇಗಿರಬಹುದು! ಇಂತಪ್ಪ ಋಷ್ಯಾಶ್ರಮವನ್ನು ನಗಜಾತೆಯು ನೋಡಿ, ಭಕ್ತಿಸ್ನಿಗ್ಧಮನಸ್ಕಳಾಗಿ, ಮುಂದುವರಿದು, ನಿಶ್ಚಬ್ದವಾಗಿರುವ ಪರಶಿವಾಶ್ರಮವನ್ನು ಹೊಕ್ಕು, ತೇಜೋಮೂರ್ತಿಯಾಗಿ ಅಂತರ್ದೃಷ್ಟಿಯಿಂದ ಕರ್ಪೂರದ ರಾಶಿಯಂತೆ ಕುಳಿತಿದ್ದ ಮಹಾದೇವನನ್ನು ಕಂಡಳು. ಆನಂದಾತಿರೇಕದಿಂದ ದೇಹದಲ್ಲಿ ರೋಮಾಂಚವಾಗಿ ನಯನದಲ್ಲಿ ಬಾಷ್ಪಗಳು ತುಂಬಿದುವು. ದೂರದಲ್ಲೇ ದೀರ್ಘದಂಡನಮಸ್ಕಾರ ಮಾಡಿ, ಭಯಭಕ್ತಿಯಿಂದ ಸ್ತುತಿಸಿ, ಸವಿಾಪಕ್ಕೆ ಬಂದು, ಏಕಾಗ್ರಚಿತ್ತದಿಂದ ಪೂಜಿಸ ತೊಡಗಿದಳು. ಪ್ರತಿದಿನವೂ ಉಷಃಕಾಲಕ್ಕೆ ತುಂಗಭದ್ರಾನದಿಯಲ್ಲಿ ಸ್ನಾನ ಮಾಡಿ, ನಾರುಮಡಿಯನ್ನುಟ್ಟು, ಹಣೆಗೆ ಶುಭ್ರವಾದ ಭಸಿತವನ್ನು ಧರಿಸಿ, ಕಂಠದಲ್ಲಿ ರುದ್ರಾಕ್ಷಮಾಲೆಯನ್ನು ತಾಳಿ. ಆಗತಾನೇ ಅರಲಿದ ಹೂವುಗಳನ್ನೂ ಚಿಗುರಾದ ಬಿಲ್ವವನ್ನೂ ಆರಿಸಿ ಎತ್ತಿ ತಂದು, ಸರಗಳನ್ನು ಮಾಡಿ, ಶಿವನ ಪಾದಾದಿ ಸರ್ವಾಂಗಕ್ಕೂ ಅಲಂಕರಿಸಿ, ನಮಿಸಿ, ಸ್ತುತಿಸುತ್ತಿದ್ದಳು. ಇತ್ತ ಲೋಕದಲ್ಲಿ ತಾರಕಾಸುರನೆಂಬ ಖೂಳರಾಕ್ಷಸನೊಬ್ಬನು ಬ್ರಹ್ಮನ ವರದಿಂದ ಪ್ರಬಲಿಸಿ, ಸ್ವರ್ಗ ಮರ್ತ್ಯ ಪಾತಾಳಗಳನ್ನೆಲ್ಲ ಜೈಸಿ, ಇಂದ್ರಾದಿ ದಿಕ್ಪಾಲಕರನ್ನೆಲ್ಲ ಬಡಿದೋಡಿಸಿ, ಅವರ ದುರ್ಗಗಳನ್ನೆಲ್ಲ ತನ್ನ ಠಾಣ್ಯವನ್ನಾಗಿ ಮಾಡಿಕೊಂಡನು. ದೇವತೆಗಳೆಲ್ಲರೂ ವೇಷಾಂತರವನ್ನು ಧರಿಸಿ, ತಮ್ಮ ತಮ್ಮ ಹೆಂಡತಿಯರೊಡಗೂಡಿ ಮೇರುಪರ್ವತದ ಗುಹೆಗಳೊಳಗೆ ಅ

ಡಗಿಕೊಂಡು ಕಾಲಯಾಪನೆ ಮಾಡುತಿದ್ದು, ಬ್ರಹ್ಮನ ಒಳಗೆ ಹೋಗಿ, ದೈನ್ಯದಿಂದ_ " ಸೃಷ್ಟಿಕರ್ತನೇ ! ನಿನ್ನ ವರದಿಂದ ಹೆಚ್ಚಿಕೊಂಡಿರುವ ತಾರಕಾಸುರನು ನಮ್ಮೆಲ್ಲರನ್ನೂ ಯುದ್ಧದಲ್ಲಿ ಸೋಲಿಸಿ, ನಮ್ಮ ಸಂಪತ್ತನ್ನೆಲ್ಲ ಕಿತ್ತುಕೊಂಡು ಓಡಿಸಿಬಿಟ್ಟನು. ಇದನ್ನು ಮಹಾವಿಷ್ಣುವಿನೊಡನೆ ನಾವು ತಿಳಿಸಿಕೊಳ್ಳಲು , ಆತನು ಆರೇಳು ಸಾವಿರ ವರ್ಷಗಳವರೆಗೆ ತಾರಕನೊಡನೆ ಕಾದು ಗೆಲ್ಲಲಾರದೆ, ಕೊನೆಗೆ ಚಕ್ರವನ್ನು ಪ್ರಯೋಗಿಸಿ, ಅದನ್ನೂ ಮುರಿಸಿಕೊಂಡು, ಓಡಿಹೋಗಿ, ಕ್ಷೀರಸಮುದ್ರದಲ್ಲಿ ಅವಿತುಕೊಂಡನು. ನಮಗೆ ಇನ್ನು ಗತಿಯೇನೆಂದು ಯೋಚಿಸಿ, ಭಯದಿಂದ ನಿಮ್ಮ ಬಳಿಗೆ ಓಡಿಬಂದಿರುವೆವು " ಎಂದು ಬಿನ್ನೈಸಿದರು. ಬ್ರಹ್ಮನು ಕೇಳಿ, ದೇವತೆಗಳನ್ನು ಕಾಲೋಚಿತವಚನಗಳಿಂದ ಸಮಾಧಾನಗೊಳಿಸಿ,_ "ಎಲೆ ದೇವತೆಗಳಿರಾ ! ಆ ತಾರಕನು ಸಾಮಾನ್ಯನಲ್ಲ, ಹಿಂದೆ ಅವನು ಅತ್ಯಂತನಿಷ್ಠೆಯಿಂದ ಘೋರತಪಸ್ಸಿಗೆ ಕುಳಿತನು; ಅದರ ಉಗ್ರತ್ವವನ್ನು ಅಷ್ಟಿಷ್ಟೆಂದು ಹೇಳುವುದಕ್ಕಾಗುತ್ತಿರಲಿಲ್ಲ. ಆ ತಪೋಜ್ವಾಲೆಯಿಂದ ಗಿರಿವನ ಮರ್ಗಗಳೆಲ್ಲ ಹೊತ್ತಿಕೊಂಡುವು; ಕೊನೆಗೆ ಆ ವ್ರರಿಯು ಜಗತ್ತನ್ನೆಲ್ಲ ಆವರಿಸಿತು ; ಆಗ ನಾನು ಶಿವನ ಬಳಿಗೆ ಹೋಗಿ, ಇದೇನು ಮಹಾವಿಪತ್ತು ಸಂಭವಿಸಿತೆಂದು ಕೇಳಲು,_ ಇದು ತಾರಕನ ತಪೋಜ್ವಾಲೆಯೆಂತಲೂ, ಅವನ ಒಳಗೆ ನೀನು ಹೋಗಿ ಅವನು ಕೇಳಿದ ವರವನ್ನು ಕೊಟ್ಟು ತಪಸ್ಸನ್ನು ಬಿಡಿಸಿಬಾರೆಂತಲೂ ಶಿವನು ನನಗೆ ಆಜ್ಞಾಪಿಸಿದನು. ಅದರಂತೆಯೇ ನಾನು ತಾರಕಾಸುರನ ಒಳಗೆ ಹೋಗಿ, " ತಪಸ್ಸನ್ನು ಬಿಡು, ನಿನ್ನಿಷ್ಟಾರ್ಥವನ್ನು ಕೇಳು " ಎಂದು ಹೇಳಲು, ಅವನು ಕಣ್ಣನ್ನು ಬಿಟ್ಟು, ನನ್ನನ್ನು ಸ್ತುತಿಸಿ, " ನಾನು ಎಂದಿಗೂ ಸಾಯದೆ ಇರುವಂತೆ ವರವನ್ನು ಕೊಡು " ಎಂದು ಪ್ರಾರ್ಥಿಸಿದನು. ನಾನಾವರೊ__ " ಇದೇನಯ್ಯಾ ! ' ಜಾತಸ್ಯೈವ ಮರಣಂಧ್ರುವಂ ' ಎಂಬ ಪ್ರಮಾಣದಂತೆ ಹುಟ್ಟಿದವನು ಸತ್ತೇತೀರಬೇಕು ; ಹೀಗಿರುವಲ್ಲಿ ಇಂತಹ ಅಸಾಧ್ಯವಾದ ವರವನ್ನು ಬೇಡಬಹುದೆ ? ಇದನ್ನು ಬಿಟ್ಟು ಬೇರೆ ಯಾವುದಾದರೊಂದು ವರವನ್ನು ಬೇಡು " ಎಂದು ನುಡಿದೆನು. ಅದಕ್ಕವನು_ " ಹಾಗಾದರೆ ಶಿವನ ವೀರ್ಯವನ್ನು ವಿಷ್ಣು ಬ್ರಹ್ಮೇಂದ್ರಾದಿಗಳು ಧರಿಸಿ ಅದರಿಂದ ಹುಟ್ಟಿದ ೭ ದಿನದ

ಕಂದನಿಂದ ಮಾತ್ರ ನನ್ನ ಮರಣವಾಗಲಿ, ಇತರರಿಂದಾಗದಂತೆ ವರವನ್ನು ಕೊಡು " ಎಂದು ಬೇಡಿದನು. ಹಾಗೆಯೇ ಆಗಲೆಂದು ವರವಿತ್ತೆನು. ಆದುದರಿಂದ ತಾರಕನು ಇದುವರೆಗೂ ಯಾರಿಂದಲೂ ಮರಣಗೊಳ್ಳದೆ ಕಂಟಕನಾಗಿರುವನು. ಶಿವನ ವೀರ್ಯೋತ್ಪನ್ನನಾವ ಕುವರನಾದರೆ ಅವನನ್ನು ಕೊಲ್ಲುವನು. ಪರಶಿವನು ಹೇಮಕೂಟಪರ್ವತದಲ್ಲಿ ತಪಸ್ಸಿನೊಳಗಿರುವನು. ಪಾರ್ವತಿಯು ಆತನ ಸೇವೆಯನ್ನು ಮಾಡುತ್ತಿರುವಳು, ಮಹಾದೇವನು ಪಾರ್ವತಿಯೊಡನೆ ಕೂಡಿದಲ್ಲದೆ ನಮ್ಮ ಇಷ್ಟಾರ್ಥಸಿದ್ಧಿಯಾಗುವ ಹಾಗಿಲ್ಲ; ಇದಕ್ಕುಪಾಯವೇನೆಂಬುದನ್ನು ವಿಷ್ಣುವಿನಿಂದ ತಿಳಿಯುವ; ನಡೆಯಿರಿ " ಯೆಂದು ಬ್ರಹ್ಮನು ಎಲ್ಲರನ್ನೂ ಕರೆದುಕೊಂಡು ಕ್ಷೀರಸಮುದ್ರದಲ್ಲಿರುವ ವಿಷ್ಣುವಿನ ಬಳಿಗೆ ಹೋದನು. ಎಲ್ಲರನ್ನೂ ಕಂಡು ಆಗಮನಕಾರಣವೇನೆಂದು ಹರಿಯು ಕೇಳಲು, ಬ್ರಹ್ಮನು—ತಾರಕನ ಹಾವಳಿಯನ್ನೂ, ಅವನ ನಾಶಕ್ಕೆ ಶಿವಕುಮಾರನ ಅವಶ್ಯಕತೆಯನ್ನೂ, ಪ್ರಕೃತದಲ್ಲಿ ಶಿವನು ತಪಸ್ಸಿನಲ್ಲಿರುವುದನ್ನೂ, ಆತನ ತಪೋಭಂಗದಿಂದ ತಮ್ಮ ಕಾರ್ಯಸಿದ್ಧಿಯಾಗಬೇಕಾಗಿರುವುದನ್ನೂ ತಿಳಿಸಿ, ಇದಕ್ಕೆ ತಕ್ಕ ಉಪಾಯವನ್ನು ಹೇಳಬೇಕೆಂದು ಕೇಳಿಕೊಂಡನು. ವಿಷ್ಣುವು ಹಾಗೆಯೇ ಯೋಚಿಸಿ, ಶಿವನ ತಪಸ್ಸನ್ನು ಕೆಡಿಸಿ ಅವನ ಮನಸ್ಸನ್ನು ದೇವಿಯಲ್ಲಿ ಮೋಹಗೊಳ್ಳುವಂತೆ ಮಾಡಬೇಕಾದರೆ, ಜಗನ್ಮೋಹಕನಾವ ತನ್ನ ಮಗ ಮನ್ಮಥನಿಂದಲ್ಲದೆ ಇತರರಿಂದ ಸಾಧ್ಯವಲ್ಲವೆಂದು ಯೋಚಿಸಿ, ಅದನ್ನು ಎಲ್ಲರೊತಪಿಯೂ ಹೇಳಿ, ಅದೇ ಉಪಾಯವು ತಕ್ಕುದೆಂದು ಸರ್ವರೂ ನಿರ್ಧರಿಸಲು, ಮನ್ಮಥನನ್ನು ಬರಮಾಡಿದನು.

ಆತನು ಬಂದು ಹರಿಬ್ರಹ್ಮರಿಗೆ ನಮಸ್ಕರಿಸಿ, ತನ್ನನ್ನು ಬರಮಾಡಿದ ಕಾರಣವೇನೆಂದು ಬೆಸಗೊಂಡನು. ಹರಿಯು— ಹೇಮಕೂಟಪರ್ವತದಲ್ಲಿ ತಪೋನಿರತನಾಗಿ ಕುಳಿತಿರುವ ಶಿವನನ್ನು ಬಹಿರ್ಮುಖಗೊಳಿಸಿ, ಪಾರ್ವತಿಯಲ್ಲನುರಕ್ತನಾಗುವಂತೆ ನೀನು ಮಾಡಿಬರಬೇಕೆಂದು ಅಪ್ಪಣೆ ಕೊಟ್ಟನು. ಅದನ್ನು ಕೇಳಿದ ಕೂಡಲೇ ಮನ್ಮಥನಿಗೆ ಕಿವಿಯಲ್ಲಿ ಬಾಣವನ್ನು ಪ್ರಯೋಗಿಸಿದಂತಾಯಿತು. ಭಯದಿಂದ ಬೆರಗಾಗಿ, " ಜೀಯಾ! ಬೆಂಕಿಯಮೇಲೆ ತರಗೆಲೆಯನ್ನಿಟ್ಟದಂತೆ ನನ್ನನ್ನು ಶಿವನ ಮೇಲೆ ಬಾಣಪ್ರ

ಯೋಗವನ್ನು ಮಾಡುವುದಕ್ಕಾಗಿ ಹೋಗೆಂದು ನೀವು ಬೆಸಸಿ ಕಳುಹಬಹುದೆ? ನಾನು ಶಿವನನ್ನು ಕೆಣಕಿ ಉರಿದುಹೋಗದೆ ಬದುಕುವುದುಂಟೆ?" ಎಂದು ದೈನ್ಯದಿಂದ ಕೇಳಿಕೊಂಡನು. ಆದರೂ ಹರಿ ಬ್ರಹ್ಮಾದಿಗಳು ಜಗನ್ನಾಶವಾಗುತ್ತಿರುವ ಸ್ಥಿತಿಯನ್ನೂ, ಅದರ ಉಳಿವು ನಿನ್ನಿಂದಲೇ ಆಗಬೇಕಾಗಿರುವುದೆಂಬುದನ್ನೂ, ಇಂಥ ಮಹಾಕಾರ್ಯಕ್ಕಾಗಿ ನಿನ್ನೊಬ್ಬನ ಪ್ರಾಣವನ್ನು ಕೊಡುವುದು ಅತ್ಯಂತ ಕೀರ್ತಿ ಪ್ರತಿಷ್ಠೆಗೆ ಕಾರಣವಾಗುವುದೆಂಬುವನ್ನೂ, ಬಹುವಿಧವಾಗಿ ಮನ್ಮಥನಿಗೆ ಹೇಳಿ, ಒಡಂಬಡಿಸಿದರು. ಮದನನು ತಥಾಸ್ತು ಎಂದು ನಮಸ್ಕರಿಸಿ, ಅಪ್ಪಣೆಪಡೆದು ಹೊರಟನು. ವಿಷ್ಣುವು ಸರ್ವದೇವತೆಗಳಿಗೂ ಧೈರ್ಯವನ್ನು ಹೇಳಿ ಕಳುಹಿಸಿಕೊಟ್ಟನು. ಎಂದು ಚೆನ್ನಬಸವೇಶನು ನುಡಿದನೆಂಬಲ್ಲಿಗೆ ೭ನೆ ಅಧ್ಯಾಯವು ಸಂಪೂರ್ಣವು.

— ❀ —

೮ನೆ ಅಧ್ಯಾಯವು.

— ❀ —

ಕಾಮದಹನವು.

ಎಲೆ ಸಿದ್ಧರಾಮೇಶನೆ! ಒಳಿಕ ಮನ್ಮಥನು ತನ್ನ ಪಟ್ಟಣಕ್ಕೆ ಬಂದು, ಮಿತ್ರನಾದ ಮಂದವಾರುತನನ್ನು ಸವಿಾಪಕ್ಕೆ ಕರೆದು, ಸಖನೆ! ಈಗ ನಾವು ಶಿವನ ಮೇಲೆ ಯುದ್ಧಕ್ಕೆ ಹೋಗಬೇಕಾಗಿದೆ; ಸೇನಾಪತಿಯಾದ ವಸಂತನನ್ನು ಸಕಲಸೈನ್ಯದೊಡನೆ ಕೂಡಿ ಬರಬೇಕೆಂದು ತಿಳಿಸು, ಎಂಬುದಾಗಿ ಬೆಸಸಿ ಕಳುಹಿದನು. ಅದರಂತೆಯೇ ಅವನು ಹೋಗಿ ತಿಳಿಸಲು, ವಸಂತನು ಸರ್ವಸೇನೆಯೊಡನೆ ಸನ್ನದ್ಧನಾಗಿ ಹೊರಟನು. ಮಾವಿನ ಮರಗಳು ಚಿಗುರೇರಿದುವು. ಮಲ್ಲಿಗೆಯು ಮೊಗ್ಗೇರಿತು. ಸಂಪಗೆಯು ಸೊಂಪೇರಿತು. ಬಕುಳವು ಮುಕುಳಿತವಾಯಿತು. ಪಾದರಿಯು ಹೂವೇರಿತು. ಅದರ್ಗಂಚಿಯು ಸುವಾಸನೆಯನ್ನು ಬೀರಿತು. ಅಶೋಕೆಯು ಚಿಗುರ್ದವಿವಿತು. ತಾವರೆಗಳು ಅರಳೇರಿದುವು. ಇವುಗಳ ವೈಭವದಿಂದ ವಸಂ

ತನು ಬಂದು, ತನ್ನ ದೊರೆಗೆ ನಮಸ್ಕರಿಸಿ, ಸರ್ವವೂ ಸಿದ್ಧವಾಗಿದೆ ಯೆಂದು ಬಿನ್ನೈಸಿ ನಿಂತುಕೊಳ್ಳಲು, ಮದನರಾಜನು ಹೇಮಕೂಟದಲ್ಲಿ ತಪಸ್ಸಿನಲ್ಲಿರುವ ಶಿವನನ್ನು ಸೋಲಿಸುವುದಕ್ಕಾಗಿ ನಾವು ಅಲ್ಲಿಗೆ ಪ್ರಯಾಣಮಾಡಬೇಕಾಗಿದೆಯಾದುದರಿಂದ ನಿನ್ನನ್ನು ಕರತರಿಸಿದೆನು ಎಂದು ಹೇಳಿ, ತಾನೂ ಹೊರಡಲನುವಾದನು. ಹಣೆಗೆ ಪುಷ್ಪಧೂಳಿಯ ತಿಲಕವನ್ನಿಟ್ಟು, ಕೊರಲಿಗೆ ಪರಿಮಳದ ಹೂವಿನ ಸರವನ್ನು ಧರಿಸಿ, ತಾವರೆ ನೂಲಿನಲ್ಲಿ ನೇದ ಕಾಸೆಯನ್ನು ಬಿಗಿದು ಕಟ್ಟಿ, ಮಾವಿನ ಚಿಗುರಿನ ಕೊಡೆಯನ್ನು ಹಿಡಿದು, ಕೆಂಪು ಗಣಗಿಲೆಯ ಗೊಂಡೆಯನ್ನು ಮೇಲೆ ಸಿಕ್ಕಿಸಿ, ಕೆಳಗೆ ಮೊಲ್ಲೆಯ ಮೊಗ್ಗೆಂಬ ಸಣ್ಣ ಗೆಜ್ಜೆಗಳನ್ನು ಕಟ್ಟಿರುವ ಕಬ್ಬಿನ ಬಿಲ್ಲನ್ನು ಹಿಡಿದು, ಅದಕ್ಕೆ ತುಂಬಿಗಳಿಂದ ಕೂಡಿದ ಮುಡಿವಾಳವನ್ನು ಸಿಂಜಿನಿಯಾಗಿ ಕಟ್ಟಿ, ತಾವರೆ ಅಶೋಕ ಮಾವು ಮಲ್ಲಿಗೆ ಕನ್ನೈದಿಲೆಯೆಂಬ ಪಂಚಬಾಣಗಳನ್ನು ಬತ್ತಳಿಕೆಯಲ್ಲಿ ತುಂಬಿ, ಹೂವಿನ ಸರಗಳಿಂದಲೂ ತಾಳೆಯ ಎಸಳುಗಳಿಂದಲೂ ಅಲಂಕರಿಸಿರುವ ಪುಷ್ಪರಥವನ್ನು ಪತ್ನಿಯಾದ ರತಿಯೊಡನೆ ಕೂಡಿ ಹತ್ತಿದನು. ಪಾರ್ಶ್ವಗಳಲ್ಲಿ ಸುಂದರಿಯರು ನಿಂತು ತಾವರೆಯ ಛತ್ರವನ್ನು ಹಿಡಿದು ಹೊಂಬಾಳೆಯ ಚಾಮರವನ್ನು ಬೀಸುತ್ತಿದ್ದರು. ಆ ಮದನರಾಜನ ಸುತ್ತಲೂ ಚಿಗುರಿದ ಮಾವಿನ ಮರಗಳೆಂಬ ಆನೆಗಳೂ, ಗಿಳಿಗಳೆಂಬ ಕುದುರೆಗಳೂ, ಚಕ್ರವಾಕಪಕ್ಷಿಗಳೆಂಬ ರಥಗಳೂ, ಸ್ತ್ರೀ ಸಮೂಹವೆಂಬ ಕಾಲಾಳುಗಳೂ, ಚಂದ್ರನೆಂಬ ಮಂತ್ರಿಯೂ, ವಸಂತನೆಂಬ ದಳವಾಯಿಯೂ, ಭ್ರಮರಧ್ವನಿ ಯೆಂಬ ಭೇರೀಶಬ್ದವೂ, ಕೋಕಿಲಸ್ವರವೆಂಬ ಕಹಳಾಧ್ವನಿಯೂ, ಚಾಳಂಕಪಕ್ಷಿಯ ಕೂಗೆಂಬ ಸ್ತುತಿಪಾಠಕರ ಧ್ವನಿಯೂ ಬಳಸಿ ಬರುತ್ತಿದ್ದುವು. ಮೇಲೆ ಕುಳಿತು ಕೂಗುವ ಕೋಗಿಲೆಯ ಶಬ್ದವು ಗರ್ಜನೆಯಂತೆಯೂ, ಮೇಲೆ ಮುಚ್ಚಿರುವಕೆಂಪಾದ ಚಿಗುರು ಹಣೆಯಮೇಲಿಕ್ಕಿದ ಕುಂಕುಮದ ಹುಡಿಯಂತೆಯೂ, ಭ್ರಮರಗಳು ಹಾರಾಡಿ ಮುತ್ತಿರುವ ಪುಷ್ಪಮಕರಂದವೇ ಮದೋದಕದಂತೆಯೂ, ಮುಂದಮಾರುತದಿಂದ ಹಿಂದೆ ಮುಂದೆ ತೂಗಾಡುವ ನೀಟಾದ ಎಳೆಗೊಂಬೆಯೇ ಸುಂಡಿಲಂತೆಯೂ, ಹೂವಿನ ಗೊಂಚಲುಗಳೇ ಕೊಂಬಿನಂತೆಯೂ, ಮೇಲೆ ನೆಟ್ಟಗೆ ನಿಗುರಿ ನಿಂತ ಒಂದು ಕೊ

ನೆಯೇ ಧ್ವಜದಂತೆಯೂ ಕಾಣುತ್ತಿರುವ ಮೂವಿನ ಮರಗಳೆಂಬ ಆನೆಗಳು ಮದನರಾಜನ ಪಕ್ಕದಲ್ಲಿ ಹೊರಟುವು. ಕೊರಲಿನಲ್ಲಿರುವ ಕಪ್ಪುಗೆರೆಯೇ ವಾಳೆ (ಲಗಾಮು) ಯಾಗಿಯೂ, ರಕ್ಕೆಗಳೇ ಮರಕತರತ್ನದಿಂದ ಕೆತ್ತಿದ ಪಕ್ಷರಕ್ಷೆ (ಕೋಗೀರು) ಯಾಗಿಯೂ, ಮಧುರವಾದ ಅವುಗಳ ಧ್ವನಿಯೇ ಕೆನೆವ ಶಬ್ದವಾಗಿಯೂ, ನಡಗೆಯು ಸೊಗಸೇ ಱ ಬಗೆಯು ಗಮನವಾಗಿಯೂ, ಇರುತ್ತಿರುವ ಗಿಳಿಗಳ ಗುಂಪೆಂಬ ಕುದುರೆಗಳು ಭೂಮಿಯಮೇಲೂ ಆಕಾಶದಮೇಲೂ ಬರುತ್ತಲಿದ್ದುವು. ಸತಿಪತಿಗಳಾದ ತಮ್ಮಿಬ್ಬರ ದೇಹಗಳೇ ಎರಡು ಗಾಲಿಗಳು, ಎರಡರ ಮನಸ್ಸೂ ಒಂದಾಗಿ ಸೇರಿರುವುದೇ ಅಚ್ಚು, ಧ್ವನಿಯೇ ಚೀತ್ಕಾರವು, ಗಾಳಿಯಿಂದ ಮೇಲಕ್ಕೆ ಹಾರಿರುವ ಗರಿಯೇ ಮೇಲಣ ಧ್ವಜವು ಆಗಿರಲು, ಚಕ್ರವಾಕಗಳೆಂಬ ರಥಗಳು ಮನ್ಮಥರಾಜನ ಪಕ್ಕಗಳಲ್ಲಿ ನಡೆಗೊಂಡುವು. ಬಗ್ಗಿದ ಹುಬ್ಬುಗಳೇ ಬಿಲ್ಲಾಗಿಯೂ, ಕಟೆಗಣ್ಣೋಟವೇ ಬಾಣವಾಗಿಯೂ, ತೋಳುಗಳೇ ದಂಡಾಯುಧವಾಗಿಯೂ, ತೀಕ್ಷ್ಣವಾದ ಉಗುರುಗಳೇ ಬಾಕುವಾಗಿಯೂ, ಕಸ್ತೂರಿಯು ಬೊಟ್ಟೇ ಗುರಾಣಿಯಾಗಿಯೂ, ರೋಮರಾಜಿಯೇ ಕತ್ತಿಯಾಗಿಯೂ, ಕಾಣುತ್ತಿರುವ ಸ್ತ್ರೀಯರೆಂಬ ಕಾಲಾಳ್ಗಳು ಕಾಮರಾಜನ ಪುಷ್ಪರಥದ ಬತ್ತಿನಲ್ಲಿ ಬರುತ್ತಿದ್ದರು. ಎಲ್ಲರಿಗೂ ಮುಂಗಡೆಯಲ್ಲಿ ಸುಳಿಗಾಳಿಯು ಹೋಗುತ್ತಿದ್ದನು. ವಸಂತನ ಆಜ್ಞೆಯಮೇರೆ ಸೇನೆಯೆಲ್ಲವೂ ನಡೆಯುತ್ತಿದ್ದಿತು. ಸಕಲಪಕ್ಷಿಗಳ ಕಲಕಲವು ದಿಙ್ಮಂಡಲವನ್ನೆಲ್ಲ ವ್ಯಾಪಿಸಿತು. ಧೂಳಿಯು ಆಕಾಶಮಂಡಲದಲ್ಲಿ ಮಬ್ಬುಗವಿಸಿತು. ಇದೋ ಮದನರಾಜನ ಮದದಾನೆಗಳು ಬರುತ್ತಿರುವುವು! ದಾರಿಬಿಡಿರಿ, ಇದೋ ಕಾಮರಾಜನ ಜಯಖಡ್ಗವು ಬರುತ್ತಿದೆ! ಇದೋ ಅಂಗಜನ ಕತಾರಿಯು ಬರುತ್ತಿದೆ! ಎಂದು ಋಷಿಜನಕ್ಕೆ ಎಚ್ಚರಿಕೆಯನ್ನು ಹೇಳುವಂತೆ ಮುಂಗಡೆಯಲ್ಲಿ ಕೋಗಿಲೆಗಳೆಂಬ ಕಹಳೆಗಳು ಕೂಗುತ್ತಿದ್ದುವು. ಹುತ್ತುಗಳಲ್ಲೂ ನೆಲದಲ್ಲೂ ಮೆಳೆಗಳಲ್ಲೂ ಅಡಗಿದ್ದ ಶರೀರದ ತಪಸ್ವಿಗಳೆಲ್ಲರೂ ಮನ್ಮಥನ ಆಗಮನಧ್ವನಿಯನ್ನು ಕೇಳಿ ಭಯದಿಂದ ವಿಹ್ವಲರಾಗಿ ಗೋಳಿಡುತ್ತ ಗಡಗಡನೆ ನಡುಗಿದರು. ಬೆಮರಿನಿಂದ ಹಣೆಯ ವಿಭೂತಿಯು ಕರಗಿ ತೊಟ್ಟಕ್ಕುತ್ತಲೂ, ಜಡೆಗಳು ಬಿಚ್ಚಿ ನೆಲದಲ್ಲಿ

ಎಳೆಯುತ್ತಲೂ, ಕೊರಲಲ್ಲಿ ಶಿವನಾಮೋಚ್ಚರಣೆಯು ಗದ್ಗದಿಸುತ್ತಲೂ ಇರುವ ಋಷಿಗಳು ಯೋಗದಂಡ ಕಮಂಡಲು ಜಪಮಾಲೆ ಮೊದಲಾದುವು ಗಳನ್ನು ಅಲ್ಲಲ್ಲೇ ಮರೆತು, ಎದ್ದು, ಇದೋ ಮನ್ಮಥನು ಬಂದನು ! ಏಳಿರಿ ! ಏಳಿರಿ ! ಎಂದು ಕೂಗಿಕೊಳ್ಳುತ್ತ, ಬುದ್ಧಿಕೆಟ್ಟು, ಕೈಕಾಲ್ಗಳು ನಡುಗುತ್ತಿರಲು, ಹಿಂತಿರುತಿರುಗಿ ನೋಡುತ್ತಿದ್ದರು. ಮದನನು ದಾರಿ ಯಲ್ಲಿ ತನ್ನ ಮೇಲೆ ಮುಳಿದು ಜಿತೇಂದ್ರಿಯನೆಂದು ಹೆಮ್ಮೆಗೊಳ್ಳುತ್ತಿದ್ದ ವರನ್ನು ಮೋಹಪಾಶದಿಂದ ಕಟ್ಟಿ ಸರೆಯಿಡುತ್ತಲೂ, ಶರಣಾಗತರಾಗಿ ಕಾಣ್ಕೆಗಳನ್ನು ಕೊಟ್ಟ ತಪಸ್ವಿಗಳನ್ನು ಹಿಂಸಿಸದೆ ಬಿಟ್ಟುಬಿಡುತ್ತಲೂ, ಶಿವನು ಕುಳಿತಿದ್ದ ಆಶ್ರಮದ ಕಡೆಗೆ ಸಾಗಿದನು. ಪಂಪಾಕ್ಷೇತ್ರದ ಪು ಣ್ಯಭೂಮಿಯನ್ನು ಮೆಟ್ಟಿದ ಕೂಡಲೇ ಕಾಮರಾಜನ ಪಟ್ಟದಾನೆಯು ಮುಗ್ಗುರಿಸಿತು. ಸರಿಗಳು ಅತ್ತಲಾಗಿ ಬಂದು ಕೂಗಿದುವು. ಮೊಲವು ಸೇನೆಯ ಮಧ್ಯದಲ್ಲಿ ನುಗ್ಗಿ ಓಡಿಹೋಯ್ತು. ಆನೆ ಕುದುರೆಗಳ ಕಣ್ಣಿ ನಿಂದ ನೀರು ಸುರಿದಿತು. ಹೀಗೆ ಕಾಮನ ಸೇನೆಯಲ್ಲಿ ಅಶುಭಸೂಚಕ ವಾದ ಉತ್ಪಾತಗಳು ಕಾಣಿಸಿಕೊಂಡುವು. ಇದನ್ನು ಕಂಡ ವಸಂತನು ತನ್ನ ರಾಜನೊಡನೆ ಮುಂದೆ ಬರುವ ಕೇಡನ್ನು ಸೂಚಿಸಿ ಹಿಂತಿರುಗುವುದೇ ಶ್ರೇಯಸ್ಕರವೆಂದು ತಿಳಿಸಿದನು. ಕಾಮನಾದರೊ—ದೇವತೆಗಳಿಗೆ ನಂಬು ಗೆಯನ್ನು ಕೊಟ್ಟು ಬಂದ ಬಳಿಕ ಹಿಂತಿರುಗಿ ಹೋಗುವುದು ಸರಿಯಲ್ಲ, ಆದುದಾಗಲಿ, ಹೋಗುವುದೇ ಸರಿ ಯೆಂದು ನುಡಿದನು. ಸೇನೆಯು ಮುಂ ದೆ ಸಾಗುತ್ತಿರುವಲ್ಲಿ ಹೇಮಕೂಟದ ಮಹಾದ್ವಾರವನ್ನೂ ಅಲ್ಲಿ ಕಾದಿರುವ ನಂದೀಶನನ್ನೂ ಕಣ್ಣಿನಲ್ಲಿ ಕಂಡರು. ಸೇನೆಯು ಅಲ್ಲೇ ನಿಂತಿತು. ಮದ ನನು ನಂದೀಶನನ್ನು ಮೀರಿ ಒಳಗೆ ನುಗ್ಗುವುದಕ್ಕೆ ಧೈರ್ಯವಿಲ್ಲದೆ ಮುಂದೆ ಗತಿಯೇನೆಂದು ಯೋಚಿಸುತ್ತ ನಿಂತುಕೊಂಡನು. ಸ್ವಲ್ಪ ಕಾಲಾನಂತರ ಹೂವನ್ನು ಎತ್ತಿ ತರುವುದಕ್ಕಾಗಿ ಹೊರಗೆ ಹೋಗಿದ್ದ ಪಾರ್ವತೀದೇವಿಯು ಕೈಯಲ್ಲಿ ಹೂಕರಡಿಗೆಯನ್ನು ಹಿಡಿದು ಸಖಿಯರೊಡನೆ ಒರುತ್ತಿರಲು, ಮ ದನನು ಕಂಡನು. ಓಡಿ ಹೋಗಿ ಪಾದಕ್ಕೆ ನಮಸ್ಕರಿಸಿದನು. ನೀನಾ ರೆಂದು ಪಾರ್ವತಿಯು ಕೇಳಲು, ತಾನು ಮನ್ಮಥನೆಂತಲೂ, ನಂದೀಶನನ್ನು ಕಂಡು ಶಿವನ ಬಳಿಗೆ ಹೋಗಲು ಧೈರ್ಯವಿಲ್ಲದೆ ನಿಂತಿರುವೆನೆಂತಲೂ, ಬಿ

ನ್ನುಯಿಸಿದನು. ಈ ಕಾರ್ಯವು ತನಗೆ ಪ್ರಯೋಜಕವಾದುದೆಂದು ಪಾರ್ವತಿಯು ಮನಸ್ಸಿನಲ್ಲಿ ಭಾವಿಸಿಕೊಂಡು, "ಒಳ್ಳೀದು ನನ್ನ, ಪುಷ್ಪವಿಮಾನದ ಮರೆಯಲ್ಲಿ ಅವಿತುಕೊಂಡು ನೀನು ಒಳಗೆ ಬಾ, ದೇವತೆಗಳ ಮಾತಿಗಾಗಿ ಬಂದವನಾದುದರಿಂದ ಅದನ್ನು ಹೇಗಾದರೂ ಮಾಡಿ ನೀನು ನೆರವೇರಿಸಲೇ ಬೇಕು; ಬಂದುವೇಳೆ ಈ ಪ್ರಯತ್ನದಲ್ಲಿ ನಿನಗೆ ಅಪಾಯವುಂಟಾಗುವಂತಿದ್ದರೂ ಅದಕ್ಕಾಗಿ ಚಿಂತಿಸಬೇಡ, ನನ್ನನ್ನು ನಂಬಿ ಬಾ" ಎಂದು ಹೇಳಿ ಸಮಾಧಾನಪಡಿಸಿ, ಧೈರ್ಯಗೊಟ್ಟು, ಒಳಕ್ಕೆ ಕರೆದುಕೊಂಡು ಹೋದಳು. ಕಾಮನು ದೂರದಲ್ಲೇ ಶಿವನನ್ನು ಕಂಡು ನಡುಗಿಹೋದನು. ಪಾರ್ವತಿಯು ಪರಶಿವನ ಪಾದಪೂಜೆಯಲ್ಲಿ ತೊಡಗಿದಳು. ಆ ದೇವಿಯ ಮರೆಯಲ್ಲಿ ಮನ್ಮಥನು ನಿಂತು, ತನ್ನ ಬಿಲ್ಲಿನಲ್ಲಿ ಉನ್ಮಾದನ, ಮದನ, ಮೋಹನ, ವಶೀಕರಣ, ಸಂತಪನ, ಎಂಬ ಮಹಾಪಂಚಬಾಣಗಳನ್ನು ಒಂದೊಂದಾಗಿ ಜೋಡಿಸಿ ಪ್ರಯೋಗಿಸಿದನು. ಅದು ಶಿವನನ್ನು ಸೊಂಕಲು ಸಮರ್ಥವಾಗಲಿಲ್ಲ. ಆಗ ಕಾಮನು ೫ ಬಾಣಗಳನ್ನೂ ಒಂದೇ ಆವೃತ್ತಿ ಜೋಡಿಸಿ ಕರ್ಣಾಂತವಾಗಿ ಸೆಳೆದು ಮಹಾಗರ್ಜನೆಯನ್ನು ಮಾಡಿ ದಕ್ಷಿಣಾಮೂರ್ತಿಯಮೇಲೆ ಪ್ರಯೋಗಿಸಿದನು ಅವುಗಳ ಪಟಿನಿಂದ ಶಿವನು ಒಹಿರ್ಮುಖನಾದನು. ತನ್ನ ಅಂತಶ್ಚಿತ್ತವನ್ನು ಕೆಡಿಸಿದವನಾರೆಂದು ಕೋಪಗೊಂಡು ಕಣ್ಣೆರೆದನು. ಕೋಟಿ ಸಿಡಿಲಿನ ತೇಜಸ್ಸಿನಂತೆ ಹೊಳೆದು ಹೊರಸೂಸಿದ ಅಗ್ನಿನೇತ್ರದ ಜ್ವಾಲೆಯು ಇದಿರಿನಲ್ಲಿದ್ದ ಮನ್ಮಥನಮೇಲೆ ಭುಗಿಲು ಭುಗಿಲೆಂದು ಪ್ರಸರಿಸಿದ ಕೂಡಲೇ ಕಾಳ್ಕಿಚ್ಚಿಗೆ ಸಿಕ್ಕಿದ ತರಗೆಲೆಯಂತೆ ಕಾಮನು ಪುರುಪುರನೆ ಸುಟ್ಟು ಬೂದಿಯಾದನು. ಶಿವನು ಆ ಬೂದಿಯನ್ನೆಲ್ಲ ತೆಗೆದು ದೇಹಕ್ಕೆ ತೊಡೆದುಕೊಂಡನು. ಮಗ್ಗುಲಲ್ಲಿ ನಿಂತಿದ್ದ ಪಾರ್ವತಿಯನ್ನು ನೋಡಿದರೂ ಮಾತನಾಡಿಸದೆ ಬಯಲಾದನು. ಹೊರಗೆ ನಿಂತಿದ್ದ ರತಿಯು, ತನ್ನ ಪತಿಯು ಶಿವನ ಕೋಪಾಗ್ನಿಯಿಂದ ಸುಟ್ಟು ಹೋದನೆಂಬ ವಾರ್ತೆಯನ್ನು ಕೇಳಿ, ಬಾಯ್ಬಡಿದುಕೊಳ್ಳುತ್ತ ಗೋಳಿಟ್ಟು, ಒಳಗೆ ಬಂದು, ತನ್ನ ಗಂಡನು ಸುಟ್ಟುಹೋದ ಸ್ಥಲದಲ್ಲಿ ಬಿದ್ದು ಹೊರಳಾಡುತ್ತಿದ್ದಳು — "ಅಯ್ಯೋ! ನನ್ನ ಕಾಮಧೇನುವನ್ನು ಹೊಡೆದುಹಾಕಿದರೇ! ನನ್ನ ಕಲ್ಪವೃಕ್ಷವನ್ನು ಕಡಿದುಹಾಕಿದರೇ! ನನ್ನ ಸೌಂದ

ರ್ಯರಸದ ಕೆರೆಯನ್ನು ಒಡೆದುಹಾಕಿದರೇ ! ನನ್ನ ಮುಕ್ತಾಫಲವನ್ನು ಬೆಂಕಿಯಲ್ಲಿ ಸುಟ್ಟುಹಾಕಿದರೇ ! ನನ್ನ ಶೃಂಗಾರದ ಒಳ್ಳೆಯನ್ನು ಕುಡಿಗೆಡಿದು ಹಾಳ್ಮಾಡಿದರೇ ! ಅಯ್ಯೋ ! ನನಗಿನ್ನು ಗತಿಯಾರು ? ದುರ್ಬೋಧೆಯನ್ನು ಮಾಡಿ ನನ್ನ ಗಂಡನನ್ನು ಕಳುಹಿಸಿ ಸುಡಿಸಿದ ದೇವತೆಗಳಿಗೆ ಈ ನನ್ನ ಹೊಟ್ಟೆಯ ಕಿಚ್ಚು ಹೋಗಿ ತಟ್ಟಬಾರದೆ ? ಅಯ್ಯೋ ! ನನ್ನ ಪ್ರಾಣಕಾಂತನೇ ! ನನ್ನ ಸೊಬಗಿನ ಮನೆಯೇ ! ನನ್ನ ವಿಲಾಸದ ನಿಧಿಯೇ ! ನನ್ನ ಚೆನ್ನವೆ ! ನನ್ನ ರನ್ನವೆ ! ನನ್ನ ಸೌಭಾಗ್ಯದ ಗಣಿಯೆ ! ನಿನ್ನನ್ನಗಲಿ ನಾನಿನ್ನು ಬದುಕಬಹುದೆ ? ಅಯ್ಯೋ ! ನಿನ್ನ ಸುಕುಮಾರ ಶರೀರವು ಕಿಚ್ಚಿಗೀಡಾಗಬಹುದೆ ? ನಿನ್ನ ಪುಷ್ಪಬಾಣವನ್ನೂ, ಗಿಳಿಗುದುರೆಯನ್ನೂ ಎಲ್ಲಿ ಕಳುಹಿದೆ ? ಚಂದ್ರನನ್ನು ಏನು ಮಾಡಿದೆ? ತಂಗಾಳಿಗೂ ವಸಂತನಿಗೂ ಯಾವ ಕೆಲಸವನ್ನು ನೇಮಿಸಿದೆ ? ನಿನ್ನಪಕ್ಷಿ ಸೇನೆಗೆಲ್ಲ ಏನೆಂದು ಸಮಾಧಾನಪಡಿಸಿದೆ ? ಎಂದು ಮೊದಲಾಗಿ ಹಂಬಲಿಸುತ್ತಿದ್ದಳು. ಇದನ್ನು ನೋಡಿ ಕಾಮನ ಚತುರಂಗಸೈನ್ಯವೂ ಕಣ್ಣೀರ್ಗರೆದಿತು. ರತಿಯು ಅತ್ತೂ ಅತ್ತು ಮೂರ್ಛೆಗೊಂಡು, ಚೇತರಿಸಿಕೊಂಡೆದ್ದು ತಲೆಗೆದರಿ, ಕೈ ಚಾಚಿ, ಅಯ್ಯೋ ದೇವತೆಗಳಿರಾ ! ನನ್ನ ಗಂಡನ ಪ್ರಾಣವನ್ನು ನೀಗಿಸಿದ ನೀವು ಒದುಕಿಸಬಾರದೆ ? ಲೋಕರಕ್ಷಕನಾದ ಎಲೆ ಮಾವನೇ (ವಿಷ್ಣುವೇ) ನಿನ್ನ ಸುತನಾದ ನನ್ನ ಪ್ರಿಯನನ್ನು ಉದ್ಧರಿಸಬಾರದೆ ? ನಿನ್ನ ಸೊಸೆಯಾದ ನನ್ನ ವೈಧವ್ಯದುಃಖವನ್ನು ಹೋಗಲಾಡಿಸಿ ಕಾಪಾಡದಿದ್ದರೆ ನಿನಗೆ ಲೋಕರಕ್ಷಕನೆಂಬ ಹೆಸರೇತಕ್ಕೆ ? ಅಯ್ಯೋ ! ಪಾರ್ವತಿಯೆ ! ನಿನ್ನ ನಂಬುಗೆಯ ಮೇಲೆ ಬಳಿಗೆ ಬಂದು ಪ್ರಾಣವನ್ನು ಕಳೆದುಕೊಂಡ ನನ್ನ ಗಂಡನನ್ನು ನೀನಾದರೂ ಬದುಕಿಸಬಾರದೆ ?" ಎಂದು ಬರಲಿದಳು. ಪಾರ್ವತಿಯು ರತಿಯ ಮಹಾಶೋಕವನ್ನು ನೋಡಿ ಕರಗಿಹೋದಳು. ಈ ಪಶ್ಚಾತ್ತಾಪದ ಹಿತೆಗೆ ಆ ದೇವಿಯ ಮನಸ್ಸಿನಲ್ಲಿ ಇನ್ನೂ ಬೇರೆ ಬೇರೆ ಚಿಂತೆಗಳು ಕಾಲಿಕ್ಕಿದುವು. ತಾನು ತಾಯ್ತಂದೆಗಳನ್ನು ಬಿಟ್ಟು ಬಂದುದು ೧, ಮನ್ಮಥನಿಗೆ ನಂಬುಗೆಗೊಟ್ಟು ಕರೆದುಕೊಂಡು ಹೋದುದು ೨, ಶಿವನು ತನ್ನನ್ನು ನೋಡಿದರೂ ಮಾತನಾಡಿಸದುದು ೩, ರತಿಯ ಗೋಳನ್ನು ನೋಡುವ ಸಂಕಟವು ೪, ಇದರಮೇಲೆ

ರತಿಯು ಗಂಡನನ್ನು ಕರೆದುಕೊಂಡು ಹೋಗಿ ಸುಡಿಸಿಬಿಟ್ಟಳೆಂಬ ಲೋ ಕಾಪವಾದವು ೫, ಮತ್ತೂ ಈ ನಡುಗಾಡಿನಲ್ಲಿ ಈ ಯೌವನದಶೆಯೊಳಗೆ ವಾಸಮಾಡಿಕೊಂಡಿರಬೇಕಾದುದು ೬, ಶಿವನು ಆ ಸ್ಥಲವನ್ನೇ ಬಿಟ್ಟು ಹೊರಟುಹೋಗಿ ತನ್ನ ಸಂಕಲ್ಪಕ್ಕೆ ಭಂಗವನ್ನುಂಟುಮಾಡಿದುದು ೭, ಹೀಗೆ ಈ ವಿಳಂಬಾಟಕ್ಕೆ ನಾನು ಗುರಿಯಾದೆನಲ್ಲ ! ಎಂದು ಕೊರಗಿದಳು. ಬಳಿಕ ಮಹಾಕರುಣದಿಂದ ರತಿಯನ್ನು ಕರೆದು, ತಲೆ ಸವರಿ, ಅಮ್ಮಾ ! ನಿನ್ನ ಗಂಡನನ್ನು ನಾನು ಕರೆದುಕೊಂಡು ಬಂದುದೇನೋ ನಿಜ, ಅದ ಕ್ಕಾಗಿ ನಾನು ತಪಸ್ಸನ್ನಾದರೂ ಮಾಡಿ ಶಿವನನ್ನು ಮೆಚ್ಚಿಸಿ, ನಿನ್ನ ಗಂಡ ನನ್ನು ನಿನ್ನಲ್ಲಿಗೆ ಕಳುಹಿಕೊಡುತ್ತೇನೆ, ಶೋಕಿಸಬೇಡ, ಎಂದು ಹೇಳಿ, ಸಮಾಧಾನಪಡಿಸಿ, ಕಳುಹಿ, ಮುಂದೆ ಶಿವನನ್ನು ಒಲಿಸಿಕೊಳ್ಳುವ ಮಾ ರ್ಗವೇನೆಂಬುದನ್ನು ಯೋಚಿಸ ತೊಡಗಿದಳು. ಎಂದು ಚೆನ್ನಬಸವೇಶನು ನುಡಿದನೆಂಬಲ್ಲಿಗೆ ಎಂಟನೆ ಅಧ್ಯಾಯವು ಸಂಪೂರ್ಣವು.

೯ ನೆ ಅಧ್ಯಾಯವು.

ಗಿರಿಜಾ ವಿವಾಹ ಪ್ರಯತ್ನವು.

ಎಲೆ ಸಿದ್ಧರಾಮೇಶನೆ ! ಕೇಳು, ಬಳಿಕ ಪಾರ್ವತಿಯು ಪಂಪಾಕ್ಷೇ ತ್ರದೊಳಗೆಲ್ಲ ತನ್ನ ಮನಸ್ಸಿಗೆ ಅನುಕೂಲವಾದ ಸ್ಥಲವಾವುದೆಂಬುದನ್ನು ಹುಡುಕುತ್ತ ದಟ್ಟವಾದ ನೆಳಲಿನ ಮರಗಳ ಬುಡದಲ್ಲಿ ನಿಂತು, ಶಿವನು ತ ನ್ನಲ್ಲಿ ತೆ[illegible]ರಿಸಿದ ಔದಾಸೀನ್ಯವನ್ನು ನೆನೆದು ವ್ಯಸನಪಡುತ್ತ, ತನ್ನ ಸಖಿ ಯರಾದ ಜಯೆವಿಜಯೆಯರನ್ನು ಕುರಿತು—" ಪರಶಿವನಿದ್ದ ಬಳಿಗೆ ನಾನೇ ಹೋಗಿ ಸೇವೆಮಾಡಿಕೊಂಡಿದ್ದರೂ ನನ್ನನ್ನು ಮಾತನಾಡಿಸದೆ ತಿರಸ್ಕರಿಸಿ ಹೊರಟುಹೋದನು, ಇರಲಿ; ಇನ್ನು ಆತನೇ ನನ್ನನ್ನು ಹುಡುಕಿಕೊಂಡು ಬರುವಂತೆ ಮಾಡುತ್ತೇನೆ ನೋಡಿರಿ ; " ಎಂದು ಧೈರ್ಯದಿಂದ ನುಡಿದು, ಉ

ಚಿತವಾದ ಸ್ಥಲವೊಂದರಲ್ಲಿ ಪದ್ಮಾಸನಾಸೀನೆಯಾಗಿ ಕುಳಿತು, ಶಿವಾಯತ್ತ ಚಿತ್ತದಿಂದ ತಪೋಮಗ್ನಳಾದಳು. ಕಡುಬೇಸಗೆಯಲ್ಲಿ ಪರ್ವತಶಿಖರಾಗ್ರದ ಮೇಲೆ ಕುಳಿತು ಸೂರ್ಯಾತಪಕ್ಕೆ ಕಂದದೆಯೂ, ಮಳೆಗಾಲದಲ್ಲಿ ಆಲದಮರದ ಕೆಳಗೆ ಕುಳಿತು ಮಳೆಯ ಸುರಿವಿಕೆಗೆ ಅಂಜದೆಯೂ, ಹಿಮಗಾಲದಲ್ಲಿ ಸರೋವರದ ದಡದಮೇಲೆ ಕುಳಿತು ಚಳಿಗೆ ಸೆಡೆಯದೆಯೂ, ನಿಶ್ಚಲತಪಸ್ಸಿನಲ್ಲಿರುತ್ತಿದ್ದಳು. ಕೆಲವುಕಾಲ ಕ್ಷೀರವನ್ನೂ, ಕೆಲವುಕಾಲ ಗೆಡ್ಡೆ ಗೆಣಸುಗಳನ್ನೂ, ಕೆಲವುಕಾಲ ತರಗೆಲೆಗಳನ್ನೂ, ಬಳಿಕ ನೀರನ್ನೂ ವಾಯುವನ್ನೂ ಆಹಾರವಾಗಿ ತೆಗೆದುಕೊಳ್ಳುತ್ತಿದ್ದು, ಕಡೆಕಡೆಗೆ ಆಹಾರದ ಹಂಬಲನ್ನೇ ಬಿಟ್ಟು, ಶಿವಪಾದಧ್ಯಾನಾಮೃತವನ್ನೇ ಸವಿಯುತ್ತಲಿದ್ದಳು. ಸಂಪೂರ್ಣವಾಗಿ ಆಹಾರವನ್ನೇ ತ್ಯಜಿಸಿದ್ದರೂ ಮಹಾದೇವಿಯ ಮುಖದಲ್ಲೂ ದೇಹದಲ್ಲೂ ಕಾಂತಿಯು ಲೇಶಮಾತ್ರವೂ ಕುಗ್ಗಲಿಲ್ಲ, ಸೊಬಗು ಸೊರಗಲಿಲ್ಲ, ಸೌಂದರ್ಯವು ಸುಗ್ಗಲಿಲ್ಲ; ತಪೋಜ್ವಾಲೆಯ ತೇಜಸ್ಸು ದೇಹವನ್ನೆಲ್ಲ ಆವರಿಸಿ, ಮತ್ತಷ್ಟು ಶೋಭಾಯಮಾನಗೊಳಿಸಿತು. ದೇವದಾನವಕಿನ್ನರಕಿಂಪುರುಷಾದಿಗಳೆಲ್ಲರೂ ಪಾರ್ವತಿಯ ತಪೋತೇಜವನ್ನು ಕಂಡು ಆಶ್ಚರ್ಯಪಟ್ಟು, ಭಕ್ತಿಯಿಂದ ಆಕಾಶದಲ್ಲೇ ನಮಸ್ಕರಿಸುತ್ತಿದ್ದರು. ದೇವಿಯ ಮಹಾತಪೋಜ್ವಾಲೆಯು ಆ ವನಾಂತವನ್ನೆಲ್ಲ ವ್ಯಾಪಿಸಿ, ಸೂರ್ಯಮಂಡಲದವರೆಗೂ ಹಬ್ಬಿತು. ಈ ಜ್ವಾಲೆಯಿಂದ ಜಗತ್ತೆಲ್ಲ ತತ್ತರಿಸಿತು. ಶಿವನು ಪಾರ್ವತಿಯ ಉಗ್ರತಪಶ್ಚರಣವನ್ನು ತಿಳಿದು, ಮಹಾಯತೀಶ್ವರನ ರೂಪನ್ನು ಧರಿಸಿ, ಆಕೆಯು ಕುಳಿತಿರುವ ಪರ್ಣಶಾಲೆಯ ಬಳಿಗೆ ಬಂದನು. ಸಖಿಯರು ಥಟ್ಟನೆದ್ದು ಯತೀಶನಿಗೆ ನಮಸ್ಕರಿಸಿ, ಉಚಿತಾಸನವಲ್ಲಿ ಕುಳ್ಳರಿಸಿ, ಅರ್ಘ್ಯಪಾದ್ಯಾಚಮನಗಳನ್ನು ಕೊಟ್ಟು, ಗೆಡ್ಡೆ ಗೆಣಸು ಹಣ್ಣುಗಳನ್ನು ಮುಂದಿರಿಸಿ, ಭಕ್ತಿಯಿಂದ ಕೈಮುಗಿದು, "ಇವುಗಳನ್ನು ಸೇವಿಸಿ ಬಹುದೂರದಿಂದ ಬಳಲಿ ಬಂದಿರುವ ದಣಿವನ್ನು ಪರಿಹರಿಸಿಕೊಳ್ಳಿರಿ" ಎಂದು ವಿಜ್ಞಾಪಿಸಿದರು. ಕಪಟಯತಿಯಾದರೊ— ನಾವು ಹಣ್ಣನ್ನು ತಿನ್ನುತ್ತೇವೆ, ಅದು ಹಾಗಿರಲಿ; ಈ ಸುಂದರಿಯು ಅರಣ್ಯದಲ್ಲಿ ಕುಳಿತು ಇಷ್ಟು ಘೋರತಪಸ್ಸನ್ನಾಚರಿಸುವುದಕ್ಕೆ ಕಾರಣವೇನು? ಎಂದು ಕೇಳಿದನು. ಸಖಿಯರಾದರೊ— ದಾರಿಕಾರನಾಗಿ ಬಂದ ನೀನು

ಸತ್ಕಾರವನ್ನು ಕೈಕೊಂಡು ಗಮ್ಮನೆ ಹೋಗುವುದನ್ನು ಬಿಟ್ಟು, ಈಕೆಯ ವಿಚಾರವನ್ನೆಲ್ಲ ಕೇಳುವುದಕ್ಕೆ ಕಾರಣವೇನು? ಎಂದರು. ಯತಿಯು— ಕೇಳಿದಮಾತ್ರದಿಂದಲೇ ಆದ ನಷ್ಟವೇನು? ಅಯ್ಯೋ! ಇಂತಹ ತುಂಬಿದ ಯೌವನದಲ್ಲಿ ಈ ಸೌಂದರ್ಯವತಿಯು ಕಠಿನತಪಸ್ಸನ್ನು ಮಾಡುತ್ತಿದ್ದರೆ ಮರುಗಿ ಇದನ್ನು ಬಿಡಿಸುವವರು ಯಾರೂ ಇಲ್ಲದೆ ಹೋದರೆ? ಎಂದನು. ಯಾರೂ ಆಡದೆಯಿದ್ದ ಈ ಮಾತು ತನ್ನ ಕಿವಿಯನ್ನು ಸೊಂಕಿದಕೂಡಲೇ ಪಾರ್ವತಿಯು ಕಣ್ಣನ್ನು ತೆರೆದಳು. ಆಗ ಯತಿಯು ದೇವಿಯನ್ನು ಕುರಿತು— ಯುವತಿಯೆ! ಗಂಧಕೇಸರಿಗಳನ್ನು ಅನುಲೇಪಿಸಿಕೊಳ್ಳಬೇಕಾದ ನಿನ್ನ ಶರೀರದಲ್ಲಿ ಈ ಭಸ್ಮಲೇಪನವನ್ನೂ; ಪಟ್ಟಪೀತಾಂಬರಗಳನ್ನು ಉಡಬೇಕಾದ ನಿನ್ನ ನಡುವಿನಲ್ಲಿ ಈ ನಾರುಮಡಿಯನ್ನೂ, ಧರಿಸಿಕೊಳ್ಳಬಹುದೆ? ಮೊಲ್ಲೆ ಮಲ್ಲಿಗೆ ಮಂದಾರ ಮೊದಲಾದ ಹೂವುಗಳನ್ನು ಮುಡಿಯಲುಯೋಗ್ಯವಾದ ಕೇಶಪಾಶವನ್ನು ಜಡೆಗಟ್ಟಿಸಿಕೊಳ್ಳಬಹುದೆ? ಕಾಮಸುಖವನ್ನು ಪಡೆಯುವ ಈ ಯೌವನಕಾಲದಲ್ಲಿ ಈ ತಪೋದುಃಖವನ್ನು ಅರಿಸಬಹುದೆ? ಯಾರನ್ನೊಲಿಸುವುದಕ್ಕಾಗಿ ಇದನ್ನಾಚರಿಸುತ್ತಿರುವೆ? ಎಂದನು. ಪಾರ್ವತಿಯು— ಎಲೈ ಯತಿಯೆ! ಲೋಕೇಶ್ವರನಾದ ಪರಮಶಿವನನ್ನು ಮೆಚ್ಚಿಸಿಕೊಳ್ಳುವುದಕ್ಕಾಗಿ ನಾನೀತಪಸ್ಸನ್ನು ಮಾಡುತ್ತಿರುವೆನು, ಎಂದಳು. ಅದನ್ನು ಕೇಳಿ ಯತಿಯು ಕೇಕೆಹಾಕಿ ನಕ್ಕು, ಓಹೋ! ನೀನು ತ್ರಿಣಯನನ್ನು! ಕಾಮಧ್ವಂಸಿಯನ್ನು! ವಿಷಕಂಠನನ್ನು! ಚರ್ಮಾಂಬರನನ್ನು! ಸ್ಮಶಾನವಾಸಿಯನ್ನು! ಮೋಹಿಸಿ ತಪಸ್ಸನ್ನು ಮಾಡುವೆಯಾ? ಬಲುಚೆನ್ನಾಯಿತು! ಎಂದು ನಿಂದಿಸಿ ನುಡಿಯಲು, ಪಾರ್ವತಿಯು ಕೆರಳಿ, "ಛೀ! ನೀಚನೆ! ಶಿವದೂಷಣೆಯನ್ನು ಮಾತಾಡುವುದಕ್ಕೆ ಬಂದೆಯಾ? ತೊಲಗು" ಎಂದು ಗರ್ಜಿಸಿ ತಿರಸ್ಕರಿಸಿದಳು. ಶಿವನು ಪಾರ್ವತಿಯ ದೃಢಮನಸ್ಸಿಗೆ ಮೆಚ್ಚಿ, ನಿಜರೂಪದಿಂದ ಪ್ರತ್ಯಕ್ಷನಾದನು. ಚಂದ್ರರೇಖೆಯನ್ನು ಧರಿಸಿದ ಜಡೆಮುಡಿಯೂ, ಸರ್ಪಕುಂಡಲ ಹಾರ ಕಟಿಕಗಳೂ, ನಗೆಮೊಗವೂ, ಶೂಲ ಡಮರುಗ ವರಾಭಯ ಹಸ್ತಗಳೂ, ಮುಕ್ಕಣ್ಣೂ, ಕೆಂದುಟಿ ಸುಲಿಪಲ್ಲುಗಳೂ, ಕಂಠವಿಷವೂ, ವ್ಯಾಘ್ರಗಜಚರ್ಮವಸನವೂ, ತನ್ನಲ್ಲಿ ಒಪ್ಪಿರಲು, ಕರುಣಾಮಯನಾದ ಮಹಾದೇವನು ಮಹಾತೇಜೋ

ವಿಲಸಿತನಾಗಿ ನಗೆಗಣ್ಣಿನಿಂದ ಪಾರ್ವತಿಯನ್ನು ನೋಡಿದನು. ಗಿರಿಜೆಯು ಥಟ್ಟನೆದ್ದು ದೀರ್ಘದಂಡವಾಗಿ ನಮಸ್ಕರಿಸಿ, ಎದ್ದು ಕೈಮುಗಿದು ನಿಂತು, ಜಯಜಯ ಮಹಾದೇವ! ಜಯಜಯ ಜಗನ್ನಾಥ! ಜಯಜಯ ಕೃಪಾಸ್ಫೂರ್ತ, ಜಯಜಯ ಶುಭಾಕರ! ಜಯಭಕ್ತ ಮಂದಾರ! ಜಯ ಪುಣ್ಯಾಮಯಚರಣ! ಎಂದು ಮೊದಲಾಗಿ ಸ್ತುತಿಸಿ, ಬಡವನಿಗೆ ಭಾಗ್ಯವೂ, ಕುರುಡನಿಗೆ ಕಣ್ಣೂ, ಹೆಳವನಿಗೆ ಕಾಲೂ, ಬಂದಂತೆ ತನಗೆ ಶಿವದರ್ಶನವಾಗಲು ಹಿಗ್ಗಿ, ಮತ್ತೆ ಮತ್ತೆ ಮಣಿದಳು. ಶಿವನಾದರೊ ಅತ್ಯಂತ ಕೃಪೆಗೊಂಡು, ತನ್ನ ದಿವ್ಯಹಸ್ತದಿಂದ ಪಾರ್ವತಿಯ ಶಿರವನ್ನು ಹಿಡಿದೆತ್ತಿ, ಎಲೌ ಜಗನ್ಮಾತೆಯೆ! ನಿನ್ನ ಮನೋನಿಶ್ಚಯವನ್ನು ಪರೀಕ್ಷಿಸುವುದಕ್ಕಾಗಿಯೇ ನಾವು ಇಷ್ಟುದಿವಸ ತಡಮಾಡಿದೆವು; ಇನ್ನು ಮುಂದೆ ನಿನ್ನಿಷ್ಟಪ್ರಕಾರ ನನ್ನ ಶರೀರದಲ್ಲಿ ಅರ್ಧಭಾಗವನ್ನೇ ನಿನ್ನದನ್ನಾಗಿ ಮಾಡಿಕೊಂಡು, ಒಡವೆರೆದು ಬಾಳುತ್ತ ಜಗತ್ತನ್ನು ರಕ್ಷಿಸಿಕೊಂಡಿರು; ಎಂದು ವರವನ್ನೀಯಲು, ಪಾರ್ವತಿಯು ಕೃತಜ್ಞತೆಯಿಂದ ನಮಸ್ಕರಿಸಿ, "ಸ್ವಾಮಿ! ಮತ್ತೊಂದು ನನ್ನ ಪ್ರಾರ್ಥನೆಯಿರುವುದು— ಮನ್ಮಥನು ನನಗಾಗಿ ತನ್ನ ಶರೀರವನ್ನು ನಿಮಗೆ ಅರ್ಪಿಸಿದನು; ಅಂತಹ ಪರೋಪಕಾರದ ಪುಣ್ಯವಾದರೂ ಈಗ ಅವನನ್ನು ಕಾಯಬಾರದೆ? ಅದುಕಾರಣ, ತಾವು ಮೊದಲು ಆ ಮನ್ಮಥನ ಪ್ರಾಣದಾನವನ್ನು ಮಾಡಿ, ಬಳಿಕ ನನ್ನನ್ನು ರಕ್ಷಿಸುವುದಕ್ಕಾಗಿ ವಿಷ್ಣು ಬ್ರಹ್ಮೇಂದ್ರಾದಿಗಳೊಡನೆ ನೀವು ಕೂಡಿ, ಗಿರಿರಾಜನ ಅರಮನೆಗೆ ಬಂದು, ಮಹೋತ್ಸವದಿಂದ ನನ್ನ ಪಾಣಿಗ್ರಹಣವಂ ಮಾಡಬೇಕು" ಎಂದು ಪ್ರಾರ್ಥಿಸಿದಳು. ಶಿವನಾದರೊ— ದೇವಿಯೆ! ಸರ್ವೇಶ್ವರನಾಜ್ಞೆಯು ಲೋಕದಲ್ಲಿ ಹುಸಿಯಾಗಬಾರದು. ಅದನ್ನು ಶಾಶ್ವತಗೊಳಿಸಬೇಕು. ಹಾಗಲ್ಲದೆ ವಿರೋಧಾಚರಣವನ್ನು ಮಾಡಿದವರು ಅಗ್ನಿಗೆ ಆಹುತಿಯೇ ಆಗಬೇಕು. ಹೀಗಿರುವಲ್ಲಿ ವಿರೋಧಾಚರಣೆಯಿಂದ ಸುಟ್ಟು ಹೋದ ಮನ್ಮಥನನ್ನು ಮತ್ತೆ ಉಳಿಸಬಹುದೆ? ಆದರೂ ನಿನ್ನ ಪ್ರಾರ್ಥನೆಯನ್ನು ಸರವೇರಿಸದೆ ಇರುವುದಕ್ಕಿಲ್ಲವಾದುದರಿಂದಲೂ, ನನ್ನ ಆಜ್ಞೆಯು ಕೆಡದಂತೆ ನೂಡಬೇಕಾಗಿರುವುದರಿಂದಲೂ, ಮನ್ಮಥನು ರತಿಯ ವಿಷಯದಲ್ಲಿ ಮಾತ್ರ ಸಶರೀರನಾಗಿರುವಂ

ತೆಯೂ, ಉಳಿದ ಜಗತ್ಸಾಮಾನ್ಯಕ್ಕೂ ಅನಂಗನಾಗಿ ಮನೋಭವ ನಾಗುವಂತೆಯೂ ವರವನ್ನು ಕೊಟ್ಟರುವೆನು; ನಿನ್ನಿಷ್ಟದಂತೆ ಗಿರಿರಾಜ ನರಮನೆಯಲ್ಲಿ ವಿವಾಹವಾಗುವೆನು; ಎಂದು ವರವಿತ್ತು, ಕೈಲಾಸಕ್ಕೆ ನಡೆದನು. ಇದೆಲ್ಲವನ್ನೂ ಕಂಡು ಜಯೆ ವಿಜಯೆಯರು ಪರಮಾನಂ ದಗೊಂಡರು. ರತಿಯು ಪತಿಯನ್ನು ಕಂಡು ಹಿಗ್ಗಿ, ಪಾರ್ವತಿಯ ಪಾದಕ್ಕೆ ನಮಸ್ಕರಿಸಿ, ಬೀಳ್ಕೊಂಡಳು. ನಡೆದ ಸುದ್ದಿಯು ಪರ್ವತರಾಜನಿಗೆ ಮು ಟ್ಟಲು, ಸತಿಪತಿಗಳು ಸಂತೋಷಸಮುದ್ರದಲ್ಲಿ ಮುಳುಗಿ, ಪಟ್ಟಣವನ್ನೆಲ್ಲ ಅಲಂಕರಿಸುವಂತೆ ಅಪ್ಪಣೆ ಮಾಡಿ, ಮಗಳನ್ನು ಇದಿರ್ಗೊಂಡು ಕರೆತರು ವುದಕ್ಕಾಗಿ ಕಲಶಕನ್ನಡಿಗಳಿಂದಲೂ ವಾದ್ಯವೈಭವದಿಂದಲೂ ಹೊರಟು, ಊರಹೊರಗೆ ಬಂದ ಜಗದಂಬಿಕೆಯನ್ನು ಕಂಡು, ಪಾದಕ್ಕೆ ಮಣಿದು, ಪ್ರತಿಯಾಗಿ ನಮಸ್ಕರಿಸಿದ ದೇವಿಯನ್ನು ತೆಗೆದೆತ್ತಿ ತಬ್ಬಿ ಮುದ್ದಾಡಿ, ಹರ್ಷ ಗೊಂಡರು. ಮತ್ತೂ "ಎಲೌ ತಾಯೆ! ತಪಸ್ಸಿನಲ್ಲಿ ಎಷ್ಟು ಒಳಲಿದೆ! ಶಿವನನ್ನು ತಪಸ್ಸಿನಿಂದ ಮೆಚ್ಚಿಸುವುದು ಸಾಮಾನ್ಯವೆ? ಹರಿಬ್ರಹ್ಮಾದಿಗ ಳಿಗೂ ಕೂಡ ಸುಲಭಗೋಚರನಲ್ಲದ ಮಹಾದೇವನನ್ನು ನಮ್ಮ ಮನೆಗೆ ಬರುವಂತೆ ಮಾಡಿ ನಮ್ಮ ವಂಶವನ್ನೆಲ್ಲ ಪಾವನಗೊಳಿಸಿದೆ! ನಿನ್ನ ದೆಸೆ ಯಿಂದ ನಾವು ಕೃತಾರ್ಥರಾದೆವು." ಎಂದು ಮೊದಲಾಗಿ ನುಡಿಯುತ್ತ, ಮನೆಗೆ ಕರೆದುಕೊಂಡುಹೋದರು. ಬಾಗಿಲಲ್ಲಿ ಆರತಿಗಳನ್ನು ಬೆಳಗಿ ಪಾದವನ್ನು ತೊಳೆದು ಒಳಹೊಗಿಸಿ, ಪೀತಾಂಬರವನ್ನುಡಿಸಿ, ರತ್ನಾಭರ ಣಮಾಲ್ಯಾವಿಗಳಿಂದಲಂಕರಿಸಿ, ಷಡ್ರಸಾನ್ನಭೋಜನವನ್ನು ಮಾಡಿಸಿ, ಗಿ ರಿರಾಜಮೇನಕೆಯರು ಪಾರ್ವತಿಯಲ್ಲಿ ಪುತ್ರೀಭಾವವನ್ನು ಬಿಟ್ಟು ಪರಾಶ ಕ್ತಿ ಯೆಂಬ ಭಾವದಿಂದ ಭಕ್ತಿಯುತರಾಗಿ ಉಪಚರಿಸುತ್ತಿದ್ದರು. ಅತ್ತ ಪರಶಿವನು ಕೈಲಾಸವಲ್ಲಿ ತನ್ನ ಬಳಿಗೆ ಸಪ್ತಮಹರ್ಷಿಗಳನ್ನು ಬರಮಾಡಿ ಕೊಂಡು, ಗಿರಿರಾಜನ ಕುವರಿಯನ್ನು ತಾನು ಮದಿವೆಯಾಗಬೇಕೆಂದು ಸಂ ಕಲ್ಪಿಸಿರುವೆನೆಂತಲೂ, ಅದಕ್ಕಾಗಿ ನೀವುಗಳು ಅಲ್ಲಿಗೆ ಹೋಗಿ ಹೆಣ್ಣನ್ನು ಕೇಳಿ ಬನ್ನಿರೆಂತಲೂ ಹೇಳಿಕಳುಹಿದನು. ಅವರು ಹಾಗೆಯೇ ಆಗಲೆಂದೊ ಪ್ಪಿ, ಸಂತೋಷದಿಂದ ಗಿರಿರಾಜನ ಬಳಿಗೆ ಬಂದರು. ಅತನು ಮಹರ್ಷಿಗಳ ನ್ನುಉಚಿತರೀತಿಯಿಂದ ಸತ್ಕರಿಸಿ,ಬಂದಕಾರಣವೇನೆಂದು ಬೆಸಗೊಂಡನು.

"ಸಕಲ ಜಗತೀಶ್ವರನಾದ ಮಹಾದೇವನಿಗೆ ಜಗನ್ಮಾತೆಯಾದ ನಿನ್ನ ಕು ಮಾರಿಯನ್ನು ತಂದು ಮದುವೆ ಮಾಡಿಕೊಳ್ಳಲು ಕೇಳುವುದಕ್ಕಾಗಿ ಬಂದಿ ರುವೆವು ; ನಿನ್ನ ಮಗಳ ತಪಸ್ಸಿಗೆ ಶಿವನು ಮೆಚ್ಚಿ ಪ್ರತ್ಯಕ್ಷವಾಗಿ ಅಕೆಯ ಪ್ರಾರ್ಥನೆಯಮೇರೆ ಸಕಲ ದೇವಗಣಂಗೊಡ ನಿನ್ನ ಮಗಳಿಗೆ ಒಂದು ಮ ದುವೆಯಾಗುತ್ತೇನೆಂದು ವರವನ್ನು ಕೊಟ್ಟಿರುವನು; ಅದುಕಾರಣವೇ ನಿನ್ನಿ ಷ್ಟವನ್ನು ತಿಳಿದುಬರುವುದಕ್ಕಾಗಿ ನಮ್ಮನ್ನು ಕಳುಹಿಸಿಕೊಟ್ಟಿರುವನು" ಎಂ ದು ಋಷಿಗಳು ಹೇಳಿದರು. ಗಿರಿರಾಜನಾದರೊ— "ಆ ತಾಯಿಯ ಮ ನೋನಿಶ್ಚಯವನ್ನು ನಾವು ತಿಳಿಯುವುದುಂಟೆ ? ಅವಶ್ಯಕವಾಗಿ ಹಾಗೆಯೇ ಆಗಲಿ, ನಾನು ಕೊಡಲು ಒಪ್ಪಿದೆನು, ಇದಕ್ಕೆ ತಪ್ಪುವನಲ್ಲ" ಎಂದು ಉ ತ್ತರ ಕೊಟ್ಟನು. ಮತ್ತೂ ತನ್ನ ಸಂಬಂಧಿಕರನ್ನೆಲ್ಲ ಒಡವೂಡಿ, ವಂಶೋದ್ಧಾ ರಿಣಿಯನ್ನು ಶಿವನಿಗೆ ಕೊಡುವ ಮಹಾಭಾಗ್ಯವು ತಮಗೆ ದೊರೆದ ಆನಂದ ವಾರ್ತೆಯನ್ನು ತಿಳಿಸಿದನು. ಅವರೆಲ್ಲ ಆ ಸಂತೋಷದಿಂದ ತಲೆದೂಗಿ ಅ ನುಮತಿಯನ್ನು ಕೊಟ್ಟರು. ಋಷಿಗಳು ತಂದಿದ್ದ ವಸ್ತ್ರಾಭರಣಗಳ ನ್ನು ಕೊಟ್ಟು ವೀಳೆಯುಪ್ರಸ್ತವನ್ನು ಜರುಗಿಸಿ, ನಿಶ್ಚಯತಾಂಬೂಲವನ್ನು ತೆಗೆದುಕೊಂಡು ಮರ್ಯಾದಿತರಾಗಿ ಹೊರಟರು. ಅತ್ತ ಪರ್ವತರಾಜನು ಅತ್ಯಂತಸಂತೋಷದಿಂದ ವಿಶ್ವಕರ್ಮನೆಂಬ ದೇವಶಿಲ್ಪಿಯನ್ನು ವಿವಾಹ ಮಂಟಪವನ್ನು ಚಿತ್ರವಿಚಿತ್ರವಾಗಿ ನಿರ್ಮಿಸುವುದಕ್ಕೆ ಆಜ್ಞಾಪಿಸಿದನು. ಅವ ನಾದರೊ "ಇದು ಮಹಾದೇವನಮದುವೆ; ಸಾಮಾನ್ಯವಾದ ಸುರಗಿರರ ಮ ದುವೆಯಲ್ಲ, ಅದುಕಾರಣ, ಆ ದೇವನ ಘನತೆಗೆ ತಕ್ಕಂತೆ ಮಂಟಪವನ್ನು ರಚಿಸಬೇಕು" ಎಂದು ಯೋಚಿಸಿ, ವಜ್ರವೈಡೂರ್ಯಗೋಮೇಧಿಕಾದಿ ರತ್ನ ಗಳನ್ನು ಅಪರಿಮಿತವಾಗಿ ತರಿಸಿ, ಸ್ವರ್ಣರಜತಾದಿಗಳ ಮೇಲೆ ಕತ್ತಿ ಥಳ ಥಳಿಸುವ ಕಂಬಗಳು ಬೋದಿಗೆಗಳು ತೊಲೆಗಳನ್ನು ಮಾಡಿ, ನೆಲಕ್ಕೆಲ್ಲ ಇಂ ದ್ರನೀಲರತ್ನಗಳನ್ನು ಮೆಟ್ಟಿ, ವೈಡೂರ್ಯದ ವಿವಾಹಜಗತಿಯನ್ನು ರಚಿಸಿ, ಮುತ್ತಿನ ಕುಚ್ಚುಗಳಿಂದಲೂ, ಚಿನ್ನದ ಕಲಶಗಳಿಂದಲೂ ರತ್ನದ ಜಾಲರಿ ಗಳಿಂದಲೂ, ಪದ್ಮರಾಗದ ಗೋಡೆಗಳಿಂದಲೂ, ರನ್ನ ಚಿನ್ನದ ಗೊಂಬೆಗ ಳಿಂದಲೂ, ಪುಷ್ಯರಾಗದ ಆನೆಗಳ ಸಾಲಿನಿಂದಲೂ, ವಿಚಿತ್ರ ತರದ ಸಿಹ್ಮ ಶಾರ್ದೂಲಗಳಿಂದಲೂ, ನಾನಾಬಣ್ಣದ ರತ್ನಗಳಿಂದಲೂ ಅಪೂರ್ವತರವಾಗಿ

ಅಲಂಕರಿಸಿದನು. ಅಲ್ಲಲ್ಲಿಗೆ ರತ್ನದಪರ್ಣಗಳನ್ನಿಟ್ಟು ಪಟ್ಟಿಯವಸ್ತ್ರದ ಮೇಲ್ಗಟ್ಟಿಗೆ ಹೂವಿನ ಮಾಲೆಗಳನ್ನು ಕಟ್ಟಿ, ಕಂಬಿಗಳ ಮೇಲೆ ಹವಳದ ಬಳ್ಳಿಯನ್ನು ಬಿಟ್ಟು, ರತ್ನದ ಪುಷ್ಪಗುಚ್ಛವನ್ನು ನೇತುಗಟ್ಟಿದನು. ನೆಲಕ್ಕೆ ಸಾರಿಸಿದ ಕತ್ತುರಿಯೂ, ಮೂಲೆಮೂಲೆಯಲ್ಲಿ ಒಟ್ಟಿರುವ ಧೂಪದ ಧೂಮವೂ ಮಂಟಪವನ್ನು ಪರಿವಳಕೋಶವನ್ನಾಗಿ ಮಾಡಿದ್ದುವು. ಅದರ ಸುತ್ತಲೂ ಶಿವನ ಪರಿವಾರದ ಬಿಡಾರಕ್ಕಾಗಿ ಸ್ವರ್ಣರಚಿತದ ಉಪ್ಪರಿಗೆಗಳನ್ನೂ, ವಿಹಾರಸರೋವರಗಳನ್ನೂ ಉದ್ಯಾನವನಗಳನ್ನೂ ಅತಿಮನೋಹರವಾಗಿ ವಿರಚಿಸಿದನು. ಒಳಕ ಪಟ್ಟಣದ ಪ್ರತಿಯೊಂದು ಬೀದಿಯೂ ಗುಡಿಗಳಿಂದಲೂ ತೋರಣಗಳಿಂದಲೂ ಧ್ವಜಪತಾಕೆಗಳಿಂದಲೂ, ಸಾಣೆ ರಂಗವಲ್ಲಿಗಳಿಂದಲೂ, ಅಲಂಕೃತವಾಯಿತು. ಎಲ್ಲವೂ ಸಿದ್ಧವಾದುದನ್ನು ವಿಶ್ವಕರ್ಮನು ಗಿರಿರಾಜನಿಗೆ ಬಿನ್ನೈಸಿ ಪರಶಿವನಿಗಾಗಿ ತಾನು ಮಾಡಿರುವ ಬಡಭಕ್ತಿಯ ಕೆಲಸವನ್ನು ಪರಾಮರಿಸಬೇಕೆಂದು ಬೇಡಿದನು. ಅತನು ಮಗಳನ್ನೂ ಪತ್ನಿಯನ್ನೂ ಕರೆದು ಕೊಂಡುಬಂದು ಎಲ್ಲವನ್ನೂ ತೋರಿಸಿ, ಸಂತೋಷಪಟ್ಟು, ಅನಂತವಾದ ಉಡುಗೊರೆಗಳನ್ನು ಶಿಲ್ಪಿಗೆ ಕೊಟ್ಟು ಕಳುಹಿದನು. ಇತ್ತ ಸುತೆಯನ್ನು ಕುರಿತು— ತಾಯಿಾ ! ನಿನ್ನ ಪತಿಗೂ ಅತನ ಕಡೆಯವರಿಗೂ ಘನತೆಗೆ ತಕ್ಕಂತೆ ಮಂಟಪದ ರಚನೆಯೇನೋ ಆಯಿತು. ಆದರೆ ಅಲ್ಲಿಂದ ಒಂದವರನ್ನಲ್ಲ ಕೊರತೆಯಿಲ್ಲದಂತೆ ಉಪಚರಿಸುವ ಸಾಮರ್ಥ್ಯವು ನನಗಿಲ್ಲವಲ್ಲ ! ಎಂದು ಕೊರಗಿದನು ಅದಕ್ಕೆ ದೇವಿಯು ನಕ್ಕು, ಆ ವಿಷಯವಲ್ಲಿ ನಾನಿರುವೆನು; ನೀನು ಹೆದರಬೇಡವೆಂದು ಧೈರ್ಯಗೊಟ್ಟು, ಆ ವಿವಾಹಮಂಟಪದಲ್ಲಿ ಕಲ್ಪವೃಕ್ಷ ಕಾಮಧೇನು ಚಿಂತಾಮಣಿ ಮೊದಲಾದ ವಸ್ತುಗಳನ್ನೆಲ್ಲ ಸದಾ ಕಾದಿರುವಂತೆ ಆಜ್ಞೆ ಮಾಡಿದಳು ಆ ಮಹಾದೇವಿಯು ಸ್ಮರಣಮಾತ್ರದಿಂದಲೇ ಸಕಲ ವಸ್ತು ಪರಿಕರವೂ ಗುತ್ತಿಗುತ್ತಿದಂತೆ ಬಂದು ರಾಶಿಯಾದುವು ಅತ್ತ ಸಪ್ತರ್ಷಿಗಳು ಹೋಗಿ ವಾಗ್ದಾನವಾದ ಸುದ್ದಿಯನ್ನು ಶಿವನಿಗೆ ತಿಳಿಸಿದ ಕೂಡಲೇ ಸ್ವಾಮಿಯು ಮದುವಣಿಗನಾಗಿ ಹೊರಡಲು ಪ್ರಯತ್ನಿಸಿದನು. ದೇವನ ಪ್ರೇರಣೆಯು ಮೇರೆ ಹುಬ್ರಹ್ಮರೂ, ಇಂದ್ರಾದಿದಿಕ್ಪಾಲಕರೂ, ಸುರಕಿನ್ನರಗರುಡಗಂಧರ್ವಕಿಂಪುರುಷಾದಿಗಳೂ, ಮನುಮುನಿಗಳೂ ಶಿವನ ಮಹೋ

ತ್ಸವವನ್ನು ನೋಡುವ ಸಂಭ್ರಮದಿಂದ ಗುಂಪುಗುಂಪಾಗಿ ಹೊರಟರು. ಶಿವನು ಮಂಗಲಸ್ನಾನಾದಿಗಳನ್ನಾಚರಿಸಿ, ದಿವ್ಯದುಕೂಲವನ್ನುಟ್ಟು, ಕಟಕಕೇಯೂರಕರ್ಣಕುಂಡಲಾದಿಗಳನ್ನು ಧರಿಸಿ, ಉತ್ತರೀಯವನ್ನು ಹೊದೆದು, ಕೀರೀಟವನ್ನಿಕ್ಕಿ, ಭಸಿತತ್ರಿಪುಂಡ್ರವನ್ನೂ ರುದ್ರಾಕ್ಷಮಾಲೆಯನ್ನೂ ಧರಿಸಿ, ಮುತ್ತಿನ ಬಾಸಿಂಗವನ್ನು ಕಟ್ಟಿ, ಲಾವಣ್ಯದ ಮಿರುಗೂ, ತಾರುಣ್ಯದಬೆಡಗೂ, ಕಾರುಣ್ಯದ ಸೊಬಗೂ, ಸೌಂದರ್ಯದ ಸಿರಿಯೂ, ಮಾಧುರ್ಯದ ಪರಿಯೂ, ಗಾಂಭೀರ್ಯದ ಝರಿಯೂ, ಒಟ್ಟುಗೂಡಿ ಸಾಕಾರವಾದಂತೆ ಅಲಂಕೃತನಾಗಿ ನಿಂತು, ತನ್ನ ಸಕಲಪರಿವಾರವನ್ನೂ ಸಂತೋಷದಿಂದ ನೋಡಿದನು. ಎತಬಲಗಳಲ್ಲಿ ವೇದಗಳು ಶಿವನ ಮಹಿಮೆಯನ್ನು ಉದ್ಘೋಷಿಸುತ್ತಿದ್ದವು. ತಾನು ವೃಷಭನನ್ನೇರಲು, ಹರಿಬ್ರಹ್ಮರು ತಮ್ಮ ತಮ್ಮ ವಾಹನಗಳನ್ನು ಹತ್ತಿ ಹಿಂದೆ ನಿಂತರು ಮುಂದೆ ಕೊಂಬು ತಮ್ಮಟೆ ಭೇರಿ ಮೊದಲಾದ ವಾದ್ಯಗಳು ಭೋರ್ಗರೆದುವು. ಛತ್ರಚಾಮರಧ್ವಜಪತಾಕೆಗಳು ದಟ್ಟನಾಗಿ ಕಾಣಿಸಿಕೊಂಡುವು. ಈ ಮಹಾವೈಭವದಿಂದ ಪರಮಶಿವನು ಹೊರಟನು ಇತ್ತ ಗಿರಿರಾಜನು ತನ್ನ ಸಕಲ ಬಂಧುಗಳೊಡನೆಯೂ, ಹಸ್ತ್ಯಶ್ವರಥಪದಾತಿಗಳೊಡನೆಯೂ ವಾದ್ಯವೈಭವದಿಂದಲೂ, ಕಲಸಕನ್ನಡಿಗಳನ್ನು ಹಿಡಿದ ಮುತ್ತೈದೆಯರೊಡನೆಯೂ ಬಂದು ಇದಿರ್ಗೊಂಡು, ಅತ್ಯಂತಮಹೋತ್ಸವದಿಂದ ರಾಜವೀಥಿಯಲ್ಲಿ ತನ್ನರಮನೆಗೆ ಕರೆದುಕೊಂಡುಹೋದನು. ಶಿವನಿಗೂ ಹರಿಬ್ರಹ್ಮಾದಿಗಳಿಗೂ ಇತರಪರಿವಾರಕ್ಕೂ ಅವರವರ ಯೋಗ್ಯತಾನುಸಾರದ ಬಿಡಾರಗಳನ್ನು ಮಾಡಿಕೊಟ್ಟು ಇಳಿಸಿ, ಉಪಚರಿಸಿದನು. ಶಿವನು ತನ್ನ ಬಿಡಾರದಲ್ಲಿ ನಾರದ ತುಂಬುರರ ಗಾನಶ್ರವಣದಿಂದಲೂ, ಭೃಂಗಿನಾಟ್ಯದಿಂದಲೂ, ಆನಂದಿಸುತ್ತಲಿದ್ದನು. ಇತ್ತ ಗಿರಿರಾಜನಪ್ಪಣೆಯಮೇರೆ ಅನೇಕಸಖಿಯರು ಪಾರ್ವತಿಯಬಳಿಗೈದಿ, ನಸುನಗುತ್ತ, ತಾಯಿಾ ! ಇಂದಿಗೆ ತಪಸ್ಸಾಧ್ಯವು ಫಲಿಸಿತು ಎಂದು ಪೇಳುತ್ತ, ಎಣ್ಣೆಯನ್ನೊತ್ತಿ, ಪರಿಮಳದ ಪನ್ನೀರನ್ನೆರದು, ಅರಿಸಿನವನ್ನು ತೀಡಿ, ಮಜ್ಜನಗೊಳಿಸಿ, ಪಟ್ಟಪೀತಾಂಬರವನ್ನುಡಿಸಿ, ಜಡೆಯನ್ನು ಹೆಣೆದು, ಹಣೆಗೆ ಕಸ್ತೂರಿಯ ತಿಲಕವನ್ನಿಕ್ಕಿ, ರತ್ನದೋಲೆ, ಮುತ್ತಿನ ಬೊಟ್ಟು, ಮೂಗುತಿ, ಕಂಠಹಾರ, ಭುಜಕೀ

ರ್ತಿ, ಜಡೆಯ ಸರ, ಕುಚ್ಚು, ರೇಗಟೆ, ಬುಗುಡಿ, ಮುರುವು, ಸರಪಣಿ, ಬಳೆ, ಕಡಗ, ಉಂಗುರ, ಗೆಜ್ಜೆಯದಾಬು, ಬಡ್ಯಾಣ, ಲುಳ, ಗೆಜ್ಜೆಪಿಲ್ಲಿ, ಕಾಲುಂಗರ, ಗಗ್ಗರ, ಪಾಡಗ, ಕಾಲುಸರ ಮೊದಲಾದ ನಾನಾಭರಣಗಳನ್ನು ಆಯಾಯ ಸ್ಥಲಗಳಿಗಿಟ್ಟು, ಹೂವನ್ನು ಮುಡಿಸಿ, ಶೃಂಗರಿಸಿದರು. ಸರ್ವಾಂಗಸುಂದರಿಯಾಗಿ ಸಾಲಂಕೃತಳಾಗಿ ಕುಳಿತಿರುವ ಆ ಮಹಾದೇವಿಯು ಶೃಂಗಾರರಸದ ಸರ್ವಸ್ವದಂತೆ ತೋರುತ್ತಿದ್ದಳು ಶಿವನ ವೈರಿಯಾದ ಮನ್ಮಥನಿಗೆ ನಾವು ಬಾಣವಾಗಿದ್ದ ಅಪರಾಧವನ್ನು ಮನ್ನಿಸಿ ಕಾಪಾಡಬೇಕೆಂದು ಅಶೋಕದ ಚಿಗುರು ಪಾರ್ವತಿಯ ಪಾದವನ್ನು ಮರೆಹೊಕ್ಕಂತೆ ಆದೇವಿಯ ಕೆಂಪಾದ ಪಾದಗಳು ತೋರುತ್ತಿದ್ದುವು. ಹದಿನೈದು ಕಣ್ಣುಳ್ಳ ಶಿವನು ತನ್ನ ೫ ಅಗ್ನಿನೇತ್ರಗಳನ್ನ ಮುಚ್ಚಿ, ಉಳಿದ ಹತ್ತು ಕಣ್ಣುಗಳನ್ನು ಪಾರ್ವತಿಯ ಶರೀರದ ಮೇಲೆ ಬೆಡಲು, ಅವು ಸುಣುಪಾದ ಆದೇಹದಮೇಲೆ ನಿಲ್ಲದೆ ಜಾರಿ ಪಾದಗಳ ಬೆರಲಿನ ತುದಿಯಲ್ಲಿ ನಿಂತುಕೊಂಡುವೋ ಎಂಬಂತೆ ದೇವಿಯ ಪಾದದ ಉಗುರುಗಳು ಒಪ್ಪಿದುವು. ಬಂದಾನೆಯ ಕುಂಭಸ್ಥಲದಿಂದ ಎರಡು ಸುಂಡಿಲುಗಳು ಮೂಡಿದುವಂತೆ ಆದೇವಿಯ ಕಟಿಪುರೋಭಾಗವೂ ತೊಡೆಗಳೂ ಮೆರೆದಿದ್ದುವು. ಅವರ ಸುತ್ತಲೂ ಇರುವ ಬಡ್ಯಾಣವು ಕುಂಭಸ್ಥಲಕ್ಕಲಂಕರಿಸಿದ ಅರಳಿಲೆಯ ಸರದಂತೆ ಕಾಣುತ್ತಿದ್ದಿತು. ಶಿವನ ಮೋಹದ ನಿಧಿಯನ್ನು ಕಾದುಕೊಂಡಿರುವ ಸರ್ಪದಂತೆ ಆದೇವಿಯ ರೋಮರಾಜಿಯೂ ಅದರ ಹುತ್ತಿನಂತೆ ಹೊಕ್ಕುಳೂ ಕಾಣಿಸುತ್ತಿದ್ದುವು. ಅಂತಹ ಕಾವಲಿದ್ದರೂ ಸ್ತ್ರೀವಶದಲ್ಲಿರುವ ನಿಧಿಯಾದುದರಿಂದ ನಂಬಿಕೆ ಸಾಲದೆ ಮತ್ತೂ ಹೆಚ್ಚಾದ ಕವಲನ್ನಿಸಬೇಕೆಂದು ಗಂಟೆಯ ಪಾರವರನ್ನು ನಿಲ್ಲಿಸಿರುವಂತೆ ಗೆಜ್ಜೆಗಳದಾಬು ತೋರುತ್ತಿದ್ದಿತು. ದೇವಿಯ ಸ್ತನದ್ವಯವನ್ನು ನೋಡಿದ ಒಬ್ಬ ಸಖಿಯು ಮತ್ತೊಬ್ಬಳನ್ನು ಕುರಿತು— ಎಂದಿಗೂ ಅರಲದಿರುವ ತಾವರೆಯ ಮೊಗ್ಗು ಎಲ್ಲಾದರೂ ಇರುವುದೆ? ಎಂದು ಕೇಳಲು, ಆಕೆಯು— ದೇವಿಯ ಮುಖವನ್ನೂ ಕಂಠಹಾರವನ್ನೂ ನೋಡಿ, ಚಂದ್ರಮಂಡಲವೂ ನಕ್ಷತ್ರಗಳೂ ಸವಿಾಪದಲ್ಲಿರುವಾಗ ತಾವರೆಯು ಅರಲುವುದೆಲ್ಲಿ ಬಂದಿತು? ಎಂದು ಸಮಾಧಾನವನ್ನು ಹೇಳಿದಳು ಚಂದ್ರಮಂಡಲದಲ್ಲಿರುವ ಅಮೃತಸಾರವ

ನ್ನು ಆಕರ್ಷಿಸಿ ತೆಗೆದುಕೊಂಡು ಹೋಗಿ ತನ್ನ ಶಿಷ್ಯರಾದ ರಾಕ್ಷಸರಿಗೆ ಕೊಟ್ಟು ಕುಡಿಸಿ ಅವರನ್ನು ಸಾವಿಲ್ಲದವರನ್ನಾಗಿ ಮಾಡಬೇಕೆಂದು ಶುಕ್ರನು (ಚುಕ್ಕಿಯು) ಯೋಚಿಸಿ ಒಂದು, ಚಂದ್ರಮಂಡಲದ ಮಧ್ಯದಲ್ಲಿ ಸೇರಿಕೊಂಡಿರುವನೋ ಎಂಬಂತೆ ದೇವಿಯ ಮುಖಮಂಡಲದ ಮಧ್ಯದಲ್ಲಿರುವ ಮುತ್ತಿನ ಮೂಗುತಿಯು ತೋರುತ್ತಿದ್ದಿತು. ಆ ದೇವಿಯ ಪ್ರತಿಯೊಂದು ಕಣ್ಣನ್ನೂ ಇದು ನೈದಿಲೆ, ಇದು ತಾವರೆ, ಇದು ನನ್ನದು, ತನ್ನದು, ಎಂದು ಪರಸ್ಪರಸ್ಪರ್ಧೆಯಿಂದ ಪ್ರೀತಿಸುವುದಕ್ಕಾಗಿ ಸೂರ್ಯ ಚಂದ್ರಮಂಡಲಗಳೇ ಬಂದು, ಆ ಕಣ್ಣುಗಳ ಒತ್ತಿನಲ್ಲಿ ನಿಂತುಕೊಂಡಿರುವಂತೆ ದೀರ್ಘವಾದ ಲೋಚನದ ಪಕ್ಕದಲ್ಲಿರುವ ರನ್ನದೋಲೆಗಳು ಬಪ್ಪುತ್ತಿದ್ದವು. ಪಾರ್ವತಿಯನ್ನು ನೋಡಿದ ಒಬ್ಬ ಸಖಿಯು– ನಾರೀಕುಲಕ್ಕೆಲ್ಲ ಭೂಷಣವಾದ ಈ ತಾಯಿಗೆ ಬೇರೆ ಭೂಷಣಗಳೇತಕ್ಕೆ ? ಸಕಲ ದೇವಾಂಗನೆಯರ ಮಸ್ತಕದ ಮಣಿಯೇ ತಾನಾಗಿರುವ ಈ ದೇವಿಗೆ ಬೇರೆ ಸೀಮಂತದ ಮಣಿ ಯೇತಕ್ಕೆ ? ಸತೀಕುಲಕ್ಕೆ ತಿಲಕವಾಗಿರುವ ಈ ಜಗದಂಬೆಗೆ ಬೇರೆ ತಿಲಕವೇತಕ್ಕೆ ? ತಾನೇ ಕುಸುಮಕೋಮಲೆಯಾದ ಈ ನನ್ಮುವ್ವನಿಗೆ ಬೇರೆ ಹೂವಿನ ಮಾಲೆಯೇತಕ್ಕೆ ? ಎಂದು ಇನ್ನೊಬ್ಬ ಸಖಿಯನ್ನು ಕೇಳಲು,, ಆಕೆಯು– “ ಶೃಂಗಾರಕ್ಕೆ ಮತ್ತೊಂದು ಶೃಂಗಾರವಿಲ್ಲದಿದ್ದರೂ ಮಂಗಳಾರ್ಥವಾಗಿ ಅಲಂಕರಿಸಿರುವೆವು ” ಎಂದಳು. ಮತ್ತೊಬ್ಬಳು– ಸರ್ವಮಂಗಳೆಗೆ ಮಂಗಳವನ್ನು ಮಾಡುವುದೆಂದರೇನು ? ಎಂದು ಕೇಳಲು, ಇನ್ನೊಬ್ಬಳು– ಲೋಕಾಚಾರನಿಯೋಗಕ್ಕಾಗಿ ಮಾಡಿರುವೆವು ಎಂದು ಹೇಳಿ ಸಮಾಧಾನಗೊಳಿಸಿದಳು. ಹೀಗೆ ಅಲಂಕಾರಪೂರಿತೆಯಾದ ಸರ್ವಮಂಗಳೆಯು ರಾಣಿವಾಸದಲ್ಲಿ ಪರಶಿವನ ಮೋಹನದ ಖನಿಯಾಗಿ ರಂಜಿಸಿರುತ್ತಿದ್ದಳು ಎಂದು ಚೆನ್ನಬಸವೇಶನು ನುಡಿದ ನೆಂಬಿಲ್ಲಿಗೆ ಒಂಭತ್ತನೆ ಅಧ್ಯಾಯವು ಸಂಪೂರ್ಣವು.

೧೦ ನೆ ಅಧ್ಯಾಯ.

ಗಿರಿಜಾಕಲ್ಯಾಣವು.

ಕಲ್ಯಾಣಮಂಟಪದಲ್ಲಿ ವಿವಾಹಾಂಗವಾದ ಪೂರ್ವಕಾರ್ಯಗಳೆಲ್ಲವೂ

ಹರುಗಿದನಂತರ, ಪುರೋಹಿತನಾದ ಬೃಹಸ್ಪತಿಯು ಶಿವನ ಒಳಗೆ ಹೋಗಿ, ಮುಹೂರ್ತವು ಸವಿಾಪಿಸಿತು ದಯೆಮಾಡಿಸಬೇಕು ಎಂದು ವಿನ್ನೈಸಲು, ಶಿವನು ಅಲಂಕೃತನಾಗಿ ಬಾಸಿಂಗವನ್ನು ಕಟ್ಟಿ, ವಿಷ್ಣುಬ್ರಹ್ಮರ ಹಸ್ತಾವಲಂಬನದಿಂದ ರತ್ನಖಚಿತವಾದ ಪಲ್ಲಕ್ಕಿಯನ್ನೇರಿ ಮಹಾ ವೈಭವದಿಂದ ಹೊರಟನು. ಹರಿಬ್ರಹ್ಮೇಂದ್ರಾದಿಗಳೆಲ್ಲರೂ ಪಲ್ಲಕ್ಕಿಯ ಎಡಬಲಗಳಲ್ಲಿ ಪಾದಚಾರಿಗಳಾಗಿ ಬರುತ್ತಿದ್ದರು. ಪಲ್ಲಕ್ಕಿಯ ಮೇಲೆ ಮುತ್ತಿನ ಛತ್ರವನ್ನು ಎತ್ತಿ ಹಿಡಿದಿದ್ದರು. ಮಗ್ಗುಲಲ್ಲಿ ಚಾಮರವನ್ನು ಬೀಸುತ್ತಿದ್ದರು. ವೇದಗಳು ಉಚ್ಚೈಸ್ವರದಿಂದ ಘೋಷಿಸುತ್ತಿದ್ದುವು ಸ್ತುತಿಪಾಠಕರು ಮುಂಗಡೆ ಕೈಯೆತ್ತಿ ಬಿರುದಾವಳಿಗಳನ್ನು ಹೊಗಳುತ್ತಿದ್ದರು. ಕಹಳಾವಿ ವಾದ್ಯಗಳು ಭೋರ್ಗರೆಯುತ್ತಿದ್ದುವು. ಇಂತಹ ಸಂಭ್ರಮದಿಂದ ಹೊರಟ ಶಿವನು ವಿವಾಹದ ಮಂಟಪದ ಬಾಗಿಲಲ್ಲಿ ಪಲ್ಲಕ್ಕಿಯಿಂದಿಳಿದನು ಮುತ್ತೈದೆಯರು ಆರತಿಗಳನ್ನು ಬೆಳಗಿದರು. ರತ್ನಕಾಂತಿಯಿಂದ ಝಗಝಗಿಸುತ್ತಲೂ, ಪುಷ್ಪಪರಿಮಳದಿಂದಲೂ ಧೂಪಧೂಮದಿಂದಲೂ ಘಮಘಮಿಸುತ್ತಲೂ, ಇರುವ ವಿವಾಹಮಂಟಪವನ್ನು ಪರಶಿವನು ಪ್ರವೇಶಿಸಿದನು. ಗಿರಿರಾಜ ಮೇನಕೆಯರು ವಿಧ್ಯುಕ್ತವಾಗಿ ಪರಶಿವನನ್ನು ಅರ್ಘ್ಯಪಾದ್ಯಾಚಮನ ಮಧುಪರ್ಕಗಳಿಂದರ್ಚಿಸಿದರು. ಬಳಿಕ ಶಿವನು ಮಂಟಪದ ಮಧ್ಯಭಾಗದಲ್ಲಿ ಅತ್ಯಂತ ಮನೋಹರವಾಗಿ ನವರತ್ನಗಳಿಂದ ನಿರ್ಮಿಸಿದ್ದ ವಿವಾಹವೇದಿಕೆಯನ್ನು ಹತ್ತಿದನು. ಜಗತಿಯ ಂ ಪಕ್ಕದಲ್ಲಿ ಶಿವಗಣಂಗಳೂ ಸಪ್ತರ್ಷಿಗಳೂ ಪರಿಬ್ರಹ್ಮಾದಿಗಳೂ ನಿಂತುಕೊಂಡರು. ಸಭೆಯೆಲ್ಲವೂ ಸುರನರೋರಗ ಗರುಡ ಗಂಧರ್ವ ಕಿನ್ನರ ಕಿಂಪುರುಷಾದಿಗಳಿಂದ ಕಿಕ್ಕಿರಿದಿದ್ದಿತು. ದಂಭಾವ್ಯಕ್ಷಸ್ತ್ರೀಯರು ನರ್ತನವನ್ನು ಮಾಡುತ್ತಿದ್ದರು. ನಂದಿ ಮಾಕಾಳರೆಂಬ ಚಿಡೀಮರಿಗಳು ಗದ್ದಲವನ್ನು ನಿಲ್ಲಿಸುತ್ತಿದ್ದರು. ಅಪ್ಸರರಲ್ಲಿ ಅಲಂಕೃತೆಯಾಗಿರುವ ಸರ್ವಮಂಗಳೆಯನ್ನು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ವಿವಾಹಮಂಟಪಕ್ಕೆ ಕರೆದುಕೊಂಡು ಬಂದರು. ಹೂಗಿಂತಿಯವಳು, ಎಲೆಸಂಬಳಿಗೆಯವಳು, ಕಾಲಂಜಿಯವಳು, ಚಾಮರದವಳು, ಬೀಸಣಿಗೆಯನಳು ಮೊದಲಾದ ೬೪ ವಿಧದ ಊಳಿಗದ ಗೆಳತಿಯರು ಮನ್ಮಥನ ಮದದಾನೆಗಳ ಹಿಂಡಿನಂತೆ ಪಲ್ಲಕ್ಕಿಯೊಡನೆ ಬರುತ್ತಿದ್ದರು. ಅಂದ

ಳದ ಪಕ್ಕಗಳಲ್ಲಿ ಲಕ್ಷ್ಮಿ ಸರಸ್ವತಿ ಶಚಿ ಸ್ವಾಹೆ ಮೊದಲಾದ ದೇವಾಂಗ ನಾವಣಿಯರುಗಳೂ, ಸಪ್ತಮಾತೃಕೆಯರೂ, ಋಷಿಪತ್ನಿಯರೂ, ಗಣ ವಧೂಟಗಳೂ ತಂಡತಂಡವಾಗಿ ಬರುತ್ತಿದ್ದರು. ಈ ಪರಿವಾರದಿಂದ ಕೂಡಿ ವೈಭವದೊಡನೆ ಬಂದ ಪಾರ್ವತಿಯು ವಿವಾಹಮಂಟಪದ ಬಾಗಿಲಲ್ಲಿ ಲಕ್ಷ್ಮೀ ಸರಸ್ವತಿಯರ ಕರಾವಲಂಬನದಿಂದ ಅಂದಳವನ್ನಿಳದು, ಒಳಹೊಕ್ಕು, ಮಧ್ಯದಲ್ಲಿ ರಂಜಿಸುತ್ತಿದ್ದ ವಿವಾಹವೇದಿಕೆಯನ್ನು ಹತ್ತಿದಳು. ವಧೂವರರ ಮಧ್ಯದಲ್ಲಿ ಪಟ್ಟಿಯ ತೆರೆಯು ಹಿಡಿಯಲ್ಪಟ್ಟಿದ್ದಿತು. ಕೂಡಲೇ ಸರ್ವರೂ ಜಯಘೋಷವನ್ನು ಮಾಡಿದರು. ಸಕಲ ವಾದ್ಯಗಳೂ ಮೊಳಗಿದುವು. ಲಕ್ಷ್ಮಿ, ಸರಸ್ವತಿ, ಶಚಿ, ಅಹಲ್ಯೆ, ಲೋಪಾಮುದ್ರೆ, ಗಾಯತ್ರಿ, ಸಾವಿತ್ರಿ, ಮೊದಲಾದ ದೇವ ಮುನಿ ಮಾನವ ಸ್ತ್ರೀಯರೆಲ್ಲ ಶೋಭನವನ್ನು ಹಾಡುತ್ತಿದ್ದರು. ಸುಮುಹೂರ್ತವು ಬಿದಗಲು, ಬೃಹಸ್ಪತ್ಯಾಚಾರ್ಯನ ಪ್ರಾರ್ಥನೆಯ ಮೇರೆ ವಧೂವರರು ಮೆಟ್ಟಕ್ಕಿಯ ಗೂಡೆಗಳನ್ನು ನೆಟ್ಟಿದರು. ಪುರೋಹಿತನು ಮಂಗಳಾಷ್ಟಕವನ್ನು ಪಠಿಸಿ ವೇದ ಮಂತ್ರೋಚ್ಚಾರಘೋಷದೊಡನೆ ಸತಿಪತಿಯರ ತಲೆಯಮೇಲೆ ಪರಸ್ಪರ ಗುಡಜೇರಕಾರೋಪಣವನ್ನು ಮಾಡಿಸಿದನು ಹರಿಬ್ರಹ್ಮಾದಿಗಳೆಲ್ಲರೂ ಜಯಘೋಷವನ್ನು ಮಾಡಿದರು. ಒಳಕ ತೆರೆಯು ತೆಗೆಯಲ್ಪಟ್ಟತು. ಪರಸ್ಪರ ನಿರೀಕ್ಷಣೆಯಾಯಿತು. ವಧೂವರರಹಸ್ತದಿಂದ ಮತ್ತೆ ಮುತ್ತಿನ ಅಕ್ಷತೆಯ ಆರೋಪಣವನ್ನು ಪರಸ್ಪರವಾಗಿ ಮಾಡಿಸಿದರು. ಗಿರಿರಾಜನು ಪತ್ನೀಸಮೇತನಾಗಿ ನಿಂತು, ಶಿವನಬಲಗೈಯಮೇಲೆ ಪಾರ್ವತಿಯ ಫಲಯುಕ್ತವಾದ ಅಂಜಲಿಯನ್ನಿಡಿಸಿ, ಹಿರಣ್ಯಸಮೇತವಾಗಿಯೂ ಬಿಲ್ವದಳಯುಕ್ತವಾಗಿಯೂ ಮೇನಕೆಯಿಂದ ಬಿಡಲ್ಪಟ್ಟ ಜಲಧಾರೆಯಿಂದ ಪರಶಿವನಿಗೆ ಸಾಲಂಕೃತಕನ್ಯಾದಾನವನ್ನು ದಕ್ಷಿಣಾಸಮೇತವಾಗಿ ಮಾಡಿದನು. ವಾದ್ಯಗಳು ಮೊಳಗುತ್ತಿದ್ದುವು. ಮನುಮುನಿಗಳು ಜಯಘೋಷವನ್ನು ಮಾಡುತ್ತಿದ್ದರು. ಗಣವರ್ಯರುಗಳು ಮಂಗಳಾಷ್ಟಕವನ್ನು ಪಠಿಸುತ್ತಿದ್ದರು. ಒಳಕ ಸತಿಪತಿಯರ ಕೊರಲಿನಲ್ಲಿ ಪರಸ್ಪರವಾಗಿ ಪುಷ್ಪಮಾಲೆಯು ಅರ್ಪಿಸಲ್ಪಟ್ಟತು. ಈರ್ವರೂ ಎದ್ದು ಹಸೆಯಮಣೆಯಮೇಲೆ ಕುಳಿತುಕೊಂಡರು. ಪರಶಿವನು ತನ್ನ ಅಭಯಹಸ್ತದಿಂದ ಸರ್ವಮಂಗಳೆಯ ಕಂಠದಲ್ಲಿ ಮಾಂಗಲ್ಯಧಾರಣೆಯನ್ನು ಮಾ

ಡಿದನು. ಸಭಾಸದರೆಲ್ಲರೂ ಜಯಘೋಷದಿಂದ ದಂಪತಿಗಳ ಶಿರಸ್ಸಿನ ಮೇ
ಲೆ ಮುತ್ತಿನಕ್ಷತೆಯನ್ನು ಸುರಿದರು. ದೇವನಾರಿಯರು ಶೋಭನವನ್ನು ಹಾ
ಡಿದರು. ಬಳಿಕ ಸಭಾಸದರೆಲ್ಲರಿಗೂ ತಾಂಬೂಲಾದಿ ಮರ್ಯಾದೆಗಳು ಜರು
ಗಿದುವು. ಮುನಿನಾರಿಯರು ಸತಿಪತಿಯರಿಗೆ ಆರತಿಯನ್ನು ಬೆಳಗಿದರು.
ದಂಪತಿಗಳು ಕೈಹಿಡಿದು ಬಳವನೆಯನ್ನುಹೊಕ್ಕು ಬೂವವನ್ನು ಸವಿಯು
ವುದೇ ಮೊದಲಾದ ಕಾರ್ಯಗಳನ್ನು ಜರುಗಿಸಿದರು. ಸಭಾಸದರೆಲ್ಲರೂ ಮೃ
ಷ್ಟಾನ್ನಭೋಜನದಿಂದ ಪರಿತೃಪ್ತರಾದರು. ಪುಷ್ಪಗಂಧತಾಂಬೂಲಾದಿಗ
ಳಿಂದ ಸಂತೋಷಗೊಂಡರು. ಅಂದಿನಿಂದ ಪ್ರತಿದಿನವೂ ಹಗಲು ಸಾ
ಯಂಕಾಲಗಳಲ್ಲಿ ದಂಪತಿಗಳು ಹಸೆಯಲ್ಲಿ ಕುಳಿತಾಗ ನರ್ತನ ಗಾನೋತ್ಸ
ವಗಳು ನಡೆಯುತ್ತಿದ್ದುವು. ದಂಪತಿಗಳಲ್ಲಿ ಹೂವಿನ ಚಂಡಾಟ ಉರುಟಣೆ
ಮೊದಲಾದ ವಿನೋದಗಳು ಜರುಗುತ್ತಿದ್ದುವು. ನಾಲ್ಕನೆಯ ದಿನದ ರಾತ್ರಿ
ಯಲ್ಲಿ ನಾಕವಲ್ಲಿಯ ಮಹೋತ್ಸವವು ಜರುಗಿತು. ಬಳಿಕ ಗಿರಿರಾಜನು ನವ
ರತ್ನಖಚಿತವಾದ ಪಲ್ಲಕ್ಕಿಯಲ್ಲಿ ಪಾರ್ವತೀಪರಮೇಶ್ವರರನ್ನು ಕುಳ್ಳಿರಿಸಿ,
ಸಕಲ ಚತುರಂಗಸೈನ್ಯದಿಂದಲೂ, ಮಹಾದೇವತಾಸ್ತೋಮದಿಂದಲೂ,
ವಾದ್ಯಘೋಷದಿಂದಲೂ ಕೂಡಿ ಉತ್ಸವಗೊಳಿಸಿದನು. ಎರಡು ಸಾಲುಗಳ
ಪಂಜುಗಳ ದೀಪಾವಳಿಯು ರಾತ್ರಿಯನ್ನು ಹಗಲಿನಂತೆ ಮಾಡಿದ್ದುವು.
ಹರಿಬ್ರಹ್ಮರೂ ಇಂದ್ರಯಮಾದಿಗಳೂ, ಗಿರಿರಾಜನೂ, ಸಪ್ತಮಹರ್ಷಿಗ
ಳೂ, ಪಲ್ಲಕ್ಕಿಯ ಸಮೀಪದಲ್ಲೇ ಕಾಲ್ನಡಿಗೆಯಲ್ಲಿ ಪೋಗುತ್ತಿದ್ದರು. ಅಭ್ರೂ
ಪ್ರತವಾದ ಈ ಮಹೋತ್ಸವವನ್ನು ಪುರಜನರೆಲ್ಲರೂ ನೋಡಿ ಪರಮಾ
ನಂದಗೊಂಡು ಕೃತಾರ್ಥರಾದರು. ಅವರ ಮರುದಿವಸ ಅತ್ಯಂತ ಸಂಭ್ರ
ಮದಿಂದ ಗಿರಿರಾಜನು ಬೀಗರ ಔತಣವನ್ನು ಮಾಡಿಸಿ ಸಂತೋಷಗೊಳಿಸಿ
ದನು. ಎಲ್ಲರಿಗೂ ಗಂಧಮಾಲ್ಯಾದಿಗಳನ್ನಿತ್ತು ವಸ್ತ್ರಭೂಷಣಾದಿಯಾದ
ಉಡುಗೊರೆಗಳನ್ನು ಯಥಾಶಕ್ತಿಯಾಗಿ ಕೊಟ್ಟನು. ಅನಂತರ ಅತ್ಯಂತವಿ
ಶಾಲವಾಗಿಯೂ ನವರತ್ನಖಚಿತವಾಗಿಯೂ ಮಾಡಿಸಿದ್ದ ಕೊಳದಲ್ಲಿ ಕೇಸರಿ,
ಶ್ರೀಗಂಧ, ಕರ್ಪೂರ, ಕಸ್ತೂರಿ ಮೊದಲಾದ ಗಂಧದ್ರವ್ಯಗಳನ್ನು ಕೂಡಿ
ಸಿ ಮಾಡಿದ ಓಕುಳಿಯ ನೀರನ್ನು ತುಂಬಿಸಿ; ವಸಂತೋತ್ಸವವನ್ನು ಮಾ
ಡಿಸಿದನು. ಹರಿಬ್ರಹ್ಮಾದಿಗಳೆಲ್ಲರೂ ಮಧ್ಯಾಹ್ನದ ಭೋಜನವನ್ನು ತೀ

ರಿಸಿಕೊಂಡು ಸ್ವರ್ಣರಜತದ ಕೈಯಂಡೆಗಳನ್ನು ಹಿಡಿದು ಹಿಡಿದು ವಸಂತ ಮಂಟಪಕ್ಕೆ ಬಂದನು. ಶಂಕರೀಶಂಕರರು ಆರೋಗಣೆಗೊಂಡು ಹಸನ್ಮುಖರಾಗಿ ವಸಂತಮಂಟಪಕ್ಕೆ ಬಂದು, ಸಿದ್ಧಮಾಡಿದ್ದ ಸಿಹ್ಮಾಸನದಲ್ಲಿ ಮೂರ್ತಿಗೊಂಡರು. ವಾದ್ಯಗಳು ಇಂಪಾಗಿ ಬಾರಿಸಲ್ಪಟ್ಟವು. ಮೊದಲು ಪಾರ್ವತಿಯು ಶ್ರೀಗಂಧಜಲವನ್ನು ತುಂಬಿದ ಪೊಟ್ಟಣದಿಂದ ಶಿವನನ್ನು ಹೊಡೆದಳು. ಒಳಿಕ ಶಿವನು ಕಸ್ತೂರೀಜಲವನ್ನು ತುಂಬಿದ ಪೊಟ್ಟಣದಿಂದ ಪಾರ್ವತಿಯನ್ನು ಹೊಡೆದನು. ಮತ್ತೆ ಶಂಕರಿಯು ನಸುನಗುತ್ತ ಶಿವನ ಮೇಲೆ ಇಟ್ಟಳು. ಆಗ ಶಿವನು ಎಲ್ಲರಿಗೂ ವಸಂತಕ್ರೀಡೆಗೆ ಅಪ್ಪಣೆಕೊಟ್ಟನು. ಹರಿಬ್ರಹ್ಮರು, ದಿಕ್ಪಾಲಕರುಗಳು, ಅಷ್ಟವಸುಗಳು, ಮನುಮುನಿಗಳು, ವಿದ್ಯಾಧರ ಕಿನ್ನರರು ಮೊದಲಾದವರು ಸೇರಿ ಚಿನ್ನದ ಚೀರ್ಕೊಳವೆಗಳನ್ನೂ ಅಂಡೆಗಳನ್ನೂ ಹಿಡಿದು ನೀರಾಟಕ್ಕೆ ನಿಂತರು. ಲಕ್ಷ್ಮಿ, ಸರಸ್ವತಿ, ಶಚಿ, ರೋಹಿಣಿ ಮೊದಲಾದ ದೇವಾಂಗನಾವರ್ಗೆಯರೂ, ರಂಭೆ ಊರ್ವಶಿ ತಿಲೋತ್ತಮೆ ಸುಕೇಶಿ ಮೊದಲಾದ ಅಪ್ಸರಸ್ತ್ರೀಯರೂ ಬಂದೊಂದು ಕಡೆ ಸೇರಿ ಆಟಕ್ಕೆ ನಿಂತರು. ಜೇನುಮೇಣದ ಚಂಡಿನೊಳಗೆ ಕೇಸರಿಯನೀರನ್ನು ತುಂಬಿ ಒಬ್ಬರ ಮುಖಕ್ಕೊಬ್ಬರು ರಭಸದಿಂದ ಹೊಡೆಯುಲು, ಚಂಡು ಒಡೆದು ನೀರಿನ ಪಸೆಯು ಕೆಚ್ಚನೆ ಸಿಡಿದು ಎಲ್ಲಕಡೆಗೂ ತುಂಬಿಕೊಳ್ಳುತ್ತಿರಲಾಗಿ, ನಾರಿಯರ ಮುಖವೆಂಬ ಕಮಲದಮೇಲೆ ಚಂಡೆಂಬ ಚಂದ್ರನು ಬಿದ್ದು ಮುಷ್ಟ್ಯುದ್ಧವನ್ನು ಮಾಡುತ್ತಿರಲಾಗಿ ಅವರೀರ್ವರ ಕೋಪಾಗ್ನಿಯ ಕಿಡಿಯು ಜಲಕಣದ ರೂಪವಾಗಿ ಹಾರುತ್ತಿದೆಯೋ ಎಂಬಂತೆ ಕಾಣುತ್ತಿದ್ದಿತು. ಬಂದು ಕಡೆ ಲಕ್ಷ್ಮಿಯು ತನ್ನ ಗಂಡನ ಶರೀರದ ಮೇಲೆ ಕೇಸರಿಯ ಜಲವನ್ನೆರಚಲು, ಆ ಶರೀರವು ಮಿಂಚಿನಿಂದ ಕೂಡಿದ ಮೇಘದಂತೆ ಕಾಣಿಸಿತು. ಹರಿಯು ಲಕ್ಷ್ಮಿಯ ಮೇಲೆ ಶ್ರೀಗಂಧವನ್ನು ಎರಚಲು, ಪಾದರಸವನ್ನು ಲೇಪಿಸಿದ ಚಿನ್ನದ ಪುತ್ಥಳಿಯಂತೆ ಕಾಣಿಸಿದಳು. ಬ್ರಹ್ಮನು ಸರಸ್ವತಿಯ ಮೇಲೆ ಕಸ್ತೂರಿಯ ಜಲವನ್ನೆರಚಲು, ಆಕೆಯು ಚಂದ್ರಕಾಂತಶಿಲೆಯ ಪುತ್ಥಳಿಯುಮೇಲೆ ಪಟ್ಟುಕವಿದಂತೆ ಕಾಣಿಸುತ್ತಿದ್ದಳು. ಸರಸ್ವತಿಯು ಪತಿಯಮೇಲೆ ಶ್ರೀಗಂಧದ ನೀರನ್ನೆರಚಲು, ಆತನು ವೈರೂಪ್ಯತ್ವದಮೇಲೆ ಹಿಮವು ಮುಸುಕಿರುವಂತೆ

ಕಾಣುತ್ತಿದ್ದನು. ದೇವತೆಗಳು ಕೊಳಗಗಳಲ್ಲಿಳಿದು ಮೊಗೆಯುತ್ತಲೂ ಒಬ್ಬರನ್ನೊಬ್ಬರು ಚಂಡುಗಳಿಂದಲೂ ಚೀರ್ಕ್ಕಳವೆಯಿಂದಲೂ ಅಂಡೆಗಳಿಂದಲೂ ಅಭಿಷೇಕಗೊಳಿಸುತ್ತಲೂ, ಬಾಸುಳೀಳುವಂತೆ ಗುರಿಕಟ್ಟಿ ಅಂಡೆಗಳಿಂದ ಹೊಡೆಯುತ್ತಲೂ, ಏಟನ್ನು ತಪ್ಪಿಸಿಕೊಂಡು ಮತ್ತೆ ತಿರುಗಿ ಇದಿರಾಳಿಗೆ ಹೊಡೆಯುತ್ತಲೂ, ಒಬ್ಬರನ್ನೊಬ್ಬರು ಹಂಗಿಸುತ್ತಲೂ, ಸಂತೋಷದಿಂದ ಕೇಕೆಹಾಕುತ್ತಲೂ, ಬೆನ್ನಟ್ಟಿ ಓಡಿಸಿಕೊಂಡುಹೋಗಿ ತಲೆಯ ಮೇಲೆ ಓಕುಳಿಯನ್ನು ಸುರಿಯುತ್ತಲೂ, ಮುಹೂರ್ತ್ತಕಾಲದೊಳಗಾಗಿ ಕೊಳವನ್ನು ಬರಿದು ಮಾಡಿದರು. ನಾರಿಯರು ಓಕುಳಿಯಿಂದ ನಾಂದು ಜೋಲುಬಿದ್ದ ಕೇಶಪಾಶದಿಂದಲೂ, ದೇಹಕ್ಕೆ ಹತ್ತಿದ ಪೀತಾಂಬರಗಳಿಂದಲೂ, ಚಳಿಯಿಂದ ನಡುಗುತ್ತಿರುವ ಗಲ್ಲಗಳಿಂದಲೂ, ರೋಮಾಸೆಗೆದು ಕುಲುಕುತ್ತಿರುವ ಅಂಗಗಳಿಂದಲೂ, ಒಳ್ಳುವ ನಡುವಿನಿಂದಲೂ, ಸಳೆದ ಕೈಕಾಲ್ಗಳಿಂದಲೂ, ಬೆಳರ್ತ್ತಮುಖದಿಂದಲೂ ಒಪ್ಪುತ್ತ, ನೋಟಗಾರರ ಕಣ್ಣಿಗೆ ಹೊಸಬಗೆಯ ಬಂದು ನೋಟವನ್ನುಂಟುಮಾಡಿದ್ದರು. ಒಳಕ ಎಲ್ಲರೂ ಬೇಸತ್ತು ಹೊರಟು ಅಣಿಯಾಗಿದ್ದ ಬಿಸಿನೀರನ್ನು ಮಿಂದು ಮೈಯೊರಸಿ, ಮಡಿಯ ವಸ್ತ್ರಗಳನ್ನುಟ್ಟು, ಆಭರಣಗಳನ್ನು ತೊಟ್ಟು, ಕರ್ಪೂರತಾಂಬೂಲವನ್ನು ಸವಿದು, ಶಿವನ ಒಡ್ಡೋಲಗಕ್ಕೆ ಬಂದರು. ಅಷ್ಟರೊಳಗೆ ಪಾರ್ವತೀಪರಮೇಶ್ವರರೂ ಪರಿಮಳಜಲಸ್ನಾನಗೊಂಡು ವಸ್ತ್ರಭೂಷಣಾದಿಗಳಿಂದಲಂಕೃತರಾಗಿ ಭದ್ರಾಸನವನ್ನಲಂಕರಿಸಿದ್ದರು. ಸಭಿಕರ ಸೇವೆಯನ್ನು ಪರಿಗ್ರಹಿಸಿದ ಬಳಿಕ ಶಿವನು ಗಿರಿರಾಜನ ಅರಮನೆಗೆ ಬಂದನು. ಮಾವನು ಅಳಿಯನಿಗೆ ಅನರ್ಘ್ಯವಾದ ವಸ್ತ್ರಾಭರಣಗಳನ್ನೂ ಗಜಾಶ್ವಾದಿಗಳನ್ನೂ ಕಾಣ್ಕೆಯಾಗಿ ಕೊಟ್ಟು, ತನ್ನ ಮಗಳಿಗೆ ಜಯೆ ವಿಜಯೆ ಮೊದಲಾದ ಆಪ್ತಸಖಿಯರ ಸಂಕುಲವನ್ನೂ, ಅಮೌಲ್ಯಪೀತಾಂಬರ ಭೂಷಣಗಳನ್ನೂ, ಅಪೂರ್ವತರಗೋಕುಲವನ್ನೂ ಒಳುವಳಿಯಾಗಿತ್ತನು. ಶಿವನು ತನ್ನ ಸಕಲ ಪರಿವಾರದೊಡನೆ ಯಥಾವಿಭವದಿಂದ ಕೈಲಾಸದಕಡೆಗೆ ತಿರುಗಿದನು. ಗಿರಿರಾಜಮೇನಕಿಯರು ಸಕಲವೈಭವದಿಂದ ಬಡನೆ ಕೆಲದೂರದವರೆಗೂ ಹೋಗಿ, ಅಲ್ಲಿ ನಿಂತರು. ಶಿವನು ಗಿರಿರಾಜಮೇನಕಿಯರನ್ನು ಉಚಿತವಚನಗಳಿಂದ ಮರ್ಯ್ಯಾದಿಸಿ ಹಿಂದಕ್ಕೆ ಕಳುಹಿಕೊಟ್ಟನು. ಆ

ಗ ಅವರೀರ್ವರೂ ಪಾರ್ವತಿಯ ಪಾದಕ್ಕೆ ನಮಸ್ಕರಿಸಿ, " ತಾಯೆ ! ನಿನ್ನ ನ್ನು ನಾವು ಪಡೆದ ಪುಣ್ಯದ ಫಲದಿಂದ ಪರಶಿವನು ಸಕಲಪರಿವಾರದೊಡ ನೆ ನಮ್ಮ ಮನೆಗೆ ಬಂದನು. ಎಲ್ಲರ ದರ್ಶನವೂ ಸೇವೆಯೂ ನಮಗೆ ಸುಲ ಭವಾಗಿ ದೊರೆದಿತು. ಈ ನಿನ್ನ ಅನುಗ್ರಹವನ್ನು ನಾವು ಎಂದಿಗೂ ಮ ರೆಯಲಾರೆವು. ನೀನೂ ಕೂಡ ಮುಂದೆ ನಮ್ಮನ್ನು ಮರೆಯದೆ ಬಂದೇವಿ ಧವಾದ ಅಭಿಮಾನದಿಂದ ಕಾಪಾಡಬೇಕು " ಎಂದು ಹೇಳುತ್ತ ಕಣ್ಣೀರ ನ್ನು ತುಂಬಿದರು. ಪಾರ್ವತಿಯೂ ಕಣ್ಣೀರ್ಗರೆದು ಸಮಾಧಾನಪಡಿಸಿ ಕಳು ಹಿಕೊಟ್ಟಳು. ಶಿವಶಿವೆಯರು ವೃಷಭವನ್ನೇರಿ ಹೊರಟರು. ದುಂದುಭಿ ಯು ಮೊಳಗಿತು. ಸಕಲದೇವತೆಗಳೂ ತಂತಮ್ಮ ವಾಹನವನ್ನೇರಿದರು. ಇ ವರು ಬರುವ ಸಂತೋಷವಾರ್ತೆಯನ್ನು ಕೇಳಿ ಕೈಲಾಸಪುರವು ಅತ್ಯಂತ ಸಂಭ್ರಮದಿಂದ ಶೃಂಗರಿಸಲ್ಪಟ್ಟಿತು. ಪುರಜನರೆಲ್ಲರೂ ಸಾಲಾಗಿ ಕಿಕ್ಕಿರಿ ದು ನಿಂತು ಪಟ್ಟದರಾಣಿಯೊಡನೆ ಕೂಡಿ ಬಂದು ಮಹಾದೇವನನ್ನು ನೋಡಿ ಪರಮಾನಂದತುಂದಿಲರಾಗಿ, ದಾರಿಯುದ್ದಕ್ಕೂ ಆರತಿಗಳನ್ನು ಬೆಳಗಿ, ಪು ಷ್ಪವೃಷ್ಟಿಯನ್ನು ಕರೆದು, ಜಯಘೋಷವನ್ನು ಮಾಡುತ್ತಿದ್ದರು. ಶಿವನು ಅರಮನೆಯ ನ್ನು ಪ್ರವೇಶಿಸಿದನು. ಮಹಾಸಭೆಯಲ್ಲಿ ಅಲಂಕೃತವಾಗಿದ್ದ ಸಿ ಂಹಾಸನವನ್ನು ಪಶ್ಚಿಮಸಮೀಪನಾಗಿ ಮಂಡಿಸಿದನು. ಹರಿಬ್ರಹ್ಮಾದಿಗಳೆ ಲ್ಲರೂ ತಮ್ಮ ತಮ್ಮ ಉಚಿತಾಸನಗಳಲ್ಲಿ ಕುಳಿತರು. ಎಲ್ಲರಿಗೂ ಉಚಿತ ವಾದ ಉಡುಗೊರೆ ಹಾರ ತಾಂಬೂಲಗಳಿಂದ ಮರ್ಯಾದೆಗೊಳಿಸಿ ಅಪ್ಪಣೆ ಯಿತ್ತು ಕಳುಹಿಕೊಟ್ಟನು. ತಾನು ಪಶ್ಚಿಯೊಡನೆ ಪರಮವೈಭವದಿಂದ ಒಪ್ಪಿದ್ದನು. ಹೀಗೆ ಪರಶಿವನು ತನ್ನಲ್ಲಿ ಲೀನವಾದ ಆತ್ಮಶಕ್ತಿಯನ್ನೇ ಹೊರಗೆಡಹಿ ಸಾಕಾರಗೊಳಿಸಿ, ಜಗದ್ವ್ಯಾಪಾರಬೋಧನೆಯ ಮಹಾ ಕೃಪೆಯಿಂದ ಗಿರಿಜಾಕಲ್ಯಾಣಲೀಲೆಯನ್ನು ಪರಿಗ್ರಹಿಸಿದನೆಂದು ಚೆನ್ನಬ ಸವೇಶನು ಸಿದ್ಧರಾಮೇಶ್ವರನಿಗೆ ನಿರೂಪಿಸಿದನೆಂಬಲ್ಲಿಗೆ ಹತ್ತನೆ ಅಧ್ಯಾ ಯವು ಸಂಪೂರ್ಣವು.

೧೧ನೆ ಅಧ್ಯಾಯವು.

ಕುಮಾರೋತ್ಪತ್ತಿಯು.

ಪಾರ್ವತೀಪರಮೇಶ್ವರರು ಕೈಲಾಸದಲ್ಲಿ ಸುಖದಿಂದಿರುತ್ತಿರುವಲ್ಲಿ— ಇತ್ತ ಇಂದ್ರಾದಿದೇವತೆಗಳು ತಾರಕಾಸುರನ ಹಾವಳಿಯನ್ನು ತಾಳಲಾರದೆ, ಮತ್ತೆ ಬ್ರಹ್ಮನ ಒಳಗೆ ಬಂದು, ದೂರು ಹೇಳಿಕೊಳ್ಳಲು, ಆತನು ಎಲ್ಲರನ್ನೂ ಕೂಡಿಕೊಂಡು ಹಾಗೆಯೇ ವಿಷ್ಣುವಿನ ಒಳಗೆ ಬಂದನು. ತಾರಕನ ವಧೆಗೆ ಉಪಾಯವನ್ನು ಎಲ್ಲರೂ ವಿಚಾರಮಾಡಿದರು. ಹೇಗೆಂದರೆ— "ಈಗ ಶಿವಶಿವೆಯರು ಸುಖದಿಂದ ಬಂದಾಗಿರುವರು. ಇಬ್ಬರ ಸಂಗದಿಂದಲೂ ಒಬ್ಬ ಸುತನು ಹುಟ್ಟಿದರೆ ಅವನು ಸಾಮಾನ್ಯಶೂರನಾಗುವುದಿಲ್ಲ; ಅವನ ಮುಂದೆ ನಾವೊಬ್ಬರೂ ನಿಲ್ಲಲಾರದಂತಾಗುವೆವು. ಆಗ ತಾರಕನಿಗಿಂತಲೂ ಹೆಚ್ಚಾದ ಉಪದ್ರವವು ಆತನಿಂದ ನಮಗೆ ತಟ್ಟಬಹುದು. ಅದುಕಾರಣ, ಅವರಿಬ್ಬರ ಸಂಯೋಗದಿಂದ ಪುತ್ರನು ಹುಟ್ಟದಂತೆಯೂ, ಶಿವನ ವೀರ್ಯಕ್ಕೆ ಮಾತ್ರವೇ ಒಬ್ಬನು ಜನಿಸುವಂತೆಯೂ ಮಾಡಿ, ಅದರಿಂದ ತಾರಕನ ವಧೆಯನ್ನು ಮಾಡಿಸಬೇಕು" ಎಂದು ಯೋಚಿಸಿದರು. ಅದಕ್ಕಾಗಿಯೇ ಹರಿಬ್ರಹ್ಮಾದಿಗಳು ಶಿವನನ್ನು ಕುರಿತು ತಪಸ್ಸನ್ನಾಚರಿಸಿದರು. ಶಿವನು ಪ್ರಸನ್ನನಾಗಿ ನಿಮ್ಮಿಷ್ಟಾರ್ಥವೇನೆಂದು ಕೇಳಲು, ಎಲ್ಲರೂ ಭಕ್ತಿಯಿಂದ ನಮಸ್ಕರಿಸಿ, "ಪಾರ್ವತಿಯು ಹೊಟ್ಟೆಯಲ್ಲಿ ಪುತ್ರೋತ್ಪತ್ತಿಯಾಗದಂತೆಯೂ, ನಿಮ್ಮ ವೀರ್ಯದಿಂದ ಜನಿಸಿಪ ಕುಮಾರನು ತಾರಕನನ್ನು ಸಂಹರಿಸುವಂತೆಯೂ, ವರವನ್ನು ಕೊಡಬೇಕು" ಎಂದು ಪ್ರಾರ್ಥಿಸಿದರು. ಶಿವನು ಹಾಗೆಯೇ ಆಗಲಿ ಯೆಂದು ವರವಿತ್ತು ಕೈಲಾಸಕ್ಕೆ ತೆರಳಿದನು. ಪಾರ್ವತಿಯು ಶಂಕರನನ್ನು ಕುರಿತು—ನನ್ನನ್ನು ಬಿಟ್ಟು ಇದುವರೆಗೆ ಎಲ್ಲಿ ಹೋಗಿದ್ದಿರೆಂದು ಕೇಳಲು,— "ದೇವತೆಗಳು ತಪಸ್ಸನ್ನು ಮಾಡುತ್ತಿರಲಾಗಿ ಅಲ್ಲಿಗೆ ಹೋಗಿದ್ದೆನು, ಅವರು ಪಾರ್ವತಿಯ ಹೊಟ್ಟೆಯಲ್ಲಿ ಮಕ್ಕಳುದಿಸದಂತೆ ವರವನ್ನು ಕೊಡಬೇಕೆಂದು ಬೇಡಿದರು; ಅವನ್ನು ಕೊಟ್ಟು ಬಂದೆನು" ಎಂದು ನುಡಿದನು. ಪಾರ್ವತಿಯು—ಆಹಾ! ದೇವತೆಗಳು ಇಂಥ ವರವನ್ನು ಬೇಡಿದರೆ? ಎಂದು ಚಿಂತಿಸಿ, ಕೋಪದಿಂದ— ಆ ದೇವತೆಗಳೆಲ್ಲರಿಗೂ ಸಂತಾನವಿಲ್ಲದೆ ಹೋಗಲಿ ಎಂದು ಶಪಿಸಿದಳು. ಬಳಿಕ ಶಿವನು ಪಾರ್ವತಿಯ ಕೋಪವನ್ನು ಸಮಾಧಾನಪಡಿಸುವುದಕ್ಕಾಗಿ ನಾನಾವಿನೋದಗಳನ್ನಾಚರಿಸುತ್ತಿದ್ದನು. ಮತ್ತೂ ದೇವತೆಗಳಿಗೆ ಕೊಟ್ಟ

ವರವನ್ನು ನೆರವೇರಿಸುವುದಕ್ಕಾಗಿ ಸಮಯವನ್ನು ನಿರೀಕ್ಷಿಸುತ್ತಿದ್ದನು. ಇತ್ತ ದೇವತೆಗಳು_ " ಎಷ್ಟೋಕಾಲವಾದರೂ ಪರಶಿವನು ನಮಗೆ ಕೊಟ್ಟವರನ್ನು ನೆರವೇರಿಸಲಿಲ್ಲ, ಮುನ್ನ ಪಾರ್ವತಿಯೊಡನೆ ಲೋಲನಾಗಿ ಕುಳಿತುಬಿಟ್ಟನು, ಈ ತಾರಕನ ಹಿಂಸೆಯಲ್ಲಿ ನಮಗೆ ಒಂದು ದಿನವು ಒಂದು ಯುಗದಂತೆ ಕಳೆಯುತ್ತಿರುವುದು. ಮತ್ತೊಂದು ಬಾರಿಯಾದರೂ ಶಿವನಿಗೆ ಜ್ಞಾಪಿಸಬೇಕು " ಎಂದು ಯೋಚಿಸಿ, ಶಿವನ ಒಳಗೆ ಅಗ್ನಿಯನ್ನು ಹೋಗಿಬಾರೆಂದು ಹೇಳಿದರು. ಅವನಾದರೊ_ಮನ್ಮಥನಿಗಾದ ಅವಸ್ಥೆಯನ್ನು ಕಂಡೂ ಕಂಡು ನೀವು ನನ್ನನ್ನು ಹೋಗಿಬಾರೆಂದು ಹೇಳಬಹುದೆ ? ನಾನು ಹೋಗಲಾರೆನೆಂದು ಹೇಳಿದನು. ಶಿವನ ಒಳಗೆ ಹೋಗುವುದಕ್ಕೆ ಹೆದರಿಕೊಳ್ಳುವುದೇಕೆ ? ಆತನು ತಪ್ಪಿಲ್ಲದೆ ಯಾರನ್ನೂ ಶಿಕ್ಷಿಸುವುದಿಲ್ಲ, ನೀನು ನಮ್ಮ ಮೇಲೆ ಕರುಣವಿಟ್ಟು ಹೋಗಿಬರಬೇಕು, ಎಂದು ಹರಿ ಬ್ರಹ್ಮರು ಹೇಳಿದರೂ " ನನಗೆ ಭಯ " ವೆಂದು ಅಗ್ನಿಯು ನುಡಿಯುತ್ತಿದ್ದನು. ಕಡೆಗೆ ದೇವತೆಗಳು_ "ಅಯ್ಯಾ ! ನಿನಗಾದ ಸುಖದುಃಖಕ್ಕೆ ನಾವೂ ಭಾಗಿಗಳಾಗುತ್ತೇವೆ ; ಯೋಚಿಸಬೇಡ, ಹೋಗು" ಎಂದು ನಂಬುಗೆಗೊಟ್ಟು ಕಳುಹಿದರು. ಆಗ ಅಗ್ನಿಯು ಪಾರಿವಾಳದ ಪಕ್ಕಿಯಾಗಿ ಹಾರಿ, ಕೈಲಾಸಕ್ಕೆ ಬಂದು, ಶಿವಶಿವೆಯರು ಮುಲಗುವ ಮನೆಯ ಗವಾಕ್ಷದಲ್ಲಿ ತಲೆಯಿಕ್ಕಿ ನೋಡುತ್ತಿದ್ದನು. ಶಿವೆಯೊಡನೆ ಸುರತದಲ್ಲಿದ್ದ ಶಿವನು ಪಕ್ಕಿಯನ್ನು ಕಂಡು ಲಜ್ಜೆಗೊಂಡವಂತೆ ಸುರತವನ್ನು ಬಿಟ್ಟು, ಪಕ್ಕಿಯನ್ನು ಹಿಡಿದು, ಸ್ರವಿಸುತ್ತಿದ್ದ ತನ್ನ ವೀರ್ಯವನ್ನು ಅದರ ಬಾಯಲ್ಲಿ ವಿಸರ್ಜಿಸಿದನು. ಅದನ್ನು ಅಗ್ನಿಯು ಧರಿಸಿಕೊಂಡಕೂಡಲೇ ಅಗ್ನಿಯೇ ಮುಖವಾಗುಳ್ಳ ಸಕಲ ದೇವತೆಗಳಲ್ಲೂ ಅದು ಪ್ರವೇಶಿಸಿ, ಸರ್ವರಿಗೂ ಗರ್ಭವನ್ನುಂಟುಮಾಡಿತು. ಎಲ್ಲರಮುಖವೂ ಬೆಳ್ಳಗಾಯಿತು. ೧ ಸಾವಿರ ವರ್ಷವಾದರೂ ಅವರುಗಳ ಪುರುಷಗರ್ಭವು ಇಳಿಯಲಿಲ್ಲ. ಇದರ ಪರಿಹಾರವಾಗುವುದು ಹೇಗೆಂದು ಅಗ್ನಿಯನ್ನು ಅವರು ಕೇಳಲು, ಅದನ್ನು ಶಿವನಿಂದಲೇ ತಿಳಿದುಕೊಳ್ಳುತ್ತೇನೆಂದು ಹೇಳಿ, ಅಗ್ನಿಯು ತಪಸ್ಸಿನಲ್ಲಿ ಕುಳಿತನು. ಶಿವನು ಮೆಚ್ಚಿ, ಇಷ್ಟವರವೇನೆಂದು ಕೇಳಲು, " ಶಿವನೇ ! ನಿನ್ನ ವೀರ್ಯವನ್ನು ನಾನು ಧರಿಸಿದುದರಿಂದ ಸಕಲದೇವತೆಗಳಿಗೂ ಗರ್ಭವುಂಟಾಗಿರುವುದು ; ಅದನ್ನು ದ

ಯೆಯಿಂದ ನೀನು ಪರಿಹರಿಸಬೇಕು " ಎಂದು ಬೇಡಿದನು. ಅದಕ್ಕೆ ಶಿವನು— " ಮೇರುಪರ್ವತದ ಪಕ್ಕದಲ್ಲಿ ನೊದೆಹುಲ್ಲಿನ ವನದಲ್ಲಿರುವ ಗಂಗೆಯೊಳಗೆ ನಿನ್ನ ಗರ್ಭದಲ್ಲಿರುವ ವೀರ್ಯವನ್ನು ತೆಗೆದಿಡು " ಎಂದು ಹೇಳಿ ಅಂತರ್ಹಿತನಾದನು. ಶಿವನಪ್ಪಣೆಯಂತೆಯೇ ಅಗ್ನಿಯು ಶರವಣಕ್ಕೆ ಬಂದು ವೀರ್ಯವನ್ನು ತೆಗೆದು ಗಂಗೆಯಲ್ಲಿಟ್ಟನು. ದೇವತೆಗಳ ಗರ್ಭವೆಲ್ಲ ಹಾಗೆಯೇ ಕಾಣದಂತಾದುವು. ವೀರ್ಯವಾದರೊ ಕುದಿಯುತ್ತ ದಡವನ್ನು ಸೇರಿ ಮಿದುಗುತ್ತಿದ್ದಿತು. ಆಗ ಆರುಮಂದಿ ಕೃತ್ತಿಕಾಸ್ತ್ರೀಯರು ನೀರಿಗಾಗಿ ಗಂಗಾತೀರಕ್ಕೆ ಬಂದರು. ಹೊಳೆಯುತ್ತಿರುವ ವೀರ್ಯವನ್ನು ಕಂಡು ಅದರ ಒಳಗೆ ಹೋದರು. ಪ್ರೀತಿಯಿಂದ ಕುಳಿತು ನೋಡುತ್ತಿರುವಲ್ಲಿ ವೀರ್ಯದಲ್ಲಿ ಸ್ವಲ್ಪ ಭಾಗವು ಹರಿದು ಸರ್ರನೆ ಅವರ ಶರೀರವನ್ನು ಪತ್ತಿ ಗರ್ಭದಲ್ಲಿ ಪೊಕ್ಕು ವೃದ್ಧಿಗೊಂಡಿತು. ಕೂಡಲೇ ಆ ಗರ್ಭದ ಭಾರವನ್ನು ಹೊರಲಾರದೆ ಕೃತ್ತಿಕಾಂಗನೆಯರು ಪ್ರತಿಯೊಬ್ಬರೂ ಅಲ್ಲೇ ಬಂದೊಂದಾಗಿ ಶಿಶುವನ್ನು ಪೆತ್ತು ಇರಿಸಿ ಹೊರಟುಹೋದರು. ಗಂಗಾತೀರದಲ್ಲಿ ಉಳಿದಿದ್ದ ಉಸ್ಸಪ್ಪು ವೀರ್ಯವು ಆಕಾಶದವರೆಗೂ ಉಕ್ಕಿ, ಮೇರುಪರ್ವತದ ಶಿಖರವನ್ನು ನೀಳಿ ನೆಲವನ್ನು ಕೊರೆದು, ನೂರುಯೋಜನದ ಆಳದ ೫ ಬಾವಿಗಳನ್ನು ಮಾಡಿ ಅವುಗಳೊಳಗೆ ಹೊಕ್ಕಿಕೊಂಡಿತು. ಬಿಳಿಕ್ಕವಾದ ಆ ದಿವ್ಯ ವೀರ್ಯವು (ಪಾದರಸವು) ೫ ಬಾವಿಗಳಲ್ಲೂ ೫ ಬಣ್ಣವುಳ್ಳುದಾಗಿರುವುದು. ಆ ಮಹಾಸಿದ್ಧರಸದ ಸ್ಪರ್ಶಮಾತ್ರದಿಂದಲೇ ಮೇರುಪರ್ವತದ ಮರ ಬಳ್ಳಿ ಹಕ್ಕಿ ಮೃಗ ಮೊದಲಾದುವುಗಳೆಲ್ಲ ಸುವರ್ಣಮಯವಾದುವು. ಮನುಷ್ಯರೆಲ್ಲರೂ ಮರಣರಹಿತರಾದರು. ಆಕಾಶದಲ್ಲಿ ಶಿವನು ಪಾರ್ವತಿಯನ್ನು ಕುರಿತು— ನಿನಗೆ ಮಕ್ಕಳು ಹುಟ್ಟಿರುವರು, ನೋಡುವ ಬಾರೆಂದು ಹೇಳಿ, ಕರೆದುಕೊಂಡು ಗಂಗಾತೀರಕ್ಕೆ ಬಂದನು. ಅಳುತ್ತಿರುವ ಮಕ್ಕಳನ್ನು ಸತಿಪತಿಗಳಿಬ್ಬರೂ ಕಂಡು ನಲಿದಾಡಿದರು. ಪಾರ್ವತಿಯು ಅತಿಪ್ರೀತಿಯಿಂದ ಬಂದು ಬಂದೇಬಾರಿಗೆ ಆರುಮಕ್ಕಳನ್ನೂ ಸೇರಿಸಿ ಎತ್ತಿಕೊಂಡಳು. ಆ ಜೋಡಿಸಿದ ರಭಸಕ್ಕೆ ಆರುಶರೀರಗಳೂ ಕೂಡಿ ಬಂದುದೇಹವಾಯಿತು. ತಲೆಗಳುಮಾತ್ರ ಬೇರೆಬೇರೆ ಆರಾಗಿದ್ದುವು. ಇಂತಹ ಶಿಶುವನ್ನು ತಾಯಿಯು ಮುಂಡಾಡುತ್ತಿರಲು, ಮೊಲೆಯಲ್ಲಿ ಹಾಲು ತುಂಬಿ

ಹೊರಚಿಮ್ಮಿತು. ಆ ಸ್ತನ್ಯವನ್ನು ಕುಮಾರನಿಗೆ ಕುಡಿಸಿದಳು. ದೇಹತೆ ಗಳೆಲ್ಲರೂ ಸಂತೋಷಗೊಂಡು ಅಂತರಿಕ್ಷದಲ್ಲಿ ಪುಷ್ಪವೃಷ್ಟಿಯನ್ನು ಕರೆ ದರು. ಭವಭವಾನಿಯರು ಮಗುವನ್ನು ಪುಷ್ಪವಿಮಾನದಲ್ಲಿ ಕುಳ್ಳಿರಿಸಿ ಕೊಂಡು ಕೈಲಾಸಕ್ಕೆ ತೆರಳಿದರು. ಕುವರನು ಪಾರ್ವತಿಯ ತೊಡೆಯಲ್ಲಿ ಮಲಗಿರುವಾಗಲೇ ಸೂರ್ಯಚಂದ್ರಮಂಡಲಗಳನ್ನು ಕಂಡು, ಅವುಗಳನ್ನು ಮಿಣುಕುಹುಳುಗಳನ್ನು ಹಿಡಿವಂತೆ ಹಿಡಿಯಲು ಕೈಚಾಚುತ್ತಿದ್ದನು. ಗಿರಿ ಗಳನ್ನು ಕಿತ್ತು ಚಂಡಾಡುವುದಕ್ಕೆ ಉಜ್ಜುಗಿಸುತ್ತಿದ್ದನು. ಭೂಮ್ಯಾಕಾ ಶಗಳನ್ನು ತಾಟುಂಡೆಯಕಾಯನ್ನಾಡಿಸುವಂತೆ ಆಡಲು ಪ್ರಯತ್ನಿಸುವನು. ಇಂತಹ ಮುಮಾಪರಾಕ್ರಮವ ಕಂದನನ್ನು ಪಾರ್ವತಿಯು ನೋಡಿ ಸಂತೋ ಷದಿಂದ ಉಬ್ಬುತ್ತಿದ್ದಳು. ಇತ್ತ ದೇವತೆಗಳು ಹರಿಬ್ರಹ್ಮರನ್ನು ಕರೆದು ಕೊಂಡು ಕೈಲಾಸಕ್ಕೆ ಬಂದರು. ತಾರಕಾಸುರನ ಉಪಟಳವನ್ನು ಕುರಿತು ಮತ್ತೆ ಶಿವನೊಡನೆ ಮೊರೆಯಿಟ್ಟರು. ಪರಮೇಶನು— ಹೆದರಬೇಡಿರೆಂದು ಅವರಿಗೆ ಅಭಯವಿತ್ತು, ತನ್ನ ಕುಮಾರನಿಗೆ ಯುವರಾಜಪಟ್ಟವನ್ನು ಕಟ್ಟ ದೇವತೆಗಳೆಲ್ಲರೂ ಅವನಿಗೆ ಕಾಣ್ಕೆಯಿತ್ತು ಮರ್ಯಾದಿಸಬೇಕೆಂದು ಅಪ್ಪಣೆ ಮಾಡಲು, ಎಲ್ಲರೂ ಹಾಗೆಯೇ ಆಚರಿಸಿ ಷಣ್ಮುಖಸ್ವಾಮಿಯನ್ನು ಕೊಂ ಡಾಡಿದರು. ಶಿವನು ಕುಮಾರನನ್ನು ಕುರಿತು— "ಸುತನೇ! ಲೋಕ ಕಂಟಕನಾದ ತಾರಕನನ್ನು ಕೊಂದು ಜಯಶೀಲನಾಗಿ ಬಾ" ಎಂದು ಅಪ್ಪಣೆ ಮಾಡಿ, ಹರಸಿ ಕಳುಹಿದನು. ಕೂಡಲೇ ಧಳಧಳಂಧಳವೆಂದು ದೇವದುಂದುಭಿಯ ಶಬ್ದವಾಯಿತು. ಆ ಧ್ವನಿಗೆ ಜಗತ್ತೆಲ್ಲ ನಡುಗಿತು. ಸಮುದ್ರದೊಳಗಿದ್ದ ಜಲಚರಗಳೆಲ್ಲ ಬೆದರಿ ಓಡಾಡಿದುವು. ಕುಮಾರನಪ್ಪ ಣೆಯ ಮೇರೆ ಸಕಲದೇವತೆಗಳೂ ತಮ್ಮ ತಮ್ಮ ವಾಹನವನ್ನೇರಿ ಸೇನೆ ಯೊಡನೆ ಯುದ್ಧಸನ್ನದ್ಧರಾದರು. ಷಣ್ಮುಖನು ನವಿಲನ್ನೇರಿ ಹರಿಬ್ರಹ್ಮರ ಮಧ್ಯವಲ್ಲಿ ನಿಂತು ಹೊರಟನು. ಮುಂದೆ ಸ್ತುತಿಪಾಠಕರು ಕುಮಾರ ದೇವನ ಶೌರ್ಯಾಡಂಬರವನ್ನು ಉದ್ಘೋಷಿಸುತ್ತಿದ್ದರು. ಸಕಲದೇವತೆ ಗಳೂ ಜಯಜಯವೆಂದು ಕೈಯೆತ್ತಿ ಹೊಗಳಿದರು. ಕಹಳೆಗಳು ಭೋ ರ್ಗರೆದುವು. ದಿಕ್ಪಾಲಕರು ಷಣ್ಮುಖನಸುತ್ತಲೂ ತಮ್ಮ ತಮ್ಮ ದಿಕ್ಕಿ ನಲ್ಲಿ ನಿಂತು ಹೊರಟು, ಕೈಬೀಸಿ ಸೇನೆಯನ್ನು ನಡಸುತ್ತಿದ್ದರು. ಗಣಾ

ಧೀಶ್ವರರುಗಳು ಉಳಿ ! ಯೆಂದು ಕೂಗಿಡುತ್ತಿದ್ದರು. ಎತ್ತನೋಡಿದರೂ ಆನೆ ಕುದುರೆಗಳು, ಎಲ್ಲಿನೋಡಿದರೂ ಛತ್ರಚಾಮರಗಳು, ಹೇಗೆ ತಿರುಗಿದರೂ ಮಣಿಕಿರೀಟಾವಳಿಗಳು, ಎಲ್ಲಿಯವರೆಗೆ ನೋಡಿದರೂ ಆಯುಧಗಳ ಸಾಲುಗಳು ಕಣ್ಣಿಗೆ ಕಾಣಿಸುತ್ತಿದ್ದವು. ಇಂದ್ರನು ಈ ಮಹಾದೇವಸೇನೆಯನ್ನು ನೋಡಿ, ಇಷ್ಟೊಂದು ಸೇನೆಯೂ ಎಲ್ಲಿ ಅಡಗಿದ್ದಿತು ! ಎಂದು ಆಶ್ಚರ್ಯಪಟ್ಟು, ಇಂತಹ ಮಹಾಸೇನೆಯನ್ನು ಗೆಲ್ಲುವುದಕ್ಕೆ ಆ ನೀಚತಾರಕನಿಗೆ ಶಕ್ತಿಯೆಲ್ಲಿ ಬಂದಿತು ? ಈದಿನ ತಮಗೇ ಜಯವಾಗುವುದು ನಿಜವೆಂದು ನಿಶ್ಚೈಸಿ, ಸಂತೋಷದಿಂದ ತೆರಳಿದನು. ಅತ್ತ ತಾರಕನ ಒಳಗೆ ಒಬ್ಬ ದೂತನು ಹೋಗಿ— ದೇವತೆಗಳು ಶಿವಕುಮಾರನಿಗೆ ಸೈನ್ಯಾಧಿಪತಿಪಟ್ಟವನ್ನು ಕಟ್ಟಿ ನಿನ್ನ ಮೇಲೆ ಯುದ್ಧಕ್ಕೆ ಬರುತ್ತಿರುವರು, ಎಂದು ಬಿನ್ನೈಸಿದನು. ಅದನ್ನು ಕೇಳಿ ತಾರಕನು ಕೋಪದಿಂದ ಕೆಂಗಣ್ಣನ್ನು ಬಿಡುತ್ತ, ಕುಡಿಮಿಾಸೆಯು ಕುಣಿದಾಡುತ್ತಿರಲು, ಕೈಕತ್ತಿಯನ್ನು ಜಳಪಿಸಿ, 'ನನ್ನ ಸಕಲ ಸೇನೆಯೂ ಯುದ್ಧಕ್ಕೆ ಸಿದ್ಧವಾಗಲಿ' ಎಂದು ನುಡಿದನು. ಕ್ಷಣಕಾಲದಲ್ಲಿ ಮಹಾಸಮುದ್ರದಂತೆ ಸೈನ್ಯವು ಅಣಿಯಾಗಿ ನಿಲ್ಲಲು, ತಾನು ಕಾಂಚನಮಣಿರಥವನ್ನೇರಿ, ವಾದ್ಯಧ್ವನಿಯ ಕೋಲಾಹಲನಿಂದ ಸಾಗಿ ಬಂದನು. ಅವನ ಒಡಹುಟ್ಟಿದ ಗಜಶಿರ, ಶಂಖಕರ್ಣ, ಶತಮಾಯ, ವೃಷ, ಮಹಾನಾಭ, ದುಂದುಭಿ, ವಿರೂಪಾಕ್ಷ, ಸ್ವರ್ಭಾನು, ಹಯಗ್ರೀವ ಮೊದಲಾದ ಮಹಾದೈತ್ಯರೆಲ್ಲರೂ ತಮ್ಮ ತಮ್ಮ ಸೇನೆಯೊಡನೆ ಪಕ್ಕಗಳಲ್ಲಿ ಬರುತ್ತಿದ್ದರು. ಸೇನೆಯ ಲೆಕ್ಕವನ್ನು ಮಾಡುವುದಕ್ಕೆ ಬ್ರಹ್ಮನಿಗೂ ಸಾಧ್ಯವೋ ಅಲ್ಲವೋ ಎಂದು ಊಹಿಸುವಷ್ಟು ರಾಕ್ಷಸಸೇನೆಯು ಮಹತ್ತರವಾಗಿದ್ದಿತು. ದೇವತೆಗಳು ಇದನ್ನು ಕಂಡು ಆಶ್ಚರ್ಯಪಟ್ಟರು. ಆಗ ತಾರಕನ ದಳಪತಿಯಾದ ವಜ್ರನಾಭನು ತಮ್ಮ ಸೇನೆಯಲ್ಲಿ ಪದ್ಮಾಕಾರವಾಗಿ ವ್ಯೂಹರಚನೆಯನ್ನು ಮಾಡಿದನು. ಸೇನೆಯಲ್ಲಿ ಪಟುಭಟರಾದವರನ್ನೆಲ್ಲ ದಳಗಳಸ್ಥಾನದಲ್ಲಿ ನಿಲ್ಲಿಸಿದನು. ತಾರಕನ ತಮ್ಮಂದಿರನ್ನೆಲ್ಲ ಮಧ್ಯದ ಕೇಸರಗಳ ಸ್ಥಾನದಲ್ಲಿ ನಿಲ್ಲಿಸಿದನು. ಅದರ ಮಧ್ಯದ ಕರ್ಣಿಕೆಯ ಒಳಯಲ್ಲಿ ಜಂಭನನ್ನು ನಿಲ್ಲಿಸಿದನು. ಈ ವ್ಯೂಹದ ಮುಂಗಡೆಯಲ್ಲಿ ಶುಂಭನೂ, ಹಿಂದುಗಡೆಯಲ್ಲಿ ಶಬಲನೂ, ಎಡಗಡೆಯಲ್ಲಿ ಕೇತುವೂ, ಒಲದಲ್ಲಿ ಶರಭ

ನೂ ನಿಲ್ಲಿಸಲ್ಪಟ್ಟರು. ತಾರಕಾಸುರನು ಈ ಸೇನಾರಚನೆಯನ್ನು ನೋಡಿ ಸಂತೋಷಿಸಿ, ದಳವಾಯಿಗೂ ಸೇನಾಮುಖಂಡರಿಗೂ ವೀಳಯವನ್ನು ಕೊಟ್ಟು ಉತ್ಸಾಹಿಸಿ, ತಾನು ಮೇಲ್ಗಾವಲಿನಲ್ಲಿ ನಿಂತುಕೊಂಡನು. ದೇವ ದಾನವಸೇನೆಗಳೆರಡೂ ಮುಂಗಡೆಯಲ್ಲಿ ಸಂಧಿಸಿದುವು. ಉಭಯಪಕ್ಷದ ವೀರರೂ ಮೂದಲಿಸಿ ಸಿಹ್ಮನಾದವನ್ನು ಮಾಡಿ ಧನುಸ್ಸುಗಳನ್ನು ಧ್ವನಿ ಮಾಡಿ ಬಾಣವನ್ನು ಹೂಡಿ ಪ್ರಯೋಗಿಸುತ್ತ ಬಂದರು. ನಿಮಿಷ ನಿಮಿಷಕ್ಕೆ ಕೋಪವು ಉಕ್ಕೇರಲು, ಬಿಲ್ಲಿನವರು ಬಿಲ್ಲಿನವರೊಂದಿಗೂ, ಕತ್ತಿಯವರು ಖಡ್ಗದವರೊಡನೆಯೂ, ಭಲ್ಲೆಯದವರು ಭರ್ಜಿಯವರೊಡನೆಯೂ, ಆನೆಯವರು ಆನೆಯವರಮೇಲೆಯೂ, ರಾವುತರು ರಾವುತರಮೇಲೂ, ರಥಿಕರು ರಥಿಕರಮೇಲೂ ಬಿದ್ದು ದೇಹಾಭಿಮಾನವನ್ನು ತೊರೆದು ಕಾದಾಡುತ್ತಿದ್ದರು. ಒಬ್ಬರಮೇಲೊಬ್ಬರು ಬಿದ್ದು ಮುಂದೆ ಸಾಗುತ್ತಲೂ, ಕೈಗೆ ಸಿಕ್ಕಿದವನ ಮುಂದಲೆಯನ್ನು ಹಿಡಿದು ಬಗ್ಗಿಸಿ, ಬಲಗೈ ಕತ್ತಿಯಿಂದ ತರಿಯುತ್ತಲೂ, ದೂರದಲ್ಲಿದ್ದ ಶತ್ರುವನ್ನು ಭಲ್ಲೆಯದಿಂದ ಇರಿಯುತ್ತಲೂ, ಮಗ್ಗುಲಿಗೆ ಬಂದವನನ್ನು ಈಟಿಯಿಂದ ತಿವಿಯುತ್ತಲೂ, ಮೂದಲಿಸಿದವನನ್ನು ಮತ್ಸರಿಸಿ ಹಾರಿ ಬೆದೆದು ಕೆಡವಿ ಹೊಟ್ಟೆಯ ಬಗಿಯುತ್ತಲೂ, ತಲೆಗಳನ್ನೂ ಬಾಹುಗಳನ್ನೂ ಕಡಿದು ಹಾರಾಡಿಸುತ್ತಲೂ, ಮುಂದೆ ಹೆಣಗಳನ್ನು ತುಳಿದು ವೀರಾವೇಶದಿಂದ ಮುಂಡಿಯೂರಿ ಕುಳಿತು ಬಾಣಗಳನ್ನೆಸೆದು ಸಿಹ್ಮನಾದವನ್ನು ಮಾಡುತ್ತಲೂ, ಆನೆಗಳ ಸುಂಡಿಲಿನಿಂದ ಪ್ರತಿಪಕ್ಷದ ಆನೆಯ ಮೇಲೆ ಕುಳಿತಿರುವ ಮಾವುತನನ್ನು ಎಳೆಯಿಸಿ ಕೆಳಕ್ಕೆ ಕೆಡಹುತ್ತಲೂ, ಆನೆಗಳನ್ನು ಪ್ರತಿಸೇನೆಯಲ್ಲಿ ನುಗ್ಗಿಸಿ ಕೊಂಬಿಗೆ ಸಿಕ್ಕಿಸಿರುವ ಅಲಗುಗಳಿಂದ ಶತ್ರುಗಳನ್ನು ಇರಿಸುತ್ತಲೂ, ರಾವುತರು ವಾಘೆಗಳನ್ನೆಳೆದು ಕುದುರೆಗಳನ್ನು ಚೆಮ್ಮಿಸಿ ಎರಡು ಕೈಗಳಿಂದಲೂ ಇಕ್ಕಡೆಗಳಲ್ಲಿ ಸಿಕ್ಕಿದ ಭಟರನ್ನು ತರಿಯುತ್ತಲೂ, ರಥಿಕರು ವರ್ಷಾಕಾಲದ ಮೇಘಗಳಂತೆ ಬಾಣವರ್ಷವನ್ನು ಕರೆದು ಪ್ರತಿಪಕ್ಷದ ರಥ ಸಾರಥಿ ಹಯಾದಿಗಳನ್ನು ನುಚ್ಚುನೂರುಮಾಡುತ್ತಲೂ, ಮಹಾಭೀಕರವಾಗಿ ಕಾದಾಡುತ್ತಿದ್ದರು. ಮುಹೂರ್ತಕಾಲದೊಳಗಾಗಿ ಸೇನೆಯ ಮುಂಭಾಗವು ಎರಡು ಕಡೆಯಲ್ಲೂ ಬಯಲಾಗುತ್ತ ಬಂದಿತು. ಮೂಂಸರಾಶಿಗಳು, ಮೂಳೆಗಳ ಬೆಟ್ಟ

ಲುಗಳು, ರಕ್ತದ ಕಾಲ್ವೆಗಳು, ಕಾಲು ತಲೆ ತೋಳು ತೊಡೆಗಳ ತುಂಡು ಗಳು ರಣಾಂಗಣದಲ್ಲಿ ತುಂಬಿ ತುಳುಕುತ್ತಿದ್ದುವು. ಮುಂದಿನ ಸೈನ್ಯವು ನಷ್ಟವಾದುದನ್ನು ವಜ್ರನಾಭನು ನೋಡಿ, ರೋಷದಿಂದ ಮಹಾಗರ್ಜನೆ ಯನ್ನು ಮಾಡಿ, ದೈತ್ಯನಾಯಕರ ಸೇನೆಯೊಡನೆ ಕೂಡಿ ತಾನೇ ದೇವಸೇ ನೆಯಮೇಲೆ ಯುದ್ಧಕ್ಕೆ ಅನುವಾಗಿ ನಿಂತು "ಬಲಶಾಲಿಯಾದ ದೇವೇಂ ದ್ರನ ಪೌರುಷವನ್ನು ನೋಡುತ್ತೇನೆ, ಮುಂದಕ್ಕೆ ಬರಹೇಳಿ" ಎಂದು ನುಡಿಯುತ್ತ ರಥವನ್ನು ಮುಂಗಡೆಗೆ ಸಾಗಿಸಿದನು. ಎಂದು ಚೆನ್ನಬಸ ವೇಶನು ನುಡಿದನೆಂಬಲ್ಲಿಗೆ ಹನ್ನೊಂದನೆ ಅಧ್ಯಾಯವು ಸಂಪೂರ್ಣವು.

೧೨ನೆ ಅಧ್ಯಾಯ.

ಕುಮಾರ ತಾರಕಸೇನಾಯುದ್ಧವು.

ಎಲೆ ಸಿದ್ಧರಾಮೇಶನೆ ಕೇಳು, ಅತ್ತ ರಾಕ್ಷಸ ಸೇನೆಯಲ್ಲಿ ವಜ್ರ ನಾಭನು ಪ್ರಮುಖರಾಕ್ಷಸರೊಡನೆ ಕೂಡಿ ಇದಿರಾಗಲು, ಅದನ್ನು ಕಂ ಡು ಇತ್ತ ದೇವಸೇನೆಯಲ್ಲಿ ಇಂದ್ರಪ್ರಮುಖರಾದ ದೇವಶ್ರೇಷ್ಠರುಗಳೆ ಲ್ಲರೂ ಕೂಡಿ ಪ್ರತಿಭಟಿಸಿದರು. ಸಿದ್ಧ ಸಾಧ್ಯ ಯಕ್ಷ ವಸು ವಿದ್ಯಾಧರ ಕಿನ್ನರಾದಿಗಳ ಸೇನೆಯು ವಾದ್ಯಧ್ವನಿ ಮಾಡುತ್ತ ಕೋಲಾಹಲದಿಂದ ರಾ ಕ್ಷಸರಮೇಲೆ ಬಿದ್ದು ಬಾಣದ ಮಳೆಯನ್ನು ಕರೆದು, ಇರಿ ತಿವಿ ಕೊಲ್ಲು ತರಿ ಬಗಿ ಎಂದು ಮೊದಲಾಗಿ ಕೂಗಿ ಪ್ರೋತ್ಸಾಹಿಸುತಲಿದ್ದಿತು. ಇದನ್ನು ವಜ್ರನಾಭನು ಕಂಡು— "ಓಹೊ! ಇವರು ದಿಕ್ಪಾಲಕರೊ? ಇವ ನೇ ಇಂದ್ರನೊ? ಈ ಬಾಣಾವಳಿಯನ್ನು ಕರೆಯುವವರು ಶೂರರೊ? ಭಲಾ! ಹುಲ್ಲೆಗಳು ಹುಲಿಯ ಕಾಡಿಗೆ ಯುದ್ಧ ಮಾಡುವುದಕ್ಕಾಗಿ ಬಂ ದಂತಾಯಿತು!" ಎನ್ನುತ್ತ, ತನ್ನ ಭುಜವನ್ನು ತಟ್ಟಿ ಆರ್ಭಟಿಸಿ, ಆಯುಧವನ್ನೆತ್ತಿದನು. ಆಗ ದೇವತೆಗಳು ತಮ್ಮ ಕಡೆಯವರನ್ನು ಕುರಿ ತು— "ಬೆದರಬೇಡಿರಿ, ಹಿಂದೆ ಬೆಂಬಲವಾಗಿ ಶಿವಪುತ್ರನಿದ್ದಾನೆ; ಮುಂ

ದಿಟ್ಟ ಹಜ್ಜೆಯನ್ನು ಹಿಂದೆಗೆಯದಿರಿ, ರಾಕ್ಷಸರ ಪೌರುಷವನ್ನು ಲಕ್ಷ್ಯ ಮಾಡಬೇಡಿರಿ, ಹೊಡೆಯಿರಿ, ತಿವಿಯಿರಿ, ಬಗಿಯಿರಿ, ಹಿಡಿಯಿರಿ, ಬಡಿಯಿರಿ" ಎಂದು ಮೊದಲಾಗಿ ಹೇಳಿ ಉತ್ಸಾಹಗೊಳಿಸುತ್ತ, ರಾಕ್ಷಸರ ಮೇಲೆ ಬಿದ್ದು ಕತ್ತರಿಸುತ್ತ ಬಂದನು. ವಜ್ರನಾಭನು ದೇವತೆಗಳ ಸಾಹಸವನ್ನು ನೋಡಿ ರೋಷಾರುಣನೇತ್ರನಾಗಿ, ಧನುಸ್ಸಿನಿಂದ ಎಡೆವಿಡದೆ ಬಾಣವ ಸಮೂಹವನ್ನು ಎಲ್ಲ ಕಡೆಗೂ ಪ್ರಯೋಗಿಸುತ್ತ, ಕ್ಷಣೇ ಕ್ಷಣೆ ಹೆಚ್ಚುತ್ತಿರುವ ವೀರಾವೇಶದಿಂದ ಆರ್ಭಟಿಸುತ್ತ, ಪ್ರಳಯಕಾಲದ ರುದ್ರನಂತೆ ಭೀಕರವಾಗಿ ಪ್ರತಿಭಟರನ್ನು ಕಡಿದು ಮಲಗಿಸುತ್ತ, ದೇವನಾಯಕರನ್ನು ಮೂದಲಿಸಿ, ಇಂದ್ರನನ್ನು ಹೊಡೆದು, ಅಗ್ನಿಯನ್ನು ಹಿಂದಕ್ಕೆ ಸರಿಸಿ, ಯಮನ ಸಾಹಸವನ್ನು ನಿಲ್ಲಿಸಿ, ನಿಋತಿಯ ಶರೀರವನ್ನು ಜರ್ಝರಗೊಳಿಸಿ, ವರುಣನನ್ನು ಗಾಯಮಾಡಿ, ವಾಯುವಿನ ದೇಹವನ್ನು ಸೀಳಿ, ಕುಬೇರನ ರಥವನ್ನು ಹಾಳ್ಮಾಡಿ, ಈಶಾನನ ಎದೆಯಲ್ಲಿ ಬಾಣವನ್ನು ನಟ್ಟ, ಉಳಿದ ಸಾಧಾರಣದೇವತೆಗಳಿಗೆಲ್ಲ ಕೈಕಾಲುಮುರಿದು ಗಾಯಮಾಡಿ ರಕ್ತವನ್ನು ಕಾರಿಸಿ, ನಾನಾವಿಧವಾಗಿ ಭಂಗಿಸಿದನು. ಆಗ ದೇವತೆಗಳು ಮುಖವನ್ನು ಹಿಂದೆಗೆದು— ಅಯ್ಯೋ! ಸುಮ್ಮನೆ ಕುಮಾರನನ್ನು ನಂಬಿ ನಾವು ಇಲ್ಲಿಗೆ ಬಂದು ಮೃತ್ಯುವಿನ ಬಾಯ್ಗೆ ತುತ್ತಾಗುವಂತಾಯ್ತಲ್ಲ! ಎಂದು ಗೋಳಿಟ್ಟು ಓಡುತ್ತಿದ್ದರು. ವಿಷ್ಣುವು ಇವರನ್ನು ಕಂಡು ಛೀಗುಟ್ಟಿ, ತನ್ನ ವಾಹನವನ್ನು ವಜ್ರನಾಭನ ಮುಂದಕ್ಕೆ ಸರಿಸಿದನು. ಅವರೀರ್ವರಿಗೂ ಮಹಾಯುದ್ಧವು ಜರುಗಿತು. ಯುದ್ಧಾಂಗಣವೆಲ್ಲ ಇವರುಗಳ ಬಾಣಗಳಿಂದ ತುಂಬಿಹೋಯಿತು. ಆಕಾಶವು ಇವರ ಗರ್ಜನೆಯುಸ್ಸನ್ನು ಹಿಡಿಯಲಾರದಂತಾಯಿತು. ಗರುಡನ ಹಾರಾಟಕ್ಕೂ ರಾಕ್ಷಸನ ರಥದ ಗಾಲಿಗಳ ಓಡಾಟಕ್ಕೂ ಭೂಮಿಯು ಸಾಲದಂತಾಯಿತು. ಇಬ್ಬರೂ ಸಮಜೋಡಿಯಾಗಿ ಶಸ್ತ್ರಾಸ್ತ್ರ ದಿವ್ಯಾಸ್ತ್ರ ಮಂತ್ರಾಸ್ತ್ರಗಳನ್ನೆಲ್ಲ ಪ್ರಯೋಗಿಸುತ್ತ ಬಂದರು. ಒಬ್ಬನು ಸರ್ಪಾಸ್ತ್ರವನ್ನು ಬಿಟ್ಟರೆ ಮತ್ತೊಬ್ಬನು ಗರುಡಾಸ್ತ್ರವನ್ನೂ, ಒಬ್ಬನ ಅಗ್ನ್ಯಸ್ತ್ರಕ್ಕೆ ಮತ್ತೊಬ್ಬನು ಜಲಾಸ್ತ್ರವನ್ನೂ, ಒಬ್ಬನ ಪರ್ವತಾಸ್ತ್ರಕ್ಕೆ ಮತ್ತೊಬ್ಬನು ವಜ್ರಾಸ್ತ್ರವನ್ನೂ ಬಿಟ್ಟು, ಕತ್ತರಿಸುತ್ತ ಬಂದರು. ಆಗ ವಿಷ್ಣುವು ಬೇ

ಸತ್ತು ಕೋಪದಿಂದ ಬೊಬ್ಬಿರಿದು, "ಎಲೊ ನೀಚನೆ! ನೀನೆಯೋ ತಾರಕನ ದಳಪತಿ? ನನ್ನೊಡನೆ ಸಮನಾಗಿ ಕಾದಾಡುವುದಕ್ಕೆ ನೀನೆಷ್ಟರವನು? ಇದುವರೆಗೆ ಸೆಣಸಿದ ನಿನ್ನ ಹೆಮ್ಮೆಯನ್ನು ಇನ್ನು ತೋರಿಸು" ಎಂದು ಮೂದಲಿಸಿ, ಮಹಾವೈಷ್ಣವಾಸ್ತ್ರವನ್ನು ಕರ್ಣಾಂತವಾಗಿ ಸೆಳೆದು ಅಬ್ಬರಿಸಿ ದೈತ್ಯನ ಮೇಲೆ ಬಿಟ್ಟನು. ಅದು ಕಿಡಿಯನ್ನು ಕಾರುತ್ತ ಹೋಗಿ ವಜ್ರನಾಭನ ಕತ್ತನ್ನು ಛಟ್ಟನೆ ಕತ್ತರಿಸಿ ರುಂಡವನ್ನು ಹಾರಿಸಿಕೊಂಡು ಹೋಯಿತು. ಅವನ ಮುಂಡವು ಪೂರ್ವಸಂಸ್ಕಾರದಿಂದ ಅರ್ಧಯುಮದವರೆಗೂ ಬಾಣಗಳನ್ನು ಪ್ರಯೋಗಿಸುತ್ತಿದ್ದಿತು! ಆಗ ಅವನ ಕಡೆಯ ಸೇನೆಯು ಕೋಪವೇರಿ ಹರಿಯ ಮೇಲೆ ಬಿದ್ದಿತು. ವಿಷ್ಣುವು ಸಿಟ್ಟಿನಿಂದ ಬಾಣಗಳನ್ನು ಸುರಿಸಿ ರಾಕ್ಷಸರನ್ನೆಲ್ಲ ಉರುಳಿಸುತ್ತ ಬಂದನು. ಇದನ್ನು ಮಹಾನಾಭನು ಕಂಡು, "ಆಹಾ! ಮದದಾನೆಯ ಸುಂಡಿಲಿನಲ್ಲಿದ್ದ ಕಬ್ಬನ್ನು ಕಿತ್ತಂತೆ ನಮ್ಮ ಕಡೆಯ ವಜ್ರನಾಭನನ್ನು ಕೊಂದವನಾರು? ಮುಂದೆ ಬಾ! ನಿನ್ನ ಶೌರ್ಯವನ್ನು ನೋಡುತ್ತೇನೆ" ಎಂದು ಹೇಳುತ್ತ, ಹರಿಯ ಮುಂಗಡೆಗೆ ಬಂದು ಬಾಣವನ್ನು ತೊಟ್ಟನು. ವಿಷ್ಣುವಾದರೊ— ಎಲೊ ನೀಚನೇ! ಆ ವಜ್ರನಾಭನು ತನ್ನ ಬಳಿಗೆ ನಿನ್ನನ್ನು ಕರೆದುಕೊಳ್ಳುವುದಕ್ಕಾಗಿ ಹೇಳಿ ಕಳುಹಿರಬಹುದು! ಅದರಿಂದಲೇ ನೀನು ನನಗಿದಿರಾಗಿರುವೆ; ಈಗಳೂ ದಯವಿಟ್ಟು ಕ್ಷಮಿಸುತ್ತೇನೆ; ತಲೆಯನ್ನುಳುಹಿಕೊಂಡು ಸುಮ್ಮನೆ ಹೋಗು" ಎಂದು ಹೇಳಿ, ಐದು ಬಾಣಗಳನ್ನು ಬಿಟ್ಟು, ಅವನ ಬಾಣವನ್ನು ಖಂಡಿಸಿ, ಮತ್ತೆ ನಾಲ್ಕು ಬಾಣಗಳನ್ನೆಚ್ಚು ರಾಕ್ಷಸನ ರಥ ತುರಗ ಸಾರಥಿ ಧ್ವಜಗಳನ್ನೆಲ್ಲ ಹಾಳ್ಮಾಡಿದನು. ಆಗ ಮಹಾನಾಭನು ಛಟ್ಟನೆ ಬೇರೊಂದು ರಥವನ್ನೇರಿ, "ಈಗ ನನ್ನ ಬಾಣಗಳನ್ನು ಕತ್ತರಿಸು ನೋಡುವ" ಎಂದು ಹೇಳಿ, ನಾಲ್ಕು ಬಾಣಗಳನ್ನು ಪ್ರಯೋಗಿಸಿ, ಹರಿಯ ತೋಳುಗಳಲ್ಲಿ ನಟ್ಟನು. ವಿಷ್ಣುವು ಅದರಿಂದ ನೊಂದು, ಅಯ್ಯೋ! ಎಂದು ಕೂಗಿದನು. ಆಗ ದಿಕ್ಪಾಲಕರೆಲ್ಲರೂ ರೋಷನೇರಿ ಮಹಾನಾಭನ ರಥವ ಸುತ್ತಲೂ ಮುತ್ತಿ ಬಾಣವನ್ನು ಕವಿಸಿದರು. ಅವನು ಮಹಾರೌದ್ರದಿಂದ ಇವರೆಲ್ಲರನ್ನೂ ಪರಿಭವಗೊಳಿಸಿ, ಮತ್ತೆ ವಿಷ್ಣುವಿನಮೇಲೆ ಏಳುಬಾಣಗಳನ್ನು ಎಚ್ಚನು. ಅದರಿಂದ ದೇ

ಹದಲ್ಲಿ ಗಾಯವಾಗಿ ರಕ್ತವು ಸುರಿಯಹತ್ತಿತು. ಹರಿಯ ಈ ಅವಸ್ಥೆಯನ್ನು ನೋಡಿ, ಕಿನ್ನರ ಕಿಂಪುರುಷ ವಿದ್ಯಾಧರಾದಿ ದೇವಸ್ತ್ರೀಯವೆಲ್ಲವೂ ದಿಕ್ಕುದಿಕ್ಕಿಗೆ ತಲೆತಪ್ಪಿಸಿಕೊಂಡು ಓಡಿತು. ಓಡಲಾರದೆ ರಾಕ್ಷಸರ ಕೈಗೆ ಸಿಕ್ಕಿದವರು ಹಲ್ಕಿರಿದು ಪ್ರಾಣದಾನವನ್ನು ಬೇಡಿಕೊಂಡರು. ಆಗ ದಿಕ್ಪಾಲಕರೆಲ್ಲರೂ ಕುಮಾರಸ್ವಾಮಿಯ ಬಳಿಗೆ ಬಂದು ನಮಸ್ಕರಿಸಿ, ತಮ್ಮವಸ್ಥೆಯನ್ನು ಹೇಳಿಕೊಂಡು ನಮ್ಮನ್ನುದ್ಧರಿಸಬೇಕೆಂದು ಬೇಡಿದರು. ಕಾಲ್ಮುರಿದು ಗಾಯವೇರಿ, ರಕ್ತಸುರಿದು, ತಲೆಯೊಡೆದು, ನಾನಾವಿಧವಾಗಿ ಭಂಗಗೊಂಡಿರುವ ದೇವತೆಗಳನ್ನೆಲ್ಲ ಷಣ್ಮುಖನು ಸಮಾಧಾನಮಾಡಿ, ಬೆನ್ನ ಹಿಂದಿಟ್ಟುಕೊಂಡು, ನವಿಲನ್ನೇರಿ ತಾನೇ ಯುದ್ಧಕ್ಕೆ ಸನ್ನದ್ಧನಾಗಿ ಹೊರಟನು. ಗರುಡರನ್ನು ಬಡಿ, ಯಕ್ಷರನ್ನು ಕಡಿ, ಗಂಧರ್ವರನ್ನು ಜಡಿ, ಕಿನ್ನರರನ್ನು ಪಿಡಿ, ಎಂದು ಮೊದಲಾಗಿ ಕೂಗಿಕೊಂಡು ಅಟ್ಟಿ ಬರುತ್ತಿರುವ ಮಹಾನಾಭನ ಸೈನ್ಯಕ್ಕೆ ಇದಿರಾದನು. ಹನ್ನೆರಡು ಕಣ್ಣುಗಳಿಂದಲೂ ಕಿಡಿಯನ್ನು ಸುರಿಸುತ್ತ ಪ್ರಳಯಕಾಲದ ರುದ್ರನಂತೆ ಭೀಕರವಾಗಿ ದೈತ್ಯಸೇನೆಯನ್ನು ಮರುಮರನೆ ನೋಡಿದನು. ಕೈಗೆ ಬಿಲ್ಲನ್ನು ತೆಗೆದುಕೊಂಡು, ಬಾಣವನ್ನು ಸಿಂಜೆಸಿಯಲ್ಲಿ ಜೋಡಿಸಿ ಬಿಡಲಾರಂಭಿಸಿದನು. ಬಗ್ಗಿದ ಬಿಲ್ಲು ಸಿಲ್ಲಲಿಲ್ಲ, ಸಿಂಜೆಸಿಯ ಶಬ್ದವು ತಪ್ಪಲಿಲ್ಲ, ಬಾಣದ ಪುಂಖಾನುಪುಂಖಗಮನವು ವಿಚ್ಛಿತ್ತಿಗೊಳ್ಳಲಿಲ್ಲ. ಇದಿರಾಗಿ ಕುಮಾರನ ಬಳಿಗೆ ಬಂದುಬಾಣವಾದರೂ ಬರಲಿಲ್ಲ, ಅವನ ಬಾಣಗಳ ಜೋಡಣೆಗೆ ಯುದ್ಧಾಂಕಣವು ಸಾಲಲಿಲ್ಲ; ಭೂಮ್ಯಂತರಿಕ್ಷಗಳೊಂದೂ ಕಾಣಲಿಲ್ಲ. ಕುಮಾರನು ಅದಾವಾಗ ಬಾಣವನ್ನು ಬತ್ತಳಿಕೆಯಿಂದ ತೆಗೆವನೋ! ಯಾವಾಗ ತೊಡುವನೋ! ಯಾವಾಗ ಬಿಡುವನೋ! ಒಬ್ಬರಿಗೂ ಕಾಣದಂತೆ ಅಷ್ಟೊಂದು ಕರಲಾಘವದಿಂದ ಕ್ಷಣಕಾಲದಲ್ಲಿ ಬಾಣಲೋಕವನ್ನು ನಿರ್ಮಿಸಿದಂತೆ ಮಾಡಿಬಿಟ್ಟನು. ದೈತ್ಯರ ಸೇನೆಯೊಳಗೆ ಕುಮಾರನ ಬಾಣದೇಟಿನ ಬೆಸೆಯಿಂದ ಕಾಲಾಳ್ಗಳು ಕುದುರೆಗಳಮೇಲೂ, ಕುದುರೆಗಳು ಆನೆಗಳಮೇಲೂ, ಆನೆಗಳು ರಥಗಳಮೇಲೂ ಬಿದ್ದು, ಒಂದರಿಂದೊಂದು ತಾವು ತಾವೇ ಹತಿಗೊಳ್ಳುತ್ತಿದ್ದುವು. ಮಹಾನಾಭನ ದೇಹದ ರೋಮಕೂಪಗಳಲ್ಲೆಲ್ಲ ಬಾಣಗಳು ನಾಟಿಕೊಂಡುವು. ಅವನ ಕಿರೀಟ ಭುಜಕೀರ್ತಿ

ಧನುಸ್ಸು ಬತ್ತಳಿಕೆಯೆಲ್ಲ ನುಚ್ಚು ನೂರಾದುವು. ರಥವು ಮುರಿದುಬಿದ್ದಿತು. ಸಾರಥಿಯೂ ಅಶ್ವಗಳೂ ಯಮಲೋಕಕ್ಕೆ ತೆರಳಿದುವು. ಆಗ ಮಹಾನಾಭನು— ಇವನು ಬಹುಪರಾಕ್ರಮಶಾಲಿಯಾಗಿ ಕಾಣುತ್ತಾನೆ, ಇರಲಿ, ನೋಡಿಕೊಳ್ಳುತ್ತೇನೆ, ಎಂದು ಝಗ್ಗನೆ ಭೂಮಿಗೆ ದುಮಿಕಿ, ಮಾಸೆಯನ್ನು ತಿರುಹಿ, ದೊಡ್ಡ ಕತ್ತಿಯನ್ನು ಹಿಡಿದು ಆರ್ಭಟಿಸಿ, ಕುಮಾರಸ್ವಾಮಿಯ ಬಳಿಗೆ ಬರಲನುವಾದನು. ಕರಿಯ ಮೋಡದಂತೆ ಸ್ಫುರತ್ಕೃಷ್ಣ ದೇಹಿಯಾಗಿ ಬರುತ್ತಿರುವ ರಾಕ್ಷಸನನ್ನು ಷಣ್ಮುಖನು ಕಂಡು ನಕ್ಕು, ತೀಕ್ಷ್ಣವಾದ ಮೊನೆಯ ಬಾಣಗಳೆರಡನ್ನು ಗುರಿಯಿಟ್ಟು ಪ್ರಯೋಗಿಸಲು, ಮಹಾನಾಭನ ತಲೆಯನ್ನು ಅವು ಹಾರಿಸಿಕೊಂಡು ಹೋದುವು. ಕೂಡಲೇ ದೇವತೆಗಳ ಸೇನೆಯಲ್ಲಿ ವಾದ್ಯಗಳು ಮೊಳಗಿದುವು. ಜಯಘೋಷವು ವಿಜೃಂಭಿಸಿತು. ರಾಕ್ಷಸನ ಸೇನೆಯಲ್ಲಿ ಹಾಹಾಕಾರವು ಹುಟ್ಟಿತು. ಉಳಿದ ಸೇನೆಯೆಲ್ಲವೂ ಕುಮಾರನ ಮೇಲೆ ಕವಿಯಿತು. ಸೊಳ್ಳೆಗಳ ಬಳಗವನ್ನು ಹೊಸಗುವಂತೆ ನಿಮಿಷಮಾತ್ರದಲ್ಲಿ ಕುಮಾರಸ್ವಾಮಿಯು ಅವರಿಲ್ಲ ಭೂಮಿಗುರುಳಿಸುತ್ತ ಬಂದನು ಒಳಿಕ ಗಜಶಿರ, ಸ್ವರ್ಭಾನು, ಶಬಲ, ವಾನುನ ಮೊದಲಾದ ಮಹಾಮಹಾ ದೈತ್ಯರೆಲ್ಲ ಆರ್ಭಟಿಸಿ ಎದ್ದು, ತಮ್ಮ ತಮ್ಮ ಸೇನೆಯೊಡನೆ ಕೂಡಿ ಓಹೋ! ನಿಲ್ಲಿಸು ನಿಲ್ಲಿಸು, ಎಂದು ಮೂದಲಿಸುತ್ತ ಕುಮಾರನ ಒಳಿಗೆ ಬಂದು, ಸುತ್ತಲೂ ಒಳಸಿಕೊಂಡರು. ಎಂಟು ದಿಕ್ಕಿನಿಂದಲೂ ಬಾಣದ ಒಟ್ಟಿಲನ್ನು ಸುರಿಸುತ್ತ ಬಂದರು. ಕಣ್ಣಿಗೆ ಕಾಣಿಸುವ ದೂರದವರೆಗೂ ರಾಕ್ಷಸರೇ ಕಾಣುತ್ತಿದ್ದರು. ಅವರಲ್ಲಿದ್ದ ಪ್ರಮುಖರಾಕ್ಷಸರೇ ಮೂವತ್ತು ಪದ್ಮಗಳಾಗಿರುವಾಗ ಅವರ ಚತುರಂಗಸೈನ್ಯದ ಲೆಕ್ಕವನ್ನು ಇನ್ನು ಮಾಡುವವರಾರು? ಇಂತಹ ಮಹಾಸೇನೆಯೆಲ್ಲವೂ ಬಂದೇಬಾರಿಗೆ ಆರ್ಭಟಿಸುತ್ತ, ನಾನಾಆಯುಧಗಳನ್ನು ಪ್ರಯೋಗಿಸುತ್ತ ಬಂದುವು. ಆದರೇನು? ಕೋಟ್ಯನುಕೋಟಿ ಇರುವೆಗಳು ಬಂದು ಕೆಂಡವನ್ನು ಮುತ್ತಿ ಕೆಡಿಸಬಲ್ಲುವೆ? ಈ ಸೇನಾಜಲಧಿಯನ್ನು ಕಂಡು ಕುಮಾರನ ಎದೆಗೆಚ್ಚು ಸ್ವಲ್ಪವೂ ಕುಗ್ಗಲಿಲ್ಲ. ನೋಡಿ ನೋಡಿದಂತೆ ಅವನ ಶೌರ್ಯವೂ ಧೈರ್ಯವೂ ಸಾಹವೂ ಹೆಚ್ಚುಹೆಚ್ಚುತ್ತ ಬಂದುವು. ಮರಳಿ ಬಾಣಗಳನ್ನು ಸುರಿಸುವುದಕ್ಕೆ ಆರಂಭಿಸಿ

ದನು. ಬಿರುಗಾಳಿಯಿಂದ ತೂರಿಹೋಗುವ ಹೊಟ್ಟಿನಂತೆ ಒಂದೊಂದು ಬಾಣಿಗೆ ಲಕ್ಷೋಪಲಕ್ಷ ಸೇನೆಯು ಕೊಚ್ಚಿ ಹೋಗುತ್ತಿದ್ದಿತು. ರಾಕ್ಷಸರು ಬಿಟ್ಟ ಬಾಣಗಳನ್ನು ಕುಮಾರನು ಕೊಚ್ಚಿ ಕೊಚ್ಚಿ ಕೆಡಹಲಾಗಿ, ಅವುಗಳು ಮಧ್ಯದಲ್ಲಿ ಬೆಟ್ಟಬೆಟ್ಟಗಳಂತೆ ಬೆಳೆದು ಅಡ್ಡಗಟ್ಟಿಯಾಗುತ್ತಿದ್ದುವು. ಕಡೆಕಡೆಗೆ ಕಂದಸ್ವಾಮಿಯ ಬಾಣಗಳು ರಾಕ್ಷಸರನ್ನೆಲ್ಲ ಆವರಿಸಿ ಪಂಜರದಲ್ಲಿ ಸಿಕ್ಕಿಸಿಕೊಂಡಂತೆ ಮಾಡಿದುವು. ರಾಕ್ಷಸರ ರಥಗಳು ಆನೆಗಳು ಕುದುರೆಗಳು ಕಾಲಾಳ್ಗಳು ಛತ್ರಗಳು ಚಾಮರಗಳು ಧ್ವಜಗಳು ಪತಾಕೆಗಳು ವಾದ್ಯಗಳು ಕಿರೀಟಗಳು ಬಾಹುಪ್ರೂರಗಳು ಬತ್ತಳಿಕೆಗಳು ಕತ್ತಿಗಳು ಗದೆಗಳು ಭಲ್ಲೆಯಗಳು ಕಡಿತುಂಡಾಗಿ ರಣಾಂಗದಲ್ಲೆಲ್ಲ ಗುಡ್ಡೆಗುಡ್ಡೆಯಾಗಿ ಬಿದ್ದುವು. ರಕ್ತವು ಮಡುಗಟ್ಟಿ ಹರಿಯಹತ್ತಿತು. ಅದರೊಳಗೆ ತಲೆಬುರುಡೆಗಳು, ದೇಹದ ಖಂಡಗಳು, ತೋಳ್ಕೊಡೆಗಳು, ತೇಲಿ ತೇಲಿ ಹೋಗುತ್ತಿದ್ದುವು. ಭೂತ ಬೇತಾಳ ಪೈಶಾಚಾದಿಗಳು ಮಾಂಸವನ್ನು ತಿಂದು ರಕ್ತವನ್ನು ಕುಡಿದು ಕುಣಿದಾಡುತ್ತಿದ್ದುವು. ರಕ್ಕಸರು ಭೀಕರವಾಗಿ ರೋದಿಸುತ್ತ ದಿಕ್ಕುದಿಕ್ಕಿಗೆ ಓಡಿದರು. ಪ್ರಮುಖದೈತ್ಯರಲ್ಲಿ ಶಂಖಕರ್ಣನ ತಲೆಯೇ ಹಾರಿಯೋಯಿತು. ಶಬಲನು ಎರಡು ತುಂಡಾದನು. ಶರಭನು ಮುಂದೆ ಒರುವ ತಾರಕನ ವಾಸಕ್ಕೆ ಯಮಲೋಕದಲ್ಲಿ ಅನುಕೂಲವಾಗಿ ಅರಮನೆಯನ್ನು ಕಟ್ಟಿಸುವುದಕ್ಕೆ ಹೋದವನಂತೆ ದೇಹವಳಿದುಹೋದನು. ಹೀಗೆಯೇ ಎಲ್ಲರಿಗೂ ಕುಮಾರನು ಭಂಗವನ್ನುಂಟುಮಾಡಿದನು. ತಾರಕನ ಒಡಹುಟ್ಟಿದ ರಾಕ್ಷಸರೆಲ್ಲ ಸತ್ತರು; ಸೇನಾನಾಯಕರೆಲ್ಲ ಮಡಿದರು; ಚತುರಂಗಸೇನೆಯೂ ಕಡಿವಡೆದಿತು; ಆಪ್ತ ಬಾಂಧವರೆಲ್ಲ ಅಳಿದರು; ದೇವಸೇನಾಪತಿಗೆ ಇದಿರಾಗಿ ನಿಲ್ಲುವವರು ತಾರಕನ ಕಡೆಯಲ್ಲಿ ಒಬ್ಬರೂ ಇಲ್ಲವಾದರು. ದೇವತೆಗಳ ಕೈಮೇಲಾಯಿತು. ಮಹಾಜಯವಾದ್ಯವನ್ನು ಮಾಡಿಕೊಂಡು ದೇವತೆಗಳು ಅಟ್ಟಿಕೊಂಡು ಬರುತ್ತಿರುವುದನ್ನು ಕಾರಕಾಸುರನು ಕಂಡನು. ಕಿಡಿಕಿಡಿಯಾಗಿ ಘುಡುಘುಡಿಸಿದನು. ಕಾಲರುದ್ರನ ಹಣೆಗಣ್ಣಿನ ಬೆಂಕಿಯೇ ಆ ದೈತ್ಯನ ಕಣ್ಣಿನಲ್ಲಿ ಬಂದು ಸೇರಿದಂತೆ ಅವು ಕೆಂಪಾಗಿ ಉರಿಯುತ್ತಿದ್ದುವು. ಜಗತ್ತೆಲ್ಲ ತಲ್ಲಣಿಸುವಂತೆ ಮಹಾ ಭರ್ಘಟವನ್ನು ಮಾಡಿ, ತನ್ನ ಮರೆಹೊಕ್ಕಿರುವ ಸೇನೆಗೆ ಅಭಯವನ್ನು ಕೊ

ಟ್ಟು, ರಥವನ್ನು ಮುಂದೆ ಸರಿಸಿದನು. ಆಗ ಅವನ ಭೀಕರಾಕೃತಿಯನ್ನು ನೋಡಿದರೆ— ಏಟನ್ನು ತಿಂದ ಕಾಳಸರ್ಪವೋ, ನೊಂದಿರುವ ಹುಲಿಯೋ, ಕೋಪವೇರಿದ ಕಾಡಹಂದಿಯೋ, ಹಸಿದು ಬಂದ ಹೆಮ್ಮಾರಿಯೋ, ಜಗನ್ನಾಶಕ್ಕಾಗಿ ಬರುವ ಮೃತ್ಯುವೋ, ಸಿಟ್ಟುಗೊಂಡ ಯಮನೋ, ಕೆರಳಿದ ವೀರಭದ್ರನೋ, ಕಾಲಭೈರವನೋ, ಪ್ರಳಯಕಾಲರುದ್ರನೋ, ಎಂಬಂತೆ ತೋರುತ್ತಿದ್ದನು. ಈ ಮಹಾದೈತ್ಯನನ್ನು ನೋಡಿದ ಕೂಡಲೆ ದೇವತೆಗಳ ಕಹಳೆಗಳ ಸದ್ದೇ ಅಡಗಿತು; ನಗಾರಿಯವನ ಕೈ ಹಾಗೆಯೇ ನಿಂತುಹೋಯಿತು; ಮೂವರ ಕಣ್ಣು ಬಿಟ್ಟಬಿಟ್ಟಂತೆಯೇ ಇದ್ದಿತು; ಕುದುರೆಗಳು ನೊಗವನ್ನು ಮುರಿದು ರಥವನುರುಳಿಸಿ, ವಾಘೆಯನ್ನು ಕಿತ್ತು ಓಡಿಹೋದವು; ಆನೆಗಳು ಕಿರ್ರೆಂದು ಕಿರುಚಿ ಬಾಲವನ್ನು ಮಡಿಸಿ ಸೊಂಡಿಲನ್ನು ಸುತ್ತಿ ಹಿಂದಿರುಗಿದುವು; ಇಂದ್ರನು ಓರೆಯಾದನು; ಅಗ್ನಿಯು ಮರೆಯಾದನು; ಯಮನು ಕಾಲಿಗೆ ಬುದ್ಧಿ ಹೇಳಿದನು; ನಿಋತಿಯು ಪಲಾಯನ ಪಾರಾಯಣವನ್ನು ಮಾಡಿದನು; ವರುಣನು ಎದೆಯೊಣಗಿ ನೀರನ್ನು ಹುಡುಕುತ್ತಿದ್ದನು; ಗಾಳಿಯು ಎಲ್ಲೋ ಅವಿತುಕೊಂಡನು ; ಕುಬೇರನು ವೇಷಾಂತರವನ್ನು ಧರಿಸಿದನು ; ಈಶಾನನು ಇವರೆಲ್ಲರಿಗೂ ಗುರುವಾಗಿ ಅದೃಶ್ಯನಾದನು ; ಹರಿಬ್ರಹ್ಮರು ಎಲ್ಲಿಹೋದರೋ ಕಾಣಲೇಇಲ್ಲ. ತಾರಕನನ್ನು ಕಂಡಮಾತ್ರದಿಂದಲೇ ತನ್ನ ಸೇನಾನಿಕರದ ಅವಸ್ಥೆಯೆಲ್ಲ ಹೀಗಾದುದನ್ನು ಕುಮಾರಮೂರ್ತಿಯು ಕಂಡು, ಖತಿಗೊಂಡು, ತನ್ನ ವಾಹನವನ್ನು ತಟ್ಟಿ ಸಮಾಧಾನಗೊಳಿಸಿ, ಬೆಂಬಲಕ್ಕೆ ಅಭಯವನ್ನಿತ್ತು, ಕಣ್ಣುಗಳಲ್ಲಿ ಕಿಡಿಯನ್ನು ಸುರಿಸುತ್ತ, ಕೈಗೆ ಬಿಲ್ಲನ್ನು ತೆಗೆದುಕೊಂಡು ವಾಹನವನ್ನು ತಾರಕನ ಮುಂಗಡೆಗೆ ನಡಸಿದನು. ಸಿಂಜಿನಿಯನ್ನು ಮಿಡಿದಮಾತ್ರದಿಂದ ಅದರ ದನಿಯು ಕೋಟಿಸಿಡಿಲಿನ ಆರ್ಭಟದಂತೆ ಕೇಳಿದವರಿಗೆ ಮೂರ್ಛೆಯನ್ನುಂಟುಮಾಡಿತು. ಭೂಮಿಯು ಬಿರಿದಿತು. ಸಮುದ್ರವು ತುಳುಕಾಡಿತು. ಇದಿಗಾದ ಶಿವಪುತ್ರನನ್ನು ತಾರಕನು ಕಂಡನು. ಬೇಸಗೆಯ ಮಧ್ಯಾಹ್ನದ ಸೂರ್ಯನಂತೆ ತೇಜೋಮೂರ್ತಿಯಾಗಿ ರಂಜಿಸುತ್ತಿರುವ ಈ ದೇವನನ್ನು ನೋಡಿ ತಾರಕನ ಕಣ್ಣು ಮುಚ್ಚಿಹೋದುವು. ಎದೆಯು ಝಲ್ಲೆಂದಿತು. ಈ ಶೂರನು ತನ್ನ

ಪ್ರಾಣವನ್ನು ತೆಗೆದುಕೊಳ್ಳದೆ ಬಿಡಲಾರನೆಂದು ಯೋಚಿಸಿದನು. ಆದರೂ ಧೈರ್ಯವನ್ನು ತಂದುಕೊಂಡು, ವಿಜಯಧನುಸ್ಸನ್ನು ಹಿಡಿದು, ಸಿಂಜಿನಿಯನ್ನು ಮಿಡಿದು, ಯುದ್ಧಕ್ಕೆ ಸನ್ನದ್ಧನಾಗಿ ನಿಂತನು. ಎಂದು ಚೆನ್ನಬಸವೇಶನು ನುಡಿದನೆಂಬಲ್ಲಿಗೆ ಹನ್ನೆರಡನೆ ಅಧ್ಯಾಯವು ಸಂಪೂರ್ಣವು.

೧೩ನೆ ಅಧ್ಯಾಯವು.

ತಾರಕಸಹ್ಯಾರವು.

ಎಲೈ ಸಿದ್ಧರಾಮೇಶನೆ ಕೇಳು,—ಬಳಿಕ ತಾರಕನು ಷಣ್ಮುಖನಿದಿರಿಗೆ ಬಂದು, ವ್ಯಂಗ್ಯವಚನದಿಂದ— ಎಲೆ ಹಸುಳೆಯೆ, ನಿನ್ನನ್ನು ನೋಡಿದರೆ ಸಾಧಾರಣವಾದ ಶಿಶುವಂತಿಲ್ಲ; ನಿನ್ನನ್ನು ಹೆತ್ತ ತಾಯಾರೋ ಕಾಣೆ; ಮಗ್ಗುಲಲ್ಲಿ ಮಲಗಿ ತಾಯ ಮೊಲೆಹಾಲನ್ನು ಕುಡಿಯುವ ಈ ವಯಸ್ಸಿನಲ್ಲಿ ನೀನು ಆ ವಿಷ್ಣು ಮೊದಲಾದವರ ಮಾಯೆಯ ಮಾತಿನ ಬಲೆಗೆ ಸಿಕ್ಕಬಹುದೆ? ಈಗಳೂ ನಾನು ಬಿಟ್ಟುಕೊಡುತ್ತೇನೆ, ಹೋಗಿ ಬದುಕು; ಎಂದು ನುಡಿಯಲು, ಕುಮಾರಸ್ವಾಮಿಯು ನಕ್ಕನು. ಮತ್ತೂ— "ಎಲೆ ರಾಕ್ಷಸನೇ! ನಾನು ಶಿಶುನಾದರೇನಾಯ್ತು? ಕತ್ತಲೆಯ ಒಟ್ಟಿಲಿಗೆ ಬಾಲಸೂರ್ಯನು ಹೆದರಿಕೊಳ್ಳುವನೆ? ಕಾಡಾನೆಯ ಭೀಕರತ್ವವನ್ನು ಕಂಡು ಸಿಹ್ಮದಮರಿ ಅಂಜಿ ಓಡುವುದೆ? ಬೆಟ್ಟಗಳಿಗೆ ವಜ್ರವು ಹೆದರುವುದೆ? ನೀನು ವಿಚಾರ ಮಾಡದೆ ಹುಚ್ಚನಂತೆ ಗಳಹಬಹುದೆ? ಮೂರುಲೋಕವನ್ನೂ ನೀನೇ ತಿಂದು ತೇಗುತ್ತಿರುವಾಗ, ನನ್ನನ್ನು ಉಳುಹಿ ಪಾಲಿಸುವ ಗುಣವು ನಿನಗೇಕೆ?" ಎಂದು ಮೂದಲಿಸುತ್ತ, ಬಾಣಗಳನ್ನು ಜೋಡಿಸಿ ಜೋಡಿಸಿ ರಕ್ಕಸನಮೇಲೆ ಪ್ರಯೋಗಿಸಿದನು. ಆ ಬಾಣದ ಮಳೆಯಲ್ಲಿ ಮುಳುಗಿಹೋದ ರಕ್ಕಸನು ಕೆರಳಿ,— ಆಹಾ! ನಾನು ಯುದ್ಧದಲ್ಲಿ ಹರ್ಯಜ್ಞೇಂದ್ರಾದಿ ದೇವಾಧಿದೇವತೆಗಳಿಗೆಲ್ಲ ಭಂಗಗೊಳಿಸಿ, ಮನೋವ್ಯಥೆಯನ್ನುಂಟುಮಾಡಿರುವೆನು; ಸ್ವರ್ಗಮರ್ತ್ಯಪಾತಾಳಗಳಲ್ಲಿ ನನಗೆ ಇದಿರಾಗು

ವವರು ಯಾರೂಇಲ್ಲ; ಇಂಥ ನನ್ನ ಪರಾಕ್ರಮಾತಿಶಯವನ್ನು ನೀನು ಕೇಳಿ ತಿಳಿಯೆಯಾ? ಜಗತ್ತಿನಲ್ಲಿ ಜಯಲಕ್ಷ್ಮೀಕಾಂತನು ನಾನೊಬ್ಬನೇ ಸರಿಯೆಂಬುದು ನಿನಗೆ ಗೊತ್ತಿಲ್ಲ; ಪಾಪ! ನೀನು ಹಸುಳೆ; ಎಂದು ಗರ್ವೋಕ್ತಿಯನ್ನಾಡಿ, ತೀಕ್ಷ್ಣಬಾಣಗಳನ್ನು ಪ್ರಯೋಗಿಸಿ, ಸಿಹ್ಮನಾದವನ್ನು ಮಾಡಿದನು. ಕುಮಾರನಾದರೊ—ಥಟ್ಟನೆ ಪ್ರತಿಬಾಣದಿಂದ ಅವುಗಳನ್ನು ಖಂಡಿಸಿ,— ಎಲೊ ಖೂಳನೆ, ನೀನು ಹರಿಬ್ರಹ್ಮಾದಿಗಳನ್ನೆಲ್ಲ ಯುದ್ಧದಲ್ಲಿ ಗೆದ್ದು ಓಡಿಸಿರುವೆಯೆಂಬ ಸುದ್ದಿಯನ್ನು ನಾನು ಕೇಳಿ, ಅವರನ್ನು ಕಾಪಾಡಿ ನಿನ್ನನ್ನು ಕೊಲ್ಲುವುದಕ್ಕಾಗಿಯೇ ಇಲ್ಲಿಗೆ ಬಂದಿರುವೆನು; ನನ್ನ ಪರಾಕ್ರಮವನ್ನು ಈಗ ನೋಡು; ನೀನು ತಪಸ್ಸನ್ನು ಮಾಡಿ ಬ್ರಹ್ಮನಿಂದ ವರವನ್ನು ಪಡೆದುಕೊಂಡಿದ್ದುದು ಇಂದಿಗೆ ಸರಿಯಾಯ್ತು; ವರವನ್ನು ಕೊಟ್ಟವನಮೇಲೆಯೇ ನೀನು ತಿರುಗಿಬಿದ್ದೆ; ಅದಕ್ಕೆ ತಕ್ಕ ಫಲವನ್ನು ಈಗ ಉಣ್ಣಿಸುತ್ತೇನೆ; ನಾನು ಪರಶಿವನ ಕುಮಾರನೆಂಬುದನ್ನು ನೀನು ತಿಳಿದಿಲ್ಲವೊ? ಎಂದು ಮೂದಲಿಸಿ, ಮತ್ತೆ ಬಾಣಗಳನ್ನು ದೈತ್ಯನ ಮೇಲೆ ಸುರಿಸಿದನು. ತಾರಕನು ಅವನ್ನು ಖಂಡಿಸಿ,— "ಎಲೊ ಕಂದನೆ! ನೀನು ಹಲವರಿಗೆ ಹುಟ್ಟಿ ಶಿವಕುಮಾರನೆಂದು ಹೇಳಿಕೊಳ್ಳುವುದನ್ನು ನೋಡಿದರೆ, ಮಗ್ಗುಲಲ್ಲಿರುವವರು ಕೇಳಿ ನಗುವುದಿಲ್ಲವೆ? ಬಿಡು; ಬುಡವನ್ನೆಲ್ಲ ಬಲ್ಲವರಿಗೆ ಮೇಲಣ ಎಲೆಯನ್ನು ತೋರಿಸಿ ಮುಚ್ಚುವುದಕ್ಕಾಗದೀತೆ? ಸಾಕುಸಾಕು, ನಿನ್ನ ಜಂಭದ ಮಾತನ್ನು ಬಿಡು; ನಿನ್ನ ಸಾಲುದಲೆಗಳನ್ನೆಲ್ಲ ಬಂದೇ ಏಟಿಗೆ ಕತ್ತರಿಸುತ್ತೇನೆ, ನೋಡು" ಎಂದು ಜರೆದು ಬಾಣಗಳನ್ನು ಬಿಟ್ಟನು. ಅವನ್ನೆಲ್ಲ ಕುಮಾರನು ಖಂಡಿಸಿ, ತಾನು ಕೆಲವು ಬಾಣಗಳನ್ನು ಬಿಟ್ಟನು. ಅವನ್ನು ಅವನು ಕತ್ತರಿಸಿದನು. ಹೀಗೆ ಈ ವರ್ಯರೂ ಯುದ್ಧಕಲಾಚಾತುರ್ಯವನ್ನು ತೋರಿಸಿ ಎರಡೆರಡು ಕೈಗಳಿಂದಲೂ ಅತಿಚಮತ್ಕಾರದಿಂದ ಅವಿಚ್ಛಿನ್ನವಾಗಿ ಬಾಣಗಳನ್ನು ಒಬ್ಬರಮೇಲೊಬ್ಬರು ಕರೆಯುತ್ತ ಬಂದರು. ಖಣಿಖಣಿಲು ಛಟಿಛಟಿಲು ಭುಗಿಭುಗಿಲು ಎಂಬ ಶಬ್ದವು ಅಂತರಿಕ್ಷಮಂಡಲವನ್ನೆಲ್ಲ ವ್ಯಾಪಿಸಿಕೊಂಡಿತು. ಬಾಣಬಾಣಗಳ ತಾಟುವಿಕೆಯಿಂದ ಹುಟ್ಟಿದ ಕಿಡಿಗಳು ಲೋಕವನ್ನೆಲ್ಲ ಸುಡುತ್ತ ಬಂದುವು. ಈರ್ವರೂ ಬಂದೇಸಮನಾಗಿ ಸೆಣಸುತ್ತ. ಹುಬ್ಬುಗಂಟಿಕ್ಕಿ,

ಕಣ್ಣನ್ನು ಕೆಂಪಗೆ ಮಾಡಿ, ಮೂಗುಬಾಯಿಗಳಿಂದ ಕೋಪಾಗ್ನಿಯ ಬಿಸಿಯಾದ ಹೊಗೆಯನ್ನು ಬಿಡುತ್ತ, ಆಗ್ಗಾಗ್ಗೆ ಸಿಹ್ಮನಾದವನ್ನು ಮಾಡುತ್ತ ಹೊಡೆದಾಡುತ್ತಿದ್ದರು. ಆಗ ಕುಮಾರನು ಅತ್ಯಂತ ಕೋಪೋದ್ರಿಕ್ತನಾಗಿ ಎರಡು ಮಂತ್ರಾಸ್ತ್ರಗಳನ್ನು ಜೋಡಿಸಿ, ಒಲವಾಗಿ ಸೆಳೆದು, ದೈತ್ಯನ ಹಣೆಗೆ ಗುರಿಯಿಟ್ಟು ಹೊಡೆದನು. ಅವು ನಟ್ಟು ಗಾಯಮಾಡಿ ಬಿಸಿರಕ್ತವನ್ನು ಸುರಿಸಿದುವು. ಅವನ್ನು ರಕ್ಕಸನು ಕಿತ್ತು, ರಕ್ತವನ್ನೊರಸಿ, ತಾಂಬೂಲವನ್ನು ಸವಿದು ಉಲ್ಲಾಸಗೊಂಡು, ತನ್ನ ಬತ್ತಳಿಕೆಯಲ್ಲಿದ್ದ ಬಾಣಗಳಲ್ಲೆಲ್ಲ ತೀಕ್ಷ್ಣವಾದುವುಗಳನ್ನಾದು ಐದನ್ನು ಬಂದೇಬಾರಿಗೆ ಜೋಡಿಸಿ ಪ್ರಯೋಗಿಸಿ ಗರ್ಜಿಸಿದನು. ಅಗ್ನಿಕಣವನ್ನು ಸುರಿಸುತ್ತ ಬಂದ ಆ ಬಾಣಗಳನ್ನು ಕ್ಷಣಾರ್ಧದಲ್ಲಿ ಕುಮಾರನು ಖಂಡಿಸಿ, ಬೇರೆ ನಿಶಿತಾಸ್ತ್ರಗಳನ್ನು ದನುಜನಮೇಲೆ ಬಿಟ್ಟನು. ಅವು ತಾರಕನ ಎದೆಯನ್ನು ಹೊಕ್ಕು ಬೆನ್ನನ್ನು ಭೇದಿಸಿ ಹೊರಕ್ಕೆ ಹೊರಟು ಪಾತಾಳವನ್ನು ನುಗ್ಗಿ ಆದಿಶೇಷನನ್ನು ಚುಚ್ಚಿದುವು. ಆ ಯೇಟಿನಿಂದ ತಾರಕನು ಮೂರ್ಛಾಗತನಾದನು. ಕ್ಷಣಕಾಲದಲ್ಲಿ ಚೇತರಿಸಿಕೊಂಡೆದ್ದು ನಿಂತು,— "ಎಲೊ ಮಗುವೇ! ಹಸುಗೂಸಿನಂತಹ ಅತುಳಪರಾಕ್ರಮವನ್ನು ತೋರಿಸುವುದೇತಕ್ಕೆಂದು ನಾನು ಸಾಧಾರಣವಾಗಿ ಕಾದುತ್ತಿದ್ದರೆ ನೀನು ಗರ್ವದಿಂದ ಬೆರೆತುಕೊಂಡೆ! ಇದೋ ನನ್ನ ಶೌರ್ಯವನ್ನೀಗ ತೋರಿಸುತ್ತೇನೆ; ನಿನ್ನ ತಲೆಗಳನ್ನು ಳುಹಿಕೊ" ಎಂದು ತೀಕ್ಷ್ಣವಾದ ಬಾಣಗಳನ್ನು ತಡೆಬಿಡುವಿಲ್ಲದಂತೆ ಕುಮಾರನಮೇಲೆ ಸುರಿಸಿದನು. ಗುಹನಾದರೊ ಅವುಗಳನ್ನೆಲ್ಲ ಲೀಲಾಮಾತ್ರದಲ್ಲಿ ಛೇದಿಸಿ, ಬೇರೆ ಬಾಣಗಳನ್ನು ಬಿಟ್ಟು ರಾಕ್ಷಸನ ಸಾರಥಿ ರಥ ತುರಗಗಳನ್ನೆಲ್ಲ ಕತ್ತರಿಸಿದನು. ತಾರಕನು ಹೊಸರಥವನ್ನೇರಿ ಬಂದು ಮತ್ತೆ ಬಾಣಗಳನ್ನು ಬಿಡಲು, ಕುಮಾರನು ಅವನ ಧನುರ್ಬಾಣಗಳನ್ನೂ ಬತ್ತಳಿಕೆಯನ್ನೂ ಕಡಿತುಂಡುಗಳನ್ನು ಮಾಡಿದನು. ಹೀಗೆ ಒಬ್ಬರೊಬ್ಬರ ಬಾಣಗಳನ್ನು ಕಡಿದು ಕೋಟ್ಯಂತರಬಾಣಗಳ ತುಂಡುಗಳ ರಾಶಿಯನ್ನು ಯುದ್ಧಾಂಗಣದಲ್ಲಿ ಒಟ್ಟಿದರು. ರಕ್ಕಸನು ಬಲುಬೇಸತ್ತು, ಅಗ್ನ್ಯಸ್ತ್ರವನ್ನು ತೆಗೆದು ಕುಮಾರನ ಮೇಲೆ ಪ್ರಯೋಗಿಸಿದನು. ಅದು ದೇವಸೇನೆಯಮೇಲೆಲ್ಲ ನಾಲಿಗೆಯನ್ನು ಚಾಚಿ, ಧಗಧಗನೆ ಉಜ್ಜ್ವಲಿಸಿ,

ಸುಡುತ್ತ, ಕರಿ ತುರಗ ರಥ ಛತ್ರ ಚಾಮರಗಳನ್ನೆಲ್ಲ ಕರುಕುಗೊಳಿಸಿ, ಭಂಗವನ್ನುಂಟುಮಾಡುತ್ತ ಬಂದಿತು. ಷಣ್ಮುಖನು ವರುಣಾಸ್ತ್ರವನ್ನು ಬಿಟ್ಟು ಆ ಬೆಂಕಿಯನ್ನಾರಿಸಿ, ದೈತ್ಯವಾಹಿನಿಯನ್ನೆಲ್ಲ ಜಲದಿಂದ ಕೊಚ್ಚಿ ಹೋಗುವಂತೆ ಮಾಡಿದನು. ತಾರಕನು ಕೆರಳಿ ಬಡಬಾಸ್ತ್ರವನ್ನು ಬಿಟ್ಟು ಆ ನೀರನ್ನು ಇಂಗಿಸಿ, ಮತ್ತೆ ಪರ್ವತಾಸ್ತ್ರವನ್ನು ಪ್ರಯೋಗಿಸಿದನು. ಅದನ್ನು ಗುಹನು ವಜ್ರಾಸ್ತ್ರದಿಂದ ಖಂಡಿಸಲು, ತಾರಕನು ಅಂಧಕಾರಾಸ್ತ್ರವನ್ನು ಬಿಟ್ಟು ಕತ್ತಲೆಗವಿಸಿದನು. ಷಡ್ವದನನು ಸೂರ್ಯಾಸ್ತ್ರದಿಂದ ಕತ್ತಲೆಯನ್ನು ತೊಲಗಿಸಲು, ದೈತ್ಯನು ಸರ್ಪಾಸ್ತ್ರವನ್ನು ಬಿಟ್ಟನು. ಕುಮಾರನು ಗರುಡಾಸ್ತ್ರದಿಂದದನ್ನು ಖಂಡಿಸಿದನು. ಹೀಗೆ ಇಬ್ಬರೂ ದಿವ್ಯಾಸ್ತ್ರಗಳಿಂದ ಎಚ್ಚಾಡಿ ಒಬ್ಬರೂ ಸೋಲುಗೆಲವುಗಳನ್ನು ಪಡೆಯದೆ ಸೆಣಸುತ್ತಿರಲು, ತಾರಕನು ಬ್ರಹ್ಮಾಸ್ತ್ರವನ್ನು ತೊಟ್ಟುಬಿಟ್ಟನು ಮೃತ್ಯುವಿನ ನಾಲಿಗೆಯಂತೆ ಲೋಕಭಯಂಕರವಾಗಿ ಬರುತ್ತಿರುವ ಆ ಬಾಣವನ್ನು ನೋಡಿ ಕಾರ್ತಿಕೇಯನು ರುದ್ರಾಸ್ತ್ರವನ್ನು ಬಿಟ್ಟು ಆ ಬ್ರಹ್ಮಾಸ್ತ್ರವನ್ನು ಎರಡು ತುಂಡಾಗಿ ಕತ್ತರಿಸಿ ಕೆಡಹಿದನು. ಅದನ್ನು ಕಂಡು ತಾರಕನ ಕೋಪವು ಮಿತಿಮೀರಿತು. ಘುಡುಘುಡಿಸಿ, ದಿವ್ಯ ಶಕ್ತ್ಯಾಯುಧವನ್ನು ಕೈಗೆ ತೆಗೆದುಕೊಂಡು ಗರಗರನೆ ತಿರುಗಿಸುತ್ತಿರಲು, ಅದರ ಅಗ್ರಧಾರೆಯಿಂದ ಉದುರುತ್ತಿರುವ ಕಿಡಿಗಳಿಂದ ಲೋಕವೆಲ್ಲ ತಲ್ಲಣಿಸುತ್ತಿದ್ದುವು. "ಎಲೊ ಬಾಲಕನೆ! ನಸ್ಸೊಡನೆ ಹಗೆತನವನ್ನು ಕಟ್ಟಿಕೊಂಡ ಫಲವನ್ನು ಈಗ ಉಣ್ಣು" ಎಂದು ತಾರಕನು ನುಡಿದು, ರಭಸದಿಂದ ಕುಮಾರನಮೇಲೆ ಪ್ರಯೋಗಿಸಿದನು. ಅದನ್ನು ಸೇನಾನಿಯು ಲೀಲಾಮಾತ್ರದಿಂದ ಕೈಯಲ್ಲಿ ಹಿಡಿದು, ಅದನ್ನೇ ಗರಗರನೆ ತಿರುಗಿಸಿ ತಾರಕನಮೇಲೆ ಬಿಟ್ಟನು. ಅದು ರಕ್ಕಸನ ಎದೆಯನ್ನು ನಟ್ಟು ಸೀಳಿತು. ತಾರಕನ ದೇಹವು ಗಡಗಡನೆ ನಡುಗಿಹೋಯಿತು. ರಕ್ತವು ಆಕಾಶಮಂಡಲಕ್ಕೆ ಚಿಲ್ಲನೆ ಚಿಮ್ಮಿತು. ತುಟಿಗಳು ಒಣಗಿದುವು ತಲೆ ತಿರುಗಿ ಧೊಪ್ಪನೆ ಭೂಮಿಯಮೇಲೆ ಬಿದ್ದನು. ರಕ್ತದಿಂದ ಅಭಿಷಿಕ್ತವಾಗಿ ಬಿದ್ದಿದ್ದ ರಕ್ಕಸನ ದೇಹವು ಕೆಂಗಲ್ಲಿನ ಬೆಟ್ಟವು ಬಿದ್ದಿರುವಂತೆ ಕಾಣುತ್ತಿದ್ದಿತು. ತಮ್ಮೊಡೆಯನಿಗುಂಟಾದ ಈ ಅವಸ್ಥೆಯನ್ನು ಕಂಡು ದೈತ್ಯವಾಹಿನಿಯು ಹಾಹಾ

ಕಾರವಾಡುತ್ತ ಕುಮಾರನಮೇಲೆ ಮುತ್ತಿತು. ಕುಮಾರಸ್ವಾಮಿಯು ನಾಲ್ಕುದಿಕ್ಕಿಗೂ ಬಾಣಗಳನ್ನು ಬಿಡುತ್ತ ನೊರಜುಗಳನ್ನೊರಸಿದಂತೆ ಸಾಯಿಸುತ್ತ ಬಂದನು. ಅಷ್ಟರಲ್ಲಿ ತಾರಕನು ಮತ್ತೆ ಮೂರ್ಛಿತಿಳಿದೆದ್ದು, ಎಚೆಯಲ್ಲಿ ನಾಟಿದ್ದ ಶಕ್ತ್ಯಾಯುಧವನ್ನು ಕಿತ್ತು, ಮನಸ್ಸಿನಲ್ಲಿ ಖೇದಪಟ್ಟು, "ಇದುವರೆಗೂ ನಾನು ಈತನನ್ನು ಹಸುಳೆಯೆಂದು ತಿಳಿದು ಔದಾಸೀನ್ಯದಿಂದ ಯುದ್ಧಮಾಡಿದಂತೆಯೇ ಮುಂದೆಯೂ ಮಾಡಿದರೆ, ಇವನು ನನ್ನ ತಲೆಯನ್ನು ಕತ್ತರಿಸಿಬಿಡುವುದೇ ನಿಜ; ಅದುಕಾರಣ ಈ ದಿನವನ್ನು ಬಿಟ್ಟು ಚೇತರಿಸಿಕೊಂಡು ನಾಳೆಯ ದಿನ ಬಂದು ಈ ದೇವಸೇನೆಯನ್ನೆಲ್ಲ ಒಟ್ಟಿಗೆ ಬಲಿತೆಗೆದುಕೊಳ್ಳಬೇಕು" ಎಂದು ಯೋಚಿಸಿ, ರಣಾಂಗಣದಿಂದೆದ್ದು ಮೆಲ್ಲಗೆ ತಲೆತಪ್ಪಿಸಿಕೊಂಡು ಹೋಗಿ ಕ್ರೌಂಚಪರ್ವತದ ಗುಹೆಯಲ್ಲಿ ಹೊಕ್ಕಿಕೊಂಡನು. ಮಹಾಸೇನನು ದೈತ್ಯಸೈನ್ಯವನ್ನೆಲ್ಲ ಒಂದುಕಡೆಯಿಂದ ಕತ್ತರಿಸಿಕೊಂಡುಬಂದರೂ ತಾರಕನು ಸಿಕ್ಕಲಿಲ್ಲ. ಹನಿಬ್ರಹ್ಮಾದಿಗಳೆಲ್ಲ ತಮಗಾದ ಜಯವನ್ನು ಕಂಡು ಪರಮಾನಂದಗೊಂಡು ತಾರಕಾರಿಯನ್ನು ಕೊಂಡಾಡಿದರು. ಎಲ್ಲರೂ ತಾರಕನನ್ನು ತಡಕುವುದಕ್ಕೆ ಉಜ್ಜುಗಿಸಿದರು. ರಣಾಂಗಣವೆಲ್ಲವೂ ರುಂಡಮುಂಡಗಳಿಂದಲೂ, ರಕ್ತಮಾಂಸಗಳಿಂದಲೂ, ಕರುಳಸರಗಳಿಂದಲೂ, ಕುಣಿವ ಬೇತಾಳಗಳಿಂದಲೂ, ನರಿವ ಮನುಳುಗಳಿಂದಲೂ, ತೂಗಾಡುವ ಪಿಶಾಚಗಳಿಂದಲೂ ಭೀಕರವಾಗಿದ್ದಿತು. ದೇವತೆಗಳು ಪೆಣಗಳ ಗುಡ್ಡೆಗಳನ್ನು ಒಗಿಬಗಿದು ನೋಡುತ್ತಲೂ, ಅಸುಗಳ ರುಂಡಗಳನ್ನು ಕೆದರಿ ತಡಕುತ್ತಲೂ, ರಥಗಳ ನುಗ್ಗುಗಳನ್ನು ಬೆವಕಿ ನೋಡುತ್ತಲೂ, ರಕ್ತದ ಗುಳಿಗಳಲ್ಲಿ ತುಳಿದಾಡಿ ಸೋಸುತ್ತಲೂ, ತಾರಕನನ್ನು ಕಾಣದೆ ಕ್ಲೇಶಪಡುತ್ತಿದ್ದರು. ಒಳಕ ರಣಾಂಗಣವನ್ನು ಬೆಟ್ಟುದಶದಿಕ್ಕುಗಳಲ್ಲೂಹುಡುಕುವುದಕ್ಕೆ ತೊಡಗಿದರು. ಕಾಡು ಮೇಡು ಗಿರಿ ವನನದಿಗಳಲ್ಲೆಲ್ಲ ಪರಿಶೋಧಿಸುತಿದ್ದರು. ಕ್ರೌಂಚಪರ್ವತದ ಗುಹೆಯೊಳಗೆ ದೈತ್ಯನು ಅವಿತಿರುವನೆಂಬ ಸುಳುವನ್ನು ಹರಿಯು ತಿಳಿದು ಓಡಿಬಂದು ಇಂದ್ರನೊಡನೆ ಹೇಳಲು, ಅವನು ಕುಮಾರಸ್ವಾಮಿಗೆ ಬಿನ್ನೈಸಿದನು. ಆತನು ತನ್ನ ಒತ್ತಳಿಕೆಯಲ್ಲಿದ್ದ ಶಾಂಭವಾಸ್ತ್ರವನ್ನು ತೆಗೆದುಕೊಂಡು ಸಿಂಜಿನಿಗೆಸೇರಿಸಿ ಕರ್ಣಾಂತವಾಗಿ ಸೆಳೆದನು. ಆ ಅಸ್ತ್ರದ

ಜ್ವಾಲೆಯು ಲೋಕತ್ರಯವನ್ನೂ ಬೇಗೆಗೊಳಿಸಿತು. ನಕ್ಷತ್ರಗಳು ಉದುರಿದುವು. ಭೂಮಿಯು ಬಿರಿದಿತು. ಸಮುದ್ರಗಳು ಕುದಿದುವು. ಮಹಾಪ್ರಳಯ ಸಮಯವೊದಗಿತೆಂದು ಜಗತ್ತೆಲ್ಲ ದಡಗುಟ್ಟಿತು. ಆಗ ಕುಮಾರಸ್ವಾಮಿಯು ಅಸ್ತ್ರವನ್ನಭಿಮಂತ್ರಿಸಿ, ಕ್ರೌಂಚಪರ್ವತದ ಗುಹೆಯಲ್ಲಿ ಅಡಗಿರುವ ತಾರಕನೇ ನಿನಗೆ ಗುರಿಯೆಂದು ಬೋಧಿಸಿ, ಮಹಾರಭಸದಿಂದ ಪ್ರಯೋಗಿಸಿದನು. ಅದು ಹೊರಟಶಬ್ದಕ್ಕೆ ಪ್ರಪಂಚವೆಲ್ಲ ಪ್ರತಿಧ್ವನಿಗೊಂಡಿತು. ಮುಖದಿಂದುಗಿದ ಕಿಡಿಗಳು ಭೂಮ್ಯಂತರಿಕ್ಷವನ್ನು ತುಂಬಿದುವು. ವಾಯುವೇಗವನ್ನು ಮೀರಿ ಬಂದ ಮಹಾಸ್ತ್ರವು ಕ್ರೌಂಚಪರ್ವತವನ್ನೇ ನಟ್ಟು ಎರಡು ಹೋಳ್ಮಾಡಿ ಉರುಳಿಸಿ, ಒಳಗಿದ್ದ ತಾರಕನ ದೇಹವನ್ನು ತುಣುತುಣುಕಾಗಿ ಕತ್ತರಿಸಿಬಿಟ್ಟಿತು. ಇತ್ತ ರಣಾಂಗಣದಲ್ಲಿ ಆಕಾಶದಿಂದ ಹೂಮಳೆಯು ಸುರಿದಿತು. ದೇವದುಂದುಭಿಯು ಮೊಳಗಿತು. ದೇವತೆಗಳು ಜಯಘೋಷವನ್ನು ಮಾಡಿದರು. ಗಣವರರು ಉಘೇಯೆಂದರು. ವಂದಿಗಳು ಕುಮಾರಸ್ವಾಮಿಯ ಬಿರುದಾವಳಿಗಳನ್ನುದ್ಘೋಷಿಸಿದರು. ಪರಬ್ರಹ್ಮರುಗಳೂ ಇಂದ್ರಾದಿದಿಕ್ಪಾಲಕರೂ, ಕಿನ್ನರಕಿಂಪುರುಷವಿದ್ಯಾಧರಾದಿಗಳೂ ತಾರಕಾರಿಯನ್ನು ಕೊಂಡಾಡಿ ನಮಸ್ಕರಿಸಿದರು. ಎಲೆ ಸಿದ್ಧರಾಮೇಶನೆ ಕೇಳು— ದುರ್ಜನರನ್ನು ಮೈಹಾಕಿಕೊಂಡರೆ ತನಗೂ ಕೇಡು ತಪ್ಪದು ಎಂಬ ನೀತಿಯು ಸುಳ್ಳಾಗದು. ಲೋಕಕಂಟಕನಾದ ತಾರಕಸನ್ನು ಮೈಹಾಕಿಕೊಂಡುದರಿಂದ ಕ್ರೌಂಚಪರ್ವತವೂ ಇಬ್ಭಾಗಗೊಳ್ಳಬೇಕಾಯಿತು. ಬಳಿಕ ದಿಕ್ಪಾಲಕರೆಲ್ಲರಿಗೂ ಮಹಾಸೇನಾನಿಯು ಅವರವರ ಪಟ್ಟಣಗಳನ್ನವರವರು ವಶಮಾಡಿಕೊಳ್ಳುವಂತೆ ಅಪ್ಪಣೆಮಾಡಿದನು. ಜಗತ್ತು ನಿಷ್ಕಂಟಕವಾಯಿತು. ಸರ್ವರೂ ಹಾಲು ಅನ್ನವನ್ನುಂಡು ಸಂತೋಷಿಸಿ ಕುಮಾರಸ್ವಾಮಿಯನ್ನು ಕೊಂಡಾಡಿದರು. ಅತ್ತ ತಾರಕನ ಮಕ್ಕಳುಗಳೂ ಕಳೆದುಳಿದ ಇತರರಾಕ್ಷಸರೂ ಓಡಿಹೋಗಿ ಬೆಟ್ಟಗುಡ್ಡಗಳನ್ನು ಸೇರಿಕೊಂಡರು. ಇತ್ತ ಶಿಖಿವಾಹನನು ಹರ್ಯಜೇಂದ್ರಾದಿ ಸಕಲದೇವಸ್ತೋಮದೊಡನೆ ಕೂಡಿ, ವಿಜಯಪತಾಕೆಯನ್ನು ಹಿಡಿಸಿಕೊಂಡು, ಮಹಾವಾದ್ಯವೈಭವದೊಡನೆ ಕೈಲಾಸಕ್ಕೆ ಬಂದು, ಪಾರ್ವತೀಪರಶಿವರಿಗೆ ನಮಸ್ಕರಿಸಿ, ನಡೆದ ಸಂಗತಿಯನ್ನೆಲ್ಲ ಬಿನ್ನೈಸಿದನು. ಸಕಲದೇವತೆಗಳೂ ದೀರ್ಘದಂ

ಡವಾಗಿ ನಮಸ್ಕರಿಸಿ, ಶಿವಾನುಗ್ರಹದಿಂದ ಬಾಳಿದೆವೆಂದು ಬಿನ್ನೈಸಿಕೊಂಡರು. ಸ್ವಾಮಿಯು ಕುಮಾರನನ್ನು ತೆಗೆದಾಲಿಂಗಿಸಿ, ತಲೆಸವರಿ ಮುದ್ದಾಡಿ, ದೇವತೆಗಳಿಗೆಲ್ಲ ಅವರವರ ಪಟ್ಟಣಕ್ಕೆ ಹೋಗುವಂತೆ ಅಪ್ಪಣೆಮಾಡಿ, ನಗಜಾತೆಯೊಡನೆ ನಂದನನ ಪೌರುಷವನ್ನು ಹೇಳಿಕೊಂಡು ಆನಂದಪಡುತ್ತಿದ್ದನೆಂದು ಚೆನ್ನಬಸವೇಶನು ನುಡಿದನೆಂಬಲ್ಲಿಗೆ ಹದಿಮೂರನೆ ಅಧ್ಯಾಯದೊಡನೆ ಮೂರನೆ ಕಾಂಡವು ಮುಗಿದುದು.

— ❋❋❋ —

೪ ನೆಯ ಕಾಂಡ.

೧ ನೆ ಅಧ್ಯಾಯವು.

ಪಶುಪತಿ ಪಟ್ಟವು.

ಒಳಿಕ ಸಿದ್ಧರಾಮೇಶನು ಚೆನ್ನಬಸವೇಶನನ್ನು ಕುರಿತು— ಸ್ವಾಮಿ! ತಾರಕನ ಮಕ್ಕಳು ಮೊದಲಾದವರು ಗುಹಾಂತರಗಳನ್ನು ಸೇರಿದ ಒಳಿಕ ಕೊನೆಗೆ ಅವರವಸ್ಥೆಯೇನಾಯಿತು ? ಎಂದು ಬೆಸಗೊಳ್ಳಲು, ಚೆನ್ನಬಸವೇಶನು— ಅಯ್ಯಾ, ತಾರಕನಾಶಾನಂತರ ಹರಿಬ್ರಹ್ಮಾದಿಗಳೆಲ್ಲರೂ ತಮ್ಮ ತಮ್ಮ ಪಟ್ಟಣಗಳನ್ನು ಗುಡಿತೋರಣಮೊದಲಾದುವುಗಳಿಂದಲಂಕರಿಸಿ ಪ್ರವೇಶಿಸಿ ಬಾಳಿಕೊಂಡಿರಲು, ಇತ್ತ ತಾರಕಾಕ್ಷ—ಕಮಲಾಕ್ಷ—ವಿದ್ಯುನ್ಮಾಲಿ—ಎಂಬ ತಾರಕನ ಮೂರು ಮಂದಿ ಮಕ್ಕಳೂ ಬೆಟ್ಟಗಳ ಗುಹೆಯಲ್ಲಿ ಇತರರಾಕ್ಷಸರೊಡನೆ ಗೂಢವಾಗಿ ವಾಸಮಾಡಿಕೊಂಡು ಹಲವುದಿನಗಳನ್ನು ಕಳೆದರು. ಹೀಗಿರುತ್ತಿರಲು, ಶೂರರಾದ ಆ ದೈತ್ಯರಿಗೆ ಪೇಡಿಗಳಂತೆ ಅಜ್ಞಾತವಾಸದಿಂದ ಜೀವಿಸುವುದು ಸೊಗಸದೆ ಹೋಯಿತು. ಮೂವರೂ ಕೂಡಿ ಮುಂದೇನುಮಾಡಬೇಕೆಂದು ಆಲೋಚಿಸಿದರು ತಮ್ಮ ತಂದೆಯಂತೆಯೇ ಬ್ರಹ್ಮನನ್ನು ಕುರಿತು ತಪಸ್ಸನ್ನು ಮಾಡಿ ಘನತರವಾದ ವರವನ್ನು ಪಡೆದು, ದೇವತೆಗಳನ್ನು ನಿರ್ನಾಮಗೊಳಿಸಬೇಕೆಂದು ನಿರ್ಧರಿಸಿದರು. ಮೂವರೂ ವನಾಂತರಕ್ಕೆ ಹೋಗಿ ತಪಸ್ಸಿಗೆ ಉಚಿತವಾದ ಸ್ಥಲವ

ನ್ನು ಗೊತ್ತುಮಾಡಿ, ಸರೋವರದಲ್ಲಿ ಮುಳುಗಿ ನಾರುಡೆಯನ್ನುಟ್ಟು ಭಸಿ
ತರುದ್ರಾಕ್ಷಗಳನ್ನು ಧರಿಸಿ, ಸೂರ್ಯನಿಗಭಿವಂದಿಸಿ, ಕಾಲಿನ ಹೆಬ್ಬೆರಲನ್ನು
ಮಾತ್ರ ಭೂಮಿಯಲ್ಲೂರಿ, ಮೂಗಿನ ತುದಿಯಮೇಲೆ ದೃಷ್ಟಿಯನ್ನಿಟ್ಟು,
ಹೃದಯದಲ್ಲಿ ಬ್ರಹ್ಮನ ಮೂರ್ತಿಯನ್ನು ನೆಲೆಗೊಳಿಸಿ ಧ್ಯಾನಾರೂಢರಾದ
ರು. ದೇಹಾಭಿಮಾನವು ಅಳಿದುಹೋಯಿತು. ಚಿತ್ತವು ಸ್ಥಿರತೆಯಿಂದ
ಬಲಿದಿತು. ತಪಸ್ಸು ದಿನೇದಿನೆ ವೃದ್ಧಿಗೊಂಡಿತು. ಇವರ ಉಗ್ರ ತಪಸ್ಸಿನಿಂ
ದ ಹೊರಟ ಜ್ವಾಲೆಯು ಭೂಮ್ಯಾಕಾಶಗಳಲ್ಲಿ ಹೊಗೆಯೂಡಿತು. ವನ
ದ ಮೃಗ ಪಕ್ಷಿನಗಾದಿಗಳೆಲ್ಲ ಬೇಯಲಾರಂಭಿಸಿದುವು. ನದಿಗಳಲ್ಲಿ ನೀರು
ಕಾದು ಕುತುಕುತನೆ ಕುದಿದಿತು. ಕೊನೆಕೊನೆಗೆ ಬ್ರಹ್ಮಾಂಡಕಟಾಹವನ್ನೆ
ಲ್ಲ ವ್ಯಾಪಿಸಿತು. ಅಷ್ಟದಿಗ್ಗಜಗಳು ಪಾತಾಳದ ಸರ್ಪಗಳು ಆದಿಕೂರ್ಮ
ನುಸಹ ಈ ಬೇಗೆಯಿಂದ ಹೊರಳಾಡಿದುವು. ಭೂತಲವು ನಡುಗಿತು.
ಈ ಅನಾಹುತಕ್ಕೆ ಕಾರಣವೇನೆಂಬುವನ್ನು ಬ್ರಹ್ಮನು ವಿಚಾರವಮಾಡಿ,
ಜ್ಞಾನದೃಷ್ಟಿಯಿಂದ ತಿಳಿದು, ಈ ಖೂಳದೈತ್ಯರಿಗೆ ನಾನು ಪ್ರಸನ್ನನಾ
ದರೆ ಮುಂದೆ ಇವರಪ್ಪನಿಂದಾದ ಸ್ಥಿತಿಯೇ ಲೋಕಕ್ಕೆ ಉಂಟಾಗದೆ ತಪ್ಪು
ವುದಿಲ್ಲ ; ಪ್ರತ್ಯಕ್ಷನಾಗದಿದ್ದರೆ ಇವರ ತಪೋಜ್ವಾಲೆಯು ಬೇಗೆಯು ಲೋ
ಕವನ್ನು ಹಾಳ್ಮಾಡದೆ ಬಿಡುವುದಿಲ್ಲ ; ಇದಕ್ಕೇನುಮಾಡಬೇಕೆಂದು ಚಿಂ
ತಾಕುಲನಾಗಿ, ಕಡೆಗೆ ಶಿವನ ಕರುಣವಿದ್ದಂತಾಗಲಿ ಯೆಂದು ನಿಶ್ಚೈಸಿ, ರಾ
ಕ್ಷಸರಿದ್ದ ಬಳಿಗೆ ಬಂದನು. ಎಲೆ ದೈತ್ಯರೆ, ನಿಮ್ಮ ತಪಸ್ಸಿಗೆ ಮೆಚ್ಚಿದೆನು,
ನಿಮ್ಮ ಇಷ್ಟಾರ್ಥವೇನು ? ಬೇಡಿರಿ, ಎಂದನು. ಅವರುಗಳು ಈ ಮಾತ
ನ್ನು ಕೇಳಿ, ಕಣ್ಣನ್ನು ಬಿಟ್ಟು, ಬ್ರಹ್ಮನನ್ನು ಕಂಡು ನಮಸ್ಕರಿಸಿ, ನಾನಾ
ವಿಧವಾಗಿ ಸ್ತುತಿಸಿ, ಎಲೆ ಸ್ವಾಮಿಯೆ, ನಮಗೆ ಯಾರಿಂದಲೂ ಮರಣವಾ
ಗದಂತೆ ನಿತ್ಯತ್ವವನ್ನು ಕೊಡಬೇಕೆಂದು ಬೇಡಿದರು. ಬ್ರಹ್ಮನಾದರೊ—
ನನಗೇ ನಿತ್ಯತ್ವವಿಲ್ಲ ; ನಿಮಗೆ ಆ ವರನ್ನು ಹೇಗೆ ಕೊಡಲಿ ? ಅದನ್ನು
ಬಿಟ್ಟು ಬೇರೆ ವರವನ್ನು ಬೇಡಿರಿ; ಎನ್ನಲು, ದೈತ್ಯರು—ಹಾಗಾದರೆ
ಸ್ವರ್ಗಮರ್ತ್ಯಪಾತಾಳದಲ್ಲಿರುವೆ ಯಾರಿಗೂ ಪ್ರವೇಶಿಸಲಶಕ್ಯವಾಗಿರು
ವಂತೆ ಆಕಾಶದಲ್ಲಿ ಚೆನ್ನ ಬೆಳ್ಳಿ ಕಬ್ಬುನಗಳಿಂದ ಮೂರು ಪಟ್ಟಣಗಳನ್ನು
ಕಟ್ಟಿಕೊಳ್ಳುವುದಕ್ಕೂ, ಇವು ಮೂರು ನಿಲ್ಲುವುದಕ್ಕೂ ಬಂದೇಕೀಲಿರು

ವಂತೆಯೂ, ಅದನ್ನು ಸುರನರೋರಗಾದಿಗಳಲ್ಲಿ ಯಾರೂ ಕಾಣದಿರುವಂತೆ ಯೂ, ದೇವವಾನದ ಸಹಸ್ರವರ್ಷಗಳಾದರೆ ಆಗ ಮೂರೂ ಬಂದಾಗುವಂ ತೆಯೂ, ಆ ಸಮಯದಲ್ಲಿ ಬಂದೇ ಬಾಣವನ್ನು ಪ್ರಯೋಗಿಸಿ ಕೀಲನ್ನು ಮುರಿದರೆ ಈ ಪಟ್ಟಣವು ಅಳಿಯುವಂತೆಯೂ, ಹಾಗಲ್ಲದಿದ್ದರೆ ಸದಾಕಾ ಲವೂ ಗರಗರನೆ ತಿರುಗುತ್ತಿರುವಂತೆಯೂ, ವಿದ್ಯಾಧರ ಕಿನ್ನರಕಿಂಪುರುಷ ಯಕ್ಷರಕ್ಷೋ ಮಾನವಾದಿಗಳೆಲ್ಲರೂ ನಮ್ಮನ್ನು ಸೇವಿಸಿಕೊಂಡು ನಮ್ಮ ಆಜ್ಞಾಪ್ರಕಾರ ನಡೆದುಕೊಳ್ಳುವಂತೆಯೂ, ಸಕಲಸಂಪತ್ತೂ ಅಮಿತವಾ ದ ಕಾರ್ಯೈರ್ಯಗಳೂ ನಮಗೆ ಪ್ರಾಪ್ತವಾಗುವಂತೆಯೂ, ವರವನ್ನು ಕೊಡ ಬೇಕು, ಎಂದು ಬೇಡಿದರು. ಅದನ್ನು ಕೇಳಿ ಬ್ರಹ್ಮನು ತಾನು ಯೋ ಚಿಸಿಕೊಂಡು ಬಂದಂತೆಯೇ ಆಯ್ತೆಂದು ತಿಳಿದು, ನಿಟ್ಟುಸುರುಬಿಟ್ಟನು. ಕಡೆಗೆ ಉಪಾಯಾಂತರವಿಲ್ಲದೆ " ನಿಮ್ಮಿಷ್ಟದಂತೆಯೇ ಸರ್ವವೂ ಆಗಲಿ " ಎಂದು ವರವಿತ್ತು ಸತ್ಯಲೋಕಕ್ಕೆ ತೆರಳಿದನು. ಆಗ ರಾಕ್ಷಸರಿಗುಂಟಾದ ಆನಂದವನ್ನು ಹೇಳತೀರದು. ಅಡರಿ ಕಾಡನ್ನು ಮುತ್ತಿ ಬಣಗಿದ ಸೌದೆ ಯನ್ನು ತಿಂದು ತೇಗುತ್ತಿರುವ ಅಗ್ನಿಗೆ ಗಾಳಿಯೂ ಸಹಾಯವಾದರೆ ಹೇಳ ತಕ್ಕುದೇನು ? ಮೊದಲೇ ಇವರು ಜಗದ್ವಿಘ್ನಕರನಾದ ತಾರಕನ ಮಕ್ಕ ಳು ! ಇದರ ಮೇಲೆ ಬ್ರಹ್ಮನ ವರವೂ ಇವರಿಗುಂಟಾದ ಬಳಿಕ ಇನ್ನಿವ ರನ್ನು ತಡೆಯುವರಾರು ? ಇವರಿಗಸಾಧ್ಯವಾದ ಕಾರ್ಯವಾವುದು ? ಕೂಡ ಲೇ ದಾನವಶಿಲ್ಪಿಯಾದ ಮಯನನ್ನು ಬರಮಾಡಿದರು. ತಮ್ಮ ಸಂಕಲ್ಪ ಕ್ಕೆ ತಕ್ಕಂತೆ ಅಂತರಿಕ್ಷದಲ್ಲಿ ತ್ರಿಪುರಗಳನ್ನು ಕಟ್ಟಬೇಕೆಂದು ಅಪ್ಪಣೆಮಾ ಡಿದರು. ಅದರಂತೆಯೇ ಅವನು ಚಿನ್ನ ಬೆಳ್ಳಿ ಕಬ್ಬುನಗಳಿಂದ ಪಟ್ಟಣ ಗಳನ್ನು ಕಟ್ಟಿದನು. ಒಳಗೆ ರತ್ನಖಚಿತವಾದ ಸುವರ್ಣರಜತದ ಉಪ್ಪರಿ ಗೆಗಳು ಕೋಟೆಗಳು ಧ್ವಜಪತಾಕೆಗಳು ಮೊದಲಾದುವುಗಳು ಥಳಥಳಿಸು ತ್ತಿದ್ದುವು. ಅವುಗಳಲ್ಲಿ ಚಿನ್ನದ ಕೋಟೆಯನ್ನು ತಾರಕಾಕ್ಷನೂ, ಬೆಳ್ಳಿ ಯಕೋಟೆಯನ್ನು ಕಮಲಾಕ್ಷನೂ, ಕಬ್ಬುನದಕೋಟೆಯನ್ನು ವಿದ್ಯುನ್ಮಾ ಲಿಯೂ ವಹಿಸಿಕೊಂಡು, ಅರುವತ್ತಾರುಕೋಟಿ ಸೈನ್ಯವನ್ನು ಕಟ್ಟಿ ಆ ಳುತ್ತ, ಅತ್ಯಂತವೈಭವದಿಂದ ಸಕಲೈಶ್ವರ್ಯದೊಡನೆ ಮೆರೆಯುತ್ತಿದ್ದರು. ಅಂತರಿಕ್ಷದಲ್ಲಿ ಅತ್ಯಭ್ರಾರ್ಸ್ವವಾಗಿ ಥಳಥಳಿಸುತ್ತಿರುವ ಈ ಪಟ್ಟಣಗಳನ್ನು

ಜಗತ್ತಿನವರೆಲ್ಲರೂ ನೋಡಿ ಆಶ್ಚರ್ಯಪಡುತ್ತಿದ್ದರು. ಹಿಂದೆ ತಾರಕನ ಯುದ್ಧದ ಕಾಲದಲ್ಲಿ ಮಡಿದಿದ್ದ ಶೂರದೈತ್ಯರ ವಂಶಿಕರಾದ ನಳ ನೀಳ ಮೂಕ ಜಂಭ ಧೂಮ್ರಾಕ್ಷ ಜಟಾಸುರ ಮುಂತಾದ ಮಹಾಮಹಾ ಶೂರ ರಾಕ್ಷಸರೆಲ್ಲ ಗುಡ್ಡಗಳನ್ನು ಬಿಟ್ಟು ತ್ರಿಪುರವನ್ನು ಸೇರಿಕೊಂಡರು. ಒಂದುದಿನ ತಾರಕಾಕ್ಷಾದಿಗಳ ಸಭೆಯಲ್ಲಿ ಶಿಲ್ಪಿಯಾದ ಮಯನು ಬಂದು ಕುಳಿತಿರುವಲ್ಲಿ, ಅವನು ತ್ರಿಪುರವನ್ನು ನಿರ್ಮಿಸಿದ ಚಮತ್ಕಾರವನ್ನು ಕುರಿತು ಮೂವರು ರಾಜರೂ ಬಹಳವಾಗಿ ಅವನನ್ನು ಕೊಂಡಾಡುತ್ತಿದ್ದರು. ಮಯನಾದರೊ– " ರಾಕ್ಷಸೇಶ್ವರರೆ ! ನೀವು ಘೋರತಪಸ್ಸನ್ನು ಮಾಡಿ ಮಹತ್ತರಗಳಾದ ವರಗಳನ್ನು ಪಡೆದು ಈಗ ಲೋಕೋತ್ತರಪದವಿಯನ್ನೇ ನೋ ಅನುಭವಿಸುತ್ತಿರುವಿರಿ, ಒಂದುಸಾವಿರ ವರ್ಷಗಳು ಕಳೆದ ನಂತರ ಯಾವನಾದರೊಬ್ಬ ದೇವನಿಂದ ನಿಮ್ಮ ಈ ತ್ರಿಪುರಕ್ಕೂ ಅತುಲವಾದ ಸಂಪತ್ತಿಗೂ ಹಾನಿಯು ಬಂದರೂ ಒದಬಹುದು ; ಅದುಕಾರಣ, ಆಗಳೂ ಯಾವ ಭಂಗವೂ ತಟ್ಟದಂತೆ ನೀವು ಮಾಡಿಕೊಳ್ಳುವುದಕ್ಕಾಗಿ, ಸೃಷ್ಟಿಸ್ಥಿತಿ ಪ್ರಳಯಗಳಿಗಧಿಪತಿಯೆಂತಲೂ, ದೇವಾಧಿದೇವನೆಂತಲೂ, ಭಕ್ತವತ್ಸಲನೆಂತಲೂ ಪ್ರಸಿದ್ಧನಾಗಿರುವ ಪರಮೇಶ್ವರನಲ್ಲಿ ನೀವುಗಳು ಭಕ್ತಿಯುಕ್ತರಾಗಿ ಸದಾ ಪೂಜಿಸುತ್ತಲಿರಿ, ಇದೇ ನಿಯಮವನ್ನು ನಿಮ್ಮಪಟ್ಟಣದ ನಿವಾಸಿಗಳೆಲ್ಲ ಕೈಕೊಳ್ಳುವಂತೆ ಆಜ್ಞೆ ಮಾಡಿರಿ ; ಆಗ ನೀವು ನಿಷ್ಕಂಟಕರಾಗಿ ಬಾಳುವಿರಿ. " ಎಂದು ಹೇಳಿದನು. ಅದಕ್ಕೆ ದಾನವೇಶ್ವರರು ಒಪ್ಪಿಕೊಂಡು, ಕೂಡಲೇ ಲಿಂಗಗಳನ್ನು ರಚಿಸಿಕೊಡಬೇಕೆಂದು ಮಯನಿಗೆ ಆಜ್ಞಾಪಿಸಿದರು. ಮನೆಗೆ ಬಂದೊಂದು ಲಿಂಗದಂತೆ ಅವನು ಮಾಡಿಕೊಟ್ಟನು. ಸರ್ವರೂ ಭಸ್ಮರುದ್ರಾಕ್ಷಧಾರಿಗಳಾಗಿ ಪಂಚಾಕ್ಷರಗಳನ್ನು ಜಪಿಸುತ್ತ ಶಿವಾರಾಧನೆಯಲ್ಲಿ ತತ್ಪರರಾದರು. ಪುರುಷರೆಲ್ಲರೂ ಜಿತೇಂದ್ರಿಯರೂ, ಸ್ತ್ರೀಯರೆಲ್ಲರೂ ಪತಿವ್ರತೆಯರೂ ಪಾಪದೂರರೆಯರೂ ಭಕ್ತಿತತ್ಪರೆಯರೂ ಆಗಿ ಬಾಳುತ್ತಿದ್ದರು. ಕಾಮಧೇನು ಕಲ್ಪವೃಕ್ಷ ಚಿಂತಾಮಣಿಗಳೆಲ್ಲ ರಾಕ್ಷಸರ ಲೋಕದಲ್ಲಿ ಸೇರಿದುವು. ಸಕಲೋತ್ಸವವೂ ರಾಕ್ಷಸರ ಪಾಲಾಯಿತು. ಸ್ವರ್ಗ ಮರ್ತ್ಯ ಪಾತಾಳಗಳಲ್ಲಿ ಎಲ್ಲಿ ನೋಡಿದರೂ ರಾಕ್ಷಸರ ರಥ, ರಾಕ್ಷಸರ ಕುದುರೆ, ರಾಕ್ಷಸರ ಆನೆ, ರಾಕ್ಷಸರ ವಿಮಾನ,

ರಾಕ್ಷಸರ ಪಲ್ಲಕ್ಕಿಗಳೇ ಕಾಣುವಂತಾದುವು. ಇವರ ಪ್ರಾಬಲ್ಯವನ್ನು ದೇವತೆಗಳು ಕೇಳಿ, ಇನ್ನು ನಮ್ಮ ಗತಿಯೇನಾಗುವುದೋ ಎಂದು ಚಿಂತಿಸಿದರು. ಅವರು ಭಯಪಡುತ್ತಿದ್ದಂತೆಯೇ ತಾರಕಾಕ್ಷಾದಿಗಳು ದಿಗ್ವಿಜಯಕ್ಕೆ ಹೊರಟು ಸ್ವರ್ಗಮರ್ತ್ಯಪಾತಾಳಗಳನ್ನೆಲ್ಲ ಲಗ್ಗೆಹತ್ತಿ ಸರ್ವವನ್ನೂ ತಮ್ಮ ವಶಮಾಡಿಕೊಳ್ಳುತ್ತ ಬಂದರು. ದಿಕ್ಪಾಲಕರ ಪಟ್ಟಣಗಳನ್ನೆಲ್ಲ ನುಗ್ಗಿ ಸಿಕ್ಕಿದ ವಸ್ತುಗಳನ್ನು ಕೊಳ್ಳೆಹೊಡೆದು ಕೈಗೆ ಸಿಕ್ಕಿದವರನ್ನು ಸೆರೆಹಿಡಿದು ತಮ್ಮ ನಗರಗಳಿಗೆ ಕಳುಹುತ್ತ ಬಂದರು. ದೇವರಾಜನಾದ ಇಂದ್ರನು ವೇಷಾಂತರದಿಂದ ತಲೆತಪ್ಪಿಸಿಕೊಂಡು ಓಡಿಹೋಗಿ ಮೇರುಪರ್ವತದ ಗುಹೆಯಲ್ಲಿ ಹೊಕ್ಕಿಕೊಂಡನು. ಉಳಿದ ದೇವತೆಗಳೂ ಅವನನ್ನೇ ಅನುಸರಿಸಿದರು. ಬಂದುದಿನ ಎಲ್ಲರೂ ಕುಳಿತುಕೊಂಡು ರಾಕ್ಷಸರ ವಧೆಗೆ ಉಪಾಯವೇನೆಂದು ಆಲೋಚಿಸಿದರು. ತಮ್ಮಿಂದ ಹರಿಯದೆ ಹೋಗಲು, ರಾಕ್ಷಸರಿಗೆ ವರವನ್ನು ಕೊಟ್ಟ ಇವಕ್ಕೆಲ್ಲ ಮೂಲಭೂತನಾದ ಬ್ರಹ್ಮನಿಂದಲೇ ಇವಕ್ಕೆ ಪರಿಹಾರವನ್ನು ಮಾಡಿಸಬೇಕೆಂದು ಯೋಚಿಸಿ, ಅವನಲ್ಲಿಗೆ ಹೋದರು. ಅವನು ಇವರು ಬಂದ ಕಾರಣವನ್ನೆಲ್ಲ ಕೇಳಿ, ವಿಷ್ಣುವಿನ ಬಳಿಗೆ ಎಲ್ಲರನ್ನೂ ಕರೆದುಕೊಂಡುಹೋದನು. ತಾರಕಾಕ್ಷಾದಿದೈತ್ಯರ ಪಾಪಳಿಯುವನ್ನು ಸಾಂಗವಾಗಿ ಪರಿಹೊಡನೆ ಬಿನ್ನೈಸಿಕೊಂಡು ನಮ್ಮ ಉದ್ಧಾರಕ್ಕೆ ಉಪಾಯವನ್ನು ಬೆಸಸಬೇಕೆಂದು ಬೇಡಿದರು. ವಿಷ್ಣುವಾದರೊ– "ಎಲೆ ದೇವತೆಗಳಿರಾ ! ಈಗ ನಾವು ಆ ರಾಕ್ಷಸರನ್ನು ಗೆಲ್ಲುವುದು ಸುಲಭವಲ್ಲ ; ಅವರೆಲ್ಲರೂ ಮಹಾಶಿವಭಕ್ತರಾಗಿ ಲಿಂಗಾರ್ಚನೆಯನ್ನು ಮಾಡುತ್ತಿದ್ದಾರೆ ; ಆ ಶಿವಭಕ್ತಿಪಾತಿವ್ರತ್ಯಗಳ ಬಲವು ಅವರಲ್ಲಿರುವವರೆಗೂ ನಾವು ಅವರನ್ನು ಜೈಸಲಾರೆವು" ಎಂದನು. ದೇವತೆಗಳಾದರೊ– ರಾಕ್ಷಸರು ಮಯನ ಮಾತಿನಮೇರೆ ಶಿವಾರಾಧನೆಯನ್ನು ಮಾಡುತ್ತಿದ್ದಾರೆಯೇ ಹೊರತು, ಅಂಥ ಕೇವಲಭಕ್ತಿತತ್ಪರರಲ್ಲ ; ಎಂದು ನುಡಿಯಲು, ವಿಷ್ಣುವು– ಅವರು ಭಕ್ತಿಯಲ್ಲಿ ಕಡಿಮೆಯಾದವರಲ್ಲ ; ಸಾಮಾನ್ಯರೆಂದು ನೀವು ತಿಳಿಯಬೇಡಿರಿ ; ಎಂದು ಹೇಳಿದನು. ಕಡೆಗೆ "ನಾವೆಲ್ಲರೂ ಶಿವನನ್ನು ಧ್ಯಾನಿಸಿ, ಅವನಾಜ್ಞೆಯಿಂದ ಅಗಣಿತವಾದ ಭೂತಪ್ರೇತಾದಿಗಳನ್ನು ಹುಟ್ಟಿಸಿ, ಅವುಗಳನ್ನು ದೈತ್ಯರಮೇಲೆ ನುಗ್ಗಿಸಿ ಕೊಲ್ಲಿಸಬೇಕು" ಎಂ

ದು ನಿರ್ಧರಿಸಿ, ಅದರಂತೆಯೇ ಧ್ಯಾನಿಸಿ, ಶಿವನ ವರದಿಂದ ಅಪರಿಮಿತ ಬಲಗಳಾದ ಭೂತಗಳನ್ನು ಪಡೆದು, ರಾಕ್ಷಸರ ಪಟ್ಟಣಗಳಮೇಲೆ ನುಗ್ಗುವುದಕ್ಕೆ ಕಳುಹಿದನು. ಅವು ತ್ರಿಪುರದ ಬಾಗಿಲಿಗೆ ಹೋದಕೂಡಲೇ ಭೂತಿರುದ್ರಾಕ್ಷಧಾರಣಸಂಪನ್ನರಾಗಿರುವ ರಾಕ್ಷಸರ ಸ್ತೋಮವನ್ನು ನೋಡಿ, ಒಳನುಗ್ಗಲಾರದೆ ಹಿಂದಿರುಗಿ ಓಡಿ, ಬಹಿರುದ್ಯಾನಗಳಲ್ಲಿ ನುಗ್ಗಿ, ಹಲಸು ಮಾವು ಬಾಳೆ ಮೊದಲಾದ ಹಣ್ಣುಗಳನ್ನು ಕಿತ್ತು ತಿನ್ನುತ್ತಿದ್ದವು. ಕಾವಲಿನ ರಾಕ್ಷಸರು ಇದನ್ನು ಕಂಡು ಕಬ್ಬುನದ ದಂಡಗಳಿಂದ ಅವುಗಳನ್ನು ಹೊಡೆದು ಬಡಿದರು. ಅನೇಕರಾಕ್ಷಸರು ಅಲ್ಲಿಗೆ ಬಂದು ಮುತ್ತಿದರು. ಭೂತಗಳಿಗೂ ಅವರಿಗೂ ಘೋರಯುದ್ಧವಾಯಿತು. ಅನೇಕ ಭೂತಗಳು ಪ್ರಾಣವನ್ನೀಗಲು, ಉಳಿದುವು ಓಡಿಹೋಗಿ, ದೇವತೆಗಳಮುಂದೆ ಬಿದ್ದು ಹೊರಳಾಡಿ, ತಮಗಾದವಸ್ಥೆಯನ್ನು ಹೇಳಿಕೊಂಡು ಅತ್ತವು. ಅತ್ತ ರಾಕ್ಷಸರು ಇದೆಲ್ಲಾ ದೇವತೆಗಳ ಚೆಪ್ಪೈಯೇ ಸರಿ ಎಂದು ಯೋಚಿಸಿ, ಅವರನ್ನು ತಡಕಿಕೊಂಡು ಲೋಕಲೋಕಗಳನ್ನೆಲ್ಲ ಸುತ್ತುತ್ತಿದ್ದರು. ಇತ್ತ ವಿಷ್ಣುಬ್ರಹ್ಮೇಂದ್ರಾದಿಗಳು ತಮ್ಮ ಯೋಚನೆಯು ಸಿದ್ಧಿಸದೆ ಹೋದುದನ್ನು ಕಂಡು ವ್ಯಸನಪಟ್ಟು, ಸರ್ವರೂ ಕೈಲಾಸಕ್ಕೆ ತೆರಳಿದರು. ದ್ವಾರದಲ್ಲಿ ನಂದೀಶ್ವರನು ಈಗ ಸಮಯವಿಲ್ಲವೆಂದು ತಡೆಯಲು, ಅತನಪ್ಪಣೆಯಮೇರೆ ಮಹಾದ್ವಾರದ ಪಕ್ಕದ ಮಂಟಪದಲ್ಲಿ ಎಲ್ಲರೂ ಗುಂಪುಕಟ್ಟಿಕೊಂಡು ಕುಳಿತು, ಗಜಬಜನೆ ಮಾತನಾಡಿಕೊಂಡು, ತಮ್ಮವಸ್ಥೆಗಳನ್ನೆಲ್ಲ ವರ್ಣಿಸಿ ಪ್ರಲಾಪಿಸುತ್ತಿದ್ದರು. ನಂದೀಶನು ಬಂದು ಸದ್ದನ್ನು ಮಾಡಬೇಡಿರೆಂದು ದಂಡವಿಂವ ಹೊಡೆದು ಎಚ್ಚರಿಸಲು, ಕಂಗೆಟ್ಟು ಒಳಗೊಳಗೆ ಗುಸುಗುಸುಗುಟ್ಟುತ್ತ ಮುಂದೇನುಪಾಯವೆಂದು ವಿಷ್ಣುವನ್ನು ಕೇಳಿದರು. ನನಗೆ ಬುದ್ಧಿಯೇ ಓಡುವುದಿಲ್ಲವೆಂದು ಆತನು ನಿರಾಶೆಯಿಂದ ಹೇಳಲು, ಎಲ್ಲರೂ ನಿಶ್ಚಬ್ದವಾಗಿ ಕುಳಿತು ಆಲೋಚಿಸುತ್ತಿದ್ದು, ಕೊನೆಗೆ ವಿಷ್ಣುವನ್ನು ಕುರಿತು– "ಸ್ವಾಮಿ! ಮೊದಲು ತಾವು ಹೇಳಿದಂತೆಯೇ ರಾಕ್ಷಸರು ಶಿವಭಕ್ತಿ ಪಾತಿವ್ರತ್ಯಗಳ ಒಲವುಳ್ಳವರಾಗಿರುವವರೆಗೂ ನಾವು ಅವರನ್ನು ಏನೂ ಮಾಡಲಾರವು; ನೀವು ಯಾವುದಾದರೊಂದು ಮಾಯೋಪಾಯದಿಂದ ಅವರ ಭಕ್ತಿಪಾತಿವ್ರತ್ಯಗಳನ್ನು ಕೆಡಿಸಿದರೆ, ಆಗ ಪರ

ಶಿವನು ಅವರ ವಿಷಯದಲ್ಲಿನ ಕಾರುಣ್ಯವನ್ನು ತೊರೆಯುವನು; ಮುಂದೆ ಶಿವನಿಂದಲೇ ಅವರ ಅಂತ್ಯವನ್ನು ಕಾಣಿಸಬಹುದು; ಹಾಗಲ್ಲದೆಹೋದರೆ ನಮಗೆ ಮೇರುಪರ್ವತದ ಗುಹಾವಾಸವೇ ಗತಿಯಾಗುವುದು; ಎಂದು ನುಡಿದರು. ಅದನ್ನು ಕೇಳಿದ ವಿಷ್ಣುವು— ಹಾಗೆಯೇ ಆಗಲಿ, ನಾನು ಅದಕ್ಕೆ ಪ್ರಯತ್ನಿಸುತ್ತೇನೆ, ನೀವು ಅವರ ನಾಶಕ್ಕೆ ಶಿವನ ಅನುಮತಿಯನ್ನು ಪಡೆದುಕೊಳ್ಳಿರಿ ಎಂದು ಹೇಳಿ, ನಾರದರನ್ನು ಕರೆದುಕೊಂಡು ತ್ರಿಪುರದ ಕಡೆಗೆ ಪ್ರಯಾಣಮಾಡಿದನು. ಹರಿಯು ಬುದ್ಧಾವತಾರ ಮಾಡಿದನು. ನಾರದನು ಅವನ ಶಿಷ್ಯನಾದನು. ಅಜ್ಞಾನವರ್ಧಕವಾದ ಶಾಸ್ತ್ರಗಳನ್ನು ವಿಷ್ಣುವು ರಚಿಸಲು, ಇಬ್ಬರೂ ಮೃದುಮಧುರವಾದ ವಚನಗಳನ್ನಾಡುತ್ತ ರಾಕ್ಷಸರ ಪಟ್ಟಣವನ್ನು ಸೇರಿದರು. ಇಬ್ಬರೂ ಬಹುಸುಂದರರಾಗಿ ನಡೆ ನುಡಿ ಮೊದಲಾದುವುಗಳಿಂದ ಸ್ತ್ರೀಕುಲದ ಚಿತ್ತವನ್ನು ಕೆಡಿಸುತ್ತ, ನಾನಾರತ್ನಭೂಷಣ ವಸನಾದಿಗಳನ್ನು ರಾಕ್ಷಸಸ್ತ್ರೀಯರಿಗೆ ತೋರಿಸುತ್ತಲೂ, ಕೇಳಿದಂತೆ ಕೊಡುತ್ತಲೂ, ಅವರ ಮನಸ್ಸನ್ನು ಸೆಳೆದುಕೊಂಡರು. ತಮ್ಮ ಇಂದ್ರಜಾಲದ ಕಾಪಟ್ಯದಿಂದ ಎಲ್ಲರನ್ನೂ ಬೆರಗುಗೊಳಿಸಿದರು. ಎಲ್ಲೆಲ್ಲೂ ಈ ಗುರುಶಿಷ್ಯರ ಸತ್ಕೀರ್ತಿಯೇ ನಡೆಯುವಂತಾಯಿತು. ರಾಕ್ಷಸರ ನಾಯಕರು ಈತನಾರೆಂಬುದನ್ನು ತಿಳಿಯುವುದಕ್ಕಾಗಿ ಶಿಷ್ಯನನ್ನು ಗುಟ್ಟಾಗಿ ಕರೆದು,—ಈ ಮಹಿಮನು ಯಾರು? ನಮ್ಮನ್ನು ಅನುಗ್ರಹಿಸುವುದಕ್ಕಾಗಿ ಎಲ್ಲಿಂದ ಬಂದನು? ಎಂದು ಕೇಳಿದರು. ಶಿಷ್ಯನಾದರೊ— "ಈತನು ಜಗತ್ಸ್ರಷ್ಟುವಾದ ಭಗವಂತನು; ಲೋಕವನ್ನು ಸಂಚರಿಸಿ ನೋಡಿಕೊಂಡು ಹೋಗುವುದಕ್ಕಾಗಿ ಬಂದಿರುವನು; ಎಲ್ಲಿ ತನ್ನ ಮನಸ್ಸಿಗೆ ಸೊಗಸು ಕಾಣುವುದೋ ಅಲ್ಲಿ ನಿಂತು ತನ್ನ ಮಹಿಮೆಯನ್ನು ಪ್ರಕಾಶಪಡಿಸಿ, ಆಶ್ರಿತರಿಗೆ ಸಕಲಾಭೀಷ್ಟವನ್ನೂ ಕೊಡುವನು," ಎಂದು ನುಡಿದನು. ಅದನ್ನು ಕೇಳಿ ಸರ್ವರೂ ಭಕ್ತಿಯಿಂದ ಆ ಬುದ್ಧನನ್ನೇ ಓಲೈಸುವವರಾದರು. ಅವರು ಕೇಳಿ ಕೇಳಿದುದನ್ನೆಲ್ಲ ಈ ಮಾಯಾವಿಯು ಕೊಟ್ಟು ವಶಮಾಡಿಕೊಂಡನು. ಬಳಿಕ ರಾಕ್ಷಸರಲ್ಲಿ ಕೆಲರು ಬುದ್ಧಿವಂತರು ನಾರದನನ್ನು ರಹಸ್ಯವಾಗಿ ಕರೆದು,— ಈ ಮಹಿಮನಲ್ಲಿ ಹೀಗೆ ಧನಕನಕಾದಿಗಳನ್ನು ದಾನಮಾಡುವ ಮಹಿಮೆಯು ಮಾತ್ರ

ವಿರುವುದೊ? ಇನ್ನೇನಾದರೂ ಸಿದ್ಧಿಗಳಿರುವುವೊ? ಎಂದು ಕೇಳಲು, ನಾರದನು— ನಾನೇನು ಹೇಳಲಿ? ನಮ್ಮ ಗುರುವಿನ ವಿಷಯವು ಹಾಗಿರಲಿ, ಆತನ ಶಿಷ್ಯಕೋಟಿಯಲ್ಲೆಲ್ಲ ನಾನು ಸಾಮಾನ್ಯನಾದ ಮುಗ್ಧ ಶಿಷ್ಯ; ಆದರೂ ನನ್ನ ಬಳಿಯಲ್ಲಿ ನನ್ನ ಗುರುವಿನ ಅನುಗ್ರಹದಿಂದ ಪ್ರಾಪ್ತವಾಗಿರುವ ಸಿದ್ಧಿಯನ್ನು ನೀವು ಸ್ವಲ್ಪ ನೋಡಿರಿ, ಎಂದು ಹೇಳಿ, ಕಮಂಡಲುವಿನಲ್ಲಿದ್ದ ನೀರನ್ನು ಅಭಿಮಂತ್ರಿಸಿ, ಭೂಮಿಯಮೇಲೆ ತಳಿದನು. ಆ ಕೂಡಲೇ ವಿಷ್ಣು ಬ್ರಹ್ಮೇಂದ್ರಾದಿದೇವತೆಗಳು ಉದ್ಭವಿಸಿ ನಿಂತರು. ಮತ್ತೆ ಮುಂತ್ರೋದಕವನ್ನು ಸೇಚಿಸಲು, ಅದೃಶ್ಯರಾದರು. ಬಳಿಕ ಹಾಗೆಯೇ ಕಪಟವ ಅಮೃತವನ್ನು ನಿರ್ಮಿಸಿ ರಾಕ್ಷಸರಿಗೆ ಕೊಟ್ಟು ಕುಡಿಸಿದನು. ಇದರಿಂದಲೂ ರಾಕ್ಷಸರೆಲ್ಲರೂ ಭ್ರಾಂತರಾಗಿ, ತಮ್ಮ ಸರ್ವಸ್ವವನ್ನೂ ಈ ಗುರುಶಿಷ್ಯರಿಗೆ ಒಪ್ಪಿಸಿಬಿಡಲು ಹಿಂತೆಗೆಯದಂತಾದರು. ತಾವೂ ಶಿಷ್ಯರಾಗಬೇಕೆಂದು ಬಲಾತ್ಕರಿಸಿದರು. ಇವನ್ನು ತಿಳಿದು ನಾರದನು ಎಲ್ಲರನ್ನೂ ಗುರುವಿನ ಬಳಿಗೆ ಕರೆದುಕೊಂಡು ಬಂದು, ಬಹುವಿಧವಾಗಿ ಪ್ರಾರ್ಥಿಸಿ ಒಡಂಬಡಿಸಿದಂತೆ ಮಾಡಿ, ರಾಕ್ಷಸಸ್ತ್ರೀಪುರುಷರೆಲ್ಲರನ್ನೂ ಶಿಷ್ಯರನ್ನಾಗಿ ಅಂಗೀಕರಿಸಿಕೊಳ್ಳುವಂತೆ ಮಾಡಿದನು. ಆಗ ಬುದ್ಧನು ಅವರೆಲ್ಲರಿಗೂ ದೀಕ್ಷೆಯಮಾಡಿಸಿದನು. ಬಳಿಕ— ಎಲೆ ಶಿಷ್ಯರೇ! ಇನ್ನು ಮುಂದೆ ನೀವು ಶಿವಾರ್ಚನೆಯನ್ನು ಬಿಟ್ಟು ನನ್ನನ್ನೇ ಪೂಜಿಸಬೇಕು, ನಾನೇ ಬುದ್ಧನು, ನನ್ನ ನಾಮಜಪವನ್ನು ನೀವು ಯಾವಾಗಲೂ ಮಾಡುತ್ತಿರಬೇಕು, ನನ್ನ ಆರಾಧನೆಯಿಂದಲೇ ನಿಮಗೆ ಸಕಲೇಷ್ಟಾರ್ಥಗಳೂ ಸಿದ್ಧಿಸುವುವು; ಇಹಲೋಕದ ಸೌಖ್ಯವು ಯಾವುದುಂಟೋ ಅದನ್ನೇ ಪಡೆಯಬೇಕು; ಪರಲೋಕದ ಸುಖವೆಂಬುದು ಸುಳ್ಳು; ವಿಭೂತಿ ರುದ್ರಾಕ್ಷ ಧಾರಣೆಗಳನ್ನು ಮಾಡಬಾರದು; ವೇದವಚನಗಳೆಲ್ಲ ಸುಳ್ಳು; ಇದರಂತೆ ತಿಳಿದು ಯಾರು ಆಚರಿಸುತ್ತಾರೋ ಅವರೇ ನನ್ನ ಶಿಷ್ಯರಾಗುವುದಕ್ಕೆ ಅರ್ಹರು; ಅವರಿಗೇ ಸಕಲ ಸಿದ್ಧಿಗಳೂ ದೊರೆಯುವುವು; ಉಳಿದವರಿಗೆ ಇಲ್ಲ; ಎಂದು ಉಪದೇಶಿಸಿದನು. ಅದರಂತೆ ನಡೆಯುವುದಕ್ಕೆ ಸರ್ವರೂ ಒಪ್ಪಿದರು. ವಿಭೂತಿರುದ್ರಾಕ್ಷಧಾರಣಗಳನ್ನೂ ಶಿವಾರ್ಚನವನ್ನೂ ಬಿಟ್ಟರು. ನಾರದನ ಲೀಲಾಚೇಷ್ಟಿಗಳಿಂದ ರಾಕ್ಷಸಸ್ತ್ರೀಯರು ಮೋ

ಹಿತೆಯರಾಗಿ ಆತನ ಸಂಗವನ್ನು ಮಾಡಿ ಜಾರತ್ವದಲ್ಲಿ ಅಭಿರುಚಿಗೊಂಡರು. ಹೆಂಗುಸರು ಕಸಪೊರಕೆ, ಬನಕೆ, ಬರಲು, ಗೋಡೆ ಮೊದಲಾದುವುಗಳನ್ನು ಪೂಜಿಸುವುದಕ್ಕೆ ಪ್ರೇರಿತರಾದರು. ಹಗಲೂ ರಾತ್ರಿಯೂ ತ್ರಿಪುರದಲ್ಲೆಲ್ಲ ಜಾರತನವೇ ನಡೆಯುವಂತಾಯಿತು. ಸರ್ವರೂ ಮದ್ಯಪಾನಪ್ರಮತ್ತರಾದರು. ಈ ಸಂಗತಿಯನ್ನೆಲ್ಲ ನಾರದನು ತನ್ನ ಗುರುವಿನೊಡನೆ ಬಿನ್ನೈಸಿ, ಸ್ವಾಮಿಾ ! ನಾವು ಬಂದ ಕಾರ್ಯವೆಲ್ಲ ಸಿದ್ಧಿಸಿತು; ಆದರೆ ಮೂರುಪುರಗಳಲ್ಲೂ ಬಬ್ಬೊಬ್ಬರಂತೆ ಪರಮಯೋಗಿ, ಶೀಲಪರ, ವಿರಕ್ತ ಎಂಬ ಮೂರು ಮಂದಿಗಳಿದ್ದಾರೆ. ಅವರು ದಧೀಚಿ ಉಪಮನ್ಯು ಅಗಸ್ತ್ಯಾದಿಗಳಿಗಿಂತಲೂ ಮಹಾಶಿವಭಕ್ತರಾಗಿದ್ದಾರೆ; ಅವರು ಮಾತ್ರ ನಮ್ಮ ಬಲೆಗೆ ವಶರಾಗಲಿಲ್ಲ; ಎಂದು ನುಡಿದನು. ಅವರ ತಂಟೆಗೆ ಹೋಗಬೇಡವೆಂದು ವಿಷ್ಣುವು ಹೇಳಲು, ಗುರುಶಿಷ್ಯರುಗಳು ಅಲ್ಲಿಂದ ಕೈಲಾಸದ ಕಡೆಗೆ ತಿರುಗಿದರು. ಮಫೈ ವಿಷ್ಣುವು— ಅಯ್ಯಾ ನಾರದನೆ ! ನಾವು ದೇವತೆಗಳ ಕಾರ್ಯಕ್ಕಾಗಿ ಶಿವಭಕ್ತರಲ್ಲಿ ನಾಸ್ತಿಕ್ಯವನ್ನು ವೃದ್ಧಿಮಾಡಲು ಬುದ್ಧಾವತಾರವನ್ನು ಪರಿಗ್ರಹಿಸಿದ್ದೆವು. ಈ ದೋಷದಿಂದ ದೂಷಿತರಾದ ನಮಗೆ ಶಿವಸಭೆಯು ಪ್ರಾಪ್ತಿಯು ಹೇಗೆತಾನೇ ಆದೀತು ? ಅದು ಕಾರಣ, ಈ ದೋಷವನ್ನು ಹೋಗಲಾಡಿಸಿಕೊಳ್ಳುವುದಕ್ಕಾಗಿ ತಪಸ್ಸನ್ನಾಚರಿಸಬೇಕು; ಎಂದು ಹೇಳಲು, ಅದರಂತೆಯೇ ನಾರದನೂ ಒಪ್ಪಿ, ಇಬ್ಬರೂ ತಪಸ್ಸಿಗೆ ಕುಳಿತರು. ಶಿವನು ಅಶರೀರಿಯಾಗಿ ಬಂದು— ನೀವಿಬ್ಬರೂ ದೇವತೆಗಳ ಮಾತನ್ನು ಕೇಳಿ, ನನ್ನ ಭಕ್ತರಲ್ಲಿ ಶಿವಭಕ್ತಿಯನ್ನು ತಪ್ಪಿಸಿ, ಮೋಹಶಾಸ್ತ್ರವನ್ನು ಹರಡಿರುವಿರಿ; ಅದುಕಾರಣ ಸರ್ವದೇವತಾಸ್ತೋತ್ರವುದೊಡನೆ ನೀವೂ ಕೂಡ ಕೈಲಾಸವನ್ನು ಪ್ರವೇಶಿಸುವುದಕ್ಕೆ ಅನರ್ಹರು; ನೀವೆಲ್ಲರೂ ಹೋಗಿ ಮಾನಸಸರೋವರದಲ್ಲಿ ಮುಳುಗಿ ತಪಸ್ಸನ್ನಾಚರಿಸಿ ಶುದ್ಧರಾದರೆ ಆಗ ನನ್ನನುಗ್ರಹಕ್ಕೆ ಪಾತ್ರರಾಗುವಿರಿ, ಎಂದು ನುಡಿದನು. ಈ ಆಕಾಶವಾಣಿಯನ್ನು ವಿಷ್ಣು ನಾರದರು ಕೇಳಿ, ತಪಸ್ಸಿನಿಂದೆದ್ದು ದೇವತೆಗಳಿದ್ದ ಬಳಿಗೆ ಬಂದು, ಅದುವರೆಗೆ ನಡೆದ ಸಂಗತಿಯನ್ನೆಲ್ಲ ಹೇಳಿ, ಎಲ್ಲರನ್ನೂ ಕರೆದುಕೊಂಡು ಹಿಮವತ್ಪರ್ವತಕ್ಕೆ ಹೋಗಿ, ಮಾನಸಸರೋವರದಲ್ಲಿ ದೇಹವನ್ನೆಲ್ಲ ಮುಳುಗಿಸಿಕೊಂಡು ಕೈಗಳನ್ನು

ಮಾತ್ರ ಜೋಡಿಸಿ ತಲೆಯ ಮೇಲಕ್ಕೆತ್ತಿ ಘೋರತಪಸ್ಸನ್ನಾಚರಿಸಿದರು. ಆಗ ಶಿವನು ಪ್ರತ್ಯಕ್ಷನಾದನು. ಸರ್ವರೂ ನಮಸ್ಕರಿಸಿ ಹೊಗಳಿದರು. ಮತ್ತೂ — "ಪ್ರಭುವೇ! ನಾವು ಮೂಢಮತಿಯಿಂದ ದುರಾಲೋಚಿಸಿ ನಾಸ್ತಿಕ್ಯವರ್ಧನಕ್ಕೆ ಸಹಾಯಕರಾದೆವು; ನಾವೆಲ್ಲರೂ ಅಜ್ಞಾನಿಗಳೂ ಜನನಮರಣಬದ್ಧರೂ ಆದ ಪಶುಗಳು; ಜನನಮರಣದೂರನೂ ಸರ್ವಜ್ಞನೂ ಆದ ನೀನೇ ಪತಿಯು; ನಿನ್ನಪ್ಪಣೆಯಿಲ್ಲದೆ ನಾವು ಆಚರಿಸಿದ ತಪ್ಪನ್ನು ಕ್ಷಮಿಸಬೇಕು; ಇತಃಪರಃ ನಿಮ್ಮಪ್ಪಣೆಯಮೇರೆ ನಾವು ನಡೆದುಕೊಳ್ಳುವಂತೆಯೂ, ಶುದ್ಧರಾಗುವಂತೆಯೂ ನಮ್ಮನ್ನು ಅನುಗ್ರಹಿಸಬೇಕು; ಮತ್ತೂ ತಾರಕಾದಿದೈತ್ಯರ ಉಪಟಲವನ್ನು ತಪ್ಪಿಸಿ ನಮ್ಮನ್ನು ಉದ್ಧರಿಸಬೇಕು" ಎಂದು, ಬೇಡಿಕೊಂಡರು. ಆಗ ಸ್ವಾಮಿಯು — "ಹಾಗಾದರೆ ನಮಗೆ ಪಶುಪತಿಪಟ್ಟವನ್ನು ಕಟ್ಟಿ, ನಾವು ಬೋಧಿಸಿದಂತೆ ನೀವೆಲ್ಲರೂ ನಡೆದುಕೊಳ್ಳಿರಿ" ಎಂದು ಅಪ್ಪಣೆಮಾಡಿದನು. ದೇವತೆಗಳೆಲ್ಲರೂ "ತಥಾಸ್ತು" ಎಂದು ಹರ್ಷದಿಂದ ಪರಶಿವನನ್ನು ಸಿಹ್ಮಾಸನದಲ್ಲಿ ಮೂರ್ತಿಗೊಳಿಸಿ, ಅತ್ಯಂತಸೌಭವದಿಂದ ಪಶುಪತಿಪಟ್ಟವನ್ನು ಕಟ್ಟಿ, ಹರಿಬ್ರಹ್ಮೇಂದ್ರಾದಿಗಳೆಲ್ಲರೂ ಶಿವನ ಪಾದಕ್ಕೆ ಕಾಣ್ಕೆಯನ್ನೊಪ್ಪಿಸಿ ನಮಸ್ಕರಿಸಿ ಕೈಕಟ್ಟಿ ನಿಂತರು. ಆಗ ಸ್ವಾಮಿಯು ಸರ್ವರಿಗೂ ವಿಭೂತಿರುದ್ರಾಕ್ಷಧಾರಣಗಳನ್ನು ಮಾಡಿಸಿ, ಶಿವಾರಾಧನೆಯ ಕ್ರಮವನ್ನು ತಿಳಿಸಿ, ಪಾಶುಪತವ್ರತವನ್ನು ಬೋಧಿಸಿ, ಎಲ್ಲರನ್ನೂ ಪಾಶುಪತರನ್ನು ಮಾಡಿ ಅನುಗ್ರಹಿಸಿದನು. ಬಳಿಕ ತ್ರಿಪುರಜಯಪ್ರಯಾಣಕ್ಕೆ ಸರ್ವವೂ ಸಿದ್ಧವಾಗಲಿ ಎಂದು ನಂದೀಶ್ವರನನ್ನು ಕುರಿತು ಪರಶಿವನು ಅಪ್ಪಣೆಮಾಡಿ, ಪತ್ನೀಸಮೇತನಾಗಿ ತೆರಳಿದನಂದು ಚೆನ್ನಬಸವೇಶನು ನುಡಿದನೆಂಬಿಲ್ಲಿಗೆ ಒಂದನೆ ಅಧ್ಯಾಯವುಸಂಪೂರ್ಣವು.

೨ನೆ ಅಧ್ಯಾಯವು.

ತ್ರಿಪುರವಿಜಯಯಾತ್ರೆಯು.

ಎಲೆಸಿದ್ಧರಾಮೇಶನೆ, ಕೇಳು — ಶಿವನಪ್ಪಣೆಯಮೇರೆ ನಂದೀಶನು ಚತುರಂಗಸೈನ್ಯವೂ ಸನ್ನಾಹಗೊಳ್ಳಬೇಕೆಂದು ದೇವತೆಗಳೆಲ್ಲರಿಗೂ

ಆಜ್ಞಾಪಿಸಿದನು. ಜಗತ್ಕ್ಷಯವಾದ ಸ್ವಾಮಿಯು ಆರೋಹಣಕ್ಕೆ ಅರ್ಹವಾದ ರಥವನ್ನು ರಚಿಸುವುದಕ್ಕೆ ವಿಶ್ವಕರ್ಮನು ನಿಂತನು. ಅದಕ್ಕೆ ತಕ್ಕ ಬಲವತ್ತರಗಳಾದ ಉಪಕರಣಗಳನ್ನೇ ಜೋಡಿಸಿದನು. ಭೂತಲವೇ ರಥದ ಪೀಠವಾಯಿತು. ಆಕಾಶವೇ ಮೇಲಣ ಮಂಟಪಸ್ಥಲವಾಯಿತು. ಸಮುದ್ರ ನಕ್ಷತ್ರ ಮೊದಲಾದುವುಗಳು ಅಚ್ಚಾದುವು. ಸೂರ್ಯಚಂದ್ರರೇ ಎರಡು ಚಕ್ರಗಳಾದುವು. ನಾಲ್ಕು ವೇದಗಳೇ ನಾಲ್ಕು ಕುದುರೆಗಳಾದುವು. ಉತ್ತರದಕ್ಷಿಣಾಯನಗಳು ನೊಗವಾದುವು. ಉಪನಿಷತ್ತುಗಳು ಕಟ್ಟುವ ಹಗ್ಗವಾದುವು. ಶಾಸ್ತ್ರಗಳು ಕೀಲಾದುವು. ಓಂಕಾರವೇ ಚಾವಟಿಯಾಯಿತು. ಮೇರುಪರ್ವತವು ಧನುಸ್ಸಾಯಿತು. ಆದಿಶೇಷನು ಸಿಂಜಿನಿಯಾದನು. ವಿಷ್ಣುವು ಬಾಣವಾದನು. ಬ್ರಹ್ಮನು ಸಾರಥಿಯಾದನು. ನದೀನಾರಿಯರು ಚಾಮರಗ್ರಾಹಿಣಿಯರಾದರು. ಕೈಲಾಸವೇ ಶ್ವೇತಛತ್ರವಾಯಿತು. ವಸಿಷ್ಠಾದಿ ಮಹರ್ಷಿಗಳು ಸ್ವಸ್ತಿವಾಚನವನ್ನು ಮಾಡುವವರಾದರು. ಕಿನ್ನರ ಯಕ್ಷಸಿದ್ಧಾದಿಗಳು ಸ್ತುತಿಪಾಠಕರಾದರು. ಗರುಡಗಂಧರ್ವಾದಿಗಳು ಕವಿಗಳಾದರು. ಕುಲಶೈಲಗಳು ಮೇಘಗಳು ಸಹ ಮೇಲುಕಟ್ಟುಗಳಾದುವು. ಇಂದ್ರಾದಿದಿಕ್ಪಾಲಕರು ಮಹಾರಥಿಕರಾದರು. ಸಕಲದೇವತಾಸಮೂಹವೂ ಸನ್ನದ್ಧವಾಗಿ ನಿಂತು ಮಹಾಸಮುದ್ರದಂತೆ ಕಾಣಿಸಿತು. ಆಗ ನಂದೀಶನು ಶಿವನ ಬಳಿಗೆ ಹೋಗಿ ನಮಸ್ಕರಿಸಿ, ಎಲ್ಲವೂ ಸಿದ್ಧವಾಯಿತೆಂದು ವಿಜ್ಞಾಪಿಸಿದನು. ಪರಶಿವನು ಪಾರ್ವತಿಯೊಡನೆ ಮುಂದ ಸ್ಮಿತನಾಗಿ ಸಿಹ್ಮಾಸನದಿಂದಿಳಿದು, ವೃಷಭವನ್ನೇರಿ ರಥದ ಬಳಿಗೆ ಬಂದನು. ಮಹಾವಾದ್ಯಘೋಷವು ವಿಜೃಂಭಿಸಿತು. ಸರ್ವದೇವತೆಗಳೂ ಜಯಘೋಷವನ್ನು ಮಾಡಿದರು. ಶಂಕರನು ವೃಷಭದಿಂದಿಳಿದು ಆ ಮಹಾರಥದಮೇಲೆ ಎಡಪಾದವೊಂದನ್ನಿಟ್ಟನು. ಅನೇಕ ಬ್ರಹ್ಮಾಂಡೋದರನಾದ ಆ ಮಹಾಸ್ವಾಮಿಯ ಭಾರವನ್ನು ತಾಳಲಾರದೆ, ಕೂಡಲೇ ರಥವು ಕಟಕಟನೆ ಶಬ್ದಮಾಡಿ ಜರ್ಝರಿತವಾಗಿ ಗಾಲಿಗಳು ನಗ್ಗಿ ಕುದುರೆಗಳು ಬಳ್ಳ ರಥವು ಪಾತಾಳಕ್ಕೆ ಇಳಿದುಹೋಯಿತು. ವಿಷ್ಣುವು ಕೆಲಸಕೆಟ್ಟತೆಂದು ಯೋಚಿಸಿ, ಥಟ್ಟನೆ ಮಹಾವೃಷಭಾಕಾರವನ್ನು ಧರಿಸಿ, ಕೋಡನ್ನು ರಥದ ಅಡಿಗೆ ಕೊಟ್ಟು ಮೊಂಟಿದನು. ರಥವು ಎದ್ದು ನಿಂತಿತು. ವಿಶ್ವಕರ್ಮನು ಕೀಲು

ಗಳನ್ನೆಲ್ಲ ಬಿಗಿಮಾಡಿ ಸರಿಗೊಳಿಸಿದನು. ವೃಷಭಾಕಾರದ ಹರಿಯು ರಥದ ಮಹಾಭಾರವನ್ನೆತ್ತಿದುದರಿಂದ ತರಹರಿಸಿ ಕಣ್ಣು ತಿರುಗಿ ರಕ್ತವನ್ನು ಕಕ್ಕಿ ವಿಜೇತನನಾದನು. ಆಗ ಶಂಕರನು ಕರುಣಾಕಟಾಕ್ಷದಿಂದ ನೋಡಿ ಚೈತನ್ಯವನ್ನು ಕೊಟ್ಟು, ಹರಿಯೆ! ನಿನ್ನ ಸಾಹಸಕ್ಕೆ ಮೆಚ್ಚಿದೆನು, ಇಷ್ಟಾರ್ಥವನ್ನು ಕೇಳು ಎನಲು, ಹರಿಯು— ಸ್ವಾಮಿ ನಾನು ಶಕ್ತಿಯೊಳಗೆಲ್ಲ ಮೂಲಶಕ್ತಿಯಾಗಿ ನಿನ್ನಲ್ಲಿ ಹೇಗೆ ಇರುವೆನೋ, ಹಾಗೆಯೇ ವೃಷಭನಲ್ಲಿ ಮಹಾವೃಷಭನಾಗಿ ನಾನಿರುವಂತೆಯೂ ನಿನ್ನ ಮೇಲಣ ಭಕ್ತಿಯು ನನ್ನಲ್ಲಿ ಸಂಪೂರ್ಣವಾಗಿರುವಂತೆಯೂ ಅನುಗ್ರಹಿಸು, ಎಂದು ಬೇಡಿದನು. ಶಿವನು ತಥಾಸ್ತು ಎಂದನು. ಸಕಲ ದೇವತೆಗಳೂ ಮತ್ತೆ ಜಯ ಘೋಷವನ್ನು ಮಾಡಿದರು. ಸ್ವಾಮಿಯು ಪತ್ನೀಸಮೇತನಾಗಿ ರಥದಲ್ಲಿ ಮೂರ್ತಿಗೊಂಡನು. ಸರ್ವರಿಗೂ ಅವರವರ ವಾಹನವನ್ನೇರುವಂತೆ ಅಪ್ಪಣೆ ಮಾಡಿದನು. ದೇವತಾಸ್ತೋಮವು ಗಣಪತಿಯು ಸ್ತೋತ್ರವನ್ನು ಮಾಡಲು, ಆತನು ಸಂತುಷ್ಟನಾಗಿ ನಿರ್ವಿಘ್ನತೆಯ ವರವನ್ನಿತ್ತು ದೇವದುಂದುಭಿಯನ್ನು ತಾಡಿಸಿದನು. ಮಹಾವಾದ್ಯಗಳ ವಿಜೃಂಭಣೆಯು ಬ್ರಹ್ಮಾಂಡಕಟಾಹವನ್ನು ಒಡೆಯುವಂತೆ ಮಾಡಿತು. ಸಕಲ ಚತುರಂಗಸೈನ್ಯವೂ ಆಯತ್ತವಾಗಿ ಹೊರಟಿತು. ರಥದ ಮುಂಗಡೆಯಲ್ಲಿ ನಂದೀಶನು ಬೆತ್ತವನ್ನು ಹಿಡಿದು ನಡೆದನು. ಎಡಬಲದಲ್ಲಿ ಗಣಪತಿ ಷಣ್ಮುಖರು ಇಳಿ ನವಿಲುಗಳನ್ನು ಹತ್ತಿ ನಡೆದರು. ಹರಿಬ್ರಹ್ಮರು ಗರುಡಹಂಸಗಳನ್ನು ಹತ್ತಿ ಅವರ ಪಕ್ಕದಲ್ಲಿ ನಡೆದರು. ದಿಕ್ಪಾಲಕರುಗಳು ರಥದ ಸುತ್ತಲೂ ಅವರವರ ವಾಹನಗಳನ್ನೇರಿ ತಮ್ಮ ತಮ್ಮ ದಿಕ್ಕಿನಲ್ಲಿ ನಿಂತು ಹೊರಟರು. ಇಂಥ ಮಹಾವಿಜೃಂಭಣೆಯ ಪ್ರಯಾಣವನ್ನು ನೋಡಿದ ಮನುಮುನಿಸಿದ್ಧಸಾಧ್ಯಾದಿಗಳೆಲ್ಲರೂ ಇಂದು ನಮ್ಮ ಕಣ್ಣಿನ ಹಬ್ಬವಾಯ್ತೆಂದು ಧನ್ಯವಾದವನ್ನು ಮಾಡುತ್ತಿದ್ದರು. ಗಣನಾತೀತವಾದ ಹಸ್ತ್ಯಶ್ವರಥಪದಾತಿಗಳಿಂದಲೂ, ಛತ್ರಚಾಮರಧ್ವಜಪಟಗಳಿಂದಲೂ, ನಿಬಿಡವಾದ ಈ ಮಹಾದೇವಸೇನೆಯು ತ್ರಿಪುರದ ದಾರಿಯನ್ನು ಹಿಡಿದು ನಡೆದು, ಪಟ್ಟಣಕ್ಕೆ ಸಮೀಪವಾದ ಒಂದು ದೊಡ್ಡ ಬಯಲಿನಲ್ಲಿ ಬೀಡನ್ನು ಬಿಟ್ಟು ಮಾರ್ಗಾಯಾಸದಿಂದ ವಿಶ್ರಮಿಸಿಕೊಂಡಿತು. ಈ ಸೈನ್ಯದ ಒಟ್ಟುಕಾವಲು ಭೈರವನಿಗೆ ನೇಮಿಸ

ಲ್ಪಟ್ಟಿತು. ಷಣ್ಮುಖನಿಗೆ ಮುಖ್ಯಸೇನಾಧಿಪತ್ಯವು ಕೊಡಲ್ಪಟ್ಟಿತು. ಉಳಿದ ಯುದ್ಧಸಾಮಗ್ರಿಗಳ ಯಾಜಮಾನ್ಯವೆಲ್ಲ ವೀರಭದ್ರೇಶ್ವರನಿಗೆ ಒಪ್ಪಿಸಲ್ಪಟ್ಟಿತು. ಅಷ್ಟರಲ್ಲಿ ಸಂಧ್ಯಾಕಾಲವಾಗಲು ಸೂರ್ಯನು ಅಸ್ತನಾದನು. ಕತ್ತಲೆಯು ಆವರಿಸಿತು. ಆಗ ತಾರಕನು ತನ್ನ ಅರಮನೆಯೊಳಗೆ ಸಕಲ ಸೇನಾಪ್ರಮುಖರಿಂದ ಕೂಡಿದ ಬಹ್ವೀಲಗದಲ್ಲಿದ್ದನು. ಸಿಹ್ಮಾಸನದ ಬಲಗಡೆಯಲ್ಲಿ ಕುಳಿತಿದ್ದ ಕುಲಗುರುವಾದ ಶುಕ್ರಾಚಾರ್ಯನನ್ನು ಕುರಿತು ಮುಗುಳ್ನಗೆಯಿಂದ— "ಗುರುವೇ! ಆಶ್ಚರ್ಯವನ್ನು ಕೇಳಿದಿರಾ? ದೇವತೆಗಳು ನಮ್ಮಿಂದ ಹೆದರಿ ಓಡಿಹೋಗಿ ಶಿವನೊಡನೆ ದೂರನ್ನು ಹೇಳಿಕೊಂಡು, ನಮ್ಮನ್ನು ಜೈಸುವುದಕ್ಕಾಗಿ ಶಿವನನ್ನೇ ಕರೆದುಕೊಂಡು ಬಂದಿರುವರಂತೆ! ಈಗ ನಾವು ಮಾಡತಕ್ಕ ಕಾರ್ಯವೇನು?" ಎಂದು ಕೇಳಿದನು. ಶುಕ್ರಾಚಾರ್ಯನಾದರೊ— "ಶಿವನೇ ಕೊಲ್ಲಬೇಕೆಂದು ಪ್ರಯತ್ನಿಸಿದರೆ ಇನ್ನು ಬಿಡಿಸಿಕೊಳ್ಳುವುದಕ್ಕೆ ಯಾರಿಂದತಾನೇ ಆದೀತು? ಈಗ ಶಿವನ ಬಳಿಗೆ ನಾನೇ ಹೋಗಿ ಶರಣಾಗತರಾಗುವುದೇ ನ್ಯಾಯವು" ಎಂದು ಉತ್ತರ ಕೊಟ್ಟನು. ಅವನನ್ನು ಕೇಳಿ ವಿದ್ಯುನ್ಮಾಲಿಯು ಕಿಡಿಕಿಡಿಯಾಗಿ,— ಗುರುವೆ! ಏನೆಂದಿರಿ? ಶರಣಾಗತರಾಗುವುದೆ? ಸರಿ ಸರಿ! ಸಮುದ್ರವನ್ನೆಲ್ಲ ಸುತ್ತಲೆ ಹೀರಿಬಿಡುವ ಬಡಬಾಗ್ನಿಯು ನೀರಿನ ಸಣ್ಣ ಹನಿಗೆ ಅಂಜಬೇಕೆ? ನನ್ನ ಶಕ್ತಿಯನ್ನು ಪರೀಕ್ಷಿಸಬೇಕಾದರೆ ಆ ದೇವತೆಗಳಮೇಲೆ ಬಿಟ್ಟು ನೋಡಿರಿ, ಅವರು ನಮಗೆ ಸಣ್ಣ ಕೀಟಗಳಿಗೆ ಸಮಾನರು. ನಮ್ಮ ತ್ರಿಪುರದ ಎಲ್ಲೆಯನ್ನು ಮೆಟ್ಟುವುದಕ್ಕಾದರೂ ಅವರಿಗೆ ಸಾಮರ್ಥ್ಯವುಂಟೆ? ಅವರ ಬಿದರಿಕೆಯನ್ನು ನಮಗೆ ತೋರಿಸುವುದು, ಹುಲಿಯ ಬೆರುದನ್ನು ಹುಲ್ಲೆಯು ಅಳಸಿಬಿಡುವುದೆಂದು ಹೇಳಿದಹಾಗಾಯಿತು! ಎಂದನು. ಅಷ್ಟರಲ್ಲಿ ಉಳಿದ ಸೇನಾಪ್ರಮುಖರೆಲ್ಲ ಎದ್ದು ನಿಂತು— ಗುರುವೆ! ನಮ್ಮ ಪರಾಕ್ರಮವನ್ನು ಪರೀಕ್ಷಿಸಬೇಕು, ಸಕಲ ದಿಕ್ಪಾಲಕರನ್ನೂ ಕಟ್ಟಿ ಪಾದಕ್ಕೆ ತಂದೊಪ್ಪಿಸುವೆವು; ಸಪ್ತಸಮುದ್ರಗಳನ್ನೂ ಕುಡಿದುಬರುವೆವು; ಕುಲಾಚಲಗಳನ್ನೆಲ್ಲ ಕಿತ್ತು ತರುವೆವು; ಸಕಲದೇವತೆಗಳ ಪ್ರಾಣವನ್ನೂ ತೆಗೆವುದಕ್ಕೆ ಸಂಚಕಾರವನ್ನು ಹಿಡಿವೆವು; ಕೊನೆಗೆ ಶಿವನೇ ಬಂದರೂ ತಡೆದು ನಿಲ್ಲಿಸುವೆವು; ನಮ್ಮನ್ನು ಬಿಟ್ಟು ನೋಡು" ಎಂದು ಗರ್ಜಿಸಿದರು.

ತಾರಕಾಕ್ಷನು ಆ ಶೂರರನ್ನೆಲ್ಲ ಉಚಿತವಚನಗಳಿಂದ ಗೌರವಿಸಿ, ಓಲಗವನ್ನು ವಿಸರ್ಜಿಸಿ, ಮೂರು ಪುರಗಳ ಕೋಟೆಗಳ ಕಾವಲಿನವರಿಗೂ ಎಚ್ಚರಿಕೆಯನ್ನು ಹೇಳಿಸಿ, ತಾನು ಅಂತಃಪುರಕ್ಕೆ ಹೋದನು. ಆಳ್ವೀರಿಯ ಮೇಲೆ ಕಾವಲಿನವರು ತಮ್ಮ ಟಿಗಳನ್ನು ಹೊಡೆದು, ಕಹಳೆಗಳನ್ನೂದಿ, ಗಟ್ಟಿಯಾಗಿ ಕೂಗಿ ಎಚ್ಚರಿಸಿ, ಪಂಜುಗಳನ್ನು ಹತ್ತಿಸಿಸುತ್ತುತ್ತ, ನಿದ್ರೆಯಿಲ್ಲದೆ ಕಾಯುತ್ತಿದ್ದರು. ಕಾಸಿದ ಮಳಲಗುಡ್ಡೆಗಳು, ಕಾಸಿದ ಎಣ್ಣೆ, ಹುಲ್ಲನ್ನು ತುಂಬಿದ ಚೀಲಗಳು, ದಸಿಗಳು, ತೊಲೆಗಳು, ಗುಂಡುಗೋವಿಗಳು, ಸುಣ್ಣದ ಚೀಲಗಳು, ಕಲ್ಲು ಗುಂಡುಗಳು, ಕವಣೆಗಳು, ಕತ್ತಿ ಗುರಾಣಿಗಳು, ಭಲ್ಲೆಯಗಳು, ಹಂದಿಯ ತಲೆಗಳು, ಮೊದಲಾದ ಪರಿಕರವನ್ನೆಲ್ಲ ಆಳ್ವೀರಿಯಮೇಲೆ ಜೋಡಿಸುತ್ತಿದ್ದರು. ಅಪ್ಪರಲ್ಲಿ ಬೆಳಗಾಯಿತು. ತ್ರಿಪುರವನ್ನು ಲಗ್ಗೆ ಹತ್ತುವುದಕ್ಕೆ ಸನ್ನಾಹಗೊಳ್ಳಬೇಕೆಂದು ದೇವಸೇನೆಯಲ್ಲಿ ಡಂಗುರದಿಂದ ಅಪ್ಪಣೆಯಾಯಿತು. ಅತ್ತ ತ್ರಿಪುರದ ಜನರು ಶಿವನು ತಮ್ಮ ಪಟ್ಟಣದಮೇಲೆ ದಂಡೆತ್ತಿ ಬರುವುದನ್ನು ನೋಡಬೇಕೆಂದು ಆಳ್ವೀರಿಗಳಮೇಲೆ ಹತ್ತಿ ಸಾಲಾಗಿ ನಿಂತಿದ್ದರು. ರಾಕ್ಷಸಾಂಗನೆಯರು— ಇನ್ನು ನಮ್ಮ ಗತಿಯೇನು? ದೇವತೆಗಳು ನಮ್ಮ ಪಟ್ಟಣವನ್ನು ಸೂರೆ ಮಾಡಿಕೊಳ್ಳುವರಂತೆ! ಎಂದು ಒಬ್ಬರೊಡನೊಬ್ಬರು ಮಾತನಾಡಿಕೊಳ್ಳುತ್ತಿದ್ದರು. ಇತ್ತ ಇಂದ್ರಾದಿದಿಕ್ಪಾಲಕರು ತಮ್ಮ ನಿತ್ಯಕ್ರಿಯೆಗಳನ್ನು ಮುಗಿಸಿಕೊಂಡು, ಶಿವನ ಬಳಿಗೆ ಹೋಗಿ ನಮಸ್ಕರಿಸಿ ಅಪ್ಪಣೆ ಯೇನೆಂದು ಬೆಸಗೊಳ್ಳಲು, ಮೊದಲು ತ್ರಿಪುರವನ್ನು ಲಗ್ಗೆ ಹತ್ತುವುದಕ್ಕೆ ಇಂದ್ರನಿಗೆ ಅಪ್ಪಣೆ ಮಾಡಿದನು. ಆತನು ಐರಾವತದಮೇಲಣ ಅಂಬಾರಿಯನ್ನೇರಿ ತನ್ನ ಸೇನಾಸಮೂಹದೊಡನೆ ಬಿರುದಾವಳಿಗಳನ್ನು ಹೊಗಳಿಸಿಕೊಳ್ಳುತ್ತ ತ್ರಿಪುರದಮೇಲೆ ಸಾಗಿದನು. ಅವರ ಕೋಟೆಗಳು ಪ್ರತಿಸೂರ್ಯಮಂಡಲಗಳಂತೆ ಥಳಥಳನೆ ಹೊಳೆಯುತ್ತ ಕ್ಷಣಮಾತ್ರವೂ ನಿಲ್ಲದೆ ಗರಗರನೆ ಸುತ್ತುತ್ತ ನೋಡುವವರನ್ನು ದಿಗ್ಭ್ರಮೆಗೊಳಿಸುತ್ತಿದ್ದುವು. ಅವುಗಳ ಸವಿಾಪಕ್ಕೆ ಇಂದ್ರನು ಬಂದು, ತನ್ನ ಕಡೆಯ ಸಿದ್ಧಸಾಧ್ಯವಿದ್ಯಾಧರ ಕಿನ್ನರ ಕಿಂಪುರುಷಾದಿಗಳಿಗೆಲ್ಲ ಕೋಟೆಯನ್ನು ಲಗ್ಗೆ ಹತ್ತುವುದಕ್ಕೆ ಅಪ್ಪಣೆ ಮಾಡಿದನು. ಕೂಡಲೇ ಹೆಗ್ಗಾಳಿಗಳು ಕೂಗಿದುವು; ಭೇರಿಗಳು ಭೋ

ರ್ಗರೆದುವು; ದೇವಸೇನೆಯು ಕೋಟೆಯ ಸುತ್ತಲೂ ಬಳಸಿ ಮೇಲಕ್ಕೆ ಏಟ್ಟಣಿಗಳನ್ನು ಕಟ್ಟುತ್ತಲೂ, ಏರುದಿಣ್ಣೆಗಳನ್ನು ರಚಿಸುತ್ತಲೂ, ಕೋಲಾಹಲವನ್ನು ಮಾಡುತ್ತಿದ್ದಿತು. ಅಷ್ಟರಲ್ಲಿ ತಾರಕಾಕ್ಷಾದಿಗಳ ಸೇನೆಯು ತಮ್ಮ ಸೇನಾಪತಿಯ ಅಪ್ಪಣೆಯನ್ನು ಪಡೆದು ಕೋಟೆಯಮೇಲೆ ಬಂದು ನಿಂತು ದೇವಸೇನೆಯ ಚಾಪಲ್ಯವನ್ನು ನೋಡಿದರು. ಭಿಂಡಿ, ತೋಮರ, ಗದೆ, ಮುಸಲ, ಕುಂತ, ಅಸಿ, ಬಾಣ ಮೊದಲಾದ ಆಯುಧಗಳನ್ನು ಜಳಪಿಸಿ, ಮಹಾವೀರನಾದವನನ್ನು ಮಾಡಿ,— ಎಲೆಲೊ ನೀಚದೇವತೆಗಳಿರಾ! ಹುಲಿಯ ಹುತ್ತನ್ನು ಮೊಲಗಳು ಕೆಣಕುವಂತೆ ತ್ರಿಪುರಕ್ಕೆ ಮುತ್ತಿಗೆಯನ್ನು ಹಾಕುವ ದುರ್ಬುದ್ಧಿಯು ನಿಮಗೇಕೆ ? ಎಂದು ಮೂದಲಿಸಿ, ಬಾಣದ ಮಳೆಯನ್ನು ದೇವತೆಗಳಮೇಲೆ ಕರೆದರು. ಕವಣೆಗಳನ್ನೆಸೆದರು. ಕಾದ ಎಣ್ಣೆಯನ್ನು ಸುರಿದರು. ಸುಟ್ಟ ಸುಣ್ಣವನ್ನು ಬಗ್ಗಿಸಿದರು. ಸುಡುವ ಮಳಲನ್ನು ಸುರಿದರು. ದೊಡ್ಡ ದೊಡ್ಡ ಗುಂಡುಗಳನ್ನುರುಳಿಸಿದರು. ಕೆಳಗಿದ್ದ ದೇವತೆಗಳು ರಾಕ್ಷಸರ ಏಟುಗಳಿಗೆ ಸಿಕ್ಕಿ ಹತರಾಗುತ್ತಲೂ, ಮೈಗಳಲ್ಲಿ ಹೊಪ್ಪಳಿಗಳೇಳಲು ಕಿರುಚುತ್ತಲೂ, ಕೈಕಾಲುಗಳನ್ನು ಮುರಿದುಕೊಂಡು ರೋದಿಸುತ್ತಲೂ, ತಲೆಯೊಡೆದು ರಕ್ತವನ್ನು ಕಾರುತ್ತಲೂ, ಆನೆಗಳ ಮರೆಯಲ್ಲಿ ಅವಿತುಗೊಳ್ಳುತ್ತಲೂ, ಹೆಣಗಳನ್ನು ಮೇಲೆ ಎಳೆದುಕೊಂಡು ಬಿದ್ದುಕೊಳ್ಳುತ್ತಲೂ ದಿಕ್ಕುದಿಕ್ಕಿಗೆ ಓಡುತ್ತಲೂ, ಪರಿಭವಗೊಂಡರು. ಇದನ್ನು ದೇವೇಂದ್ರನು ನೋಡಿ, ಛೀಗುಟ್ಟಿ, ನೀಚರಾದ ದೈತ್ಯರಿಗೆ ನೀವುಗಳು ಹೆದರಿಕೊಳ್ಳಬಹುದೆ ? ಜಗದೀಶನಾದ ಮಹಾದೇವನು ಬೆಂಬಲನಾಗಿರುವಾಗ ನಮಗೆ ಭೀತಿಯೆಂದರೇನು ? ಮುಂದಿಟ್ಟ ಕಾಲನ್ನು ಹಿಂದೆಗೆದು ದೇವಕುಲಕ್ಕೆ ಅಪಯಶಸ್ಸನ್ನು ತರಬೇಡಿರಿ, ಎಂದು ಮೊದಲಾಗಿ ಹೇಳಿ, ಹುರಿದುಂಬಿಸಿ, ಮತ್ತೆ ಕೋಟೆಯಮೇಲೆ ನುಗ್ಗಿಸಿದನು. ದೇವತೆಗಳು ದೇಹಾಭಿಮಾನವನ್ನು ತೊರೆದು ಲಗ್ಗೆ ಹತ್ತುವುದಕ್ಕಾರಂಭಿಸಿದರು. ರಾಕ್ಷಸರ ಏಟಿಗೆ ಮುಂದಿನವರು ಬಿದ್ದರೆ ಹಿಂದಿನವರು ಅದನ್ನು ಸರಕುಗೊಳ್ಳದೆ ಬಿದ್ದವರನ್ನೇ ಗುಡ್ಡೆ ಹಾಕಿ ಮೇಲೇರುತ್ತಲೂ, ಮೇಲೆ ಹತ್ತಿದವರು ಕೆಳಗಿದ್ದವರಿಗೆ ನಡುಕಟ್ಟುಗಳನ್ನೂ ಭಲ್ಲೆಯಗಳನ್ನೂ ನಿಡುಗಾಲ್ಗಳನ್ನೂ ಇಳಿಯಬಿಟ್ಟು ಹಿಡಿಸಿ ಸೇದಿಕೊಳ್ಳುತ್ತಲೂ, ಆಳ್ವೇರಿ

ಯುಮೇಲೆ ಇದಿರುಬಿದ್ದ ರಾಕ್ಷಸರೊಡನೆ ಮಲ್ಲಗಾಳಗದಿಂದಲೂ, ಕೇಕಾಕೇ ಶಿಯಿಂದಲೂ, ಮುಷ್ಟಾಮುಷ್ಟಿಯಿಂದಲೂ, ಗದಾಗದೆಯಿಂದಲೂ, ಹೊಡೆದಾಡುತ್ತಲೂ, ಸುರಂಗಗಳ ಮಾರ್ಗದಿಂದ ಸುಗ್ಗಿ, ನಾಲ್ಕುಕಡೆಯಲ್ಲೂ ದೈತ್ಯರನ್ನು ಒಳಸುತ್ತಲೂ, ಹಜ್ಜೆಹಜ್ಜೆಗೂ ಭೂಮಿಗುರುಳಿದರೂ ಇತರರು ಎದೆಗೆಡದೆ ಮುಂದೆ ಸಾಗುತ್ತಲೂ, ಬಂಮಜಾವದೊಗಾಗಿ ತ್ರಿಪುರದ ಕೋಟೆಯಮೇಲೆ ಇಂದ್ರನ ಸೇನೆಯ ಒಪ್ಪುಭಾಗವು ಹತ್ತಿ ಮಹಾತುಮುಲಯುದ್ಧವನ್ನು ಮಾಡುತ್ತಿದ್ದಿತು. ಶೂಲಗಳ ಕೊಡಲಿಗಳ ಕತ್ತಿಗಳ ಮುದ್ಗರಗಳ ಮುಸಲಗಳ ಪ್ರಹಾರಗಳು ಖಣಿಖಣಿಲ್ಲಿಟಿಖಿಟಿಲ್ ಎಂದು ಶಬ್ದಮಾಡುತ್ತಿದ್ದುವು. ಹೆಣಗಳು ರಕ್ತ ಮಾಂಸಗಳು ಆಯುಧಗಳು ಕರಿತುರಗ ರಥಗಳು ಗುಡ್ಡೆಗುಡ್ಡೆಯಾಗಿ ಆಳ್ವೀರಿಯಮೇಲೂ ಅಗಳುಗಳಲ್ಲೂ ತುಂಬಿದುವು. ಇಂದ್ರಾದಿದಿಕ್ಪಾಲಕರೆಲ್ಲರೂ ಅತ್ಯಂತವೀರಾವೇಶದಿಂದ ಸೇನೆಯನ್ನು ಪ್ರೋತ್ಸಾಹಿಸುತ್ತ ಕೋಟೆಯಮೇಲೆ ಏರಿಸುತ್ತಿದ್ದರು. ಪುರದ ರಾಕ್ಷಸರೆಲ್ಲರೂ ತಮ್ಮ ಪಟ್ಟಣವು ದೇವತೆಗಳಿಗೆ ಸೂರೆಹೋಗಿಯಿತೆಂದು ಪ್ರಲಾಪಿಸುತ್ತ ಅರಮನೆಯ ಮುಂದೆ ಗೋಳಿಟ್ಟರು. ಆಗ ವಿದ್ಯುನ್ಮಾಲಿಯು ವೀರಗಾಸೆಯನ್ನು ಕಟ್ಟಿ ಧನುರ್ಬಾಣಗಳನ್ನು ಪಿಡಿದು ಮಣಿಪಟವನ್ನೀರಿ ಬಿರುದಾವಳಿಗಳನ್ನು ಪೊಗಳಿಸಿಕೊಳ್ಳುತ್ತ ಕೋಪದಿಂದ ಸಿಡ್ಮಗರ್ಜನೆಯನ್ನು ಮಾಡಿಕೊಂಡು ಕೋಟೆಯ ಕಡೆಗೆ ಸಾಗಿ ಬಂದನು. ಅವನೊಡನೆ ಅಂತಕನ ಸೇನೆಯಂತೆ ಭಯಂಕರವಾದ ಮಹಾಚತುರಂಗಸೈನ್ಯವು ವಾದ್ಯಗಳನ್ನು ಭೋರ್ಗರಿಸುತ್ತ ಬಂದಿತು. ಎಂದು ಚೆನ್ನಬಸವೇಶನು ನುಡಿದನೆಂಬಲ್ಲಿಗೆ ಏಸೆ ಅಧ್ಯಾಯವು ಸಂಪೂರ್ಣವು.

೩ ನೆ ಅಧ್ಯಾಯವು.

ಕಮಲಾಕ್ಷದೇವಸೇನಾಯುದ್ಧವು.

ಎಲೆ ಸಿದ್ಧರಾಮೇಶನೆ ಕೇಳು,— ವಿದ್ಯುನ್ಮಾಲಿಯೊಡನೆ ಬಂದ ಮಹಾದೈತ್ಯಸೇನೆಯು ಕೋಪಾಟೋಪದಿಂದ ಕೋಟೆಯನ್ನೇರಿ ಅಲ್ಲಿದ್ದ

ದೇವತಾಸ್ತ್ರೋಮವನ್ನೆಲ್ಲ ತೋಳಗಳು ಕುರಿಗಳನ್ನಟ್ಟಿಕೊಂಡು ಹೋದಂತೆ ಅಟ್ಟಿ ಓಡಿಸಿ, ಕೋಟೆಯ ಹೊರಗಣ ಬೈಲನ್ನು ಸೇರಿತು. ಅಲ್ಲಿ ದಿವಿಜದಾನವ ಸೈನ್ಯಗಳೆರಡಕ್ಕೂ ಮಹಾಯುದ್ಧವು ನಡೆದಿತು. ಎರಡು ಕಡೆಯಲ್ಲಿಯೂ ಆನೆಗೆ ಆನೆ ಕುದುರೆಗೆ ಕುದುರೆ ರಥಕ್ಕೆ ರಥ ಕಾಲಾಳ್ಗಳಿಗೆ ಕಾಲಾಳುಗಳು ಸಂಧಿಸಿ, ತಮ್ಮ ತಮ್ಮ ಆಯುಧಗಳಿಂದ ಕಡಿದಾಡಿದರು. ರಕ್ಕಸರ ಅತುಳಪ್ರತಾಪವು ದೇವಸೇನೆಯನ್ನು ಮುಖಗೆಡಿಸಿತು. ಅರಿಗಳಿಗೆ ಬೆನ್ನುಬಾಚಿ ದೇವತೆಗಳು ಮುರಿದೋಡಿ ಇಂದ್ರನ ಮರೆಹೊಕ್ಕರು. ಆಗ ದಿಕ್ಪಾಲಕರೆಲ್ಲರೂ ತಮ್ಮ ಸೇನೆಗೆ ಧೈರ್ಯಗೊಟ್ಟರು. ಇಂದ್ರನು ತಾನೇ ಶತ್ರುಗಳಿಗೆ ಇದಿರಾದನು. ರಾಕ್ಷಸರಲ್ಲಿ ಪ್ರಬಲನಾದ ಜಂಭಾಸುರನು ಇಂದ್ರನ ಮುಂಗಡೆಗೆ ಬಂದನು. ಈ ಉಭಯವೀರರಿಗೂ ಬಂದು ಗಳಿಗೆಯೊಳಗಾಗಿ ನಡೆದ ಯುದ್ಧವು ಉಭಯಸೇನೆಯನ್ನೂ ತಲೆದೂಗುವಂತೆ ಮಾಡಿತು. ಇಂದ್ರನ ಬಾಣಗಳು ತ್ರಿಪುರಕ್ಕೆಲ್ಲ ಬಾಣದ ಹಂದರವನ್ನು ಕಟ್ಟಿದಂತೆ ಮಾಡಿದುವು. ಜಂಭನು ಬಿಟ್ಟ ಬಾಣಗಳು ದೇವಸೇನೆಯ ಮೇಲೆಲ್ಲ ಬಿಸಿಲು ನುಗ್ಗುವುದಕ್ಕೂ ಎಡೆಗೊಡದಂತೆ ಕವಿದುಕೊಂಡುವು. ಇಂದ್ರನು ಜಂಭನ ಎದೆಗೆ ಗುರಿಕಟ್ಟಿ ಹೊಡೆದ ೧೫ ಬಾಣಗಳನ್ನು ಜಂಭನು ಮಧ್ಯದಾರಿಯಲ್ಲೇ ಕತ್ತರಿಸಿ, ಇಂದ್ರನ ಎದೆಗೆ ಗುರಿಕಟ್ಟಿ ೫೫ ಬಾಣಗಳನ್ನು ತಾನು ಬಿಟ್ಟನು. ಅವನ್ನು ಇಂದ್ರನು ಕಡಿದು ಮತ್ತೆ ೫೫ ಬಾಣಗಳನ್ನು ಬರಸೆಳೆದು ಬಿಡಲು, ಅವು ದೈತ್ಯನ ಹೊಟ್ಟೆಯನ್ನು ಹೊಕ್ಕು ಬೆನ್ನಿನಲ್ಲಿ ಮೂಡಿ ಹೊರಹೋದುವು. ಅದರಿಂದ ಜಂಭನು ನಿಶ್ಚೇತನನಾಗಿ ಮಲಗಲು, ಇಂದ್ರನು ಮತ್ತೆ ೧೫ ಬಾಣಗಳನ್ನು ಬಿಟ್ಟು ಅವನ ರಥ ಸಾರಥಿ ಹಯಾದಿಗಳನ್ನೆಲ್ಲ ತರಿದುರುಳಿಸಿದನು. ಆಗ ದೈತ್ಯಸೇನೆಯು ಬೇರೊಂದು ರಥವನ್ನು ಅಣಿಮಾಡಿ ಅದರಲ್ಲಿ ಜಂಭನನ್ನು ಮಲಗಿಸಿಕೊಂಡುಹೋದರು. ಇಂದ್ರನು ಉಳಿದ ರಾಕ್ಷಸರಮೇಲೆಲ್ಲ ಬಾಣಗಳನ್ನು ಕರೆದು, ಆನೆಯು ಹಿಂಡಿಗೆ ನುಗ್ಗಿದ ಸಿಹ್ಮದಂತೆ ಗರ್ಜಿಸಿ ಪ್ರಳಯವನ್ನುಂಟುಮಾಡುತ್ತಿದ್ದನು. ಇವನ ಶೌರ್ಯಾಡಂಬರವನ್ನು ವಿದ್ಯುನ್ಮಾಲಿಯು ಕೇಳಿ ಕೆರಳಿ ಇದಿರಾಗಿ,— ಎಲೊ ನೀಚನೆ ! ನೀನೆಯೊ ನಮ್ಮ ಜಂಭಾಸುರನನ್ನು ನಿಶ್ಚೇತನ ಗೊಳಿಸಿದವನು ? ನೀನೆಯೋ ದೇವರಾಜ ? ನಮ್ಮ ತ್ರಿಪುರವನ್ನು ಸು

ಡಿಸುವುದಕ್ಕಾಗಿ ಶಿವನಿಗೆ ಚಾಡಿಹೇಳಿ ಕರೆದುಕೊಂಡು ಬಂದ ಅಧಮನೋ ನೀನು ? ನಮ್ಮಮೇಲೆ ಕೈಮಾಡಿ ಮೊದಲು ನಿನ್ನ ಪ್ರಾಣವನ್ನುಳುಹಿಕೊ; ಭೂಮಿಯಲ್ಲಿ ಬಡಹಾರ್ವರು ಯಜ್ಞದಲ್ಲಿ ಕೊಡುವ ಹವಿರ್ಭಾಗವನ್ನೆಲ್ಲ ನುಂಗಿ ನುಂಗಿ ಕೊಬ್ಬಿರುವ ನೀನು, ಆ ಹವಿಸ್ಸನ್ನು ನುಂಗುವ ಹಾಗೆ ಈ ಯುದ್ಧವೂ ಸುಲಭವೆಂದು ಯೋಚಿಸಿ ಬಂದೆಯೋ ? ದೇವವಾರಾಂಗನೆಯರೊಡನೆಕೂಡಿ ಚೀಕ್ಕೂಳೆವೆಗಳಿಂದ ಜಲಕ್ರೀಡೆಯನ್ನಾಡುವಂತೆ ಬಾಣದೇಟು ಸದರವೆಂದು ತಿಳಿದು ಇಲ್ಲಿಗೆಬಂದೆಯಾ ? ಎಂದು ನಾನಾವಿಧವಾಗಿ ಮೂದಲಿಸುತ್ತ, ಇಂದ್ರನ ಮೇಲೆ ಬಾಣಗಳ ಮೊತ್ತವನ್ನು ಸುರಿಸಿದನು. ಅವುಗಳನ್ನೆಲ್ಲ ಇಂದ್ರನು ತರಿದು, ಮತ್ತೆ ದೈತ್ಯನ ಮೇಲೆ ನಿಶಿತಾಸ್ತ್ರಗಳನ್ನು ಬಿಟ್ಟನು. ಅದನ್ನು ಕಂಡು ವಿದ್ಯುನ್ಮಾಲಿಯು ಕೆರಳಿ, ಮಹಾ ತೀಕ್ಷ್ಣಾಸ್ತ್ರಗಳು ಮೂರನ್ನು ಬಿಟ್ಟು ಇಂದ್ರನ ಎದೆಯನ್ನು ನಟ್ಟು ಮೂರ್ಛೆಗೊಳಿಸಿ ಉರುಳಿಸಿದನು. ದೇವಸೇನೆಯು ಘೋಳ್ ಎಂದಿತು. ಬಳಿಕ ವಿದ್ಯುನ್ಮಾಲಿಯು ಮಹಾಕೋಪದಿಂದ ಉಳಿದ ದೇವಸೇನೆಯ ಮೇಲೂ ಬಿದ್ದನು. ಆಗ ಷಣ್ಮುಖನು ಅವನಿಗಿದಿರಾಗಿ ಥನುಷ್ಟಂಕಾರವನ್ನು ಮಾಡಿ, ರಾಕ್ಷಸರ ಎದೆಯನ್ನೆಲ್ಲ ಗಡಗುಟ್ಟಿಸಿದನು. ಆದರೂ ವಿದ್ಯುನ್ಮಾಲಿಯು ಬೆದರದೆ ನಿಂತಿರುವುದನ್ನು ಕುಮಾರಸ್ವಾಮಿಯು ನೋಡಿ_ " ಎಲೆಖೂಳ ರಾಕ್ಷಸನೆ ! ನಾನಾರು ತಿಳಿಯೆಯಾ? ನಿಮ್ಮಪ್ಪನ ದರ್ಪವನ್ನು ಮುರಿದು ಯಮಸದನಕ್ಕೆ ಕಳುಹಿದ ಮಹಾಸೇನಾನಿಯೇ ನಾನಲ್ಲವೆ ? ನಿನ್ನನ್ನು ಹುಟ್ಟಿಸಿದವನ ಗತಿಯೇ ಹಾಗಾಗಿರುವಾಗ ನೀನು ಏನನ್ನು ತಾನೇಮಾಡಬಲ್ಲೆ ? ಅವನ ಗತಿಯನ್ನು ನೀನೂ ತಂದುಕೊಳ್ಳದೆ ಶರಣಾಗತನಾಗಿ, ಇನ್ನೂ ನಾಲ್ಕು ದಿನ ಭೂಮಿಯಲ್ಲಿ ಬದುಕು ; ಇಲ್ಲದೆ ಹೋದರೆ ನಿಮ್ಮಪ್ಪನಿಗೆ ಬಿಟ್ಟಂತಹ ಬಾಣಗಳನ್ನೇ ಈಗ ನಿನಗೂ ಬಿಡುತ್ತೇನೆ ತಾಳಿಕೋ " ಎಂದು ಹೇಳಿ, ಬಾಣವನ್ನು ತೊಟ್ಟನು. ವಿದ್ಯುನ್ಮಾಲಿಯು ಕೆರಳಿ_ ಆಹಾ ! ನಾನಾಗಿ ಹುಡುಕಿಕೊಂಡುಹೋಗುತ್ತಿದ್ದ ಬಳ್ಳಿಯು ಕಾಲಿಗೆ ಸಿಕ್ಕಿದಂತಾಯಿತು ! ನಮ್ಮಪ್ಪನನ್ನು ಕೊಂದವನಿಗೆ ಮುಯ್ಯಿಗೆ ಮುಯ್ಯಾಡಿ ಹೆಗೆತನವನ್ನು ತೀರಿಸಿಕೊಳ್ಳಬೇಕೆಂದು ನಾವು ಯೋಚಿಸಿಕೊಂಡಿದ್ದರೂ, ತಿರಿಕನ ಮಗನಾದ ನೀನು ಇಷ್ಟರೊಳಗೇ ಸತ್ತು ಹೋಗಿರಬಹು

ದೆಂದು ನಾವು ಯೋಚಿಸಿದ್ದೆವು; ಆದರೆ ನೀನಿನ್ನೂ ಒದುಕಿದ್ದುದು ನಮ್ಮ ಗಳ ಪುಣ್ಯವೇ ಸರಿ; ಸುಕೃತವು ಕೈಗೂಡುವ ಕಾಲಕ್ಕೆ ಅವಸಿದ ವಸ್ತು ವೆಲ್ಲ ತಾನಾಗಿಯೇ ಕೈಗೂಡುವುದು ಹೀಗೆಯೇ" ಎಂದು ಗರ್ವೋಕ್ತಿಯ ನ್ನಾಡುತ್ತ, ಷಣ್ಮುಖನಮೇಲೆ ಬಾಣಗಳನ್ನು ತೊಟ್ಟನು. ಅಷ್ಟರಲ್ಲಿ ಕು ಮಾರನು— ಎಲೆ ಮೂರ್ಖನೆ! ಇನ್ನು ಸ್ವಲ್ಪ ಹೊತ್ತಿನೊಳಗಾಗಿ ನಿನ್ನ ತ್ರಿಪುರಗಳೆಲ್ಲ ಧೂಳೀಪಟಲವಾಗಿ ಹೋಗುವವು; ಒರಿಯಮಾತಿನಲ್ಲಿ ನಾನು ಕಾಲವನ್ನು ಕಳೆವವನಲ್ಲ; ನಿನ್ನ ಹೆಮ್ಮೆಯು ನನ್ನ ಬಾಣದ ರುಚಿಯನ್ನು ನೋಡಲಿ" ಎಂದು ಹೇಳಿ, ಮಹಾಸ್ತ್ರವೊಂದನ್ನು ಬತ್ತಳಿಕೆಯಿಂದ ತೆಗೆದು ಸಿಂಜಿನಿಗೆ ಹೂಡುವಲ್ಲಿ ಅದು ಹತ್ತಾಯಿತು; ಹೊರಕ್ಕೆ ಹೊಡು ತ್ತಲೂ ನೂರಾಯಿತು, ಹಜ್ಜೆಹಜ್ಜೆಗೆ ಹೆಚ್ಚುತ್ತ ಲಕ್ಷೋಪಲಕ್ಷವಾಗಿ ರಾಕ್ಷಸನ ಸೇನೆಯನ್ನು ವಮಿಸ್ತಿತು. ಇದನ್ನ ಕಂಡು ಎರಮುಕಚೆಯ ಸೈನ್ಯವೂ ತಲೆದೂಗಿತು. ಅದನ್ನು ವಿಮ್ಯುನ್ಮಾಲಿಯು ಕಂಡು, ಅತ್ಯಂತ ರೋಷಗೊಂಡು, ಅವಕ್ಕೆ ಇಮ್ಮಡಿಯಾವಷ್ಟು ಬಾಣಗಳನ್ನು ಕ್ಷಣಕಾಲ ದಲ್ಲಿ ಪ್ರಯೋಗಿಸಿ ಸಿಂಹಗರ್ಜನೆಯನ್ನು ಮಾಡಿದನು. ಷಣ್ಮುಖನು ಅವನ ಪರಾಕ್ರಮವನ್ನು ಶ್ಲಾಘಿಸಿ, ಮತ್ತೆ ಬದ್ಧಭ್ರಕುಟಿಯಾಗಿ ವೀರಾವೇಶದಿಂದ ತೀಕ್ಷ್ಣಬಾಣಾವಳಿಗಳನ್ನ ಸುರಿಸಿದನು. ಅವು ಭೂವ್ಯಂತರಿಕ್ಷಗಳನ್ನೆ ಲ್ಲ ಬಂದುಗೊಳಿಸುವಂತೆ ತುಂಬಿ, ದೈತ್ಯರ ಸೇನೆಯನ್ನು ಮುತ್ತಿ, ಚುಚ್ಚಿ, ಕೊರೆದು, ಇರಿದು, ಲಯಗೊಳಿಸುತ್ತ ಒಂದುವು. ವಿಮ್ಯುನ್ಮಾಲಿಯು ಮತ್ತೆ ಕೆರಳಿ, ಎಲೊ ವೀರನೆ! ಇದೋ ನಿನ್ನ ಬಾಣಕ್ಕೆ ೧, ವಾಹನಕ್ಕೆ ೨, ಆರು ಮೊಗಗಳಿಗೆ ೬, ಬೆಲ್ಲಿಗೆ ೪, ತೋಳುಗಳಿಗೆ ೧೨, ಎಂದು ಎಣಿಸುತ್ತ ಬಾಣಗಳನ್ನು ಪ್ರಯೋಗಿಸಿದನು. ಷಣ್ಮುಖನು ನೋಡಿ ನಸುನಗುತ್ತ, ಎಲೆ ಖೂಳನೆ! ಇದೋ ನಿನ್ನ ಬಾಣಗಳಿಗೆ ೧, ನಿನ್ನ ಬಿಲ್ಲಿಗೆ ೨, ನಿನ್ನ ಸಾರಥಿ ಗೆ ೪, ನಿನ್ನ ಕುದುರೆಗಳಿಗೆ ೮, ನಿನ್ನ ರಥಕ್ಕೆ ೧೬, ನಿನ್ನ ಎದೆಯನ್ನು ಸೀ ಳುವುದಕ್ಕೆ ೩೨, ನಿನ್ನೊಡನೆ ಬಂದಿರುವ ಸೇನೆಗೆ ೬೪, ನಿನ್ನ ತ್ರಿಪುರಗಳಿಗೆ ೧೨೮, ಉಳಿದ ರಾಕ್ಷಸಕುಲಕ್ಕೆಲ್ಲ ೨೫೬, ಎಂದು ಎಣಿಸಿ ಎಣಿಸಿ ಪ್ರಯೋಗಿಸಿದನು. ಅವುಗಳ ಶಕ್ತಿಯನ್ನೇನು ಹೇಳಲಿ! ದೈತ್ಯನ ಸಾರಥಿಯೂ ಕುದುರೆಗಳೂ ಸತ್ತುರುಳಿದುವು. ರಥವು ಪುಡಿಯಾಯಿತು. ರಕ್ಕಸನ ಎದೆಯಿಂದ ರಕ್ತ

ದ ಪ್ರವಾಹವು ಹೊರಟಿತು. ಅವನ ಸೇನೆಯು ಕುಯ್ಲಾಗಿ ಅರಿಯಮೇಲೆ ಬಿದ್ದಿರುವ ಪೈರಿನಂತೆ ಯುದ್ಧಾಂಕಣದಲ್ಲಿ ಬರಗಿತು. ತ್ರಿಪುರದ ಕೋಟೆಯು ಖಣಿಖಣಿಲನೆ ಶಬ್ದಮಾಡಿತು. ಈತನೇ ಧನುರ್ವಿದ್ಯಾಮೃತ್ಯುಂಜಯನು! ಈತನೇ ಬಾಣಲೋಕಸೃಷ್ಟಿಕರ್ತನಾದ ಬ್ರಹ್ಮನು! ಎಂದು ಸಕಲರೂ ಷಣ್ಮುಖಸ್ವಾಮಿಯನ್ನು ಕೊಂಡಾಡಿದರು. ಅಷ್ಟರಲ್ಲಿ ವಿದ್ಯುನ್ಮಾಲಿಯು ಮತ್ತೆ ಚೇತರಿಸಿಕೊಂಡು, ಬೇರೆ ರಥವನ್ನೇರಿ, ಸರ್ಪಾಸ್ತ್ರಗಳನ್ನು ಪ್ರಯೋಗಿಸಲು, ಅವನ್ನು ಕುಮಾರನು ಪ್ರತ್ಯಸ್ತ್ರಗಳಿಂದ ಖಂಡಿಸಿ,—ನಿನ್ನ ಮಂತ್ರಾಸ್ತ್ರಗಳ ಆಡಂಬರವೆಲ್ಲ ಮುಗಿಯಿತೆ? ಎಂದು ಹಂಗಿಸಲು, ರಾಕ್ಷಸನು ಕೋಪವೇರಿ, ಮತ್ತೆ ತೀಕ್ಷ್ಣವಾದ ಎಂಟು ಬಾಣಗಳನ್ನು ಬಿಟ್ಟನು. ಷಣ್ಮುಖನು ಅವನ್ನು ದಾರಿಯಲ್ಲೇ ಖಂಡಿಸಿ, ಶಕ್ತ್ಯಾಯುಧವನ್ನು ಪ್ರಯೋಗಿಸಲು, ಅದು ಮಹಾಗ್ನಿಕಣವನ್ನು ಸುರಿಸುತ್ತ ಹೋಗಿ, ಕ್ಷಣಾರ್ಧದಲ್ಲಿ ವಿದ್ಯುನ್ಮಾಲಿಯ ಎದೆಯನ್ನು ಗಿದು ಬೆನ್ನನ್ನು ಸೀಳಿಕೊಂಡು ಹೋಯಿತು. ಕಾಲ್ಬೆಯುಂತೆ ರಕ್ತವು ದೇಹದಿಂದ ಹರಿಯಲು, ವಿದ್ಯುನ್ಮಾಲಿಯು ಮೂರ್ಛೆಗೊಂಡು ಭೂಮಿಯ ಮೇಲೆ ಬಿದ್ದನು. ರಾಕ್ಷಸರು ಅವನನ್ನು ಎತ್ತಿ ರಥವಲ್ಲಿಟ್ಟು ಪಟ್ಟಣಕ್ಕೆ ಸಾಗಿಸಿದರು. ಉಳಿದ ರಾಕ್ಷಸಸೈನ್ಯವನ್ನೆಲ್ಲ ಕುವರನು ಉತ್ತರಿಸಿ, ಜಯಭೇರಿಯ ವಾದ್ಯದೊಡನೆ ಹಿಂತಿರುಗಿದನು. ಅತ್ತ ಕಮಲಾಕ್ಷನು ತನ್ನ ತಮ್ಮನು ಪರಾಜಿತನಾಗಿ ಬಂದನೆಂಬ ಕೋಪದಿಂದ ಘುಡುಘುಡಿಸಿ, ಅಪರಿಮಿತವಾದ ಬಲವನ್ನು ಕೂಡಿಕೊಂಡು, ಅಣ್ಣನಾದ ತಾರಕಾಕ್ಷನಿಂದ ವೀಳಯವನ್ನು ಪಡೆದು, ತ್ರಿಪುರವನ್ನು ಬಿಟ್ಟು ದೇವತೆಗಳ ಮೇಲೆ ಸಾಗಿ ಬಂದನು. ದಿಕ್ಪಾಲಭೈರವನಾದ ಕಮಲಾಕ್ಷನು ಒರುತ್ತಿರುವನು! ನಿರ್ಜರಮೇಘಮಂಡಲವು ಒರುತ್ತಿರುವನು! ಎಂದು ಕಹಳೆಗಳು ಮುಂದೆ ಕೂಗುತ್ತಿದ್ದವು. ಈ ಮಹಾರಾಕ್ಷಸನ ಸೈನ್ಯವು ಸಾಂದ್ರವಾಗಿ ನಿಂತಿರುವ ಮಹಾದೇವಸೇನೆಯಮೇಲೆ ಹೋಗಿ ಬೀಳಲು, ಸಮುದ್ರಸಮುದ್ರಗಳು ಕೂಡಿದಂತೆ ಮಹಾಕೋಲಾಹಲದೊಡನೆ ಭೀಕರವಾಗಿ ತೋರಿತು. ಕರಿತುರಗರಥಪದಾತಿಗಳು ಬಂದನ್ನೊಂದು ಸಂಧಿಸಿ ಧನುಸ್ಸು ಬಾಣ ಕತ್ತಿ ಗದೆ ತೋಮರ ಕುಂತ ಪರಶು ಮುಸಲ ಮೊದಲಾದ ಆಯುಧಗಳಿಂದ ಹೊಡೆ

ದಾಡುತ್ತಿದ್ದುವು. ರಾಕ್ಷಸರು ಕೋರೆದಾಡೆಯನ್ನು ಬಿಟ್ಟು ನಾಲಿಗೆಯನ್ನು ಸೀಳಿ ಮಹಾಗರ್ಜನೆಯನ್ನು ಮಾಡಿ ಮುಂಗಡೆಯ ದೇವಸೇನೆಯನ್ನು ಕೊಚ್ಚುತ್ತ ಬರಲು, ಹಿಂದಿದ್ದ ದೇವತೆಗಳೆಲ್ಲ ಪಲಾಯನಗೊಂಡು, ಅಯ್ಯೋ! ಆ ಹಾಳು ಹರಿಯು ಮೇರುಗಿರಿಯಲ್ಲಿ ಅಡಗಿದ್ದ ನಮ್ಮನ್ನು ಸುಮ್ಮನೆ ಇರಗೊಡಿಸದೆ, ಶಿವನು ನಮ್ಮನ್ನು ಉಳುಹುತ್ತಾನೆ ಬನ್ನಿರಿ ಯೆಂದು ಬೋಧಿಸಿ, ಉಪಾಯದಿಂದ ಕರೆದುಕೊಂಡು ಬಂದು ಈಗ ಈ ಹೆಮ್ಮಾರಿಯ ಬಾಯಿಗೆ ನಮ್ಮನ್ನು ತುತ್ತುಮಾಡಿದನೆ! ಎಂದು ಪ್ರಲಾಪಿಸುತ್ತಿದ್ದರು. ಇದನ್ನು ಶಿವಕುಮಾರನಾದ ವೀರಭದ್ರೇಶನು ಕೇಳಿ, ರೋಷದಿಂದ ಅವರ ಕೆನ್ನೆಗೆ ತಟ್ಟಿ, ಸುಮ್ಮನಿರಿಸಿ, ತಾನೇ ಯುದ್ಧಕ್ಕೆ ನಡೆದನು. ಇದೋ ತಾರಕಾರಿ ಬಂದನು! ಇದೋ ದಕ್ಷಾಧ್ವರಧ್ವಂಸಿ ಬಂದನು! ಇದೋ ರಾಕ್ಷಸಗಿರಿವಜ್ರನು ಬಂದನು! ಎಂದು ಮೊದಲಾಗಿ ಸ್ತುತಿಪಾಠಕನು ಮುಂದೆ ಹೊಗಳುತ್ತಿದ್ದರು. ವೀರಭದ್ರನ ಸೇನೆಯು ಪ್ರಚಂಡರಾಕ್ಷಸಸೇನೆಯಮೇಲೆ ಬಿದ್ದಿತು. ಚೂಣಿಯವರ ಕೈ ಕೈ ಪತ್ತಿತು. ವೀರೇಶನು ನಿಸ್ಸಾಣವನ್ನು ಮಾಡಿ, ಹಸ್ತದ ಕತ್ತಿಯನ್ನು ಜಳಪಿಸಿ, ರಕ್ಕಸರ ಮುಂಗಡೆಗೆ ಹೋಗಿ, —"ಸಣ್ಣಸಣ್ಣ ನೊರಜುಗಳೆಲ್ಲ ದಾರಿ ಬಿಡಿ, ನಿಮ್ಮಲ್ಲಿ ಯಾವುಬಲವುಳ್ಳ ವೀರರುಗಳು ಯಾರಾದರೂ ಇದ್ದರೆ ಮುಂದೆ ಬನ್ನಿರಿ, ನಿಮ್ಮ ಹೊಟ್ಟೆಗಳನ್ನು ಒಗಿದು ರಕ್ತವನ್ನೂ ಕರುಳನ್ನೂ ಭೂತಗಣಕ್ಕೆ ಕೊಟ್ಟು ತೃಪ್ತಿಪಡಿಸುತ್ತೇನೆ" ಎಂದು ಹೇಳುತ್ತ, ಮಹಾಶೌರ್ಯದಿಂದ ರಕ್ಕಸರ ತಲೆಗಳನ್ನು ಚಂಡಾಡುತ್ತ ನುಗ್ಗಿದರು. ಕಾಡಿಗೆ ನುಗ್ಗಿದ ಕಿಚ್ಚಿನಂತೆಯೂ, ಸಮುದ್ರದಲ್ಲಿಬೀಯುವ ಬಡಬಾಗ್ನಿಯಂತೆಯೂ, ಕ್ಷಣಕಾಲವೂ ವಿರಾಮವಿಲ್ಲದೆ ವೀರೇಶನ ಕೈಕತ್ತಿಯು ರಕ್ಕಸರ ಚತುರಂಗ ಬಲವನ್ನು ಆಹುತಿತೆಗೆದುಕೊಳ್ಳುತ್ತಿದ್ದಿತು. ಈಪ್ರಳಯವನ್ನು ರಾಕ್ಷಸಸೇನಾಪ್ರಮುಖರು ನೋಡಿ, ಇವನೆಯೋ ಪ್ರಳಯಕಾಲದ ರುದ್ರ? ಎಂದು ಕೇಳುತ್ತ, ತಮ್ಮ ಕೊಟ್ಯಂತರ ಸೈನ್ಯವನ್ನು ಬಿಂಬೇಬಾರಿಗೆ ವೀರೇಶನ ಮೇಲೆ ನುಗ್ಗುವಂತೆ ಅಪ್ಪಣೆ ಮಾಡಿ, ತಾವುಗಳೂ ಮಹಾಭ್ರಟದಿಂದ ಮುತ್ತಿದರು. ಆದರೇನು? ಅಷ್ಟೊಂದುಸೇನೆಯೂ ವೀರೇಶನ ಬಳಿಗೆ ಬರುವಷ್ಟರಲ್ಲೇ ದೀಪಕ್ಕೆರಗಿದ ಪತಂಗದ ಹುಳುವಿನಂತಾದುವು. ಗರುಡನಮೇ

ಲೆ ಬಿದ್ದ ಸರ್ಪಗಳಂತಾದುವು. ಸಿಹ್ಮವನ್ನು ಕೆಣಕಿದ ಆನೆಯಂತಾದುವು, ರಕ್ಕಸರ ದೇಹಖಂಡ ಮಾಂಸ ರಕ್ತಗಳರಾಶಿಗಳನ್ನು ತಿಂದು ತೇಗಿ ಶಾಕಿನಿ ಡಾಕಿನಿ ಭೂತಬೇತಾಳಾದಿಗಳು ವೀರಭದ್ರೇಶನ ಕೀರ್ತಿಯನ್ನುಕೊಂಡಾಡಿ ಕುಣಿಯುತ್ತಿದ್ದವು. ಉಳಿದ ರಕ್ಕಸರು ವೀರೇಶನ ಪರಾಕ್ರಮವನ್ನು ಕಂಡು ಮೂಗಿನ ಮೇಲೆ ಬೆರಲಿಟ್ಟು ತಲೆಯನ್ನು ತೂಗಾಡಿದರು. ದೇವತೆಗಳೆಲ್ಲರೂ ಜಯಸ್ಫೋಷಮಾಡಿ ಆನಂದಿಸಿದರು. ಅಷ್ಟರಲ್ಲಿ ಕಮಲಾಕ್ಷನು ತನ್ನ ಸೇನಾಸ್ತೋಮವೆಲ್ಲವೂ ವೀರಭದ್ರೇಶನಿಂದ ಲಯಗೊಂಡುದನ್ನು ಕಂಡು, ಆ ತೀವ್ರಾವೇಶದಿಂದ ರಥವನ್ನು ವೀರೇಶನ ಮುಂಗಡೆಗೆ ಸಾಗಿಸಿ, ಧನುರ್ಬಾಣಗಳನ್ನು ಕೈಯಲ್ಲಿ ಪಿಡಿದು, ವಿಾಸೆಯನ್ನು ಹುರಿಮಾಡಿ ಗರ್ಜಿಸಿ,— ಎಲೊ ಶೂರನೆ ! ನೀನೆಯೋ ವೀರಭದ್ರೇಶನೆಂಬವನು ? ಇದುವರೆಗೆ ಸಾಧಾರಣಸೇನೆಯನ್ನು ಕೊಂದ ನಿನ್ನ ಹೆಮ್ಮೆಯನ್ನು ಇನ್ನು ಮರೆತುಬಿಡು; ತ್ರಿಪುರವನ್ನು ಬಡದಕ್ಷನ ಯಾಗಶಾಲೆಯೆಂದು ತಿಳಿದು ಕೊಂಡೆಯೊ ? ಎಂದು ಮೂದಲಿಸುತ್ತ, ಗುರಿಯಿಟ್ಟು ಮೂವತ್ತೆಂಟು ಬಾಣಗಳನ್ನು ಪ್ರಯೋಗಿಸಿದನು. ವೀರೇಶನು ರಕ್ಕಸನ ಕೊಬ್ಬಿನ ಮಾತನ್ನು ಕೇಳಿ ನಕ್ಕು, ಥಟ್ಟನೆ ಬಂದೇ ನಿಶಿತಾಸ್ತ್ರವನ್ನು ಬಿಟ್ಟು ಆ ಬಾಣಗಳನ್ನೆಲ್ಲ ಮಧ್ಯದಲ್ಲೇ ಖಂಡಿಸಿ, ಮತ್ತೆ ಧನುಷ್ಟಂಕಾರವನ್ನು ಮಾಡಿ, ಆ ಶಬ್ದದಿಂದಲೇ ದನುಜಾಳಿಯ ಎದೆಯನ್ನು ಬಿರಿಯಿಸಿ, ಮತ್ತೊಂದು ಬಾಣವನ್ನು ದೈತ್ಯನ ಎದೆಗೆ ಗುರಿಯಿಟ್ಟು ಹೊಡೆದು " ಇದೊ ಬಡಹಾರ್ವದಕ್ಷನನ್ನು ಕಡಿದ ನನ್ನ ಶೌರ್ಯವನ್ನು ನೀನೂ ಸ್ವಲ್ಪ ನೋಡು " ಎಂದು ಹೇಳಿ, ಗರ್ಜಿಸಿದನು. ಕಮಲಾಕ್ಷನು ಆ ಯೇಟಿನಿಂದ ಗಾಯವಡೆದು ಕಂಪಿಸಿ, ಮತ್ತೆ ಧೈರ್ಯದಿಂದ ವೀರೇಶನ ಮೇಲೆ ಬಾಣದ ಮಳೆಯನ್ನು ಕರೆದನು. ಆಗ ವೀರೇಶನು ಕೆರಳಿ, ಕಣ್ಣಿನಿಂದ ಕಿಡಿಗಳನ್ನು ಸುರಿಸುತ್ತ ಹೂಂಕರಿಸಿ, ಎಲೊನೀಚನೆ ! ನನ್ನೊಡನೆ ಇಷ್ಟುಕಾಲ ಸೆಣಸುವುದಕ್ಕೆ ನೀನೆಷ್ಟರವನು ! ಎಂದು ಹೇಳಿ, ನಿಶಿತಾಸ್ತ್ರವೊಂದನ್ನು ತೆಗೆಯುವಷ್ಟರಲ್ಲಿ, ದೈತ್ಯನು ಒತ್ತಳಕೆಯಿಂದ ಮಹಾಶಕ್ತ್ಯಾಯುಧವನ್ನು ತೆಗೆದು ಗರಗರನೆ ತಿರುಗಿಸಿ " ಎಲೊ ವೀರನೇ ! ಇದು ನಿನ್ನನ್ನು ಸುಟ್ಟುಹಾಕದೆ ಬಿಡುವುದಿಲ್ಲ ; ನಿನ್ನ ಪ್ರಾಣವನ್ನುಳುಹಿಕೊಳ್ಳುವುದಕ್ಕೆ ನಿಮ್ಮಪ್ಪನನ್ನು ಬರಹೇಳು " ಎಂದು

ಮಹಾಭ್ರಷ್ಟವನ್ನು ಮಾಡಿ, ವೀರೇಶನ ಮೇಲೆ ಪ್ರಯೋಗಿಸಿದನು. ಅದು ಅಲಗಿನಿಂದ ಮಹಾಗ್ನಿವರ್ಷವನ್ನು ಕರೆಯುತ್ತ ಭೀಕರವಾಗಿ ಬರುತ್ತಿರಲು, ಉಭಯಪಕ್ಷದ ಸೇನೆಯೂ ಅದನ್ನು ನೋಡಲಾರದೆ ಕಣ್ಣನ್ನು ಮುಚ್ಚಿಕೊಂಡಿತು. ಆಗ ವೀರಭದ್ರೇಶನು ಕ್ರೂರಗಳಾದ ೫ ಅಸ್ತ್ರಗಳನ್ನು ಪ್ರಯೋಗಿಸಿ, ಶಕ್ತ್ಯಾಯುಧವನ್ನು ತುಂಡುಮಾಡಿ ಕೆಡಹಿದನು. ಒಡನೆಯೇ ಮತ್ತೊಂದು ಮಹಾಸ್ತ್ರವನ್ನು ಬಿಟ್ಟು, ಅತುಳಕಾರ್ಯಾಟೋಪದಿಂದಾಭ್ರಷ್ಟಿಸಿ, ಕಮಲಾಕ್ಷನ ಎದೆಗೆ ಗುರಿಯಿಟ್ಟು ಹೊಡೆದನು. ಅದು ಕ್ಷಣಮಾತ್ರದಲ್ಲಿ ರಕ್ಕಸನನ್ನು ನಟ್ಟು ಅವನ ಶರೀರವನ್ನೇ ಆಕಾಶಕ್ಕೆ ಹಾರಿಸಿಕೊಂಡು ರಕ್ತಸ್ರವಣವನ್ನು ಮಾಡಿಸುತ್ತ ಹೋಗಿ ತ್ರಿಪುರದಲ್ಲಿ ತಾರಕಾಕ್ಷನ ಇದಿರಿಗೆ ಬಿಸುಡಿತು. ಕಂಠಗತಪ್ರಾಣನಾಗಿ ಮೂರ್ಛೆಯೊಂದಿ ತನ್ನ ಮುಂದೆ ಬಿದ್ದ ತಮ್ಮನನ್ನು ತಾರಕಾಕ್ಷನು ನೋಡಿ, ಖಿನ್ನನಾಗಿ, ಕೆಣಕಿದ ಸಿಂಹದಂತೆ ಮಹಾಗರ್ಜನೆಯನ್ನು ಮಾಡಿ, ಅತ್ತಿತ್ತ ಕುಳಿತಿರುವ ತನ್ನ ಸಭಾಪ್ರಮುಖರನ್ನೆಲ್ಲ ದುರುದುರನೆ ನೋಡಿದನು. ಅವರಲ್ಲಿದ್ದ ಶಿಂಶುಮಾರನೆಂಬ ತಾರಕಾಕ್ಷನ ವೈಭವನನು ಎದ್ದು, ಬಾವನಿಗೆ ಕೈಮುಗಿದು_" ನನಗೆ ಅಪ್ಪಣೆಯನ್ನು ಮಾಡಿದರೆ ತ್ರಿಲೋಕದಲ್ಲಿರುವ ಸುರನರ ಭುಜಗರ ತಲೆಯನ್ನಿಲ್ಲ ತರಿದು ತಂದೊಪ್ಪಿಸುತ್ತೇನೆ, ಹರಿಬ್ರಹ್ಮರುಗಳನ್ನಾದರೂ ಕಟ್ಟಿ ತರುತ್ತೇನೆ, ಕಡೆಗೆ ಶಿವನು ಬಂದರೂ ಅವನನ್ನೂ ಶಕ್ತಿಗುಂದಿಸುತ್ತೇನೆ, ವೀಳಯವನ್ನು ಕೊಟ್ಟು ನನ್ನ ಪರಾಕ್ರಮವನ್ನು ಪರೀಕ್ಷಿಸು" ಎಂದು ಬಿನ್ನೈಸಲು, ತಾರಕಾಕ್ಷನು ವೈಭವನ ಶೌರ್ಯವಚನಕ್ಕೆ ಸಂತೋಷಿಸಿ, ಅವನಿಷ್ಟದಂತೆಯೇ ಸಕಲಸೈನ್ಯದೊಡನೆ ಯುದ್ಧಕ್ಕೆ ತೆರಳಲು ಅವನಿಗೆ ಅಪ್ಪಣೆಯನ್ನು ಕೊಟ್ಟು ಕಳುಹಿದನು; ಎಂದು ಚೆನ್ನಬಸವೇಶನು ನುಡಿದ ನೆಂಬೆಲ್ಲಿಗೆ ಮೂರನೆ ಅಧ್ಯಾಯವು ಮುಗಿದುದು.

೪ ನೆ ಅಧ್ಯಾಯವು.

ತ್ರಿಪುರಸಹ್ಯಾರವು.

ಎಲೆ ಸಿದ್ಧರಾಮೇಶನೆ ಕೇಳು— ಕ್ರೂರಶಿಂಶುಮಾರನು ತನಗೆ ಬೇಕಾದಷ್ಟು ಚತುರಂಗಸೈನ್ಯವನ್ನು ಕೂಡಿಕೊಂಡು ಯುದ್ಧಾಂಗಣದ ಕಡೆಗೆ

ಹೊರಟನು. ಆ ದೈತ್ಯನ ದೇಹದ ಆಕೃತಿಯನ್ನು ವರ್ಣಿಸುವುದಕ್ಕೇ ಅ ಸಾಧ್ಯವು. ಅವನ ಹೊಟ್ಟೆಯು ಬ್ರಹ್ಮಾಂಡಕಟಾಹದಂತಿದ್ದಿತು. ತಲೆಯು ಆಕಾಶಮಂಡಲವನ್ನು ಸೋಂಕುತಿದ್ದಿತು. ಕಾಲ್ಗಳ ತುಳಿತಕ್ಕೆ ದರೆಯು ಕಂಪಿಸುತ್ತಿದ್ದಿತು. ಶಿವಶಿವಾ ! ಇವನನ್ನು ಹೆತ್ತ ಮಾತೆಯಾರೋ ! ಎಂದು ಜಗದ ಜನವೆಲ್ಲ ಆಶ್ಚರ್ಯಪಡುತ್ತಿದ್ದಿತು. ಅವನ ದೇಹದ ಆಕೃತಿಯು ದೊಡ್ಡದಾಗಿದ್ದುದು ಮಾತ್ರವೇ ಅಲ್ಲ; ಅಂಗಗಳೆಲ್ಲ ಪರ್ವತದಂತೆ ಕಠಿನವಾಗಿಯೂ ಇದ್ದುವು. ಸಕಲಲೋಕವನ್ನೂ ತಿಂದು ತೇಗುವ ಶೌರ್ಯವೂ ಇದ್ದಿತು. ಅವನ ಬಣ್ಣವೋ ಅಚ್ಚಕಪ್ಪು ! ಮುಖವೋ ಮಹಾಕ್ರೂರ ! ರೋಮರಾಜಿಯೋ ವಜ್ರಶಲಾಕೆಗಳೇ ! ಕಣ್ಣುಗಳೋ ಅಗ್ನಿಯ ಕುಂಡಗಳೇ ! ಕೋರೆಗಳೋ ಯಮನ ಕರಾಳದಂಷ್ಟ್ರೆಗಳೇ ! ಆಗಿ ತೋರುತ್ತಿದ್ದುವು. ಇಂಥ ಮಹಾದೈತ್ಯನೊಡನೆ ಬರುತ್ತಿದ್ದ ಸೈನಿಕರು ಸಹ ಅವನ ಮಕ್ಕಳಂತೆಯೇ ಕಾಣುತ್ತಿದ್ದರು. ಈ ಘೋರದೈತ್ಯವಾಹಿನಿಯು ಪಟಹ ನಿಸ್ಸಾಳ ಭೇರಿ ತಮ್ಮಟೆ ಮೊದಲಾದ ವಾದ್ಯಗಳನ್ನು ಭೋರ್ಗರಿಸುತ್ತ, ಹಜ್ಜೆಹಜ್ಜೆಗೆ ವೀರನಾದವನ್ನು ಮಾಡಿ ಭುಜಾಸ್ಫಾಲನೆಗೊಳ್ಳುತ್ತ, ಕೈಯಾಯುಧಗಳನ್ನು ಜಳಪಿಸುತ್ತ ಬರುತ್ತಿರಲು, ದೂರದಲ್ಲೇ ದೇವವಾಹಿನಿಯು ಇವರನ್ನು ಕಂಡು ಕಾಲನ್ನು ಹಿಂಜರಿಸಹತ್ತಿತು. ಒಡನೆಯೇ ರಾಕ್ಷಸರು ದೇವತೆಗಳ ಮೇಲೆ ಬಿದ್ದು ಕೂಗಿಸಿಂಪಲೇ ಮೂರ್ಛೆಗೊಳಿಸುತ್ತಲೂ, ಆನೆಗಳನ್ನೇ ರಥಗಳನ್ನೇ ಕುದುರೆಗಳನ್ನೇ ಎಳೆದು ಕೊಂಡು ಗರಗರನೆ ಸುತ್ತಿ ಬೀಸಿ ದೇವತೆಗಳಮೇಲೆ ಎಸೆದು ಸದೆಬಡಿಯುತ್ತಲೂ, ಕಾಲಿನಿಂದ ಝಾಡಿಸಿ, ಕೈಯಿಂದ ಬಡಿದು, ತೊಡೆಗಳಲ್ಲಿರುಕಿ, ತಲೆಯಿಂದ ಗುದ್ದರಿಸಿ, ಮುಷ್ಟ್ಯಯಿಂದ ಗುದ್ದಿ, ದೇವತೆಗಳನ್ನು ಕೆಡಹುತ್ತಲೂ, ಎರಡು ಕೈಗಳಲ್ಲೂ ದೇವತೆಗಳ ಕಾಲ್ಗಳನ್ನು ಹಿಡಿಹಿಡಿದು ಎತ್ತಿಗದೆಗಳನ್ನು ತಿರುಗಿಸಿದಂತೆ ತಿರುಗಿ ಆಕಾಶಕ್ಕೆ ಇಡುತ್ತಲೂ ಲಯಗೊಳಿಸುತ್ತ ಬಂದರು. ದೇವತೆಗಳೆಲ್ಲರೂ ಚದರಿ ಮತಿಗೆಟ್ಟು ನಗುತ್ತ ಓಡಿ ಬಂದು ಶಿವನ ಮುಂಗಡೆಯಲ್ಲಿ ಉದ್ದುದ್ದನಾಗಿ ಬಿದ್ದು,— ಪ್ರಭುವೇ ! ಇಂದಿಗೆ ದೇವತೆಗಳ ಆಟವು ಮುಗಿದಿತು. ಯುದ್ಧದ ಸುದ್ದಿಯು ನಮಗೆ ಇನ್ನೆಂದಿಗೂ ಬೇಡ; ಸದ್ಯಃ ನೀನೇ ಎದ್ದು ಪಾಶುಪತಾಸ್ತ್ರವನ್ನು ತೊ

ಟ್ಟರೆ ನಾವು ಉಳಿವೆವು; ಇಲ್ಲದಿದ್ದರೆ ಪುನಃ ನಮ್ಮ ಹೆಂಡರಮುಖವನ್ನು ನಾವು ನೋಡುವಹಾಗಿಲ್ಲ; ಈಗ ಬಂದಿರುವ ಕಾಳರಾಕ್ಷಸನು ಇದುವರೆಗೆ ಕಾದಿದ ರಕ್ಕಸರಂತಲ್ಲ; ನಾವು ಇದುವರೆಗೂ ಅಂಥ ಭೀಕರರೂಪಿನ ಕ್ರೂರದೈತ್ಯನನ್ನೇ ನೋಡಿರಲಿಲ್ಲ; ನೀಲಗಿರಿಗೇ ಕೈಕಾಲ್ಗಳೇನಾದರೂ ಹುಟ್ಟಿದುವೋ! ಕತ್ತಲೆಯೇ ಪುರುಷಾಕಾರವನ್ನು ಧರಿಸಿ ಬಂದಿರುವುದೋ! ತಿಳಿಯಲಿಲ್ಲ; ಎಂದು ಹೇಳಿಕೊಂಡು ಗೋಳಿಟ್ಟರು. ಶಿವನು ಇದನ್ನು ಕೇಳಿ ನಸುನಗುತ್ತಿರಲು, ವಾಹನನಾದ ಮಹಾವೃಷಭೇಶನು ಘುಡುಘುಡಿಸಿ ಎದ್ದು, "ಛೀ ನೀಚರಿರಾ! ಇದೊಂದು ದೊಡ್ಡಸುದ್ದಿಯೆಂದು ಪರಶಿವನೊತನೆ ಹೇಳಿಕೊಳ್ಳುವುದಕ್ಕೆ ಬಂದಿರಾ? ಸಾಕು; ನಡೆಯಿರಿ; ಎಂದು ಗರ್ಜಿಸಿ,— ಶಿಂಶುಮಾರನ ಮೇಲೆ ಯುದ್ಧಕ್ಕೆ ಹೊರಡಲು ಶಿವಸಪ್ಪಣೆಯನ್ನು ಪಡೆದು ತಾನೇ ಹೊರಟನು. ಮುಂದೆ ವಂದಿಗಳೂ ವಾದ್ಯಗಳೂ ಭೋರ್ಗರೆದುವು. ಕೈಲಾಸಪರ್ವತಕ್ಕೇ ಕಾಲ್ಗಳು ಮೂಡಿ ನಡೆದು ಹೋಗುವಂತೆ ಶುಭ್ರಾಂಗನಾದ ಮಹಾವೃಷಭನು ಕೆಕ್ಕರಿಸಿಕೊಂಡು ದಿಕ್ಕುದಿಕ್ಕುಗಳನ್ನು ನೋಡುತ್ತ ಬಂದು ದೈತ್ಯವಾಹಿನಿಯನ್ನು ನುಗ್ಗಿದನು. ಈ ಅದ್ಭುತವೃಷಭನನ್ನು ನೋಡಿ ರಾಕ್ಷಸರು ಬೆಕ್ಕಸಬೆರಗಾದರು. ಅವರ ನಾಲ್ಕು ಪಾದಗಳಿಂದಲೂ ಕೆರೆವ ಧೂಳಿಯು ಸೂರ್ಯಮಂಡಲವನ್ನೇ ಮುಚ್ಚಿ ಕತ್ತಲೆಗವಿಸಿತು. ಅವರ ಹಣಾತ್ಕಾರಕ್ಕೆ ರಕ್ಕಸರು ಮೂರ್ಛೆಗೊಂಡು ಉರುಳುತ್ತಿದ್ದರು. ಅವರ ಬಾಲದ ಬೀಸುವಿಕೆಯು ರಭಸಕ್ಕೆ ನಕ್ಷತ್ರಗಳು ಕಳೆದು ಬೀಳುತ್ತಿದ್ದುವು. ಅದರ ಕೊಂಬಿನ ತಿವಿತದಿಂದ ರಕ್ಕಸರ ತುಂಡುತುಂಡನೇ ಗಾಯವಡೆದು ಮಡಿಯುತ್ತಿದ್ದಿತು. ಬೆಟ್ಟದ ಗುಂಡುಗಳನ್ನು ಕಾಲಿನಿಂದುರುಳಿಸಿ ಕೊಡುಗಳಿಂದ ವಿಾಟ ರಾಕ್ಷಸಸೈನ್ಯದ ಮೇಲೆ ಉರುಳಿಸಿ ನುಗ್ಗುನೂಚುತ್ತಿದ್ದಿತು. ಮೂಗಿನಲ್ಲಿ ಬಿಟ್ಟ ಉಸುರಿನಿಂದ ಕೊಚ್ಚಿಹೋದ ದನುಜರು ದಿಗಂತದಲ್ಲಿ ಬಿದ್ದು ನರಳುತ್ತಿದ್ದರು. ರಾಕ್ಷಸರು ಬಾಣಗಳನ್ನೂ ಕಲ್ಲುಂಡುಗಳನ್ನೂ ಮರಗಳನ್ನೂ ವೃಷಭೇಂದ್ರನ ಮೇಲೆ ಸುರಿಸುತಿದ್ದರು. ಆದರೇನು? ವಜ್ರದಮೇಲೆ ಬಿದ್ದ ಕಲ್ಲಿನಂತೆ ಅವುಗಳೇ ಜರ್ಝರಿತವಾಗಿ ಹಾರಿಹೋಗುತ್ತಿದ್ದುವು. ಆಯುಧಗಳಿಗೆ ಈ ಬಸವನು ಜಗ್ಗುವುದಲ್ಲವೆಂದು ದೊಡ್ಡದೊಡ್ಡ ಸರಪಳಿಗಳನ್ನೂ ಮಿಳ

ಗಳನ್ನೂ ತಂದು ಕಾಲಿಗೆ ತೊಡರಿಸಿ ಸುತ್ತಿ ಕೆಡಹಬೇಕೆಂದು ರಾಕ್ಷಸರು ಪ್ರಯತ್ನಿಸಿದರು. ಆನೆಯು ತಾವರೆಯ ನೂಲನ್ನು ಕೀಳುವಂತೆ ವೃಷಭನು ಆ ಕಟ್ಟುಗಳನ್ನೆಲ್ಲ ಬಂದೇಬಾರಿ ವಿಜೃಂಭಿಸಿ ಕಿತ್ತು, ಹಾರಿ ಓಡಾಡಿ, ದೈತ್ಯಸೇನೆಯನ್ನು ತುಳಿದು, ತಿವಿದು, ಒದೆದು, ಹೂಂಕರಿಸಿ, ಬಾಲವನ್ನು ಬೀಸಿ ಲಯ ಗೊಳಿಸಿತು. ಆಗ ಶಿಂಶುಮಾರನು ವೃಷಭೇಂದ್ರನಿಗೆ ಇದಿರಾಗಿ ಗರ್ಜಿಸಿ ನಿಂತು,— " ಎಲೆ ಗೂಳಿಯೆ ! ಕಾರಹಬ್ಬದಲ್ಲಿ ನಿನ್ನ ಘನತೆಯೇ ಹೊರತು ಯುದ್ಧದಲ್ಲಿ ನಿನ್ನನ್ನು ಕೇಳುವವರಾರು ? ಯಾವ ಹೆಂಗುಸು ಎಷ್ಟು ದಿನ ತಪಸ್ಸುಮಾಡಿ ನಿನ್ನನ್ನು ಹಡೆದಳೋ ಕಾಣೆ, " ಎಂದು ಹಾಸ್ಯಮಾಡಿ ಧನುಸ್ಸನ್ನು ಜೇವಡೆದನು. ವೃಷಭೇಂದ್ರನಾದರೊ— " ಎಲೊ ನಾಯಿ ! ನಿನ್ನ ಕುರೂಪವನ್ನು ನೀನು ನೋಡಿಕೊಳ್ಳದೆ ಹೆದರನ್ನೇಕೆ ಜರೆಯುವೆ ? ಈದಿನವೇ ಕಾರಹಬ್ಬವೆಂಬುದನ್ನು ನೀನು ತಿಳಿದಿಲ್ಲ ! ದನುಜರನ್ನು ತರಿದು ಅವರ ಖಂಡವನ್ನೇ ಬೆಳಸಾಗಿ ಮಾಡುವೆನು, ನಿಮ್ಮ ರಕ್ತದ ಮಡುವೆಂಬ ಕೆರೆಯಲ್ಲಿ ಈಸಾಡಿ ಗೆದ್ದು ಬಂದು ದೇವತೆಗಳಿಂದ ಪೂಜೆಗೊಳ್ಳುವೆನು " ಎಂದು ನುಡಿದು ಹೂಂಕರಿಸಿದನು. ದೈತ್ಯನು— ಹಾಗಾದರೆ ಇದೋ ನಿನಗೆ ನಾನೇ ಪೂಜೆಯನ್ನು ಮಾಡುವೆನೆಂದು ಹೇಳಿ, ದೊಡ್ಡದೊಂದು ಪರ್ವತವನ್ನೆತ್ತಿ ವೃಷಭನ ಮೇಲೆ ಇಟ್ಟನು. ಅದು ವೃಷಭೇಶನ ರೋಮಗಳಿಗೆ ಸೊಂಕಿದ ಕೂಡಲೇ ಗಾಜಿನ ಬಳೆಗಳನ್ನು ನಗ್ಗಿದಂತೆ ತಾನೇ ಚೂರುಚೂರಾಗಿ ಹೋಯಿತು. ಇದನ್ನು ಶಿಂಶುಮಾರನು ನೋಡಿ ಮತ್ತಷ್ಟು ರೋಷವೇರಿ, ಇನ್ನೊಂದು ಬೆಟ್ಟವನ್ನೆತ್ತಿ ವೃಷಭನ ನತ್ತಿಯಮೇಲೆ ಇಟ್ಟನು. ಅದಕ್ಕೆ ವೃಷೇಂದ್ರನು ಕೊಂಬನ್ನೊಡ್ಡಿ ತಡೆದು ರಾಕ್ಷಸರ ಸೈನ್ಯದಮೇಲೆಯೇ ಝಾಡಿಸಿಡಲು, ಕೋಟ್ಯಂತರ ರಾಕ್ಷಸರನ್ನು ಅದು ಬಜ್ಜಿಗೊಳಿಸಿತು. ಆಗ ವೃಷಭೇಂದ್ರನು ಗುಟರೆಯಿಕ್ಕಿ ರಾಕ್ಷಸಸೇನೆಗೆ ಮೂರ್ಛೆಯನ್ನುಂಟುಮಾಡಿ, ಶಿಂಶುಮಾರನ ಗಲ್ಲವನ್ನು ತಿವಿದು ಕೆಡಹಬೇಕೆಂದು ಹಾತಲು, ಅದನ್ನೇ ನುಂಗಿಬಿಡಬೇಕೆಂದು ಶಿಂಶುಮಾರನು ಬಾಯ್ದೆರೆದನು. ವೃಷಭೇಂದ್ರನಾದರೊ ಮುಖದ್ವಾರದಿಂದ ಆ ರಾಕ್ಷಸನ ಉದರವನ್ನೇ ಹೊಕ್ಕನು. ಆದರೆ ಈ ಸದ್ಧರ್ಮಮೂರ್ತಿಯು ಆ ನೀಚನ ಉದರದಲ್ಲಿ ನಿಲ್ಲುವುದುಂಟೆ ? ಕ್ಷಣಕಾಲದಲ್ಲಿ ಮಹಾದ್ಭುತಕಾ

ಯನಾಗಿ ಬಳಿಗೇ ಅರಿದನು. ಮತ್ತೂ ಗೊರಸುಗಳಿಂದಲೂ ಕೊಂಬು ಗಳಿಂದಲೂ ರಕ್ಕಸನ ಹೊಟ್ಟೆಯೊಳಗೆ ಕೆರೆದು ತಿವಿದು ಬಗಿದು ಎರಡು ಹೋಳನ್ನಾಗಿ ಅವನ ದೇಹವನ್ನು ಸೀಳಿಬಿಟ್ಟನು. ಬಳಿಕ ಎರಡು ಕೋ ಡುಗಳಿಂದಲೂ ಎರಡು ಸೀಳುಗಳನ್ನು ಚುಚ್ಚಿ ಎತ್ತಿ, ಒಂದನ್ನು ತ್ರಿಪುರ ಕ್ಕೆ ಇಟ್ಟನು; ಒಂದನ್ನು ಶಿವನ ಮುಂದುಗಡೆಗೆ ಇಟ್ಟನು; ಆ ಹೋಳಿ ನ ಕೆಳಗೆ ಸಿಕ್ಕಿ ಬಿದ್ದ ರಕ್ಕಸರೂ ದೇವತೆಗಳೂ ಅನಂತವಾಗಿ ಮಡಿದರು. ಶಿಂಶುಮಾರನು ಮರಣಗೊಂಡನೆಂಬುದನ್ನು ತಾರಕಾಕ್ಷನು ಕೇಳಿ, "ಆಹಾ! ನನ್ನ ಮೈದುನನು ಸತ್ತನೆ! ಜಯಲಕ್ಷ್ಮಿ ನಮ್ಮ ಭುಜವನ್ನು ಬಿಟ್ಟು ಹೋದಳೆ! ಐಶ್ವರ್ಯ ಸಮುದ್ರವು ಬತ್ತಿಹೋಯಿತೆ! ಎಂದು ಪ್ರಲಾಪಿಸಿ, ಪ್ರಳಯಕಾಲದ ಯಮನಂತೆ ಕೆರಳಿ, ಘುಡುಘುಡಿಸಿ, ಸಿಂಹಪೀಠದಿಂದಿಳಿ ದು, ತಾನೇ ಯುದ್ಧಕ್ಕೆ ಹೊರಟನು. ಚತುಸ್ಸಮುದ್ರಗಳೂ ಇವನ ಹಿಂ ದೆ ಹೊರಟಂತೆ ಮಹಾರಾಕ್ಷಸಚತುರಂಗಸೈನ್ಯವು ಒತ್ತರಿ ಹೊರಟಿತು. ಅದರಲ್ಲಿ ದೈತ್ಯನಾಯಕರ ಸಂಖ್ಯೆಯೇ ೫೦ ಪದ್ಮವಿದ್ದಿತು. ಇನ್ನು ಉ ಳಿದ ಸಾಮಾನ್ಯಸೇನೆಯನ್ನೂ ಹಯಗಜರಥಾದಿಗಳನ್ನೂ ಎಣಿಸುವವರಾ ರು? ಆನೆಗಳ ಗಂಟೆಯ ಶಬ್ದ ಮತ್ತೂ ಗರ್ಜನೆ, ಕುದುರೆಗಳ ಕಡಿನಾಣ ಗಳ ಗೊರಸುಗಳ ಶಬ್ದ ಮತ್ತೂ ಕನೆಯುವಿಕೆ, ರಕ್ಕಸರ ಭುಜಾಸ್ಫಾಲನ ಧ್ವನಿ, ಮತ್ತೂ ವಾದ್ಯಗಳಬ್ಬರ, ರಥಗಳ ಚೀತ್ಕಾರ ಮತ್ತೂ ರಥಿಕರ ಧನುಷ್ಟಂಕಾರ, ಸಿಂಹನಾದ, ಇವುಗಳೆಲ್ಲ ಸೇರಿ ಲೋಕವನ್ನೇ ಕಿವುಡು ಗೊಳಿಸಿದುವು. ತಾರಕಾಕ್ಷನು ತನ್ನ ಸೇನೆಗೆ ಕೈಬೀಸಿ ಮುಂದೆ ಸರಿಸು ತ್ತ, "ದೇವತೆಗಳ ಗಂಟಲನ್ನು ಸೀಳು, ಹಿಂದೆಗೆಯುವ ನಾಯ್ಗಳ ತಲೆ ಯಮೇಲೆ ಹೊಡೆ" ಎಂದು ಕೂಗಿ, ತನ್ನ ಸೇನೆಯನ್ನು ಹುರಿದುಂಬಿಸುತ್ತ ದೇವಸೇನೆಯನ್ನು ಸಂಧಿಸಿದನು. ಮುಂಗಡೆಯ ರಕ್ಕಸರು ದೇವತೆಗಳ ಮೇಲೆ ಬಿದ್ದು ಬಾಳೆಯ ವನವನ್ನು ಸುಗ್ಗಿದ ಆನೆಗಳಂತೆ ತುಳಿಯುತ್ತಲೂ, ಒಂದು ಕಾಲನ್ನು ಮೆಟ್ಟಿ ಮತ್ತೊಂದು ಕಾಲನ್ನು ಹಿಡಿದು ಸೀಳುತ್ತ ಲೂ, ಒಬ್ಬರನ್ನೊಬ್ಬರಿಗೆ ತಾಟುಹೊಡಿಸಿ ಕೆತಹುತ್ತಲೂ, ಕತ್ತಿಗಳಿಂದ ತರಿಯುತ್ತಲೂ, ಕೊಡಲಿಯಿಂದ ಕಡಿಯುತ್ತಲೂ, ಮಚ್ಚುಗಳಿಂದ ಕೊ ಚ್ಚುತ್ತಲೂ, ಗದೆಗಳಿಂದ ಒಡಿಯುತ್ತಲೂ, ಚಕ್ರಗಳಿಂದ ಕತ್ತರಿಸುತ್ತ

ಲೂ, ಅಂಕುಶದಿಂದ ಚುಚ್ಚುತ್ತಲೂ, ಬಾಣಗಳಿಂದ ನಡುತ್ತಲೂ, ಲಯ ಗೊಳಿಸುತ್ತ ಬಂದರು. ಬಂದುಕಡೆಯಲ್ಲಿ ಕಮಲಾಕ್ಷ ಜಂಭಾಸುರರೂ, ಮತ್ತೊಂದುಕಡೆ ವಜ್ರನಾಭನೂ, ಬೇರೊಂದುಕಡೆ ಸುಭಟವಿದ್ಯುನ್ಮಾಲಿ ಗಳೂ, ಮಗುಳೊಂದುಕಡೆಯಲ್ಲಿ ಶುಂಭಾಸುರನೂ, ಇನ್ನೊಂದುತಾಣ ದಲ್ಲಿ ತಾರಕಾಕ್ಷನೂ ನುಗ್ಗಿ ದೇವಸೇನೆಯನ್ನು ತರಿದು ತರುಬುತ್ತ ಹೋ ದರು. ಈ ರಕ್ಕಸರ ಉಪಟಲವನ್ನು ತಾಳಲಾರದೆ ದೇವತೆಗಳು ಕಂಗೆ ಟ್ಟು ಹಿಂದಿರುಗಿ ಓಡಿದರು. ಇದನ್ನು ದೇವೇಂದ್ರನು ಕಂಡು, ಈ ಮ ಹಾಕ್ರೂರದೈತ್ಯರ ಹತಿಯನ್ನು ತಡೆಯುವುದಕ್ಕೆ ಇನ್ನು ಸವಿೃಂದಸಾಧ್ಯ ವೆಂದು ಯೋಚಿಸಿ, ಪರಶಿವನ ಬಳಿಗೆ ಓಡಿಹೋಗಿ,—ಪ್ರಭುವೆ, ದೇವತೆ ಗಳು ಹಿನ್ನೆಟ್ಟಿದರು; ರಾಕ್ಷಸರ ಶೌರ್ಯವು ಪ್ರಬಲತರವಾಗಿದೆ; ಇ ದೋ ನಮ್ಮ ಸಮೀಪಕ್ಕೆ ಅಟ್ಟಿಸಿಕೊಂಡುಬರುತ್ತಿದ್ದಾರೆ; ಎಂದು ಬಿನ್ನಪ ಸಿದನು. ಶಿವನು ತನ್ನ ನೆರೆಯಲ್ಲಿ ನಿಂತಿದ್ದ ನಂದೀಶ ಭೃಂಗೀಶ ವೀರೇಶ ಷಣ್ಮುಖ ಗಜಾನನ ಭೈರವಾದಿಗಳನ್ನು ಕಡೆಗಣ್ಣಿನಿಂದ ನೋಡಿದನು. ಆ ಕೂಡಲೇ ಅವರು ಹಸುವನೆಂದು ನುಡಿದು ನಮಸ್ಕರಿಸಿ ತಮ್ಮ ತಮ್ಮ ಸೈನ್ಯದೊಡನೆ ಕೂಡಿ, ತಾರಕಾಕ್ಷನ ಸೇನೆಗೆ ಇದಿರಾದರು. ದೇವತೆಗಳ ಸೇನೆಯಲ್ಲಿ ಮತ್ತೆ ಮಹಾಯುದ್ಧದ ಭೇರೀನಾದವಾಯಿತು. ಕಹಳೆಗಳ್ ಭೋರೆಂದುವು. ವೀರೇಶನು ಕಮಲಾಕ್ಷನನ್ನು ತಡೆದನು. ಕುಮಾರಸ್ವಾ ಮಿಯು ವಿದ್ಯುನ್ಮಾಲಿಗೆ ಇದಿರಾದನು. ನಂದೀಶನು ಶುಂಭಾಸುರನನ್ನು ಪ್ರತಿಭಟಿಸಿದನು. ಇಂದ್ರನು ಜಂಭಾಸುರನನ್ನು ಕೆಣಕಿದನು. ಭೈರವ ನು ತಾರಕಾಕ್ಷನನ್ನು ನಿಲ್ಲಿಸಿದನು. ಹೀಗೆ ಒಬ್ಬರಿಗೊಬ್ಬರು ಪ್ರತಿಭಟಿಸಿ ನಾನಾಯುಧಗಳಿಂದ ಸೆಣಸಹತ್ತಿದರು. ಅಧರ್ಮಪ್ರಾಬಲ್ಯದಿಂದ ಜಯಲ ಕ್ಷ್ಮಿಯ ಕಟಾಕ್ಷಕ್ಕೆ ದೂರರಾಗಿದ್ದ ರಾಕ್ಷಸರ ಬಲವು ಧರ್ಮಾವತಾರಿಗಳಾ ದ ಶಿವಪಕ್ಷದವರ ಮುಂದೆ ಕ್ಷಣಕ್ಷಣಕ್ಕೆ ಕುಗ್ಗುತ್ತ ಬಂದಿತು. ವೀರೇಶ ನಂದೀಶ ಕುಮಾರಾದಿಗಳ ಬಾಣಹತಿಯು ರಕ್ಕಸರ ಎದೆಯನ್ನು ಬಿರಿಸಿ, ಮೈಯನ್ನೆಲ್ಲ ಗಾಯಗೊಳಿಸಿ ರಕ್ತದಿಂದ ತೋಯಿಸಿ, ಮೂರ್ಛಾಗತರನ್ನು ಮಾಡಿತು. ರಕ್ಕಸರ ಸೇನೆಯು ದವಾಗ್ನಿಯ ಮುಂಗಡೆಯ ತರಗೆಲೆಗಳಂ ತೆ ಲಯಗೊಂಡಿತು. ದೈತ್ಯನಾಯಕರಲ್ಲಿ ಹರಣವನ್ನುಳುಹಿಕೊಂಡವರು

ದಿಕ್ಕುದಿಕ್ಕಿಗೆ ಪಲಾಯನಗೊಂಡರು. ರಕ್ತಪ್ರವಾಹದಲ್ಲಿ ಮುಳುಗುತ್ತಲೂ ತೇಲುತ್ತಲೂ ಕೊಚ್ಚಿಹೋಗುತ್ತಿರುವ ತಲೆಬುರುಡೆಗಳಿಂದಲೂ, ಗುಡ್ಡೆಯಾಗಿ ಬಿದ್ದಿರುವ ತೋಳ್ತೊಡೆ ಕಾಲುಕೈಗಳಿಂದಲೂ, ನರಳುತ್ತಿರುವ ಅರೆಹೆಣಗಳಿಂದಲೂ, ಕರುಳು ಮಾಂಸಗಳ ರಾಶಿಗಳಿಂದಲೂ, ಕಡಿದು ಮುರಿದು ಬಿದ್ದಿರುವ ಆಯುಧಗಳಿಂದಲೂ, ಹರಕು ಮುರುಕು ಚೂರು ನುಗ್ಗಾಗಿ ಬಿದ್ದಿರುವ ಛತ್ರಚಾಮರಧ್ವಜಪತಾಕಗಳಿಂದಲೂ ರಣರಂಗವು ಭಯಂಕರವಾಗಿದ್ದಿತು. ಓಡುವ ರಾಕ್ಷಸನನ್ನು ಕಂಡು ದಿಕ್ಪಾಲಕಾದಿದೇವತೆಗಳು ಅಟ್ಟಿಸಿಕೊಂಡು ಹೋಗುತ್ತಿದ್ದರು. ರಕ್ಕಸರು ಹೆಣಗಳನ್ನು ತುಳಿದುಕೊಂಡು ರಕ್ತವನ್ನು ಹಾಯ್ದು ಎಡಹುತ್ತ ಮುಗ್ಗರಿಸುತ್ತ ಕುಂಟುತ್ತ ಕೆಮ್ಮುತ್ತ ಹಿಂತಿರುತಿರುಗಿನೋಡುತ್ತ, ಬಾಯ್ಗೆ ಬಂದಂತೆ ದೇವತೆಗಳನ್ನು ಜೈಯುತ್ತ, ಗಟ್ಟಗುಡ್ಡಗಳಿಗೆ ಓಡಿಹೋದರು. ತಾರಕಾಕ್ಷ ವಿದ್ಯುನ್ಮಾಲಿಗಳು ತಲೆಯುಳುಹಿಕೊಂತು ತ್ರಿಪುರವನ್ನು ಹೊಕ್ಕರು. ರಕ್ಕಸರು ಕೋಟೆಯ ಬಾಗಿಲುಗಳನ್ನು ಮುಚ್ಚಿಗಳುಗಳಲ್ಲಿ ನೀರನ್ನು ತುಂಬಿ, ಖಿಲ್ವೀರಿಯನ್ನೇಲೆ ಹತ್ತಿ, ಆಯುಧಾದಿಗಳನ್ನ ಅಣಿಮಾಡಿಕೊಂಡು ನಿಂತರು. ಇತ್ತ ಶಿವಸೈನ್ಯವು ತ್ರಿಪುರದ ಕತೆಗೆ ಅಟ್ಟಿಸಿಕೊಂಡು ಹೋಗಿ ಕೋಟೆಯ ಕಾಲ್ಕ ಕತೆಗೂ ಮುತ್ತಿಗೆಯನ್ನು ಹಾಕಿತು. ಜಯ ಧ್ವೀರಿಕಪಹೆಗಳನ್ನು ಧ್ವನಿಸಿದರು. ಪರಶಿವನು ದೂರದಲ್ಲಿ ನಿಂತು ಅನಿಮೇಷದೃಷ್ಟಿಯಿಂದ ತ್ರಿಪುರಗಳ ನಿಲ್ಲುವಿಕೆಯನ್ನೂ ಅವುಗಳ ಕೀಲನ್ನೂ ಗುರಿಯಿಟ್ಟು ನೋಡುತ್ತಿದ್ದನು. ಅಲ್ಲಿಗೆ ದೇವಮಾನದ ೧ ಸಹಸ್ರ ವರ್ಷಗಳು ಸರಿಯಾಗಿ ತುಂಬಲು, ತಿರುಗುವಿಕೆಯನ್ನು ಬಿಟ್ಟು ತ್ರಿಪುರಗಳು ಒಂದಾದುವು. ಆ ಸಮಯಕ್ಕೆ ಸರಿಯಾಗಿ ಶಂಕರನು ಧನುಸ್ಸಿನಲ್ಲಿ ಪಾಶುಪತಬಾಣವನ್ನ ತೊಟ್ಟು ಕರ್ಣಾಂತವಾಗಿ ಸೆಳೆದು ಅವುಗಳ ಕೀಲಿಗೆ ಪ್ರಯೋಗಿಸಿದನು. ಅದು ಜಗತ್ತನ್ನೆಲ್ಲ ಜ್ವಾಲೆಯಿಂದ ಉರಿಸುತ್ತ ಹೋಗಿ ಖಿಖಿಣಿಖಿಣಿಲೆಂದು ಹೊಡೆದು ತ್ರಿಪುರಗಳನ್ನು ಭೇದಿಸಿ ಮಹಾಗ್ನಿಯಿಂದ ಪಟ್ಟಣವನ್ನೆಲ್ಲ ಬೇಯಿಸಿತು. ಅದರೊಳಗೆ ಶಿವಭಕ್ತಿಸಾಂದ್ರರಾಗಿದ್ದ ಮೂವರು ಶಿವಯೋಗಿಗಳು ಮಾತ್ರ ಅಗ್ನಿತಪ್ತರಾಗದೆ ಶಿವಕಾರುಣ್ಯದಿಂದ ತಮ್ಮ ಮಂದಿರಗಳ ಸಮೇತವಾಗಿ ಭೂತಲಕ್ಕಿಳಿದು ಬಂದು ಶಿವನ ಪಾದ

ವನ್ನು ಸೇರಿದರು. ಪಟ್ಟಣದಲ್ಲಿದ್ದ ಸಕಲರಾಕ್ಷಸಸ್ತ್ರೀಯರೂ ತಮ್ಮ ಸಕಲಸಂಪತ್ತಿನೊಡನೆ ಭಸ್ಮೀಕೃತವಾಯಿತು. ತಾರಕಾಕ್ಷಾದಿ ಮೂರು ಮಂದಿ ಸಹೋದರರೂ ಮೊದಲು ತಮ್ಮ ಗುರುವು ಬೋಧಿಸಿದುದನ್ನು ಸ್ಮರಿಸಿ ತಪ್ಪಿಸಿಕೊಂಡು ಹೋಗಿ ಶಿವನನುಗ್ರಹವನ್ನು ಪಡೆದು ಒದುಕುವುದೇ ತನುಗೆ ಶ್ರೇಯಸ್ಕರವೆಂದು ತಿಳಿದು ಬಂದು, ಸ್ವಾಮಿಯ ಪಾದಾರವಿಂದಕ್ಕೆ ಸಾಷ್ಟಾಂಗವಾಗಿ ಮಣಿದು, ತಮ್ಮಪರಾಧವನ್ನು ಕ್ಷಮಿಸಬೇಕೆಂದು ಬೇಡಿದರು. ಭಕ್ತವತ್ಸಲನಾದ ಸ್ವಾಮಿಯು ಅವರ ಮೇಲೆ ಕೃಪೆಮಿಟ್ಟು, ನಿಮ್ಮಿಷ್ಟಾರ್ಥವೇನೆಂದು ಕೇಳಿದನು. ಆಗ ಅವರುಗಳು ನಿಮ್ಮ ಪಾದಸೇವೆಯನ್ನು ಮಾಡಿಕೊಂಡು ಕೈಲಾಸದ ದ್ವಾರವನ್ನು ಕಾದುಕೊಂಡಿರುವಂತೆ ನಮಗೆ ಅನುಗ್ರಹಿಸಬೇಕೆಂದು ಬೇಡಿದರು. ಶಿವನು ಹಾಗೆಯೇ ಆಗಲಿ ಯೆಂದು ವರವಿತ್ತನು. ಒಳಿಕ ಅಂತರಿಕ್ಷದಿಂದ ಪುಷ್ಪವೃಷ್ಟಿಯು ಸುರಿದಿತು. ಶಿವಗಣಂಗಳು ಜಯಜಯಧ್ವಾನವನ್ನು ಮಾಡಿದರು. ದೇವತೆಗಳು ಜಯದುಂದುಭಿಯನ್ನು ಬಾರಿಸಿದರು. ಹರಿಬ್ರಹ್ಮರುಗಳು ಶಿವನನ್ನು ಕೊಂಡಾಡುತ್ತಿದ್ದರು. ಸಕಲ ಮನು ಮುನಿ ಕಿನ್ನರ ಕಿಂಪುರುಷಾದಿಗಳೆಲ್ಲರೂ ಇಂದು ಒದುಕಿದೆವೆಂದು ಶಿವನ ಪಾದಕ್ಕೆ ಮಣಿದರು. ಆಗ ಪರಶಿವನು ಸಕಲಪರಿವಾರಯೊಡನೆ ಕೂಡಿ ಕೈಲಾಸದ ಕಡೆಗೆ ನಡೆದುಬಂದನು. ಎಂದು ಚೆನ್ನಬಸವೇಶನು ನುಡಿದನೆಂಬಲ್ಲಿಗೆ ನಾಲ್ಕನೆ ಅಧ್ಯಾಯವು ಸಂಪೂರ್ಣವು.

— ❀ —

೫ನೆ ಅಧ್ಯಾಯವು.

ಶಿವವನವಿಹಾರೋತ್ಸವವು.

ಎಲೆ ಸಿದ್ಧರಾಮೇಶನೆ ಕೇಳು,— ಶಿವನು ಪಾರ್ವತೀಸಮೇತನಾಗಿ ಮಂದರಪರ್ವತದಲ್ಲಿ ವಾಸವಾಗಿರುತ್ತಿರಲು, ಪುಷ್ಪದತ್ತನೆಂಬ ಹೂವಳಿಗನು ಪ್ರತಿದಿನ ನಾನಾಲೋಕಗಳಲ್ಲಿ ತಿರುಗಿ, ಸುಗಂಧಕುಸುಮುಗಳನ್ನಿತ್ತಿ ತಂದು, ಮಾಲೆಯನ್ನು ಕಟ್ಟಿ, ಪಾರ್ವತೀದೇವಿಯ ಮುಡಿ

ಗೆ ಅಲಂಕರಿಸಿಕೊಳ್ಳುವುದಕ್ಕಾಗಿ ಅತಿಭಕ್ತಿಯಿಂದ ಒಪ್ಪಿಸುತ್ತಿದ್ದನು. ಬಂದುದಿನ ಇವನು ಒಪ್ಪಿಸಿದ ಹೂವಿನಲ್ಲಿ ಪಾರಿಜಾತಪುಷ್ಪವು ಇಲ್ಲದೆಯಿರಲು, ಗೌರೀದೇವಿಯು ಪುಷ್ಪದತ್ತನ ಮುಖವನ್ನು ನೋಡಿ, ಪಾರಿಜಾತವೇತಕ್ಕಿಲ್ಲವೆಂದು ಕೇಳಲು ; ತಾಯಿಾ ! ನಂದನವನದಲ್ಲಿ ಆ ಹೂವಿರುವುದು, ಅದನ್ನು ಈ ದಿನ ಶಚೀದೇವಿಯು ಅಪೇಕ್ಷಿಸಿ ಮುಂಚಿತವಾಗಿ ಎತ್ತಿಸಿಕೊಂಡಿದ್ದಳು; ಅದರಿಂದ ನನಗೆ ದೊರೆಯಲಿಲ್ಲವೆಂದು ಕೈಮುಗಿದು ಭಯದಿಂದ ವಿನ್ನೈಸಿದನು. ಆ ಮಾತನ್ನು ಕೇಳಿ ಶಂಕರಿಗೆ ಮನಸ್ಸಿನಲ್ಲಿ ಈರ್ಷ್ಯೆಯು ಹುಟ್ಟಿತು. ಸತಿಯು ವಿನ್ನವಾದ ವದನವನ್ನು ಕಂಡ ಶಿವನು ನೋಡಿ,—ದೇವಿಯೆ ! ಇದಕ್ಕಾಗಿ ನೀನು ಮನಸ್ಸಿನಲ್ಲಿ ಇಷ್ಟೊಂದು ನೊಂದುಕೊಳ್ಳುವುದೆ ? ಕಲ್ಪವೃಕ್ಷದ ಕುಸುಮಗಳು ನಿನಗೆ ದುರ್ಲಭವೆ ? ಐದು ಜಾತಿಯ ಕಲ್ಪತರುಗಳೂ ಈ ಪರ್ವತದ ತಪ್ಪಲಿನಲ್ಲೇ ಇರುವಂತೆ ನಾನು ಮನೋಹರವಾದ ಉಪವನವನ್ನು ಕ್ಷಣಕಾಲದಲ್ಲಿ ವಿರಚಿಸುವೆನು; ನಡೆ; ನೋಡು, ಎನ್ನಲು, ಭವಾನಿಯು ಕೂಡಲೇ ತನ್ನ ಆಪ್ತಸಖಿಯರೊಡನೆ ಕೂಡಿ ಹೊರಟಳು. ಶಿವನೂ ಸಂಗಡಲೇ ನಡೆಗೊಂಡನು. ಪರ್ವತದ ತಪ್ಪಲಿನಲ್ಲಿ ೧ ಸಹಸ್ರಯೋಜನದಗಲವುಳ್ಳುದಾಗಿ ಗಗನಚುಂಬಿಗಳಾಗಿ ಬೆಳೆನಿರುವ ಕಲ್ಪತರುಗಳಿಂದ ಒಪ್ಪುತಲಿರುವ ಉಪವನವು ಶಿವನ ಇಚ್ಛಾಮಾತ್ರದಿಂದ ನಿರ್ಮಿತವಾಗಿ ಕಾಣಿಸಿತು. ಅಲ್ಲಲ್ಲಿಗೆ ತಿಳಿಗೊಳಗಳು ಹೂಜಾತಿಯ ಗಿಡುಬಳ್ಳಿಗಳು ಚಂದ್ರಕಾಂತಶಿಲೆಯ ಪೀಠಗಳು ಲತಾಗೃಹಗಳು ರಂಜಿಸುತ್ತಿರಲು, ಅದರ ಸೊಗಸನ್ನು ಪಾರ್ವತಿಯು ನೋಡಿ ಸಂತೋಷಿಸಿ, ನಕ್ಕು, ಸ್ವಾಮಿಾ ! ತಮ್ಮ ಕರುಣಾಮೃತರಸವೃಷ್ಟಿಯಿಂದ ನನಗೆ ಯಾವ ಸುಖದ ಬೆಳಸುತಾನೇ ದುರ್ಲಭವಾಗಿರುವುದು ? ಎಂದು ಪತಿಯನ್ನು ಕುರಿತು ಕೇಳಿ, ಹರ್ಷಗೊಳಿಸುತ್ತ ಉಪವನದೊಳಗೆ ಸಂಚರಿಸುತ್ತಿರಲು, ಶಿವನು— ರಮಣಿಯೆ ! ಈ ಉದ್ಯಾನಕ್ಕೆ ಚೈತ್ರರಥವೆಂದು ಹೆಸರು ; ಇದಕ್ಕೆ ಸದೃಶವಾದ ಉಪವನವು ತ್ರಿಭುವನದಲ್ಲೂ ಇಲ್ಲ : ಇದರಲ್ಲಿ ಬೆಳೆದ ಹೂವುಗಳಿಗೆ ನಿನ್ನ ಮುಡಿಯೂ, ಆ ಮುಡಿಗೆ ಈ ಹೂವೂ ಒಂದಕ್ಕೊಂದು ಯೋಗ್ಯವಾದುವುಗಳು ; ಎಂದು ಹೇಳಿ, ಹೊಸಹೊಸ ಹೂಗಳನ್ನೆತ್ತಿ ತುರಿಸಿ, ತನ್ನ ಬೆರಲುಗುರುಗಳಿಂದಲೇ ದೇವಿಯ ತಲೆಗೂದ

ಲನ್ನು ಸಿಕ್ಕುಬಿಡಿಸಿ, ಕೂದಲಿನೊಳಗೆ ಹೂವಿನ ಸರವನ್ನು ಸೇರಿಸಿ ಎ
ಣ್ಣೆಗಂಟಿಕ್ಕಿ, ಮುಖವನ್ನು ನೋಡಿ, ಸಂತೋಷಿಸಿ, ಒಳಕ ಆ ವನದ
ಕಾವಲಿಗೆ ಒಬ್ಬ ಚಾರನನ್ನು ನೇಮಿಸಿ, ಒಂದುದಿನವೂ ತಪ್ಪದೆ ಆ ವನದ
ಪುಷ್ಪಗಳನ್ನೆತ್ತಿ ದೇವಿಯರಿಗೆ ತಂದು ಕೊಡಬೇಕೆಂದು ಪುಷ್ಪದತ್ತನಿಗೆ ಆ
ಜ್ಞಾಪಿಸಿ, ಅರಮನೆಗೆ ತೆರಳಿ, ಸುಖಮಯನಾಗಿದ್ದನು. ಹೀಗಿರುತ್ತಿರು
ವಲ್ಲಿ ವಸಂತಋತುವು ಸಂಧಿಸಿತು. ಚಳಿಯು ತಪ್ಪಿತು. ತಂಗಾಳಿಯು
ಬೀಸಿತು. ಪುಷ್ಪಪರಿಮಳವು ತುಂಬಿತು. ತುಂಬಿಗಳ ಸ್ತೋಮವು
ನಲಿದಾಡಿತು. ಕೋಗಿಲೆಗಳ ತಿಂತಿಣಿಯು ಹಾಡಿತು ಮದನನಿಗೆ
ಬಲ ಹೆಚ್ಚಿತು. ವೃಕ್ಷಲತಾನಿಕುರುಂಬವು ಚಿಗುರೇರಿತು. ವಿರಹಿಜನ
ರ ಎದೆಯು ಬಿರಿದಿತು. ಭೋಗಿಗಳ ಮನಸ್ಸು ಉಲ್ಲಾಸವೇರಿತು. ತಾ
ವರೆಯ ಬಳ್ಳಿಯಲ್ಲಿ ಹೂಪತ್ತಿತು ; ಗಿಳಿಗಳ ಒಳಗವು ಹಣ್ಣುಗಳನ್ನು ತಿಂ
ದು ಹಾರಾಡಿತು. ಆಕಾಶವು ಸ್ವಚ್ಛವಾಯಿತು. ಚಂದ್ರಕಿರಣವು ಆ
ಹ್ಲಾದಕರವಾಯಿತು. ಎತ್ತನೋಡಿದರೂ ಭೂಮಿಯು ಪಳಚ್ಚನೆ ತೋ
ರುತ್ತಿದ್ದಿತು. ಎಲ್ಲಿ ತಿರುಗಿದರೂ ಸುರಭಿಮಂದಮಾರುತವು ಬೀಸುತ್ತಿದ್ದಿ
ತು. ಎಲ್ಲಿಗೆ ಹೋದರೂ ಶುಕಪಿಕಾದಿಗಳ ಮಧುರಸ್ವರವು ಕೇಳುತ್ತಿದ್ದಿ
ತು. ಪ್ರತಿಯೊಂದುಉಪವನಗಳೂ ಪುಷ್ಪಪಲ್ಲವಾದಿಗಳಿಂದ ತುಂಬಿ ಮ
ದರಾಜನ ಬಾಣಶಾಲೆಯೋ ! ರತಿಪತಿಯ ವಿಹಾರಮಂದಿರವೋ, ಭೋ
ಗಿಗಳ ವಿನೋದಮಂಟಪವೋ, ಗಿಳಿಗಳ ಭೋಜನಶಾಲೆಯೋ, ತುಂಬಿ
ಗಳ ಅರವಟ್ಟಿಗೆಯೋ, ನವಿಲುಗಳ ನರ್ತನರಂಗವೋ, ಕೋಕಿಲಗಳ ಸಂ
ಗೀತ ಶಾಲೆಯೋ, ಎಂಬಂತೆ ತೋರುತ್ತಿದ್ದುವು. ಮದನನು ಉಪವನ
ವೆಂಬ ತನ್ನರಮನೆಯ ಸುತ್ತಲೂ ದಸಿಯ ಪ್ರಾಕಾರವನ್ನು ಕಟ್ಟಿಸಿರುವ
ನೋ ಎಂಬಂತೆ ಮೊನೆಯಾದ ಕೆಂಗೇದಗೆ ಹೂವುಗಳನ್ನು ಬಿಟ್ಟಿರುವ
ತಾಳೆಮರಗಳ ಬೇಲಿಯು ಒಪ್ಪಿದ್ದಿತು. ವಿಜಯಯಾತ್ರೋತ್ಸುಕನಾದ
ಮನ್ಮಥರಾಜನಿಗೆ ಇಳಿದುಕೊಳ್ಳುವುದಕ್ಕಾಗಿ ವಸಂತನು ಚಿಗುರುಗಳೆಂಬ
ರತ್ನಗುಚ್ಛಗಳಿಂದಲೂ, ಪುಷ್ಪಗುಚ್ಛವೆಂಬ ಚಿನ್ನದ ಸರಿಗೆಯಕುಚ್ಚುಗ
ಳಿಂದಲೂ, ಹಬ್ಬಿದ ಮಲ್ಲಿಗೆಬಳ್ಳಿಯ ಮೊಗ್ಗೆಗಳೆಂಬ ಮುತ್ತಿನಗುದಿಗಳಿಂದ
ಲೂ, ಹಾರಾಡುವ ತುಂಬಿಗಳೆಂಬ ಇಂದ್ರನೀಲಮಣಿಯ ಸರಗಳಿಂದಲೂ,

ರಚಿಸಿರುವ ಕೆಂಬಣ್ಣದ ಗೂಡಾರದಂತೆ ಪಲ್ಲವಪುಷ್ಪಾದಿಗಳಿಂದ ಸಾಂದ್ರವಾದ ಮಾವಿನಮರವು ಒಪ್ಪಿದ್ದಿತು. ವಸಂತನೆಂಬ ಬೇಟೆಗಾರನು ವಿರಹಿಗಳೆಂಬ ಮೃಗಗಳನ್ನು ಹಿಡಿದು ತಂದು ಸುಡುವುದಕ್ಕಾಗಿ ಒಟ್ಟಿರುವ ದೊಡ್ಡ ಕಿಚ್ಚಿನಂತೆ ಕೆಂಪು ಚಿಗುರಿನಿಂದ ಮುಚ್ಚಿರುವ ಅಶೋಕವೃಕ್ಷಗಳು ತೋರುತ್ತಿದ್ದುವು. ಭೂಮಿಯೆಲ್ಲ ಪುಷ್ಪಗಂಧಮಯವಾಗಿದ್ದಿತು. ದಿಕ್ಕುದಿಕ್ಕುಗಳಲ್ಲೆಲ್ಲ ಹಣ್ಣುಗಳೇ ಕಾಣುತ್ತಿದ್ದುವು. ವನಗಳೆಲ್ಲ ಮದನನ ಸೇನಾಮುಯವಾಗಿದ್ದುವು. ಲೋಕವೆಲ್ಲ ಸುಖಿಗಳ ಮಯವಾಯಿತು. ಮಾತುಗಳೆಲ್ಲ ಕಾಮಲೀಲಾಮಯವಾಗಿದ್ದುವು. ಲತಾಗೃಹಗಳೆಲ್ಲ ವಿಟಾಳಿಗಳ ಮುಯವಾಗಿದ್ದುವು. ಸರೋವರಗಳೆಲ್ಲ ವಿರಹಿಗಳ ವಾಸಸ್ಥಲವಾಗಿದ್ದುವು. ವಸಂತಋತುವಿನ ಪ್ರಭಾವವು ಹೀಗೆ ಲೋಕಾನಂದಕರವಾಗಿ ಒಪ್ಪುತ್ತಿರಲು, ಶಿವನ ಚೈತ್ರರಥವನವು ವನಪಾಲನ ಸಾಹಸ ವಿಶೇಷದಿಂದ ಅತ್ಯತಿಶಯವಾದ ಸೊಂಪುಗೊಂಡು ಮೆರೆಯುತ್ತಿದ್ದಿತು. ಅಲ್ಲಲ್ಲಿಗೆ ಲತಾಮಂಟಪಗಳು, ಚಿಗುರಿನ ಚಪ್ಪರಗಳು, ತಳಿರ ತೋರಣಗಳು, ಹೂವಿನ ಹಾಸುಗೆಗಳು, ಚಿಗುರಿನ ಉಯ್ಯಾಲೆಗಳು, ಪನ್ನೀರ ಕಾಲ್ವೆಗಳು, ಅರವಟ್ಟಿಗೆಗಳು, ಪುಷ್ಪಗುಚ್ಛದ ಕುರುಜುಗಳು, ನೀರು ಹಾರುತ್ತಿರುವ ಕಾಳಂಜಿಗಳು, ಹೂವಿನ ಗೊಂಚಿಗೆಗಳು, ಚಂದ್ರಕಾಂತಶಿಲೆಯ ವಿಶ್ರಾಂತಿ ಪೀಠಗಳು, ಒಪ್ಪಿದ್ದುವು. ವನಪಾಲಕನು ಅದರ ಸೊಬಗನ್ನು ನೋಡಿ ತಲೆದೂಗಿದನು. ಪರಶಿವನಿಗೆ ಬಿನ್ನೈಸಿ ಕರೆದುಕೊಂಡು ಬಂದು ತೋರಿಸಬೇಕೆಂದು ಯೋಚಿಸಿದನು. ಮಲ್ಲಿಗೆಯ ಮೊಗ್ಗೆಗಳನ್ನೂ, ಸಂಪಗೆಯ ಹೂವುಗಳನ್ನೂ, ತಾವರೆಯ ಅರಲುಗಳನ್ನೂ, ಅಶೋಕದ ಚಿಗುರುಗಳನ್ನೂ, ಹೊಂಬಾಳೆಗಳನ್ನೂ, ಪೊಟ್ಟಳಗಳಲ್ಲಿ ಕಟ್ಟಿದನು. ರಸಬಾಳೆಯ ಗೊನೆಗಳನ್ನೂ, ಅಡಕೆ ತೆಂಗಿನ ತಾರುಗಳನ್ನೂ, ಹಲಸು ಮಾವು ದಾಳಿಂಬೆ ನೇರಿಲು ಅಂಜೂರ ಸೇಬು ದ್ರಾಕ್ಷಿ ಮೊದಲಾದ ಹಣ್ಣುಗಳನ್ನೂ ಆಳುಗಳಮೇಲೆ ಹೊರಿಸಿದನು. ಇವನ್ನೆಲ್ಲ ಶಿವನ ಬಳಿಗೆ ಸಾಗಿಸಿಕೊಂಡು ಹೋಗಿ ಮುಂದಿಟ್ಟು ನಮಸ್ಕರಿಸಿ, ಭಕ್ತಿಯಿಂದ ಕೈಕಟ್ಟಿ ನಿಂತು,—ಜೀಯಾ! ತಾವು ನನ್ನ ಪಾಲನೆಗೆ ಒಪ್ಪಿಸಿದ ವನವು ಈಗ ಫಲಭರಿತವಾಗಿರುವುದು; ವನದೇವಿಯು ದಾಳಿಂಬೆಯಬೀಜಗಳೆಂಬ ಹಲ್ಲನ್ನು ಕಿರಿದು ಕೋ

ಗಿಲೆಯ ಧ್ವನಿಯೆಂಬ ಕೂಗಿನಿಂದ ನಿಮ್ಮ ಆಗಮನವನ್ನು ಬಯಸಿ ಪ್ರಾರ್ಥಿಸುತ್ತ ನನ್ನನ್ನು ಕರೆಯಲಟ್ಟಿರುವಳು; ಕೃಪೆಯಿಟ್ಟು ಚಿತ್ತೈಸಿ ಪರಾಮರಿಸಬೇಕು; ಎಂದು ವಿಜ್ಞಾಪಿಸಿದನು. ಶಿವನು ಅವನಿಗೆ ಉಡುಗೊರೆಗಳನ್ನು ಕೊಟ್ಟು ಕಳುಹಿ, ಸತಿಯೊಡನೆ ವನವಿಹಾರೋತ್ಸವಕ್ಕೆ ನಡೆಗೊಂಡನು. ದೇವಿಯೊಡನೆ ಸುಂದರಿಯರಾದ ಸಖಿಯರನೇಕರು ಹೊರಟರು. ಅವರ ಪಾದವೇ ಚಿಗುರುಗಳು, ಕೂದಲೇ ತುಂಬಿಗಳು, ಮುಖವೇ ತಾವರೆ, ತೋಳುಗಳೇ ಬಳ್ಳಿಗಳು, ತೊಡೆಗಳೇ ಬಾಳೆಗಂಬಗಳು, ಹೊಕ್ಕುಳೇ ಕೊಳಗಳು, ಮೊಲೆಗಳೇ ಚಕ್ರವಾಕಪಕ್ಷಿಗಳು, ಮಾತುಗಳೇ ಗಿಳಿಗಳು, ನಡೆಯೇ ಹಂಸೆಗಳು, ಮುಡಿಗಳೇ ನವಿಲ್ಗಳು, ಎಂಬಂತೆ ತೋರುತ್ತಿರಲು, ಚಲಿಸುವ ವನದಂತಿರುವ ದೇವಾಂಗನೆಯರು ಸ್ಥಾವರ ವನದರ್ಶನಕ್ಕೆ ಹೊರಟರು. ಸರಪಳಿಗಳನ್ನು ಕಿತ್ತು ಬಂದಿರುವ ಕಾಮುನ ಮದದಾನೆಗಳಂತಿರುವ ಈ ಸಖಿಯರೊಡನೆ ಪೋಟ ಪಾರ್ವತೀಪರಮೇಶ್ವರು ಚೈತ್ರರಥವನ್ನು ಪ್ರವೇಶಿಸಿದರು. ಸಖಿಯರುಗಳು ಹೂಚಿಗುರುಗಳ ಸೊಬಗನ್ನು ನೋಡಿ ನನಗೆ ತನಗೆ ಎಂದು ಮೇಲೆಬಿದ್ದು ಕೊಯ್ಯಲು ಆತುರಿಸಿದರು. ಆಗ ಇವು ಚಿಗುರು ಇವು ಪಾದಗಳು, ಇವು ತುಂಬಿಗಳು ಇವು ಕುರುಳುಗಳು, ಇವು ತುಟಿಗಳು ಇವು ಕೆಂಪು ಗುಲಾಬಿಯ ಹೂವುಗಳು, ಇವು ದೇಹಗಳು ಇವು ಬಳ್ಳಿಗಳು, ಇವು ಮೂಗುಗಳು ಇವು ಸಂಪಗೆಗಳು, ಇವು ಗಿಳಿಗಳ ನುಡಿ ಇವು ಸಖಿಯರ ಮಾತು, ಎಂಬ ಭೇದವನ್ನು ತಿಳಿದುಕೊಳ್ಳಲಾರದೆ ಕೆಲವರು ಮುಗ್ಧಾಂಗನೆಯರು ಪರದಾಡುತ್ತಿದ್ದರು. ಮಲ್ಲಿಗೆಯ ಮೊಗ್ಗೆಯನ್ನು ಕೊಯ್ಯುತ್ತಿದ್ದವಳ ಮೇಲ್ಮೈಸುಗುಜಾರಿ ಪೊಲೆಯು ಹೊರಕ್ಕೆ ಕಾಣುತ್ತಿರಲು, ಹತ್ತಿರದಲ್ಲಿ ನಿಂತಿದ್ದ ಮತ್ತೊಬ್ಬ ಮುಗ್ಧಾಂಗನೆಯು-ಅಕ್ಕ, ಇದೇನಾಶ್ಚರ್ಯ! ಮಲ್ಲಿಗೆಯಬಳ್ಳಿಯು ತಾವರೆಯ ಮೊಗ್ಗೆಯನ್ನು ಬಿಟ್ಟಿರುವುದಂ ನೋಡಿದೆಯಾ? ಎಂದು ಹೇಳಿ, ಅದನ್ನು ಕೊಯ್ದು ತೋರಿಸುವುದಕ್ಕಾಗಿ ಅವಳೆದೆಗೆ ಕೈಚಾಚಲು, ಉಳಿದ ಸಖಿಯರೆಲ್ಲ ನೋಡಿ ನಕ್ಕರು. ಸ್ತ್ರೀಯರು ಹೂವುಗಳನ್ನು ಕೊಯ್ಯುವುದಕ್ಕಾಗಿ ತಮ್ಮ ಹಸ್ತವನ್ನು ಚಾಚಿದರೆ ಅಂಗೈಯ ಕೆಂಪಿನಿಂದ ಮುಸುಗಿದ ಬಿಳಿಯ ಹೂವುಗಳು ಕೆಂಪು ಹೂವಿನಂತೆ ಕಾಣು

ತ್ತಿದ್ದುವು. ಕೆಂಪುಚಿಗುರುಗಳಮೇಲೆ ಅವರ ಕಣ್ಣಿನ ಕಾಂತಿಯು ಬಿದ್ದರೆ ಅವು ಬಿಳಿಯ ಚಿಗುರಿನಂತೆ ತೋರುತ್ತಿದ್ದುವು. ಹೊಂಬಣ್ಣದ ಹಣ್ಣುಗಳು ಅವರ ತುಟಿಯ ಕಾಂತಿಯಿಂದ ಕೆಂಬಣ್ಣವಾಗಿ ಒಪ್ಪುತ್ತಿದ್ದುವು. ಇದರಿಂದ ದೇವನಾರಿಯರು ಬಂದನ್ನು ಮತ್ತೊಂದುವಿಧವಾಗಿ ಮಾಡಿ ತೋರಿಸುವ ಯಕ್ಷಿಣಿಗಾರ್ತಿಯರಂತೆ ತೋರುತ್ತಿದ್ದರು. ಮತ್ತೊ ತಿಲಕವೃಕ್ಷವನ್ನು ಕಣ್ಣಿನಿಂದ ನೋಡಿಯೂ, ಗೋರಂಟೆಯನ್ನು ಮೊಲೆಗಳಿಂದೊತ್ತಿಯೂ, ಪಾದರಿಗಳನ್ನು ಬಾಯ್ಬಟ್ಟನಕ್ಕೂ, ಕಡಹದ ಮರವನ್ನು ದೇಹದಿಂದ ಸೊಂಕಿಸಿಯೂ, ಕಬ್ಬನ್ನು ಸರಸದಿಂದ ಜರೆದೂ, ಅಶೋಕವೃಕ್ಷವನ್ನು ಅಂಗಾಲಿನಿಂದೊದೆದೂ, ಹವಳದ ಹೂವಿನ ಮರವನ್ನು ತುಟಿಯಿಂದುಗಿದೂ, ಸುರಗಿಯ ಮರವನ್ನು ಇಂಪಾದ ದನಿಯಿಂದ ಹಾಡಿಯೂ, ಬೆಟ್ಟದಾವರೆಯನ್ನು ಅದರ ಗುಣಾತಿಶಯವನ್ನು ಕೊಂಡಾಡಿಯೂ, ಪಾರಿಜಾತವನ್ನು ಮೃದುವಚನಗಳಿಂದ ಮಾತನಾಡಿಸಿಯೂ, ಹೂವನ್ನು ಬಿಟ್ಟು ಚಿಗುರೇರುವಂತೆ ಮಾಡುತ್ತಿದ್ದರು. ಗಣಿಗಲೆ ಸುರಹೊನ್ನೆ ಪಗಡೆ ಸಂಪಗೆ ಸೇವಂತಿಗೆ ಮಲ್ಲಿಗೆ ಮೊಲ್ಲೆ ಪಾದರಿ ಗೋರಂಟೆ ಪಾರಿಜಾತ ತಾಳೆ ಗುಲಾಬಿ ನಾಗಸಂಪಗೆ ಮಾವು ಬೆಟ್ಟದಾವರೆ ನೈದಿಲು ಕೆಂದಾವರೆ ಮೊದಲಾದ ಪುಷ್ಪಗಳನ್ನೆಲ್ಲ ಎತ್ತಿ ತಂದು ಪಾರ್ವತೀಪರಮೇಶ್ವರರಿಗೆ ಒಪ್ಪಿಸಿದರು. ಅದನ್ನೆಲ್ಲ ಪರಿಗ್ರಹಿಸಿ ಶಂಕರನು ಸತೀಸಮೇತನಾಗಿ ವನದಲ್ಲಿ ವಿಹರಿಸುತ್ತ ಅದರ ಸೊಬಗಿಗೆ ತಲೆದೂಗುತ್ತ ಬಂದುಸರೋವರದ ಬಳಿಗೆ ಬಂದನು. ಅದು ರನ್ನಸೊನ್ನದ ಸೋಪಾನಗಳಿಂದಲೂ, ತೀರದ ಮೇಲಿರುವ ಚಂದ್ರಕಾಂತಶಿಲೆಯ ಮಂಟಪದಿಂದಲೂ, ತಿಳಿನೀರಿನಿಂದಲೂ, ನೈದಿಲು ತಾವರೆಗಳ ಸಾಲುಗಳಿಂದಲೂ, ಹಂಸಗಳ ಸಂಚಾರದಿಂದಲೂ, ತುಂಬಿಗಳ ಝುಂಕಾರದಿಂದಲೂ, ತೆರೆ ನೊರೆಗಳಿಂದಲೂ, ಮನೋಹರವಾಗಿದ್ದಿತು. ಜಲಕ್ರೀಡೆಗಾಗಿ ಶಿವನು ಸತಿಯೊಡನೆ ಕೊಳವನ್ನು ಹೊಕ್ಕನು. ಸಖಿಯರು ನವಿಲು ಹಂಸೆ ಗಿಳಿ ಕೋಗಿಲೆ ಗರುಡ ಕುದುರೆ ಆನೆ ಮೊದಲಾದುವುಗಳ ಆಕಾರದ ಚೆನ್ನದ ಚೀರ್ಕೊಳವೆಗಳನ್ನು ಪಿಡಿದು ನೀರಿಗಿಳಿದರು. ಒಬ್ಬರಮೇಲೊಬ್ಬರು ನೀರನ್ನು ಹೊಯ್ದಾಡಿದರು. ಶಿವಶಿವೆಯರು ವಿನೋದದಿಂದ ನೀರನ್ನೆರಚಾಡಿದರು. ಶಿವನ ಜಲವರ್ಷಣಕ್ಕೆ ಪಾರ್ವತಿಯು ಹಿಂ

ದೆಗೆದು ಕಣ್ಸನ್ನೆಯಿಂದ ಸಖಿಯರನ್ನೆಲ್ಲ ಎಚ್ಚರಿಸಿ ಸುತ್ತಲೂ ಮುತ್ತಿ ಶಿವನ ಮೇಲೆ ನೀರನ್ನೆರಚುವಂತೆ ಮಾಡಿದಳು. ಮದನನು ತನ್ನನ್ನು ಅಗ್ನಿಯಿಂದ ಸುಟ್ಟ ಶಿವನನ್ನು ತನ್ನ ಸೈನಿಕರಾದ ನಾರಿಯರ ಹಸ್ತದಿಂದ ಜಲಾಸ್ತ್ರದ ಮೂಲಕ ಹೊಡೆಯಿಸಿ ಸೋಲಿಸಬೇಕೆಂದು ಪ್ರಯತ್ನಿಸಿದನೋ ಎಂಬಂತೆ ನಾರೀಕುಲವು ಶಿವನಮೇಲೆ ಚೀರ್ಕೊಳವೆಗಳಿಂದ ನೀರನ್ನು ಪ್ರಯೋಗಿಸುತ್ತಿದ್ದಿತು. ನೀರನ್ನು ಮೊಗೆಯುವ ಎರಚುವ ಕೇಕೆಹಾಕುವ ದುಮಿಕುವ ಶಬ್ದವು ಸರೋವರದಲ್ಲೆಲ್ಲಾ ತುಂಬಿತು. ಹೀಗೆ ಜಲಕ್ರೀಡೆಯನ್ನಾಡಿದಬಳಿಕ ಮೊದಲು ಶಂಕರೀಶಂಕರರು ಸೋಪಾನವನ್ನು ಹತ್ತಿ ಮೇಲಣ ಮಂಟಪಕ್ಕೆ ತೆರಳಿ, ವಸ್ತ್ರಭೂಷಣಾದಿಗಳನ್ನು ಧರಿಸಿ, ಕೊಳದ ಕಡೆಗೆ ತಿರುಗಿನೋಡುತ್ತ ನಿಲ್ಲಲು, ಸೋಪಾನಗಳಮೇಲೆ ಒದ್ದೆಯಾದ ಬಟ್ಟೆಗಳಿಂದ ಹತ್ತಿದ ಶರೀರವುಳ್ಳವರಾಗಿ ಬೆಳ್ಳಬೆಳ್ಳಗೆ ನಿಂತು ಬಿಸಿಲಿಗೆ ದೇಹವನ್ನು ಒಡ್ಡಿ ಕಾಯಿಸಿಕೊಳ್ಳುತ್ತಿರುವ ದೇವಾಂಗನೆಯರು ಸೋಪಾನಗಳಮೇಲೆ ಕೆತ್ತಿ ನಿಲ್ಲಿಸಿರುವ ಚಂದ್ರಕಾಂತಶಿಲೆಯ ಪ್ರತಿಮೆಗಳೋ, ಶಿವಸೇವೆಗಾಗಿ ಪಾತಾಳಲೋಕದಿಂದ ಹೊರಟು ಈ ಸರೋವರದ ದ್ವಾರದಿಂದ ಬಂದ ನಾಗಕನ್ನಿಕೆಯರೋ, ಮನ್ಮಥನ ಮಂತ್ರಾಧಿದೇವತೆಯೇ ಹೀಗೆ ಬಹುರೂಪಾಂತು ನಿಂತಿರುವಳೋ, ಎಂಬಂತೆ ತೋರುತ್ತಿದ್ದರು. ಇಂತಹ ನಾರಿಯರೆಲ್ಲರೂ ತಲೆಯನ್ನಾರಿಸಿ, ಮಡಿಯ ಸೀರೆಗಳನ್ನೂ ಆಭರಣಗಳನ್ನೂ ಧರಿಸಿ, ಸಕಲಶೃಂಗಾರತಾಂಬೂಲವನ್ನು ಸವಿದು ಸಿದ್ಧರಾಗಿ ನಿಂತರು. ಶಿವನು ವನಪಾಲಕನಿಗೆ ಬೇಕಾದುಡುಗೊರೆಗಳನ್ನಿತ್ತು ಸಂತೋಷಪಡಿಸಿ, ಕೈಲಾಸಕ್ಕೆ ಹೋಗಿ ಅಲ್ಲಿರುವುದಕ್ಕಿಂತಲೂ ವಸಂತಋತುವು ಮುಗಿಯುವವರೆಗೂ ಉಪವನಾಂತದಲ್ಲಿರುವ ಉಪ್ಪರಿಗೆ ಮನೆಯಲ್ಲೇ ವಾಸಮಾಡಿಕೊಂಡಿರುವುದು ಸುಖವೆಂದು ಬಯಸಿ ಪಾರ್ವತಿಯೊಡನೆ ಅಲ್ಲೇ ವಿಲಾಸದಿಂದಿರುತ್ತಿದ್ದನು. ಎಂದು ಚೆನ್ನಬಸವೇಶನು ನುಡಿದನೆಂಬಲ್ಲಿಗೆ ಐದನೆ ಅಧ್ಯಾಯವು ಸಂಪೂರ್ಣವು.

೬ನೆ ಅಧ್ಯಾಯವು.

ಗಂಗಾಧರಲೀಲೆಯು.

ಎಲೆ ಸಿದ್ಧರಾಮೇಶನೆ, ಮರುದಿವಸ ಪರಶಿವನು ಅಂತಃಪುರದಲ್ಲಿ ಪಾರ್ವತಿಯೊಡನೆ ಮಲಗಿದ್ದು, ತಾನೊಬ್ಬನೇ ಎದ್ದು ಬಾಗಿಲನ್ನು ತೆರೆದು ಹೊರಕ್ಕೆ ಹೊರಟು ಉಪವನದ ಸೊಗಸನ್ನು ನೋಡುತ್ತ ತಿರುಗಾಡುತ್ತಿದ್ದನು. ಇದಿರಿನಲ್ಲಿ ಬಂದುಮಾವಿನ ಮರವು ಚಿಗುರಿನಿಂದಲೂ, ಹೂವು ಹೀಚು ಕಾಯಿಗಳಿಂದಲೂ ತುಂಬಿ ಮನೋಹರವಾಗಿ ಕಾಣುತ್ತಿದ್ದಿತು. ಅದರಮೇಲೆ ತುಂಬಿಗಳು ಕೋಗಿಲೆಗಳು ತುಂಬಿಕೊಂಡು ಧ್ವನಿಗೈಯುತ್ತಿದ್ದುವು. ಶಿವನು ಅದರ ಬಳಿಗೆ ಬಂದು, ಕೆಳಗೆ ಹಾಕಿದ್ದ ಚಂದ್ರಕಾಂತ ಶಿಲೆಯ ಜಗತಿಯಮೇಲೆ ಕುಳಿತುಕೊಂಡು, ವನದ ಚೆಲ್ವಿಕೆಯನ್ನು ನೋಡುತ್ತಿದ್ದನು. ಆ ಮರದಮೇಲೆ ಗೂಡುಕಟ್ಟಿಕೊಂಡಿದ್ದ ಮೃದುವಾಣಿಯೆಂಬ ಹೆಣ್ಣಿಳಿಯು, ತನ್ನ ಪ್ರಾಣಕಾಂತನಾದ ಮಧುಮಿತ್ರನೆಂಬ ಗಂಡುಗಿಳಿಯು ಕಳೆದರಾತ್ರಿ ಮನೆಗೆ ಬರದೆ ಇದ್ದುದನ್ನು ಕಂಡು ಖೇದಗೊಂಡು,—ಅಯ್ಯೋ! ನನ್ನ ನಾಯಕನನ್ನು ಬೆಕ್ಕು ನುಂಗಿತೋ! ಬೇಡರು ಬಲೆಯೊಡ್ಡಿ ಹಿಡಿದರೊ! ಕಲ್ಲಿನೇಟಿನಿಂದ ರಕ್ಕೆ ಮುರಿದುಕೊಂಡು ಹಾರಲಾರದೆ ಕುಳಿತಿರುವುದೋ! ಇನ್ನಾವುದಾದರೂ ಹೆಣ್ಣುಗಿಳಿಯ ರೂಪಯೌವನಾದಿಗಳನ್ನು ನೋಡಿ ಮೋಹಿಸಿ ಅದರ ರಕ್ಕಿಗೊಳಗಾಗಿ ನಿಂತಿತೋ! ಎಂದೂ ನಿಲ್ಲದೆಯಿರುತ್ತಿದ್ದ ರಮಣನು ಈಗ ತಪ್ಪಿಸಿಕೊಳ್ಳುವುದಕ್ಕೆ ಕಾರಣವೇನು? ಅಯ್ಯೋ! ವಿಧಿಯೆ! ಹಾ! ಎಂದು ಹಂಬಲಿಸಿ, ಕಣ್ಣೀರನ್ನು ಸುರಿಸುತ್ತಿದ್ದಿತು. ತನ್ನ ಪತಿಯ ಸದ್ದು ಎಲ್ಲಿಯಾದರೂ ಕೇಳಿಸುವುದೇ ಎಂದು ಬಂದು ಬಾರಿ ಕಿವಿಗೊಟ್ಟು ಸುತ್ತಲೂ ಆಲಿಸುವುದು; ಮತ್ತೊಂದುಬಾರಿ ದಾರಿ ದಾರಿಯನ್ನು ನೋಡುವುದು; ಮತ್ತೊಂದಾವೃತ್ತಿ ರೋದಿಸುತ್ತ ಗೂಡಿನೊಳಗೂ ಹೊರಗೂ ತಿರುಗುವುದು; ಎಲ್ಲೆಲ್ಲೂ ನಿಲ್ಲದೆ ರಕ್ಕೆಗಳನ್ನು ಜೋಲುಬಿಟ್ಟು ಆಹಾರವನ್ನು ತ್ಯಜಿಸಿ ನಿಟ್ಟುಸುರನ್ನು ಬಿಟ್ಟು, ಹಾ ರಮಣಾ! ನೀನು ನನ್ನ ಕಣ್ಣಿಗೆ ಮರೆಯಾದ ಬಳಿಕ

ನಾನು ಬಾಳುವುದುಂಟೆ? ನಿನ್ನ ರೂಪ ಸೌಂದರ್ಯ ಶೃಂಗಾರವಿಲಾಸಾದಿಗಳು ಮತ್ತಾವ ಗಿಳಿಗಾದರೂ ಉಂಟೆ? ನಿನ್ನ ಗುಣವನ್ನು ನಾನಿನ್ನೆಲ್ಲಿ ಕಾಣಲಿ? ಇಷ್ಟೇಕೆ ತಡವಾಯಿತು? ಬಾ, ನೋಡು, ಮುಖತೋರಿಸು, ಮಾತನಾಡಿಸು, ಚುಂಬಿಸು, ಆಲಿಂಗಿಸು, ಸುಖಿಸು, ಎಂದು ಮೊದಲಾಗಿ ಹೇಳಿಕೊಂಡು ವಿರಹದಿಂದ ಹಂಬಲಿಸುತ್ತಿದ್ದಿತು. ಅಷ್ಟರಲ್ಲಿ ಗಂಡುಗಿಳಿಯು ದೂರದಿಂದ ಬರುತ್ತ,—ತನ್ನ ಮನಃಕಾಂತೆಯು ವಿಯೋಗದುಃಖದಿಂದ ಸತ್ತಿರುವಳೋ! ಬದುಕಿರುವಳೋ! ಎಷ್ಟು ದುಃಖಿಸುವಳೊ! ಎಂದೂ ನನ್ನ ಅಗಲುವಿಕೆಯನ್ನು ಅನುಭವಿಸದ ರಮಣಿಯು ಎಷ್ಟು ಸಂತಾಪಪಟ್ಟಳೋ! ಎಷ್ಟು ಹೆದರಿದಳೋ! ಆದರೆ ನಾನು ಶಿವನ ಸೇವೆಯಲ್ಲಿ ನಿರತನಾಗಿದ್ದುದರಿಂದ ಅದರ ಫಲವು ನನಗೆ ಯಾವ ಅನಿಷ್ಟವನ್ನೂ ಉಂಟು ಮಾಡಲಾರದು, ಎಂದು ಯೋಚಿಸಿಕೊಳ್ಳುತ್ತ ಧೈರ್ಯದಿಂದ ಗೂಡಿನ ಬಳಿಗೆ ಬಂದಿತು. ಈ ಗಿಳಿಯ ರೆಕ್ಕೆಗಳು ಕೇಸರಿಯ ಜಲದಿಂದ ಸಿಕ್ತವಾಗಿದ್ದುವು. ಕತ್ತಿನಲ್ಲಿ ಗಂಧೋದಕದ ಲೇಪನವು ತೋರುತ್ತಿದ್ದಿತು. ಕೊಕ್ಕಿನಲ್ಲಿ ಕಸ್ತೂರೀಕರ್ದಮವು ಲಿಪ್ತವಾಗಿದ್ದಿತು. ಇವುಗಳ ಪರಿಮಳವು ಘಮ್ಮನೆ ಆ ಮರವನ್ನೆಲ್ಲ ತುಂಬಿತು. ಇದಾವುದೋ ಹೊಸಗಿಳಿ ಬಂದಿತೆಂದು ಕೋಪಿಸಿದ ಹೆಂಗಿಳಿಯು ಅವರ ದನಿಯನ್ನು ಕೇಳಿ ಗಂಡನೆಂದು ತಿಳಿದು, ಪ್ರಾಣಬಂದಂತೆ ಹರ್ಷಗೊಂಡೆದ್ದು, ಗುಟುಕನ್ನು ಪಡೆದು, ಕಾಮಾತುರದಿಂದ ಉಸುರಿನಲ್ಲಿ ಉಷ್ಣವು ಹೆಚ್ಚಲು, ಮೆಯ್ಮೇಳಕ್ಕೆ ಆತುರಿಸಿ, ಕಣ್ಣೀರನ್ನು ಸುರಿಸಿ, ಕಾತರಿಸುತ್ತಿರುವಲ್ಲಿ, ರಮಣನ ದೇಹದ ಗಂಧವನ್ನು ಕಂಡು, ಇದು ಅನ್ಯರಮಣಿಯ ಸಂಗದಿಂದ ಬಂದ ಸುವಾಸನೆಯೆಂದು ಯೋಚಿಸಿ ಕೋಪಿಸಿಕೊಂಡು, ಮುಖವನ್ನು ಗಂಟಿಕ್ಕಿ, ಕಣ್ಣನ್ನು ಮುಚ್ಚಿ, ದೇಹವನ್ನು ಹಿಂದೆಗೆದು, ಬಿರುಸಾಗಿ ಉಸುರನ್ನು ಬಿಡುತ್ತಿದ್ದಿತು. ಪ್ರಿಯೆಯ ಈ ಸ್ಥಿತಿಯನ್ನು ನೋಡಿ ಗಂಡುಗಿಳಿಯು ತತ್ತರಿಸಿ ಹೋಯಿತು. "ರಮಣೀ! ನಾನು ರಾತ್ರಿ ಬರದೆ ನಿಂತುದಕ್ಕೆ ನೀನು ಇಷ್ಟೊಂದು ಕೋಪಿಸಿಕೊಳ್ಳಬಹುದೆ? ನಮ್ಮನಮ್ಮ ಪ್ರೀತಿಯಲ್ಲಿ ಇದನ್ನೊಂದು ದೊಡ್ಡತಪ್ಪೆಂದು ನೀನು ಅರಿಯಬಹುದೆ? ನಿನ್ನ ಮನಸ್ಸಿಗೆ ಇದೇ ಅಪರಾಧವಾಗಿ ತೋರಿದಲ್ಲಿ ಇಂದಿಗೆ ದಯವಿಟ್ಟು ಕ್ಷಮಿಸು" ಎಂದು ಹೇಳಿ, ಕಾಲಿಗೆ ಬಿದ್ದಿತು.

ಹೆಂಗಿಳಯು ವಕ್ರದೃಷ್ಟಿಯಿಂದ ನೋಡಿ, ಕಾಲಿನಿಂದೊದೆದು ನೂಂಕಿ— "ಮತ್ತೆ ಇಲ್ಲಿಗೇಕೆ ಬಂದೆ? ನಿನ್ನೆ ಯಾವಳಲ್ಲಿದ್ದೆಯೋ ಅಲ್ಲೇ ಇರು ಹೋಗು, ನನ್ನಿಂದೇನು ಕೆಲಸ? ನೀನು ಎಷ್ಟು ಮುಚ್ಚಿದರೂ ನಿನ್ನ ಕಳ್ಳತನವು ನನಗೆ ಗೊತ್ತಾಗಲಿಲ್ಲವೆ? ಸಾಕು; ನಡೆ;" ಎಂದು ಸಿಡಿಮಿಡಿಗೊಂಡು ಗಜರಿತು. ಗಂಡುಗಿಳಯಾದರೂ— "ರಮಣೀ! ನಿನ್ನ ಹೊರತು ನನಗೆ ಪ್ರಿಯರಾದವರು ಲೋಕದಲ್ಲಿ ಮತ್ತಾರೂ ಇಲ್ಲ; ಮತ್ತಾವಳ ಸಂಗವನ್ನೂ ನಾನು ಸತ್ಯವಾಗಿಯೂ ಮಾಡಿದವನಲ್ಲ; ಸುಮ್ಮನೆ ನನ್ನ ಮೇಲೆ ಕೋಪಗೊಂಡು ನನ್ನ ಮನೋವ್ಯಥೆಯನ್ನು ಹೆಚ್ಚಿಸಬೇಡ; ನನ್ನ ಶರೀರದಲ್ಲಿ ಇಷ್ಟೊಂದು ಪರಿಮಳವುಂಟಾಗುವುದಕ್ಕೆ ಕಾರಣವೇನೆಂಬುದನ್ನು ನೀನು ವಿಚಾರಿಸದೆ ಸಂಶಯಪಡುವುದು ಉಚಿತವಲ್ಲ; ಪರಶಿವನು ಈ ಉದ್ಯಾನವನದ ಸರೋವರದಲ್ಲಿ ಜಲಕ್ರೀಡೆಯನ್ನು ಮಾಡಿದುದರಿಂದ ಅದು ಜಗತ್ತಿನಲ್ಲೆಲ್ಲ ಪುಣ್ಯತೀರ್ಥವೆಂದು ಪ್ರಸಿದ್ಧವಾಗಿರುವುದು; ಅದರಲ್ಲಿ ಹರಿಬ್ರಹ್ಮಾದಿಗಳೆಲ್ಲ ಸ್ನಾನಮಾಡಿ ಪುಣ್ಯಶರೀರರಾಗಿರುವರು; ಅಂತಹ ತೀರ್ಥದಲ್ಲಿ ಸ್ನಾನಮಾಡುತ್ತ ತಡವಾದುದರಿಂದ ರಾತ್ರಿ ಬರುವುದಕ್ಕೆ ನನಗೆ ಅವಕಾಶವಿಲ್ಲವಾಯಿತು; ಬೇಕಿದ್ದರೆ ಬಾ ನಿನಗೂ ತೋರಿಸುತ್ತೇನೆ, ಎಂದು ಹೇಳಿ ಸಮಾಧಾನಪಡಿಸಲು, ಎರಡೂ ಪರಸ್ಪರವಾಗಿ ಸಂತೋಷಿಸಿ, ಸುಖಿಸಿದುವು. ಇತ್ತ ಶಿವನು ಆ ಗಿಳಿಗಳ ಚರಿತ್ರವನ್ನೆಲ್ಲ ನೋಡುತ್ತಿರಲು, ಅತ್ತ ಮಂಚದ ಮೇಲೆ ಮಲಗಿದ್ದ ಪಾರ್ವತಿಯು ನಿದ್ರೆತಿಳಿದೆದ್ದು, ಮಗ್ಗುಲಲ್ಲಿ ಶಿವನಿಲ್ಲದಿರುವುದನ್ನು ಕಂಡು, ಎತ್ತ ಹೋದನೊ! ಎಂದು ಅಂತಃಪುರದಲ್ಲೆಲ್ಲ ತಡಕಿ, ಕಾಣದೆ, ಜಲಕ್ರೀಡೆಯ ಆಸಕ್ತಿಯಿಂದ ಮತ್ತಾವಸಖಿಯನ್ನಾದರೂ ಕೂಡಿಕೊಂಡು ಹೋಗಿರುವನೋ! ಎಂದು ಯೋಚಿಸಿ, ವನದಲ್ಲೆಲ್ಲ ಹುಡುಕುತ್ತ ಬಂದಳು. ಮರಗಳು ಲತಾಗೃಹಗಳು ಸರಸ್ತೀರಗಳು ಜಗತಿಗಳು ಹೂವಿನ ಚಪ್ಪರಗಳು ಕ್ರೀಡಾಪರ್ವತಗಳು ಕೊಳಗಳು ಮೊದಲಾದೆಡೆಯಲ್ಲೆಲ್ಲ ಹುಡುಕಿಕೊಂಡು ಬರುತ್ತ, ಮಾವಿನ ಮರದ ಕೆಳಗೆ ಶಿವನೊಬ್ಬನೇ ಕುಳಿತಿರುವುದನ್ನು ಕಂಡಳು. ಸಂತೋಷದಿಂದ ರೋಷಾಂಚಗೊಂಡು ಕಣ್ಣೀರನ್ನು ಸುರಿಸಿದಳು. ತಾನೊಬ್ಬಳೇ ಅರಸಿಕೊಂಡು ಬಂದುದಕ್ಕೆ ಭೀತಿಯನ್ನೂ ಲಜ್ಜೆಯನ್ನೂ ಹೊಂದಿದಳು. ಆಭರಣಾಂಗಳು

ಸದ್ದಾಗದಂತೆ ಬಂದು ಲತಾಮಂಟಪದ ಮರೆಗೆ ಹೋಗಿ ನಿಂತು, ತನ್ನನ್ನು ತಡಕಿಕೊಂಡು ಬಂದ ಸಖಿಯರನ್ನೆಲ್ಲ ಕೈಸನ್ನೆಯಿಂದ ಹಿಂದಕ್ಕೆ ಕಳುಹಿ, ಮೆಲ್ಲನೆ ಶಿವನ ಹಿಂಗಡೆಗೆ ಬಂದು, ತನ್ನ ಕರಪಲ್ಲವದಿಂದ ಶಿವನ ಕಣ್ಣುಗಳನ್ನು ಬಿಮ್ಮನೆ ಮುಚ್ಚಿದಳು. ಆ ಹಸ್ತಗಳ ಸೊಂಕಿನಿಂದಲೇ ಈ ಕೆಯು ಪಾರ್ವತಿಯೆಂದು ಶಂಕರನು ತಿಳಿದನು. ಮತ್ತೂ ಪ್ರಿಯತಮೆಯ ಸ್ಪರ್ಶದಿಂದ ತನ್ನ ದೇಹದಲ್ಲಿ ರೋಮಾಂಚಿತನಾಗಿ, ಪರವಶನಾದನು. ಶಿವನ ಕಣ್ಣುಗಳು ಯಾವಾಗ ಮುಚ್ಚಲ್ಪಟ್ಟವೋ ಆಕೂಡಲೇ ಅವನಕಣ್ಣುಗಳೇ ತಾವಾದ ಸೂರ್ಯಚಂದ್ರಮಂಡಲಗಳು ಕಾಣದಂತಾದುವು. ಘೋರಾಂಧಕಾರವು ಜಗತ್ತನ್ನೆಲ್ಲ ಆವರಿಸಿತು. ಲೋಕದವರ ಕಣ್ಣೆಲ್ಲ ಮುಚ್ಚಿದಂತಾದುವು. ಇದೇನು ದೊಡ್ಡಕಾಡಿಗೆಯ ಭರಣಿಯೋ! ಕಾಳರಾತ್ರಿಗಳ ಬಬ್ಬಳಿಯೋ! ಪ್ರಳಯಕಾಲದ ಮೇಘಗಳ ಬಡ್ಡೋ! ಮಾಯೆಯ ಬೀಜದ ಒಟ್ಟಲೋ! ವಿಷದ ಗುಳಿಯೊ! ಎಂಬಂತೆ ಬ್ರಹ್ಮಾಂಡಸ್ವರೂಪವು ಕರ್ರನೆ ಭೀಕರವಾಯಿತು. ಅಂತಹ ಮಹಾಂಧಕಾರದಲ್ಲಿ ಜಗತ್ತಿನ ಜನವು ಅತ್ತಿತ್ತ ತಿರುಗಾಡಲಾರದೆ ದಾರಿಕಾಣದೆ ನಿಂತಕಡೆ ನಿಂತು, ಕುಳಿತಕಡೆ ಕುಳಿತು, ಆಹಾರಗಳಿಲ್ಲದೆ ಲಯಗೊಳ್ಳುತ್ತ ಬಂದಿತು. ಹರಿಬ್ರಹ್ಮಾದಿಗಳು—ಅಕಸ್ಮಾತ್ತಾಗಿ ಇದೇನು ಪ್ರಳಯಕಾಲವು ಸಂಧಿಸಿತು! ಎಂದು ದಿಗಿಲುಬಿದ್ದು, ಮೃತ್ಯುಂಜಯಧ್ಯಾನವನ್ನು ಮಾಡಿದರು. ಅಷ್ಟರಲ್ಲಿ ಪಾರ್ವತಿಯ ಕಣ್ಣುಗಳಿಂದ ಸುರಿದ ಆನಂದಾಶ್ರುವು ಬೆನ್ನಿಗೆ ಇಳಿದು ತಣ್ಣಗಾಗಲು, ಶಂಕರನು ಎಚ್ಚತ್ತು, ಕತ್ತಲೆಯಿಂದ ಲೋಕಕ್ಕುಂಟಾಗಿರುವ ವಿಪತ್ತನ್ನು ತಿಳಿದು, ಬಲಾತ್ಕಾರದಿಂದ ಕೈಗಳನ್ನು ಬಿಡಿಸಿದರೆ ಪಾರ್ವತಿಯು ಕೋಪಗೊಳ್ಳುವಳೆಂದು ಯೋಚಿಸಿ, ಕತ್ತಲೆಯ ಮನೆಗೆ ದೀಪವನ್ನಿಟ್ಟು ಬೆಳಕುಗೊಳಿಸುವಂತೆ ಮಾಡಬೇಕೆಂದು, ಹಣೆಗಣ್ಣಿನ ಕೊನೆಯನ್ನು ಸ್ವಲ್ಪಮಾತ್ರವೇ ತೆರೆದನು. ಅದರಿಂದಾದದ್ಭುತವನ್ನು ಏನು ಹೇಳಲಿ! ಮಹಾಗ್ನಿಜ್ವಾಲೆಯು ಭುಗಿಲುಭುಗಿಲೆಂದು ಹೊರಟಿತು. ಕತ್ತಲೆಯು ಹರಿದೋಡಿತು. ಮತ್ತೂ ಒಂದುಕಾರಣಕ್ಕಾಗಿ ಶಿವನಾಜ್ಞೆಯಿಂದ ಆಗಾಢಾಂಧಕಾರವೆಲ್ಲ ಒಟ್ಟುಗೂಡಿ ಬಲಿದು, ಒಂದುಶಿಶುವಿನಾಕಾರವನ್ನು ಧರಿಸಿ, ಶಿವನ ಬಳಿಗೆ ಬಂದು ನಿಂತಿತು. ಅತ್ತ ಅಗ್ನಿಜ್ವಾಲೆಯು ಬ್ರಹ್ಮಾಂಡಕಟಾಹ

ವನ್ನೆಲ್ಲ ಬೆಳಗಿ ಉರಿದುಂಬಿಸಿತು. ಎತ್ತ ನೋಡಿದರೂ ಹೊಗೆ ಕಿಡಿ ದಳ್ಳುರಿಗಳೇ ಕಾಣುತ್ತಿದ್ದುವು. ಭುಗಿಭುಗಿಲ್ ಛಟಛಟಿಲ್ ಧಗಧಗಂ ಎಂಬ ಶಬ್ದವೇ ಕೇಳಿಸುತ್ತಿದ್ದಿತು. ಬೆಟ್ಟಗಳು ಸಿಡಿದುವು. ಸಮುದ್ರಗಳು ಕುದಿದುವು. ಭೂಮಿಯು ಬಿರಿದಿತು. ಪಾತಾಳದ ದಿಗ್ಗಜಕೂರ್ಮಶೇಷರುಗಳು ಕೈ ಕಾಲು ಬೆನ್ನು ಹೆಡೆಗಳನ್ನು ಕೊಡಹಿಕೊಂಡು ಭೂಮಿಯನ್ನು ನಡುಗಿಸಿದುವು. ಗಗನತಟದ ಮೇಘಗಳೆಲ್ಲ ಚಿಂದಿಯ್ಗನೆ ಸೀದುಹೋದುವು. ಪಕ್ಷಿಗಳು ಪುರುಪುರನೆ ಉರಿದುಹೋದುವು. ಆನೆ ಸಿಂಹ ಹುಲಿ ಕರಡಿ ಶರಭ ಮೊದಲಾದ ವ್ಯಾಗಗಳೆಲ್ಲ ಬೆಂದು ಕಿರುಚಾಡಿ ಸತ್ತುವು. ದನುಜ ದಿವಿಜ ಮನುಜಾದಿಗಳೆಲ್ಲರೂ ಬೆಂದು ಬಸವಳಿದು ನಿಶ್ಚೇತನರಾದರು. ಹರಿ ಬ್ರಹ್ಮರು ಹಾ! ಎಂದು ಮೊರೆಯಿಟ್ಟರು. ಶಿವನೇ ರಕ್ಷಿಸೆಂದು ಮನು ಮುನಿಗಳು ಕೂಗಿದರು. ಆಗ ಪಾರ್ವತಿಯು ಇದೆಲ್ಲಾ ತನ್ನ ಅಪರಾಧದ ಫಲವೆಂದು ತಿಳಿದು, ಮುಚ್ಚಿದ್ದ ಕೈಗಳನ್ನು ಥಟ್ಟನೆ ತೆರೆದಳು. ಪಾರ್ವತಿಯ ಕೈಗಳಲ್ಲಿ ತುಂಬಿದ್ದ ಶಿವನ ಆನಂದಾಶ್ರುವು ಹತ್ತು ಬೆರಲುಗಳ ಮಾರ್ಗವಾಗಿಯೂ ಭೂಮಿಯಮೇಲೆ ಝುಲ್ಲನೆ ಸುರಿದು ಹತ್ತು ಹೊಳೆಗಳಾಯಿತು. ಹಜ್ಜೆಹಜ್ಜೆಗೆ ಸಾವಿರ ಹತ್ತು ಸಾವಿರ ಲಕ್ಷಾನುಲಕ್ಷಭಾಗಗಳಾಗಿ ಭೂಲೋಕವನ್ನೆಲ್ಲ ವ್ಯಾಪಿಸಿ ಭೋರೆಂದು ಮೊರೆದು ಹರಿದಿತು. ಇದರಿಂದ ಬೆಂಕಿಯೆಲ್ಲ ಆರಿಹೋಯಿತು. ಜಗತ್ತೆಲ್ಲ ಜಲಮಯವಾಯಿತು. ಎತ್ತ ನೋಡಿದರೂ ಸುಳಿ ನೊರೆ ತೆರೆಗಳಿಂದ ಕೂಡಿದ ಪ್ರವಾಹ, ಎಲ್ಲಿ ನೋಡಿದರೂ ಕೊಚ್ಚಿ ಬರುವ ಕಲ್ಲು ಗುಂಡುಗಳು ಕಾಣುವಂತಾದುವು. ಮಹಾಪ್ರಳಯಕಾಲದಲ್ಲಿ ವಿಕಾರ್ಣವವಾಗುವಂತೆ ಲೋಕವೆಲ್ಲ ತೋರಿತು. ಅಷ್ಟಿಷ್ಟು ಉಳಿದಿದ್ದ ಸುರನರೋರಗರೆಲ್ಲ ನೀರಿನಲ್ಲಿ ಮುಳುಗಿ ಪ್ರಾಣಬಿಟ್ಟರು. ಹರಿಯು ಆಲದೆಲೆಯಮೇಲೆ ಮಲಗಿ ಮುಳುಗುತ್ತಲೂ ತೇಲುತ್ತಲೂ ಬಾಯ್ಗೆ ತುಂಬಿದ ನೀರನ್ನು ಉಗುಳುತ್ತಲೂ, ಭಯದಿಂದ ಕಣ್ಣುಗುಡ್ಡೆಗಳನ್ನು ದಿಕ್ಕುದಿಕ್ಕಿಗೆ ತಿರುಗಿಸಿ ಕಂಪಿಸುತ್ತಲೂ ಕಾಲಯಾಪನೆ ಮಾಡುತ್ತಿದ್ದನು. ಈ ಮಹಾಪ್ರಳಯವನ್ನು ಕಂಡು ಶಂಕರಿಯು ಬೆರಗಾದಳು. ಜಗತ್ತಿಗೆ ನಾಶವುಂಟಾಯ್ತೆಂದು ತಿಳಿದು, ಅದರ ಉದ್ಧಾರಕ್ಕಾಗಿ ಪರಶಿವನು ತನ್ನ ಜಡೆಯ ತುದಿಯನ್ನು ಹಿಡಿದು ಆ ಮಹಾಜಲಕ್ಕೆ ಅದ್ದ

ಲು, ಬ್ರಹ್ಮಾಂಡವನ್ನೆಲ್ಲ ತುಂಬಿ ತುಳುಕುತ್ತಿದ್ದ ನೀರು ಸುರ್ರನೆ ಸುರುಗಿ ಒಂದು ಮಣಿಯಂತೆ ಜಟಾಗ್ರದಲ್ಲಿ ನೆಲಸಿತು. ಹೀಗೆ ಗಂಗೆಯನ್ನು ಧರಿಸಿದ ಶಿವನು ಗಂಗಾಧರಲೀಲೆಯನ್ನು ಅನುಭವಿಸಿದನು. ಬಳಿಕ ಕರುಣದಿಂದ ಜಗತ್ತೆಲ್ಲ ಎಂದಿನಂತೆ ಉದ್ಭವಿಸಲಿ ಎಂದು ಅನುಗ್ರಹಿಸಿದನು: ಸುರ ನರೋರಗ ಯಕ್ಷ ರಾಕ್ಷಸಖಗಮೃಗಪಿಪೀಲಿಕಾದಿಗಳೆಲ್ಲವೂ ಜಗತ್ತಿನಲ್ಲಿ ತುಂಬಿ ತಮ್ಮ ತಮ್ಮ ಕಾರ್ಯದಲ್ಲಿ ತೊಡಗಿದುವು; ಎಂದು ಚೆನ್ನಬಸವೇಶನು ಹೇಳಲು, ಸಿದ್ಧರಾಮೇಶನು ಕೇಳಿ; ಆಶ್ಚರ್ಯಪಟ್ಟು,— ಗುರುವೆ! ಈ ದೊಡ್ಡ ಮೂರುಪ್ರಳಯಗಳಿಂದ ಲೋಕವೆಲ್ಲ ಅಳಿದುಹೋದಾಗ ಶಿವನು ಎಲ್ಲಿ ಹೇಗೆ ನಿಂತಿದ್ದನು? ಎಂದು ಕೇಳಿದನು. ಚೆನ್ನಬಸವೇಶನು ಅದಕ್ಕೆ ನಕ್ಕು, ಎಲೆ ಸಿದ್ಧರಾಮನೇ! ಆ ಸ್ವಾಮಿಯು ಹುಬ್ಬಿನ ಕೊನೆಯನ್ನು ಸ್ವಲ್ಪ ಅಲುಗಿಸಿದ ಮಾತ್ರದಿಂದಲೇ ಈ ಜಗತ್ತೆಲ್ಲವನ್ನೂ ಲಯಗೊಳಿಸಿ ಸೃಷ್ಟಿಸುವನು. ಅಂಥವನಿಗೆ ಇದಾವ ಮಹಾಶ್ಚರ್ಯ? ಅತ್ತಿಯ ಮರದಲ್ಲಿ ಕಾಯಿಗಳು ಕಚ್ಚಿರುವಂತೆ ಆ ಮಹಾದೇವನ ರೋಮಕೂಪಗಳಲ್ಲೆಲ್ಲ ಅನಂತಬ್ರಹ್ಮಾಂಡಗಳು ತುಂಬಿರುವುವು. ಮರದ ಹಣ್ಣುಗಳು ಕಳಿತು ಬಿದ್ದುಹೋದನಂತರ ಬರುವ ವರ್ಷಕ್ಕೆ ಅದರಂತೆಯೇ ಮತ್ತೆ ಬೇರೆ ಕಾಯಿಗಳು ಮೂಡಿ ಹೇಗೆ ತುಂಬಿಕೊಳ್ಳುವುವೋ ಹಾಗೆ ಕಾಲಕ್ರಮದಿಂದ ಅಳಿದ ಪ್ರಪಂಚವು ಮತ್ತೆ ಶಿವನ ಇಚ್ಛಾಮಾತ್ರದಿಂದುದ್ಭವಿಸುವುದು. ಶಿವನ ಲೀಲಾವಿಶೇಷಕ್ಕೆ ಇದಾವ ಘನವು? ಅಂತಹ ತ್ರಿಪ್ರಳಯಗಳಲ್ಲೂ ಶಿವನು ಕತ್ತಲೆಯ ಮನೆಯಲ್ಲಿ ರತ್ನದೀಪವಿರುವಂತೆಯೂ, ಕಾಳ್ಗಿಚ್ಚು ಮುತ್ತಿರುವ ಕೊಳದಂತೆಯೂ, ಸಮುದ್ರವು ಸುತ್ತುವರಿದಿರುವ ಬಡಬಾಗ್ನಿಯಂತೆಯೂ ಅವುಗಳ ಬಾಧೆಗೆ ಸಿಲ್ಕದೆ, ಉಪವನದ ಚಂದ್ರಕಾಂತಶಿಲೆಯ ಜಗತಿಯಮೇಲೆಯೇ ಪಾರ್ವತೀಸಮೇತನಾಗಿ ಕುಳಿತು ನಲಿಯುತ್ತಿದ್ದನು. ಅವನ ಮಾಹಾತ್ಮ್ಯವನ್ನು ವರ್ಣಿಸುವುದಕ್ಕೆ ಯಾರಿಂದಾಗುವುದು? ಎಂದು ಹೇಳಿದನೆಂಬಲ್ಲಿಗೆ ಆರನೆ ಅಧ್ಯಾಯವು ಸಂಪೂರ್ಣವು.



೭೬ ನೆ ಅಧ್ಯಾಯವು.

ಅಂಧಕಾಸುರಪ್ರಾಬಲ್ಯವು.

ಎಲೆ ಸಿದ್ಧರಾನೇಶನೆ, ಕೇಳು,— ಹಿರಣ್ಯಾಕ್ಷನೆಂಬ ಅಸುರನೊಬ್ಬನು ಪುತ್ರವರವನ್ನು ಪಡೆಯುವುದಕ್ಕಾಗಿ ಕೈಲಾಸಗಿರಿಯ ತಪ್ಪಲಿನಲ್ಲಿ ಶಿವನನ್ನುಕುರಿತು ಘೋರ ತಪಸ್ಸನ್ನಾಚರಿಸುತ್ತಿದ್ದನು. ಪಾರ್ವತಿಯು ಕಣ್ಣನ್ನು ಮುಚ್ಚಲಾಗಿ ಅದರಿಂದ ಜನಿಸಿದ ಕತ್ತಲೆಯೇ ಶಿಶುರೂಪಾಂತು ಶಿವನ ಬಳಿಯಲ್ಲಿ ನಿಂತಿದ್ದಿತಷ್ಟೆ. ಆ ಮಗುವನ್ನೇ ಹಿರಣ್ಯಾಕ್ಷನಿಗೆ ಕೊಡಬೇಕೆಂದು ಶಂಕರನು ಯೋಚಿಸಿ, ಪಾರ್ವತೀಸಮೇತನಾಗಿ ಆಶಿಶುವನ್ನು ಕರೆದುಕೊಂಡು ಕನಕಾಕ್ಷನಿದ್ದಲ್ಲಿಗೆ ಬಂದು ಕಾಣಿಸಿಕೊಂಡು ನಿನ್ನ ಷ್ಟಾರ್ಥವೇನೆಂದು ಕೇಳಿದನು. ರಕ್ಕಸನು ಕಣ್ದೆರೆದು ಎದ್ದು ಶಿವನಿಗೆ ನಮಸ್ಕರಿಸಿ,—ದೇವದೇವೋತ್ತಮನೆ ! ವಿಷ್ಣುಬ್ರಹ್ಮಾದಿಗಳನ್ನೆಲ್ಲ ತನ್ನ ಶಕ್ತಿಯಿಂದ ಗೆಲ್ಲುವ ಮಗನನ್ನು ನನಗೆ ಅನುಗ್ರಹಿಸಬೇಕು, ಎಂದು ಬೇಡಿದನು. ಆಗ ಶಂಕರನು ತನ್ನ ಬಳಿಯಲ್ಲಿ ನಿಂತಿದ್ದ ಶಿಶುವನ್ನು ಕನಕಾಕ್ಷನ ಮುಂಗಡೆಯಲ್ಲಿ ನಿಲ್ಲಿಸಿ, ಇದೋ ಅಂಧಕಾವತಾರರೂಪನಾಗಿರುವ ಈಮಗನು ನಿನ್ನಿಷ್ಟದಂತೆ ಮಹಾಪರಾಕ್ರಮದಿಂದ ಜಯಶೀಲನಾಗುವನು, ಪರಿಗ್ರಹಿಸು ; ಎಂದು ಹೇಳಿ ಅನುಗ್ರಹಿಸಿ, ತನ್ನ ಸ್ಥಾನಕ್ಕೆ ತೆರಳಿದನು. ಕನಕಾಕ್ಷನು ಆ ಮಗುವನ್ನೆತ್ತಿ ತಬ್ಬಿ ಮುದ್ದಾಡಿ ಸಂತೋಷಗೊಂಡು, ತನ್ನ ಪಟ್ಟಣಕ್ಕೆ ಸುದ್ದಿಯನ್ನು ಕಳುಹಿ, ಅಲಂಕಾರಗೊಳಿಸಿ, ಕಲಶಕನ್ನಡಿ ಆರತಿ ಮೊದಲಾದುವುಗಳನ್ನು ಪಿಡಿವ ಮುತ್ತೈದೆಯರಿಂದ ಇದಿರ್ಗೊಂಡು ಮೈಭವದಿಂದ ಪುರಪ್ರವೇಶವನ್ನುಮಾಡಿ, ಅರಮನೆಯಲ್ಲಿರುವ ತನ್ನ ಪತ್ನಿಯ ಹಸ್ತಕ್ಕೆ ವರಪುತ್ರನನ್ನು ಕೊಟ್ಟನು. ಆಕೆಯು ಕಂದನನ್ನು ಸಂಭ್ರಮದಿಂದೆತ್ತಿ ತೊಡೆಯಮೇಲೆ ಮಲಗಿಸಿ, ಹಾಲುಚಿಮ್ಮುತ್ತಿರುವ ಮೊಲೆಯನ್ನುಣಿಸಿ, ಮುದ್ದಾಡಿ "ತ್ರಿಲೋ" ಎಂದು ಪಾಡಿ, ಚಿನ್ನದ ತೊಟ್ಟಿಲಲ್ಲಿ ಮಲಗಿಸಿ ಜೋಗುಳವನ್ನು ಹೇಳಿ ಸಖಿಯರೊಡನೆ ತೂಗಿ, ಸಂತೋಷದಿಂದ ತನ್ನ ಪತಿಯ ಸಾಹಸವನ್ನು ನೆನೆನೆನೆದು ಕೊಂಡಾಡಿದಳು. ಮತ್ತೂ ಸತಿಪತಿಗಳು ಶುಭದಿವಸದಲ್ಲಿ ಗುರುವಾದ ಶುಕ್ರಾಚಾರ್ಯನ ನೇಮದಂತೆ

ಶಿವನ ಬಾಯಿಂದ ಬಂದಿದ್ದ ನಾಮವನ್ನೇ ಅನುಸರಿಸಿ, "ಅಂಧಕಾಸುರ" ನೆಂದು ಮಗನಿಗೆ ನಾಮಕರಣ ಮಾಡಿದರು. ಆತನು ದೇವತೆಗಳ ಮಹಾ ಮೃತ್ಯುವು ವೃದ್ಧಿಗೊಳ್ಳುತ್ತಿರುವಂತೆಯೂ, ಪಾಪಸ್ವರೂಪವು ಬಳೆಯುತ್ತಿರುವಂತೆಯೂ, ಮಾಯೆಯ ಬೆಟ್ಟವು ದೊಡ್ಡದಾಗುತ್ತಿರುವಂತೆಯೂ ದಿನದಿನಕ್ಕೆ ಪ್ರವರ್ಧಮಾನನಾಗುತ್ತ ಬಂದನು. ಹೀಗಿರುತ್ತಿರುವಲ್ಲಿ ಈತನ ತಂದೆಯಾದ ಹಿರಣ್ಯಾಕ್ಷನೂ, ಅವನ ಸಹೋದರನಾದ ಹಿರಣ್ಯಕಶಿಪುವೂ ವರಾಹ ನೃಸಿಹ್ಮಾವತಾರವನ್ನು ಧರಿಸಿದ್ದ ಹರಿಯಿಂದ ಮೃತರಾಗಲಾಗಿ, ಅವರ ದುರ್ಗಗಳಲ್ಲಿ ಅವರ ಅಣ್ಣತಮ್ಮಂದಿರ ಮಕ್ಕಳು ಮಿತ್ರರು ಮಂತ್ರಿಗಳು ದಳವಾಯಿಗಳು ಭಟರು ಮೊದಲಾದವರುಗಳೆಲ್ಲ ವಾಸವಮಾಡಿಕೊಂಡಿದ್ದರು. ಅವರೆಲ್ಲರನ್ನೂ ಅಂಧಕಾಸುರನ ಬಳಿಗೆ ಹೋಗಿ ಓಲೈಸಿಕೊಂಡಿರುವಂತೆ ಶುಕ್ರಾಚಾರ್ಯನು ಬೆಸಸಲಾಗಿ ಅದರಂತೆಯೇ ಅವರುಗಳು ಬಂದು ಈ ಅಸುರನಿಗೆ ರಾಕ್ಷಸರಾಜಪಟ್ಟವನ್ನು ಕಟ್ಟಕಾಣ್ಕೆಯಿತ್ತು ನಮಸ್ಕರಿಸಿ ಓಲೈಸಿಕೊಂಡಿದ್ದರು. ಇದರಿಂದ ಮದವೇರಿದ ಆನೆಯ ಕೈಗೆ ಆಯುಧವನ್ನು ಕೊಟ್ಟಂತೆಯೂ. ಹಸಿದ ಹೊಸಹಾವಿಗೆ ರಕ್ಕೆಮೂಡಿದಂತೆಯೂ ಕೋಪದಿಂದ ಆರ್ಭಟಿಸುವ ಹಿರಿಯ ಹುಲಿಗೆ ಧೈರ್ಯವು ಮೂಡಿದಂತೆಯೂ, ಕತ್ತಲೆಗೆ ಕಾರಿಣ್ಯವು ದೊರೆಕೊಂಡಂತೆಯೂ, ಮತ್ತಷ್ಟು ಸಹಾಯಕವಾಗಿ ಈ ರಾಕ್ಷಸರಾಜನ ಶೌರ್ಯಸಾಹಸ ಬಲಗಳು ದಿನದಿನಕ್ಕೆ ಹೆಚ್ಚುತ್ತ ಬಂದುವು. ಭೂಮಿಯಮೇಲಿದ್ದ ಅನೇಕರಾಜರುಗಳ ಗಿರಿವನದುರ್ಗಾದಿಗಳನ್ನೆಲ್ಲ ತನ್ನಧೀನಮಾಡಿಕೊಳ್ಳುತ್ತ ಬಂದನು. ಸಪ್ತದ್ವೀಪ ಸಪ್ತಸಮುದ್ರಾದಿ ಭೂಲೋಕವೆಲ್ಲ ತನ್ನಧೀನವಾದಬಳಿಕ ಸ್ವರ್ಗಲೋಕಕ್ಕೂ ದಾಳಿಯಿಟ್ಟನು. ಇಂದ್ರಾದಿದಿಕ್ಪಾಲಕರನ್ನು ಸದೆಬಡಿದು ಅವರವರ ಲೋಕದಿಂದ ಓಡಿಸಿದನು. ದೇವಾಂಗನೆಯರನ್ನೆಲ್ಲ ಸೆರೆಹಿಡಿಸಿ ತನ್ನ ಪಟ್ಟಣಕ್ಕೆ ಸಾಗಿಸಿದನು. ಕೊನೆಗೆ ಸತ್ಯಲೋಕ ವೈಕುಂಠಲೋಕಗಳಿಗೂ ನುಗ್ಗಿ ಬ್ರಹ್ಮವಿಷ್ಣುಗಳನ್ನೋಡಿಸಿದನು. ಅವರು ಹೆಂಡಿರುಗಳನ್ನು ಕಟ್ಟಕೊಂಡು ಕೈಲಾಸಪರ್ವತಕ್ಕೆ ಹೋಗಿ, ಶಿವನ ಮರೆಹೊಕ್ಕರು. ಇತ್ತ ಅಂಧಕಾಸುರನಿಗೆ ಚತುಸ್ಸಾಗರಮಧ್ಯದ ಭೂಮಿಯೆಲ್ಲ ಅಧೀನವೇ ಆಯಿತು. ಅವನಿಗಿದಿರಾಗುವವರು ಸ್ವರ್ಗಮರ್ತ್ಯಪಾತಾಳಗಳಲ್ಲಿ ಒಬ್ಬರೂ ಇಲ್ಲದಂ

ತಾದರು. ಅವನ ಭುಜಪರಾಕ್ರಮವು ತ್ರಿಲೋಕದಲ್ಲೂ ಹರಡಿಕೊಂಡಿತು. ಕೀರ್ತಿಯು ದಿಙ್ಮಂಡಲವನ್ನೆಲ್ಲ ತುಂಬಿತು. ಇಂತಹ ಘನತೆಯಿಂದ ಮೆರೆಯುತ್ತಿದ್ದ ರಾಕ್ಷಸರಾಜನು ಒಂದು ದಿವಸ ತನ್ನ ಸುವರ್ಣಮಯವಾದ ರತ್ನಖಚಿತ ಸಿಹ್ಮಾಸನದಲ್ಲಿ ಮೂರ್ತಿಗೊಂದು ಬಡ್ಡೀಲಗದಲ್ಲಿರುವಾಗ, ನೀಲಗಿರಿಯಂತೆ ಸ್ಥೂಲರಾಗಿಯೂ, ಕೆಮ್ಮಾಸೆ ಕೆಂಗಣ್ಣುಗಳಿಂದ ಭೀಕರರಾಗಿಯೂ, ಹುಬ್ಬುಗಳನ್ನು ಬಿಗಿದು ಕೋರೆದಾಡೆಗಳನ್ನು ಕಿರಿದು ಹೆವ್ಮಾರಿಗಳಂತೆ ಕಾಣುತ್ತಲೂ, ಗುಂಜುರುದಲೆ–ಸಲಾಕೆಯರೋಮ–ದೊಡ್ಡಹೊಟ್ಟೆ–ಕೊಬ್ಬಿದ ತೊಡೆ–ಬಿರುದಿನ ಪೆಂಡೆಯ–ಹೆಗ್ಗಾಲು–ಇವುಗಳಿಂದ ಮಹಾಕ್ರೂರರಾಗಿಯೂ, ತೋರುತ್ತಿರುವ ದೈತ್ಯರುಗಳು ಮಣಿಕಿರೀಟ ಕಂಕಣಕುಂಡಲ ಬಾಹುಪ್ರೂರಗಳನ್ನು ಧರಿಸಿ, ಆಯುಧಗಳನ್ನು ಹಿಡಿದು ಸಭೆಗೆ ಬಂದು ಮರ್ಯಾದಿಸಿ ಕುಳಿತುಕೊಂಡರು. ವಂದಿಗಳು ಅಂಧಕಾಸುರನ ಬಿರುದಾವಳಿಗಳನ್ನು ಹೊಗಳುತ್ತಿದ್ದರು. ನರ್ತಕಿಯರು ಕುಣಿಯುತ್ತಿದ್ದರು. ಸಚಿವರು ಚಾಮರಗಳನ್ನು ಹಾಕುತ್ತಿದ್ದರು. ಇಂತಹ ಸಭೆಗೆ ನಾರದಮುನಿಯು ವೀಣಾವ್ಯಾಸಂಗವನ್ನು ಮಾಡುತ್ತ ಆಕಾಶಮಾರ್ಗದಿಂದಿಳಿದು ಬಂದನು. ರಾಕ್ಷಸರಾಜನು ಪೀಠದಿಂದೆದ್ದು ಋಷಿವರನಿಗೆ ನಮಸ್ಕರಿಸಿ, ಆಶೀರ್ವಾದವನ್ನು ಪಡೆದು, ತನ್ನ ಪೀಠದಲ್ಲೇ ಕುಳ್ಳಿರಿಸಿಕೊಂಡು—ಪೂಜ್ಯರೇ! ಎಷ್ಟೋ ಪುಣ್ಯಫಲದಿಂದ ಈದಿನ ತಮ್ಮ ದರ್ಶನವು ನನಗೆ ಲಭಿಸಿತು; ಎಲ್ಲಿಂದ ಇಲ್ಲಿಗೆ ದಯೆಮಾಡಿಸಿದಿರಿ? ಬಂದ ಕಾರ್ಯವೇನು? ಎಂದು ಬೆಸಗೊಂಡನು. ನಾರದನು ಮಂದಹಾಸದಿಂದ—ರಾಕ್ಷಸೇಂದ್ರನೆ! ನಾನು ತ್ರಿಲೋಕವನ್ನೂ ಸಂಚರಿಸಿಕೊಂಡು ಕೈಲಾಸಕ್ಕೆ ಹೋದೆನು. ನಿಮ್ಮಪ್ಪನನ್ನು ಕೊಂದು ಈಗ ನಿನ್ನಿಂದ ಪರಾಜಿತರಾದ ವಿಷ್ಣುವೂ ಬ್ರಹ್ಮೇಂದ್ರಾದಿಗಳೂ ಅಲ್ಲಿಗೆ ಬಂದು ನಿನ್ನ ಪರಾಕ್ರಮವನ್ನು ಕುರಿತು ಶಿವನೊಡನೆ ದೂರುಹೇಳಿ, ನಿನ್ನಮೇಲೆ ಯುದ್ಧಕ್ಕೆ ಶಂಕನಾದವನ್ನು ಪೊರಡಿಸಿಗುವರು. ಆ ಸುದ್ದಿಯನ್ನು ತಿಳಿಸುವುದಕ್ಕಾಗಿ ನಾನಿಲ್ಲಿಗೆ ಬಂದೆನು; ಎಂದು ಹೇಳಲು, ರಕ್ಕಸನು ಕೇಳಿ, ಭುಜವು ಕುಣಿಯುವಂತೆ ಕೇಕಿಹಾಕಿ ನಕ್ಕು, ಶುಕ್ರಾಚಾರ್ಯನ ಮುಖವನ್ನು ನೋಡಿ, ಗುರುವೆ! ತ್ರಿಲೋಕವೂ ನಮ್ಮ ವಶವಾಗಿರುವುದೆಂದು ತಿಳಿದಿದ್ದೆ; ಆದರೆ ಇನ್ನಾರೋ ಒಬ್ಬನು ಕೈಲಾಸದಲ್ಲಿ

ಉಳಿದಿರುವನೆಂಬುದನ್ನು ನಾನು ತಿಳಿದಿರಲಿಲ್ಲ; ನೀವಾದರೂ ಇದುವರೆಗೂ ಹೇಳಬೇಡವೆ? ಚೆನ್ನಾಯಿತು! ನಮ್ಮಪ್ಪನನ್ನು ಕೊಂದ ಹರಿಯನ್ನು ಮರೆಹಾಕಿಕೊಂಡು ನಮ್ಮನ್ನು ಜೈಸುವುದಕ್ಕಾಗಿ ಬರುವನೆಂಬ ಆ ಗಂಡುಗಲಿಯ ಪೆಸರೇನು? ಮತ್ತೊಮ್ಮೆ ಪೇಳಿರಿ, ಎಂದು ಗರ್ವೋಕ್ತಿಯನ್ನಾಡಿ ಹೂಂಕರಿಸಿದನು. ಮತ್ತೂ ನಾರದನ ಕಡೆಗೆ ತಿರುಗಿ—ಋಷಿವರ್ಯರೆ! ಹಾಗಾದರೆ ಹರಿಬ್ರಹ್ಮಾದಿಗಳೆಲ್ಲ ಆ ಬೂದಿಬಡಕನೊಡನೆ ನಮ್ಮಮೇಲೆ ದೊಡ್ಡದಾಗಿ ದೂರು ಹೇಳಿಕೊಂಡರೂ? ಅವರ ಮಾತಿಗೆ ಮರುಳಾಗಿ ಆ ಅರಿಗಂಡುಸು ನಮ್ಮಮೇಲೆ ಯುದ್ಧಕ್ಕೆ ಬರುವನೊ? ಬರಲಿ; ಬರಲಿ; ಎಂದು ತಲೆಕುಣಿಸಿ, ಋಷಿಯನ್ನು ಮರ್ಯಾದಿಸಿ ಕಳುಹಿಕೊಟ್ಟನು. ಬಳಿಕ ಶತಮಾಯನೆಂಬ ದಳವಾಯಿಯನ್ನು ಕರೆಸಿ, "ಕುಂಭ ಶುಂಭ ನಿಶುಂಭ ಜಂಭ ಲಂಬ ಶಬಲ ಪ್ರಬಲ ಸುಬಲ ವಿಪುಳ ಚಪಳ ಕಪಿಳ ವೀರ ಧೀರ ಹುಂಡ ಮುಂಡ ಚಂಡಾಸುರಾದಿ ರಾಕ್ಷಸಪ್ರಮುಖರನ್ನೆಲ್ಲ ಅವರವರ ಸೇನೆಯೊಡನೆ ಕೂಡಿ ಬರುವಂತೆ ಆಜ್ಞಾಪಿಸು, ಜಯಯಾತ್ರೆಯಭೇರಿಯನ್ನು ಹೊಡೆಯಿಸು, ದೇವತೆಗಳ ಹುಟ್ಟನ್ನು ಈಬಾರಿ ನಿರ್ಮೂಲಗೊಳಿಸು, ಶಿವನ ಲೋಕಕ್ಕೆ ದಾಳಿಯಿಡಿಸು" ಎಂದು ಆಜ್ಞಾಪಿಸಿದನು. ಅಲ್ಲಿ ಕುಳಿತಿದ್ದ-ಅಂಧಕನ ಚಿಕ್ಕಪ್ಪನಾದ ಹಿರಣ್ಯಕಶಿಪುವಿನ ಮಗನಾದ-ಪ್ರಹ್ಲಾದನುಕೇಳಿ, ಎದ್ದು—"ಅನುಜನೆ! ಇದೇನು ನಿನ್ನ ಸಾಹಸ? ಶಿವನೆಂದರೇನು? ನೀನೆಂದರೇನು? ಅವನ ಮೇಲೆ ನೀನು ಕೈಮಾಡುವುದೆಂದರೇನು? ಅವನಾರು? ನೀನಾರು? ಎಂಬುದನ್ನು ನೀನು ವಿಚಾರಮಾಡಿ ತಿಳಿ; ಶಂಕರನ ಕಣ್ಣನ್ನು ಪಾರ್ವತಿಯು ಮುಚ್ಚಲು, ಅದರಿಂದ ಹುಟ್ಟಿದ ಕತ್ತಲೆಯೇ ನೀನಾಗಿ ಶಿಶುರೂಪದಿಂದ ಶಿವನ ಬಳಿಯಲ್ಲಿ ಅಳುತ್ತ ನಿಂತಿದ್ದೆ; ನಿಮ್ಮ ತಂದೆ ಹಿರಣ್ಯಾಕ್ಷನು ಶಿವನನ್ನು ತಪಸ್ಸಿನಿಂದ ಮೆಚ್ಚಿಸಿ ಪುತ್ರವರವನ್ನು ಬೇಡಲು, ನಿನ್ನನ್ನೇ ನಿಮ್ಮ ತಂದೆಯ ಕೈಗೆ ಒಪ್ಪಿಸಿದನು; ಈ ಸಂಗತಿಯು ನಿಜವೋ ಸುಳ್ಳೋ ಎಂಬುದನ್ನು ನಿಮ್ಮ ಗುರುವಿನ ಮುಖದಿಂದಲೇ ಕೇಳು; ತೋಳುಗಳು ಬಲಿತಮಾತ್ರದಿಂದ ಕೊಬ್ಬಿ ತಾಯನ್ನೇ ಮೋಹದಿಂದ ಆಲಿಂಗಿಸಲು ಪ್ರಯತ್ನಿಸುವವನಂತೆ ನೀನು ಜನಕನಾದ ಶಿವನಮೇಲೆಯೇ ಯುದ್ಧಕ್ಕೆ ಹೊರಡಬಹುದೆ? ಅದು ನಿನಗೆ ಶ್ರೇಯಸ್ಕರವಾಗುವುದೆ?

ಮತ್ತೂ ಆತನೇನು ಸಾಮಾನ್ಯನೆ ? ಉರುಲಿಂಗಾಕಾರದಿಂದ ಹರಿಬ್ರಹ್ಮರ ಕಲಹವನ್ನು ಅಡಗಿಸಿದನು ; ಅಹಂಕಾರದಿಂದ ಮೆರೆಯುತ್ತಿದ್ದ ಬ್ರಹ್ಮನ ತಲೆಯನ್ನು ಚಿವುಡಿದನು ; ತನ್ನ ಅಗ್ನಿನೇತ್ರದಿಂದ ಕಾಲಕಾಮತ್ರಿಪುರಗಳನ್ನು ಸುಟ್ಟುಹಾಕಿದನು ; ತನ್ನ ೭ ದಿನದ ಕಂದನಿಂದ ತಾರಕಾಸುರನನ್ನು ಕೊಲ್ಲಿಸಿದನು; ಜಲಂಧರಾಸುರನನ್ನು ಕಾಲಿನ ಬೆರಳಿನಿಂದ ಬರೆದ ಚಕ್ರದಿಂದಲೇ ಕತ್ತರಿಸಿಹಾಕಿದನು. ನಮ್ಮಿಬ್ಬರ ತಂದೆಗಳನ್ನೂ ಕೊಂದ ಹರಿಯು ವರಾಹಸಿಹ್ಮಾಕಾರಗಳಿಂದ ಜಗತ್ಕಂಟಕನಾಗಿರಲು ಶಿವನು ಆ ಹಂದಿಯನ್ನು ಸೀಳಿ, ಸಿಹ್ಮನನ್ನು ತನ್ನ ಮಗನಿಂದ ಕೊಲ್ಲಿಸಿದನು. ಹೀಗೆ ಆತನಿಗೆ ದುಷ್ಟನಿಗ್ರಹಶಿಷ್ಟಪರಿಪಾಲನವೇ ಕಾರ್ಯವಾಗಿರುವುದು; ಅವನ ಇಚ್ಛಾಮಾತ್ರದಿಂದಲೇ ಅಗಣಿತಬ್ರಹ್ಮಾಂಡಗಳೂ ವಿಷ್ಣುಬ್ರಹ್ಮೇಂದ್ರಾದಿಗಳೂ ಹುಟ್ಟಿ ಅಳಿವರು. ಈ ಪೃಥಿವಿ ಅಪ್ಪು ತೇಜಸ್ಸು ವಾಯು ಆಕಾಶಗಳೆಲ್ಲ ಅವನ ಶರೀರವೇ; ಹೀಗಿರುವಲ್ಲಿ ಆ ಪರಮಾತ್ಮನೊಡನೆ ವಿರೋಧವನ್ನು ಕಟ್ಟಿಕೊಂಡರೆ ನೀನು ಬಾಳಬಹುದೆ? ಬೇಡ; ಅವನನ್ನು ನಾವು ಮರೆಹೊಕ್ಕರೆ ನಮಗೆ ಇಹಪರ ಸುಖಗಳೆರಡೂ ಲಭಿಸುವುವು" ಎಂದು ಹಿತೋಕ್ತಿಯನ್ನಾಡಲು, ಅಂಧಕಾಸುರನು ಕೇಳಿ, ಕಿಡಿಕಿಡಿಯಾಗಿ,— ಎಲೊ ಹೇಡಿಯೆ ! ಇಷ್ಟೊಂದು ಕಣಿಯನ್ನು ಹೇಳುವುದಕ್ಕೆ ನಿನ್ನನ್ನು ಇಲ್ಲಿಗೆ ಕರೆದವರಾರು ? ಬಾಯಿ ದೊಡ್ಡದಾಗಿದೆಯೆಂದು ಪುರಾಣವನ್ನು ಬಿಚ್ಚಿದೆಯೊ ? ನೀನು ಹೇಳಿದ ಹರಿಬ್ರಹ್ಮಾದಿಗಳೆಲ್ಲ ಈ ಅಂಧಕಾಸುರನ ಮುಂದೆ ಏನಾಗಿರುವರೆಂಬುದನ್ನು ನೀನು ಕಾಣೆಯಾ ? ಈ ಭುವನಬ್ರಹ್ಮಾಂಡವನ್ನೆಲ್ಲ ನನ್ನ ಕಡೆಯ ಆಳುಗಳೇ ಆಳುತ್ತಿರುವಾಗ, ಆ ಗೊರವಶಿವನೊಬ್ಬನು ನನ್ನನ್ನೇನುಮಾಡಬಲ್ಲನು ? ಛೀ ! ಖೂಳ! ಶೂರರಾದ ಮಹಾದೈತ್ಯರ ವಂಶದಲ್ಲಿ ಅಧಮನಾದ ನೀನೇಕೆ ಹುಟ್ಟಿದೆ ? ನನ್ನ ಮುಂದೆ ನಿಲ್ಲಬೇಡ, ಹೋಗು; ಎಂದು ಗರ್ಜಿಸಿ, ತನ್ನ ಪಟುಭಟರ ಮುಖವನ್ನೆಲ್ಲ ಅವಲೋಕಿಸಿ, " ನೋಡಿದಿರಾ ಈ ಷಂಡನ ಮಾತನ್ನ ! ಕೈಲಾಸಪರ್ವತದಲ್ಲಿ ಯಾವನೋ ಮೂರುಕಣ್ಣಿನವನಿರುವನಂತೆ ! ಅವನು ಒಂದೆರಡು ಮೂರು ಊರುಗಳನ್ನು ಸುಟ್ಟವನಂತೆ! ಬಡಹಾರ್ವನ ತಲೆಯನ್ನು ಚಿವುಡಿದವನಂತೆ ! ನೀರಿನಲ್ಲಿದ್ದ ಒಂದು ಮೀನನ್ನು ಸೀಳಿದನಂತೆ ! ಒಂದು ಹಂದಿಯನ್ನು ಕೊಂದ

ನಂತೆ ! ಅರೆವಾನಿಸ (ನೃಸಿಹ್ಮ) ನನ್ನು ಕೊಂದನಂತೆ! ಬಡತಾರಕ ಮೂರ ಯಮರನ್ನು ನಾಕಗೊಳಿಸಿದನಂತೆ ! ಅವನಿಗೆ ನಾವೆಲ್ಲ ತಲೆಬಾಗಿ ನಡೆದು ಕೊಳ್ಳಬೇಕಂತೆ ! ಈ ಕುನ್ನಿಯ ಕೆನ್ನೆಗೆ ತಟ್ಟಿರಿ; ಅದಾವ ಮಹಾವೀ ರನು ನನ್ನ ಮುಂದೆ ನಿಂತು ಒದುಕಿ ಹೋಗುವನೋ ನೋಡಿಕೊಳ್ಳುತ್ತೇ ನೆ; ಭೇರಿಯನ್ನು ಹೊಡೆಯಿರಿ " ಎಂದು ಆಜ್ಞಾಪಿಸಿ, ಸಭೆಯಿಂದೆದ್ದನು. ಹೊರಗೆ ಧಂಧಣಧಳಂಧಳವೆಂದು ಭೇರಿಯ ಶಬ್ದವಾಯಿತು. ಆ ಶಬ್ದಕ್ಕೆ ಕುಲಾಚಲಗಳೆಲ್ಲ ನಡುಗಾಡಿದುವು. ಹಸ್ತ್ಯಶ್ವ ರಥ ಪದಾತಿ ಚತುರಂಗ ಸೈನ್ಯವೂ ಆಯತ್ತವಾಗಿ ನಿಂತಿತು. ಛತ್ರ ಚಾಮರ ಪತಾಕೆಗಳು ಇಂಬಿ ಲ್ಲದಂತೆ ತುಂಬಿದುವು. ಆಯುಧಗಳು ಜಳಪಿಸಿದುವು. ಧನುಸ್ಸುಗಳು ಠಂ ಕಾರಗೊಂಡುವು. ವೀರರ ಭುಜಾಸ್ಫಾಲನವು ಸಿಹ್ಮನಾದದೊಡನೆ ಕೂಡಿ ದೇವತೆಗಳ ಕಿವಿಗೆ ಅಪ್ಪಳಿಸಿದಂತೆ ಕೇಳಿ ಎದೆ ಬಿರಿಯಿಸಿದುವು. ಭೂಮಿ ಯೇ ಇದನ್ನು ಈದಿತೋ ಎಂಬಂತೆ ತೋರುತ್ತಿದ್ದ ಅಗಣಿತವಾದ ದೈತ್ಯ ಸೇನೆಯ ಪದಹತಿಗೆ ಧರೆಯು ಅದಿರುತ್ತಿದ್ದಿತು. ಒಂದು ಪದ್ಮ ಆನೆಗಳು, ೫ ಪದ್ಮ ಕುದುರೆಗಳು, ೧೦ ಪದ್ಮ ರಥಗಳು, ೨೨ ಪದ್ಮ ಕಾಲಾಳುಗ ಳನ್ನು ಒಬ್ಬೊಬ್ಬರ ವಶದಲ್ಲಿಟ್ಟುಕೊಂಡಿರುವ ಇಂತಹ ಸಾಮಂತ ರಾಕ್ಷ ಸರಾಜರು ಅಂಧಕಾಸುರನ ಕೈಕೆಳಗೆ ೮೮ಕೋಟಿ ಯಿದ್ದರು. ಈ ಮಹಾ ಸೇನೆಯ ಜತೆಗೆ ರಾಣಿವಾಸದವರು, ಸಖಿಯರು, ಅಡಿಗೆಯವರು, ಪಲ್ಲಕ್ಕಿ ಯ ಹೊರುವವರು, ವಾರಾಂಗನೆಯರು, ಹೂವಾಡಿಗರು, ಹಡಪದವರು, ಮಡಿವಳರು, ಗಾಣಿಗರು, ಗೌಳಿಗರು, ನೇಗೆಯವರು, ಕುಂಬಾರರು, ಓಜೆಗಳು, ಕಮ್ಮಾರರು, ಚಿಂಪಿಗರು, ಮುಚ್ಚ್ಚಿಗರು, ಅಕ್ಕಸಾಲಿಗರು, ಸಾಣೆಗಾರರು, ಕಸ ಗುಡಿಸುವವರು. ನೀರನ್ನು ಹೊರುವವರು, ಗುದ್ದಲಿ ಕೊಡಲಿ ಹಾರೆಯವರು, ದೋಸೆ ಕಜ್ಜಾಯ ಕಡುಬು ರೊಟ್ಟಿ ಉಪ್ಪಿನ ಕಾಯಿ ಚಕ್ಕುಲಿ ಕಡಲೆ ಪುರಿ ಕಬ್ಬು ಮೊದಲಾದುವುಗಳನ್ನು ಸಾರಿ ಮಾ ರುವವರು, ಕವಿಗಳು, ವಿದ್ವಾಂಸರು, ಹಾಸ್ಯಗಾರರು, ವಾಗ್ಮಿಗಳು, ಜ್ಯೋ ತಿಷ್ಕರು, ನಟರು, ಗಾಯಕರು, ವಿಟರು, ವಿದೂಷಕರು ಮೊದಲಾದ ೬೪ ವಿದ್ಯೆಗಳನ್ನು ಬಲ್ಲವರೂ, ಬರವಣಿಗೆ, ವ್ಯಾಪಾರ, ಬೇಸಾಯ, ಆ ಯುಧಧಾರಣೆ, ಗೋಪಾಲನೆ, ಯಾಚನೆ, ಎಂಬ ಆರುವಿಧದ ವೃತ್ತಿಗ

ಳನ್ನು ಹಿಡಿದು ಜೀವಿಸುವವರೂ ಆದ ನಾಲ್ಕು ವರ್ಣದವರೂ ಹದಿನೆಂಟು ಜಾತಿಯವರೂ ನೂರೊಂದು ಕುಲದವರೂ ತಮ್ಮ ತಮ್ಮ ಉದ್ಯೋಗಗಳನ್ನು ಮಾಡಿಕೊಂಡು ದಂಡಿನೊಡನೆ ನಡೆಗೊಂಡರು. ಬಂಡಿಗಳ ಮೇಲೆ ಮದ್ದುಗಳು, ಬಿಲ್ಲು ಬಾಣಗಳು, ಕವಚ ಕಿರೀಟಗಳು, ಜೀನುಹಲ್ಲಣಗಳು, ಕಡಿವಾಣ ಹಗ್ಗಗಳು, ಮೃಗ ಪಕ್ಷಿ ಪಶುಜಾತಿಯ ಮಾಂಸಗಳು, ನಾನಾಜಾತಿಯ ಮದ್ಯಗಳು, ಹುರಿದಭಂಗಿ, ಜಾಯಿಕಾಯಿಪತ್ರೆ ಲವಂಗ ಕಸ್ತೂರಿ ಕೇಸರ ಪಚ್ಚಕರ್ಪೂರಗಳನ್ನು ಹಾಕಿ ಅರೆದ ಗುಳಿಗೆಗಳು, ಮೊದಲಾದ ಸಂಬಾರಗಳನ್ನು ಹೇರಿಕೊಂಡು ಹೋಗುತ್ತಿದ್ದರು. ಚಾಪೆಗಳು ಗೂಡಾರಗಳು ದವಸಗಳು ಮೊದಲಾದ ಪರಿಕರಗಳನ್ನು ಆನೆಗಳು ಒಂಟೆಗಳು ಹೊತ್ತಿದ್ದುವು. ಮುಂಗಡೆಯ ಆಳುಗಳು ಮರಗಳನ್ನು ತರಿದು ಹಳ್ಳಕೊಳ್ಳಗಳನ್ನು ಮುಚ್ಚಿ ಮಾರ್ಗಗಳನ್ನು ಸರಿಪಡಿಸಿಕೊಂಡು ಹೋಗುತ್ತಿದ್ದರು. ಇಂಥ ಮಹಾಸೇನೆಯು ಮೂರು ಜಾವದವರೆಗೂ ನಡೆದು, ಅಲ್ಲಿಗೆ ಬೀಡುಬಿಟ್ಟು, ಭೋಜನಗೊಂಡು ಸುಖಶಯನದಿಂದ ಮಾರ್ಗಾಯಾಸವನ್ನು ಪರಿಹರಿಸಿಕೊಂಡು, ಬೆಳಗಾದಕೂಡಲೇ ಎದ್ದು ಮುಂದೆ ನಡೆಯುತ್ತ ಕೈಲಾಸದ ಕಡೆಗೆ ಸಾಗುತ್ತಲಿದ್ದಿತು. ಎಂದು ಚೆನ್ನಬಸವೇಶನು ನುಡಿದನೆಂಬಿಲ್ಲಿಗೆ ೩೨ ಅಧ್ಯಾಯವು ಸಂಪೂರ್ಣವು.

೪೯ನೆ ಅಧ್ಯಾಯವು.

ಅಂಧಕಸಹ್ಯಾರಯಾತ್ರೆಯು.

ಎಲೆ ಸಿದ್ಧರಾಮೇಶನೆ! ಅಂಧಕಾಸುರನು ಶಿವಲೋಕದ ಎಲ್ಲೆಯನ್ನು ಸೇರಿದಕೂಡಲೇ ತನ್ನ ಕಡೆಯ ಬುದ್ಧಿವಂತನಾದ ಚಾರನೊಬ್ಬನನ್ನು ಕರೆದು, ನೀನು ಶಿವನ ಬಳಿಗೆ ಹೋಗಿ, ನಮ್ಮ ಶತ್ರುವಾದ ವಿಷ್ಣುವನ್ನು ಬಿಟ್ಟು ಕೊಟ್ಟು ಬಾಳುವನೋ, ಅಥವಾ ಯುದ್ಧಕ್ಕೆ ನಿಲ್ಲುವನೋ ಎಂಬುದನ್ನು ಕೇಳಿ ತಿಳಿದುಕೊಂಡುಬಾರೆಂದು ಹೇಳಿಕಳುಹಿದನು. ಆತನು "ಅಪ್ಪಣೆ" ಯೆಂದು ಹೇಳಿ, ಕುದುರೆಯನ್ನೇರಿ, ವಾಯುವೇಗದಿಂದ

ಕೈಲಾಸಪುರಕ್ಕೆ ಹೋಗಿ, ಅರಮನೆಯ ಬಾಗಿಲಲ್ಲಿ ನಿಂತು, ತಮ್ಮ ರಾಜನ ಬಿರುದಾವಳಿಗಳನ್ನು ಹೇಳಿಕೊಂಡು, ತಾನು ಆತನ ಕಡೆಯ ದೂತನೆಂದು ತಿಳಿಸಲು, ಶಿವನಪ್ಪಣೆಯಮೇರೆ ದ್ವಾರಪಾಲಕನು ಈತನನ್ನು ಒಳಗೆ ಬಿಟ್ಟನು. ಚಾರನು ಶಂಕರನಿಗೆ ವಂದಿಸಿ,— "ರಾಕ್ಷಸಾಧಿರಾಜನಾದ ಅಂಧಕಾಸುರಮಹಾರಾಜನು ದಿಗ್ವಿಜಯಕ್ಕಾಗಿ ಹೊರಟಿರುವನು, ಅವನ ಸೇನಾಗಮನಮಾತ್ರದಿಂದಲೇ ಭೂಸಮುದ್ರಪರ್ವತವನಾದಿಗಳೆಲ್ಲ ಕಂಪಿಸಿ ಬಣಗಿ ಧೂಳಿಯಾಗಿ ಉರಿದುಹೋಗಿರುವುವು. ದಿಗ್ಗಜಕೂರ್ಮಶೇಷಾದಿಗಳು ಕೂಡ ತಲೆಬಗ್ಗಿಸಿದುವು. ಆ ನಮ್ಮ ಪ್ರಭುವಿಗೆ ವೈರಿಯಾದ ವಿಷ್ಣುವನ್ನು ನೀವು ಮರೆಹಾಕಿಕೊಂಡಿರುವುದರಿಂದ ನಿಮ್ಮನ್ನೂ ಜೈಸುವುದಕ್ಕಾಗಿ ಬರುತ್ತಿರುವನು. ನೀವು ವಿನಯದಿಂದ ಆ ಹರಿಯನ್ನು ಬಿಟ್ಟುಕೊಡುವಿರೊ? ಯುದ್ಧಕ್ಕೆ ನಿಲ್ಲುವಿರೊ? ಎಂಬುದನ್ನು ಕೇಳಿ ತಿಳಿದುಕೊಂಡುಬರುವುದಕ್ಕಾಗಿ ನನ್ನನ್ನು ಕಳುಹಿಕೊಟ್ಟಿರುವನು" ಎಂದು ವಿಜ್ಞಾಪಿಸಿದನು. ಇದನ್ನು ಕೇಳಿ ಹರಿಬ್ರಹ್ಮರ ಎದೆಯು ನಡುಗಿತು. ನಂದೀಶವೀರೇಶ್ವರಾದಿಗಳು ಕೇಳಿ ಕಿಡಿಕಿಡಿಯಾಗಿ "ಇವನಾರು ಕುನ್ನಿ? ಬಗುಳುವ ಇವನ ನಾಲಿಗೆಯನ್ನು ಸೀಳಿ ಕರುಳನ್ನು ಬಗಿದು ಕಾಲಲ್ಲಿ ಹೊಸಗಿರಿ" ಎಂದು ಘುಡುಘುಡಿಸುತ್ತ ಎದ್ದು ಗರ್ಜಿಸಿದರು. ಆಗ ಶಿವನು— ಹೋ ಹೋ ನಿಲ್ಲಿರಿ; ಹೇಳಿದಂತೆ ಕೇಳಿ ನಡೆಯುವ ಬಂಟನ ಮೇಲೆ ನಿಮಗೇಕೆ ಸಾಹಸ? ಅವನನ್ನು ಕೊಲ್ಲಬೇಡಿರಿ, ಎಂದು ತಡೆದು, ಬಳಿಕ ಚಾರನನ್ನು ಕುರಿತು— ಎಲೊ! ಹರಿಯೆತ್ತ? ನಿಮ್ಮೊಡೆಯನೆತ್ತ? ಅವನಿಗೆಷ್ಟು ಅಹಂಕಾರ? ಧೈರ್ಯವಿದ್ದರೆ ಅವನನ್ನೇ ಯುದ್ಧಕ್ಕೆ ಬರಹೇಳು, ಹೋಗು, ಎಂದು ಹೇಳಿ ಕಳುಹಿದನು. ಭೃತ್ಯನು ಬಂದು ರಾಕ್ಷಸರಾಜನೊಡನೆ ನಡೆದ ಸಂಗತಿಯನ್ನೆಲ್ಲ ಬಿನ್ನೈಸಿದನು. ಇದನ್ನು ಕೇಳಿ ಅಂಧಕನ ರಕ್ತವು ಕಾದುಹೋಯಿತು. ಕಣ್ಣಿನಿಂದ ಕಿಡಿಗಳು ಸುರಿದುವು, ಕೈಲಾಸಗಿರಿಯನ್ನು ನಿಮಿಷಮಾತ್ರದಲ್ಲಿ ಸೂರೆಗೊಳ್ಳದೆ ಬಿಡುವೆನೆ? ಎಂದು ಗರ್ಜಿಸಿ, ತನ್ನ ಸೇನೆಗೆ ಹೊರಡಲಪ್ಪಣೆಕೊಟ್ಟನು. ಹಗಲುರಾತ್ರಿಯೆನ್ನದೆ ಮಹಾಸೈನ್ಯವು ನಡೆತರುತ್ತಿದ್ದಿತು. ಅಷ್ಟರಲ್ಲಿ ಅಂಧಕನ ಹಾವಳಿಯಿಂದ ಸೂರೆಹೋದ ರಾಜ್ಯದ ಜನಗಳು ಓಡಿಬಂದು,

ಶಿವನರಮನೆಯ ಬಾಗಿಲಲ್ಲಿ ನಿಂತು ಗೋಳಾಡುತ್ತಿದ್ದರು. ಅದನ್ನು ಶಿವನು ಕೇಳಿ ರಕ್ಕಸನಮೇಲೆ ಕೋಪಗೊಂಡು, ಅವನ ವಧೆಗಾಗಿ ಸಕಲ ದೇವ ಸೇನೆಯೂ ಸಿದ್ಧವಾಗಲಿ ಯೆಂದು ನಂದೀಶನೊಡನೆ ಅಪ್ಪಣೆಮಾಡಿದನು. ಅದರಂತೆಯೇ ನಂದೀಶನು ಸಾರಿಸಲು, ಸಿದ್ಧ ವಿದ್ಯಾಧರ ಗರುಡ ಗಂಧರ್ವ ಯಕ್ಷ ಭೂತ ಪಿಶಾಚ ಸಾಧ್ಯ ಗುಹ್ಯಕ ವಸು ಮಯೂರೋರಗ ದಿಕ್ಪಾಲ ನವಗ್ರಹ ಮನು ಮುನಿ ಮೊದಲಾದವರೆಲ್ಲರೂ ಸನ್ನಾಹಗೊಂಡು ನಿಂತರು. ಅನಂತ ಬ್ರಹ್ಮರು ಅಗಣಿತವಿಷ್ಣುಗಳು ತಮ್ಮ ತಮ್ಮ ವಾಹನವನ್ನೇರಿ ಸಿದ್ಧರಾದರು. ವೀರೇಶ ಗಣೇಶ ಕುಮಾರ ನಂದಿ ಭೈರವ ಭೃಂಗೀಶರುಗಳು ತಮ್ಮ ತಮ್ಮ ಬಲದೊಡನೆ ಕೂಡಿ ಅಣಿಯಾದರು. ಕ್ರೂರಾಸ್ಯ ವಜ್ರ ದಂಷ್ಟ್ರ ಅನಿಲವೇಗ ಮೊದಲಾದ ಅಸಂಖ್ಯಾಕರುದ್ರಗಣವೂ, ಘಂಟಾ ಕರ್ಣ ಧೂಮ್ರಾಂಗ ವಿರೂಪಾಕ್ಷ ವಿಕಟಾಂಗ ಮೊದಲಾದ ಅಪರಿಮಿತಪ್ರ ಮಥರಗಣವೂ, ಆಯತ್ತವಾಗಿ ನಿಂತಿತು. ಎಡಗಡೆಯಲ್ಲಿ ಪಾರ್ವತಿಯು ಸಕಲ ಶಕ್ತಿಗಣದೊಡನೆ ಕೂಡಿ ಸಿದ್ಧವಾಹಿನಿಯಾಗಿ ಸಜ್ಜುಗೊಂಡಳು. ಸಪ್ತರ್ಷಿಗಳು ಯೋಗಾಚಾರ್ಯರುಗಳು ಒಲಗಡೆಯಲ್ಲಿ ಸನ್ನದ್ಧರಾದರು. ಮುಂದೆ ವೇದಪುರುಷರು ಉದ್ಘೋಷಿಸುತ್ತಿದ್ದರು. ಆಗ ಶಂಕರನು ಮಹಾ ವೃಷಭವನ್ನೇರಿ ಮಧ್ಯದಲ್ಲಿ ವಿರಾಜಿಸುತ್ತಿದ್ದನು. ಛತ್ರಚಾಮರಗಳ ಉಪ ಚಾರವು ನಡೆಯುತ್ತಿದ್ದಿತು. ಬೇರದವ್ಮಟೆ, ಕಹಳೆ, ದುಂದುಭಿಗಳು ಮಹಾಶಬ್ದಗೊಂಡುವು. ಶಿವನಪ್ಪಣೆಯಮೇರೆ ಸೇನೆಯು ನಡೆಗೊಂಡಿತು. ದುರ್ಗಗಳನ್ನಿಳಿದು ಬೀಡನ್ನು ಬಿಟ್ಟಿತು. ಮಳೆಯು ಹನಿಯನ್ನೆಣಿಸಿದರೂ ಎಣಿಸಬಹುದು, ನಕ್ಷತ್ರಗಳನ್ನು ಗಣಿಸಿದರೂ ಗಣಿಸಬಹುದು, ಈ ಮಹಾಸೈನ್ಯವನ್ನುಮಾತ್ರ ಶಿವನ ಹೊರತು ಮತ್ತಿನ್ನಾರೂ ಲೆಕ್ಕವಿಡಲಾ ರರೆಂಬಂತೆ ಅಪರಿಮಿತವಾಗಿದ್ದಿತು. ಇಂತಪ ಶಿವಸೈನ್ಯವು ಬರುತ್ತಿರುವು ದೆಂಬ ವಾರ್ತೆಯನ್ನು ಕೇಳಿ ರಾಕ್ಷಸಸೈನ್ಯವೂ ಬೇಗಬೇಗನೆ ಇದಿರಾಗಿ ಹೋಯಿತು. ಉಭಯಸೇನೆಯೂ ಬಂದನ್ನೊಂದು ಸಂಧಿಸಿದುವು. ಚೂ ಣಿಯವರು ಒಬ್ಬರನ್ನೊಬ್ಬರು ನೋಡಿ ತೋಳ್ತೊಡೆಗಳನ್ನು ತಟ್ಟಿದರು. ವೀರನಾದವು ವಿಜೃಂಭಿಸಿತು. ಕೈ ಕೈ ಮಸಗಿತು. ಬಿಲ್ಲುಗಾರರು ಬರಸೆ ಳೆದು ಬಾಣಗಳನ್ನು ಬಿಡುತ್ತಲೂ, ಕೈಮುಗಾದರು ಕತ್ತಿಯನ್ನು ಝಳಪಿಸಿ

ತಿರುತಿರುಗಿಸಿ ಕಡಿಯುತ್ತಲೂ, ಮುದ್ಗರ ಕುಂತ ಮುಸಲಾದಿ ಆಯುಧದ ವರು ಸದೆಬಡಿಯುತ್ತಲೂ, ರಾವುತರು ವಾಘೆಯನ್ನೆಳೆದು ಕುದುರೆಗಳನ್ನು ಸರಿಸಿ, ಛಲ್ಲಿಯಗಳಿಂದಿರಿದು, ಕತ್ತಿಗಳಿಂದ ಸೀಳಿ, ತಲೆಗಳನ್ನು ಹಾರಿ ಸುತ್ತಲೂ, ಮಾವಟಿಗರು ಕಾಲಿನಿಂದ ಮೊಂಟೆ, ಅಂಕುಶದಿಂದಿರಿದು, ಪ್ರತಿಸೈನ್ಯದಲ್ಲಿ ತಮ್ಮಾನೆಗಳನ್ನು ನುಗ್ಗಿಸಿ, ಇದಿರಾನೆಯನ್ನು ಒತ್ತರಿಸಿ, ಮೇಲಣ ಮಾವುತನನ್ನು ಕೆಡಹಿಸಿ, ಕಾಲ್ಗೆ ಸಿಕ್ಕಿದವರನ್ನು ಹೊಸಗಿಸಿ, ಮುಗ್ಗುಲಿಗೆ ಬಂದವರನ್ನು ಸುಂಡಿಲಿನಿಂ ಪಿಡಿಸಿ ಬೀಸಾಡಿಸಿ, ಹಿಂದೆ ಬಂದವರನ್ನು ಬಾಲದಿಂ ಝಾಡಿಸಿ ಮಲಗಿಸಿ, ಲಯಗೊಳಿಸುತ್ತಲೂ, ರಥಿಕರು ಮುಂಗಡೆಗೆ ರಥಗಳನ್ನು ಸರಿಸಿ ಬಾಣವರ್ಷವನ್ನು ಕರೆದು ಸಿಹ್ನನಾದ ಮಾಡಿ ಏಟುಏಟಿಗೆ ಅನಂತಸೈನ್ಯವನ್ನು ಆಹುತಿಗೊಳ್ಳುತ್ತಲೂ ಇದ್ದರು. ಗಿರಿಗಿರಿಗಳು ಸೀಸಾಡಿ ನುಚ್ಚುನೂರಾಗಿ ಹರಡಿದಂತೆ ರುಂಡಮುಂಡಾದಿಗಳು ರಣಾಂಗಣದಲ್ಲಿ ಚೆಲ್ಲಾಡಿದುವು. ರಕ್ತವು ಹರಿದಿತು. ಅಷ್ಟರಲ್ಲಿ ಸಂಧ್ಯಾಕಾಲವಾಗಲು ಸೂರ್ಯನು ಅಸ್ತಗೊಂಡನು. ತಾವರೆಗಳು ಮೊಗ್ಗಾದುವು. ನೈದಿಲುಗಳು ಅರಳಿದುವು. ನಕ್ಷತ್ರಗಳು ಮಿರುಗಿದುವು. ನಿಶಾಂಗನೆಯು ಶಿವಸೈನ್ಯಕ್ಕೆ ವಿದ್ಯುಚ್ಛಕ್ತಿಯ ದೀಪಗಳನ್ನಿಟ್ಟು ಬೆಳಕುಗೊಳಿಸಿ, ಈ ರೂಪವಾದ ಸೇವೆಯಿಂದ ಶಿವನನುಗ್ರಹಕ್ಕೆ ಪಾತ್ರಳಾಗಬೇಕೆಂದು ಯೋಚಿಸಿ ರಚಿಸಿದಂತೆ ಅಂತರಿಕ್ಷದ ನಕ್ಷತ್ರರಾಶಿಗಳು ತೋರುತ್ತಿದ್ದವು. ಎರಡು ಸೇನೆಯೂ ತಮ್ಮ ತಮ್ಮ ದಳಪತಿಗಳ ಆಜ್ಞೆಯಮೇರೆ ಯುದ್ಧವನ್ನು ಬಿಟ್ಟು ಅಲ್ಲಲ್ಲೇ ಬೀಡನ್ನು ಬಿಟ್ಟತು. ಆನೆ ಕುದುರೆಗಳ ಪಕ್ಷರಕ್ಷೆಗಳನ್ನು ಕಳೆದು ಗೂಟಗಳನ್ನು ಹೊಡೆದು ಕಟ್ಟಿದರು. ರಥದ ಕುದುರೆಗಳನ್ನು ಬಿಚ್ಚಿದರು. ನೀರನ್ನು ಕುಡಿಸಿದರು. ಮೇವನ್ನು ಹಾಕಿದರು. ಧನುಸ್ಸಿನ ಸಿಂಜಿನಿಯನ್ನು ಇಳಿಸಿದರು. ಲೋಹಕವಚ ಟೊಪ್ಪಿಗೆಗಳನ್ನು ಕಳೆದರು. ಗಾಯಗಳಿಗೆ ಪಟ್ಟಿಯನ್ನು ಅಂಟಿಸಿದರು. ಮುರಿದ ಮೂಳೆಗಳನ್ನು ಕಟ್ಟಿದರು. ಮದ್ದುಗಳನ್ನು ಕುಡಿದರು. ಗೂಡಾರಗಳಲ್ಲಿ ದೀಪಗಳು ಮಿನುಗುಟ್ಟುತ್ತಿದ್ದವು. ಭೂಮಿಯಷ್ಟಗಲಕ್ಕೂ ಎರಡು ಸೈನ್ಯಗಳೂ ಹರಡಿಕೊಂಡು ಇಳಿದಿದ್ದುವು. ಶಿವನು ತನ್ನ ಸೈನ್ಯದ ಇರುಳುಗಾವಲಿಗೆ ಎಂಟುಕಡೆಗೂ ದಿಕ್ಪಾಲಕರನ್ನು ಅವರ ಸೇನಾಸಮೇತವಾಗಿ ನಿಯಮಿಸಿ

ದನು. ಅವರೊಳಗೆ ಪ್ರಮಥಸೇನೆಯು ಪ್ರಾಕಾರದಂತೆ ಆವರಿಸಿದ್ದಿತು. ಶಿವನ ಎರಡುಪಕ್ಕಗಳಲ್ಲಿ ಹರಿಬ್ರಹ್ಮರ ಸೇನೆಯು ನಿಂತಿತು. ಶಂಕರನು ಎಲ್ಲ ಸೇನೆಯ ಒಟ್ಟುಗಾವಲನ್ನು ಕಾಲಭೈರವನಿಗೆ ವಹಿಸಿದನು. ಷಣ್ಮುಖನಿಗೆ ಸೇನಾಧಿಪತ್ಯವನ್ನು ಕೊಟ್ಟನು. ವೀರಭದ್ರೇಶನಿಗೆ ಇತರರಮೇಲೆಲ್ಲ ಯಜಮಾನಿಕೆಯನ್ನು ಕೊಟ್ಟನು. ಅತ್ತ ರಾಕ್ಷಸಸೇನೆಯಲ್ಲಿ ಒಟ್ಟುಗಾವಲು ಜಂಭಾಸುರನಿಗೂ, ಶತಮಾಯನಿಗೆ ಸೇನಾಪತಿತ್ವವೂ, ಉಳಿದ ಯಜಮಾನಿಕೆಯು ಶುಂಭಾಸುರನಿಗೂ ಅಂಧಕಾಸುರನಿಂದ ಕೊಡಲ್ಪಟ್ಟಿತು. ನಾಳೆಯ ದಿನ ದೊಡ್ಡಯುದ್ಧವಾಗುವುದೆಂದು ಎರಡುಕಡೆಯವರೂ ತಮ್ಮ ತಮ್ಮ ಸೇನೆಯಲ್ಲಿ ಸಾರಿದರು. ಎಲ್ಲರೂ ಉಂಡು ನಿದ್ರಾಗತರಾದರು. ಒಳಿಕ ಬೆಳಗಿನ ಕೋಳಿಯು ಕೂಗಿತು. ಉಭಯ ಸೇನೆಯ ಪ್ರತಾಪಾಗ್ನಿಯು ಈ ದಿನ ಇಷ್ಟುಮಟ್ಟಿಗೆ ಪ್ರಜ್ವಲಿಸುವುದೆಂದು ಕಾಲಪುರುಷನು ಜಗತ್ತಿಗೆ ಸೂಚಿಸುವಂತೆ ಮೂಡಣದಿಕ್ಕಿನಲ್ಲಿ ಕೆಂಪು ಮೂಡಿತು. ತಾವರೆಗಳು ಅರಳಿದುವು. ಸೂರ್ಯನು ಉದಿಸಿದನು. ಕಹಳೆಗಳೂ ಭೇರಿಗಳೂ ಧ್ವನಿಗೈದುವು. ಎಲ್ಲರೂ ಎದ್ದರು. ನಿತ್ಯಕ್ರಿಯೆಗಳನ್ನು ತೀರಿಸಿದರು. ತಮ್ಮ ತಮ್ಮ ವಾಹನಗಳನ್ನು ಅಣಿಮಾಡಿಕೊಂಡರು. ಸೇನಾನಿಯು ಅಪ್ಪಣೆಮಾಡಿದರೆ ಪತ್ತಿನಿಂತರು. ರಕ್ಕಸನ ದಂಡೂ ಸಿದ್ಧವಾಯಿತು. ಆನೆಗಳು ಕುದುರೆಗಳು ತಮ್ಮ ತಮ್ಮ ನೆಳಲನ್ನೇ ಪ್ರತಿಗಜತುರಗಗಳೆಂದು ತಿಳಿದು, ಹೂಂಕರಿಸಿ ಘಾತಿಸುತ್ತಿದ್ದುವು ವೀರರು ಶೌರ್ಯೋದ್ರೇಕದಿಂದ ಗರ್ಜಿಸುತ್ತಿದ್ದರು. ಅತ್ತ ಅಂಧಕಾಸುರನು ಸಜ್ಜಾಗಿ ನಿಂತು, ತನ್ನ ಬಲದಲ್ಲಿರುವ ಶುಕ್ರಾಚಾರ್ಯನನ್ನು ಕುರಿತು,— ಗುರುವೆ! ಇದಿರುಪಕ್ಷದಲ್ಲಿ ನಿಂತಿರುವ ದೇವಪ್ರಮುಖರು ಯಾರು ಯಾರೆಂಬುದನ್ನು ವಿವರಿಸಿ ತಿಳಿಸಿಕೊಡು, ಎಂದು ಬಿನ್ನೈಸಲು, ಶುಕ್ರಾಚಾರ್ಯನು— ಅದೋ ಸಾವಿರ ಕಣ್ಣುಗಳಿಂದ ಕೂಡಿ ವಜ್ರಾಯುಧವನ್ನು ಪಿಡಿದು ಬಿಳಿಯಾನೆಯಮೇಲೆ ಕುಳಿತಿರುವನನೇ ದೇವೇಂದ್ರನು; ಹಂಸವನ್ನೇರಿ ನಾಲ್ಕುಮುಖಗಳಿಂದ ಕೂಡಿರುವವನೇ ಬ್ರಹ್ಮನು; ಅವನ ಪಕ್ಕಗಳಲ್ಲಿರುವವರೇ ಉಳಿದ ಎಂಟು ಮಂದಿ ಬ್ರಹ್ಮರು; ಗರುಡನನ್ನೇರಿ ನಾಲ್ಕು ಕೈಗಳಲ್ಲಿ ಶಂಖ ಚಕ್ರ ಗದಾ ಶಾರ್ಙ್ಗಗಳನ್ನು ಹಿಡಿದು ಪೀತಾಂಬರಧಾರಿಯಾಗಿ ಕಪ್ಪುಬಣ್ಣದಿಂದೊಪ್ಪು

ತ್ತಿರುವವನೇ ಹರಿಯು; ನವಿಲನ್ನೇರಿ ಆರುಮುಖಗಳನ್ನು ಹೊಂದಿ ಶಕ್ತ್ಯಾಯುಧವನ್ನು ಪಿಡಿದಿರುವವನೇ ಏಳುದಿನದ ವಯಸ್ಸಿನಲ್ಲಿ ಲೋಕಭೀಕರನಾದ ತಾರಕಾಸುರನನ್ನು ಕೊಂದ ಲೋಕೈಕವೀರನಾದ ಕುಮಾರಸ್ವಾಮಿಯು; ಈತನೇ ಈ ಸಕಲ ದೇವಸೇನೆಗೂ ದಳಪತಿಯು; ಅದೋ ಖಡ್ಗ ಖೇಟ ಸಬಳ ಫಲಕ ಮೊದಲಾದ ಮೂವತ್ತೆರಡು ಆಯುಧಗಳನ್ನು ಹಿಡಿದು ವೀರರಸವೇ ಮೂರ್ತಿವತ್ತಾತಂತೆ ನಿಂತು ತೋರುತ್ತಿರುವವನೇ ಶಿವನ ಕೋಪಾಗ್ನಿಯಿಂದುದಿಸಿದ ವೀರೇಶನು; ಈತನೇ ನೃಸಿಂಹ ಭೀಮ ವಿಕ್ರಮ ವ್ಯಾಳ ಪಂಚಮೋಷ್ಠ್ರ ಮೊದಲಾದವರನ್ನು ಜೈಸಿದ ಮಹಾಶೂರನು; ಅತ್ತ ನಿಂತಿರುವವರನ್ನು ನೋಡು— ಮುಳಿದರೆ ಅನಂತಬ್ರಹ್ಮಾಂಡವನ್ನೆಲ್ಲ ಸುಟ್ಟು ಬೂದಿಮಾಡುವ—ಸಮುದ್ರಗಳನ್ನೂ ಆಪೋಶನಮಾಡಿಕೊಳ್ಳುವ ಸಾಮರ್ಥ್ಯವುಳ್ಳ ರುದ್ರಗಣನೇ ಅವರು; ಇವರೆಲ್ಲರ ಮಧ್ಯದಲ್ಲಿ ನಿಂತು ಪಂಚಮುಖ ದಶಭುಜ ಚಂದ್ರಶೇಖರ ವೃಷಭ ವಾಹನಗಳಿಂದೊಪ್ಪುತ್ತ ಶುದ್ಧಸ್ಫಟಿಕವರ್ಣನಾಗಿರುವವನೇ ಪರಮೇಶ್ವರನು; ಆತನೇ ಇಚ್ಛಾಮಾತ್ರದಿಂದ ಅಗಣಿತಭುವನವನ್ನು ನಿರ್ಮಿಸಿ ಲಯಗೊಳಿಸುವ ಮಹಿಮೆಯುಳ್ಳ—ಪ್ರತಿಭಟಿಸಿದವರನ್ನು ಕೊಂದು ಮರೆಹೊಕ್ಕವರನ್ನು ಉದ್ಧರಿಸುವ—ಬಿರುದಿನ ಮಹಾದೇವನು. ಆತನನ್ನು ಮರೆಹೊಕ್ಕು ಬಾಳುವುದೇ ನಿನಗೆ ಶ್ರೇಯಸ್ಕರವೆಂದು ನನಗೆ ತೋರುತ್ತದೆ. ಅವರಂತೆ ಮಾಡುವುದೇ ಸರ್ವಥಾ ಉಚಿತವು; ಎಂದು ನುಡಿದನು. ರಾಕ್ಷಸೇಶ್ವರನು ಕೇಳಿ ಖತಿಗೊಂಡು,— ಗುರುಗಳೆ! ಚೆನ್ನಾಗಿ ಹೇಳಿದಿರಿ! ಬಳ್ಳಿಯು ಅಂಜುಕುಳಿಯು ಮಾತನ್ನಾಡಿದಿರಿ! ಎಂದು ತಿರಸ್ಕರಿಸಿ, ಆರ್ಭಟಮಾಡಿ, ತನ್ನ ಸುವರ್ಣರಥವನ್ನು ದೇವಸೇನೆಯ ಮುಂಗಡೆಗೆ ತಿರುಗಿಸಲು, ದಳಪತಿಗಳಪ್ಪಣೆಯುನೀರೆ ಚೂಣಿಯ ಸೈನಿಕರು ಸಂಧಿಸಿ ಕಾದಾಡಲುಪಕ್ರಮಿಸಿದರು. ಜೊಬ್ಬೆಗಳು ದಿಙ್ಮಂಡಲವನ್ನು ಭೇದಿಸಿದುವು. ಮೂದಲೆಗಳು ಗಣನಾತೀತವಾದುವು. ಧನುಷ್ಟಂಕಾರವು ಎಡೆಬಿಡದಂತಾಯಿತು ಆಯುಧಗಳ ಸದ್ದು ಕಿವಿಯನ್ನು ಕಿವುಡುಗೊಳಿಸಿತು. ರಕ್ತದ ಹಾರಾಟವು ಬಿರುಮಳೆಯನ್ನು ಮೀರಿಸಿತು. ರಥಕ್ಕೆ ರಥ, ಆನೆಗೆ ಆನೆ, ಕುದುರೆಗೆ ಕುದುರೆ, ಕಾಲಾಳಿಗೆ ಕಾಲಾಳು, ಇದಿರಾಗಿ ವೀರಾವೇಶದಿಂದ ಕಾದಿ ಪ್ರತಿಪಕ್ಷದವರನ್ನು ತಲೆ

ದೂಗಿಸುತ್ತಿದ್ದರು. ಇರಿವ ತರಿವ ಪರಿವ ಮುರಿವ ಕೊರೆವ ನೆರೆವ ಕಚ್ಚುವ ಕೊಚ್ಚುವ ಮೆಚ್ಚುವ ಹೆಚ್ಚುವ ಬೀಳ್ವ ಸೀಳ್ವ ಕೊಲ್ವ ಏಳ್ವ ಪಿಡಿವ ಮಿಡಿವ ಕಡಿವ ಕಡೆವ ಪೊಡೆವ ತಡೆವ ನಡೆವ ಸೆಡೆವ ನೂಂಕುವ ಪೆಂಕುವ ಸೊಂಕುವ ತೇಂಕುವ ಇರುಂಕುವ ತುಡುಂಕುವ ಕಲಂಕುವ ಪಟುಭಟರುಗಳು ಸಮರಾಂಗಣವನ್ನು ಭಯಂಕರವಾಗಿ ಮಾಡಿದರು. ಎತ್ತನೋಡಿದರೂ ಪೆಣಗಳು ಕರುಳುಗಳು ತಲೆಗಳು ಮುಂಡಗಳು ಕಡಿತೋಳು ರಕ್ತದ ಪ್ರವಾಹಗಳು ರಥದ ಮುರುಕುಗಳು ಆನೆಗಳ ಹೋಳುಗಳು ಕುದುರೆಗಳ ಸೀಳುಗಳು ಛತ್ರಚಾಮರಗಳ ತುಣುಕುಗಳು ಕಿರೀಟ ಕುಂಡಲ ಹಾರಗಳು ಬಾಣ ಒತ್ತಳಿಕೆ ಗದೆ ಕತ್ತಿ ಕುಂತ ಮೊದಲಾದಾಯುಧಗಳು ತುಂಬಿ ತೋರುತ್ತಿದ್ದುವು. ಭೂತ ಪ್ರೇತ ಪಿಶಾಚ ಶಾಕಿನಿ ಡಾಕಿನಿಯರು ಮಾಂಸವನ್ನು ತಿಂದು ರಕ್ತವನ್ನು ಕುಡಿದು ಕರುಳಮಾಲೆಯನ್ನು ಹಾಕಿ ತಲೆಬುರುಡೆಗಳನ್ನು ಪಿಡಿದು ಪೆಣಗಳ ತಲೆಯ ಕಿರೀಟವನ್ನು ಕಿತ್ತು ತಮ್ಮ ತಲೆಗೆ ಸಿಕ್ಕಿಸಿ ಅವರ ಬಿರುದಿನ ಪೆಂಡೆಯಗಳನ್ನು ತಮ್ಮ ಕಾಲಿಗೆ ಹಾಕಿ ಹಾತುತ್ತ ಕಾಣಿಯುತ್ತ ಕುಪ್ಪರಿಸುತ್ತ ವಿಹರಿಸುತ್ತಿದ್ದುವು. ಎಂದು ಚೆನ್ನಬಸವೇಶನು ಅಪ್ಪಣೆಕೊಡಿಸಿದನೆಂಬಲ್ಲಿಗೆ ಎಂಟನೆ ಅಧ್ಯಾಯವು ಮುಗಿದುದು.

೯ನೆ ಅಧ್ಯಾಯವು.

ಬಲ ಸಮುಚಿ ದೈತ್ಯಾದಿ ಯುದ್ಧವು.

ಸಿದ್ಧರಾಮೇಶನೆ ಕೇಳು,—ಚಕೂಣಿಯ ಸೇನೆಯೆಲ್ಲವೂ ಹತವಾಗುತ್ತ ಬರಲು, ಅತಿರಥಮಹಾರಥರುಗಳು ತಮ್ಮ ರಥಗಳನ್ನು ಮುಂದೆ ಸರಿಸಿ, ಧನುಸ್ಸಿಗೆ ಗರಿಯಬಾಣವನ್ನು ಹೂಡಿ ಅತಿಚಮತ್ಕಾರದಿಂದ ಪ್ರಯೋಗಿಸುತ್ತಿದ್ದರು. ತೊಟ್ಟಾಗ ಕಾಣುತ್ತಿದ್ದ ಬಾಣವು ಬಿಟ್ಟಾಗ ಹತ್ತಾಗಿ ಹೋಗುವಾಗ ನೂರಾಗಿ, ನಡುವಾಗ ಸಾವಿರವಾಗಿ, ಹೊರಹೊರಡುವಾಗ ಲಕ್ಷಗಳಾಗುತ್ತಿದ್ದಿತು. ರಾಕ್ಷಸನ ಸೇನಾನಾಯಕರೂ, ದೇವತೆಗಳ ಕಡೆಯ ದಿಕ್ಪಾಲಕರೂ ಬಿಟ್ಟ ಬಾಣಗಳು ಪ್ರತಿಪಕ್ಷದವರನ್ನು ಚುಚ್ಚಿ, ರಕ್ತವನ್ನು ಸುರಿಸಿ, ಕತ್ತುಗಳನ್ನು ಕತ್ತರಿಸಿ, ರುಂಡಗಳನ್ನು ಹಾರಿಸಿ, ಕಂಗೆ

ಡಿಸುತ್ತ ಬಂದುವು. ಶಿವನ ಬೆಂಬಲವು ನಮಗಿರುವಾಗ ನಮಗೆ ಅಪಜಯವೆಂದರೇನು? ಎಂದು ಹೇಳಿಕೊಂಡು, ಒಬ್ಬರನೊಬ್ಬರು ಹುರಿಮಾಡುತ್ತ, ದೇವಸೇನೆಯವರು ರೌದ್ರಾವೇಶದಿಂದ ರಕ್ಕಸರನ್ನು ಬಡಿದು ಕಡಿದು ಉರುಳಿಸಿ ಬಿರುಗಾಳಿಯು ತರಗುಗಳನ್ನು ಗುಡಿಸಿಕೊಂಡು ಹೋಗುವಂತೆ ಸವರಿ ತರುಬಿಕೊಂಡು ಹೋಗುತ್ತಿದ್ದರು. ಕ್ಷಣಕ್ಷಣಕ್ಕೆ ರಾಕ್ಷಸಸ್ತೋಮವು ಬಯಲಾಗುತ್ತಲೂ, ಉಳಿದವರು ಹಿಮ್ಮೆಟ್ಟುತ್ತಲೂ ಇರುವುದನ್ನು ಬಲ ನಮುಚಿ ಜಂಭ ದುಂದುಭಿ ಮಹಾನಾಭ ಗಜಶಿರ ಶೂರ್ಪಕ ವೃತ್ರ ಮೊದಲಾದ ಮಹಾದೈತ್ಯರು ಕಂಡು, ಕ್ರೋಧದಿಂದ ಘುಡುಘುಡಿಸಿ, ಕಾರ್ಮುಗಿಲುಗಳು ಮುಚ್ಚುವಂತೆ ದೇವಸೇನೆಯನ್ನಾಕ್ರಮಿಸಿ, ಪ್ರಳಯಕಾಲದ ವೃಷ್ಟಿಯಂತೆ ಅವಿಚ್ಛಿನ್ನವಾಗಿ ಕ್ರೂರಬಾಣಗಳನ್ನು ಸುರಿಸುತ್ತ ಬಂದರು. ಇಂದ್ರನಮೇಲೆ ನಮುಚಿಯೂ, ಅಗ್ನಿಯಮೇಲೆ ಬಲನೂ, ಯಮನಮೇಲೆ ಜಂಭನೂ, ನಿಋತಿಯಮೇಲೆ ಗಜಶಿರನೂ, ವರುಣನಮೇಲೆ ದುಂದುಭಿಯೂ, ವಾಯುವಿನಮೇಲೆ ಶೂರ್ಪಕನೂ, ಕುಬೇರನಮೇಲೆ ಮಹಾನಾಭನೂ, ಈಶಾನನ ಮೇಲೆ ವೃತ್ರನೂ ಬಿದ್ದು ಕಾದಾಡಲುಪಕ್ರಮಿಸಿದರು. ನಮುಚಿಯು ಇಂದ್ರನು ಬಿಟ್ಟ ಬಾಣವನ್ನು ಮಧ್ಯದಲ್ಲೇ ಖಂಡಿಸಿ, " ಎಲೊ ಇಂದ್ರನೆ! ಪತ್ತಾರುಕಡೆ ನೀನು ನನ್ನ ಕೈಗೆ ಸಿಕ್ಕಿದ್ದ ಪ್ರಾಣವನ್ನುಳುಹಿಕೊಂಡು ಗೆದ್ದೆ; ಅಂದಿನಂತೆ ಈಗಳೂ ಉಳಿದು ಹೋಗುವೆನೆಂದು ಯೋಚಿಸಬೇಡ; ಈಗಳೇ ನಿನ್ನ ಹೆಂಡರು ಮಕ್ಕಳಿಗೆ ಬುದ್ಧಿಹೇಳಿಬಿಟ್ಟು ಬಾ; ಇಂದಿಗೆ ನಿನ್ನ ಪುಣ್ಯಫಲವೆಲ್ಲ ಮುಗಿದಿತೆಂದು ತಿಳಿ" ಎಂದು ಮೂದಲಿಸಿ, ನಿಶಿತವಾದ ಬಾಣವೊಂದನ್ನು ತೊಟ್ಟು ಕರ್ಣಾಂತವಾಗಿ ಸೆಳೆದು ಗುರಿಕಟ್ಟಿ ಬಿಟ್ಟು ಬೊಬ್ಬಿರಿದನು. ಅದನ್ನು ಇಂದ್ರನು ನಡುದಾರಿಯಲ್ಲೇ ಖಂಡಿಸಿ, ಕೆಡಿಕೆಡಿಯಾಗಿ, " ಎಲೋ ಖೂಳನೆ! ರಾತ್ರಿ ಕುಡಿದ ಹೆಂಡದ ಮತ್ತು ಇನ್ನೂ ನಿನ್ನ ತಲೆಯಿಂದ ಇಳಿದಿರುವಂತೆ ಕಾಣಲಿಲ್ಲ, ಅದರಿಂದಲೇ ಇಷ್ಟು ಹರಟುತ್ತೀಯೆ; ನಮ್ಮ ಬೆಂಬಲನಾಗಿರುವವನು ಯಾರು ಬಲ್ಲೆಯಾ? ಈ ದಿನ ರಾಕ್ಷಸರ ಮಾಂಸವೆಲ್ಲ ಪಿಶಾಚಗಳಿಗೆ ದೊಡ್ಡ ಔತಣವಾಗಬೇಕಾಗಿದ್ದು; ಮೊದಲು ನಿನ್ನ ಪ್ರಾಣವಾರುತವು ನನ್ನ ಬಾಣಶರ್ಪಕ್ಕ ಆಹುತಿಯಾಗಬೇಕಾಗಿದೆ; ಇದೊ ಈ ಬಾಣ

ವನ್ನು ನಿನಗಾಗಿಯೇ ವಿಾಸಲಾಗಿ ಇಟ್ಟಿದ್ದೆನು, ತೆಗೆದುಕೊ" ಎಂದು ಹೇಳಿ ಗುರಿಗಟ್ಟಿ ಪ್ರಯೋಗಿಸಿ ಅವನ ರಥ ತುರಗ ಧ್ವಜ ಪತಾಕಗಳನ್ನೆಲ್ಲ ಕಡಿದು, ಒಡನೆ ರುದ್ರಾಸ್ತ್ರವನ್ನು ಬಿಟ್ಟು ದನುಜನ ಕತ್ತನ್ನು ಕತ್ತರಿಸಿ ಗಗನತಟಕ್ಕೆ ಹಾರಿಸಿ ಬೊಬ್ಬಿರಿದನು. ಇದನ್ನು ಕಂಡು ಬಲಾಸುರನು ಇಂದ್ರನಿಗಿದಿರಾಗಿ, " ಎಲೊ ನೀಚನೆ ! ನಿನ್ನ ಬಾಣಕ್ಕೆ ನಮುಚಿಯು ಬಲಿಯಾದನು. ನನ್ನ ಬಾಣಕ್ಕೆ ನೀನು ಬಲಿಯಾಗು, " ಎಂದು ಹೇಳುತ್ತ, ಬಾಣಾವಳಿಗಳನ್ನು ಇಂದ್ರನ ಸುತ್ತಲೂ ಮುತ್ತಿಸಿದನು. ಇಂದ್ರನು ಕಣ್ಣನ್ನು ಮುಚ್ಚಿ ತೆರೆಯುವುದರೊಳಗೆ ಅವನ್ನೆಲ್ಲ ಪ್ರತಿಬಾಣಗಳಿಂದ ಖಂಡಿಸಿ, " ಎಲೋ ಖೂಳನೆ ! ಕೈಯಲ್ಲಿ ಸಾಗದವನು ಬಾಯಲ್ಲಿ ಬೈದಾಡಬೇಕು, ನಿನ್ನ ಆಸೆಯನ್ನು ಬಿಟ್ಟು ಬಿಡುವಂತೆ ನಿನ್ನ ತಾಯೊಡನೆ ಹೇಳಿ ಬಂದಿದ್ದರೆ ಸರಿ, ಇಲ್ಲದಿದ್ದರೆ ಈಗಳಾದರೂ ಹೇಳಿ ಬಾ ಹೋಗು, ಅಥವಾ ನಿನ್ನ ಹೆತ್ತವಳನ್ನು ಪುತ್ರಶೋಕದಿಂದ ಸಾಯುವಂತೆ ಮಾಡದೆ, ನನಗೆ ಶರಣಾಗತನಾಗಿ ಯುದ್ಧಾಂಕಣದಿಂದ ತಿರುಗಿ ತಲೆಯುಳುಹಿಕೊಂಡು ಬಾಳು ; ಇವೆರಡೂ ಇಲ್ಲದಿದ್ದರೆ ನಮುಚಿಯ ಮೇಲಣ ಅಭಿಮಾನದಿಂದ ಅವನ ಸ್ಥಾನಕ್ಕೆ ಬಂದು ನಿಂತಿರುವ ನಿನ್ನನ್ನೂ ಅವನ ಜತೆಯಲ್ಲಿಯೇ ಪರಲೋಕದಲ್ಲೂ ಇರುವಂತೆ ಮಾಡಿ ನಿಮ್ಮಿಬ್ಬರ ಸ್ನೇಹಬಂಧನವನ್ನು ಕಾಪಾಡುತ್ತೇನೆ, ನೋಡು " ಎಂದು ಹೇಳಿ, ೧೫ ಬಾಣಗಳನ್ನು ರಾಕ್ಷಸನ ಮೇಲೆ ಪ್ರಯೋಗಿಸಿದನು. ಅವುಗಳ ಹತಿಯಿಂದ ನೊಂದ ರಕ್ಕಸನು ಕೆರಳಿ, ಘೋರವಾದ ಬಾಣವೊಂದನ್ನು ಇಂದ್ರನ ಹಣೆಗೆ ಪ್ರಯೋಗಿಸಿದನು. ಅದರೇಟಿನಿಂದ ಇಂದ್ರನು ಕಣ್ಣಮುಚ್ಚಿ ಕ್ಷಣಕಾಲ ಮೂರ್ಛೆಗೊಂಡನು. ಬಳಿಕ ಎಚ್ಚತ್ತು ರೋಷೋದ್ರಿಕ್ತನಾಗಿ, ಕವಲುಬಾಣವನ್ನಾದು ತೆಗೆದು ಬರಸೆಳೆದು ದೈತ್ಯನ ಕೊರಲಿಗೆ ಗುರಿಯಿಟ್ಟು ಹೊಡೆದನು. ಅದು ರಕ್ಕಸನ ತಲೆಯನ್ನು ಚಂಡನ್ನು ಹಾರಿಸಿದಂತೆ ಹಾರಿಸಿಕೊಂಡು ಹೋಯಿತು. ಬಲನ ದೇಹವು ಭೂಮಿಯಮೇಲೆ ಬಿಟ್ಟದಂತೆ ಉರುಳಿತು. ದೇವಸೇನೆಯಲ್ಲಿ ಜಯಭೇರಿಯ ಶಬ್ದವಾಯಿತು. ರಾಕ್ಷಸರು ಬೆಚ್ಚಿ ಹಿಂದೆಗೆದರು. ವೃತ್ರ ಜಂಭಾಸುರರು ನಮುಚಿ ಬಲರ ಮರಣವನ್ನು ಕೇಳಿ, ಕೆರಳಿ, ಇಂದ್ರನಕಡೆಗೆ ರಥವನ್ನು ಸಾಗಿಸಿಕೊಂಡು ಬಂದರು.

ಮತ್ತೂ ಕೊಬ್ಬಿದ ದೇವೇಂದ್ರನನ್ನು ಈದಿನ ಕತ್ತರಿಸಿಕ್ಕದಿದ್ದರೆ ನಾವು ಬ
ದುಕಿ ಫಲವೇನೆಂದು ಶಪಥಮಾಡುತ್ತ, ಬಾಣಗಳನ್ನು ತೊಟ್ಟು ದೇವತೆಗ
ಳಮೇಲೆ ಸುರಿಸಿದರು. ವೋಡದ ಒಟ್ಟಲಿನ ಮಧ್ಯದಲ್ಲಿ ಸಿಕ್ಕಿದ ಬೆಟ್ಟದಂ
ತೆ ಐರಾವತವು ರಕ್ಕಸರ ಬಾಣದ ಒಡ್ಡಿನ ಮಧ್ಯದಲ್ಲಿ ಸಿಕ್ಕಿತು. ಇಂದ್ರನು
ವೀರನಾದವನ್ನು ಮಾಡುತ್ತ ತನ್ನ ಧನುರ್ವಿದ್ಯಾಕೌಶಲ್ಯವನ್ನೆಲ್ಲ ತೋರಿಸಿ,
ರಕ್ಕಸರೀಶ್ವರ ಬಾಣಗಳನ್ನೂ ತರಿದೊಟ್ಟುತ್ತಿದ್ದನು. ವಜ್ರದ ಹತಿಯಿಂದ
ರೆಕ್ಕೆಗಳನ್ನು ಕಳೆದುಕೊಂಡು ಉರುಳಿದ ಪರ್ವತಗಳಂತೆ ಇಂದ್ರರಾಕ್ಷಸ
ರ ಮಧ್ಯದಲ್ಲಿ ಬಾಣದ ತುಂಡುಗಳ ರಾಶಿಯು ಬಿದ್ದು ಬೆಳೆದಿತು. ಇಂ
ದ್ರನ ಬಾಣದೇಟುಗಳಿಂದ ಬಂದೊಂದು ಬಾರಿ ಜಂಭ ವೃತ್ರಾಸುರರು
ಮೂರ್ಛೆಗೊಂಡರೆ, ಅವರ ಸೇನೆಯು ಹಾ ! ಎಂದು ಹವ್ಮೈಸುತ್ತಿದ್ದಿ
ತು. ಮರಳಿ ಅವರೆಚ್ಚತ್ತು ಇಂದ್ರನನ್ನು ಘಾತಿಸಿ ಮೈಮರಸಿದಾಗ ದೇವ
ತೆಗಳು ಘೋಳ್ ಎನ್ನುತ್ತಿದ್ದರು ಆಗ ದೈತ್ಯರು ಕಡುಸಿಟ್ಟಿದ್ದು, ಇಬ್ಬ
ರೂ ಬಂದೇಬಾರಿಗೆ ದಿವ್ಯಾಸ್ತ್ರಗಳೆರಡನ್ನು ಪ್ರಯೋಗಿಸಲು ಅವುಗಳ
ಪೆಟ್ಟಿನಿಂದ ಇಂದ್ರನು ಶಕ್ತಿಯಳಿದು ಮೂರ್ಛಾಗತನಾಗಿ ಭೂಮಿಗುರುಳಿ
ದನು. ಬಳಿಕ ದೇವಸೇನೆಯನ್ನು ರಕ್ಕಸರು ತರಿದಟ್ಟುತ್ತಿದ್ದರು. ಸಾರಥಿ
ಯೂ ಅನುಚರರೂ ಶೈತ್ಯೋಪಚಾರ ಮಾಡಿದುದರಿಂದ ಇಂದ್ರನು ಎಚ್ಚ
ತ್ತು, ತನಗಾದ ಪರಾಭವದಿಂದ ಮತ್ತಷ್ಟು ರೇಗಿ, ಪ್ರಳಯಕಾಲಾಗ್ನಿ
ಯಂತೆ ಭೀಕರನಾಗಿ, ಎರಡು ಕೈಗಳಿಂದಲೂ ಬಾಣಗಳನ್ನು ತೆಗೆದು ಪ್ರ
ಯೋಗಿಸುತ್ತಲಿದ್ದನು. ಅವುಗಳು ಭೂವ್ಯೋಮಗಳನ್ನೊಂದುಮಾಡುವಂತೆ
ದಟ್ಟವಾಗಿ ತುಂಬಿದುವು. ರಕ್ಕಸರ ಸೇನೆಯು ಸಿಡಿಲಿನಿಂದ ಉರಿದು ಹೋ
ಗುವ ಹಾವುಗಳಂತೆ ಇಂದ್ರನ ಬಾಣಹತಿಯಿಂದ ಉರುಳುತ್ತಿದ್ದಿತು. ಬಳ
ಕ ಇಂದ್ರನು ನಿಶಿತಾಸ್ತ್ರಗಳೆರಡನ್ನು ಸೆಳೆದು ಎರಡು ಕೈಗಳಿಂದಲೂ ಆ
ಯಿಬ್ಬರುದೈತ್ಯೇಂದ್ರರಮೇಲೆ ಗುರಿಕಟ್ಟಿ ಪ್ರಯೋಗಿಸಿ ಬೊಬ್ಬಿರಿದನು. ಅ
ವನ್ನು ಜಂಭವೃತ್ರರು ಪ್ರತಿಬಾಣದಿಂದ ಮಧ್ಯಕ್ಕೆ ಖಂಡಿಸಿದರೂ, ಮತ್ತೆ
ಹಿಂದಣ ತುಂಡುಗಳು ಮುಂದಣತುಂಡುಗಳಿಗೆ ಸೇರಿ ರಭಸದಿಂದ ಹೋಗಿ
ಇಬ್ಬರ ತಲೆಗಳನ್ನೂ ಕಚ್ಚಿ ನಭೋವಮಂಡಲಕ್ಕೆ ತೆಗೆದುಕೊಂಡುಹೋಗಿ
ಸಮುದ್ರದಲ್ಲಿಟ್ಟುವು. ಇವರ ಮರಣವಾರ್ತೆಯಿಂದ ದೇವತೆಗಳು ಸಂತೋ

ಷಗೊಂಡು ಜಯಧ್ವನಿಮಾಡಿದರು. ರಕ್ಕಸರು ಗೊಳ್ಳೆಟ್ಟು ಹಿಂಜರಿದರು. ರಾಹ್ಷಸಸೇನಾಪತಿಯಾದ ಶತಮಾಯನು ಪ್ರಳಯಕಾಲದ ಯಮನಂತೆ ಕಣ್ಣುಗಳಿಂದ ಕೆಂಗಿಡಿಯನ್ನು ಸುರಿಸುತ್ತ, ತನ್ನ ಕಡೆಯ ಸೇನೆಗೆ ಅಭಯವನ್ನು ಕೊಡುತ್ತ, ಇಂದ್ರನ ಮುಂಗಡೆಗೆ ಬಂದು ಹಲ್ಲನ್ನು ಕಡಿದು, "ಎಲೊ ಬಡವೇವೇಂದ್ರನೆ! ಇದುವರೆಗೆ ಮಾಡಿದ ಹುಲುಗಾಳಗದಂತೆ ಶತಮಾಯನಯುದ್ಧವೆಂದು ತಿಳಿಯಬೇಡ; ಇಂದು ದೇವಲೋಕಕ್ಕೆ ದಿಕ್ಕಿಲ್ಲದಂತೆ ಮಾಡಿ, ನಿನ್ನ ಹೆಂಡಿರು ಸೂಳೆಯರನ್ನಿಲ್ಲ ರಕ್ಕಸರ ಪಾಲುಮಾಡಿ ಬಿಡುವೆನೆ? ನನ್ನ ಪರಾಕ್ರಮವನ್ನು ನೋಡು" ಎಂದು ಹೇಳುತ್ತ, ಬಾಣಗಳನ್ನು ದೇವಸೇನೆಯಮೇಲೆ ಪ್ರಯೋಗಿಸಿದನು. ಇಂದ್ರನನ್ನು ೧೦೦ ಬಾಣಗಳಿಂದ, ಅಗ್ನಿಯನ್ನು ೧೬ರಿಂದ, ಯಮನನ್ನು ೫ರಿಂದ, ನಿಋತಿಯನ್ನು ೫ರಿಂದ, ವರುಣ ವಾಯು ಕುಬೇರೈಶಾನರನ್ನು ೬-೬ ಬಾಣಗಳಿಂದ ಹೊಡೆದು, ಅವರ ಶರೀರಗಳಲ್ಲಿ ತೂತುಗಾಣಿಸಿ ರಕ್ತವನ್ನು ಸುರಿಸಿ, ಸಾರಥಿ ರಥಹಯಗಳನ್ನು ತುಂತುರುಗೊಳಿಸಿ, ಮೇಲೆ ಮೇಲೆ ಬಾಣಗಳನ್ನು ಪ್ರಯೋಗಿಸುತ್ತಲೇ ಇದ್ದನು. ದಿಕ್ಪಾಲಕರೆಲ್ಲರೂ ಈತನ ಬಾಣಹತಿಯಿಂದ ಮೂರ್ಛೆಯೊಂದಿದರು. ಮಾರಿ ನುಗ್ಗಿದ ಊರಿನಂತೆ ದೇವಸೇನೆಯು ಲಯಗೊಳ್ಳುತ್ತ ಬಂದಿತು. ಯಕ್ಷ ವಿದ್ಯಾಧರ ಕಿನ್ನರ ಕಿಂಪುರುಷಾದಿಗಳೆಲ್ಲ ಭೀತಿಪಟ್ಟು ಮತಿಗೆಟ್ಟು ಬಾಯ್ಬಿಟ್ಟು ಕಂಡಕಂಡ ಕಡೆಗೆ ಪಲಾಯನಗೊಂಡರು. ದಿಕ್ಪಾಲಕರು ಎಚ್ಚತ್ತು ಪ್ರತಿಬಾಣಗಳನ್ನು ಶತಮಾಯನಮೇಲೆ ಬಿಟ್ಟರೂ, ದಳ್ಳುರಿಯ ಮುಂದೆ ನಿಲ್ಲಲಾರದೆ ಮಿಣುಕುಹುಳುಗಳಂತೆ ತೇಜೋಹೀನರಾಗಿ, ಗಾಯದಿಂದ ರಕ್ತವನ್ನು ಸುರಿಸುತ್ತಲೂ, ಬೆಮರನ್ನು ತೊಟ್ಟಿಕ್ಕಿಸುತ್ತಲೂ, ತಲೆಗೂದಲನ್ನು ನೇತಾಡಿಸುತ್ತಲೂ, ಹರಕು ಕವಚವನ್ನು ಎಳೆದೆಳೆದು ಸಿಕ್ಕಿಸಿಕೊಳ್ಳುತ್ತಲೂ, ಚಪಲವಾದ ಕಣ್ಣುಗಳಿಂದ ತಿರುತಿರುಗಿ ನೋಡಿ ನಡುಗುತ್ತಲೂ, ಆಗ್ಗಾಗ್ಗೆ ನಿಟ್ಟುಸುರನ್ನು ಬಿಡುತ್ತಲೂ, ಬೆನ್ನಿನಲ್ಲಿ ನಟ್ಟ ಬಾಣವನ್ನು ಕೀಳುತ್ತಲೂ, ತಬ್ಬಿಬ್ಬಾಗಿ ಮಾತಾಡುತ್ತಲೂ, ಎವಚಿಡಿಮಾಡಿಕೊಳ್ಳುತ್ತಲೂ, ಅಳ್ಳೆಗಳು ಹೊಯ್ದುಕೊಳ್ಳುತ್ತಲೂ ಇರುವ ದೇವತೆಗಳು ಶಿವನ ಬಳಿಗೆ ಓಡಿಹೋಗಿ, ನಾಚಿಕೆಯಿಂದ ತಲೆಬಗ್ಗಿಸಿ ನಿಂತರು. ಬ್ರಹ್ಮನು ಇವರ

ಸ್ವರೂಪವನ್ನು ನೋಡಿ ಛೀಗುಟ್ಟಿ, ಸುವರ್ಣರಥವನ್ನೇರಿ ತನ್ನ ಮಹಾಸೇನೆಯೊಡನೆ ಶತಮಾಯನಮೇಲೆ ಸಾಗಿದನು. ಆತನು ಬ್ರಹ್ಮನಿಗಿದಿರಾಗಿ "ಎಲೊ ಬೊವ್ಮನೆ ! ಕುಂಬಾರನು ಮಡಿಕೆಗಳನ್ನು ಹುಟ್ಟಿಸುವಂತೆ ಲೋಕವನ್ನೆಲ್ಲ ಸೃಷ್ಟಿಸುವ ಶಕ್ತಿಯು ನಿನ್ನಲ್ಲಿದ್ದ ಮಾತ್ರದಿಂದಲೇ ಲೋಕವನ್ನೆಲ್ಲ ಕೊಲ್ಲುವ ಶಕ್ತಿಯೂ ನಿನಗಿದ್ದೀತೆ ? ಯುದ್ಧದ ಪ್ರಸಕ್ತಿಯು ನಿನಗೇಕೆ ? ವೇದಶಾಸ್ತ್ರವನ್ನು ಬಿಚ್ಚಿ ಹೊಟ್ಟೆಹೊರೆದುಕೊಂಡು ಇನ್ನೂ ಕೆಲಕಾಲ ಬದುಕುಹೋಗು" ಎಂದು ಹೀಯಾಳಿಸಿ, ನೂರಾರು ಬಾಣಗಳನ್ನೊಂದೊಂದುಬಾರಿಗೆ ಪ್ರಯೋಗಿಸುತ್ತ ಬಂದನು. ಬ್ರಹ್ಮನು ಪ್ರತಿಬಾಣಗಳಿಂದವನ್ನೆಲ್ಲ ಖಂಡಿಸಿ, " ಎಲೊ ಮದಾಂಧದೈತ್ಯನೆ ! ಸೊಳ್ಳೆಗಳನ್ನು ಸವರುವ ಶೌರ್ಯವನ್ನು ನನ್ನಮುಂದೆ ಬಿಚ್ಚಿ ಗೆದ್ದು ಬದುಕುವೆಯಾ ? ಎಷ್ಟುದಿನ ಯಾವಶಾಲೆಯಲ್ಲಿ ಯಾವಗುರುವಿನಿಂದ ಇವೆರಡು ಮಾತುಗಳಾಡುವುದನ್ನು ಕಲಿತೆ? " ಎಂದು ಮೂದಲಿಸಿ, ಮಸೆದ ಬಾಣಗಳು ನೂರನ್ನು ರಕ್ಕಸನಮೇಲೆ ಬಿಟ್ಟನು. ಅವನ್ನು ಶತಮಾಯನು ಖಂಡಿಸಿ, ಅನಂತವಾದ ಬಾಣಜಾಲವನ್ನು ಬ್ರಹ್ಮನಮೇಲೆ ಸುರಿಸಿ, ಭೂಮ್ಯಂತರಿಕ್ಷಗಳೊಂದೂ ಕಾಣದಂತೆ ಮುಚ್ಚಿಬಿಟ್ಟನು. ಬ್ರಹ್ಮನು ಅವನ್ನೆಲ್ಲ ಕೊಚ್ಚಿ, ಅವನೆದೆಗೆ ಬಾಣವನ್ನು ನಟ್ಟು ಮೂರ್ಛೆಗೊಳಿಸುವನು. ಅದಕ್ಕೆ ಸರಿಯಾಗಿ ರಕ್ಕಸನು ಬ್ರಹ್ಮನಿಗೆ ಮುಯ್ಯ್ಮಾಡುವನು. ಓಗ್ವೇರೋರ್ವರ ರಥವನ್ನು ನುಚ್ಚು ನೂರು ಮಾಡುವರು. ಹೊಸಹೊಸತೇರ್ಗಳನ್ನು ಹತ್ತುವರು. ರೋಷದಿಂದ ಗಳಿಗೆಗಳಿಗೆಗೆ ಸಿಹ್ಮನಾದವನ್ನು ಮಾಡುವರು. ಹೀಗೆ ಈರ್ವರೂ ಸಮನಾಗಿ ಯುದ್ಧಮಾಡುತ್ತಿರುವಲ್ಲಿ, ಮಾಯಾವಿಯಾದ ಶತಮಾಯನು ಅತಿಶಯವಾಗಿ ಕೆರಳಿ, ತನ್ನ ಮಾಯಾಜಾಲದಿಂದ ಬ್ರಹ್ಮನನ್ನು ಗೆಲ್ಲಬೇಕೆಂದು ಯೋಚಿಸಿ, ಕಪಟವಿದ್ಯೆಯ ಶಕ್ತಿಯನ್ನು ಬಿಚ್ಚಿದನು. ಕ್ಷಣಕಾಲದಲ್ಲಿ ರಣಾಂಗಣದಲ್ಲೆಲ್ಲ ಕಾಳ್ಗತ್ತಲೆ ಕವಿದಿತು. ಒಬ್ಬರನ್ನೊಬ್ಬರು ಕಾಣದಂತಾಯಿತು. ಹುಲಿ ಕರಡಿ ಸಿಹ್ಮ ಶಾರ್ದೂಲ ಕೋಣ ತೋಳ ಹಾವು ಚೇಳು ಮೊಸಳೆ ಮೀನು ಮೊದಲಾದ ಭೀಕರಪ್ರಾಣಿಗಳು ಅನಂತವಾಗಿ ಹುಟ್ಟಿ ದೇವತೆಗಳ ಮೇಲೆ ಬಿದ್ದು ತಿವಿದು ಪರಚಿ ಬಗಿದು ಕಡಿದು ಹಾನಿಗೊಳಿಸಿದುವು. ಮಳೆ ಮಿಂಚು ಸಿಡಿಲು ಗಾಳಿ ಧೂಳಿ ಹೊಗೆ ಬೆಟ್ಟ ಗುಡ್ಡ ಕಲ್ಲು ಗುಂಡುಗಳು ಕೋ

ಟ್ಯನುಕೋಟಿಯಾಗಿ ದೇವತೆಗಳಮೇಲೆ ಬಿದ್ದು ನೋಯಿಸಿದುವು. ಎತ್ತಲೂ ಹಳ್ಳ, ಎತ್ತಲೂ ಮುಳ್ಳು, ಎತ್ತಲೂ ಹೊಳೆ, ಎತ್ತಲೂ ಬೆಂಕಿ, ಎತ್ತಲೂ ಗಾಳಿ, ಎತ್ತಲೂ ಭೂತಪ್ರೇತಪಿಶಾಚಗಳು ಕಾಣುತ್ತಿದ್ದವು. ಈ ವಿಕಾರಗಳನ್ನೆಲ್ಲ ಬ್ರಹ್ಮನು ಕಂಡು ದೈತ್ಯನ ಸಾಮರ್ಥ್ಯಕ್ಕೆ ತಲೆದೂಗಿದನು. ಮತ್ತೂ ಇದಕ್ಕೆ ತಕ್ಕ ಪ್ರತೀಕಾರವನ್ನು ಮಾಡಬೇಕೆಂದು ಯೋಚಿಸಿ, ಅದೃಶ್ಯರೂಪಿನಿಂದ ರಕ್ಕಸನ ಸುತ್ತಲೂ ತಿರುತಿರುಗುತ್ತ ಅನಂತಗಳಾದ ಬಾಣಗಳನ್ನು ಬಿಟ್ಟು ಅವನ ದೇಹದ ಎಲ್ಲಾ ಕಡೆಯಲ್ಲೂ ನಡುತ್ತಿದ್ದನು. ಆಗ ಶತಮಾಯನು ತಾನೂ ಅದೃಶ್ಯರೂಪವನ್ನು ಧರಿಸಿ, ಪ್ರಳಯಕಾಲದ ಮೇಘವು ಮಳೆಗರೆವಂತೆ ದೇವತೆಗಳಮೇಲೆಲ್ಲ ಸಾಂದ್ರವಾದ ಬಾಣವೃಷ್ಟಿಯನ್ನು ಸುರಿಸಿ, ಮೂರ್ಛೆಗೊಳಿಸುತ್ತ ಬಂದನು. ಎಲ್ಲಿ ಹುಡುಕಿದರೂ ಬ್ರಹ್ಮನಕಣ್ಣಿಗೆ ಕಾಣದಂತೆ ಶತಮಾಯನು ಲಯಗೊಳಿಸುತ್ತಿದ್ದನು. ಅವನ ಬಿಲ್ಲಿನ ಕಬ್ಬ ಬಾಣಗಳ ಸುರಿವು ಮಾತ್ರ ಗೋಚರಿಸುತ್ತಿದ್ದಿತು. ಬ್ರಹ್ಮನು ರಕ್ಕಸನ ಬಾಣಗಳನ್ನು ತರಿತರಿದು ಬೇಸತ್ತು, ಅವನನ್ನು ಕಡಿದಿಕ್ಕಬೇಕೆಂದು ಪ್ರಯತ್ನಿಸಿದರೂ ಕಣ್ಣಿಗೆ ಕಾಣಿಸದೆ ಯಿದ್ದುದರಿಂದ ಉಪಾಯಗೆಟ್ಟು, ಶಿವಧ್ಯಾನಮಾಡಿ, ಅರಿವಿನಿಂದ ಎಚ್ಚತ್ತು, ಬತ್ತಳಿಕೆಯಲ್ಲಿದ್ದ ರುದ್ರಾಸ್ತ್ರವನ್ನು ತೆಗೆದುಕೊಂಡನು. ಅದರ ತೇಜಸ್ಸು ಹೊರಕ್ಕೆ ಚೆಲ್ಲಿದ ಮಾತ್ರದಿಂದಲೇ ಮಾಯೆಯ ಕತ್ತಲೆಯು ಹರಿದುಹೋಯಿತು. ಬಿಲ್ಲಿನಲ್ಲಿ ಹೂಡಿದ ಮಾತ್ರದಿಂದ ಎಲ್ಲಾ ಕಡೆಯೂ ಲೋಕವು ಉರಿಯುವಂತಾಯಿತು. ಬಾಣವನ್ನು ಕಿವಿವರೆಗೆ ಸೆಳೆದ ಮಾತ್ರದಿಂದ ರಕ್ಕಸರೆಲ್ಲರೂ ಮೂರ್ಛೆಗೊಂಡರು. ಬಿಟ್ಟ ಉತ್ತರಕ್ಷಣದಲ್ಲೇ ಶತಮಾಯನ ತಲೆಯನ್ನು ಕತ್ತರಿಸಿ ರುಂಡಮುಂಡಗಳೆರಡನ್ನೂ ಹೊತ್ತುಕೊಂಡು ಹೋಗಿ ಸಪ್ತಸಮುದ್ರಗಳಿಂದಾಚೆ ಮರುಭೂಮಿಯಲ್ಲಿಟ್ಟಿತು. ದೇವತೆಗಳು ಮುಂಬಿಯನ್ನು ಬಾರಿಸಿ ಹೂಮಳೆಗರೆದರು. ಬ್ರಹ್ಮನು ಕ್ಷಣಕಾಲವೂ ನಿಂತಲ್ಲಿ ನಿಲ್ಲದೆ ದೈತ್ಯಸೇನೆಯಲ್ಲೆಲ್ಲ ರಥವನ್ನು ಹರಿದಾಡಿಸಿ, ಬಾಣಹತಿಯಿಂದ ಲಯಗೊಳಿಸುತಲಿದ್ದನು. ಅವನಿಗಿದಿರಾಗುವವರು ದೈತ್ಯರಲ್ಲಿ ಒಬ್ಬರೂ ಇಲ್ಲದೆ ಉಳಿದವರೆಲ್ಲರೂ ಅಂಧಕನ ಬಳಿಗೆ ಓಡುತ್ತಿದ್ದರು. ಅವನನ್ನು ಕುಂಭಾಸುರನು ಕಂಡು, ಅವರಿಂದ ಶತಮಾಯನ ಮರಣವಾರ್ತೆ

ಯನ್ನು ಕೇಳಿ, ಅತ್ಯಂತರೋಷನೇರಿ, ತನ್ನ ಸೇನೆಯನ್ನು ಬ್ರಹ್ಮನಮೇಲೆ ಸಾಗಲುವುದಕ್ಕೆ ಅಪ್ಪಣೆಯಾಡಿ, ರಥದಲ್ಲಿ ಬಿಲ್ಲು ಬಾಣಗಳನ್ನು ತುಂಬಿಕೊಂಡು, ಏರಿ, ತಾನೇ ನಡೆದನು.—"ಎದೆಗೆಚ್ಚಿದ್ದವರು ಮುಂದೆ ನಿಲ್ಲಲಿ ಅಂಜುಪುರುಕರು ಹಿಂದೆಗೆಯಲಿ; ಕಡುಗಲಿಗಳು ಕಾದಾಡಲಿ" ಎಂದು ಹೇಳುತ್ತ, ಬ್ರಹ್ಮನಮೇಲೆ ಬಿದ್ದನು. ಅವನ ಘೋರಮೂರ್ತಿಯನ್ನು ಕಂಡವನಾತ್ರದಿಂದಲೇ ದೇವತೆಗಳು ಎದೆಗೆಟ್ಟು ಹಿಂಗಾಲಾದರು. ಮೊದಲು ಕುಂಭನು ಬಿಟ್ಟ ಬಾಣದಿಂದಲೇ ಬ್ರಹ್ಮನು ಮೂರ್ಛೆಗೊಂಡು ಧೃತಿಗೆಟ್ಟು ಹಿಂದೆಗೆದೋಡಿದನು. ದಿಕ್ಪಾಲಕರು ಬೆದರಿದರು. ಉಳಿದ ದೇವತೆಗಳೆಲ್ಲಾ ಖೋ ! ಎಂದು ಕೂಗಿ, ಬ್ರಹ್ಮನ ಬೆನ್ನಂಟಿ ಓಡಿದರು. ಹರಿಯು ಬ್ರಹ್ಮೇಂದ್ರಾದಿಗಳವಸ್ಥೆಯನ್ನು ನೋಡಿ, ಸೇನೆಯೊಡನೆ ತಾನೇ ಕುಂಭಾಸುರನಿಗಿದಿರಾದನು. ಆತನಾದರೊ ವಿಷ್ಣುವನ್ನು ಕುರಿತು—"ಎಲೊ ಹರಿಯೆ ! ಇದುವರೆಗೆ ನಮ್ಮ ಸೇನೆಯಲ್ಲಿ ಆಗಿರುವ ಸಪ್ಪಳವನ್ನೆಲ್ಲ ನಿನ್ನೊಬ್ಬನನ್ನು ಕೊಲ್ಲುವುದರಿಂದ ತುಂಬಿಸಿಕೊಳ್ಳದೆ ಬಿಡುವೆನೆ ?" ಎಂದು ಹೇಳಿ ಗರ್ಜಿಸಿ, ಬಾಣಗಳನ್ನು ಪ್ರಯೋಗಿಸಿದನು. ಹರಿಯು ಅವನ್ನೆಲ್ಲ ಕತ್ತರಿಸಿ, "ಎಲೊ ಅಧಮನೆ ! ನಾನಾರು ಬಲ್ಲೆಯಾ ? ಗರುಡನಮೇಲೆ ಹಾವು ಸೆಣಸುವಂತೆ ದಾನವಾರಿಯಾದ ನನ್ನಮೇಲೆ ದಾನವನಾದ ನೀನು ಯುದ್ಧಕ್ಕೆ ನಿಲ್ಲಬಹುದೆ ? ಪುಡಿದೇವತೆಗಳ ಮುಂದೆ ನಿನ್ನ ಜಂಭವನ್ನು ಕೊಚ್ಚಿಕೊಳ್ಳದೆ ನನ್ನಮುಂದೆ ಬಿಚ್ಚಿದರೆ ಸಾಗಲುವುದೆ ?" ಎಂದು ಮೂದಲಿಸಿ, ಪ್ರತಿಬಾಣಗಳನ್ನು ದೈತ್ಯನಮೇಲೆ ಬಿಟ್ಟು, ಅವನ ರಥ ಸಾರಥಿಗಳನ್ನು ಕೆಡಹಿದನು. ಅದರಿಂದ ರಕ್ಕಸನು ಏಟನ್ನು ತಿಂದ ಹಂದಿಯಂತೆ ಕೆರಳಿ, ಧನುರ್ಬಾಣಗಳನ್ನು ಒಂದುಕೈಯಲ್ಲಿ ಹಿಡಿದುಕೊಂಡು, ಭೂಮಿಗೆ ದುಮಿಕಿ, ಹರಿಯು ಕುಳಿತಿದ್ದ ರಥವನ್ನೇ ಎತ್ತಿ ಚಂಡನ್ನು ತಿರುಗಿಸುವಂತೆ ತಿರುಗಿಸಿ, ಆಕಾಶಕ್ಕೆ ಎಸೆದನು. ಅದು ಬುಗುರಿಯಂತೆ ತಿರುಗುತ್ತ ಮೇಲಿಂದ ಕೆಳಗೆ ಬೀಳುವುದಕ್ಕೆ ಮುಂಚೆ, ಹರಿಯು ರಥದಿಂದೀಚೆಗೆ ಹಾರಿ ಕುಂಭನಮೇಲೆ ಬಿದ್ದನು. ಅದರಿಂದ ಇಬ್ಬರೂ ನೊಂದು ಮೂರ್ಛೆಗೊಂಡರು. ಕ್ಷಣಕಾಲದಲ್ಲಿ ಎಚ್ಚತ್ತು ಇಬ್ಬರೂ ಮತ್ತೆ ರಥಾರೂಢರಾಗಿ ಕಾಳಗಕ್ಕೆ ನಿಂತರು. ಬಾಣಕ್ಕೆ ಬಾಣ, ಏಟಿಗೆ ಏಟು, ಗಾಯಕ್ಕೆ

ಗಾಯ, ಮೂರ್ಛೆಗೆ ಮೂರ್ಛೆ, ಮೂದಲಿಗೆ ಮೂದಲೆ, ಮುಷ್ಟಿಗೆ ಮುಷ್ಟಿಯಾಗಿ ಸಮಯುದ್ಧವನ್ನು ಮಾಡಿದರು. ಎರಡು ನೀಲಗಿರಿಗಳು ಸೆಣಸುವ್ರೋ ಪ್ರಣಯಕಾಲದ ಮೇಘಗಳೆರಡು ಕಾದಾಡುವ್ರೋ ಎಂಬಂತೆ ಇಬ್ಬರೂ ಹಿಂದೆಗೆಯದೆ ರೋಷಾವೇಶದಿಂದ ಕಾದುತ್ತಿದ್ದರು. ಕಡೆಗೆ ನಿಶಿತಾಸ್ತ್ರವೊಂದನ್ನು ಬಿಟ್ಟು, ಹರಿಯನ್ನು ತಲೆತಿರುಗಿ ಬಿದ್ದು ಮೂರ್ಛೆಗೊಳ್ಳುವಂತೆ ಮಾಡಿದನು.

ಒಳಕ ವಿಷ್ಣುವು ಸ್ವಲ್ಪಕಾಲಾನಂತರ ಎಚ್ಚತ್ತು, ರೋಷಾರುಣನೇತ್ರನಾಗಿ, ದಿವ್ಯಾಸ್ತ್ರವನ್ನು ತೆಗೆದು ಶುಂಭನಮೇಲೆ ಬಿಟ್ಟನು. ಅದರ ಹತಿಯಿಂದವನು ರಕ್ತವನ್ನು ಕಾರಿ ಭೂಮಿಗೆ ಬಿದ್ದನು. ನಿಶುಂಭಾದಿ ದೈತ್ಯರು ಓಡಿಬಂದು ವಿಷ್ಣುವನ್ನು ಮುತ್ತಿದರು. ಅಷ್ಟರಲ್ಲಿ ಶುಂಭನು ಮೂರ್ಛೆತಿಳಿದೆದ್ದು, ನೂಮ್ಮಡಿವುಳಿಸನ್ನು ತಾಳಿ, ಸಿಹ್ಮದಂತೆ ಗರ್ಜಿಸಿ, ಹರಿಯ ಮುಂಗಡೆಗೆ ಬಂದು, "ಇನ್ನೊಂದು ಕ್ಷಣವಾದರೂ ನನ್ನಿದಿರಿಗೆ ನಿಂತು ಬದುಕು, ನೋಡುತ್ತೇನೆ" ಎಂದು ಹೇಳುತ್ತ,ಕ್ರೂರವಾದ ಶಕ್ತ್ಯಾಯುಧವನ್ನು ತೆಗೆದು ಗರಗರನೆ ತಿರುಗಿಸಿ, ಆರ್ಭಟಿಸಿ, ವಿಷ್ಣುವಿನಮೇಲೆ ಎಚ್ಚನು. ಅದು ರಭಸದಿಂದ ಕೆಡಿಯನ್ನು ಕಾರುತ್ತ ಬಂದು, ಹರಿಯ ಎಡಬಾಹುವನ್ನು ಸೀಳಿ, ರಕ್ತವನ್ನು ಸುರಿಸಿತು. ಇದರಿಂದ ಹರಿಯು ಬಲವಳಿದು ಮೂರ್ಛೆಗೊಂಡು ರಥದಲ್ಲಿ ಬಿದ್ದನು. ಇನ್ನಿದ್ದರೆ ಹರಿಯು ಉಳಿಯುವುದಿಲ್ಲವೆಂದು ಯೋಚಿಸಿ ಅವನ ಸಾರಥಿಯು ರಥವನ್ನು ಬೇಗನೆ ತಮ್ಮ ಪಾಳಯಕ್ಕೆ ಸಾಗಿಸಿದನು. ಅದರೊಡನೆ ದೇವತಾಸೇನೆಯೂ ಹಿಂದಿರುಗಿತು. ರಾಕ್ಷಸರು ಕೋಲಾಹಲವಮಾಡಿ ದೇವತೆಗಳನ್ನು ತರುಬಿಕೊಂಡು ಹೋದರು. ಓಡಲಾರದೆ ರಕ್ಕಸರ ಕೈಗೆ ಸಿಕ್ಕಿ ಬಂದುನೂರು ಪದ್ಮಸಂಖ್ಯೆಯಷ್ಟು ದೇವತೆಗಳು ಸತ್ತರು. ಕೆಲಕೆಲರು ಪ್ರಾಣಭೀತಿಯಿಂದ ಸೀರನ್ನು ಹೊಕ್ಕು,ಬೆರಲನ್ನು ಬಾಯಿಗಿಟ್ಟು, ಹುಲ್ಲನ್ನು ಕಚ್ಚಿ, ಹುತ್ತನ್ನೇರಿ ಕಾಲ್ಗೆ ಬಿದ್ದು, ದೈನ್ಯದಿಂದ ಹಲ್ಲನ್ನು ಬಿಟ್ಟು, ಕೊಲ್ಲಬೇಡಿ ಕೊಲ್ಲಬೇಡಿರೆಂದು ಬೇಡಿ, ರಕ್ಕಸರ ದಯೆಯನ್ನು ಪಡೆದು ತಳೆಯುಳುಹಿಕೊಂಡರು. ಹೀಗೆ ಮುರಿದೋಡಿಬಂದು ಪಾಳಯಕ್ಕೆ ಬಿದ್ದ ದೇವಸೇನೆಯ ಗೋಳನ್ನೂ ರಕ್ಕಸರು ಅಟ್ಟಿಕೊಂಡು ಬರುತ್ತಿರುವುದನ್ನೂ ದಳಪತಿಯಾದ ಕುಮಾರ

ಸ್ವಾಮಿಯು ಕಂಡು, ಕಡುಮುನಿಸಿಗಿ, ಎದ್ದು,—" ಹೊಡೆ ಬಾಯ್ಮೇಲೆ, ಬಡಿ ತಲೆಯಮೇಲೆ, ಗುದ್ದು ಕತ್ತಿನಮೇಲೆ, ಕೀಳು ಮಾಸೆಗಳ, ಸೀಳು ನಾಲಿಗೆಗಳ, ಈ ನೊರಜುಗಳು ಪ್ರಾಣದಾಸೆಗಾಗಿ ತಿರುಗಿ ಓಡಿಬರಬಹುದೆ? ಈ ಭಂಡರು ಹೊಯ್ದಾಡಿ ಸತ್ತಿದ್ದರೆ ಆಗುತ್ತಿದ್ದ ನಷ್ಟವೇನು? ತಿಂದುಪ್ಪಿಗೆ ಎತಡುಬಗೆಯುವ ಇಂಥ ದಾಂಡಿಗರು ಕೋಟಿಮಂದಿಯಿದ್ದರೆತಾನೇ ಫಲವೇನು? ಸುಡು ಇವರ ಪೌರುಷವನ್ನ" ಎಂದು ತಿರಸ್ಕರಿಸಿ, ತನ್ನ ಮಣಿರಥವನ್ನೇರಿ ಧನುಸ್ಸಿಗೆ ಸಿಂಜಿನಿಯನ್ನು ತೊಡಿಸಿ, ಠಂಕಾರ ಮಾಡುತ್ತ ರಾಕ್ಷಸರಮೇಲೆ ಸಾಗಿದನು. ಭೇರಿಗಳು ಕಹಳೆಗಳು ಭೋರ್ಗರೆದುವು. ಮುಂದೆ ರಥಗಳ ಇಕ್ಕೆಲದಲ್ಲಿ ಲೋಕೈಕವೀರನ ಬಿರುದಾವಳಿಗಳನ್ನು ಉಚ್ಚೈಃಸ್ವರದಿಂದ ಉಚ್ಚರಿಸುತ್ತಿದ್ದರು. ಷಣ್ಮುಖನು ಶುಂಭನಿಗಿದಿರಾಗಿ ಬಾಣಗಳನ್ನು ಅವನಮೇಲೆ ಬಿಟ್ಟನು. ರಕ್ಕಸನು ಪ್ರತಿಬಾಣಗಳಿಂದ ಕತ್ತರಿಸಲು, ಕುಮಾರನು ಕಿಡಿಮುನಿಸಿಗಿ, " ಎಲೋ ಖೂಳನೆ! ಹರಿಬ್ರಹ್ಮರನ್ನೋಡಿಸಿದಂತೆ ಸದರವೆಂದು ನನ್ನ ಯುದ್ಧವನ್ನು ತಿಳಿಯುವೇಡ; ನಿನ್ನ ಹಿರಿಯರೆಲ್ಲ ನಮ್ಮೊಡನೆ ಕಾದಿ ಯಾವಗತಿಗೊಂಡರೆಂಬುದನ್ನು ವಿಚಾರಮಾಡಿ ತಿಳಿದುಕೊ; ಸುಮ್ಮನೆ ಕಾದು ಪ್ರಾಣವನ್ನೇಕೆ ಬಿಡುತ್ತೀಯೆ? ತಲೆತಪ್ಪಿಸಿಕೊಂಡು ಬಾಳು, ಹೋಗು" ಎಂದು ಮೂದಲಿಸಿ. ಮುಸೆವ ಬಾಣಗಳನ್ನು ಬಿಟ್ಟು, ದೈತ್ಯನ ಹಯರಥಸಾರಥಿಗಳನ್ನೆಲ್ಲ ಕಡಿದುರುಳಿಸಿದನು. ಶುಂಭನು ವಿರಥನಾಗಿ ಗದೆಯನ್ನು ಹಿಡಿದು ತಿರುಹುತ್ತ ರಥದಬಳಿಗೆ ಬಂದು ಅಪ್ಪಳಿಸಲು, ತೇರು ನುಚ್ಚುನೂರಾಯಿತು. ಬೇರೊಂದು ರಥವನ್ನೇರಿ ಬಂದ ಕುಮಾರನು ಬಂದೇಬಾಣದಿಂದ ದನುಜನ ಗದೆಯನ್ನು ಖಂಡಿಸಿದನು. ಮತ್ತೆ ದೈತ್ಯನು ಕತ್ತಿಯನ್ನು ಜಳಪಿಸಿ ಬರಲು, ಅದನ್ನೂ ಕತ್ತರಿಸಿದನು. ಬಳಿಕ ದೈತ್ಯನು ತನ್ನಲ್ಲಿದ್ದ ಪರಶು ಮುಸಲ ತೋಮರ ಚಕ್ರ ಪರಿಘ ಮೊದಲಾದ ಆಯುಧಗಳನ್ನೆಲ್ಲ ಹಿಡಿಹಿಡಿದು ಬಂದನು. ಅವೆಲ್ಲವನ್ನೂ ಷಣ್ಮುಖನು ಬಾಣಪ್ರಯೋಗದಿಂದ ತುಂಡುಮಾಡಿದನು. ಕಡೆಗೆ ಅಸುರನು ಸಿರಾಯುಧನಾಗಿ ಬುದ್ಧಿಗೆಟ್ಟು ನಿಂತನು. ಅಷ್ಟರಲ್ಲಿ ಕುಮಾರನ ಬಾಣಗಳು ದೈತ್ಯನ ರೋಮಕೂಪಗಳಲ್ಲೆಲ್ಲ ನಟ್ಟು ಗಾಯಗೊಳಿಸಿ ರಕ್ತಾಭಿಷೇಕಮಾಡಿದುವು. ಅದರಿಂದ ಬಲುನೊಂದ ದಾನವನು ಮಹತ್ತಾಗಿ ಆರ್ಭ

ಟಿಸಿ, ಬಂದೇಬಾರಿಗೆ ಕುಮಾರನನ್ನೆತ್ತಿ ನುಂಗುವೆನೆಂದು ಬಾಯ್ದೆರೆದು ಕೈ ಚಾಚಿ ಮೇಲೆಬೀಳಲು ಪ್ರಯತ್ನಿಸಿದನು. ಆಗ ಶಕ್ತ್ಯಾಯುಧವನ್ನು ಬಿಟ್ಟು ಬಂದೇಯೇಟಿಗೆ ಶುಂಭನ ತಲೆಯನ್ನು ತರಿದಿಕ್ಕಬೇಕೆಂದು ಷಣ್ಮುಖನಿಗೆ ತೋರಿದರೂ, ಆ ದೈತ್ಯನ ಪ್ರಾಣವು ಪಾರ್ವತಿಯ ಅಸ್ತ್ರಕ್ಕೆ ಬಲಿಯಾಗಬೇಕಾಗಿರುವ ನಿಯಮವನ್ನು ಆಲೋಚಿಸಿಕೊಂಡು ಶಾಂತನಾಗಿ, ಬೇರೆ ೬ ಬಾಣಗಳನ್ನು ತೆಗೆದು ಶುಂಭನ ಎದೆಗೆ ಬಿಟ್ಟು ರಕ್ತವನ್ನು ಸುರಿಸಿದನು. ಅದರಿಂದ ಪೂರ್ಣವಾಗಿ ಒಸರುವಳಿದ ದೈತ್ಯನು ಹೆಮ್ಮರವನ್ನು ಕಡಿದುರುಳಿಸಿದಂತೆ ಭೂಮಿಯ ಮೇಲೆ ಬಿದ್ದುಕೊಂಡನು. ಇವನು ಬಿದ್ದ ಸುದ್ದಿಯನ್ನು ಕೇಳಿ, ನಿಶುಂಭ ಶರಭ ಗಜಶಿರ ಕಪಿಲ ಮೊದಲಾದ ದೈತ್ಯನಾಯಕರೆಲ್ಲ ಓಡಿ ಬಂದು, ಶುಂಭನನ್ನು ಸುತ್ತಿ ಶೈತ್ಯೋಪಚಾರವಾಡುತ್ತ, ತಮ್ಮ ಪಾಳಯಕ್ಕೆ ಸಾಗಿಸಿ, ಇತ್ತ ಸರ್ವರೂ ವೀರಾವೇಶದಿಂದ ಷಣ್ಮುಖನಮೇಲೆ ಸೆಣಸುವುದಕ್ಕೆ ನಿಂತರು. ಇವರೆಲ್ಲರೂ ಕುಮಾರಸ್ವಾಮಿಯ ಮೇಲೆ ಮುತ್ತಿದುದು ಸೂರ್ಯನನ್ನು ಕತ್ತಲೆಯು ಆವರಿಸಿದಂತಾಯಿತು. ಆ ನೆಯನ್ನು ಸೊಳ್ಳೆಗಳು ಕವಿದಂತಾಯಿತು. ಪ್ರಳಯರುದ್ರನ ಪರಾವತಾರದಂತೆ ಭಯಂಕರನಾಗಿದ್ದ ಕುಮಾರಸ್ವಾಮಿಯು ಅವರೆಲ್ಲರಿಗೂ ಬಾಣಗಳನ್ನು ಪ್ರಯೋಗಿಸಿ, ಇವರಿಗೆ ಬಂದ ನಿಶುಂಭನನ್ನು ಹೊಡೆದು, ಬಲದಲ್ಲಿ ಮೇಲೆ ಬಿದ್ದ ಕುಂಭನನ್ನು ಬಡಿದು, ಎಡಗಡೆಗೆ ಬಂದ ಶರಭನನ್ನು ಸೀಳಿ ಹಿಂಗಡೆ ಬಂದ ಕುಂಭನನ್ನು ಕೆಡಹಿ, ಮೇಲ್ಗಡೆಯಿಂದ ಕವಿದ ಶಬಲ ಶಂಖಶಿರ ಮೊದಲಾದವರನ್ನೆಲ್ಲ ಧರೆಗುರುಳಿಸಿ, ವಜ್ರನಾಭಾದಿಗಳಿಗೆ ಮೂರ್ಛೆಗೊಳಿಸಿ, ರಾಕ್ಷಸಸೈನ್ಯವನ್ನೆಲ್ಲ ನಿಮಿಷಮಾತ್ರದಲ್ಲಿ ಜರ್ಝರಗೊಳಿಸಿದನು. ಅವರಲ್ಲಿ ಸಾಯುವವರಿಗೆ ಕಡೆಯಿಲ್ಲದಂತೆಯೂ, ವಾಹನದಿಂದ ಕೆಳಗುರುಳುವವರಿಗೆ ತಡೆಯಿಲ್ಲದಂತೆಯೂ, ಮೂರ್ಛೆಗೊಳ್ಳುವವರಿಗೆ ಮಿತಿಯಿಲ್ಲದಂತೆಯೂ, ಕೈ ಕಾಲ್ಗಳನ್ನು ಕಳೆದುಕೊಂಡು ಅರೆಜೀವವಾಗಿರುವವರಿಗೆ ಗಣನೆಯಿಲ್ಲದಂತೆಯೂ, ಏದುಗೆಟ್ಟೋಡುವವರಿಗೆ ಧೈರ್ಯಗುಡುವವರಿಲ್ಲದಂತೆಯೂ ಆಯಿತು. ಆ ಕುಮರೆ ಮೊದಲಾದ ತಮ್ಮ ತಮ್ಮ ವಾಹನಗಳನ್ನೆಲ್ಲ ಅಲ್ಲಲ್ಲೇ ಬಿಟ್ಟು ಕಂಡಕಂಡಕಡೆಗೆ ರಾಕ್ಷಸರು ಓಡುತ್ತ ಗೋಳಿಟ್ಟರು. ಅಲ್ಲಲ್ಲಿಗೆ ದೇವತೆಗಳ ಕೈಗೆ ಸಿಕ್ಕಿ, " ನಿಮ್ಮ ಮನೆಯ

ಜೇತವನ್ನು ಮಾಡಿಕೊಂಡಿರುತ್ತೇವೆ, ನಮಗೆ ಪ್ರಾಣದಾನ ಮಾಡಿರಿ; ನಾವು ಸಾಯುವವರೆಗೂ ಮತ್ತೆ ದೇವತೆಗಳಮೇಲೆ ಕೈಮಾಡುವುದಿಲ್ಲವೆಂದು ಶಪಥ ಮಾಡುತ್ತೇವೆ; ನಮ್ಮನ್ನು ರಕ್ಷಿಸಿರಿ" ಎಂದು ಬಗೆಬಗೆಯಾಗಿ ಬೇಡಿ, ಪ್ರಾಣವನ್ನುಳುಹಿಕೊಂಡು ಹೋಗುತ್ತಿದ್ದರು. ರಕ್ಕಸರನ್ನು ಅಟ್ಟಿಕೊಂಡು ಅವರ ಪಾಳೆಯವವರೆಗೂ ದೇವಸೇನೆಯು ಹೋಗಿ, ಅಲ್ಲಿ ಸಿಕ್ಕಿ ಸಿಕ್ಕಿದುದನ್ನು ಸೂರೆಮಾಡಿಕೊಂಡು ಬಂದಿತು. ಇತ್ತ ಷಣ್ಮುಖನು ಜಯಭೇರಿಯ ಮಹಾನಾದದೊಡನೆ ಬಿರುದಾವಳಿಗಳನ್ನು ಪೊಗಳಿಸಿಕೊಳ್ಳುತ್ತ, ಶಿವನಬಳಿಯಣ ತಮ್ಮ ಪಾಳೆಯಕ್ಕೆ ಹಿಂದಿರುಗಿದನು. ಎಂದು ಚೆನ್ನಬಸವೇಶನು ನುಡಿದನೆಂಬಲ್ಲಿಗೆ ಬಂಭತ್ತನೆ ಅಧ್ಯಾಯವು ಮುಗಿದುದು.

೧೦ ನೆ ಅಧ್ಯಾಯವು.

ಅಂಧಕಾಸುರಸಹ್ಯಾದ್ರವು.

ಸಿದ್ಧರಾಮೇಶನೆ! ಅಷ್ಟರಲ್ಲಿ ಸಂಧ್ಯಾಕಾಲವಾಯಿತು. ಅಂಧಕಾಸುರನ ಕಡೆಯ ಸೇನಾಪ್ರಮುಖರಲ್ಲಿ ಕಳೆದುಳಿದವರು ಅಹಂಕಾರವಡಗಿ ದುಗುಡದಿಂದ ತಮ್ಮ ತಮ್ಮ ಗೂಡಾರಗಳನ್ನು ಹೊಕ್ಕಿಕೊಂಡರು. ದೈತ್ಯೇಂದ್ರನು ಪರಿಮಿತವಾದ ಆಸ್ಥಾನದಲ್ಲಿ ಕುಳಿತು ತನ್ನ ಸೇನಾಪ್ರಮುಖರನ್ನೆಲ್ಲ ಒರವಾತಿವನು. ಅವರುಗಳು ತಲೆಯುಮೇಲೆ ಮುಸುಕಿಟ್ಟು, ಕೈಯಲ್ಲಿ ಊರುಮೊಣ್ಣೆಗಳನ್ನು ಹಿಡಿದು, ಕುಂಟುತ್ತ, ಕೆಮ್ಮುತ್ತ, ನಡುಗುತ್ತ, ಪಿಸುಮಾತನಾಡುತ್ತ, ನಾಚಿಕೆಯಿಂದ ತಲೆ ಬಗ್ಗಿಸಿಕೊಂಡು, ಬಬ್ಬರ ಮರೆಯಲ್ಲೊಬ್ಬನು ಒಂದು, ಸದ್ದಿಲ್ಲದೆ ಕುಳಿತುಕೊಂಡರು. ತೆರೆಗಳಿಲ್ಲದ ಸಮುದ್ರದಂತೆಯೂ, ಎಲೆಗಳಲ್ಲಾಡದ ಕಾನನದಂತೆಯೂ, ರಾಕ್ಷಸಸಭೆಯು ನಿಶ್ಶಬ್ದವಾಗಿದ್ದಿತು. ಆಗ ದಾನವರಾಜನು ಅಲ್ಲಿದ್ದವರನ್ನೊಬ್ಬೊಬ್ಬರನ್ನಾಗಿ ಹೆಸರಹಿಡಿದು ಕರೆದು, ತನ್ನ ಪಕ್ಕದಲ್ಲಿ ಕುಳ್ಳಿರಿಸಿಕೊಂಡು,— ನೀವು ನಡೆದುಹೋದ ಕಾರ್ಯಕ್ಕಾಗಿ ಯಾತಕ್ಕೆ ಚಿಂತಿಸುತ್ತೀರಿ? ಜಯಾಪಜಯಗಳು ಯಾರಿಗೆತಾನೇ ಸ್ಥಿರವು? ನಮ್ಮ ಪೂರ್ವದ ರಾಕ್ಷಸರೆಷ್ಟುಮಂಗಳು ಇದಕ್ಕಿಂತಲೂ ಅಧಿಕವಾದ ಪರಾಭವವನ್ನು ಹರಿಬ್ರಹ್ಮಾದಿಗಳಿಗುಂ

ಟುಮಾಡಿಲ್ಲ ? ಎಂದು ಮೊದಲಾಗಿ ಹೇಳಿ, ಸಮಾಧಾನಪಡಿಸಿ, ಆಪ್ತರಾದ ಜನಗಳನ್ನು ಕರೆದು, ಅವರೊಡನೆ_ " ಹಿಂದಾದ ಜಯಾಪಜಯಗಳ ಮಾತು ಹಾಗಿರಲಿ, ಮುಂದೆ ಶತ್ರುಗಳನ್ನುಗೆಲ್ಲುವುದಕ್ಕೆ ಉಪಾಯವೇನೆಂಬುದನ್ನು ನೀವೆಲ್ಲರೂ ಚೆನ್ನಾಗಿ ಆಲೋಚಿಸಿ ಹೇಳಿರಿ" ಎಂದು ಕೇಳಿದನು. ಅದನ್ನು ಕೇಳಿ ಅವರುಗಳು ಒಬ್ಬರೊಬ್ಬರ ಮುಖವನ್ನು ನೋಡುತ್ತಿರಲು, ಗಗನಮೂರ್ಧ್ನ ಯೆಂಬ ರಾಕ್ಷಸನು ಎದ್ದು ನಿಂತು_" ಜೀಯಾ ! ಈ ನಿಮ್ಮ ಮಹಾಸಭೆಯಲ್ಲಿ ಇನ್ನೂ ಮಹಾವೀರಾಧಿವೀರರೆಷ್ಟೊಮಂದಿಗಳಿರುವರು ; ಇವರ ಸಹಾಯವು ದೊಡ್ಡದಾಗಿರುವಾಗ ಶತ್ರುಜಯವು ತಮಗೆ ಅಸಾಧ್ಯವಲ್ಲ ; ಆದರೆ. ನನ್ನ ಮನಸ್ಸಿಗೆ ತೋರಿದ ಒಂದು ಸಂಗತಿಯನ್ನು ವಿಜ್ಞಾಪಿಸಿಕೊಳ್ಳುತ್ತೇನೆ;_ಇದುವರೆಗೂ ನಾವುಗಳು ದೇವತೆಗಳ ಮೇಲೆ ಹಗಲಿನಲ್ಲೇ ಯುದ್ಧವನ್ನು ಮಾಡುತ್ತಿದ್ದುದರಿಂದ ಅಪಜಯವನ್ನೇ ಪಡೆಯಬೇಕಾಯಿತು ; ನಿಶಾಚರರಾದ ನಮಗೆ ರಾತ್ರಿಕಾಲವೇ ಕಾರ್ಯಸಿದ್ಧಿಗೆ ಪ್ರಶಸ್ತವಾದುದು ; ಅದುಕಾರಣ, ಈ ರಾತ್ರಿಯೇ ನಾವು ಯುದ್ಧವನ್ನಾರಂಭಿಸಬೇಕು. ಈಗ ದೇವತೆಗಳೆಲ್ಲರೂ ಗೆದ್ದೆನೆಂಬ ಅಹಂಕಾರದಿಂದ ಮೈಮರೆತು ನಿದ್ರೆಯಲ್ಲಿದ್ದಾರೆ ; ನಮ್ಮ ಸರ್ವಶಕ್ತಿಯನ್ನೂ ಉಪಯೋಗಿಸಿ ಕಾದಾಡಿದರೆ ಅವರನ್ನು ಈ ದಿನವೇ ನಿಜವಾಗಿಯೂ ಗೆಲ್ಲುವೆವು ; ತಮ್ಮ ಚಿತ್ತಕ್ಕೆ ಸರಿದೋರಿದರೆ ಇದರಂತೆ ಮಾಡಬಹುದು " ಎಂದು ಅರಿಕೆ ಮಾಡಿದನು. ಕುಂಭ ಶರಭ ಮೊದಲಾದ ದೈತ್ಯನಾಯಕರು ಗಗನಮೂರ್ಧ್ನಯ ಅಭಿಪ್ರಾಯವೇ ನಮಗೂ ಸಮ್ಮತವೆಂದು ನುಡಿದರು. ಅದಕ್ಕೆ ಪ್ರಹ್ಲಾದನು ನಕ್ಕು_ ತಿಳಿದೂ ತಿಳಿದು ಹೀಗೆ ಭ್ರಾಂತರಾಗಬಹುದೆ ? ಪ್ರಭುವೆ ! ಕಂಡೂ ಕಾಣದಂತೆ ಆಚರಿಸುವ ಕೋಣನಂತಹ ಈ ಜನಗಳನ್ನು ಬೋಧಿಸುವುದಕ್ಕೆ ಶಿವನಿಂದಲೂ ಆಗುವುದಿಲ್ಲ ; ಇದುವರೆಗೆ ನಮ್ಮ ಸೇನೆಯಲ್ಲಿ ಶತಮಾಯ, ಜಂಭ, ನಮುಚಿ, ಬಲ ಮೊದಲಾದ ವೀರಾಧಿವೀರ ರಾಕ್ಷಸರೆಷ್ಟೋ ಮಂದಿಗಳು ಹತರಾದರು ; ಉಳಿದ ಸೇನೆಯು ಅಳಿದುದಕ್ಕೆ ಮಿತಿಯೇ ಇಲ್ಲ ; ದೇವತೆಗಳ ಕಡೆಯಾದರೊ ಪ್ರಮುಖರಾದವರಲ್ಲಿ ಯಾರು ಸತ್ತಿದ್ದಾರೆ ? ಬೆರಲು ಮಡಿಸಿ ಹೇಳು ನೋಡುವ ; ಇದರಿಂದಲೇ ಜಯಾಪಜಯಲಕ್ಷ್ಮೀಕಟಾಕ್ಷವು ಎತ್ತೆತ್ತ ಹೇಗಿದೆ ಯೆಂಬುದು ನಿನಗೇ ಗೊ

ತ್ತಾಗಬಹುದು; ಮುಂಗಾಣದ ಈ ನಿನ್ನ ಪರಿವಾರದ ಮದ್ಯಪಾಯಿಗಳ ಮಾತನ್ನು ನಂಬಿ, ಭ್ರಾಂತಿಯಿಂದ ಕೆಟ್ಟುಹೋಗದೆ, ಶಿವಪಾದವನ್ನು ಮರೆಹೊಕ್ಕು ಬಾಳು; ಎಂದು ಮೂರುವೇಳೆ ಸಾರಿ ಸಾರಿ ನುಡಿದನು. ಆ ಮಾತು ಕಿವಿಗೆ ಬಿದ್ದಕೂಡಲೇ ಅಂಧಕನು ಕಿಡಿಕಿಡಿಯಾಗಿ, ಎಲೋ ಸುಂಡನೆ! ಮಹಾಪರಾಕ್ರಮಿ ದೂರಾಲೋಚನಪರ ಎಂದು ನಿನ್ನನ್ನು ಇಲ್ಲಿಗೆ ಮುಂತ್ರಾಲೋಚನೆಗೆ ಕರೆದವರಾರು? ನಿನ್ನ ಯೋಗ್ಯತೆಗೆ ತಕ್ಕವಾತನ್ನಾಡಿದೆ! ಸಾಕು ಬಾಯ್ಮುಚ್ಚು, ಎಂದು ತಿರಸ್ಕರಿಸಿ, ಗಗನಮೂರ್ಧ್ವಗೆ ಸೇನಾಧಿಪತಿಪಟ್ಟವನ್ನು ಕಟ್ಟಿ, ಆತನು ಯೋಚಿಸಿದಂತೆಯೇ ಯುದ್ಧಕಾರ್ಯವನ್ನಾಗಮಾಡುವುದಕ್ಕೆ ವೀಳಯವನ್ನು ಕೊಟ್ಟು ಕಳುಹಿದನು. ರಾಕ್ಷಸಸೇನೆಯು ಆನೆಗಳ ಗಂಟೆಗಳನ್ನು ಕಿತ್ತು ಪಂಜುಗಳನ್ನಾರಿಸಿ, ವಾದ್ಯಗಳನ್ನು ಬಿಸುಟು, ಸದ್ದು ಬೆಳಕಿಲ್ಲದಂತೆ ಗುಪ್ತವಾಗಿ ಸರ್ವಸನ್ನಾಹವನ್ನೂ ಮಾಡಿಕೊಂಡು, ಈದಿನ ಜಯಾಪಜಯಗಳೆರಡರಲ್ಲೊಂದನ್ನು ಸಂಪೂರ್ಣವಾಗಿ ಪಡೆದುಕೊಂಡುಬರುವುದೇ ಖಂಡಿತವೆಂದು ನಿರ್ಧರಿಸಿ, ಈಶ್ವರನ ಪಾಳಯದ ಸುತ್ತಲೂ ಮುತ್ತಿಗೆ ಹಾಕಿತು. ಮತ್ತೂ ಕಾವಲಿನವರಮೇಲೆ ಮುಂಕುಬೂದಿಯನ್ನೂದಿ, ಬೇಲಿಗಳನ್ನೂ ತಡೆಕಟ್ಟಿಗಳನ್ನೂ ಹಾದು, ಪಾಳಯದ ಒಳಹೊಕ್ಕರು. ದೇವತೆಗಳೆಲ್ಲರೂ ನಿದ್ರಾಪರವಶರಾಗಿದ್ದರು. ಆಗ ದೈತ್ಯರು ಮನಸ್ಸಿಗೆ ತೋರಿದಂತೆ ದೇವತೆಗಳನ್ನು ಕತ್ತರಿಸುತ್ತಹೋದರು. ಮಲಗಿದ್ದವರನ್ನು ಹಾಗೆಯೇ ಕೊರಲನ್ನು ಕೊಯ್ದರು. ಕೆಲರ ತಲೆಯಮೇಲೆ ಕಲ್ಲುಗುಂಡುಗಳನ್ನು ಹಾಕಿದರು. ಕೆಲರ ಹೊಟ್ಟೆಯನ್ನು ತುಳಿದು ಸಾಯಿಸಿದರು, ಕೆಲರ ಕತ್ತನ್ನು ಕಿವುಚಿದರು, ಕೆಲರ ಎದೆಗೆ ಶೂಲವನ್ನು ನಟ್ಟರು. ಕೆಲರ ಗೂಡಾರಗಳಿಗೆ ಬೆಂಕಿಯನ್ನಿಟ್ಟರು. ಮೇಲೆ ಬಿದ್ದವರನ್ನು ಮೆಟ್ಟಿ ತುಳಿದರು. ಓಡುವವರನ್ನು ಅಡ್ಡಕಾಲ್ಗಿಟ್ಟು ಕೆಡಹಿ ತರಿದರು. ಹೀಗೆ ಗಣನಾತೀತವಾದಷ್ಟು ಕೊಲೆಗಳನ್ನು ಪರಿಪರಿಯಾಗಿ ಮಾಡಿದರು. ಇದರಂತೆಯೇ ಆನೆ ಕುದುರೆ ರಥಗಳನ್ನೂ ಹಾಳ್ಮಾಡಿದರು. ಈ ಬೊಬ್ಬಾಟವು ಶಿವನ ಪಾಳಯದಲ್ಲೆಲ್ಲ ತುಂಬಿತು. ಆ ಸೇನೆಯವರೆಲ್ಲರೂ ಎದ್ದು, ಹೋ! ಹೋ! ಹಿಡಿ, ಹಿಡಿ, ಶತ್ರುಗಳು! ಶತ್ರುಗಳು! ಎಂದು ಅಬ್ಬರಿಸಿ, ತಮ್ಮತಮ್ಮಮೇಲೆಯೇ ತಾವು ಬಿದ್ದು, ಕೆಡಹಿ, ತಲೆಗೆ

ದರಿ, ಭ್ರಾಂತರಾಗಿ ಓಡಾಡುತ್ತಿದ್ದರು. ಅವರವರಿಗೆ ಸಿಕ್ಕಿದ ವಾಹನಗಳನ್ನವರವರು ಹತ್ತಿ, ಸಿಕ್ಕಿದ ಆಯುಧಗಳನ್ನು ಹಿಡಿದು, "ಎಲಎಲಾ, ಮೋಸಗಾರರಿರಾ! ಇಂಥ ಅವೇಳೆಯನ್ನು ಸಾಧಿಸಿ, ಕೊಲ್ಲುವುದಕ್ಕೆ ಬಂದಿರಾ? ಈ ಅಧರ್ಮವು ನಿಮ್ಮನ್ನು ನಿಪಾತಗೊಳಿಸದೆ ಬಿಡುವುದೆ?" ಎಂದು ಮೊದಲಾಗಿ ಹೇಳುತ್ತ, ರಾಕ್ಷಸರಮೇಲೆ ಬೀಳುವ ಸಂಭ್ರಮದಲ್ಲಿ, ಕತ್ತಲೆಯಿಂದ ಕಣ್ಣಾಗಣದೆ ತಮ್ಮವರಮೇಲೆಯೇ ತಾವು ಕಾಯುತ್ತಿದ್ದರು. ಅಷ್ಟರಲ್ಲಿ ಪ್ರಮಥಗಣರುವ್ರಗಣಾದಿಗಳೆಲ್ಲರೂ ಮಹಾಪ್ರಳಯಕಾಲದ ಮೇಘಗಳಂತೆ ಆರ್ಭಟಿಸಿಕೊಂಡೆದ್ದರು. ಚಾಮುಂಡಿ ವಾರಾಹಿ ಭೈರವಿ ದುರ್ಗಿ ಮೊದಲಾದ ಮಹಾಶಕ್ತಿಗಳೆಲ್ಲರೂ ಹುಲ್ಲಡಿದು ಎದ್ದರು. ಎಲ್ಲಸೇನೆಯೂ ಕುಮಾರ ವೀರೇಶರ ಅಪ್ಪಣೆಯಮೇರೆ ಅತಿರೌದ್ರಾವೇಶದಿಂದ ದಾನವರಮೇಲೆ ಬಿದ್ದಿತು. ಹಿಡಿ, ಬಾಚು, ನುಂಗು, ಕತ್ತರಿಸು, ಕೊಯ್, ನೂಕು, ಕಡಿ, ಕೊಚ್ಚು ಎಂದು ಮೊದಲಾಗಿ ಕೂಗುತ್ತ, ತರಿತರಿದು ರಕ್ಕಸರನ್ನುರುಳಿಸುತ್ತ, ರಕ್ತವನ್ನು ಹರಿಸುತ್ತ, ಹೆಣಗಳನ್ನೊಟ್ಟುತ್ತ ತಮಬಿಕೊಂಡು ಹೋದರು. ರಾಕ್ಷಸರು ದೇವತೆಗಳ ಹೊಡೆತವನ್ನು ತಾಳಲಾರದೆ ಬೆನ್ನತೋರಿಸಿ ಓಡಹತ್ತಿದರು. ದೇವತೆಗಳು ಬಿಡದೆ ಅಟ್ಟಿಸಿಕೊಂಡುಹೋಗಿ, ಅಲ್ಲೂ ಕಡಿಕಡಿದು ಕೊಲ್ಲುತ್ತ, ಮಹಾಲಯವನ್ನುಂಟುಮಾಡಿದರು. ವೀರಭದ್ರನಸೇನೆಯು ಹಾವಳಿಯೂ, ಷಣ್ಮುಖನ ದಳದ ಉಪಟಳವೂ, ಗಣರಾಜನ ಬಲದ ಉಪದ್ರವವೂ, ಭೈರವನ ವಾಹಿನಿಯ ಕೋಲಾಹಲವೂ, ಶಕ್ತಿಗಳ ಅವಾಂತರವೂ, ದನುಜನರನ್ನು ಎದೆಗೆಡಿಸಿ ಪಾಳಯವನ್ನು ಹೊಕ್ಕಿಕೊಳ್ಳುವಂತೆ ಮಾಡಿದುವು. ಎತ್ತ ನೋಡಿದರೂ ರಾಕ್ಷಸರ ಭೀಕರರೋದನಧ್ವನಿಯೇ ಕೇಳಿಸುತ್ತಿದ್ದಿತು. ದೇವತೆಗಳು ದೈತ್ಯರ ಪಾಳಯವನ್ನು ಹೊಕ್ಕು, ಅಲ್ಲಿದ್ದ ಅವರ ಹೆಂಡಿರುಮಕ್ಕಳು ಮರಿಗಳನ್ನೆಲ್ಲ ಸೂರೆಮಾಡಿ, ಗೂಡಾರಗಳಿಗೆ ಬೆಂಕಿಯಿಕ್ಕಿ, ಕಟ್ಟಿದ್ದ ಆನೆ ಕುದುರೆಗಳ ಹಗ್ಗಗಳನ್ನು ಕೊಯ್ದು, ಇದಿರುಬಿದ್ದವರನ್ನು ತರಿದು, ಕೋಲಾಹಲಮಾಡುತ್ತಿದ್ದರು. ತಲೆಯುಳುಹಿಕೊಂಡುಹೋದ ರಾಕ್ಷಸರು ಅಂಧಕಾಸುರನೊಡನೆ ನಡೆದ ಸಂಗತಿಯನ್ನೆಲ್ಲ ಬಿನ್ನೈಸಿಕೊಂಡು ರೋದಿಸಿದರು. ಅವನ ಕಣ್ಣಿನಿಂದ ಕೋಪಾಗ್ನಿಯ ಕಿಡಿಗಳು ಸುರಿದುವು. ಮೂಡಿದ

ಗರ್ಜನೆಯಿಂದ ದೇವತೆಗಳ ಬಲವೆಲ್ಲ ಗಡಗಡನೆ ಕಂಪಿಸಿತು. ರಥವನ್ನೇರಿ ತನ್ನ ಹತ್ತಿರದ ಸೈನ್ಯವೆಲ್ಲಕ್ಕೂ ಪ್ರಯಾಣಸೂಚನೆಯ ತುತ್ತುರಿಯನ್ನು ಹಿಡಿಸಿದನು. ವಾದ್ಯಗಳು ಮೊಳಗಿದುವು. ಮೂರುದೂರದಲ್ಲಿಯೇ ರಕ್ಕಸನ ಚತುರಂಗಸೈನ್ಯಕ್ಕೂ ದೇವಸೈನ್ಯಕ್ಕೂ ಮತ್ತೆಯುದ್ಧವು ಹತ್ತಿತು. ಒಬ್ಬರಮುಖವನ್ನು ಒಬ್ಬರು ಕಾಣದೆ ಇದಿರುಮುಖಕ್ಕೆ ಉಭಯಪಕ್ಷದ ವೀರರೂ ಎಡೆಬಿಡದಂತೆ ಬಾಣಗಳನ್ನು ಬಿಡುತ್ತಿದ್ದರು. ಸತ್ತವರಾರೋ ಉಳಿದವರಾರೋ ಒಬ್ಬರಿಗೂ ಗೊತ್ತಾಗಲಿಲ್ಲ. ಆಯುಧಗಳ ಪ್ರಹಾರದಿಂದ ಹುಟ್ಟಿದ ಬೆಳಕು ಬಿಡುವಿಲ್ಲದೆ ಮಿಂಚಿನಂತೆಹೊಳೆಯುತ್ತಿದ್ದಿತು; ವೀರನಾದವೇ ಮೇಘಗರ್ಜನೆಯಂತೆ ಕೇಳಿಸುತ್ತಿದ್ದಿತು; ರಕ್ತದ ಹಾರಾಟವೇ ಬಿರುಮಳೆಯಂತಿದ್ದಿತು; ಕವಿದ ಕತ್ತಲೆಯೇ ಕಾರ್ಮುಗಿಲಿನಂತಿದ್ದಿತು; ಹಾರಾಡುವ ತಲೆಗಳೇ ಆಲಿಕಲ್ಲಿನಂತಿದ್ದುವು; ಇದರಿಂದ ಮಹಾಪ್ರಳಯ ವೃಷ್ಟಿಕಾಲದಂತೆ ಆ ಸಮಯವು ಭೀಕರವಾಗಿ ತೋರುತ್ತಿದ್ದಿತು. ಅಷ್ಟರಲ್ಲಿ ಉಭಯಸೇನೆಯವರೂ ಪಂಜುಗಳನ್ನು ಹತ್ತಿಸಿ ಬೆಳಕುಮಾಡಿದರು. ಅಂಧಕಾಸುರನಿಗೂ ವೀರೇಶನಿಗೂ, ಗಗನಮೂರ್ಧ್ನಿಗೂ ಕುಮಾರಸ್ವಾಮಿಗೂ ಯುದ್ಧವು ನಡೆದಿತು ಅಂಧಕನು ವೀರೇಶನನ್ನು ಕುರಿತು—"ನೀನೆಯೊ ವೀರಭದ್ರನೆಂಬುವನು? ಅಂಧಕಾಸುರನ ಬಾಣದ ಬೆಸೆಯು ಹೇಗಿದೆ ಯೆಂಬುದನ್ನು ತಿಳಿದುಕೊಂಡು ಹೋಗಿ ನಿಮ್ಮಪ್ಪನಿಗೆ ತಿಳಿಸು" ಎಂದುಹೇಳಿ, ಮಹಾತೀಕ್ಷ್ಣಬಾಣಗಳನ್ನು ಒಂದೇಸಮನಾಗಿ ವೀರೇಶನಮೇಲೆ ಸುರಿಸಿದನು. ಕಾಳೀಪತಿಯು ನಿಮಿಷಮಾತ್ರದಲ್ಲಿ ದನುಜನ ಬಾಣಗಳನ್ನು ಖಂಡಿಸಿ, "ಎಲೊ ಮದಾಂಧನೆ! ನಮ್ಮಪ್ಪನಬಳಿಗೆ ಹೇಳಿಕೊಳ್ಳುವುದಕ್ಕೆ ನಾನು ಹೋಗುತ್ತೇನೋ? ಪರಲೋಕದಲ್ಲಿರುವ ನಿಮ್ಮಪ್ಪನಬಳಿಗೆ ನೀನು ಹೋಗುತ್ತೀಯೊ? ಅದು ಉತ್ತರಕ್ಷಣದಲ್ಲೇ ಗೊತ್ತಾಗುತ್ತದೆ; ಈ ನನ್ನ ಬಾಣದ ರುಚಿಯನ್ನು ನೋಡು" ಎಂದು ಹೇಳಿ, ೧೨ ಬಾಣಗಳನ್ನು ದೈತ್ಯನಮೇಲೆ ಪ್ರಯೋಗಿಸಿದನು. ಅವುಗಳನ್ನೆಲ್ಲ ಅಂಧಕನು ಮಧ್ಯದಲ್ಲೇ ಖಂಡಿಸಿ, ೨೦೦ ಬಾಣಗಳನ್ನು ಬಿಟ್ಟನು. ಅವನ್ನು ವೀರೇಶನು ಕತ್ತರಿಸಿ, ಪ್ರತಿಬಾಣಗಳನ್ನು ಬಿಟ್ಟನು. ಅವನ್ನು ರಾಕ್ಷಸನು ಕತ್ತರಿಸಿದನು. ಹೀಗೆ ಇಬ್ಬರೂ ಸಮನಾಗಿ ಕಾದುತ್ತಿರಲು, ವೀರಭದ್ರನು ಅತ್ಯಂತವಾಗಿ ಕೆರ

ಳಿ, ಶಕ್ತ್ಯಾಯುಧವನ್ನು ತೆಗೆದು, ಗರಗರನೆ ತಿರುಗಿಸಿ, ದೈತ್ಯೇಂದ್ರನ ಎದೆಗೆ ಗುರಿಕಟ್ಟಿ ಹೊಡೆದನು. ಗಿರಿಯಿಂದ ಸುರಿವ ನಿರ್ಝರದಂತೆ ಅವ ನೆದೆಯಿಂದ ರಕ್ತಪ್ರವಾಹವು ಹೊರಟು ಧೀಂಕಿಡುತ್ತಿದ್ದಿತು. ರಕ್ಕಸನು ಧೊಪ್ಪನೆ ಭೂಮಿಯಮೇಲೆ ಬಿದ್ದು ಮೂರ್ಛೆಗೊಂಡನು. ಅಂಧಕನ ಪ್ರಾಣವು ಶಿವನ ಬಾಣಕ್ಕೆ ಈಡಾಗಬೇಕಾಗಿರುವುದರಿಂದ, ನಾನು ಇವ ನನ್ನು ಕೊಂದು ಶಿವಾಗ್ರಹಕ್ಕೆ ಪಾತ್ರನಾಗಬಾರದೆಂದು ವೀರೇಶನು ಯೋ ಚಿಸಿ, ಹಾಗೆಯೇ ಅವನನ್ನುಳಿದು, ಉಳಿದ ರಾಕ್ಷಸರಮೇಲೆ ಬಿದ್ದು ತರಿ ತರಿದು ಕೆಡಹುತ್ತಿದ್ದನು. ಅತ್ತ ಗುಹನು ಗಗನಮೂರ್ಧ್ನಿಯನ್ನು ಅರಗಳಿಗೆ ಯೊಳಗಾಗಿ ತರಿದು ಪರಲೋಕಕ್ಕೆ ಕಳುಹಿದನು. ಈರ್ವರೂ ಶೌರ್ಯಾತಿ ರೇಕದಿಂದ ರಾಕ್ಷಸರ ಪಾಳಯವನ್ನೆಲ್ಲ ಕಲಕಾಡುತ್ತ ಲಯಗೊಳಿಸುತ್ತಿ ದ್ದರು. ಅಷ್ಟರಲ್ಲಿ ಅಂಧಕಾಸುರನು ಮೂರ್ಛೆತಿಳಿದೆದ್ದು, ವೀರೇಶನನ್ನು ಹುಡುಕಿಕೊಂಡು ಹಲ್ಲಡಿಯುತ್ತ ಹೊರಟನು. ಇದಿರಿಗೆ ಪರಶಿವನು ಕಾ ಣಿಸಿಕೊಂಡನು. ಒಡನೆಯೇ ಅಂಧಕನು ಶಿವನ ರಥದ ಮೇಲೆ ಬಾಣಜಾ ಲವನ್ನು ತುಂಬಿದನು. ಅದನ್ನು ಕಂಡು ಶಿವನು ಮಂದಹಾಸಗೊಂಡು, ಪಿನಾಕವೆಂಬ ಧನುಸ್ಸನ್ನು ಕೈಗೆ ತೆಗೆದುಕೊಂಡು, ಸಿಂಜಿನಿಯನ್ನು ಸೆಳೆ ದು ಧ್ವನಿ ಮಾಡಿ, ಒಂದೇ ಒಂದು ಬಾಣವನ್ನು ತೆಗೆದು ಹೂಡಿ ಬಿಟ್ಟನು. ಅದು ದೈತ್ಯನ ಬಾಣಗಳೆಲ್ಲವನ್ನೂ ಕಡಿದು ಕೆಡಹಿತು. ದೈತ್ಯನು ಮತ್ತೆ ರೋಷವೇರಿ, ಕೋಟ್ಯನುಕೋಟಿ ಬಾಣಗಳನ್ನು ಶಿವನಮೇಲೆ ಕರೆದನು. ಅವನ್ನೂ ಶಿವನು ಲೀಲಾಮಾತ್ರದಿಂದ ಖಂಡಿಸಿದನು. ದಾನವೇಂದ್ರನು ಮತ್ತೂ ಕೋಪಗೊಂಡು, ನಿಶಿತವಾದ ಅಗಣಿತಬಾಣಗಳನ್ನು ಸೆಳೆಸೆಳೆ ದು ಪ್ರಯೋಗಿಸಿದನು. ಅವುಗಳು ಕೆಂಪಗೆ ಕಾದು ಕಿಡಿಗಳನ್ನು ಸುರಿ ಸುತ್ತ ಲೋಕಭೀಕರವಾಗಿ ಶಿವನ ರಥದ ಬಳಿಗೆ ಬರುವುದರೊಳಗಾಗಿ, ಸಾವಿರ ಮಿಡಕೆಗಳಿಗೆ ಒಂದು ದೊಣ್ಣೆಯ ಪೆಟ್ಟನ್ನು ಹಾಕಿದಂತೆ, ಶಂಕ ರನು ಪ್ರಯೋಗಿಸಿದ ಒಂದೇ ಒಂದು ಬಾಣವು ರಕ್ಕಸನ ಬಾಣಗಳನ್ನೆಲ್ಲ ಖಂಡಿಸಿ, ಅವನ ಕೈಬಿಲ್ಲನ್ನೂ ಕವಚ ಕುಂಡಲ ಬತ್ತಳಿಕೆಗಳನ್ನೂ ಕತ್ತ ರಿಸಿಹಾಕಿತು. ಆಗ ದೈತ್ಯನು ಹಲಗೆ ಕತ್ತಿಗಳನ್ನು ಹಿಡಿದು ಭೂಮಿಗೆ ದುಮಿಕಿ, ಶಿವನಮೇಲೆ ಬೀಳುವುದಕ್ಕೆ ಬರುತ್ತಿರಲು, ಹರನು ತ್ರಿಶೂಲ

ವನ್ನೆತ್ತಿ, ದೈತ್ಯನ ಎದೆಗೆ ತಿವಿದನು. ಅದು ನಟ್ಟು ಬೆನ್ನಿನಿಂದ ಮೂಡಲು, ದೈತ್ಯನ ದೇಹದಸಮೇತವಾಗಿ ಶೂಲವನ್ನು ಶಂಕರನು ಮೇಲಕ್ಕೆತ್ತಿದನು. ರಕ್ತವು ಧಾರೆಯಾಗಿ ಮೇಲಿನಿಂದ ಸುರಿಯುತ್ತಿದ್ದಿತು. ರಕ್ಕಸನು ಹಮ್ಮು ಡುಗಿದನು. ಗಡಗಡನೆ ನಡುಗಿದನು. ಜ್ಞಾನೋದಯಗೊಂಡು, ಪ್ರಹ್ಲಾ ದನ ಮಾತನ್ನು ಸ್ಮರಿಸಿ, ಶಿವಧ್ಯಾನ ಮಾಡತೊಡಗಿ, ಜಯಕಾಲಕಾಮಾ ರಿ! ಜಯಭಕ್ತರುಪಕಾರಿ! ಜಯಭುಜಂಗಾಭರಣ! ಜಯ ಪದಾನತ ಕರುಣ! ಜಯ ದುಷ್ಟಶಿಕ್ಷಕಾ! ಜಯ ಶಿಷ್ಟರಕ್ಷಕಾ! ಜಯ ಪಾರ್ವ ತೀರಮಣ! ಜಯ ಜಯ ನಮಸ್ತೇ ನಮಸ್ತೇ ನಮೋನಮಃ" ಎಂದು ಕೊಂಡಾಡಿದನು. ಶಿವನು ಅಂತ್ಯಕಾಲದಲ್ಲಿ ಅಂಧಕನಿಗೆ ಹುಟ್ಟಿದ ಶಿವಭ ಕ್ತಿಯನ್ನು ಕಂಡು ಸಂತೋಷಿಸಿ, ಅವನ ದೀನಧ್ವನಿಗೆ ಮರುಗಿ, ಪ್ರಸನ್ನ ನಾಗಿ, "ನಿನ್ನಿಷ್ಟವೇನು? ಬೇಡು" ಎಂದನು. ಅದನ್ನು ಕೇಳಿ ದೈ ತ್ಯನು ಹರ್ಷಗೊಂಡು, ಸ್ವಾಮಿಾ! ನನ್ನ ಈ ದೇಹವನ್ನು ತಮ್ಮ ಪಾದ ಸ್ಪರ್ಶದಿಂದ ಪರಿಶುದ್ಧಿಗೊಳಿಸುವುದಕ್ಕಾಗಿ, ಇದರಮೇಲೆ ನಿಂತು ನಾಟ್ಯ ವನ್ನಾಡಿ, ಕೊನೆಗೆ ನನಗೆ ಸ್ಥಿರವಾದ ಗಣಪದವಿಯನ್ನು ದಯಪಾಲಿಸಬೇ ಕು; ಎಂದು ಬೇಡಿದನು. ಭಕ್ತೇಷ್ಟಪ್ರದನೆಂದು ಬಿರುದಾಂಕಿತನಾದ ಶಿವನು "ಹಾಗೆಯೇ ಆಗಲಿ" ಎಂದು ವರವಿತ್ತು, ನಾಟ್ಯಕ್ಕೆ ಅನುಗುಣ ವಾದ ವೇಷವನ್ನು ಧರಿಸಿದನು. ಹುಲಿಯ ಚರ್ಮವನ್ನುಟ್ಟು ಆನೆಯ ಚರ್ಮ ವನ್ನು ಹೊದೆದು, ಮುರಿಹಾವುಗಳನ್ನು ಮುಡಿಗೆ ಕಟ್ಟಿ, ಅವುಗಳಾಭರಣ ವನ್ನೇ ಸರ್ವಾಂಗದಲ್ಲೂ ಧರಿಸಿ, ವಿಭೂತಿಯನ್ನು ಉದ್ಧೂಳಿಸಿ, ತ್ರಿಶೂಲ ದಮೇಲಿದ್ದ ರಕ್ಕಸನ ದೇಹವನ್ನು ನೆಲದಮೇಲಿಳುಹಿ, ಅವನ ದೇಹ ವೆಂಬ ರಂಗಸ್ಥಲವನ್ನು ಮೆಟ್ಟಲನುವಾದನು. ಆಗ ನಂದೀಶನು ಮದ್ದಳೆ ಯನ್ನೂ, ಬ್ರಹ್ಮನು ತಾಳವನ್ನೂ, ಹರಿಯು ಮುಖವೀಣೆಯನ್ನೂ, ಇಂ ದ್ರನು ಲುಪ್ಪಂಗವನ್ನೂ, ನಾರದನು ವೀಣೆಯನ್ನೂ, ತುಂಬುರನು ಗೆಜ್ಜೆ ಗೋಲನ್ನೂ ಹಿಡಿದು ಶಿವನ ಸುತ್ತಲೂ ನಿಂತು ಬಾಜಿಸುತ್ತಿದ್ದರು. ಅವು ಗಳ ಲಯಕ್ಕೆ ಸರಿಯಾಗಿ ಶಿವನು ಕುಣಿಯಲಾರಂಭಿಸಿದನು. ಆ ರಣಾಂಗ ಣದಲ್ಲಿದ್ದ ಸುರಾಸುರರೆಲ್ಲರೂ ಶಿವನ ಮಹಾನರ್ತವನ್ನು ಪರಮಾಶ್ಚರ್ಯದಿಂದ ನೋಡುತ್ತಿದ್ದರು. ಶಿವನು ಮೊದಲು ಪುಷ್ಪಾಂಜಲಿಗರೆದು, ಧುತ ವಿಧುತ

ಆಧುತ ಮೊದಲಾದ ಅಗ್ರನರ್ತನಭೇದಗಳನ್ನು ಮುಗಿಸಿ, ಪತಾಕಾದಿಹಸ್ತ ಭಾವಗಳನ್ನೂ, ಕಂಪಿತ ಉದ್ಘಾಹಿತ ಮೊದಲಾದ ಕಟಿಭಂಗಿಭೇದಗಳನ್ನೂ, ಊರ್ಧ್ವ ವಿಸ್ತೃತ ಮೊದಲಾದ ಭುಜಭೇದಗಳನ್ನೂ, ನಾನಾ ಜಂಘಾಭೇದಗಳನ್ನೂ ತೋರಿಸಿ, ಸ್ಥಾಯಿ ಸಂಚಾರಾದಿಭಾವಗಳನ್ನು ಹಿಡಿದು, ಕಾಯಿಕ ವಾಚಿಕ ಆಹಾರ್ಯ ಸಾತ್ವಿಕ ಮೊದಲಾದ ಅಭಿನಯಗಳನ್ನು ಮಾಡಿ, ನವರಸವನ್ನು ಅನುಸರಿಸಿ, ಗಮಕ ತಿರುಗು ಬಿರುಗು ಬೆಡಗು ಬಿನ್ನಾಣಗಳನ್ನು ಪರಿಪರಿಯಾಗಿ ಪ್ರಸರಿಸಿ, ಅತಿಚಮತ್ಕಾರದಿಂದ ಭರತಶಾಸ್ತ್ರಮಾರ್ಗಗಳನ್ನೆಲ್ಲ ಲೋಕಕ್ಕೆ ವಿಸ್ತರಿಸಿ, ಮಹಾನಾಟ್ಯವನ್ನು ಮಾಡಿದನು. ಮುಡಿಯಲ್ಲಿದ್ದ ಗಂಗೆಯು ಜರ್ಝರಿತವಾಗಿ ದಿಙ್ಮಂಡಲಕ್ಕೆಲ್ಲಚೆಲ್ಲಿತು. ಸರ್ಪಗಳು ಕುಲುಕಾಡಿ ಕಾರಿದ ವಿಷವು ಅಗ್ನಿಕಣವನ್ನು ಸುರಿಸಿತು. ಸುರಿದ ಬೆಮರು ಪ್ರವಾಹವಾಗಿ ಹರಿದಿತು. ಪದಹತಿಯಿಂದ ದಿಗ್ಗಜಗಳೂ ಕೂರ್ಮಶೇಷರೂ ತಲೆದಗ್ಗಿಸಿ ಬಿದ್ದುಕೊಂಡರು. ತಿರುವಿನ ರಭಸದಿಂದ ಹುಟ್ಟಿದ ಬಿರುಗಾಳಿಯ ಬಡಿತದಿಂದ ಕುಲಾಚಲಗಳು ಉರುಳಾಡಿದುವು. ನಕ್ಷತ್ರಗಳು ಉದುರಾಡಿದುವು. ಲೋಕವೆಲ್ಲ ಇದೇನೋ ಅವಾಂತರಪ್ರಳಯವುಂಟಾಯ್ತೆಂದು ಭಯಗೊಂಡಿತು. ಗಿರಿಜೆಯು ಪತಿಯ ಮಹಾನರ್ತನವನ್ನು ನೋಡಿ ವಿಸ್ಮಯಗೊಂಡಳು. ದೇವದುಂದುಭಿಯು ಮೊಳಗಿ, ಪುಷ್ಪವೃಷ್ಟಿಯು ಕರೆದಿತು. ಮನುಮುನಿಪ್ರಮಥಗಣಾದಿಗಳು ಜಯಜಯಧ್ವಾನವನ್ನು ಮಾಡಿದರು. ಆಗ ಶಿವನು ಅಂಧಕಾಸುರನ ದೇಹದ ಮೇಲಿಂದ ಇಳಿದನು. ಅವನಿಷ್ಟಪ್ರಕಾರ ಗಣಪದವಿಯನ್ನು ಅನುಗ್ರಹಿಸಿದನು. ಸಕಲಸೇನಾಸಮೂಹದೊಡನೆ ಪಾರ್ವತೀಸಮೇತನಾಗಿ ಅತಿವೈಭವದಿಂದ ಕೈಲಾಸಕ್ಕೆ ತೆರಳಿದನು ಎಂದು ಚೆನ್ನಬಸವೇಶನು ನುಡಿದನೆಂಬಿಲ್ಲಿಗೆ ಹತ್ತನೆ ಅಧ್ಯಾಯವು ಸಂಪೂರ್ಣವು.

೧೧ನೆ ಅಧ್ಯಾಯವು.

ಕಾಲಹರಲೀಲೆ.

ಸಿದ್ಧರಾಮೇಶನೆ ಕೇಳು, ಪೂರ್ವದಲ್ಲಿ ಶ್ವೇತನೆಂಬ ರಾಜನೊಬ್ಬನು ಅತ್ಯಂತಭಾಗ್ಯಕಾಲಿಯಾಗಿ, ಅನೇಕ ರಾಷ್ಟ್ರದುರ್ಗಗಳನ್ನು ಜೈಸಿ,

ರಾಜ್ಯವನ್ನಾಳಕೊಂಡಿರುತ್ತ, ಒಂದುದಿವಸ ತನ್ನ ಚತುರಂಗಸೇನೆಯೊಡನೆ ಕೂಡಿ, ಮಹಾವಾದ್ಯವೈಭವದಿಂದ ಪಟ್ಟಣದ ಹೊರಗಣ ಬೈಲಿನಲ್ಲಿ ವಿನೋದಯುದ್ಧವನ್ನು ಮಾಡಿ ಬರುವುದಕ್ಕಾಗಿ ಅಂದಳವನ್ನೇರಿ ರಾಜವೀಧಿಯಲ್ಲಿ ಹೋಗುತ್ತಿದ್ದನು. ಆ ಪಟ್ಟಣದಲ್ಲಿದ್ದ ಒಬ್ಬ ವರ್ತಕನು ತನ್ನ ವ್ಯಾಪಾರಕ್ಕಾಗಿ ದ್ವೀಪಾಂತರಕ್ಕೆ ಹೋಗಿರಲು, ಅವನ ಪತ್ನಿಯು ರಾಜನ ಉತ್ಸವವನ್ನು ನೋಡುವುದಕ್ಕಾಗಿ ಮನೆಯ ಬಿಸಿಲುಪ್ಪರಿಗೆಯನ್ನೇರಿ ನಿಂತಿದ್ದಳು. ಆಕೆಯ ನವಯೌವನರೂಪವಿಲಾಸವಿಭ್ರಮಾದಿಗಳು ರಾಜನ ಕಣ್ಣಿಗೆ ಬಿದ್ದುವು. ಕೂಡಲೇ ಅವನ ಇಂದ್ರಿಯಗಳು ಮುಗ್ಧವಾದುವು. ಮನಸ್ಸು ಆಕೆಯಲ್ಲೇ ನಟ್ಟಿತು. ಕಾಮಬಾಣಪೀಡಿತನಾಗಿ, ಧೃತಿಗೆಟ್ಟು ಲಜ್ಜೆಬಿಟ್ಟು, ವಿರಹಾಕುಲನಾದನು. ಚತುರಂಗಸೇನೆಯೊಡನೆ ರಾಜನದೇಹವು ಮಾತ್ರ ಹೋಗುತ್ತಿದ್ದಿತೇ ಹೊರತು ಮನೋವ್ಯಾಪಾರವೆಲ್ಲ ಅವಳಲ್ಲೇ ಲೀನವಾಗಿದ್ದಿತು. ಪಟ್ಟಣದ ಹೊರಗಣ ಬೈಲಿನಲ್ಲಿ ತನ್ನ ಸೇನೆಯು ವಿನೋದಯುದ್ಧವನ್ನು ಮಾಡುತ್ತಿದ್ದರೂ ರಾಜನು ಅದರಲ್ಲಿ ಮನಸ್ಸಿಲ್ಲದೆ ಚಿತ್ರಪ್ರತಿಮೆಯಂತೆ ಕುಳಿತಿದ್ದನು. ಅಲ್ಲಿಂದ ಹಿಂತಿರುಗಿ ಅರಮನೆಯ ಬಾಗಿಲಲ್ಲಿಳಿದು, ಪರಿವಾರವನ್ನೆಲ್ಲ ಕೈಸನ್ನೆಯಿಂದಲೇ ಕಳುಹಿಸಿ, ಆರತಿಯೆತ್ತುವ ಅಂಗನೆಯರನ್ನು ನೋಡಿ ಜುಗುಪ್ಸೆಗೊಂಡು, ಒಳಹೊಕ್ಕು, ಮಲಗುವ ಮನೆಗೆ ಹೋಗಿ, ಹಾಸುಗೆಯ ಮೇಲೆ ಮಲಗಿದನು. ಅಷ್ಟರಲ್ಲಿ ಸಂಧ್ಯಾಕಾಲವಾಯಿತು. ಸೂರ್ಯನು ಮುಳುಗಿದನು. ರಾಜನ ಚಿತ್ತದಲ್ಲಿ ಮೋಹವು ಕವಿದಿರುವಂತೆ ಲೋಕವನ್ನೆಲ್ಲ ಕತ್ತಲೆಯು ಆವರಿಸಿತು. ಮದನನು ಲೋಕವಿಜಯಕ್ಕಾಗಿ ಧನುಸ್ಸಿನಲ್ಲಿ ಬಾಣಗಳನ್ನ ಹೂಡಿ ಹೊರಟನು. ದೊರೆಯು ಸ್ತ್ರೀವಿರಹಾಗ್ನಿಯಿಂದ ತಾಪಗೊಂಡು ಚಿಂತಿಸುತ್ತ, ತನಗೆ ಆಪ್ತಳಾದ ಸಖಿಯೊಬ್ಬಳನ್ನು ಕರೆದು, ಮೃದುವಾದ ಮಾತಿನಿಂದ "ಎಲೆ ಸಖಿ, ನಿನ್ನಿಂದ ನನಗೆ ಒಂದು ಕಾರ್ಯವಾಗಬೇಕಾಗಿದೆ. ಇದುವರೆಗೆ ನಿನ್ನ ಆಪ್ತತನವು ನನ್ನ ಮನಮುಟ್ಟಿರುವುದರಿಂದ ನಿನ್ನಿಂದಲೇ ಆ ಕೆಲಸವು ನೆರವೇರುವುದೆಂದು ನಂಬಿ ನಿನಗೆ ಹೇಳುತ್ತೇನೆ, ಆ ಕಾರ್ಯವನ್ನು ನೀನು ಮಾಡಿಕೊಟ್ಟರೆ ನನ್ನ ಪ್ರಾಣವು ಉಳಯುವುದು, ಇಲ್ಲದಿದ್ದರೆ ನನಗೆ ಮರಣವೇ ನಿಶ್ಚಯ; ಆ ಕಾರ್ಯವಾವುದೆಂದರೆ— ಈ ದಿನ ನಾನು

ವೈಹಾಳಿಗೆ ಹೋಗುವಾಗ ರತ್ನವನ್ನೆಸಂಬ ವ್ಯಾಪಾರಿಯ ಹೆಂಡತಿಯು ಉಪ್ಪರಿಗೆಯ ಮೇಲೆ ನಿಂತಿದ್ದಳು; ಅವಳನ್ನು ನೋಡಿದಾಗಳಿಂದ ನನ್ನ ಮನಸ್ಸು ಅವಳಲ್ಲೇ ನಟ್ಟಿರುವುದು; ಆಕೆಯನ್ನು ಹೇಗಾದರೂ ಮಾಡಿ ನನ್ನ ಬಳಿಗೆ ನೀನು ಕರತಂದು ಬಿಡಬೇಕು" ಎಂದು ಕಣ್ಣೀರ್ತುಂಬಿ ಹೇಳಿದನು. ಸಖಿಯು_ "ಬುದ್ಧಿ! ನನಗೆ ಇದಾವ ದೊಡ್ಡಕೆಲಸ? ತಮ್ಮ ಕೃಪೆಯೊಂದಿದ್ದರೆ ಈ ದಾಸಿಯು ನಿಮಿಷಮಾತ್ರದಲ್ಲಿ ಆ ಕಾರ್ಯವನ್ನು ನೆರವೇರಿಸಿಕೊಂಡು ಬರಬಲ್ಲಳು" ಎಂದು ಉತ್ತರ ಕೊಟ್ಟು, ರಾಜನಿಂದ ಸನ್ಮಾನಿತೆಯಾಗಿ ಹೊರಟಳು. ಕೂಡಲೇ ವ್ಯಾಪಾರಿಯ ಮನೆಗೆ ಉಪಾಯದಿಂದ ನುಗ್ಗಿ, ನಾನಾಚತುರೋಕ್ತಿಗಳಿಂದ ಆಕೆಯನ್ನು ವರುಳ್ಗೊಳಿಸಿ, ಆ ರಾತ್ರಿಯೇ ಅರಮನೆಗೆ ಕರತಂದು, ದೊರೆಯು ಒಳಿಗೆ ಬಿಟ್ಟಳು. ರಾಜನು ಕಂಡು ಹರಣಬಾವನನಂತಾಗಿ, ಝಗ್ಗನೆ ಎದ್ದು, ರೋಮಾಂಚಿತನಾಗಿ, ಸಖಿಯನ್ನು ಶ್ಲಾಘಿಸಿ, ವಸ್ತ್ರಾಭರಣಗಳನಿತ್ತು ಸಂತೋಷಗೊಳಿಸಿ ಕಳುಹಿಕೊಟ್ಟನು. ತನ್ನ ಮನಃಕಾಂತೆಯನ್ನು ಮೃದುವಚನದಿಂದ ಮಾತನಾಡಿಸಿ, ಹಿಗ್ಗಿ, ಚುಂಬನಾಲಿಂಗನಸಂಘೋಗಾದಿಗಳಿಂದ ಪರಿತೃಪ್ತನಾಗಿ ಸುಖದಿಂದಿರುತ್ತಿದ್ದನು. ಬಂದುದಿನ ನಾನಾವಿಧಪುಷ್ಪಗಳನ್ನು ತನ್ನ ವಿಟಗಾತಿಯು ಕೈಗೆ ಎತ್ತಿಕೊಡುತ್ತಿರುವಾಗ್ಗೆ, ಅವರಲ್ಲಿ ಬಂದು ಸಂಪಗೆಯ ಹೂವು ಕೈತಪ್ಪಿ ನೆಲಕ್ಕೆ ಬಿದ್ದುಹೋಗಲು, ಅದನ್ನು ದೊರೆಯು "ಶಿವಾರ್ಪಿತವಾಗಲಿ" ಎಂದು ನುಡಿದನು. ರಾಜನ ಕಾಮವ್ಯಾಪಾರವು ದಿನದಿನಕ್ಕೆ ಅಭಿವೃದ್ಧಿಗೊಂಡಿತು. ಕಣ್ಣಿಗೆ ಚೆನ್ನಾಗಿಕಂಡ ಪರದಾರೆಯರನ್ನೆಲ್ಲ ವ್ಯಭಿಚಾರದಿಂದ ಕೆಡಿಸುತ್ತಿದ್ದನು. ರಾಜ್ಯಭಾರವನ್ನೆಲ್ಲ ಇತರರಿಗೆ ಬಿಟ್ಟು, ತಾನು ಪರಸ್ವಾಪಹರಣ ಸಜ್ಜನಹಿಂಸೆ ಮೊದಲಾದ ಮಹಾಪಾತಕ ಕೃತ್ಯಗಳನ್ನೆಲ್ಲ ಮಾಡುತ್ತಿದ್ದನು. ಹೀಗೆ ದುಷ್ಕೃತ್ಯದಲ್ಲೇ ತನ್ನ ಆಯುಃಕಾಲವನ್ನೆಲ್ಲ ಕಳೆದು, ಅಂತ್ಯಕಾಲವನ್ನು ಸವಿಾಪಿಸಿದನು. ಊರ್ಧ್ವಶ್ವಾಸವು ಕಂಡಿರುವಾಗ ಯಮದೂತರು ಬಂದರು. ಅವನ ಸೂಕ್ಷ್ಮಶರೀರ (ಜೀವ) ವನ್ನು ಯಮಪಟ್ಟಣಕ್ಕೆ ಎಳೆದೊಯ್ದರು. ಯಮಧರ್ಮನ ಮುಂದೆ ಚಿತ್ರಗುಪ್ತರು ಶ್ವೇತನ ಅನಂತಪಾಪಾಚರಣಗಳನ್ನೆಲ್ಲ ವಿವರಿಸಿ ಹೇಳಿ, ಬಂದುದಿನ ಹೂವೊಂದನ್ನು ಶಿವಾರ್ಪಿತವೆಂಬುದಾಗಿ ನುಡಿದು ಆತನು ಮಾ

ಡಿರುವ ಸದ್ಧರ್ಮದ ಸಂಗತಿಯನ್ನೂ ಬಿನ್ನೈಸಿದರು. "ಆ ಸದ್ಧರ್ಮಫಲ ಕ್ಕಾಗಿ ಈತನನ್ನು ಬಂದು ರಾತ್ರಿಯು ವಿಟ್ಟಗೆ ರಂಭೆಯೊಡನೆ ಸುಖಪಟ್ಟ ರುವುದಕ್ಕಾಗಿ ಸ್ವರ್ಗಲೋಕಕ್ಕೆ ಕಳುಹಿಕೊಟ್ಟು, ಮರುದಿನದಿಂದ ಇವ ನ ಪಾಪಗಳ ಫಲಾನುಭವಕ್ಕಾಗಿ ನರಕಗಳಲ್ಲಿ ಹಾಕಿರಿ" ಎಂದು ತೀರ್ಮಾ ನಿಸಿದನು. ದೂತರು ಶ್ವೇತನನ್ನು ರಂಭೆಯ ಬಳಿಗೆ ಕರೆದುಕೊಂಡು ಹೋ ಗಿ, ಆತನ ಚರಿತ್ರವನ್ನೂ ಯಮನಪ್ಪಣೆಯನ್ನೂ ತಿಳಿಸಿ, ಅವಳಲ್ಲಿ ಬಿಟ್ಟು, ಬೆಳಿಗ್ಗೆ ಇವನನ್ನು ನಮ್ಮ ವಶಕ್ಕೆ ಒಪ್ಪಿಸಬೇಕೆಂದು ಹೇಳಿಬಂದರು. ಅ ತ್ತರಂಭೆಗೆ ಶ್ವೇತನನ್ನು ನೋಡಿ ಮನಸ್ಸಿನಲ್ಲಿ ವ್ಯಸನವು ತೋರಿತು. ತನ್ನಲ್ಲಿ ಸುಖಪಟ್ಟವನನ್ನು ಮರುದಿವಸ ನರಕಕ್ಕೆ ಕಳುಹಿ ಸಂಕಟಪಡಿಸುವುದು ಹೇಗೆಂದು ಪರಿತಪಿಸಿದಳು. ಅದಕ್ಕಾಗಿ ಆ ಹತಭಾಗ್ಯನನ್ನು ದುಃಖ ವಿಮುಕ್ತನನ್ನಾಗಿ ಮಾಡುವುದಕ್ಕೆ ಬಂದ ಉಪಾಯವನ್ನು ಯೋಚಿಸಿದ ಳು. ಶಿವಪ್ರಾಜೆಯಲ್ಲಿ ಅವನನ್ನು ತೊಡಗಿಸಿ ಯಮಬಾಧೆಗೆ ದೂರನನ್ನು ಮಾಡಬೇಕೆಂದು ನಿಶ್ಚೈಸಿದಳು. ಬಳಿಕ ಶ್ವೇತನು ಕುಳಿತಿದ್ದ ಮಂಚದ ಬಳಿಗೆ ಹೋಗಿ ನಿಂತು, ಕರುಣಾದೃಷ್ಟಿಯಿಂದವನನ್ನು ನೋಡಿದಳು. ಅಷ್ಟರಲ್ಲಿ ಕಾಮಾಂಧನಾದ ಶ್ವೇತನು ಆಕೆಯನ್ನು ಮೋಹಾತುರದಿಂದ ಆ ಲಿಂಗಿಸುವುದಕ್ಕೆ ಕೈನೀಡಿದನು. ಆಕೆಯು ಅವನ ಕಾಮಚೇಷ್ಟೆಯನ್ನು ನೋಡಿ ನಕ್ಕಳು. ದೊರೆಯಾವರೊ ರಂಭೆಯನ್ನು ಕುರಿತು–ಎಲೆ ರಮಣಿ! ನನ್ನನ್ನು ನೋಡಿ ಅದೇಕೆ ನಗುವೆ? ನನ್ನಲ್ಲಿ ತಕ್ಕ ರೂಪ ಲಾವಣ್ಯ ವಿ ಭವಾದಿಗಳಿಲ್ಲವೆಂದು ಯೋಚಿಸಿದೆಯೊ? ಕಾಮುಕಲಾಪ್ರೌಢಿಮೆಯಿಲ್ಲ ವೆಂದು ಬಗೆದೆಯೊ? ನಿನ್ನ ಸಂಗಕ್ಕೆ ತಕ್ಕವನಲ್ಲವೆಂದು ತಿಳಿದೆಯೊ? ಹೇ ಗೆ? ನನ್ನೊಡನೆ ನೀನು ಕೂಡಿ ನೋಡಿದರೆ ನನ್ನ ಯೋಗ್ಯತೆಯು ಗೊತ್ತಾ ಗುವುದು" ಎಂದು ಹೇಳಲು, ರಂಭೆಯು ಕಳೆಗುಂದಿದ ಮುಖದಿಂದ ಶ್ವೇ ತನನ್ನು ಕುರಿತು–ದೊರೆಯೆ! ಕಟುಗನ ಕೈಯಲ್ಲಿಗುವ ಕುರಿಯು ಉತ್ತ ರಕ್ಷಣವ ತನ್ನ ವಿಪತ್ತನ್ನರಿಯದೆ ಮಾರ್ಗದಲ್ಲಿ ಬಿದ್ದಿರುವ ಹುಲ್ಲುಕಡ್ಡಿಯ ನ್ನು ಕಂಡು, ಕತ್ತನ್ನು ಚಾಚಿ ನಾಲಿಗೆಯನ್ನು ನೀಡುತ್ತಿರುವಂತೆ, ನಾಳೆ ಬೆಳಗಾವ ಕೂಡಲೇ ನಿನಗೆ ಪ್ರಾಪ್ತವಾಗುವುದಕ್ಕಿರುವ ನರಕದುಃಖವ ನ್ನು ಯೋಚಿಸಿಕೊಳ್ಳದೆ ಈಗ ಕಾಮಕ್ರೀಡೆಗೆ ಆತುರಪಡುತ್ತಿರುವ ನಿನ್ನ

ಅವಸ್ಥೆಯನ್ನು ನೋಡಿ ನಾನು ನಕ್ಕೆನು, ಎಂದಳು. ಶ್ವೇತನಾದರೊ— ಮುಂದೆ ಕಷ್ಟವು ಒರುವುದೆಂಬ ಭೀತಿಯಿಂದ ಕೈಗೆ ದೊರೆತ ಫಲವನ್ನನು ಭವಿಸದೆ ಬಿಟ್ಟುಬಿಡುವುದು ಪುರುಷಲಕ್ಷಣವಲ್ಲ : ಭೂಲೋಕದ ನಾರೀ ಕುಲದೊಡನೆ ಸಂಭೋಗಿಸಿ ಅದರ ಸುಖಸಾರವನ್ನೆಲ್ಲ ತಿಳಿದಿರುವ ನಾನು, ಸ್ವರ್ಗಲೋಕದ ವಾರಾಂಗನೆಯರಲ್ಲಿ ಅಗ್ಗಳೆಯಾದ ನಿನ್ನಲ್ಲೂ ಕೂಡಿ ಇಲ್ಲಿನ ಸುಖಾತಿಶಯವನ್ನು ತಿಳಿದು ಬಿಟ್ಟರೆ, ಈ ಜನ್ಮವು ಸಾರ್ಥಕವಾಗುವುದೆಂದು ತಿಳಿದು ಆತುರಗೊಂಡಿರುವೆನು ; ನೀನಾದರೊ ಇರುವ ಸ್ವಲ್ಪ ಕಾಲವನ್ನೂ ಹೀಗೆ ಕಾಡುಹರಟೆಯಿಂದ ಕಳೆಯುತ್ತಿರುವೆ ; ಯಮನು ನೀ ವಿಸಿದಷ್ಟು ಕೆಲಸವನ್ನು ಗಮ್ಮನೆ ಮಾಡು" ಎಂದು ಹೇಳುತ್ತಿರಲು, ರಂಭೆಯು ಮತ್ತಷ್ಟು ವ್ಯಸನಪಟ್ಟು,—ಅಯ್ಯೋ ! ಭೂಪನೆ ! ಭೂಲೋಕದಲ್ಲಿ ನೀನು ಆಚರಿಸದೆಯಿರುವ ಪಾಪವೇಯಿಲ್ಲ, ಹಾಗಿದ್ದರೂ ಬಂದುದಿನ ಭೂಮಿಗೆ ಬಿದ್ದುಹೋದ ಹೂವನ್ನ ಶಿವಾರ್ಪಿತವೆಂದು ನೀನು ನುಡಿದ ಮಾತ್ರದಿಂದ ಬಂದುರಾತ್ರಿ ನಸ್ಸೊಡನೆ ಸುಖಿಸುವ ಫಲವು ನಿನಗೆ ದೊರೆದಿತು. ಇನ್ನು ನಿನ್ನ ಜಿಮುಣಕಾಲವನ್ನಿಲ್ಲ ಶಿವಾರ್ಚನೆಯಲ್ಲೇ ಕಳೆದಿದ್ದಿರೆ, ಎಂಥ ಭೋಗಭಾಗ್ಯವಿಗಳು ದೊರೆಯುತ್ತಿದ್ದವೆಂಬುದನ್ನು ನೀನೇ ಯೋಚಿಸು ; ಈ ರಾತ್ರಿಯಲ್ಲಿ ೧ ಜಾವವು ಕಳೆದು ಹೋಗಿ ಇನ್ನು ಮೂರು ಜಾವಗಳುಳಿದಿರುವುವು. ಇವಿಷ್ಟನ್ನೂ ನೀನು ಕಳೆದುಬಿಟ್ಟರೆ, ಇನ್ನು ಅನಂತಕಾಲ ನಾನಾನರಕಗಳಲ್ಲಿ ನರಳಬೇಕಾಗುವುದು ; ನಿನ್ನನ್ನು ಅಗ್ನಿ ಕುಂಡಗಳಲ್ಲಿ ಹಾಕಿ, ಉರಿಗಂಬವನ್ನು ತಬ್ಬಿಸಿ, ಕಲ್ಲಿನ ಗಾಣಗಳಲ್ಲಿ ಅರೆದು, ಉಕ್ಕಿನ ಸಲಾಕೆಗಳಿಂದ ಚುಚ್ಚಿ, ಕಾದಸೀಸವನ್ನು ಕುಡಿಸಿ, ಮುಳ್ಳಿನ ಬೀಲಿಯಮೇಲೆ ಹೊರಳಿಸಿ, ವಿಚಿತ್ರವಾಗಿ ಹಿಂಸೆ ಮಾಡುವರು. ಕ್ಷಣಕಾಲದ ನನ್ನಸುಖಕ್ಕೆ ಆಶಿಸಿ, ದೀರ್ಘಕಾಲ ಮಹಾದುಃಖವನ್ನು ಅನುಭವಿಸಬೇಕಾಗುವುದು; ನನ್ನಲ್ಲಿಗೆ ನೀನುಬಂದಮೇಲೆ ನೀನು ನನ್ನವನೇ ಆಸೆ ; ಅದುಕಾರಣ, ನಿನ್ನ ಹಿತವೇ ನನ್ನ ಹಿತವೆಂದು ತಿಳಿದು, ಆಪ್ತವಚನವನ್ನು ಹೇಳುತ್ತೇನೆ ಕೇಳು;— ಮುಷ್ಟವಾದ ಕಾಮವ್ಯಾಪಾರೇಚ್ಛೆಯನ್ನು ಬಿಟ್ಟು, ಶಿವಪೂಜೆಯನ್ನು ಇದೊಂದು ರಾತ್ರಿಯಾದರೂ ಮಾತು, ನಿನಗೆ ಸಂಭವಿಸುವುದಕ್ಕಿರುವ ಮಹಾಬಾಧೆಯೂ ಅದರಿಂದ ತ

ಪ್ಪುವುದು ; ನನ್ನಂತಹ ಸೂಳೆಯರು ಸಾವಿರಾರು ಮಂದಿಗಳು ಸದಾ ನಿನ್ನ ಸೇವೆಮಾಡಿಕೊಂಡು ಕಾದು ಬಿದ್ದಿರುವಂತೆಯೂ ಆಗುವುದು ; ಅನಂತವಾದ ಸುಖವನ್ನು ನೀನು ಅನುಭವಿಸಿಕೊಂಡಿರಬಹುದು, ಎಂದಳು. ಆಗ ಶ್ವೇತನ ಮನಸ್ಸಿನಲ್ಲಿ ವಿವೇಕಾಂಕುರವು ಸ್ವಲ್ಪ ಮೂಡಿದಂತಾಯಿತು. ಅದರಿಂದ ರಂಭೆಯನ್ನು ಕುರಿತು— ಈ ಸ್ವಲ್ಪ ಕಾಲದೊಳಗಾಗಿ ಅದು ಹೇಗೆ ಶಿವಾರಾಧನೆಯನ್ನು ಮಾಡಿ ಮೆಚ್ಚಿಸಿ ಮಹಾಫಲಗಳನ್ನು ಪಡೆವುದಕ್ಕಾಯಿತು ? ಎಂದು ಕೇಳಿದನು. ಅದಕ್ಕಾರಂಭೆಯು— ದೊರೆಯೆ ! ಶಿವನೊಲಿವುದಕ್ಕೆ ಹೆಚ್ಚು ಕಾಲವು ಬೇಕಿಲ್ಲ ; ಅದಕ್ಕೊಂದು ಇತಿಹಾಸವನ್ನು ಹೇಳುತ್ತೇನೆ ಕೇಳು:— ಪೂರ್ವದಲ್ಲಿ ಒಬ್ಬ ಪಾಪಿಯು ಅಂತ್ಯಾವಸ್ಥೆಯಿಂದ ನರಳುತ್ತ ಬಂದು ಪಾಳ್ಗುಡಿಯಲ್ಲಿ ಬಿದ್ದಿದ್ದನು ; ಅವನು ಸತ್ತರೆ ಹೆಣವನ್ನು ಕಿತ್ತು ತಿನ್ನಬೇಕೆಂದು ಬಂದು ನಾಯಿಯು ಕಾದುಕೊಂಡು ಮುಗ್ಗಲಲ್ಲಿ ತಿಪ್ಪೆಗುಂಡಿಯಲ್ಲಿ ಮಲಗಿದ್ದಿತು; ಜೀವವು ಹೋಯಿತೋ ಏನೋ ಎಂದು ನೋಡುವುದಕ್ಕಾಗಿ ನಾಯಿಯು ಬಂದು, ಅವನ ದೇಹದಮೇಲೆ ನಡೆದು, ಹಣೆಯಮೇಲೆ ಕಾಲಿಟ್ಟು, ಉಸುರಾಡುತ್ತಿರುವುದನ್ನು ಪರೀಕ್ಷಿಸಿ ನೋಡಿಕೊಂಡು ಹೋಯ್ತು. ಆಗ ಅವನ ಕಾಲಲ್ಲಿ ಹತ್ತಿದ್ದ ಜೂಡಿಯು ಸಾಯುತ್ತಿದ್ದವನ ಹಣೆಗೆಹತ್ತಿತು. ಅಷ್ಟರಲ್ಲಿಅವನೂ ಸತ್ತನು. ಯಮದೂತರು ಬಂದರು. ಶಿವದೂತರೂ ಬಂದರು. ಸಾಯುವಾಗ ಅವನ ಹಣೆಯಲ್ಲಿ ವಿಭೂತಿಯು ಕಾಣುತ್ತಿದ್ದುದರಿಂದ ಅವನನ್ನು ಹಿಡಿದುಕೊಂಡು ಹೋಗುವುದಕ್ಕೆ ನಿಮಗೆಅಧಿಕಾರವಿಲ್ಲವೆಂದು ಯಮದೂತರನ್ನು ತಳ್ಳಿ ಶಿವದೂತರು ಆತನನ್ನು ಕೈಲಾಸಕ್ಕೆ ತೆಗೆದುಕೊಂಡುಹೋದರು. ಮತ್ತೂ ಒಬ್ಬ ಬೇಡನು ಕಾಡಿನಲ್ಲಿ ಕ್ರೀಡಿಸುತ್ತಿದ್ದಾಗ, ರುದ್ರಾಕ್ಷಿಯ ಹಣ್ಣನ್ನು ಕಂಡು, ಅವನ್ನು ತಾನು ತಿಂದು, ಬೀಜಗಳನ್ನು ಸರಮಾಡಿ ತನ್ನ ನಾಯ ಕೊರಲಿಗೆ ಕಟ್ಟಿದ್ದನು. ಆ ನಾಯನ್ನು ಹಂದಿಯು ಕೊಲ್ಲಲು, ಶಿವದೂತರು ಬಂದು, ಕೊರಲಿನಲ್ಲಿ ರುದ್ರಾಕ್ಷಿಯುಳ್ಳ ಅದನ್ನು ಮುಟ್ಟುವುದಕ್ಕೆ ಯಮದೂತರಿಗೆ ಅಧಿಕಾರವಿಲ್ಲವೆಂದು ತಡೆದು, ತಾವೇ ಶಿವಪುರಿಗೆ ಒಳಪೊಯ್ದರು. ಅದುಕಾರಣ, ವಿಭೂತಿ ರುದ್ರಾಕ್ಷಗಳೆಂಬ ಶಿವಚಾಂಛನವನ್ನು ಬಂದುಬಾರಿ ಧರಿಸಿದರೂ ಅದರ ಫಲವು ಮಹತ್ತರವಾಗಿರುವುದು. ಇಷ್ಟಲ್ಲದೆ ಶಿವಮಂತ್ರಪ್ರಭಾವ

ವನ್ನು ಕೇಳು— ಜೀವಾಂತದವರೆಗೂ ಸದ್ಧರ್ಮದ ಗಂಧವನ್ನರಿಯದ ಅತಿ ಪಾಪಿಯಾದ ಒಕ್ಕಲಿಗನೊಬ್ಬನು ಕಡೆಗಾಲದಲ್ಲಿ ತನ್ನ ಮಗನನ್ನು ಕರೆದು, ಹದಕ್ಕೆ ಬಂದಿರುವ ತನ್ನ ಹೊಲವನ್ನು "ಹರಗಣ್ಣ" ಎಂದು ಬುದ್ಧಿ ಹೇಳಿ ಸತ್ತನು. ಅಂತ್ಯಕಾಲದಲ್ಲಿ ಅವನ ಬಾಯಲ್ಲಿ "ಹರ ಗಣ" ಎಂಬ ಶಿವನಾಮೋಚ್ಚಾರವು ಕಂಡುಬಂದುದರಿಂದ, ಅವನನ್ನು ಶಿವದೂತರು ಕೈಲಾಸಕ್ಕೆ ಕರೆದೊಯ್ದರು. ಇದಲ್ಲದೆ ಸಾನಂದಮಹಾಮುನಿಯು ಯಮಲೋಕಕ್ಕೆ ಹೋಗಿ ಅಲ್ಲಿ ಪಂಚಾಕ್ಷರಮಹಾಮಂತ್ರವನ್ನುದ್ಘೋಷಿಸಲು, ನರಕಪೀಡಿತರಾಗಿದ್ದ ಜನಗಳೆಲ್ಲರೂ ಅದರ ಶ್ರವಣಮಾತ್ರದಿಂದಲೇ ಆ ಮಂತ್ರೋಚ್ಚಾರಣೆಯನ್ನು ತಾವೂ ಮಾಡಿ ಶಿವಲೋಕಕ್ಕೆ ತೆರಳಿದರು. ಮತ್ತೂ ಶಿವಪುಣ್ಯಕಾರ್ಯಪ್ರಭಾವವೊಂದನ್ನು ಹೇಳುತ್ತೇನೆ ಕೇಳು— ಒಬ್ಬ ಹಾವ್ಪನು ಹೊಲಿತಿಯೊಡನೆ ಕೂಡಿ ಪಾಪಾಚರಣದಲ್ಲಿ ರುತ್ತಿರಲು, ಜಾತಿಯವರು ಅವನನ್ನು ಹೊರತೆಗೆದರು. ಅವನು ಆ ಚಂಡಾಲೆಯೊಡಗೂಡಿ ಕಾಡಿನಲ್ಲಿ ಮನೆಮಾಡಿಕೊಂಡಿದ್ದನು. ಆಕೆಯು ಸಾಯಲು, ಅವಳ ಹೊಟ್ಟೆಯಲ್ಲಿ ಹುಟ್ಟಿದ್ದ ಹೆಣ್ಣುಮಕ್ಕಳನ್ನೇ ತಾನು ಕೂಡಿಕೊಂಡು, ಬಂದು ಹಾಳ್ಗುಡಿಯಲ್ಲಿ ವಾಸಿಸುತ್ತ ಕಾಲಯಾಪನೆ ಮಾಡುತ್ತಿದ್ದನು. ರಾತ್ರಿಗಾಲದಲ್ಲಿ ಕಳ್ಳರು ಬಿದ್ದ ಹೊಡೆಯುವರೆಂಬ ಭೀತಿಯಿಂದ ಆ ದೇವಾಲಯದಲ್ಲಿನ ದೀಪವು ಆರಿಹೋಗದಂತೆ ಒತ್ತಿಯನ್ನೆತ್ತಿ ಬೆಳಕನ್ನು ಮಾಡಿಕೊಂಡಿದ್ದನು. ಅಷ್ಟೊಂದು ಪಾಪಾಚಾರಿಯಾಗಿದ್ದರೂ ದೇವಾಲಯದಲ್ಲಿ ದೀಪವನ್ನರಿಸಿದ ಪುಣ್ಯವಿಶೇಷದಿಂದ ಅವನು ಅಂತ್ಯಕಾಲದಲ್ಲಿ ಶಿವದೂತರಿಂದ ಕೈಲಾಸಕ್ಕೆ ಒಯ್ಯಲ್ಪಟ್ಟನು. ಮೃಕಂಡುಋಷಿಯ ಹನ್ನೆರಡು ವರ್ಷದ ಮಗನು ತನ್ನ ಆಯುಸ್ಸು ಅಲ್ಲಿಗೇ ತೀರಿಬಂದ ಸಮಯದಲ್ಲಿ, ಘನವಾದ ಭಕ್ತಿಯಿಂದ ಶಿವಾರ್ಚನೆಯನ್ನು ಮಾಡುತ್ತ ಕುಳಿತಿರಲು, ಯಮನು ಅವನನ್ನು ತನ್ನ ಲೋಕಕ್ಕೆ ಎಳೆದುಕೊಂಡು ಹೋಗಬೇಕೆಂದು ಬಂದು, ಪೂಜೆಯಲ್ಲಿದ್ದ ಋಷಿಪುತ್ರನನ್ನು ಸೆಳೆಯುವ್ರದಕ್ಕಾಗಿ ಅವನ ಕೊರಲಿಗೆ ಪಾಶವನ್ನು ಎಸೆದನು; ಕುಮಾರನಾದರೊ ಭಯದಿಂದ ನಡುಗಿ, ಲಿಂಗವನ್ನು ತಬ್ಬಿ, ಶಿವ ಶೋ! ಎಂದು ಕೂಗಿಕೊಂಡನು. ಆ ಕೂಡಲೇ ಪ್ರಪನ್ನರಕ್ಷಕನಾದ ಶಿವನು ಆಲಿಂಗವಲ್ಲೇ ಒಡೆದು ಮೂಡಿ, ಯಮನನ್ನು

ಕೂಲದಿಂದಿರಿದು, ಭಕ್ತನನ್ನು ರಕ್ಷಿಸಿದನು. ಅದುಕಾರಣ, ಎಲೆ ದೊರೆಯೆ! ನೀನೂಕೂಡ ಭಕ್ತಿಯಿಂದ ಸ್ವಲ್ಪಕಾಲ ಶಿವಾರ್ಚನೆಯನ್ನು ಮಾಡಿದರೂ, ಯಮಭಯವನ್ನು ಗೆದ್ದು ಸುಖಪಡುವೆ" ಎಂದು ಹೇಳಲು, ಕಬ್ಬುನವು ಸಿದ್ಧರಸಸಂಪರ್ಕದಿಂದ ಸುವರ್ಣವಾಗುವಂತೆ, ರಂಭೆಯು ಉಪದೇಶವಚನಪ್ರಭಾವದಿಂದ ಶ್ವೇತನ ದುರ್ಮನಸ್ಸು ನಿರ್ಮಲವಾಯಿತು. ಸುರತೇಚ್ಛೆಯಳಿದು ಶಿವಪ್ರಾಜೇಚ್ಛೆಯು ಮೂಡಿತು. (ಸದ್ಬೋಧೆಯು ಯಾವ ಶ್ರೇಯಸ್ಸನ್ನು ತಾನೇ ಉಂಟುಮಾಡುವುದಿಲ್ಲ?) ಆ ಕೂಡಲೇ ಶ್ವೇತನು "ತಥಾಸ್ತು" ಎಂದನು. ರಂಭೆಯು ಪಾದ್ಯಾರ್ಘ್ಯಾಚಮನೀಯ ವಸ್ತ್ರಭಸಿತ ರುದ್ರಾಕ್ಷ ಗಂಧ ಮಾಲ್ಯ ಧೂಪ ದೀಪ ನೈವೇದ್ಯಾದಿ ಪರಿಕರಗಳನ್ನೆಲ್ಲ ಅಣಿಮಾಡಿಸಿದಳು. ಅವನ್ನೆಲ್ಲ ಶ್ವೇತನು ನೋಡಿ, "ರಂಭಾದೇವಿಯೆ! ಪಾಪಾತ್ಮನಾದ ನಾನು ನಿನ್ನನುಗ್ರಹದಿಂದ ಸುಕೃತಿಯಾದೆನು. ಶಿವಾರ್ಚನೆಯನ್ನು ಮಾಡುವ ಕ್ರಮವನ್ನೆಲ್ಲ ನನಗೆ ತೋರಿಸಿಕೊಟ್ಟು ಉದ್ಧರಿಸು" ಎಂದು ಪ್ರಾರ್ಥಿಸಿದನು. ಆಕೆಯು ಆತನಿಗೆ ಮುಂತೆ ಪ್ರೀಪವೇಶಪೂರ್ವಕವಾಗಿ ಹಸ್ತಕ್ಕೆ ಶಿವಲಿಂಗವನ್ನು ಕೊಟ್ಟು, ದೀಕ್ಷೆಗೊಳಿಸಿ, ಪ್ರಜಾಧಿಕಾರವನ್ನಿತ್ತು, ಕ್ರಮವಾಗಿ ಸಾಂಗಶಿವಾರ್ಚನೆಯನ್ನು ಮಾಡಿಸಿದಳು. ಒಂದೊಂದುಪಚಾರಗಳನ್ನು ಮಾಡುತ್ತ ಬಂದಂತೆ ಆ ಶ್ವೇತನ ಮನಸ್ಸಿನ ಭಕ್ತಿಯು ಬಂದೊಂದು ಮೆಟ್ಟಿಲಾಗಿ ಏರುತ್ತ ದೃಢಗೊಂಡಿತು. ಸಕಲೋಪಚಾರಗಳನ್ನೂ ಮುಗಿಸಿ ಮಹಾಮಂಗಳಾರ್ತಿಯನ್ನು ಮಾಡುವ ಹೊತ್ತಿಗೆ ಬೆಳಗಿನ ಕೋಳಿಗಳು ಕೂಗಿದುವು. ಅರುಣೋದಯವಾಯಿತು. ಶ್ವೇತನು ಆನಂದಬಾಷ್ಪಗಳಿಂದ ಕೂಡಿ ಮೈಮರೆದು ಶಿವನಿಗೆ ಪುಷ್ಪಾಂಜಲಿಯನ್ನು ಸಮರ್ಪಿಸುತ್ತಿದ್ದನು. ಅಷ್ಟರಲ್ಲಿ ಯಮದೂತರು ಬಾಗಿಲಿಗೆ ಬಂದು, ನಿನ್ನಲ್ಲಿ ಬಿಟ್ಟದ್ದವನನ್ನು ಕಳುಹಿಕೊಡು, ಎಂದು ರಂಭೆಯನ್ನು ಕೇಳಿದರು. ಆಕೆಯು ಶಿವಪೂಜಾಗಾರದಲ್ಲಿ ಶ್ವೇತನಿರುವನೆಂದು ಹೇಳಿ ಅದರ ಬಾಗಿಲನ್ನು ತೋರಿಸಿದಳು. ಅದರೊಳಗೆ ಶ್ವೇತನು ಶಿವಾರ್ಚನಲೋಲನಾಗಿರುವುದನ್ನು ದೂತರು ಕಂಡು, ಒಳಹೊಗುವುದಕ್ಕೆ ಅಂಜಿ, ಹಿಂದೆಗೆದು, ಯಮನ ಬಳಿಗೆ ಓಡಿಹೋಗಿ,—"ಜೀಯಾ! ಪಾಪಿಷ್ಠನಾದ ಶ್ವೇತನನ್ನು ನಿನ್ನಪ್ಪಣೆಯಮೇರೆ ರಂಭೆಯು ಮನೆಗೆ ನಿನ್ನೆ ಕಳುಹಿಸಿದ್ದು,

ಈಗ ಕರತರುವುದಕ್ಕೆ ಹೋಗಿರುವಲ್ಲಿ, ಆತನು ವಿಭೂತಿ ರುದ್ರಾಕ್ಷಿಗಳನ್ನು ಧರಿಸಿ ಶಿವಪ್ರೂಜಾಲೋಲನಾಗಿ ಕುಳಿತಿದ್ದುದನ್ನು ಕಂಡೆವು; ಅದೇನು ವಾಯೆಯೊ! ನಮಗೆ ತಿಳಿಯದು, ಅವನನ್ನು ಹಿಡಿಯಲು ಧೈರ್ಯವಿಲ್ಲದೆ ಓಡಿಬಂದೆವು" ಎಂದು ಬಿನ್ನೈಸಿದರು. ಅಂತಕನು ಕೇಳಿ ಹಲ್ಲಡಿದು,—ಆಹಾ! ಇದೆಲ್ಲಾ ರಂಭೆಯ ಕುಚೇಷ್ಟೆ! ಅವನು ತಪ್ಪಿಸಿಕೊಂಡರೆ, ಆ ಮಾಯೆಗಾರ್ತಿಯನ್ನೇ ಎಳತಂದು ಅವಳಹಂಕಾರವನ್ನು ಇಳುಹಿಸುತ್ತೇನೆ! ಎಂದು ಗರ್ಜಿಸಿ, ದಂಡವನ್ನು ಹೆಗಲಮೇಲಿಟ್ಟು ದೂತರನ್ನು ಕೂಡಿಕೊಂಡು, ಅಮರಾವತಿಯಲ್ಲಿರುವ ರಂಭೆಯ ಮನೆಗೆ ಬಂದನು—"ಎಲೆ ಸೂಳೆ! ಏನು ಕೆಲಸವನ್ನು ಮಾಡಿದೆ? ನಿನ್ನ ಒಳಯಲ್ಲಿ ಬಿಟ್ಟಿದ್ದ ಪಾಪಿಯನ್ನು ಅದೇಕೆ ಕಳುಹಲಿಲ್ಲೆ? ಎಂದು ಮೊರೆದು ಕೇಳಿದನು. ಆಕೆಯಾದರೊ—ಯಮರಾಜನೆ! ನನ್ನ ತಡೆಯೇನೂ ಇಲ್ಲ; ಅದೋ ಆ ಮನೆಯಲ್ಲಿ ಶ್ವೇತನಿರುವನು; ಕರೆದುಕೊಂಡು ಹೋಗು; ಎಂದು ನುಡಿದಳು. ಆಗ ಅಂತಕನು ಹೂಂಕರಿಸಿಕೊಂಡು ಶಿವಾಗಾರದಕಡೆಗೆ ನುಗ್ಗುತ್ತಿರಲು, ರಂಭೆಯು—ಯಮಧರ್ಮನೆ! ಶಿವಾರಾಧಕರಮೇಲೆ ನೀನು ಕೈಮಾಡಬಹುದೆ? ಹಿಂದೆ ಮಾರ್ಕಂಡೇಯನನ್ನು ನೀನು ಸೆಳೆದಾಗ ಶಿವನು ಎಚ್ಚರಿಸಿದುದನ್ನು ಮರೆತುಬಿಟ್ಟಿಯಾ? ಎಂದು ಹೇಳಲು, ಕೃತಾಂತನು ಕೆಂಗಣ್ಣನ್ನು ಬಿಟ್ಟು, "ನೀನೂ ನಿನ್ನ ಶಿವನೂ ಮಾಡುವುದನ್ನು ನೋಡಿಕೊಳ್ಳುತ್ತೇನೆ" ಎಂದು ತಿರಸ್ಕರಿಸಿ, ಒಳನುಗ್ಗಿ ಆರ್ಭಟಿಸಿ, ಪ್ರಾಣಿಯಲ್ಲಿದ್ದ ಶ್ವೇತನ ಕೊರಲಿಗೆ ಪಾಶವನ್ನಿಟ್ಟು ಸೆಳೆದನು. ಶ್ವೇತನು ಕಣ್ಣನ್ನು ಬಿಟ್ಟು, ಇದಿರಿಗೆ ನಿಂತಿದ್ದ ಯಮನ ಭೀಕರಾಕೃತಿಯನ್ನೂ ತನ್ನನ್ನು ಸೆಳೆಯುತ್ತಿರುವುದನ್ನೂ ನೋಡಿ ಹೆದರಿ,—ಶಿವನೇ! ಭಕ್ತವತ್ಸಲನೇ! ಮೃತ್ಯುಂಜಯನೇ! ರಕ್ಷಿಸು ರಕ್ಷಿಸು!! ಎಂದು ಮೊರೆಯಿಟ್ಟನು. ಪ್ರಪನ್ನ ರಕ್ಷಕನಾದ ಶಿವನು ಆ ಆರ್ತಧ್ವನಿಯು ಮುಗಿಯುವಷ್ಟರಲ್ಲೇ ಶ್ವೇತನ ಕರಕಮಲದ ಇಷ್ಟಲಿಂಗದಿಂದಲೇ ಆವಿರ್ಭವಿಸಿದನು. ವಿಷ್ಣುಬ್ರಹ್ಮಾದಿಗಳೂ ಪ್ರಮಥರುದ್ರಗಣರೂ ಒಡನೆಯೇ ಸಿದ್ಧರಾದರು. ಜಡೆಮುಡಿಯೂ, ದೇವಗಂಗೆಯೂ, ರುಂಡಾಭರಣವೂ, ಭುಜಗಮಾಲೆಯೂ, ಪರಶಿವನ ಲೊಪ್ಪಿರಲು, ತನ್ನ ಒಲಗೈಯನ್ನು ಶ್ವೇತನ ಶಿರಸ್ಸಿನಮೇಲಿಟ್ಟು ತಡವಿ,

ಮತ್ತೊಂದು ಬಲಗೈಯಿಂದ ಶೂಲವನ್ನು ಮೇಲಕ್ಕೆತ್ತಿದನು. ಆ ಮಹಾ ತೇಜೋಮೂರ್ತಿಯನ್ನು ಕಂಡಮಾತ್ರದಿಂದಲೇ ಯಮನು ಕಣ್ಣನ್ನು ಮುಚ್ಚಿ ಗಡಗಡನೆ ನಡುಗಿಹೋದನು. ಶಿವನು ಕೋಪದಿಂದ ಅಗ್ನಿನೇತ್ರವನ್ನು ಸ್ವಲ್ಪಮಾತ್ರವೇ ತೆರೆದು ಯಮನನ್ನು ನೋಡಿದ ಕೂಡಲೇ ಧಗ್ಗನೆ ಉರಿದು ಕ್ಷಣಕಾಲದಲ್ಲಿ ಕರಿಗೊರಡಾಗಿ ನಿಂತನು. ಆಗ ಶಂಕರನು ಸಕಲ ದೇವತೆಗಳನ್ನೂ ಕುರಿತು— " ನನ್ನ ಭಕ್ತರೇ ನನಗೆ ಪ್ರಾಣವು, ಅಂಥವರ ಮೇಲೆ ಈ ಯಮನು ಕೈಮಾಡಿದುದರಿಂದ ಆ ದ್ರೋಹವೇ ಇವನನ್ನು ಕೊಂದಿತು. ಇದನ್ನು ನೋಡಿ ಎಲ್ಲರೂ ಎಚ್ಚತ್ತು ನಡೆಯಬೇಕು " ಎಂದು ಅಪ್ಪಣೆಮಾಡಿ, ರಂಭೆಯನ್ನು ಕರೆದು, ನೀನೇ ಸಭ್ಯಕ್ಕೆಯೆಂದು ನುಡಿದು ಅನುಗ್ರಹಿಸಿದನು. ಆಗ ಬಳಿಯಲ್ಲಿದ್ದ ಬ್ರಹ್ಮನು ಶಿವನ ಮುಂಗಡೆಗೆ ಬಂದು ವಂದಿಸಿ,—ದೇವಾಧಿದೇವನೆ! ಯಮಧರ್ಮನು ಭಕ್ತದ್ರೋಹದಿಂದ ಅಳಿದುಹೋದಬಳಿಕ ಇನ್ನು ಜಗತ್ತಿನಲ್ಲಿ ಪಾಪಾಚಾರಿಗಳನ್ನು ಶಿಕ್ಷಿಸುವವರಿಲ್ಲದಂತಾಯಿತು; ಪಾಪಕ್ಕೆ ಜನರು ಪೆದರದಂತೆಯೇ ಆಗುವುದು; ಅದುಕಾರಣ ಯಮನು ಮಾಡಿದ ತಪ್ಪನ್ನು ಈಬಾರಿಗೆ ಕ್ಷಮಿಸಿ, ದುಷ್ಟ ಶಿಕ್ಷಣೆಗಾಗಿ ಆತನನ್ನು ಪುನಃ ಉದ್ಧರಿಸಿ, ಮತ್ತೆ ಇಂತಹ ಭಕ್ತದ್ರೋಹವನ್ನು ಎಂದಿಗೂ ಮಾಡದಂತೆ ಎಚ್ಚರಿಸಿ ಬುದ್ಧಿಗಲಿಸಿ ಕಾಪಾಡಬೇಕೆಂದು ಬೇಡಿದನು. ಶಂಕರನು ದಯೆಗೊಂಡು ಯಮನಿಗೆ ಪ್ರಾಣದಾನವನ್ನು ಮಾಡಿದನು ಮಲಗಿದ್ದವರೇಳ್ವಂತೆ ಅಂತಕನು ಎದ್ದು, ಶಿವನ ಪಾದಕ್ಕೆ ನಮಸ್ಕರಿಸಿ,— ಪ್ರಭುವೆ! ಮೂರ್ಖನಾದ ನನ್ನ ಸರ್ವಾಪರಾಧವನ್ನೂ ಕ್ಷಮಿಸಬೇಕೆಂದು ಬೇಡಿದನು. ಪರಶಿವನಾದರೊ— ಮುಂದೆ ಇನ್ನೆಂದೂ ನನ್ನ ಲಾಂಛನವನ್ನು ಧರಿಸಿವ ಭಕ್ತರಮೇಲೆ ನೀನು ಕೈಮಾಡಕೂಡದು, ಎಂದು ಬುದ್ಧಿಹೇಳಿ, ಅವನ ಪಟ್ಟಣಕ್ಕೆ ಹೋಗುವುದಕ್ಕೆ ಅಪ್ಪಣೆಯಿತ್ತು, ಶ್ವೇತನನ್ನು ಜತೆಯಲ್ಲಿ ಕರೆದುಕೊಂಡು ಸಕಲಪರಿವಾರದೊಡನೆ ಕೈಲಾಸಕ್ಕೆ ದಯಮಾಡಿದನೆಂದು ಚೆನ್ನಬಸವೇಶನು ನುಡಿದನೆಂಬಿಲ್ಲಿಗೆ ೧೧ ನೆ ಅಧ್ಯಾಯವು ಸಂಪೂರ್ಣವು.

೧೨ನೆ ಅಧ್ಯಾಯವು.

ಸು ಖಾ ವ ಹ ಮೂ ರ್ತಿ ಲೀ ಲೆ.

ಎಲೈ ಸಿದ್ಧರಾಮೇಶನೆ, ಪೂರ್ವದಲ್ಲಿ ಒಂದುವೇಳೆ ಕಾಲಯೋಗದಿಂ ದ ೧೨ ವರ್ಷಗಳ ಅನಾವೃಷ್ಟಿಯು ಸಂಭವಿಸಿತು. ಅದನ್ನು ಮುಂದಾಗಿ ಯೇ ಶಾಸ್ತ್ರಶೋಧನಮುಖದಿಂದ ತಿಳಿದಿದ್ದ ಗೌತಮಮಹರ್ಷಿಯು ನಿ ವಾರಣೋಪಾಯಕ್ಕಾಗಿ ದಂಡಕಾರಣ್ಯದಲ್ಲಿ ಶಿವನನ್ನು ಕುರಿತು ಘೋರತ ಪಸ್ಸನ್ನಾಚರಿಸಿದನು. ಅದನ್ನು ಶಂಕರನು ತಿಳಿದು, ಗೌತಮನ ಮನೋಭ ಕ್ತಿದಾರ್ಢ್ಯವನ್ನು ಜಗತ್ತಿಗೆ ತೋರ್ಪಡಿಸಬೇಕೆಂದು ಯೋಚಿಸಿ, ವಿಷ್ಣು ವನ್ನು ಕರೆದು— " ನೀನು ಹೋಗಿ ಗೌತಮನ ಮುಂದೆ ನಿಂತು, ನಿನ್ನನ್ನೇ (ವಿಷ್ಣುವನ್ನೇ) ಜಗತ್ಕರ್ತೃವೆಂದು ವಾದಿಸಿ, ಸಾಧಿಸಿಕೊಂಡು ಬಾ " ಎಂ ದನು. ಹಾಗೆಮಾಡುವುದು ನನ್ನಿಂದ ಅಸಾಧ್ಯವೆಂದು ಹರಿಯು ನುಡಿಯು ಲು, ಅದಕ್ಕೆ ಶಿವನು ನಕ್ಕು, ಹರಿಬ್ರಹ್ಮರೊತೆಸೆ ತಾನೂ ವೈಷ್ಣವವೇಷ ವನ್ನು ಧರಿಸಿಕೊಂಡು, ದಂಡಕಾರಣ್ಯದ ತ್ರಿಯಂಬಕ ಪರ್ವತಕ್ಕೆ ಬಂದ ನು. ಕಪಟರೂಪಿನ ಹರನು ಗೌತಮನ ಇದಿರಿಗೆ ನಿಂತು, ಮುನಿನಾಥನೆ, ನೀನು ಯಾರನ್ನು ಕುರಿತು ತಪಸ್ಸನ್ನಾಚರಿಸುವೆ? ಎಂದು ಕೇಳಲು, ನಾ ನು, ಪರಶಿವನನ್ನು ಕುರಿತು ತಪಸ್ಸನ್ನು ಮಾಡುವೆನೆಂದನು. ಅದಕ್ಕೆ ಕಪ ಟವೈಷ್ಣವನು ನಕ್ಕು, ಓಹೋ! ಋಷಿಯೆ, ನಿನಗೆ ಶಿವನು ವರವನ್ನು ಕೊಡುವನೆ? ಚೆನ್ನಾಯಿತು! ನಿನಗೇಕೆ ಇಂತಹ ಅಜ್ಞಾನ? ದಿಗಂಬರ ನೂ ಬೂದಿಬಡಕನೂ ಮಸಣಗಾಹಿಯೂ ತಿರಿಕನೂ ಮೂಳೆಮಾಲೆಯವ ನೂ ಆದ ಅವನು ತನಗೇ ಇಲ್ಲದುದನ್ನು ಇತರರಿಗೆ ಹೇಗೆ ಕೊಟ್ಟಾನು? ವಿ ಷ್ಣುವಾದರೊ ಜಗದ್ರಕ್ಷಣಕರ್ತ, ಲಕ್ಷ್ಮೀಪತಿ, ಪೀತಾಂಬರಧಾರಿ, ಜ್ಞಾನ ರೂಪ, ಅಚ್ಯುತ, ಪರಮಪುರುಷ, ಸಾತ್ವಿಕ, ಕೌಸ್ತುಭಧಾರಿ, ಬ್ರಹ್ಮಾ ದಿಸುರಾಧಿಪ; ಮತ್ತೂ ಲೋಕವೆಲ್ಲವೂ ವಿಷ್ಣುಮಯವಾದುದು; ಹರನು ರಾಮಮಂತ್ರವನ್ನು ಪಾರ್ವತಿಗುಪದೇಶಿಸಲು, ಆಕೆಯು ಕಾಶಿಯಲ್ಲಿ ಸಾ ಯುವವರ ಕಿವಿಯಲ್ಲೆಲ್ಲ ಅದನ್ನುಪದೇಶಿಸಿ ಎಲ್ಲರನ್ನೂ ಮುಕ್ತರಾಗುವಂತೆ

ಮಾಡುತ್ತಿರುವಳು. ವೇದವ್ಯಾಸನು ಕಾಶಿಯಲ್ಲಿ ಕೈಯೆತ್ತಿ ಕೇಶವನಿಗಿಂ ತಲೂ ದೊಡ್ಡದೈವವಿಲ್ಲವೆಂದು ಸಾರಿ ನುಡಿದಿರುವನು. ಹರಿಯು ತನ್ನ ನಾ ಭಿಕಮಲದಿಂದ ಬ್ರಹ್ಮನನ್ನು ಹಡೆದನು. ಕ್ರೂರರಾಕ್ಷಸರನ್ನೆಲ್ಲ ಕೊಂದಿ ರುವನು. ದುಷ್ಟನಿಗ್ರಹಶಿಷ್ಟಪರಿಪಾಲನಸಮರ್ಥನು. ಇಂಥ ವಿಷ್ಣುವನ್ನು ಭಜಿಸಿದರೆ ನಿನ್ನ ಇಷ್ಟಾರ್ಥಸಿದ್ಧಿಯಾಗುವುದು. ಹರನನ್ನು ಭಜಿಸುವು ದು ಹುಚ್ಚುತನವೇ ಸರಿ. ಬಿಡು; ಎಂದು ಜರೆದನು. ಆ ಶಿವದೂಷಣೆಯ ನ್ನು ಮುನಿಯು ಕೇಳಿ, ಮನದಲ್ಲಿ ನೊಂದು. ಕೋಪವೇರಿ, "ಎಲೊ ಮೂ ಢಬುದ್ಧಿಯ ವೈಷ್ಣವನೆ! ಶಿವನ ಮಾಹಾತ್ಮ್ಯವನ್ನು ತಿಳಿಯದ ನೀನು ಅಜ್ಞನೊ? ನಾನು ಅಜ್ಞನೊ? ಕೇಳು—ಹರನು ಸಕಲದೇವಾಧಿದೇವ ನು, ಅತ್ಯತಿಪ್ರಸಿದ್ಧಶಾಂಗುಲನು, ' ಏಕಮೇವಾದ್ವಿತೀಯಂಬ್ರಹ್ಮ, ನೇಹ ನಾನಾಸ್ತಿಕಿಂಚನ ಏವರುದ್ರೋನದ್ವಿತೀಯಾಯತಸ್ಥೌ ' ಎಂಬ ಶ್ರುತಿವಚನಗಳಿಂದ ಅವನೊ ಬ್ಬನೇ ಬ್ರಹ್ಮನೆಂದು ಪ್ರತಿಪಾದಿತನಾಗಿರುವನು. ಅವನಿಗೆ ಹರಿಯು ಸನು ನೂ ಅಲ್ಲದಿರುವಾಗ್ಗೆ, ಆಧಿಕನೆಂಬ ಮಾತು ಮೊಲದ ಕೋಡಿನಂತೆಯೇ ಸ ರಿ. ಅದು ಹಾಗಿರಲಿ. ನಿನ್ನ ಮಾತಿನಂತೆ ಹರಿಯು ಜ್ಞಾನರೂಪನಾದರೆ, ಭೃಗುಮುನಿಯು ಪತ್ನಿಯನ್ನು ಅಜ್ಞಾನದಿಂದ ಅನೈತಕ್ಕೆ ಕೊಂದನು? ಅವ ನು ಅಚ್ಯುತನಾದರೆ ಹತ್ತಾವೃತ್ತಿ ಹುಟ್ಟಿ ಸತ್ತುದೇಕೆ? ಪುರುಷೋತ್ತ ಮನಾಗಿದ್ದರೆ ಕಳ್ಳತನದಿಂದ ಅನ್ಯಸ್ತ್ರೀಯನ್ನು ಒಯಸಿದುದೇಕೆ? ಜ ಗತ್ತೆಲ್ಲ ವಿಷ್ಣುಮಯವಾಗಿದ್ದರೆ ಅವನ ಹೆಂಡತಿಯನ್ನು ರಾಕ್ಷಸನು ಕದ್ದು ಹೋದಾಗ ಅವನೇನು ಮಾಡುತ್ತಿದ್ದನು? ಅವನು ರಕ್ಷಾಕರ್ತನಾಗಿದ್ದರೆ, ಅ ವನ ಮಗನನ್ನೇ ಶಿವನು ಸುಟ್ಟಾಗ ಅದೇಕೆ ಉಳುಹಿಕೊಳ್ಳಲಿಲ್ಲ? ಲಕ್ಷ್ಮಿ ಯು ಅವನಿಗೇ ಹೆಂಡತಿಯಾಗಿದ್ದರೆ, ಅವಳು ಜಗತ್ತಿನ ದೊರೆಗಳನ್ನೆಲ್ಲ ಸೇರಿರುವುದಕ್ಕೆ ಕಾರಣವೇನು? ಅವನೇ ಜಗತ್ತಿಗೆ ಕರ್ತನಾಗಿದ್ದರೆ ಆತ ನೇ " ಮಮಕರ್ತಾಮಹೇಶ್ವರಃ " ಎಂದು ಅದು ಹೇಗೆ ನುಡಿದನು? ರಾ ಮಮಂತ್ರವು ಶಿವನ ನಾಮವು, ಆ ಹೆಸರನ್ನೇ ಪ್ರೇಮಕ್ಕಾಗಿ ಜಮದಗ್ನಿ ಯೂ ದಶರಥನೂ ತಮ್ಮ ತಮ್ಮ ಮಕ್ಕಳಿಗೆ ಪರುಶುರಾಮ, ರಾಮ, ಎಂ ದು ಕರೆದುಕೊಂಡರು. ಆ ರಾಮಮಂತ್ರವನ್ನು ಕಾಶಿಯಲ್ಲಿ ಪಾರ್ವತಿಯು ಮೃತರಾಗುವವರ ಕಿವಿಯಲ್ಲಿ ಉಪದೇಶಿಸುವುದರಿಂದ ಅವರೆಲ್ಲರೂ ಶಿವ

ಲೋಕವನ್ನು ಹೊಂದುತ್ತಾರೆಯೇ ಹೊರತು ವೈಕುಂಠವನ್ನು ಹೊಂದುವುದಿಲ್ಲ. ಇದರಿಂದಲೇ ರಾಮಮಂತ್ರವು ತಾರಕಬ್ರಹ್ಮವಾಚಕವೆಂದು ಗೊತ್ತಾಗುತ್ತದೆ. ಕಾಶಿಯಲ್ಲಿ ವೇದವ್ಯಾಸನು ಕೈಯೆತ್ತಿ ಕೇಶವನೇ ದೊಡ್ಡವನೆಂದು ಸಾರಿದನೆಂಬದಾಗಿ ನೀನು ಹೇಳುತ್ತೀಯೆ, ಅದರಿಂದ ಆ ವ್ಯಾಸನ ಅವಸ್ಥೆಯೇನಾಯ್ತೆಂಬುದನ್ನು ಮಾತ್ರ ಹೇಳದೆ ನೀನು ಮುಚ್ಚ್ಯತ್ತೀಯೆ, ನುಡಿಯಬಾರದ ಮಾತನ್ನು ಆತನು ನುಡಿದುದರಿಂದಲೇ ನಂದೀಶನಿಂದ ಆತನ ಭುಜಸ್ತಂಭನವಾಯಿತು. ಹರಿಯು ರಾವಣ ಭಸ್ಮಾಸುರ ಮೊದಲಾದ ರಾಕ್ಷಸರನ್ನು ಕೊಲ್ಲುವುದಕ್ಕೆ ಪರಶಿವನು ಅವನಿಗೆ ಕೊಟ್ಟದ್ದ ವರದ ಪ್ರಭಾವವೇ ಕಾರಣವಲ್ಲದೆ, ಅಂಥ ಮಹಾದನುಜರನ್ನು ಕೊಲ್ಲುವ ಶಕ್ತಿಯು ಹರಿಬ್ರಹ್ಮರಿಗೆಲ್ಲಿ ಬಂದಿತು ? ಇದಕ್ಕೆ ಹರಿಯ ಮಗ ಮನ್ಮಥನೂ, ಬ್ರಹ್ಮನ ತಲೆಯೂ, ಸಾಕ್ಷಿಗಳು. ಉಪಮನ್ಯುವು ಶಿವಾನುಗ್ರಹದಿಂದ ಕ್ಷೀರಸಾಗರವನ್ನು ಪಾನಮಾಡುತ್ತಿರುವಾಗ, ಅದರೊಳಗಿದ್ದ ನಾರಾಯಣನು ಗಂಟಲಲ್ಲಿ ಸಿಕ್ಕಿಕೊಳ್ಳಲಾಗಿ, ಋಷಿಕುಮಾರನು ಉಗುಳಲು, ಕೆಳಗೆ ಬಿದ್ದ ಹರಿಯು ಮತ್ತೆ ಎದ್ದು ಬಂದು, ಋಷಿಯನ್ನು ಸ್ತೋತ್ರಮಾಡಿ, ಬೇಡಿ, ಆತನಿಂದ ಶಿವದೀಕ್ಷೆಯನ್ನು ಪಡೆದುಕೊಂಡನು. ವಧೀಚಿಗೂ ಕ್ಷುಪನಿಗೂ ಯುದ್ಧಸಂಭವಿಸಿದಾಗ, ತನ್ನ ಭಕ್ತನಾದ ಕ್ಷುಪನಿಗೆ ಜೆಂಬಲನಾಗಿ ಹೋದ ಗೋವಿಂದನು ಋಷಿಯಮೇಲೆ ಚಕ್ರವನ್ನು ಬಿಟ್ಟು ಹಾಳ್ಮಾಡಿಕೊಂಡು ತಲೆಯನ್ನು ಕೆದರಿ ಓಡಿದನು. ಮತ್ತೂ ಭೃಗುಮುನಿಯು ತನ್ನ ಪತ್ನಿಯನ್ನು ಕೊಂದ ಹರಿಯ ಎದೆಯಮೇಲೆ ಝಾಡಿಸಿ ಒದೆದುದರಿಂದ ಆ ಸ್ಥಲವು ಕಂದಿ ಕಲೆಯಾಗಲು, ಅದರಿಂದ ಅವನು ಶ್ರೀವತ್ಸಲಾಂಛನಸೆಸಿಸಿಕೊಳ್ಳುತ್ತಿರುವನು. ನಿನ್ನ ಮಾಧವನು ತಾರಕನೊಡನೆ ಕಾದು ಓಡಿ ಸಮುದ್ರವನ್ನು ಹೊಕ್ಕಿಕೊಂಡನು. ಜಲಂಧರನೊಡನೆ ಕಾದಲು, ಅವನು ಇವನನ್ನು ರಥಸಮೇತವಾಗಿ ತೆಗೆದು ಬುಗುರಿಯಂತೆ ಆಕಾಶಕ್ಕೆಟ್ಟನು. ಒಳಿಕ ಸೆರೆಯಲ್ಲಿಯೂ ಹಾಕಿಕೊಂಡನು. ಗಣಪತಿಯು ಹರಿಬ್ರಹ್ಮರಿಗೆಕೊಟ್ಟ ಶಾಪದಿಂದ ಒಬ್ಬರಹೊಟ್ಟೆಯನ್ನೊಬ್ಬರು ಹೊಕ್ಕು, ಬ್ರಹ್ಮನುಹರಿಯ ನಾಭಿಕಮಲದಿಂದೀಚೆಗೆ ಬಂದುದರಿಂದ ಅವನಿಗೆ ಸರಸಿಜೋದ್ಭವನೆಂತಲೂ. ಬ್ರಹ್ಮನ ಗುದಸ್ಥಾನದಿಂದ ವಿಷ್ಣುವು ಜನಿಸಿದ ಕಾರಣ, ಅವ

ನಿಗೆ ಅಧೋಕ್ಷಜನೆಂತಲೂ ಹೆಸರಾಯಿತು. ಹರಿಬ್ರಹ್ಮರು ವಾದವಾಡಿ, ಮಧ್ಯದಲ್ಲಿ ಉದ್ಭವಿಸಿದ ಲಿಂಗದ ಪಾದ ಶಿರಸ್ಸುಗಳನ್ನು ಕಾಣುವುದಕ್ಕಾಗಿ ಹಂದಿ ಹಕ್ಕಿಗಳಾಗಿ ಹೋಗಿ, ಕಾಣಲಾರದೆ ಹೋದರು. ಶಿವನ ಕೈಯಲ್ಲಿದ್ದ ಭಿಕ್ಷಾಪಾತ್ರೆಗೆ ಹರಿಯು ತನ್ನ ಪಣಿಯನ್ನು ಕೊರೆದು ರಕ್ತವನ್ನು ಸುರಿಸಿ ತೃಪ್ತಿಗೊಳಿಸಲಾರದೆ ಹೋದನು. ಹರಿಯು ಶಿವನನ್ನು ತಪಸ್ಸಿನಿಂದ ಮೆಚ್ಚಿಸಿ ಜಲಂಧರನ ವಧೆಗಾಗಿ ಶಿವನು ನಿರ್ಮಿಸಿದ್ದ ಚಕ್ರವನ್ನು ಪಡೆದುಕೊಂಡನು. ಮಹಾಪ್ರಳಯದಲ್ಲಿ ನಾರಾಯಣನು ಆಲದೆಲೆಯಮೇಲೆ ಮಲಗಿ ತೇಲುತ್ತಿರುವನು. ಶಿವನು ಆ ಮಹಾಜಲವನ್ನು ಮಲ್ಲಿಕಾಕುಸುಮದಂತೆ ಜಡೆಯಲ್ಲಿ ಧರಿಸಿಕೊಂಡನು. ಜಗತ್ತನ್ನೆಲ್ಲ ಆವರಿಸಿದ ಮಹಾವಿಷವು ವಿಷ್ಣು ಬ್ರಹ್ಮೇಂದ್ರಾದಿಗಳನ್ನೆಲ್ಲ ಸುಟ್ಟು ದಿಗಂತಕ್ಕೆ ಓಡಿಸಲು, ಅದನ್ನು ಶಂಭುವು ಲೀಲಾಮಾತ್ರದಿಂದ ನೀಲಮಣಿಯಂತೆ ಪಿಡಿದು ಕಂಠದಲ್ಲಿ ಧರಿಸಿದನು. ನಿನ್ನ ವೈಕುಂಠನು ಸಹಾಯವಾಗಿ ನಿಂತು, ಹರನಿಗೆ ಅಗ್ರಭಾಗವನ್ನು ಕೊಡಬೇಕೆಂದು ಮಾಡಿಸಿದ್ದ ದಕ್ಷಯಾಗವನ್ನು ಶಿವನು ತನ್ನ ಮಗನನ್ನು ಕಳುಹಿ ಹಾಳ್ಮಾಡಿಸಿ ಅಲ್ಲಿದ್ದವರೆಲ್ಲರಿಗೂ ಭಂಗಗೊಳಿಸಿದನು. ಜಗತ್ಕಂಟಕರಾಗಿದ್ದ ತಾರಕಾಕ್ಷ ಜಲಂಧರ ಅಂಧಕಾಸುರ ಗಜಾಸುರ ವ್ಯಾಘ್ರಾಸುರ ಮೊದಲಾದವರನ್ನೆಲ್ಲ ಶಿವನು ಸಂಹಾರಗೊಳಿಸಿ ದೇವತೆಗಳನ್ನುದ್ಧರಿಸಿರುವುದರಿಂದ ದುಷ್ಟನಿಗ್ರಹ ಶಿಷ್ಟಪರಿಪಾಲನೆಗೆ ಆತನೇ ಸಮರ್ಥನಾಗಿರುವನು. ಮತ್ತೂ ಆತನು ವಿಷ್ಣು ಬ್ರಹ್ಮೇಂದ್ರಾದಿ ಪಶುಗಳಿಗೆಲ್ಲ ಪತಿಯಾಗಿರುವನು. ಅಲ್ಲದೆ ಬ್ರಹ್ಮನು " ಸರ್ವಸ್ಯಗಾತ್ರಸ್ಯಶಿರಃಪ್ರಧಾನಂ " ಎಂಬಂತೆ ದೇಹಕ್ಕೆಲ್ಲ ಮುಖ್ಯವಾದ ತನ್ನ ಶಿರಸ್ಸನ್ನೂ, ಹರಿಯು " ಸರ್ವೇಂದ್ರಿಯಾಣಾಂನಯನಂಪ್ರಧಾನಂ " ಎಂಬಂತೆ ಇಂದ್ರಿಯಗಳಲ್ಲಿ ಮುಖ್ಯವಾದ ತನ್ನ ಕಣ್ಣನ್ನೂ ಶಿವನಿಗೆ ಸಮರ್ಪಿಸಿ, ಶಿಷ್ಯರೂ ಭಕ್ತರೂ ಆಗಿರುವರು. ಇದರಿಂದಲೇ ನಿನ್ನ ವಿಷ್ಣುವಿನ ಪೂಜಕತ್ವವೂ ಶಿವನ ಪೂಜ್ಯತ್ವವೂ ಗೊತ್ತಾಗುವುದಿಲ್ಲವೆ ? ಮತ್ತೂ ನಿನ್ನ ಹರಿಯು ಭೃಗುವಿನ ಶಾಪದಿಂದ ದಶಾವತಾರವನ್ನೆತ್ತಿದನು. ಮೊದಲನೆ ಮತ್ಸ್ಯಾವತಾರದಿಂದ ಸಮುದ್ರವನ್ನು ಹೊಕ್ಕು ಸೋಮುಕಾಸುರನನ್ನು ಕೊಂದು ಅಹಂಕರಿಸಲು, ಶಿವನು ಅವನನ್ನು ನೀಳಿ, ಬೆನ್ನಮೂಳೆಯನ್ನು ಧರಿಸಿ ಕಂಕಾಳಧರನಾದನು. ಸಮು

ದ್ರಮಥನಕಾಲದಲ್ಲಿ ಹರಿಯು ೨ನೆ ಕೂರ್ಮಾವತಾರವನ್ನು ಮಾಡಿ ಅಹಂಕರಿಸಲು, ಹರನು ಅದನ್ನು ಕೊಂದು, ಬೆನ್ನಿನ ಓಟೆಯನ್ನು ತನ್ನ ಅಸ್ಥಿಮಾಲೆಯ ಮಧ್ಯದಲ್ಲಿ ಧರಿಸಿಕೊಂಡನು. ೩ನೆ ವರಾಹಾವತಾರದಲ್ಲಿ ಭೂಮಿಯನ್ನು ಕದ್ದು ಹೋಗಿದ್ದ ಹಿರಣ್ಯಾಕ್ಷನನ್ನು ಕೊಂದು, ಭೂಮಿಯನ್ನುದ್ಧರಿಸಿ, ಮದದಿಂದ ಲೋಕಕಂಟಕನಾಗಿರಲು, ಶಿವನು ಆ ಹಂದಿಯನ್ನು ಕೊಂದು, ಕೋರೆಯನ್ನು ಕೈಯಲ್ಲಿ ಆಯುಧವಾಗಿ ಪಿಡಿದನು. ೪ನೆ ನೃಸಿಹ್ಮಾವತಾರದಿಂದ ಹಿರಣ್ಯಕಶಿಪುವನ್ನು ಕೊಂದು ರಕ್ತಪಾನ ಮಾಡಿ ಮಲೆಯುತ್ತಿರಲು, ಶರಭಾವತಾರದಿಂದ ಹರನು ಅವನನ್ನು ಕೊಲ್ಲಿಸಿ ಚರ್ಮವನ್ನು ಹೊದೆದನು. ೫ನೆ ವಾಮನಾವತಾರದಿಂದ ವಿಷ್ಣುವು ಬಲಿಚಕ್ರವರ್ತಿಯನ್ನು ಸಹ್ಮರಿಸಿ, ಲೋಕವನ್ನೆಲ್ಲ ವ್ಯಾಪಿಸಿಕೊಂಡು ಒಳೆಯಲು, ಅವನನ್ನು ಶಂಕರನು ಕೊಂದು, ಬೆನ್ನಿನ ಮೂಳೆಯನ್ನು ಕೈಯಲ್ಲಿ ಹಿಡಿದುಕೊಂಡನು. ೬ನೆ ಅವತಾರದಲ್ಲಿ ಹರಿಯು ಜಮದಗ್ನಿಗೆ ಮಗನಾಗಿ ಪರಶುರಾಮನಾಗಿ ಹುಟ್ಟಿ, ಕ್ಷತ್ರಿಯಕುಲವನ್ನು ನಿರ್ಮೂಲಮಾಡಿ, ರಘುರಾಮನೊಡನೆ ವಾದವನ್ನು ಮಾಡಿ ಸೋತು, ಭೂಮಿಯನ್ನೆಲ್ಲ ಬ್ರಾಹ್ಮಣರಿಗೆ ದಾನಮಾಡಿ, ತನ್ನ ಮಾತೃಹತ್ಯದೋಷದ ನಾಶಕ್ಕಾಗಿ ಭೂಪ್ರದಕ್ಷಿಣೆಯನ್ನು ಮಾಡಿ, ರಾಮೇಶಲಿಂಗಾರಾಧನೆಯನ್ನೆಸಗಿ ಧನ್ಯನಾದನು. ೭ನೆ ರಾಮಾವತಾರದಲ್ಲಿ ದಶರಥನಿಗೆ ಮಗನಾಗಿ ಜನಿಸಿ, ವನವಾಸಮಾಡಿ, ಹೆಂಡತಿಯನ್ನು ಕಳೆದುಕೊಂಡು, ರಾವಣವಧೆಯಿಂದ ಜನಿಸಿದ ಬ್ರಹ್ಮಹತ್ಯೆಯನ್ನು ಕಳೆದುಕೊಳ್ಳುವುದಕ್ಕಾಗಿ ಸೇತುಮಧ್ಯದಲ್ಲಿ ಲಿಂಗಪ್ರತಿಷ್ಠೆಯನ್ನು ಮಾಡಿ ಕೃತಾರ್ಥನಾದನು. ೮ನೆ ಅವತಾರದಲ್ಲಿ ಕೃಷ್ಣನೆಂಬ ಹೆಸರಿನಿಂದ ವಸುದೇವನಿಗೆ ಮಗನಾಗಿ, ಗೊಲ್ಲರಲ್ಲುಂಡು, ಹಾಲ್ಮೊಸರು ಬೆಣ್ಣೆಯನ್ನು ಕದ್ದು ತಿಂದು, ದನಗಳನ್ನು ಕಾದು, ಗೋಪಸ್ತ್ರೀಯರೊಡನೆ ಹಾದರಮಾಡಿ, ಅನೀಕರಾಕ್ಷಸರಿಗೆ ಸೋತು, ಕೆಲವರನ್ನು ಗೆದ್ದು, ಜರಾಸಂಧನಿಗೆ ಹೆದರಿಕೊಂಡು ಸಮುದ್ರದಲ್ಲಿ ಅವಿತು, ಅರ್ಜುನನ ಹತ್ತಿರ ಬಂಡಿಹೊಡೆಯುವ ಊಳಿಗದಲ್ಲಿದ್ದು ಜೀವಿಸಿ, ಒಳಿಕ ಶಿವನನ್ನು ಕುರಿತು ತಪಸ್ಸನ್ನಾಚರಿಸಿ, ಮನ್ಮಥನೆಂಬ ಮಗನನ್ನು ಪಡೆದು, ಕಡೆಗೆ ೧೬ ಸಾವಿರ ಗೊಲ್ಲರಹೆಂಡತಿಯರ ಕಣ್ಣಿರಿಗೇ ಬೇಡನಿಂದ ಮೃತನಾಗಿ ಹೋದ

ನು; ಅವನ ಹೆಣವನ್ನು ಸುಡಲಾಗಿ, ಅರೆಬೆಂದುಳಿದ ಮೋಟುಗಳನ್ನು ಜಗನ್ನಾಥದಲ್ಲಿಟ್ಟು ಈಗಳೂ ಪೂಜಿಸುತ್ತಿರುವರು. ೯—೦ನೆ ಅವತಾರಗಳಲ್ಲಿ ಬುದ್ಧ ಕಲ್ಕಿ ಯೆಂಬ ಹೆಸರನ್ನು ತಾಳಿ ಮೋಹಶಾಸ್ತ್ರವನ್ನು ಜಗತ್ತಿನಲ್ಲಿ ಹರಡುತ್ತಿರುವನು. ಇನ್ನು ಕೆಲಕಾಲದಮೇಲೆ ಸಾಯುವನು. ಹೀಗೆ ಎಷ್ಟೋ ಜನ್ಮಾಂತರಗಳನ್ನೆತ್ತಿ ಅಳಿವ ನಿಮ್ಮ ಹರಿಯನ್ನು ಪರಾತ್ಪರನೂ ನಿತ್ಯನೂ ಸರ್ವಜ್ಞನೂ ಸರ್ವಮಯನೂ ಆದ ಮಹಾದೇವನೊಡನೆ ಸರಿಯೆಂದಾದರೂ ಹೇಳುವುದಕ್ಕೆ ನಿನ್ನ ಬಾಯಿ ಹೇಗೆ ಬರುವುದು? ಹರಿ ಬ್ರಹ್ಮೇಂದ್ರಾದಿಗಳೂ ಸಿದ್ಧ ವಿದ್ಯಾಧರ ಕಿನ್ನರ ಕಿಂಪುರುಷಾದಿಗಳೂ ಇತರ ಮನುಮುನಿಗಳು ಸಹ ಶಿವನಿಂದಲೇ ಮುಕ್ತರಾಗುವುದಕ್ಕಾಗಿ ಅವರವರ ಹೆಸರಿನಮೇಲೆ ಲಿಂಗಪ್ರತಿಷ್ಠೆಗಳನ್ನು ಮಾಡಿ ಆರಾಧಿಸಿರುವುದು, ಕಾಶಿ ಮೊದಲಾದ ದಿವ್ಯಕ್ಷೇತ್ರಗಳಲ್ಲೆಲ್ಲ ಈಗಳೂ ಪ್ರತ್ಯಕ್ಷಪ್ರಮಾಣವಾಗಿರುವುದು" ಎಂದು ಮೊದಲಾಗಿ ಗೌತಮನು ನುಡಿದನು. ಆಗ ವೈಷ್ಣವನು—ಈ ಪುರಾಣದ ಕಥೆಗಳೆಲ್ಲ ಬೇಕಿಲ್ಲ; ಹರಿಯೇ ದೊಡ್ಡವನೆಂಬ ವಿಷಯವನ್ನು ಸಾಧಿಸುವುದಕ್ಕೆ ಪ್ರತ್ಯಕ್ಷಪ್ರಮಾಣವಾಗಿ ನಾನು ಹಣೆಯಲ್ಲಿ ಕಣ್ಣನ್ನು ತೋರಿಸುತ್ತೇನೆ ನೋಡು, ಎಂದು ತೋರಿಸಲು, ಋಷಿಯು—ಇದಾವ ಮಹಾಘನತೆಯು? ಶಿವನೇ ಸರ್ವೋತ್ತಮನೆಂಬುದಕ್ಕೆ ಪ್ರತ್ಯಕ್ಷಪ್ರಮಾಣವಾಗಿ ಅಂಥ ಮೂರನೆ ಕಣ್ಣನ್ನು ನನ್ನ ಪಾದದಲ್ಲಿ ತೋರಿಸುತ್ತೇನೆ ನೋಡು, ಎಂದು ಕಾಲಿನಲ್ಲಿ ಕಣ್ಣನ್ನು ತೋರಿಸಲು, ಶಿವನು ಅವನ ದೃಢಭಕ್ತಿಯನ್ನು ಹರಿಬ್ರಹ್ಮರಿಗೆ ತೋರಿಸಿ, ತಾನು ಮೆಚ್ಚಿ, ತನ್ನ ಕಪಟನೇಷನನ್ನುಳಿದು, ನಿಜರೂಪನ್ನು ಧರಿಸಿದನು. ಆಗ ಋಷಿಯು ತನ್ನ ಉಪಾಸ್ಯದೇವತೆಯನ್ನು ಕಂಡು, ಆನಂದಗೊಂಡು, ದೀರ್ಘದಂಡವಾಗಿ ಭಕ್ತಿಯಿಂದ ನಮಸ್ಕರಿಸಿ, ತಾನು ತಿಳಿಯದೆ ನಾಗ್ಯಾದವಮಾಡಿದ ಅಪರಾಧವನ್ನು ಕ್ಷಮಿಸೆಂದು ಬೇಡಿದನು. ನಿನ್ನ ನಿಜಭಕ್ತಿಯ ಪರೀಕ್ಷಾರ್ಥವಾಗಿ ಇದು ನಾನು ಮಾಡಿದ ವಿನೋದವಾದುದರಿಂದ, ನಿನ್ನ ಮಾತು ನನಗೆ ಎಷ್ಟೋ ಮೆಚ್ಚಿಗೆಯನ್ನುಂಟುಮಾಡಿತೆಂದು ಶಿವನು ಹೇಳಿ, ತಲೆದಡವಿ, ಎತ್ತಿ, ನಿನ್ನಿಷ್ಟಾರ್ಥವೇನೆಂದು ಕೇಳಲು, " ಶಿವನೇ! ಮಳೆಯಾಗದಿದ್ದರೂ ಬಿತ್ತಿದ ಭೂಮಿಯಲ್ಲಿ ಬೆಳಸು ಚೆನ್ನಾಗಿ ಆಗುವಂತೆ ವರವನ್ನು ಕೊಡಬೇಕು "

ಎಂದು ಋಷಿಯು ಪ್ರಾರ್ಥಿಸಿದನು. ಹಾಗೆಯೇ ಆಗಲಿ ಯೆಂದು ವರವಿತ್ತು ಶಿವನು ಅಂತರ್ಧಾನಗೊಂಡನು. ಕಾಲಕ್ರಮದಿಂದ ಶನಿಯು ರೋಹಿಣೀಶಕಟವನ್ನು ಭೇದಿಸಲಾಗಿ ೧೨ ವರ್ಷದ ಬರವು ಬಿದ್ದಿತು. ಮಳೆಯು ಸುದ್ದಿಯೇ ಅಡಗಿತು. ಬೆಳಗಿನ ಹೊತ್ತು ಮಂಜು ಸುರಿವುದು, ಮಧ್ಯಾಹ್ನ ವೋಡ ಮುಸುಕುವುದು, ರಾತ್ರಿಯಾದಕೂಡಲೇ ಆಕಾಶವು ನಿರ್ಮಲವಾಗುವುದು, ಈರೀತಿಯಾಗುತ್ತ ಬಂದುದರಿಂದ ಗಿಡು ಮರ ಬಳ್ಳಿಗಳೆಲ್ಲ ಎಲೆಯುದುರಿ ಬಣಗಿಹೋದುವು. ಕೆರೆ ಕಟ್ಟೆ ಬಾವಿ ಹೊಳೆಗಳೆಲ್ಲ ಬತ್ತಿದುವು. ಎಲ್ಲೆಲ್ಲೂ ಪ್ರಾಣಿಗಳು ಆಹಾರವಿಲ್ಲದೆ ಬಡವಾಗಿ ಸಾಯುತ್ತಿದ್ದುವು. ಆಗ ದಾರುಕಾವನದಲ್ಲಿದ್ದ ಎಂಭತ್ತೆಂಟುಸಾವಿರಮಂದಿ ಋಷಿಗಳೆಲ್ಲ, ಗೌತಮನು ಶಿವವರದಿಂದ ಧಾನ್ಯಸಮೃದ್ಧಿಯನ್ನು ಪಡೆದಿರುವ ವಾರ್ತೆಯನ್ನು ಕೇಳಿ, ಈತನಾಶ್ರಮಕ್ಕೆ ಬಂದರು. ಅವರೆಲ್ಲರನ್ನೂ ಗೌತಮನು ಅನ್ನ ಪಾನಾದಿಗಳಿಂದ ಸತ್ಕರಿಸಿ ಇಟ್ಟುಕೊಂಡನು. ೧೨ ವರ್ಷಗಳು ಕಳೆದನಂತರ ಲೋಕದಮೇಲೆ ಸುಭಿಕ್ಷವುಂಟಾಯಿತು. ಆಗ ತಮ್ಮ ತಮ್ಮ ಸ್ಥಲಕ್ಕೆ ಹೊರಟುಹೋಗಬೇಕೆಂದು ಋಷಿಗಳು ಗುಜುಗುಂಪಲುಗೊಂಡರು. ಶಾಂಡಿಲ್ಯಮುನಿಯು ಅವರ ಮಾತನ್ನು ಕೇಳಿ— "ಇದುವರೆಗೂ ನಮ್ಮನ್ನು ತಾಯ್ತಂದೆಗಿಂತಲೂ ಹೆಚ್ಚಾಗಿ ಸಾಕಿದ ಗೌತಮ ಮಹರ್ಷಿಯೊಡನೆ ಈ ಸಂಗತಿಯನ್ನು ಹೇಳಿ ಅವನಪ್ಪಣೆಯನ್ನು ಪಡೆಯದೆ ಹೋಗುವುದು ನಮಗೆ ಧರ್ಮವಲ್ಲ; ಅನ್ನದಾನದ ಮುಂದೆ ಯಾವ ದಾನವೂ ಅಲ್ಲ; ಅಂಥ ವೀರಕ್ಷೇತ್ರದಲ್ಲಿ ಇಷ್ಟೊಂದು ಜನಗಳನ್ನು ಸಾಕುವುದೆಂದರೇನು ಸಾಮಾನ್ಯವೆ? ಈ ಸಂದರ್ಭದಲ್ಲಿ ಅನ್ನದಾನವಿಷಯಕವಾದ ಒಂದು ಇತಿಹಾಸವನ್ನು ಹೇಳುತ್ತೇನೆ ಕೇಳಿರಿ— ಒಂದಾನೊಂದು ಕಾಲದಲ್ಲಿ ಗುಣನಿಧಿಯೆಂಬ ರಾಜನೊಬ್ಬನು ಅರಣ್ಯದಲ್ಲಿ ಬೇಂಟೆಯಾಡುತ್ತಿರಲು, ಒಂದು ಸಿಳ್ಳೆವು ಹೊದರಿನಿಂದ ಈಚೆಗೆ ಬಂದಿತು. ಅವನ್ನು ದೊರೆಯು ಬೆನ್ನಟ್ಟಿದನು; ಅಷ್ಟರಲ್ಲಿ ಪೂರ್ವಶಾಪಬಲದಿಂದ ಸಿಳ್ಳೆವು ಬಯಲಾಯಿತು. ಈ ಆಶ್ಚರ್ಯವನ್ನು ಕಂಡು ದೊರೆಯು ಕುದುರೆಯಿಂದಿಳಿದು ನೋಡುವಷ್ಟರಲ್ಲಿ ಆ ಕುದುರೆಯೂ ಅದೃಶ್ಯವಾಯಿತು. ಇದರಿಂದ ಮತ್ತೂ ವಿಸ್ಮಿತನಾದನು. ನಡೆಯುಹೋಗುವುದಕ್ಕೆ ಸಾಗದೆ, ಆಹಾರವಿಲ್ಲದೆ ವನಾಂತರದಲ್ಲಿ ಬಳಲು

ತ್ತಿದ್ದ ಈ ದೊರೆಯನ್ನು ಒಬ್ಬ ಬೇಡನು ಕಂಡು, ಮರುಗಿ ಕರೆದುಕೊಂ ಡುಹೋಗಿ, ಊಣಬಡಿಸೆಂದು ಹೆಂಡತಿಗೆ ಹೇಳಲು, ಮುಂಜೆ ಅವನು ತಂದುಕೊಟ್ಟಿದ್ದ ಬಿದಿರಕ್ಕಿಯನ್ನು ಆಕೆಯು ಬೋನವಮಾಡಿ, ಜೇನನ್ನೂ ಅದನ್ನೂ ರಾಜನಿಗೆ ಬಡಿಸಿ ತೃಪ್ತಿಪಡಿಸಲು, ಸತಿಪತಿಗಳು ಅವನನ್ನು ಮಂ ಚದಮೇಲೆ ಮಲಗಿಸಿ, ತಾವು ಉಪವಾಸವಾಗಿ ಮಂಚದ ಕೆಳಗೆ ಮಲಗಿ ದರು. ರಾತ್ರಿ ಬಂದು ಹುಲಿಯು ಬಂದು ಆ ಗಂಡಹೆಂಡಿರನ್ನು ಕೊಂದು ತಿಂದುಹೋಯಿತು. ಬೆಳಗಾದಮೇಲೆ ದೊರೆಯು ಎದ್ದು ಮಂಚವನ್ನಿಳಿದು, ಸತ್ತು ತುಂಡಾಗಿ ಬಿದ್ದಿರುವ ಗಂಡಹೆಂಡಿರನ್ನುನೋಡಿ, ಅತ್ಯಂತವಾಗಿಶೋ ಕಿಸಿ, ಆ ಶರೀರದ ತುಂಡುಗಳನ್ನೆಲ್ಲ ಒಟ್ಟಿ ಅಗ್ನಿಯಿಂದ ಸಂಸ್ಕರಿಸಿ ಹೋ ದನು. ಅಷ್ಟರಲ್ಲಿ ಅವನ ಸೇನೆಯೆಲ್ಲ ತಡಕಿಕೊಂಡು ಬರಲು, ರಾಜನು ಅವ ರೊಡನೆ ಕೂಡಿ ಪಟ್ಟಣಕ್ಕೆ ಹೋಗಿ ಸುಖವಾಗಿರುತ್ತ, ಒಂದುದಿನ ತನ್ನ ಪು ರೋಹಿತನನ್ನು ಕರೆದು, ದಾನಗಳೊಳಗೆಲ್ಲ ಉತ್ತಮವಾದುದು ಯಾವುದು? ಎಂದು ಕೇಳಲು, ಅನ್ನದಾನವೇ ಮುಖ್ಯವೆಂದು ಪುರೋಹಿತನು ಹೇಳಿ, ಅದಕ್ಕೊಂದು ಪೂರ್ವಚರಿತ್ರವನ್ನು ಹೇಳಿದನು, ಹೇಗೆಂದರೆ— "ಗಂಗಾ ವತಿಯೆಂಬ ಪಟ್ಟಣದಲ್ಲಿ ಅನಂತಭಟ್ಟನೆಂಬ ಒಬ್ಬ ಬ್ರಾಹ್ಮಣನಿದ್ದನು. ಅವನು ಪ್ರತಿದಿನವೂ ಊಟಮಾಡುವಾಗ ಹೊರಗೆ ಬಂದು, ಯಾರಾದರೂ ಅನ್ನಾರ್ಥಿಗಳಾದ ಬ್ರಾಹ್ಮಣರಿದ್ದಾರೆಯೇ ಎಂದು ನೋಡಿ, ಇದ್ದರೆ ಅವ ರನ್ನು ಕರೆದು ಪಚ್ಚಿಯಲ್ಲಿ ಕುಳ್ಳಿರಿಸಿಕೊಂಡು ಭೋಜನ ಮಾಡುತ್ತಿದ್ದನು. ಒಂದುದಿನ ಪದ್ಧತಿಯಂತೆ ಹೊರಗೆ ಬಂದು ನೋಡುವಲ್ಲಿ, ಮಳೆಯಿಂದ ನೆನದು ಕಟಕಟನೆ ನಡುಗುತ್ತ ತನ್ನ ಜಗತಿಯಮೇಲೆ ನಿಂತಿರುವ ಒಬ್ಬನ ನ್ನು ಕಂಡು, ನೀನಾರೆಂದು ಕೇಳಿದನು. ಉತ್ತರವು ಬರದಿರಲು, ಮ ತ್ತೊಂದುಮೇಳೆ ಕೇಳಿದನು. ಅದಕ್ಕಾತ್ಮನುಷ್ಯನು— ತಾನು ಚಂಡಾಲ ನೆಂತಲೂ, ಕಟ್ಟಿಗೆಯನ್ನು ಮಾರುವುದಕ್ಕಾಗಿ ಬಂದು, ಅದು ಮಾರದಿರಲು ಮಳೆಯಿಂದ ನೆನದು ಇಲ್ಲಿ ಹೊರೆಯನ್ನು ಒರಗಿಸಿ ಅನ್ನವಿಲ್ಲದೆ ಸಂಕಟ ಗೊಂಡು ನಿಂತಿರುವೆನೆಂತಲೂ, ತನ್ನ ಮನೆಯು ದೂರದಲ್ಲಿರುವುದರಿಂದ ಹೋಗಲಾರೆನೆಂತಲೂ, ಸ್ವಲ್ಪ ಚೇತರಿಸಿಕೊಂಡು ಹೋಗುವವರೆಗೂ ಅ ಟ್ಟಬೇಡಿರೆಂತಲೂ ವಿನಯದಿಂದ ಬೇಡಿಕೊಂಡನು. ಆಗ ಬ್ರಾಹ್ಮಣನು—

ಅಯ್ಯಾ! ನೀನು ಚಂಡಾಲನಾದರೇನಾಯ್ತು? ಹೆದರಬೇಡ; ನಾವು ನಿನ್ನನ್ನು ದಂಡಿಸುವುದಿಲ್ಲ, ಈ ಕಟ್ಟಗೆಯ ಕ್ರಯವೇನು? ಹೇಳು, ಎಂದು ಕೇಳಿ, ಅವನು ಕೇಳಿದಂತೆ ಹಾಗದಕಾಸನ್ನು ಕೊಟ್ಟು ತೆಗೆದುಕೊಂಡು, ಬೆಂಕಿಯನ್ನು ತರಿಸಿಕೊಟ್ಟು, ಅದರಲ್ಲಿ ಕಾಸಿಕೊಳ್ಳೆಂದು ಹೇಳಲು, ಹೊಲೆಯನು ಪರಮಾಶ್ಚರ್ಯಪಟ್ಟು ಬೆಂಕಿಯಿಂದ ಕಾಸಿ ಸೇಕಮಾಡಿಕೊಂಡನು. ಆಗ ಅವನ ಹೊಟ್ಟೆಯ ಹಸಿವು ಹೆಚ್ಚಾಯಿತು. ಅದರಿಂದ ನರಲುತ್ತ ಅನ್ನವನ್ನು ಬೇಡಿದನು. ಬ್ರಾಹ್ಮಣನು ಮರುಗಿ, ಒಳಕ್ಕೆಹೋಗಿ, ಅನ್ನ ತುಪ್ಪ ತೊವೆ ಕಾಯಿಪಲ್ಯ ಉಪ್ಪಿನಕಾಯಿಗಳನ್ನೆಲ್ಲ ಬಂದು ಹೊಸಮಕ್ಕರಿಯಲ್ಲಿ ಬಡಿಸಿ ತಂದು ಕೊಡಿಸಿದನು. ಅದನ್ನು ಚಂಡಾಲನು ಉಂಡು ತೃಪ್ತಿಪಟ್ಟು, ಉಳಿದನ್ನವನ್ನೂ ಕಟ್ಟಗೆಯ ಮೂರಿದ ಕ್ರಯವನ್ನೂ ಹೆಂಡತಿಗೆ ತಂದುಕೊಟ್ಟು, ಅನ್ನವನ್ನಿಕ್ಕಿದ ಬ್ರಾಹ್ಮಣನನ್ನು ಕುರಿತು ಅವಳೊಡನೆ ಕೊಂಡಾಡುತ್ತಿದ್ದನು. ಅತ್ತ ಗಂಗಾವತೀಪಟ್ಟಣಕ್ಕೆ ಬಂದುಯೋಜನದಲ್ಲಿ ಜಯಂತಿಪುರವೆಂಬ ಊರಿದ್ದಿತು. ಅದರಲ್ಲಿರುವ ಸರ್ವಜ್ಞನೆಂಬ ಬ್ರಾಹ್ಮಣನ ಮಗನನ್ನು ಬಂದು ಬ್ರಹ್ಮರಾಕ್ಷಸನು ಹಿಡಿದುಕೊಂಡಿದ್ದಿತು. ಯಾವ ಯಾವ ಮಂತ್ರತಂತ್ರೌಷಧಗಳಿಂದಲೂ ಬಿಡದೆ ಇದ್ದಿತು. ಈ ವರ್ತಮಾನವನ್ನು ಗಂಗಾವತೀಪಟ್ಟಣದ ಅನಂತಭಟ್ಟನು ಕೇಳಿ, ಅಲ್ಲಿಗೆ ಬರಲು, ಹುಡುಗನ ಮೈಮೇಲಿದ್ದ ಬ್ರಹ್ಮರಾಕ್ಷಸನು ಭಯಭಕ್ತಿಯಿಂದ ಈತನಿಗೆ ಕೈಮುಗಿದಿತು. ನೀನಾರು? ಅದೇಕೆ ಕೈಮುಗಿದೆ? ಎಂದು ಭಟ್ಟನು ಕೇಳಲು, " ಬ್ರಾಹ್ಮಣೋತ್ತಮನೆ! ನಾನು ಹಿಡಿದುಕೊಂಡಿರುವ ಈಹುಡುಗನೂ ನಾನೂ ಪೂರ್ವಜನ್ಮದಲ್ಲಿ ಜತೆಯಾಗಿಓದುತ್ತಿದ್ದೆವು; ಇವನಿಗಿಂತಲೂ ನನ್ನಲ್ಲಿ ವಿದ್ಯೆಯು ಹೆಚ್ಚಾಗಲು, ಇವನು ಅವನ್ನು ನೋಡಿ ಸೈರಿಸದೆ, ನನ್ನ ತಲೆಯಮೇಲೆ ಕಲ್ಲನ್ನೆತ್ತಿಹಾಕಿ ಕೊಂದನು; ಅದುಕಾರಣ ಈದುರಾತ್ಮನನ್ನು ನಾನು ಹಿಡಿದು ಕೊಲ್ಲಬೇಕೆಂದಿರುವೆನು; ಆದರೆ ನೀನು ಹೊಲೆಯನಿಗೆ ಅನ್ನದಾನವನ್ನು ಮಾಡಿರುವ ಪುಣ್ಯಫಲವನ್ನು ನನಗೆ ಕೊಟ್ಟುಬಿಟ್ಟರೆ ಈತನನ್ನು ಬಿಟ್ಟು ಹೋಗುವೆನು " ಎಂದು ಬ್ರಹ್ಮರಾಕ್ಷಸನು ನುಡಿದನು. ತಂದೆಯೂವ ಸರ್ವಜ್ಞನು ಅದನ್ನು ಕೇಳಿ, ಹೆಂಡತಿಯುಸಮೇತನಾಗಿ ಅನಂತಭಟ್ಟನ ಪಾದಕ್ಕೆ ಬಿದ್ದು, ಬ್ರಾಹ್ಮಣೋತ್ತಮನೆ!

ತಮನು ಆ ಋಷಿಗಳಮೇಲೆ ಕೋಪಗೊಂಡು " ಎಲೈ ಮಾಯಾವಿಗಳಿರಾ ! ಯಾವಕಾರಣದಿಂದ ನೀವು ಮೋಸಗೊಳಿಸಿ ಕಪಟದಿಂದ ಹೋದಿರೋ ಆ ಕಾರಣದಿಂದ ನೀವು ಭೂಲೋಕದಲ್ಲಿ ವೇದಬಾಹ್ಯರಾಗಿ ಜನಿಸಿ, ಮೋಹಶಾಸ್ತ್ರಗಳನ್ನು ಕಲಿತು, ಶಿವಭಕ್ತಿ ಶಿವಚಿಹ್ನೆಗಳಲ್ಲಿ ದ್ವೇಷಿಗಳಾಗಿ, ಶಿವದ್ರೋಹಿಗಳಾಗಿ, ಕಪಟಮಂತ್ರತಂತ್ರನಿಪುಣರಾಗಿ, ಜಗದ್ವಂಚಕರಾಗಿ, ಪಾಷಂಡಿಗಳಾಗಿ, ಅನೃತವಂಚನೆಗಳಿಂದ ಹೊಟ್ಟೆ ಹೊರೆಯುವ ಮಹಾಪಾಪಿಗಳಾಗಿ, ಕೊನೆಗೆ ನರಕವನ್ನು ಹೊಂದಿರಿ" ಎಂದು ಶಾಪಕೊಟ್ಟನು. ಅತ್ತ ಗಂಗೆಯನ್ನು ಹರಿಯಿಸಿಕೊಂಡುಬಂದು, ಹಸುವು ಸತ್ತಿದ್ದ ಸ್ಥಳದ ಮೇಲೆ ಸಾಗಿಸಿದನು. ಗೌತಮನು ತಂದುದರಿಂದ ಆ ನದಿಗೆ ಗೌತಮಿಯೆಂದು ಹೆಸರಾಯಿತು. ಗೋವನ್ನು ಸೊಂಕಿದುದರಿಂದ ಗೋದಾವರಿಯೆನಿಸಿತು. ಒಳಕ ಶಿವನು ತನ್ನ ಭಕ್ತನಾದ ಗೌತಮನು ದಾರುಕಾವನದ ಋಷಿಗಳಿಗೆ ಕೊಟ್ಟ ಶಾಪವನ್ನು ತಪ್ಪದೆ ನಡೆಯುವಂತೆ ಮಾಡಬೇಕೆಂದು ಯೋಚಿಸಿ, ವಿಷ್ಣುವನ್ನು ಕರೆದು, ನೀನು ಭೂಲೋಕದಲ್ಲಿ ಮೋಹಶಾಸ್ತ್ರವನ್ನು ಬಿತ್ತರಿಸಲು ಪೋಗು, ಎಂದು ಆಜ್ಞಾಪಿಸಲು, ಅದೇಮೇರೆಗೆ ನಾರಾಯಣನು ಪಾಂಚರಾತ್ರವೈಖಾನಸ ಕಾಪಾಲ ಲಾಕುಳ ವಾಮ ಭೈರವ ಮೊದಲಾದ ಅನೇಕ ಮೋಹಶಾಸ್ತ್ರಗಳನ್ನು ರಚಿಸಿ, ಜನಗಳಿಗೆ ಬೋಧಿಸಿದನು. ದಾರುಕಾವನದ ಋಷಿಗಳೆಲ್ಲ ಭೂಮಿಯಲ್ಲಿ ಹುಟ್ಟಿ, ಅವರೆಲ್ಲರ ವಂಶದವರೂ ಆ ಮೋಹಶಾಸ್ತ್ರಗಳಂತೆ ಆಚರಿಸಿ ನರಕಗಾಮಿಗಳಾದರು. ಆದರೆ, ಅತ್ರಿ ಕಶ್ಯಪ ಆಂಗಿರಸ ಕೌಶಿಕ ಭರದ್ವಾಜಾದಿ ಕೆಲವು ಮುನಿಗಳು ಮಾತ್ರ ಹರಿಯ ಮೋಹಶಾಸ್ತ್ರದ ಸ್ವರೂಪವನ್ನು ತಿಳಿದು, ಅದಕ್ಕೆ ಒಲಿಯವೆ, ಶಿವನನ್ನು ಕುರಿತು ತಪಸ್ಸನ್ನಾಚರಿಸಿದರು. ಅದಕ್ಕೆ ಪ್ರತ್ಯಕ್ಷನಾಗಿ ನಿಮ್ಮಿಷ್ಟವೇನೆಂದು ಸ್ವಾಮಿಯು ಕೇಳಲು,—ದೇವೋತ್ತಮನೆ ! ನಮ್ಮ ಒಡನಾಡಿಗಳೆಲ್ಲ ಮೋಹಶಾಸ್ತ್ರಾಧ್ಯಯನದಿಂದ ಭಕ್ತಿದೂರರಾಗಿ ಗತಿಬಾಹಿರರಾಗಿ ಕೆಟ್ಟುಹೋಗುತ್ತಿರುವರು ; ಸಚ್ಛಾಸ್ತ್ರಬೋಧೆಯಿಂದ ಅವರನ್ನುದ್ಧರಿಸಬೇಕು ಎಂದು ಬೇಡಿದರು. ಅದಕ್ಕೆ ಶಿವನು— ನನ್ನ ಅಪರಾವತಾರನಾದ ವೃಷಭೇಶನನ್ನು ಶ್ರೀಶೈಲಕ್ಕೆ ಕಳುಹಿಕೊಡುತ್ತೇನೆ, ಆತನು ಶೈವಾಗಮರಹಸ್ಯವನ್ನು ಬೋಧಿಸುತ್ತಾನೆ, ಹೋಗಿರಿ, ಎಂದು ಹೇಳಿ,

ಕಳುಹಿಕೊಟ್ಟನು. ಮತ್ತೂ ತಾನೂ ಬಂದು ತಲೆ ಎರಡು ಭುಜಗಳು ಮೂರು ಕಣ್ಣುಗಳನ್ನು ಧರಿಸಿ, ಶುದ್ಧಸ್ಫಟಿಕವರ್ಣದಿಂದ ಸುಖಾಸನಮೂರ್ತಿಯಾಗಿ ಕುಳಿತು, ವೃಷಾಧಿಪತಿಗೆ ಪಾಶುಪತತತ್ತ್ವೋಪದೇಶವನ್ನು ಮಾಡಿ, ಇದರ ರಹಸ್ಯಾರ್ಥವನ್ನು ನೀನು ಜಗತ್ತಿಗೆ ಬೋಧಿಸು, ಎಂದು ಹೇಳಿ ಕಳುಹಿಕೊಟ್ಟನು.ಆತನು ಶಿವನಪ್ರೇರಣೆಯಮೇರೆಗೆ ಮೇದಿನಿಯಲ್ಲಿ ಅವತರಿಸಿ, ಅಜ್ಞಾನಿಗಳಾದ ಜನಗಳಿಗೆಲ್ಲ ಶೈವೋಪದೇಶವನ್ನು ಮಾಡಿ, ಶಿವಭಕ್ತಿಯನ್ನು ವೃದ್ಧಿಪಡಿಸಿ, ಕೈಲಾಸವನ್ನು ಸೇರಿದನು ; ಎಂದು ಚೆನ್ನಬಸವೇಶನು ಸಿದ್ಧರಾಮೇಶನಿಗೆ ನಿರವಿಸಿ,

ಚಂಡವರಪ್ರದಾನ.

ಬಳಿಕ ಶಿವನ ಚಂಡವರಪ್ರದಾನಲೀಲೆಯನ್ನು ವಿವರಿಸತೊಡಗಿದನೆಂತೆಂದರೆ— ಶ್ರೀಶೈಲದ ನೆರೆಯಪಟ್ಟಣವೊಂದರಲ್ಲಿದ್ದ ಬಬ್ಬಾನೊಬ್ಬ ಶಿವದ್ವಿಜನಿಗೆ ಚಂಡನೆಂಬ ಪುತ್ರನಿದ್ದನು. ಆತನು ಪ್ರತಿದಿನವೂ ತನ್ನ ಮನೆಯ ದನಗಳನ್ನು ಕಾಡಿಗೆ ಅಟ್ಟಿಕೊಂಡುಹೋಗಿ ಮೇಯಿಸಿ ಬರುತ್ತಿದ್ದನು. ಹೀಗಿರುವಲ್ಲಿ ಜನಗಳು ದೇವಾಲಯದಲ್ಲಿ ಶಿವಲಿಂಗಕ್ಕೆ ಅಭಿಷೇಕವನ್ನು ಮಾಡಿ ಪೂಜಿಸುವುದನ್ನು ಇವನು ಕಂಡು, ತಾನೂ ಹಾಗೆಯೇ ಪೂಜಿಸಬೇಕೆಂದು ಯೋಚಿಸಿ, ಹೊಳೆಯ ದಡದಲ್ಲಿನ ಮಳಲನ್ನು ಲಿಂಗದಂತೆ ಗುಡ್ಡೆಮಾಡಿ, ತನ್ನ ಹಸುಗಳ ಹಾಲನ್ನೆಲ್ಲ ಕರೆದು ಆ ಲಿಂಗಕ್ಕೆ ಅಭಿಷೇಕಿಸಿ, ಅಡವಿಯ ಹೂವು ಪತ್ರೆಗಳನ್ನು ಎತ್ತಿ ತಂದು ಲಿಂಗಕ್ಕೆ ಧರಿಸಿ, ನಮಸ್ಕರಿಸಿ, ಸುತ್ತಲೂ ಆನಂದದಿಂದ ಕುಣಿದಾಡಿ, ಬಳಿಕ ಮನೆಗೆ ಹೋಗುತ್ತಿದ್ದನು. ನಿತ್ಯವೂ ಹೀಗೆ ಮಾಡುತ್ತಿರಲು, ಮನೆಗೆ ಬಂದ ಹಸುಗಳನ್ನು ಕರೆದಾಗ ಕೆಚ್ಚಲಲ್ಲಿ ಹಾಲೇ ಯಿಲ್ಲದಿರುವುದನ್ನು ತಾಯ್ತಂದೆಗಳು ನೋಡಿ, ಇದಕ್ಕೆ ಕಾರಣವೇನೆಂದು ಚಿಂತೆಪಡುತ್ತಿದ್ದರು. ಒಂದುದಿನ ಇದೇನು ಸಂಗತಿಯೋ ನೋಡಿ ತಿಳಿಯಬೇಕೆಂದು, ತಂದೆಯು ಗುಟ್ಟಾಗಿ ಮಗನ ಹಿಂದೆಯೇ ಕಾಡಿಗೆ ಹೋದನು. ಎಂದಿನಂತೆ ಮಗನು ಮಳಲಲಿಂಗದ ಆರಾಧನೆಯನ್ನು ಮಾಡುತ್ತಿದ್ದುದನ್ನು ನೋಡಿ, ಪ್ರತಿದಿನವೂ ಹಾಲನ್ನು ಹೀಗೆಯೇ ಹಾಳ್ಮಾಡುತ್ತಿದ್ದನೆಂದು ಯೋಚಿಸಿ, ಸಿಟ್ಟು

ಗೊಂಡು, ಬಂದು, ಅವನು ಪೂಜಿಸುತ್ತಿದ್ದ ಲಿಂಗವನ್ನು ಝಾಡಿಸಿ ಕಾಲಿನಿಂದೊದೆದನು. ಮಗನಾದರೊ ಬಲುಸಿಟ್ಟುಗೊಂಡು, ಪರವಶನಾಗಿ " ಛೀ ಶಿವದ್ರೋಹಿ! ಸಾಯಿ! ಸಾಯಿ" ಎಂದು ಹೇಳುತ್ತ, ಕೈಯಲ್ಲಿದ್ದ ಕೊಡಲಿಯಿಂದ ಒಂದೇಪೆಟ್ಟಿಗೆ ತಂದೆಯ ತಲೆಯನ್ನು ಕಡಿದುರುಳಿಸಿದನು. ಆಗ ಪುಗನ ನಿಜಭಕ್ತಿಗೆ ಶಂಕರನು ಮೆಚ್ಚಿ, ಪಾರ್ವತೀಸಮೇತನಾಗಿ ಆ ಲಿಂಗದಿಂದಲೇ ಉದ್ಭವಿಸಿ ನಿಂತನು. ಸಕಲ ಪ್ರಮಥರೂ ಜತೆಯಲ್ಲೇ ನಿಂತಿದ್ದರು. ಅಂತರಿಕ್ಷದಿಂದ ಪೂಮಳೆಯು ಕರೆದು ದೇವದುಂದುಭಿಯು ಮೊಳಗಿತು. ಆ ಸಮೂಹವನ್ನು ಬಾಲಕನು ನೋಡಿ, ಸಂತೋಷದಿಂದ ಕಣ್ಣೀರ್ತುಂಬಿ, ಅಡ್ಡಬಿದ್ದು ಕೈಕಟ್ಟಿ ನಿಂತನು. ಶಿವನು ತನ್ನ ಅಮೃತಹಸ್ತವನ್ನು ಚಂಡನ ತಲೆಯಮೇಲಿಟ್ಟು, ತನ್ನ ತಾಂಬೂಲಪ್ರಸಾದವನ್ನು ತೆಗೆದು ಅವನಿಗೆ ಕೊಟ್ಟನು. ಅದನ್ನು ಸೇವಿಸಿದ ಕಾರಣದಿಂದ ಚಂಡನು ಮಹಾತೇಜೋಮೂರ್ತಿಯಾಗಿ ನಿಂತನು. ಹರಿಬ್ರಹ್ಮಾದಿಗಳೆಲ್ಲರೂ ಆತನ ಸುಕೃತವಿಶೇಷವನ್ನು ಕುರಿತು ಕೊಂಡಾಡಿದರು. ಆ ಶಿವಪ್ರಸಾದಶಕ್ತಿಯಿಂದ ಚಂಡೇಶನ ರೋಮಕೂಪಗಳಲ್ಲಿ ಕೆಲವು ಗಣಾಧೀಶರು ಉದಿಸಿದರು. ಅವರು ಗದ್ಯಪದ್ಯಾತ್ಮಕಸ್ತೋತ್ರಗಳಿಂದ ಶಿವನನ್ನು ಕೊಂಡಾಡಿದರು. ಅದಕ್ಕೆ ಮೆಚ್ಚಿದ ಪರಮೇಶನು ಅವರನ್ನು ತನ್ನ ಸ್ತುತಿಪಾಠಕರನ್ನಾಗಿ ಮಾಡಿಟ್ಟುಕೊಂಡನು. ಚಂಡೇಶನನ್ನು ಕುರಿತು ನಿನ್ನಿಷ್ಟಾರ್ಥವೇನೆಂದು ಕೇಳಲು— " ಸಕಲ ದೇವಾಲಯಗಳಲ್ಲಿರುವ ಲಿಂಗಗಳನ್ನೂ ಆರಾಧಿಸುವ—ಮತ್ತೂ ಆ ಲಿಂಗಪ್ರಸಾದವನ್ನು ಪಡೆಯುವ—ಸ್ವಾಮ್ಯವನ್ನು ನನಗೂ ನನ್ನ ಕುಲದವರಿಗೂ ದಯೆಪಾಲಿಸಬೇಕು; ನಿನ್ನನ್ನು ಪೂಜಿಸುವ—ನಿನ್ನ ಪ್ರಸಾದವನ್ನು ಸೇವಿಸುವ—ಸುಖಕ್ಕಿಂತಲೂ ದೊಡ್ಡ ಸೌಖ್ಯವು ಬೇರೊಂದಿಲ್ಲ " ವೆಂದು ಚಂಡೇಶನು ಕೇಳಿಕೊಂಡನು. ಅದರಂತೆಯೇ ಆಗಲಿ ಎಂದು ಶಿವನು ವರವಿತ್ತು ಅಂತರ್ಹಿತನಾದನು. ಎಂದು ಚೆನ್ನಬಸವೇಶನು ನುಡಿದನೆಂಬಿಲ್ಲಿಗೆ ಹನ್ನೆರಡನೆ ಅಧ್ಯಾಯವು ಸಂಪೂರ್ಣವು.

೧೩ ನೆ ಅಧ್ಯಾಯವು.

ಕಿ ರಾ ತ ರು ದ್ರ ಲೀ ಲೆ.

ಎಲೈ ಸಿದ್ಧರಾಮೇಶನೆ ಕೇಳು,— ಪೂರ್ವದಲ್ಲಿ ಚಂದ್ರವಂಶದೊಳಗೆ ಹುಟ್ಟಿದ ಪಾಂಡುರಾಯನಿಗೆ ಧರ್ಮರಾಜ ಭೀಮ ಅರ್ಜುನ ನಕುಲ ಸಹದೇವರೆಂಬ ೫ ಮಂದಿ ಮಕ್ಕಳಾಗಿ, ಅವರು ರಾಜ್ಯವನ್ನಾಳಿಕೊಂಡಿರುವಲ್ಲಿ, ಅವರಿಗೂ ದಾಯಾದರಿಗೂ ಕಲಹವು ಹುಟ್ಟಿ, ಪಾಂಡವರು ಜೂಜಿನಲ್ಲಿ ತಮ್ಮ ರಾಜ್ಯಕೋಶಗಳನ್ನೆಲ್ಲ ಸೋತು ಅರಣ್ಯವಾಸಕ್ಕೀಡಾದರು. ಬಂದುದಿನ ಅವರಿದ್ದ ಕಾಡಿಗೆ ವೇದವ್ಯಾಸಮಹರ್ಷಿಯು ಬಂದು, ಹಿರಿಯನಾದ ಧರ್ಮರಾಯನನ್ನು ಕುರಿತು— "ನೃಪತಿಯೆ! ನಿಮಗೆ ಶತ್ರುಜಯದಿಂದ ರಾಜ್ಯಸಂಪತ್ತು ಮೊದಲಿನಂತೆ ದೊರೆಯಬೇಕಾದರೆ, ಶಿವನಿಂದ ಪಾಶುಪತಾಸ್ತ್ರವನ್ನು ಪಡೆದು ಬರಬೇಕು" ಎಂದು ಹೇಳಿದನು. ಅದಕ್ಕಾಧರ್ಮರಾಜನು— ಋಷಿವರ್ಯರೆ! ಒಳ್ಳೆಯ ಭಗೀರಥಪ್ರಯತ್ನವನ್ನು ಹೇಳಿದಿರಿ! ಶಿವನೆಂದರೇನು? ನಾವೆಂದರೇನು? ನಮಗೆ ಆತನು ಬಾಣವನ್ನನುಗ್ರಹಿಸುವುದೆಂದರೇನು? ಎಂದು ಆಶ್ಚರ್ಯದಿಂದ ನುಡಿದನು. ಆಗ ಋಷಿಯು— ಅಯ್ಯಾ! ಶಿವನು ಇತರರಿಗೆ ದುರ್ಲಭನಾದರೂ ಭಕ್ತರಿಗೆ ಸುಲಭನು, ಘನಕೃಪಾಕರನು; ಅವನನ್ನು ಮೆಚ್ಚಿಸಿ ಅಸ್ತ್ರವನ್ನು ಪಡೆದು ಬರುವುದಕ್ಕೆ ನಿಮ್ಮೊಳ್ ಯಾರಲ್ಲಿ ಈ ಅರ್ಜುನನನ್ನು ಕಳುಹಿಕೊಡಿ, ಎಂದು ಹೇಳಿ, ಧರ್ಮರಾಯನಿಗೆ ಶಿವಮಂತ್ರೋಪದೇಶವನ್ನು ಮಾಡಿ, ತೆರಳಿದನು. ಇತ್ತ ಧರ್ಮರಾಜನು ಅದೇಮಂತ್ರವನ್ನು ಅರ್ಜುನನಿಗೆ ಉಪದೇಶಿಸಿ, ತಪಶ್ಚರ್ಯಕ್ಕಾಗಿ ಅವನನ್ನು ಕಳುಹಿಕೊಟ್ಟನು. ಆತನು ಇಂದ್ರಕೀಲಪರ್ವತದ ಅರಣ್ಯಕ್ಕೆ ಹೋಗಿ, ಪ್ರಶಸ್ತವಾದ ಸ್ಥಾನವನ್ನು ಹುಡುಕಿ, ನಿರ್ಮಲವಾದ ಕೊಳವೊಂದರಲ್ಲಿ ಮಿಂದು, ನಾರುಮಡಿಯನ್ನುಟ್ಟು, ವಿಭೂತಿರುದ್ರಾಕ್ಷಿಗಳನ್ನು ಧರಿಸಿ, ಹೆಗಲಿಗೆ ಬಿಲ್ಲುಬತ್ತಳಿಕೆಗಳನ್ನು ಸೇದಿ ಕಟ್ಟಿ, ಭೂಮಿಯಮೇಲೆ ಪಾದದ ಹೆಬ್ಬೆರಲನ್ನು ಮಾತ್ರ ಊರಿ ನಿಂತು, ಭುಜಗಳನ್ನು ಮೇಲಕ್ಕೆತ್ತಿ, ಕೈಮುಗಿದು, ಮನಸ್ಸಿನಲ್ಲಿ ಶಿವಮೂರ್ತಿಯನ್ನು ನೆಲೆಗೊಳಿಸಿ, ತಪಸ್ಸನ್ನಾಚರಿಸುತ್ತಿದ್ದನು. ಕೆಲದಿನ ಗೆಡ್ಡೆಗೆಣಸನ್ನೂ, ಕೆಲದಿನ

ತರಗೆಲೆಗಳನ್ನೂ, ಕೆಲದಿನ ಜಲಾಹಾರ ವಾಯ್ವಾಹಾರಗಳನ್ನೂ ಮಾಡು
ತ್ತಿದ್ದು, ಕಡೆಗೆ ನಿರಾಹಾರಿಯಾಗಿ ಉಗ್ರತಪಸ್ಸಿನಲ್ಲಿದ್ದನು. ಆಗ ಅರ್ಜು
ನನ ತಂದೆಯಾದ ದೇವೇಂದ್ರನು ತನ್ನ ಮಗನ ತಪೋದಾರ್ಢ್ಯವನ್ನು ಪರೀ
ಕ್ಷಿಸುವುದಕ್ಕಾಗಿ ಬ್ರಾಹ್ಮಣವೇಷದಿಂದ ಬಂದು, ಅವನಿದಿರಿಗೆ ನಿಂತು,
ಅಯ್ಯಾ ತಪಸ್ವಿ ! ನಿನ್ನ ವೇಷದ ವೈಚಿತ್ರ್ಯವೇನು ? ನಿನ್ನ ಧನುರ್ಬಾಣ
ಗಳೆತ್ತ ? ನಿನ್ನ ಭಸ್ಮರುದ್ರಾಕ್ಷಗಳೆತ್ತ ? ನಿನ್ನ ಶಾಂತಿಯೆತ್ತ ? ಈ ವೇ
ಷದ ಕ್ರೂರತೆಯೆತ್ತ ? ಎಂದು ಹಾಸ್ಯಮಾಡಲು, ಅರ್ಜುನನು ಕಣ್ದೆರೆ
ದು, ಅಯ್ಯಾ ! ನಿರ್ಮಲಚಿತ್ತದಲ್ಲಿ ಶಿವಧ್ಯಾನವು ದೃಢವಾಗಿರುವಾಗ, ಹೊ
ರಗಿನ ವೇಷವನ್ನು ಕಟ್ಟಿಕೊಂಡೇನು ? ಎಂದನು. ಅದಕ್ಕೆ ಕಪಟವೇಷದ
ಇಂದ್ರನು— ಅಯ್ಯಾ ! ಮಹಾಮಹಾಯೋಗಿಗಳ ತಪಸ್ಸಿಗೂ ಗೋಚ
ರಿಸದ ಶಿವನನ್ನು ನೀನು ಮೆಚ್ಚಿಸಿಕೊಳ್ಳುವೆನೆಂಬುದು, ಹೆಳವನು ಮರದ
ತುದಿಯ ಹಣ್ಣನ್ನು ಬಯಸಿ ಪಡೆಯುತ್ತೇನೆಂದು ಪ್ರಯತ್ನಿಸುವಂತೆ ಆಶ್ಚ
ರ್ಯಕರವಾಗಿದೆ ಯೆನ್ನಲು, ತಪಸ್ವಿಯು— ಅಹುದು, ಶಿವನು ಇತರರಿಗೆ
ದುರ್ಲಭನೇಆದರೂ ಭಕ್ತರಿಗೆ ದುರ್ಲಭನಲ್ಲ; ನನ್ನ ದೃಢಭಕ್ತಿಯಿಂದ
ಅವನ ಪಾದವನ್ನು ಹಿಡಿಯಬಲ್ಲೆನು; ಒಂದುವೇಳೆ ನನ್ನ ಭಕ್ತಿಗೆ ಆತನು
ಮೆಚ್ಚದಿದ್ದರೆ, ಅವನ ಪಾದಕ್ಕೆ ನನ್ನ ಪ್ರಾಣವನ್ನು ಇಲ್ಲಿಯೇ ಸಮರ್ಪಿ
ಸುವೆನು; ಎಂದು ಪ್ರತಿಜ್ಞಾಪೂರ್ವಕವಾಗಿ ನುಡಿಯಲು, ಅದಕ್ಕೆ ಇಂದ್ರ
ನು ಮೆಚ್ಚಿ, ಸಂತೋಷದಿಂದ ನಿಜರೂಪನ್ನು ತೋರಿಸಿ, ನಿನಗೆ ತಪಸ್ಸಿ
ದ್ಧಿಯಾಗಲಿ ಯೆಂದು ಆಶೀರ್ವದಿಸಿ, ಸ್ವರ್ಗಕ್ಕೆ ತೆರಳಿದನು. ಇತ್ತ ಪಾರ್ಥ
ನ ತಪಸ್ತೇಜಸ್ಸು ವನಾಂತರವನ್ನೆಲ್ಲ ಮುಸುಗಿ ಉರಿಸುತ್ತ ಬಂದಿತು. ಖಗ
ಮೃಗ ಭುಜಗ ತರು ಪಾಷಾಣಗಳೆಲ್ಲ ಬೆಂದುವು. ಆ ವನಾಂತರದಲ್ಲಿ ತಪ
ಸ್ಸುಮಾಡುತ್ತಿದ್ದ ಋಷಿಗಳೆಲ್ಲ ಉರಿಗೆ ಬೆದರಿ, ಗಗನದಲ್ಲಿ ಹೋಗುತ್ತಿದ್ದ
ನಾರದನನ್ನು ಕಂಡು, ನಮಗೊದಗಿರುವ ವಿಪತ್ತನ್ನು ಪರಿಹರಿಸಿಕೊಡಬೇ
ಕೆಂದು ಬೇಡಿದರು. ಶಿವನಿಗೆ ಇದನ್ನರುಹಿ ಪರಿಹಾರಮಾಡಿಸಿಕೊಡುತ್ತೇ
ನೆಂದು ಆತನು ನಂಬುಗೆಗೊಟ್ಟು, ಕೈಲಾಸಕ್ಕೆ ಹೋದನು. ಅದರಂತೆ ಶಂ
ಕರನನ್ನು ಕಂಡು ಮುನಿದು, "ಜಗದೀಶನೆ! ಇಂದ್ರಕೀಲದಲ್ಲಿ ಒಬ್ಬನುತಪ
ಸ್ಸನ್ನಾಚರಿಸುತ್ತಿರುವನು; ಅವನನ್ನು ನೋಡಿದರೆ ಋಷಿಯಂತೆಯೂಕಾಣು

ವುದಿಲ್ಲ; ರಾಜನಂತೆಯೂ ಕಾಣುವುದಿಲ್ಲ; ಏಕೆಂದರೆ-ಬೆನ್ನಿನಲ್ಲಿ ಬಿಲ್ಲು ಬಾಣ ಬತ್ತಳಿಕೆಗಳು ತೋರುತ್ತಿರುವುವು; ಇಂಥವನು ಉಗ್ರತಪಸ್ಸಿನಲ್ಲಿ ಕುಳಿತಿರುವುದರಿಂದ ಅದರಜ್ವಾಲೆಯು ವನಾಂತರವನ್ನೆಲ್ಲ ಸುತ್ತಿರುವುದು; ಅಲ್ಲಿರುವ ಋಷಿಗಳ ಜಪತಪೋವ್ರತಾದಿಗಳೆಲ್ಲ ನಿಂತುಹೋಗಿರುವುವು; ಈಚೋದ್ಯವನ್ನು ಕಂಡು ಸ್ವಾಮಿಗೆ ಬಿನ್ನೈಸುವುದಕ್ಕಾಗಿ ಬಂದೆನು " ಎಂದು ಹೇಳಿದನು. ಶಿವನು ಅದನ್ನು ಕೇಳಿ ನಕ್ಕು, " ಮುನಿಪನೆ ! ಆತನು ನಮ್ಮ ಪರಮಭಕ್ತನು, ಅವನಿಂದ ಇತರರಿಗೆ ಯಾವ ಉಪಹತಿಯೂ ಉಂಟಾಗುವುದಿಲ್ಲ; ನಾವು ಅಲ್ಲಿಗೆ ಬಂದು, ಆ ತಪೋವನವನ್ನೆಲ್ಲ ಋಷಿಗಳಿಗೆ ಬಿಡಿಸಿಕೊಡುತ್ತೇವೆ; ನೀನು ಹೋಗಿ ಭಯಪಟ್ಟಿರುವ ಆ ತಪಸ್ವಿಗಳಿಗೆಲ್ಲ ಧೈರ್ಯವನ್ನು ಹೇಳು " ಎಂದು ಅಪ್ಪಣೆ ಮಾಡಿ ಕಳುಹಿಸಿ, ನಂದೀಶನನ್ನು ಕರೆದು, ಬೇಟೆಗೆ ಹೋಗುವುದಕ್ಕಾಗಿ ನಮ್ಮ ಪ್ರಥಮರನ್ನೆಲ್ಲ ಸಿದ್ಧರಾಗುವಂತೆ ಕಳಿಸು, ಎಂದು ಆಜ್ಞೆ ಕೊಟ್ಟು, ತಾನು ಬೇಡನ ವೇಷವನ್ನು ಧರಿಸಿದನು.— ತೊಡೆಗೆ ಚೆಲ್ಲಣವನ್ನಿಕ್ಕಿ ದಟ್ಟಿಯನ್ನು ಕಟ್ಟಿದನು. ಗುಂಜೆಯ ಆಭರಣಗಳನ್ನು ಧರಿಸಿ, ಹಣೆಗೆ ಕಸ್ತೂರಿಯ ತಿಲಕವನ್ನಿಕ್ಕಿದನು. ಕೆದರನ್ನು ಮೆಟ್ಟಿ ಬಿಲ್ಲು ಬಾಣಗಳನ್ನು ಪಿಡಿದನು. ಪ್ರಮಥರೆಲ್ಲರೂ ತಕ್ಕ ವೇಷದಿಂದ ಬಲೆ ಬಡಿಕೋಲು ಗಾಣ ಕಲ್ಲಿ ಮೊದಲಾದುವುಗಳನ್ನು ಹಿಡಿದು ನಾಯಿಗಳೊಡನೆ ಕೂಡಿಕೊಂಡು ಬಂದರು. ಪಾರ್ವತಿಯೂ ಪ್ರಮಥರ ಹೆಂಡತಿಯರೂ ಬೇಡಿತಿಯರಾಗಿ, ಜಿಗುರುಡೆ ದಂತದಬಳೆ ಮುತ್ತುಗುಂಜೆಗಳ ಹಾರ—ಇವುಗಳನ್ನು ತೊಟ್ಟು ಸಿದ್ಧರಾದರು. ಶಿವನಿಗೆ ವೇದಪುರಾಣಶಾಸ್ತ್ರಗಳೇ ನಾಯಿ ನಿಡುಗೋಲು ಕವಣೆ ಕತ್ತಿ ಬಲೆ ಮೊದಲಾದ ಉಪಕರಣಗಳಾದುವು. ಸಕಲ ಪರಿವಾರದೊಡನೆ ಶಿವನು ಇಂದ್ರಕೀಲದ ಕಡೆಗೆ ಪ್ರಯಾಣಗೊಂಡನು. ಆ ಅರಣ್ಯವು ಗಿರಿನದಿಗಳಿಂದಲೂ, ಹುಲಿ ಕರಡಿ ಸಿಹ್ಮ ಶರಭ ಶಾರ್ದೂಲಾದಿವ್ಯಗಳಿಂದಲೂ, ನಾನಾಪಕ್ಷಿಗಳಿಂದಲೂ, ಅಲ್ಲಿಗಲ್ಲಿಗೆ ತೋರುವ ಬೇಡರ ಹಟ್ಟಿಗಳಿಂದಲೂ ಶೋಭಿಸುತ್ತಿದ್ದಿತು. ಋಷಿಗಳು ತಪಸ್ಸನ್ನಾಚರಿಸುತ್ತಿರುವ ಆಶ್ರಮಗಳು ತೋರುತ್ತಿದ್ದುವು. ಆ ಅರಣ್ಯದಲ್ಲಿ ಕಿರಾತವೇಷದ ರುದ್ರನ ಕಡೆಯ ಪರಿವಾರದವರು ಬಲೆಗಳನ್ನು ಬೀಸಿ, ಹಕ್ಕಿಗಳನ್ನು ಹಿಡಿಯುತ್ತಲೂ, ಬಡಿಕೋಲಿನಿಂದ ಕುಟ್ಟಿ ಹೊಡ

ರುಗಳಿಂದ ಮೃಗಗಳನ್ನೀಚೆಗೆ ಹೊರಡಿಸುತ್ತಲೂ, ಓಡುತ್ತಿರುವ ಮೃಗಗಳಿಗೆ ಬಾಣಗಳನ್ನು ಗುರಿಕಟ್ಟಿ ಹೊಡೆಯುತ್ತಲೂ, ಕವಣೆಗಳನ್ನು ಬೀಸಿ ಹಾರುವ ಹಕ್ಕಿಗಳನ್ನು ಕೆಡಹುತ್ತಲೂ, ಹುಲಿಗಳನ್ನು ಕೆಣಕಿ ಭಲ್ಲೆಯಗಳಿಂದಿರಿಯುತ್ತಲೂ, ಹಂದಿಗಳನ್ನುನಿಡುಗತ್ತಿಗಳಿಂದ ಕಡಿಯುತ್ತಲೂ, ಮೃಗಗಳು ಹೋದ ಸ್ಥಲವನ್ನು ಅವುಗಳ ಹಜ್ಜೆಯ ಗುರ್ತಿನಿಂದ ತಿಳಿಯುತ್ತಲೂ ಬರುತ್ತಿದ್ದರು. ಇವರ ಗಾವಳಿಯಿಂದ ಅಲ್ಲಿನ ಮೃಗಗಳಲ್ಲಿ ಕೆಲವು ತಮ್ಮ ತಮ್ಮ ಮರಿಗಳನ್ನು ಅಲ್ಲಲ್ಲೇ ಬಿಟ್ಟು ಓಡಿದುವು. ಮತ್ತೆ ಕೆಲವು ಗುಹಾಂತರಗಳಲ್ಲೇ ಅಡಗಿದುವು. ಕೆಲವು ಓಡುತ್ತಿರುವಾಗ ಸಿಕ್ಕಿ ಹತವಾದುವು. ಕೆಲವು ಬಲೆಗೆ ಸಿಕ್ಕಿ ಬಿದ್ದು ಅರಚುತ್ತಿದ್ದುವು. ಹೀಗೆ ಕಪಟಕಿರಾತರು ವನವನ್ನೆಲ್ಲ ತಿರುಗಿ ಬೇಂಟೆಯಾಡಿಕೊಂಡು ಬರುತ್ತಿರಲು, ಒಂದಾನೊಂದು ಗುಹಾಂತರದಲ್ಲಿ ಅಡಗಿಕೊಂಡಿದ್ದ ಹಂದಿಯಾಕಾರದ ಮೂಕಾಸುರನೆಂಬ ದೈತ್ಯನು ಇವರ ಕೋಲಾಹಲವನ್ನು ಕೇಳಿ ಕೆರಳಿ, ಈಚೆಗೆ ಬಂದನು. ಬ್ರಹ್ಮನು ಸಿಡಿಲಿನಿಂದ ಅದರ ಕೋರೆದಾಡೆಯನ್ನೂ, ಮಿಂಚಿನ ಜ್ವಾಲೆಯಿಂದ ಅದರ ಕಣ್ಣುಗಳನ್ನೂ, ಉಕ್ಕಿನ ಸಲಾಕಿಗಳಿಂದ ಅದರ ರೋಮಗಳನ್ನೂ, ಕಗ್ಗಲ್ಲಿನ ಗುಂಡನ್ನು ಕಡೆದು ಅದರಶರೀರವನ್ನೂ, ನಿರ್ಮಿಸಿರುವನೋ ಎಂಬಂತೆ ಭೀಕರವಾದ ಆಕೃತಿಯ ಆ ಹಂದಿಯು ತೋರುತ್ತಿದ್ದಿತು. ಅದು ಕಿರಾತರನ್ನು ಕಂಡಕೂಡಲೇ ಮಹಾರೋಷದಿಂದ ಅಟ್ಟಿಕೊಂಡು ಬಂದಿತು. ಇವರೆಲ್ಲರೂ ಗಡಗಡನೆ ನಡುಗಿ ದಿಕ್ಕು ದಿಕ್ಕಿಗೆ ಓಡಿ ಮುಗ್ಗರಿಸಿ, ಮರಗಳನ್ನೇರಿ, ಚೀರುತ್ತ, ಹಾರುತ್ತ, ಕೆಲವರು ಶಿವನಬಳಿಗೋಡಿದರು. ಅನೇಕರು ಅದರ ಕುಡಿದಾಡೆಯ ಏಟಿನಿಂದ ತೊಡೆಸೀಳಿ, ಕಾಲ್ಮುರಿದು, ಗಾಯಗೊಂಡು, ರಕ್ತಸುರಿದು, ನಿಶ್ಚೇತನರಾಗಿ ಬಿದ್ದರು. ಶಿವನುಹಂದಿಯ ಹಾವಳಿಯನ್ನು ಕೇಳಿ, ಘುಡುಘುಡಿಸುತ್ತಿದ್ದ ಅದರಿದಿರಿಗೆಹೋಗಿ, ಬಿಲ್ಲಿಗೆ ಬಾಣವನ್ನು ಹೂಡಿ, ಅದರ ಮೇಲೆ ಪ್ರಯೋಗಿಸಿದನು. ಅದು ನಟ್ಟ ಬಾಣದಸಹಿತ ಗರಗರನೆ ತಿರುಗುತ್ತ ಓಡಿ, ತಪಸ್ಸಿನಲ್ಲಿನಿಂತಿದ್ದ ಅರ್ಜುನನ ಮುಂಗಡೆಗೆ ಹೋಗಿ, ಆರ್ಭಟಿಸಿ ಬಿದ್ದಿತು. ಆ ಶಬ್ದದಿಂದ ಪಾರ್ಥನು ಕಣ್ದೆರೆದು ನೋಡುವಲ್ಲಿ, ಭೀಕರಾಕೃತಿಯ ಹಂದಿಯು ಕಂಡಿತು. ಕೂಡಲೇ ಬೆನ್ನಿನಬಿಲ್ಲು ಬಾಣಗಳನ್ನು ತೆಗೆದು ಹಂದಿಯನ್ನೆಚ್ಚನು. ಅದು ತಗಲಿ

ದ ಕೂಡಲೇ ರಕ್ತವನ್ನು ಕಾರಿ ಪ್ರಾಣವನ್ನೀಗಿತು. ಶಿವನ ಕಡೆಯವನಾ ಗಿ ಬಂದ ಬೇಡನೊಬ್ಬನು ಆ ಹಂದಿಯು ಹಿಂಗಡೆಯೀ ಹೋಗಿ, ಅದು ಸ ತ್ತುಬಿದ್ದುದನ್ನು ಕಂಡು, ತಮ್ಮ ಬೇಂಟೆಯೆಂದು ಹಿಡಿದು ಎಳೆಯುವುದ ಕ್ಕೆ ತೊಡಗಿದನು. ಅದನ್ನು ಅರ್ಜುನನು ಕಂಡು,—ಎಲೊ ಪುಳಿಂದನೆ, ನನ್ನ ಬಾಣದಿಂದ ಬಿದ್ದ ಹಂದಿಯನ್ನು ನೀನೇಕೆ ಹಿಡಿಯುವೆ? ಎನ್ನಲು, ಬೇಡ ನು—"ಇದು ನಮ್ಮ ಸ್ವಾಮಿಯ ಏಟನ್ನು ತಿಂದು ಇಲ್ಲಿಗೆ ಓಡಿಬಂದು ಸತ್ತು ಬಿದ್ದಿರುವುದು; ಅದುಕಾರಣ ಒಡೆಯನಪ್ಪಣೆಯ ಮೇರೆ ನಾನು ತೆಗೆದು ಕೊಂಡು ಹೋಗುತ್ತೇನೆ" ಎಂದನು. ಫಲ್ಗುನನು ಕೆರಳಿ "ನಿಮ್ಮ ಒ ಡೆಯನನ್ನೀ ಬರಹೇಳು, ಎದೆಗೆಚ್ಚಿದ್ದರೆ ತೆಗೆದು ಕೊಂಡು ಹೋಗಲಿ; ಅ ವನ ಪೌರುಷವನ್ನು ನಾನು ನೋಡುತ್ತೇನೆ" ಎಂದನು. ಆ ಸುದ್ದಿಯನ್ನು ಬೇಡನು ಶಿವನಿಗೆ ತಿಳಿಸಲು, ಪರಶಿವನೇ ಅರ್ಜುನನ ಬಳಿಗೆ ಬಂದನು. ಎ ಲೆ ತಪಸ್ವಿಯೆ! ಅದೇನು ನುಡಿವೆ? ಹಂದಿಯನ್ನು ಏತಕ್ಕೆ ಕೊಡಲಿಲ್ಲ? ಎಂದು ಕೇಳಿದನು. ಪಾರ್ಥನಾದರೊ ಕಿರಾತನ ಬಿರುವಾತನ್ನು ಸೈರಿಸ ದೆ,—ಎಲೊ ಹುಲುಬೇಡ! ನಿನ್ನ ಶೌರ್ಯವನ್ನು ನಮ್ಮ ಮುಂದೆ ತೋರಿಸು ವುದಕ್ಕೆ ಬಂದೆಯೊ? ನನ್ನ ಬಾಣದೇಟಿನಿಂದ ಹಂದಿಯು ಸತ್ತು ನನ್ನಿದಿರಿ ಗೆ ಬಿದ್ದಿದ್ದರೂ, ಕೀಟಲೆಗಾಗಿ ನಿನ್ನ ಏಟಿನಿಂದ ಸತ್ತಿತೆಂದು ಹೇಳುತ್ತ, ಕಾಲ್ಕೆರೆದು ಜಗಳಕ್ಕೆ ಬಂದಿರುವೆಯೊ? ಜೋಕೆ, ಸುಮ್ಮನೆ ಹೋಗು, ಇಲ್ಲವಿದ್ದರೆ ನನ್ನ ಶೌರ್ಯವನ್ನು ನೋಡು, ಎಂದು ಹೇಳಿ, ಬಾಣವನ್ನು ಶಿ ವನಮೇಲೆ ಪ್ರಯೋಗಿಸಿದನು. ಅವು ಶಿವನ ದೇಹಕ್ಕೆ ಸೋಂಕದೆ, ಪ್ರ ತಿಯೊಂದೂ ಪ್ರದಕ್ಷಿಣೆಗೊಂಡು ಹೊರಹೋಗುತ್ತಿದ್ದುವು. ಈ ಚಮತ್ಕಾ ರವನ್ನು ಅರ್ಜುನನು ನೋಡಿ, ಇದು ಕಿರಾತನ ಮಾಯಗಾರಿಕೆ ಯೆಂದು, ನಿ ಟ್ಟಿದ್ದು, ತೀಕ್ಷ್ಣವಾದ ಬಾಣಗಳನ್ನಾಯ್ದು ಕಿರಾತನ ಮೇಲೆ ಬಿಟ್ಟು ಆ ರ್ಭಟಿಸುತ್ತಿದ್ದನು. ಒಂದು ಬಾಣವಾದರೂ ಅವನಿಗೆ ಸೋಂಕಲಿಲ್ಲ. ಅ ರ್ಜುನನು ಮತ್ತೆಮತ್ತೆ ಕೆರಳಿ, ಎರಡು ಕೈಗಳಿಂದಲೂ ಬಾಣಗಳನ್ನು ಸೆಳೆದುಬಿಡುತ್ತ, ವನಾಂತರವನ್ನೆಲ್ಲ ತುಂಬಿಸಿದನು. ಆಗ ಕಿರಾತನ ಮಗ್ಗು ಲಲ್ಲಿದ್ದ ವೀರಭದ್ರನು ಕೆರಳಿ ಕತ್ತಿಯನ್ನು ಹಿರಿದನು. ಷಣ್ಮುಖನು ಬಿಲ್ಲ ನ್ನು ಧ್ವನಿಮಾಡಿದನು. ಗಣಪತಿಯು ಕೊಡಲಿಯನ್ನು ಜಳಪಿಸಿದನು. ಪ್ರ

ಮುಖಸಮೂಹವೆಲ್ಲ ಆಯುಧಗಳನ್ನೆತ್ತಿ, ತಪಸ್ವಿಯನ್ನು ನಿಮಿಷಮಾತ್ರದಲ್ಲಿ ಪರಲೋಕಕ್ಕೆ ಕಳುಹುತ್ತೇವೆ ಅಪ್ಪಣೆಮಾಡಿರಿ ಎಂದು ಶಿವನನ್ನು ಬೇಡುತ್ತ ಘುತುಘುಡಿಸಿದರು. ಅವರೆಲ್ಲರನ್ನೂ ಕಪಟಕಿರಾತನು ಕಣ್ಸನ್ನೆಯಿಂದ ಸುಮ್ಮನಿರಿಸಿ, ಬಂದು ಬಾಣವನ್ನು ಬಿಟ್ಟು ಪಾರ್ಥನ ಸಕಲಬಾಣಗಳನ್ನೂ ಖಂಡಿಸಿ,—ಎಲೊ ಒಡತಮ್ಮಡಿಯೆ! ನಿನ್ನ ಬಿಲ್ಲುಗಾರಿಕೆ ಸಾಕು, ನಮ್ಮ ಹಂದಿಯನ್ನು ಬಿಟ್ಟುಕೊಡು, ಎಂದನು. ಆ ಮಾತಿಗೆ ಫಲ್ಗುಣನು ಮತ್ತಷ್ಟು ರೋಷಗೊಂಡು, ನನ್ನ ಬಾಣಗಳನ್ನೆಲ್ಲ ತರಿವುದಕ್ಕೆ ಈ ಶಬರನಿಗೆ ಸಾಮರ್ಥ್ಯವೆಲ್ಲಿ ಬಂದಿತು! ಇವನೇನು ಶಿವನೊ! ಷಣ್ಮುಖನೊ! ರಾಮನೊ! ಪರಶುರಾಮನೊ! ಭೀಷ್ಮನೊ! ಕರ್ಣನೊ! ಎಂದು ಮನದಲ್ಲಿ ಯೋಚಿಸುತ್ತ,—ಛಲರೇ ಪುಳಿಂದನೆ! ನಿನ್ನ ಬಾಣವಿದ್ಯಾಚಾತುರ್ಯಕ್ಕೆ ಮೆಚ್ಚಿದೆ! ನಿನ್ನಂಥ ಬೇಡನನ್ನು ನಾನು ಎಲ್ಲಿಯೂ ಕಾಣಲಿಲ್ಲ; ಶಕ್ತಿಯಿದ್ದರೆ ಈ ಏಟುಗಳನ್ನು ತಾಳಿಕೊ, ಎಂದು ಹೇಳಿ, ಸಿಹ್ಮಗರ್ಜನೆಯನ್ನು ಮಾಡಿ, ಬಿತುವಿಲ್ಲದಂತೆ ಬಾಣದ ಮಳೆಯನ್ನು ಸುರಿಸುತ್ತಿದ್ದನು. ಕಿರಾತನು ಅವೆಲ್ಲವನ್ನೂ ಬಿಲ್ಲಿಂದೀಚೆಗೆ ಬರುವುದರೊಳಗಾಗಿ ತರಿದಿಕ್ಕುತ್ತಿದ್ದನು. ಹೀಗೆಯೇ ಪಾರ್ಥನು ಬಿಡುವ ಬಾಣಗಳಿಗೂ ಶಿವನು ಕಡಿಯುವುದಕ್ಕೂ ಲೆಕ್ಕವಿಲ್ಲದಂತಾಯಿತು. ಅರ್ಜುನನು ಮಂತ್ರಾಸ್ತ್ರಗಳನ್ನು ಬಿಟ್ಟನು. ಅವನ್ನೂ ಕಿರಾತನು ಖಂಡಿಸಿದನು. ಅರ್ಜುನನು ಬೇಸತ್ತು, ಬತ್ತಳಿಕೆಯಲ್ಲಿದ್ದ ಅಂಬುಗಳನ್ನೆಲ್ಲ ಹುಡುಕಿ ಹುಡುಕಿ ತೆಗೆದು ಎಚ್ಚು ಬರಿಗೈಯಾದನು. ಕಿರಾತನಾದರೊ— ಹಿಂದಿರುವ ತನ್ನ ಹೆಂಡತಿಗೆ ಕಣ್ಸನ್ನೆಯಿಂದ ಅರ್ಜುನನ ಶೌರ್ಯವನ್ನೆಲ್ಲ ತೋರಿಸಿ, ಹುಸಿನಗೆ ನಗುತ್ತ,—ಎಲಾ ತಮ್ಮಡಿ! ನಿನ್ನ ಶೌರ್ಯವೆಲ್ಲಾ ತಗ್ಗಿತೆ? ಬಾಣಗಳೆಲ್ಲಾ ಮುಗಿದುವೆ? ಹಲ್ಮೆಲ್ಲಾ ಉತುಗಿತೆ? ಕಿರಾತನ ಶಕ್ತಿಯನ್ನು ನೋಡಿದೆಯಾ? ಎಂದು ಹಂಗಿಸಿದನು. ಆಗ ಅರ್ಜುನನು ಕಿಡಿಕಿಡಿಯಾಗಿ,— ಎಲೊ ಬೇಡನೆ! ವೀರಾಧಿವೀರಕ್ಷತ್ರಿಯವಂಶಜನಾದ ನಾನು ಕಾರ್ಯಾರ್ಥವಾಗಿ ತಪಸ್ಸಿನಲ್ಲಿದ್ದ ಮಾತ್ರದಿಂದಲೇ ತಮ್ಮಡಿಯಾಗಿಹೋದೆನೊ? ಬೇಡನಾದ ನೀನು ನಿನ್ನ ಕುಲದ ಕೀಳ್ತನವನ್ನು ನೋಡಿಕೊಳ್ಳದೆ ಅಹಂಕಾರದಿಂದ ಗಳಹುವೆಯಾ? ಎಂದು ತಿರಸ್ಕರಿಸಲು, ಕಿರಾತನು ನಕ್ಕು,—ಎಲೊ ಮೂಢನೆ! ನಾ

ವೇನೋ ಬೇಡರೆಂಬುದು ನಿಜ; ಲೋಕವೆಲ್ಲಾ ಕಾಣುವಂತೆ ಕಾಡಿನಲ್ಲಿ ನಿಂತು ತಪಸ್ಸನ್ನು ಮಾಡಿ ಬೇಡುತ್ತಿರುವ ನೀನು ಬೇಡನಲ್ಲವೊ ? ಲೆಕ್ಕಕ್ಕೆ ಒಂದು ಬಾಣವಾದರೂ ಬತ್ತಳಿಕೆಯಲ್ಲಿಲ್ಲದಿರುವ ನೀನು ಅಂತಹ ಕ್ಷತ್ರಿಯ ? ಅದೆಂತಹ ವೀರ? ಎಂದು ಜರೆಯಲು, ಅರ್ಜುನನು ಕಡುಸಿಟ್ಟುಗೊಂಡು, ಕೈಯಲ್ಲಿದ್ದ ಬಿಲ್ಲಿನಿಂದಲೇ ಕಿರಾತನನ್ನಪ್ಪಳಿಸಿದನು. ಅದನ್ನು ಬೇಡನು ಹಾಗೆಯೇ ಹಿಡಿದು ಕಿತ್ತುಕೊಂಡನು. ಪಾರ್ಥನು ಕತ್ತಿಯಿಂದ ಶಿವನನ್ನು ಹೊಡೆಯುವುದಕ್ಕೆ ಕೈಯೆತ್ತಿದನು. ಪುಳಿಂದನು ಅದನ್ನೂ ಸೆಳೆದುಕೊಂಡನು. ಬಳಿಕ ಕಲ್ಲುಗಳಿಂದಲೂ ಗುಂಡುಗಳಿಂದಲೂ ಮರದ ಕೊಂಬುಗಳಿಂದಲೂ ವ್ಯಾಧನನ್ನು ಹೊಡೆಯಲುಪಕ್ರಮಿಸಿದನು. ಅವನ್ನೆಲ್ಲ ಕೈದೊಣ್ಣೆಯಿಂದಲೇ ಶಿವನು ಓರೆನೂಕಿ, ತಪಸ್ವಿಯೆ! ಇನ್ನಾವ ಆಯುಧಗಳನೆಯೋ ಎಲ್ಲವನ್ನೂ ತೆಗೆ, ಎಂದು ಹಾಸ್ಯಮಾಡಿದನು. ಫಲ್ಗುನನು "ಧೈರ್ಯವಿದ್ದರೆ ಮಲ್ಲಯುದ್ಧಕ್ಕೆ ನಿಲ್ಲು" ಎಂದು ತೊಡೆತಟ್ಟಿ ನಿಂತನು. ಶಿವನು ಪಾರ್ವತಿಯ ಮುಖವನ್ನು ನೋಡಿ ನಗುತ್ತ,—ದೇವಿಯೆ! ಇವನು ತರಗೆಲೆ ಗಾಳಿಗಳನ್ನಾಹಾರಮಾಡಿಕೊಂಡು ಎಷ್ಟೋಕಾಲವಿದ್ದು ಒಳಕ ನಿರಾಹಾರಿಯಾಗಿಯೂ ತಪಸ್ಸನ್ನು ಮಾಡುತ್ತಿದ್ದನು. ಈ ಹಂದಿಯ ಸಂಬಂಧದಿಂದ ನನ್ನ ಮೇಲೆ ಕಾದಾಡಬೇಕಾಯಿತು. ಆದರೂ ದೇಹಶಕ್ತಿಗುಂದದೆ ನಸೆ ಗೆಡಿಸಿ ಇಮವರೆಗೆ ಹೋರಾಡಿದುದನ್ನು ನೋಡು, ಇಂತಹ ಕಲಿತನವು ಜಗತ್ತಿನಲ್ಲಿ ಈ ಲೋಕೈಕವೀರನೊಬ್ಬನಿಗಲ್ಲದೆ ಮತ್ತಿನ್ನಾರಿಗಿರುವುದು ? ಇನ್ನೂ ಇವನ ಶೌರ್ಯವನ್ನು ನೋಡುತ್ತಿರು, ಎಂದು ಪೇಳಿ, ಬಿಲ್ಲು ಬಾಣಗಳನ್ನು ಒಬ್ಬನ ಕೈಗೆ ಕೊಟ್ಟು, ಭುಜಗಳನ್ನು ತಟ್ಟಿ, ಪಾರ್ಥನಿಗೆ ಎದೆಗೊಟ್ಟು ನಿಂತನು. ಇಬ್ಬರಿಗೂ ಕೈ ಕೈ ಕೂಡಿತು. ಎದೆಗಳು ಸೇರಿದುವು. ಹಾವುಗಳಂತೆ ಸೇರಿ ಹೆಣಗಾಡಿದರು. ಗರಗರನೆ ತಿರುಗಿದರು. ಮುಂಡಿಯೂರಿ ಬೆನ್ನಿಗೆ ಕೈಕೊಟ್ಟು ಜಗ್ಗಿಸಿದರು. ಕೊರಲನ್ನು ಸೆಳೆದು ರಟ್ಟೆಯನ್ನು ತೊಡೆಗೆ ಸೇರಿಸಿದರು. ಎತ್ತಿ ಕುಸುರಿದರು. ಒಬ್ಬರನ್ನೊಬ್ಬರು ಮೇಲ್ಕೀಳು ಮಾಡಿದರು. ಪಟ್ಟನ್ನು ಬಿಡಿಸಿಕೊಂಡು ದೂರವಾಗಿ ನಿಡಿದು, ತೊಡೆತಟ್ಟಿ ಮತ್ತೆ ನಡುವಿಗೆ ನುಗ್ಗಿದರು. ಅಪ್ಪಳಿಸಿದರು. ಒಬ್ಬರನ್ನೊಬ್ಬರು ಮುಷ್ಟಿಗಳಿಂದ ಹೊಡೆದರು. ಬೆನ್ನುರು ಹರಿದಾಡಿತು. ತಲೆಯು

ಕೆದರಿತು. ಮೈ ಮಣ್ಣಾಯಿತು. ಇವರೀರ್ವರ ಮಹಾಯುದ್ಧವನ್ನು ನೋಡಿ ದೇವತೆಗಳೂ ಪ್ರಮಥರೂ ಪರಮಾಶ್ಚರ್ಯಗೊಂಡರು. ಆಗ ಅರ್ಜುನನು ಕಡುಬೇಸತ್ತು, ಕೋಪವು ಮಿತಿಮೀರಿ, ಎಲೊ ಬೇಡನೆ! ಇದೇ ನಿನಗೆ ಕೊನೆಯೇಟು, ನನ್ನ ಬಾಣಗಳನ್ನೆಲ್ಲ ನುಂಗಿದ ನಿನ್ನ ರೋಗಕ್ಕೆ ಇದೇ ಮದ್ದು, ನನ್ನ ದಿವ್ಯಾಸ್ತ್ರವನ್ನು ಖಂಡಿಸಿದ ಶೌರ್ಯಕ್ಕೆ ಇದೇ ಮೃತ್ಯು, ನಿನ್ನ ಅಹಂಕಾರವಚನಗಿರಿಗೆ ಇದೇ ಪಜ್ರ, ಎಂದು ಹೇಳುತ್ತ, ಬಲವಾಗಿ ಮುಷ್ಟಿಯಿಂದ ಶಿವನ ಎದೆಗೆ ತಿವಿದು, ಆರ್ಭಟಿಸಿದನು. ಶಿವನು ಲೀಲೆಯಿಂದ ಬಂದೇಟನ್ನಪ್ಪಳಿಸಲು, ಎದೆ ಮೇಲಾಗಿ ಭೂಮಿಯಮೇಲೆ ಅರ್ಜುನನು ಬಿದ್ದನು. ಅಂಗುಷ್ಠದಿಂದ ತುಳಿದ ಮೂತ್ರದಿಂದಲೇ ರಕ್ತವನ್ನು ಕಾರಿ ಕಣ್ಣುಗುಡ್ಡೆಯನ್ನು ತೇಲಿಸಿ ಮೂರ್ಛಾಗತನಾದನು. ಕರುಣಾಕರನಾದ ಶಿವನು ತನ್ನ ಭಕ್ತನಿಗುಂಟಾದ ಆ ಅವಸ್ಥೆಯನ್ನು ನೋಡಿ, ಅಯ್ಯೋ! ಹೊಡೆದೆನಲ್ಲ! ಎಂದು ಮರುಗಿದನು. ಅಷ್ಟರಲ್ಲಿ ಧನಂಜಯನಿಗೆ ಎಚ್ಚರುಂಟಾಯಿತು. ಆದರೇನು? ಶಕ್ತಿಯು ತಗ್ಗಿತು; ಉತ್ಸಾಹವು ಕುಗ್ಗಿತು. ಶೌರ್ಯರಸವು ಒತ್ತಿತು, ಮುಖವು ಬೆವರೇರಿತು: ಚಿಂತೆಯು ಹೆಚ್ಚಿತು; ಬೇಡನಿಗೆ ತಾನು ಸೋತುಹೋಗಬೇಕಾಯ್ತಲ್ಲ! ಎಂಬ ಕೊರೆತವು ಹುಟ್ಟಿತು; ಅಯ್ಯೋ! ನಾನು ಯಾವ ಜನ್ಮದಲ್ಲಿ ಏನು ಪಾಪವನ್ನು ಮಾಡಿದ್ದೆನೊ! ಶಿವನಿಂದೆ ಶಿವಭಕ್ತದ್ರೋಹಗಳನ್ನು ಮಾಡಿದ್ದೆನೋ! ಶಿವವ್ರತವನ್ನು ಕೆಡಿಸಿದ್ದೆನೋ! ಶಿವಮತವನ್ನು ದೂಷಿಸಿದ್ದೆನೋ! ಶಿವಭಕ್ತರಿಗೆ ತೇಜೋವಧೆಯನ್ನು ಮಾಡಿದ್ದೆನೋ! ಕಾಣೆನಲ್ಲ! ಅಂತಹ ಯಾವ ಪಾಪವನ್ನೋ ಮಾಡಿದ್ದುದರಿಂದಲೇ ಈ ಸಾಮಾನ್ಯ ಮನುಷ್ಯನಿಂದ ನಾನು ಪರಾಭವಗೊಳ್ಳಬೇಕಾಯಿತು; ಎಲ್ಲಿಯ ಅರ್ಜುನ! ಎಲ್ಲಿಯ ಬೇಡ! ಇನೇನು ಜಗದಾಶ್ಚರ್ಯ! ಇದುವರೆಗೂ ಜಗತ್ತಿನಲ್ಲೆಲ್ಲ ಹರಡಿಕೊಂಡಿದ್ದ ನನ್ನ ಪರಾಕ್ರಮದ ಕೀರ್ತಿಯು ಈಗ ಹಾಸ್ಯಾಸ್ಪದವಾಗುವಂತಾಯ್ತಲ್ಲ! ಅಯ್ಯೋ! ಇದೆಲ್ಲಿಯ ಹಂದಿ! ನಾನೇಕೆ ನೋಡಿದೆ! ಬಾಣವನ್ನೇಕೆ ಬಿಟ್ಟೆ! ಈ ಶಬರನೆಲ್ಲಿಬಂದ! ನಾನು ಬಂದ ಕಾರ್ಯವೇನು! ಆದ ಪರಿಣಾಮವೇನು! ನಾನು ಸ್ವಪ್ನವನ್ನೇನಾದರೂ ಕಾಣುತ್ತಿರುವೆನೊ? ನಾನೇ ಬೇಡನೊ? ಈತನೇ ಅರ್ಜುನನೊ? ಇದೇನು

ವಿಚಿತ್ರ ! ಎಂದು ಪರಿಪರಿಯಾಗಿ ಹಂಬಲಿಸುತ್ತ, ಕಡೆಗೆ, ನಾನು ಮಾಡು ತ್ತಿದ್ದ ತಪಶ್ಚರಣವನ್ನು ಬಿಟ್ಟು ಈ ದುರ್ವ್ಯಾಜ್ಯಕ್ಕೆ ಮನಸ್ಸನ್ನು ಕೊಟ್ಟ ಶಿವಾಪರಾಧದಿಂದಲೇ ಇಂತಹ ಕೇಡುಂಟಾಯ್ತೆಂದು ಯೋಚಿಸಿ, ತತ್ಪರಿ ಹಾರಕ್ಕಾಗಿ ಶಿವಕಟಾಕ್ಷವನ್ನು ಪಡೆದು ಬಳಿಕ ಬೇಡನನ್ನು ಸೋಲಿಸ ಬೇಕೆಂದು ನಿರ್ಧರಿಸಿದನು. ಅಲ್ಲೇ ಮಳಲಿನಲ್ಲಿ ಒಂದು ಲಿಂಗವನ್ನು ಮಾ ಡಿದನು. ಪರಿಪರಿಯ ಹೂವುಗಳನ್ನೆತ್ತಿ ತಂದು ಭಕ್ತಿಯಿಂದರ್ಚಿಸಿದನು. ಶಿವನುಂತೆಶ್ರೀಚ್ಚಾರಣೆಯಿಂದ ಪ್ರದಕ್ಷಿಣವಾಡಿ ನಮಸ್ಕರಿಸಿ, ಜಯ ಮೃತ್ಯುಂಜಯ ! ಜಯ ಭವಭಂಜನ ! ಜಯ ಕರುಣಾಕರ ! ಜಯ ಶಿವಶಂಕರ ! ಎಂದು ಮೊದಲಾಗಿ ಸ್ತೋತ್ರವಾಡಿ, " ಹರನೇ ! ನಿನ್ನ ಪಾದಸೇವಕನಾದ ನನ್ನನ್ನು ಹುಲುಬೇಡನೊಬ್ಬನು ಗೆಲ್ಲಬಹುದೆ ? ನನ ಗಾದ ಪರಾಭವವು ಒಡೆಯನಾದ ನಿನಗಲ್ಲವೆ ? ಅದುಕಾರಣ, ಈತನನ್ನು ಸೋಲಿಸುವ ಶೌರ್ಯವನ್ನು ನನಗೆ ಕೊಟ್ಟು ಕಾಪಾಡು " ಎಂದು ಪ್ರಾ ರ್ಥಿಸಿ, ಬೇಡನ ಕಡೆಗೆ ತಿರುಗಿನೋಡಿ, ಎಲೊ ನೀಚನೆ ! ಇನ್ನು ನಿನ್ನ ಪೌರುಷವನ್ನು ತೋರಿಸು ನೋಡುತ್ತೇನೆ ! ಈಗ ನಮ್ಮಾಡೆಯನ ಅನು ಗ್ರಹವು ಉಂಟಾಗಿರುವುದು; ನೀನಲ್ಲ, ನಿನ್ನಮೇಲಣ ಯಾವ ದೈವವನ್ನು ಕರೆದುಕೊಂಡುಬಂದರೂ ಎಲ್ಲರನ್ನೂ ಕ್ಷಣಾರ್ಧದಲ್ಲಿ ಸಂಹರಿಸುವೆನು; ಇತ್ತ ಬಾ, ಎಂದು ತೊಳ್ತಟ್ಟಿ ಗರ್ಜಿಸುತ್ತಿರುವಲ್ಲಿ, ಬೇಡನ ತಲೆಯ ಮೇಲಿರುವ ಪುಷ್ಪಗುಚ್ಛವನ್ನು ನೋಡಿದನು. ತಾನು ಮಳಲಲಿಂಗದ ಶಿರ ಸ್ಸಿನಮೇಲೆ ಧರಿಸಿದ ಕುಸುಮಗುಚ್ಛದಂತೆಯೇ ಅದು ಕಂಡಿತು. ಇದೇ ನೆಂದು ಅರ್ಜುನನು ಆಶ್ಚರ್ಯಗೊಂಡನು. ಪರೀಕ್ಷಿಸಬೇಕೆಂದು ಮತ್ತೆ ಬೇ ರೆಬೇರೆ ಜಾತಿಯ ಹೂವುಗಳನ್ನು ಲಿಂಗಕ್ಕೆ ಅಲಂಕರಿಸಿದನು. ಕಣ್ಣು ಮುಚ್ಚಿ ಬಿಡುವುದರೊಳಗೆ ಅವೆಲ್ಲ ಕಿರಾತನ ಮುಂಡೆಯ ಮೇಲೆಯೇ ತೋರುತ್ತ, ಲಿಂಗಶಿರಸ್ಸು ಶೂನ್ಯವಾಗಿರುತ್ತಿದ್ದಿತು. ಆಗ ಅರ್ಜುನನು, ಓಹೊ ! ಇವನೇ ಶಿವನೆಂದು ತಿಳಿದು, ದಿಗಿಲುಬಿದ್ದನು. ಶಿವನನ್ನು ಮೆ ಚ್ಚಿಸಿಕೊಳ್ಳುವುದಕ್ಕಾಗಿ ಬಂದ ನಾನು ಅವನಿಗೇ ವಿರುದ್ಧವಾಗಿ ನಿಂತು ಕಾದಾಡಿದನಲ್ಲ ! ಎಂದು ಪರಿತಪಿಸಿದನು. ಗಡಗಡನೆ ನಡುಗುತ್ತ ಅಡ್ಡಬಿ ದ್ದು, ಎದ್ದು, ಕೈಮುಗಿದು ನಿಂತು,—ಮದ್ಗುರುವೆ ! ಪ್ರಭುವೆ ! ನಾನು

ಅರಿಯದೆ ಮಾಡಿದ ಶತಾಪರಾಧವನ್ನು ಕ್ಷಮಿಸು; ಮತ್ತನಾಗಿ ನಾನು ಆಚರಿಸಿದ ತಪ್ಪನ್ನು ಸೈರಿಸು, ಅಜ್ಞನಾದ ನನ್ನನ್ನು ಕಾಪಾಡು, ಭಕ್ತವತ್ಸಲಾ ! ದಯಾನಿಧೆ ! ಎಂದು ಬಗೆಬಗೆಯಾಗಿ ಕಣ್ಣೀರ್ದುಂಬಿ ದೀನಸ್ವರದಿಂದ ಬೇಡಿದನು. ಆಗ ಇದಿರಾಗಿದ್ದ ಕಿರಾತನೇ ಭಕ್ತನ ಮೇಲಣ ಪ್ರೀತಿಯಿಂದ ಪಂಚವದನ– ದಶಭುಜ– ಚಂದ್ರರೇಖೆ– ಜಟೂಗಂಗೆ– ತ್ರಿಶೂಲ– ಮೃಗವರಾಭಯಹಸ್ತ– ಭುಜಗಹಾರಕುಂಡಲ– ಮೊದಲಾದುವುಗಳನ್ನು ಧರಿಸಿ, ಪ್ರಸನ್ನನದನನಾಗಿ, ಪಾರ್ವತೀಸಮೇತನಾಗಿ, ವೃಷಭವನ್ನೇರಿ, ಪ್ರತ್ಯಕ್ಷನಾದನು. ನಂದಿ ಗುಹ ಗಣಪ ವೀರೇಶಾದಿಗಳು ನಿಜರೂಪನ್ನು ಧರಿಸಿದರು. ದೇವದುಂದುಭಿಯು ಶಬ್ದವಾಯಿತು. ಪುಷ್ಪವೃಷ್ಟಿಯು ಕರೆದಿತು. ಪಾರ್ಥನು ಮಹಾದೇವದೇವೋತ್ತಮನ ನಿಜರೂಪನ್ನು ಕಂಡು, ಪರಮಾನಂದಗೊಂಡು, ಬಾಷ್ಪಗಳನ್ನು ಸುರಿಸುತ್ತ, ರೋಮಾಂಚವನ್ನೈದಿ, ದೀರ್ಘವಾಗಿ ನಮಸ್ಕರಿಸಿ, ಭಯಭಕ್ತಿಯಿಂದ "ರುದ್ರಾಯ ಗಿರಿಶಾಯ ಶರ್ವಾಯ ಕರುಣಾಸಮುದ್ರಾಯ ಸೋಮಾಯ ಭೀಮಾಯ ಮೃತ್ಯುಂಜಯಾಯ ಪರಮೇಶಾಯ ತೇ ನಮೋನಮಃ" ಎಂದು ಮೊದಲಾಗಿ ಸ್ತುತಿಸುತ್ತಿದ್ದನು. ಶಿವನು ಪಾರ್ಥನನ್ನು ಪ್ರೇಮದಿಂದ ತೆಗೆದು ಬಿಗಿದಪ್ಪಿ, ಕುವರನ! ನೀನು ಬಿಟ್ಟ ಬಾಣಗಳೆಲ್ಲವೂ ನನಗೆ ಪುಷ್ಪಾರ್ಚನೆಯು; ನೀನು ಆಡಿದ ಮೂದಲೆಗಳೆಲ್ಲ ನನ್ನ ಮಂತ್ರೋಚ್ಚಾರಣಗಳು. ನಿನ್ನ ಮುಷ್ಟಿಘಾತವು ನನ್ನ ಪಾದಪ್ರಾಜೆಯು, ಎಂದು ತಿಳಿದಿರುವೆನು; ಅದಕ್ಕಾಗಿ ನೀನು ಮನಸ್ಸಿನಲ್ಲಿ ಕೊರಗಬೇಡ; ಇದೋ ನೀನು ಕಳೆದು ಕೊಂಡ ಬಿಲ್ಲು ಬಾಣಗಳನ್ನು ತೆಗೆದುಕೊ ಎಂದು ಅವನ ಕೈಗೆ ಕೊಟ್ಟು, ನಿನ್ನಿಷ್ಟಾರ್ಥವೇನು ? ಬೇಡು, ಎಂದನು. ಅರ್ಜುನನಾದರೊ– "ದೇವಾ! ಶತ್ರುವಿಜಯಕವಾದ ಮಹಾಪಾಶುಪತಾಸ್ತ್ರವನ್ನು ಕರುಣಿಸಬೇಕು" ಎಂದು ಬೇಡಿದನು. ಶಿವನು ಅವನಿಷ್ಟದಂತೆಯೇ ಮಂತ್ರೋಪದೇಶಪೂರ್ವಕವಾಗಿ ಶಿವಾಸ್ತ್ರವನ್ನು ದಯಪಾಲಿಸಿ, ಜಯಶೀಲನಾಗು" ಎಂದು ಆಶೀರ್ವದಿಸಿದನು. ಬಳಿಕ ಪಾರ್ಥನು ಪಾರ್ವತಿಯ ಪಾದಾರವಿಂದಕ್ಕೆ ಮಣಿದು, ಜಗನ್ಮಾತೆ! ಕರುಣಾಕರೆ! ಭವಾನಿ! ಸರ್ವಮಂಗಳೆ! ಪರಾತ್ಪರೆ! ಪಾಹಿ ಎಂದು ಮೊದಲಾಗಿ ಸ್ತುತಿಸಲು, ಶಂಕರಿಯು ಅವನ ತಲೆ

ಯನ್ನು ಹಿಡಿದೆತ್ತಿ, "ಭಕ್ತನೆ! ನಿನ್ನ ದೃಢಭಕ್ತಿಗೆ ಮೆಚ್ಚಿದೆನು; ಇದೋ ಈ ಅಂಜನಾಸ್ತ್ರವನ್ನು ನಿನಗೆ ಕೊಡುವೆನು; ಇದು ಬಂದಾಗಿದ್ದರೂ ಬಿಲ್ಲಿನಲ್ಲಿ ತೊಡುವಾಗ ಹತ್ತು, ಬಿಡುವಾಗ ನೂರು, ಹೊರಗೆ ಹೋಗುವಾಗ ಸಾವಿರ, ಶತ್ರುಬಾಣಗಳನ್ನು ಕಡಿವಾಗ ಲಕ್ಷ, ಅರಿಗಳ ಸಮೀಪಕ್ಕೆ ಹೋಗುವಾಗ ಕೋಟಿ, ನಡುವಾಗ ಗಣನಾತೀತವಾಗಿ ಹಬ್ಬಿ, ಲಯಗೊಳಿಸಿ, ಮತ್ತೆ ಹಿಂತಿರುಗಿ ನಿನ್ನ ಬಳಿಗೇ ಬಂದು, ಬಂದಾಗಿ ನಿಲ್ಲುವುದು" ಎಂದು ಹೇಳಿ, ಕೈಗೆ ಕೊಟ್ಟು, ಯುದ್ಧಾಂಗಣದಲ್ಲಿ ಜಯಶೀಲನಾಗು, ಎಂದು ಹರಸಿದಳು. ಪಾರ್ಥನು ಧನ್ಯನಾದೆನೆಂದು ಆ ಜಗನ್ಮಾತಾ ಪಿತರುಗಳಿಗೆ ವಂದಿಸಿದನು. ಶಿವನು ಸಕಲಪರಿವಾರದೊಡನೆ ಕೈಲಾಸಕ್ಕೆ ಪ್ರಯಾಣಗೊಂಡನು. ಎಲೆ ಸಿದ್ಧರಾಮೇಶನೆ! ಇದುವರೆಗೆ ಹೇಳಿದುದೇ ಪರಶಿವನ ಪಂಚವಿಂಶತಿ ಲೀಲೆಗಳ ವಿವರಣವು, ಎಂದು ಚೆನ್ನಬಸವೇಶನು ನಿರವಿಸಿದನೆಂಬಲ್ಲಿಗೆ ಹದಿಮೂರನೆ ಅಧ್ಯಾಯದೊಡನೆ

೪ನೆ ಕಾಂಡವು ಮುಗಿದುದು.

೫ ನೆ ಕಾಂಡವು.

ಸೋಮಸೂರ್ಯಾನ್ವಯವಂಶವಿವರಣವು.

ಪೂರ್ವೋಕ್ತವಾದ ಅರ್ಜುನನ ವೃತ್ತಾಂತವನ್ನು ಕೇಳಿದ ಸಿದ್ಧರಾಮೇಶನು ಚೆನ್ನಬಸವೇಶ್ವರನನ್ನು ಕುರಿತು— ಗುರುವೆ, ಅರ್ಜುನನು ಪಾಶುಪತಾಸ್ತ್ರವನ್ನು ಪಡೆದ ಒಳಿಕ ಎಲ್ಲಿಗೆ ಹೋದನು? ಏನನ್ನು ಮಾಡಿದನು? ಅವನ ಪೂರ್ವಾಪರವೇನು? ದಯೆಯಿಟ್ಟು ಬೋಧಿಸಬೇಕು, ಎಂದು ಬೇಡಿದನು. ಆಗಳಾಚೆನ್ನಬಸವೇಶನು ಹೇಳತೊಡಗಿದನೆಂತೆಂದರೆ— ಎಲೈ ಸಿದ್ಧರಾಮೇಶನೆ, ಚತುರ್ಮುಖಬ್ರಹ್ಮನ ಅಂಗದಿಂದ ನವಬ್ರಹ್ಮರು ಹುಟ್ಟಿದ ಸಂಗತಿಯನ್ನು ಹಿಂದೆಯೇ ವಿವರಿಸಿರುವೆನಷ್ಟೆ; ಆ ನವಬ್ರಹ್ಮರಲ್ಲಿ ಒಬ್ಬನಾದ ಅತ್ರಿಮಹರ್ಷಿಯಿಂದ ಚಂದ್ರನು ಹುಟ್ಟಿದನು. ಅವನ ಪಾರಂಪರ್ಯಕ್ಕೇ ಚಂದ್ರವಂಶವೆಂದು ಹೆಸರು. ಚಂದ್ರನಿಂದ ಬುಧನು ಹುಟ್ಟಿದನು. ಅವನಿಗೆ ಪುರೂರವನು ಮಗನು. ಪುರೂರವನಿಗೆ ಊರ್ವಶಿಯು

ಹೊಟ್ಟೆಯಲ್ಲಿ ಆಯು, ಮಾಯು, ಅಮಾಯು, ವಿಶ್ವಾಯು, ಶ್ರುತಾಯು, ಶತಾಯು, ದಿವ್ಯಾಯು— ಎಂದು ಏಳುಮಂದಿ ಮಕ್ಕಳು ಹುಟ್ಟಿದರು. ಅವರಲ್ಲಿ ಹಿರಿಯನಾದ ಆಯುವಿಗೆ ಪ್ರಭೆ ಯೆಂಬ ಪತ್ನಿಯಲ್ಲಿ ನಹುಷ ಮೊದಲಾದ ಐದುಮಂದಿ ಮಕ್ಕಳು ಜನಿಸಿದರು. ನಹುಷನಿಗೆ ವಿರಜೆ ಯೆಂಬುವಳ ಹೊಟ್ಟೆಯಲ್ಲಿ ಯತಿ, ಯಯಾತಿ, ಸಂಯಾತಿ, ಆಯಾತಿ,ಅಶ್ವಕ, ವಿಜಾತಿ, ಎಂಬ ಆರುಮಂದಿಗಳು ಜನಿಸಿದರು. ಅವರಲ್ಲಿ ಹಿರಿಯನಾದ ಯತಿಯು ಮೋಕ್ಷಾರ್ಥಿಯಾಗಿ ವೈರಾಗ್ಯದಲ್ಲಿದ್ದನು. ಎಲ್ಲನೆ ಯಯಾತಿಯು ಎಲ್ಲರಿಗಿಂತಲೂ ಪ್ರಬಲಕೀರ್ತಿಯಾಗಿ ರಾಜ್ಯವನ್ನಾಳಿದನು. ಇವನು ಶುಕ್ರಾಚಾರ್ಯನ ಮಗಳಾದ ದೇವಯಾನಿಯನ್ನೂ ವೃಷಪರ್ವನ ಮಗಳಾದ ಶರ್ಮಿಷ್ಠೆಯೆಂಬುವಳನ್ನೂ ಕೂಡ ಮದುವೆಯಾದನು. ದೇವಯಾನಿಯ ಹೊಟ್ಟೆಯಲ್ಲಿ—ಯದು, ತುರ್ವಸು, ಎಂಬುವರೂ, ಶರ್ಮಿಷ್ಠೆಯಲ್ಲಿ ದ್ರುಹ್ಯು, ಅನು, ಪೂರು, ಎಂಬ ಮಕ್ಕಳೂ ಹುಟ್ಟಿದರು. ಯಯಾತಿಯು ತನಗೆ ಅವಿಧೇಯರಾಗಿದ್ದ ಉಳಿದ ನಾಲ್ಕುಮಂದಿಗಳನ್ನೂ ಬಿಟ್ಟು, ಕನಿಷ್ಠನಾದ ಪೂರುವಿಗೆ ತನ್ನ ರಾಜ್ಯಾಭಿಷೇಕ ಮಾಡಿದನು. ಉಳಿದ ನಾಲ್ಕು ಮಂದಿಗಳನ್ನೂ ನಾಲ್ಕು ದಿಕ್ಕಿನ ರಾಜ್ಯಗಳಿಗಧಿಪತಿಗಳನ್ನು ಮಾಡಿದನು. ಒಳಿಕ ಚಂದ್ರವಂಶದಲ್ಲಿ ಆ ಯದು ಪೂರುಗಳಿಂದ ಯಾದವ ಪೌರವ ಎಂದು ಎರಡು ಶಾಖೆಗಳುಂಟಾದುವು. ಪೌರವಸಂತತಿಯು ಹೇಗೆಂದರೆ— ಮೇಲೆ ಹೇಳಿದ ಪೂರುವಿಂದ ಜನಮೇಜಯನು, ಅವನಿಂದ ಪ್ರಜಿಹ್ವನು, ಅವನಿಂ ಸಂಯಾತಿ, ಅವನಿಂ ಪಂಪಾತಿ, ಅವನಿಂದ ಸಾರ್ವಭೌಮ, ಅವನಿಂ ಅಯುತಾನೀಕ, ಅವನಿಂದ ಕ್ರೋಧ, ಆತನಿಂದ ದೇವಾತಿ, ಅವನಿಂ ರುಚಿಕ, ಆತನಿಂದ ಋಕ್ಷ, ಅವನಿಂ ಮತಿವರ, ಅವನಿಂದ ತೃಷ್ಣ, ಅವನಿಂ ಇಲ, ಅವನಿಂದ ದುಷ್ಯಂತ, ಅವನಿಂ ಭರತ, ಅವನಿಂ ಸುಹೋತ್ರ, ಅವನಿಗೆ ಹಸಿ, ಅವನಿಗೆ ವಿಲೋಚನ, ಅವನಿಂದ ಅಜಾಮಿಳ, ಅವನಿಂ ಸಂವರಣ, ಆತನಿಗೆ ತಪತಿಯೆಂಬ ಹೆಂಡತಿಯಲ್ಲಿ ಕುರು, ಅವನಿಂದ ಪರೀಕ್ಷಿತ, ಅವನಿಂದ ಭೀಮಸೇನ, ಅವನಿಂದ ಪ್ರದೀಪ, ಅವನಿಗೆ ಶಂತನು ಮಗನಾಗಿ ಹುಟ್ಟಿದರು. ಆ ಶಂತನಿಗೆ ಪ್ರಭಾಸನೆಂಬ ವಸುವು ವಸಿಷ್ಠನ ಶಾಪದಿಂದ ಮಗನಾಗಿ ಹುಟ್ಟಿದನು. ಆ ಮಗ

ನಿಗೆ ತಂದೆಯು ಭೀಷ್ಮನೆಂದು ಹೆಸರಿಟ್ಟನು. ಈತನು ಪರಾಕ್ರಮಶಾಲಿಯಾಗಿ ರಾಜ್ಯವನ್ನಾಳುತ್ತಿದ್ದನು. ಅದ್ರಿಕೆ ಯೆಂಬ ದೇವನಾರಿಯೊಬ್ಬಳು ಬ್ರಹ್ಮನ ಶಾಪದಿಂದ ಹೆಣ್ಣುಮೀನಾಗಿ ಗಂಗಾನದಿಯಲ್ಲಿ ವಿಹರಿಸುತ್ತಿದ್ದಳು. ಅಂತರಿಕ್ಷದಲ್ಲಿ ಸಂಚರಿಸುತ್ತಿದ್ದ ಒಬ್ಬ ವಸುವಿನ ಇಂದ್ರಿಯವು ಗಂಗಾನದಿಯಲ್ಲಿ ಬೀಳಲು, ಅದನ್ನು ಈ ಮತ್ಸ್ಯವು ನುಂಗಿ ಗರ್ಭವನ್ನು ಧರಿಸಿತು. ಬೆಸ್ತನೊಬ್ಬನು ಬಂದು ಬೀಸಿದ ಬಲೆಗೆ ಆ ಮೀನು ಸಿಕ್ಕಿತು. ಅದನ್ನು ಮನೆಗೆ ತಂದು ಸೀಳುವಲ್ಲಿ ಹೆಣ್ಣು ಗಂಡು ಕೂಸುಗಳಿರಡಿದ್ದುವು. ಬೇಡನು ಅವನ್ನು ದೊರೆಗೊಪ್ಪಿಸಲು, ಆತನು ಗಂಡುಕೂಸನ್ನು ತಾನಿಟ್ಟುಕೊಂಡು, ಅದಕ್ಕೆ ಮತ್ಸ್ಯರಾಜನೆಂದು ಹೆಸರನ್ನು ಕರೆದು, ಹೆಣ್ಣನ್ನು ಬೆಸ್ತನಿಗೆ ಕೊಟ್ಟುಬಿಟ್ಟನು. ಆ ಕೂಸಿಗೆ ಮತ್ಸ್ಯಗಂಧಿಯೆಂದು ಅವನು ಹೆಸರನ್ನು ಕರೆದನು. ನದೀತೀರದಲ್ಲಿ ಪರಾಶರಮಹರ್ಷಿಯು ಈಕೆಯೊಡನೆ ಕೂಡಲು, ವೇದವ್ಯಾಸನು ಅವಳ ಗರ್ಭದಲ್ಲಿ ಜನಿಸಿದನು. ಈ ಮತ್ಸ್ಯಗಂಧಿಯು ಕಾಡಿನಲ್ಲಿ ವಿಹರಿಸಿಕೊಂಡಿರಲು, ಶಂತಚಕ್ರವರ್ತಿಯು ಬೇಟೆಯಾಡುತ್ತಿದ್ದು ಇವಳನ್ನು ಕಂಡು ಹೊಗಿಸಿ ಕರೆಯಲು, ಆಕೆಯು ಒಲ್ಲದೆ ತಿರಸ್ಕರಿಸಿದಳು. ಬಳಿಕ ಭೀಷ್ಮನು ಆಕೆಯನ್ನು ಶಂತನಿಗೆ ಪಕವಾಡಿಕೊಟ್ಟನು. ಅವಳ ಹೊಟ್ಟೆಯಲ್ಲಿ ಚಿತ್ರಾಂಗದ ವಿಚಿತ್ರವೀರ್ಯರೆಂಬ ಇಬ್ಬರುಮಕ್ಕಳು ಹುಟ್ಟಿದರು. ಇವರು ಶತ್ರುಗಳಿಂದ ಹತರಾದನಂತರ, ಅವರ ಹೆಂಡತಿಯರು ವೇದವ್ಯಾಸನಿಂದ ಗರ್ಭವನ್ನು ಧರಿಸಿ, ಧೃತರಾಷ್ಟ್ರ, ಪಾಂಡು, ವಿದುರ, ಎಂಬ ಮೂರುಮಂದಿ ಮಕ್ಕಳನ್ನು ಹೆತ್ತರು. ಧೃತರಾಷ್ಟ್ರನಿಗೆ ಕೌರವ ಮೊದಲಾದ ನೂರುಮಂದಿ ಮಕ್ಕಳು ಹುಟ್ಟಿದರು. ಪಾಂಡುವಿಗೆ ಧರ್ಮರಾಜ ಮೊದಲಾದ ಐದುಮಂದಿ ಮಕ್ಕಳಾದರು. ಋಷಿಯ ಶಾಪದಿಂದ ಪಾಂಡುರಾಜನು ಸಾಯಲು, ಕೌರವರಿಗೂ ಪಾಂಡವರಿಗೂ ಮತ್ಸರವು ಬಳೆದು, ಕೌರವರು ಕಪಟದಿಂದ ರಚಿಸಿದ್ದ ಅರಗಿನಮನೆಯಿಂದ ಪಾಂಡವರು ತಪ್ಪಿಸಿಕೊಂಡು, ಅರಣ್ಯದಲ್ಲಿ ವಾಸವಾಗಿದ್ದು, ಅಲ್ಲಿ ಹಿಡಿಂಬನೆಂಬ ರಾಕ್ಷಸನನ್ನು ಕೊಂದು, ಬ್ರಾಹ್ಮಣಾಗ್ರಹಾರವನ್ನು ಲಯಗೊಳಿಸುತ್ತಿದ್ದ ಬಕಾಸುರನನ್ನು ಸಹ್ಮರಿಸಿ, ದ್ರೌಪದಿಯನ್ನು ಮದುವೆಯಾಗಿ ಬಂದು, ಕೌರವರನ್ನು ಸೋಲಿಸಿ, ಇಂದ್ರಪ್ರಸ್ಥಪಟ್ಟಣವನ್ನು ಪಡೆದು

ರಾಜ್ಯವನ್ನಾಳುತ್ತಿದ್ದು, ಕಡೆಗೆ ಕೌರವನೊಡನೆ ಜೂಜಾಡಿ, ರಾಜ್ಯವ ನ್ನೆಲ್ಲ ಸೋತು, ಮತ್ತೆ ೧೨ ವರ್ಷಗಳವರೆಗೆ ಅರಣ್ಯವಾಸವನ್ನೂ ೧ವರ್ಷ ಅಜ್ಞಾತವಾಸವನ್ನೂ ಮಾಡಿ, ಅವರಲ್ಲಿ ಛಿನೆಯವನಾದ ಅರ್ಜುನನೇ ಶತ್ರು ವಿಜಯಕ್ಕಾಗಿ ಶಿವನನ್ನು ಕುರಿತು ತಪಸ್ಸು ಮಾಡಿ ಪಾಶುಪತಾಸ್ತ್ರವ ನ್ನು ಪಡೆದನು. ಬಳಿಕ ಪಾಂಡವರು ಕೌರವರಮೇಲೆ ಯುದ್ಧ ಮಾಡಿದರು. ದುಷ್ಟನಿಗ್ರಹವನ್ನು ಮಾಡಿ ಭೂಭಾರವನ್ನು ತಪ್ಪಿಸುವುದಕ್ಕಾಗಿ ದ್ವಾರಕೆ ಯಲ್ಲಿ ಮನುಜಾಕಾರದಿಂದ ಅವತರಿಸಿದ ವಿಷ್ಣುವೇತಾನಾದ ಕೃಷ್ಣನು ಅ ರ್ಜುನನಿಗೆಸಾರಥಿಯಾಗಿ ನಿಂತನು. ಆಮಹಾಯುದ್ಧದಲ್ಲಿ ಪಾಂಡವರುತಮ್ಮ ಅಣ್ಣ ಗುರು ತಾತ ಮೊದಲಾದ ಹಿರಿಯರನ್ನೆಲ್ಲ ಕೊಂದು ಗೆದ್ದರು. (ಲೋ ಕದಲ್ಲಿ ಹೊನ್ನು ಹೆಣ್ಣು ಮಣ್ಣಿನ ಆಸೆಯು ಯಾವ ಕೃತ್ಯವನ್ನು ತಾನೇ ಮಾಡಿಸುವುದಿಲ್ಲ?) ಹೀಗೆ ಭೂಮಿಯಾಸೆಗಾಗಿ ಪಾಂಡವರು .ಕಷ್ಟಪಟ್ಟ ರು. ಇನ್ನು ಹೆಣ್ಣಿನಾಸೆಗಾಗಿ ಕಷ್ಟಪಟ್ಟವರ ಕಥೆಯನ್ನು ಕೇಳು— ಬ್ರ ಹ್ಮನ ಪುತ್ರನಾದ ಮರೀಚಿಬ್ರಹ್ಮನಿಂದ ಕಶ್ಯಪನು ಹುಟ್ಟಿದನಷ್ಟೆ. ಅವನ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳೊಳಗೆ ವಿವಸ್ವತನೆಂಬುವನೊಬ್ಬನಿದ್ದನು. ಅವನಿಗೆ ಹುಟ್ಟಿದ ೪ ಮಂದಿ ಮಕ್ಕಳಲ್ಲಿ ವೈವಸ್ವತಮನುವು ಹಿರಿಯನು. ಅವನಿಗೆ ಇಕ್ಷ್ವಾಕು ಮೊದಲಾದ ೯ ಮಂದಿ ಮಕ್ಕಳು. ಹಿರಿಯ ಇಕ್ಷ್ವಾ ಕುವಿಗೆ ನಿಮಿ ವಿಕುಕ್ಷಿಗಳೆಂಬ ಮಕ್ಕಳಾದರು. ವಿಕುಕ್ಷಿಯ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಲ್ಲಿ ಕಕುತ್ಸ್ಥನು ಹಿರಿಯನು. ಅವನಿಗೆ ಸುಯೋಧನನೆಂ ಬ ಮಗನು. ಅವನಿಗೆ ಪೃಥುವೆಂಬ ಸುತನು, ಅವನಿಗೆ ವಿಶ್ವಕನು, ಅವ ನಿಂದ ಆರ್ದ್ರಕನು. ಅವನಿಂದ ಯುವನಾಶ್ವನು, ಅವನಿಂ ಶ್ಯಾವಸ್ತಿಯು, ಅವನಿಂದ ಬೃಹದಶ್ವನು, ಅವನಿಂ ಕುವಲಾಶ್ವನು, ಅವನಿಂ ದಂಧುಮಾ ರನು, ಅವನಿಂ ದೃಢಾಶ್ವನು, ಅವನಿಗೆ ಪ್ರಮೋದನು, ಅವನಿಂದ ಹರ್ಯ ಶ್ವನು, ಅವನಿಗೆ ನಿಕುಂಭನು, ಅವನಿಂ ಸಂಹತಾಶ್ವನು, ಅವನಿಂದ ಕೃಶಾಶ್ವ ರಣಾಶ್ವರು, ರಣಾಶ್ವನಿಗೆ ಯುವನಾಶ್ವನು, ಅವನಿಂದ ಮಾಂ ಧಾತನು, ಅವನಿಂದ ಅಂಬರೀಷ, ಪುರುಕುತ್ಸ, ಮುಚುಕುಂದ, ಎಂ ಬ ಮೂವರು ಮಕ್ಕಳಾಗಿ ಹುಟ್ಟಿದರು. ಪುರುಕುತ್ಸನ ಸಂತತಿಯಲ್ಲಿ ಸ ತ್ಯವ್ರತನು ಹುಟ್ಟಿದನು. ಅವನಿಗೆ ತ್ರಿಶಂಕುವು ಜನಿಸಿದನು. ಅವನಿಂದ

ಸತ್ಯವ್ರತೆಯೆಂಬ ಹೆಂಡತಿಯಲ್ಲಿ ಹರಿಶ್ಚಂದ್ರನು ಹುಟ್ಟಿದನು. ಅವನಿಗೆ ಲೋಹಿತಾಶ್ವನು, ಅವನಿಂದ ಹರಿತನು, ಅವನಿಗೆ ದುನ್ದುವು, ಅವನಿಗೆ ವಿಜಯ ಸುತೇಜರೂ, ಅವರಲ್ಲಿ ವಿಜಯನಿಗೆ ರುಚಕನೂ, ಅವನಿಗೆ ಬಾಹುವೂ, ಅವನಿಂದ ಸಗರನೂ ಹುಟ್ಟಿದರು. ಅವನಿಗೆ ಪ್ರಭೆ ಭಾನುಮತಿ ಯರೆಂಬ ಇಬ್ಬರು ಹೆಂಡತಿಯರು, ಬಡಬಾಗ್ನಿಯ ಅನುಗ್ರಹದಿಂದ ಪ್ರಭೆ ಯಲ್ಲಿ ೬೦ ಸಾವಿರಮಕ್ಕಳನ್ನೂ, ಭಾನುಮತಿಯಲ್ಲಿ ಅಸಮಂಜಸನೆಂಬ ವಂ ಶೋದ್ಧಾರಕನಾದ ಮಗನೊಬ್ಬನನ್ನೂ ಪಡೆದನು. ಅಸಮಂಜಸನಿಗೆ ಅಂಶು ಮಾನೆಂಬ ಮಗನಾದನು. ಅವನಿಗೆ ದಿಲೀಪನು, ಅವನಿಂದ ಭಗೀರಥನು ಜನಿಸಿದರು. ಇವನ ವಂಶದಲ್ಲಿ ಹುಟ್ಟಿದ ದೀರ್ಘಬಾಹು (ಅಥವಾ ಸ್ಥೂಲಬಾಹು) ಎಂಬುವನಿಗೆ ಅಜಮಹಾರಾಜನು ಮಗನಾದನು. ಅವನ ಮಗನು ರಘುವು, ಅವನಿಗೆ ಅಜನು ಪುತ್ರನು. ಅವನಿಂದ ದಶರಥನು ಹುಟ್ಟಿದನು. ಅವನಿಗೆ ರಾಮ ಲಕ್ಷ್ಮಣ ಭರತ ಶತ್ರುಘ್ನರೆಂಬ ನಾಲ್ಕುಮಂದಿ ಮಕ್ಕಳಾದರು. ಹಿರಿಯನಾದ ರಾಮನು ಬಾಲಲೀಲೆಯನ್ನು ಕಳೆದು ತಾಟಕಿಯೆಂಬ ರಾಕ್ಷಸಿಯನ್ನು ಕೊಂದು, ಭೂಪುತ್ರಿಯಾದ ಸೀತೆಯನ್ನು ಮದುವೆಯಾಗಿ ಬರುತ್ತಿರುವಾಗ, ಪರಶುರಾಮನು ಅಡ್ಡಗಟ್ಟಲು, ಅವನ ಬಿಲ್ಲನ್ನು ಕಿತ್ತು, ಪುರವನ್ನು ಹೊಕ್ಕು, ತನ್ನ ಪಟ್ಟಾಭಿಷೇಕಸಮಯದಲ್ಲಿ ತಂದೆಯಾಜ್ಞೆಯು ಪಾಲನೆಗಾಗಿ ವನಕ್ಕೆ ಹೋಗಿ, ತನ್ನ ತಮ್ಮಂದಿರು ಕರೆದರೂ ಪಟ್ಟಣಕ್ಕೆ ಬರದೆ, ಹಿರಿಯ ತಮ್ಮನಾದ ಲಕ್ಷ್ಮಣನೊಡನೆಯೂ ಹೆಂಡತಿಯೊಡನೆಯೂ ವನವಾಸವಮಾಡಿಕೊಂಡಿರುತ್ತ, ಅಲ್ಲಿ ಶೂರ್ಪನಖಿಯೆಂಬ ರಾಕ್ಷಸಿಯ ಮೂಗನ್ನು ಕೊಯ್ದು, ಖರ ದೂಷಣ ತ್ರಿಶಿರಾದಿ ರಾಕ್ಷಸರನ್ನು ಕೊಂದು, ಹೊಂಬಣ್ಣದ ಜಿಂಕೆಯೊಂದನ್ನು ಕಂಡು, ಅದರ ಬೆನ್ನಟ್ಟಿ ಹೋದಾಗ, ತನ್ನ ಪತ್ನಿಯನ್ನು ರಾಕ್ಷಸನೊಬ್ಬನು ಕದ್ದೊಯ್ಯಲು, ಹಿಂದಿರುಗಿಬಂದು ಸೀತೆಯನ್ನು ಕಾಣದೆ, ಅತಿಶಯವಾಗಿ ರೋದಿಸಿ, ಹಂಬಲಿಸಿ, ಅಲ್ಲಲ್ಲಿ ತಡಕಿ, ಬಳಿಕ ಹನುಮಂತನು ದೊರೆಯಲು, ಆದೂತನ ಮುಖದಿಂದ ಸೀತೆಯು ರಾವಣನ ಅಧೀನವಲ್ಲಿರುವಳೆಂದು ತಿಳಿದು, ಸುಗ್ರೀವನ ಸಹಾಯದಿಂದ ಸಮುದ್ರಕ್ಕೆ ಸೇತುವನ್ನು ಕಟ್ಟಿ, ದಾಂಟಿ, ಲಂಕೆಗೆ ಹೋಗಿ, ರಾವಣ ಕುಂಭಕರ್ಣಾದಿರಾಕ್ಷಸರನ್ನೆಲ್ಲ ಸಹ್ಮರಿಸಿ, ರಾವಣನ ತಮ್ಮನಾದ ವಿಭೀ

ಷಣನಿಗೆ ಅಲ್ಲಿಯ ಪಟ್ಟವನ್ನು ಕಟ್ಟಿ, ಹೆಂಡತಿಯನ್ನು ಕರೆದುಕೊಂಡು ಬಂದನು. ಹೆಣ್ಣಿಗಾಗಿ ಕಷ್ಟಪಟ್ಟವನೇ ಇವನು, ಎಂದು ಚೆನ್ನಬಸವೇಶನು ನುಡಿಯಲು, ಸಿದ್ಧರಾಮೇಶನು- ಎಲೆ ಗುರುವೆ, ಇವೆರಡು ವಂಶದವರಲ್ಲಿ ಅತಿದಾನಧರ್ಮ ಪರೋಪಕಾರಗಳನ್ನು ಮಾಡಿ ಭೂಮಿಯನ್ನು ಆಳಿದವರಾರು ? ಚಕ್ರವರ್ತಿಗಳಾಗಿದ್ದವರಾರು ? ಅವರಲ್ಲಿ ಸತ್ಕೀರ್ತಿವಂತರಾರು? ಕೆಟ್ಟವರಾರು ? ಅದನ್ನು ನಿರೂಪಿಸಬೇಕೆಂದು ಕೇಳಿಕೊಳ್ಳಲು, ಚೆನ್ನಬಸವೇಶನು- ಅಯ್ಯಾ ! ಅವರಲ್ಲಿ ಪರಿಶ್ಚಂದ್ರ ನಳ ಪುರೂರವ ಸಗರ ಪುರುಕುತ್ಸ ಕಾರ್ತವೀರ್ಯ ಎಂಬ ಈ ಆರುಮಂದಿಗಳೇ ಚಕ್ರವರ್ತಿಗಳು; ಸುಹೋತ್ರ ಮರುತ್ಸಂತ ಭರತ ಗಯ ಶಶಿ ಬಿಂದು ಅಂಬರೀಷ ದಿಳೀಪ ರಘು ರಾಮ ಭಗೀರಥ ರಂತಿದೇವ ಯಯಾತಿ ನಹುಷ ದಂತಿ ಪೃಥು ಮಾಂಧಾತ ಎಂಬ ೧೬ ಮಂದಿಗಳು ಮಹಾರಾಜರು; ಜನಕ ದಶರಥ ಶಂತನು ಮೊದಲಾದವರು ಸಹಸ್ರಮಂದಿ ರಾಜರುಗಳು; ಈ ಭೂತಲದಲ್ಲಿ ನಳನೂ ಧರ್ಮರಾಯನೂ ಜೂಜಾಡಿಯೂ, ಯಾದವರು ಮದ್ಯಪಾನದಿಂದಲೂ, ಕೀಚಕ ವಾಲಿ ರಾವಣರು ಪರಸ್ತ್ರೀವ್ಯಾಮೋಹದಿಂದಲೂ, ದಶರಥ ಪಾಂಡು ಭೂಪಾಲರು ಬೇಂಟೆಯ ವ್ಯಸನದಿಂದಲೂ, ದಕ್ಷನೂ ಬ್ರಹ್ಮನೂ ಶಿಶುಪಾಲನೂ ಪರದೂಷಣೆಯಿಂದಲೂ, ಚಂದ್ರನೂ ತ್ರಿಶಂಕುವೂ ಗುರುದ್ರೋಹದಿಂದಲೂ ಕೆಟ್ಟರು. ಮಾಂಧಾತನು ಜೈಡಿದವರಿಗೆ ಕೊಟ್ಟೂ, ಕರ್ಣನು ಯುದ್ಧಾಂಕಣದಲ್ಲಿ ಕೃಷ್ಣನಿಗೆ ವಜ್ರಕವಚವನ್ನು ಕೊಟ್ಟೂ, ಗರುಡನು ಕಚ್ಚಿ ಕೊಂದ ಹಾವಿಗೆ ಪ್ರಾಣವನ್ನು ಕೊಟ್ಟುದರಿಂದ ಜೀಮೂತವಾಹನೂ, ಇಂದ್ರನಿಗೆ ಬೆನ್ನುಮೂಳೆಯನ್ನು ಕೊಟ್ಟುದರಿಂದ ದಧೀಚಿಯೂ, ವಾಮನಮೂರ್ತಿಗೆ ಭೂದಾನವನ್ನು ಮಾಡಿದುದರಿಂದ ಬಲಿಯೂ, ಕೀರ್ತಿಪುರುಷರಾದರು. ಅಷ್ಟೇ ಹೊರತು ಭಕ್ತಿಯಿಂದ ಇವರಾರೂ ಮೋಕ್ಷವನ್ನು ಪಡೆದವರಲ್ಲ. ಎಂದು ಚೆನ್ನಬಸವೇಶನು ನುಡಿದನೆಂಬಲ್ಲಿಗೆ ಐದನೆ ಅಧ್ಯಾಯವು ಸಂಪೂರ್ಣವು.



೨೨ ನೆ ಅಧ್ಯಾಯವು.

ಶೈವಕರಣರ ಕಥೆಗಳು.

ಒಳಕ ಸಿದ್ಧರಾಮೇಶನು ಚೆನ್ನಬಸವೇಶ್ವರನನ್ನು ಕುರಿತು– ತಾವು ದೇವಾಸುರಮನುಷ್ಯರಲ್ಲಿ ಮುಕ್ತಿಯನ್ನು ಪಡೆಯದೆ ಕೆಟ್ಟವರ ಚರಿತ್ರವನ್ನು ವಿವರಿಸಿದಿರಿ ; ಶೈವಮಾರ್ಗಾಚರಣದಿಂದ ಮುಕ್ತರಾದವರುಗಳ ಚರಿತ್ರವನ್ನು ಕೃಪೆಯಿಂದಪ್ಪಣೆಕೊಡಿಸಬೇಕೆಂದು ಬಿನ್ನೈಸಲು, ಚೆನ್ನಬಸವೇಶನು ಹೇಳಲುಪಕ್ರಮಿಸಿದನೆಂತೆಂದರೆ–ಇಂದ್ರದ್ಯುಮ್ನನೆಂಬ ವಿಷ್ಣುಭಕ್ತರಾಜನೊಬ್ಬನು ಹರಿಯನ್ನೇ ಧ್ಯಾನಿಸುತ್ತಿದ್ದನು. ಅವನ ಒಳಗೆ ಮಹಾ ಶಿವಭಕ್ತನಾದ ಅಗಸ್ತ್ಯರ್ಷಿಯು ಬರಲು, ದೊರೆಯು ಅವನನ್ನು ಕಂಡರೂ ಪ್ರತ್ಯುತ್ಥಾನಮಾಡದೆ ಅಲಕ್ಷೀಕರಿಸಿದುದರಿಂದ " ನೀನು ಮದಗಜವಾಗಿ ಹುಟ್ಟು " ಎಂದು ಋಷಿಯು ಶಾಪವನ್ನು ಕೊಟ್ಟನು. ಅದರಂತೆ ಹುಟ್ಟಿದ ಆನೆಯು ಬಂದುಕೊಳಕ್ಕೆ ಬಂದು, ನೀರನ್ನು ಕುಡಿಯುತ್ತಿರುವಲ್ಲಿ, ಒಳಗಿದ್ದ ಮೊಸಳೆಯು ಆನೆಯ ಕಾಲನ್ನು ಕಚ್ಚಿ ಎಳೆಯುತ್ತಿರಲು, ಗಜವು ಹೆದರಿ " ಹರೀ ! " ಎಂದು ಕೂಗಿಕೊಂಡಿತು. ವಿಷ್ಣುವು ಅಲ್ಲೇ ಪ್ರತ್ಯಕ್ಷನಾಗಿ, ಚಕ್ರವನ್ನು ಬಿಟ್ಟು ಮೊಸಳೆಯನ್ನು ಕತ್ತರಿಸಿದನು. ಆನೆಯು ಮೇಲಕ್ಕೆ ಬಂದು ವಿಷ್ಣುವಿನ ಪಾದಕ್ಕೆ ನಮಸ್ಕರಿಸಿ, ನನಗೆ ಮೋಕ್ಷವನ್ನು ಕೊಡೆಂದು ಬೇಡಿತು. ಹರಿಯು– ಅದು ನನ್ನಿಂದಾಗದು ; ನಾಗಕನ್ನಿಕೆಯರಿಗೆ ವರವನ್ನು ಕೊಟ್ಟ ಶಿವಲಿಂಗವೊಂದಿರುವುದು ; ರಾಜಹಂಸನೆಂಬ ಗುರುವಿನ ದೇಹದಮೇಲ ಜೇಡರ ಹಳುವು ಹರಿಯತ್ತಿರಲು, ಅದನ್ನು ಗುಣಗರ್ಭನೆಂಬ ಶಿಷ್ಯನು ನೋಡಿ, ತೆಗೆದು ಭೂಮಿಯಮೇಲಿಟ್ಟನು; ಆದನ್ನು ಗುರುವು ಕಂಡು, ನೀನೂ ಜೇಡರ ಹಳುವಾಗೆಂದು ಶಿಷ್ಯನಿಗೆ ಶಪಿಸಿದನು ; ಅದರಂತೆ ಜೇಡನಾಗಿರುವ ಹುಳುವು ಮುಕ್ತಿಪ್ರಾಪ್ತಿಗಾಗಿ ಆ ಲಿಂಗವನ್ನು ಸೇವಿಸುತ್ತಿರುವುದು ; ನೀನೂ ಅಲ್ಲಿಗೆ ಹೋಗಿ ಸೇವಿಸು, ಮೋಕ್ಷವು ಸಿದ್ಧವಾಗುವುದು, ಎಂದು ನುಡಿದು ಅಂತರ್ಧಾನಗೊಂಡನು. ಅದರಂತೆಯೇ ಆನೆಯು ಅಲ್ಲಿಗೆಹೋಗಿ ಲಿಂಗವನ್ನಾರಾಧಿಸುತ್ತಿದ್ದಿತು. ಜೇಡನು ಬೆಳಗಾಗುವುದರೊಳಗೆ ಲಿಂಗದ ಮೇಲ್ಗಡೆಯಲ್ಲೆಲ್ಲ ಹಂದರದಂತೆಯೂ ತೇ

ರಿನಂತೆಯೂ ಗೋಪುರದಂತೆಯೂ ತನ್ನನೂಲಿನಿಂದ ನೇದು ಅಲಂಕರಿಸುತ್ತಿದ್ದಿತು. ಆನೆಯು ನುಗ್ಗಿ ಅದೆಲ್ಲವನ್ನೂ ಕಿತ್ತುಹಾಕುತ್ತಿದ್ದಿತು. ಇದರಿಂದ ಜೇಡನು ಕೋಪಿಸಿ, ಆನೆಯಸುಂಡಿಲಿನಲ್ಲಿ ನುಗ್ಗಿ, ಮಿದುಳನ್ನು ಕೆರೆದುಹಾಕಲು, ಆನೆಯೂ ಸತ್ತಿತು ; ಜೇಡನೂ ಸತ್ತಿತು. ಆಗ ಶಿವನು ಅವೆರಡರ ಭಕ್ತಿಗೂ ಮೆಚ್ಚಿ ಪ್ರತ್ಯಕ್ಷನಾಗಿ, ನಿಮ್ಮಿಷ್ಟವೇನೆಂದು ಕೇಳಲು, ಸ್ವಾಮಿ ! ನಮ್ಮ ಹೆಸರಿನ ಜ್ಞಾಪಕಾರ್ಥವಾಗಿ ನೀನು " ತಿರುಕಾಳಹಸ್ತೀಶ್ವರ " ನೆಂಬ ಹೆಸರಿನಿಂದ ವಿಖ್ಯಾತನಾಗಿ, ನಮಗೆ ಮೋಕ್ಷವನ್ನು ಕೊಡಬೇಕೆಂದು ಬೇಡಿದುವು. ಆಗ ಶಂಕರನು—ಎಲೈಕರಿಯೆ ! ನೀನು ಕರಿಕಾಲ ಚೋಳನಾಗಿ ಹುಟ್ಟು; ಎಲೈ ಕಾಳನೆ ! ನೀನು ಕಳಚಂಗನಾಗಿ ಹುಟ್ಟು, ಆಜನ್ಮದಲ್ಲಿ ನಿಮ್ಮಿಬ್ಬರಿಗೂ ಮೋಕ್ಷವನ್ನು ಕೊಡುತ್ತೇನೆ, ಎಂದು ಅವೆರಡಕ್ಕೂ ಅಪ್ಪಣೆಮಾಡಿದನು. ಅದರಂತೆಯೇ ಅವೆರಡೂ ಹುಟ್ಟಿದುವು. ಶಿವಾರ್ಚನೆಗಾಗಿ ಎತ್ತಿಟ್ಟಿದ್ದ ಹೂವನ್ನು ಮೂಸಲಾಗಿ, ನಾಗಕನ್ಯೆಯರ ಶಾಪದಿಂದ ಸುರಿದ ಮಣ್ಣಿನ ಮಳೆಯಿಂದ ಸತ್ತ ಚೋಳರಾಜನ ಪತ್ನಿಯ ಹೊಟ್ಟೆಯಲ್ಲಿ ಕರಿಕಾಲಚೋಳನು ಹುಟ್ಟಿದನು. ಯೌವನದಶೆಯಲ್ಲಿ ಅತ್ಯಂತಪ್ರಬಲನಾಗಿ ಸಕಲರಾಜರನ್ನೂ ಬರಮಾಡಿಕೊಂಡು, ಉಕ್ಕಿಬರುತ್ತಿದ್ದ ಕಾವೇರೀನದಿಗೆ ಕಟ್ಟೆಯನ್ನು ಕಟ್ಟಿಸುವ ಕಾರ್ಯವನ್ನು ಜರುಗಿಸುತ್ತಿದ್ದನು. ಆಗ ಮುಕ್ಕಣ್ಣ ಚೋಳನೆಂಬ ಅರಸು ಮಾತ್ರ ಅಲ್ಲಿಗೆ ಬರದಿರಲು, ಅವನಭಾವಚಿತ್ರವನ್ನು ಬರೆಯಿಸಿ, ಅದರೊಳಗಣ ಕಣ್ಣನ್ನು ತಿವಿಯಲಾಗಿ, ಆ ರಾಜನ ಕಣ್ಣುಗುಡ್ಡೆಯು ಇದ್ದಕಡೆಯಲ್ಲೇ ಒಡೆದುಹೋಯಿತು. ಇದರಿಂದ ಆತನು ಭೀತನಾಗಿ, ಕರಿಕಾಲಚೋಳನ ಬಳಿಗೆ ಬಂದು, ತನ್ನಪರಾಧಕ್ಕೆ ಕ್ಷಮೆಯನ್ನು ಕೇಳಿಕೊಳ್ಳಲು, ಮುನ್ನಿನಂತೆ ಅವನಿಗೆ ಕಣ್ಣನ್ನು ಕೊಟ್ಟು ಕಟ್ಟೆಯಕೆಲಸವನ್ನು ಮಾಡಿಸುತ್ತಿದ್ದನು. ಅತ್ತ ಪ್ರಭಾಕರಚೋಳನೆಂಬ ರಾಜನು ಪ್ರತಿದಿನವೂ ಭಂಗಾರದ ಸಾವಿರ ಬಟ್ಟಲುಗಳಲ್ಲಿ ಷಡ್ರಸಾನ್ನಗಳನ್ನು ತುಂಬಿ ಸೂರ್ಯನ ಬಳಿಗೆ ಕಳುಹಿಸಿಕೊಡುತ್ತಿದ್ದನು. ಆತನು ಅದನ್ನೆಲ್ಲ ಉಂಡು ಬಟ್ಟಲುಗಳನ್ನು ಹಿಂದಕ್ಕೆ ಕಳುಹಿಸಿಕೊಡುತ್ತಿದ್ದನು.ಆಂತಹ ಪ್ರಭಾಕರಚೋಳನನ್ನು ಕಟ್ಟೆಯಕೆಲಸದ ಬಳಿಗೆ ಬರಮಾಡುವುದಕ್ಕಾಗಿ ಕರಿಕಾಲಚೋಳನು ಹೇಳ ಕಳುಹಿಸಲಾಗಿ, ಅವನು ತಿರಸ್ಕರಿ

ಸಿದನು. ಅದನ್ನು ಈತನು ಕೇಳಿ ಶಾಪವನ್ನು ಕೊಡಲಾಗಿ, ಸೂರ್ಯನ ಬಳಿಗೆ ಹೋಗುತ್ತಿದ್ದ ಬಟ್ಟಲುಗಳು ಎಂದಿನಂತೆ ಹೋಗದೆ ನಿಂತುಬಿಟ್ಟವು. ಆಗ ಸೂರ್ಯನು ತಡೆಯಾಗಿರುವುದರ ಕಾರಣವನ್ನು ತಿಳಿದು, ಪ್ರಭಾಕರ ಚೋಳನ ಬಳಿಗೆ ತಾನೇ ಇಳಿದು ಬಂದು, "ಅಯ್ಯಾ! ನೀನು ಶಿವಭಕ್ತರೊಡನೆ ವಿರೋಧವನ್ನು ಕಟ್ಟಿಕೊಳ್ಳಬಹುದೆ? ಅದರಿಂದಲೇ ಈ ಆಹಾರದ ಬಟ್ಟಲುಗಳು ನನ್ನ ಬಳಿಗೆ ಬರದಂತಾದುವು; ಈಗಳೇ ನೀನು ಕರಿಕಾಲಚೋಳನ ಬಳಿಗೆ ಹೋಗಿ, ಕಟ್ಟಿಯ ಕೆಲಸವನ್ನು ಮುಗಿಸಿ ಬಾ" ಎಂದು ಹೇಳಿ ಕಳುಹಿಕೊಟ್ಟನು. ಅದೇ ಕಟ್ಟಿಗೆ ಮಣ್ಣನ್ನು ಏರು ಹಾಕುವುದಕ್ಕಾಗಿ ಆ ಪೂರಿನ ಪಿಟ್ಟನ್ವೆ ಯೆಂಬುವಳ ಮನೆಯಲ್ಲಿ ಗಂಡುದಿಕ್ಕಿಲ್ಲದಿರಲು, ಶಿವನು ಅವಳ ಮನೆಗೆ ಹೋಗಿ, ಆಕೆಯಿಂದ ಕೂಲಿಗಾಗಿ ಆಹಾರವನ್ನು ಪಡೆದು, ಮಣ್ಣನ್ನು ಹೊತ್ತು, ಅವಳನ್ನು ಕೈಲಾಸಕ್ಕೆ ಕರೆದುಕೊಂಡು ಹೋದನು. ಆ ಸಂದರ್ಭದಲ್ಲಿ ಶಿವನು ಕೂಲಿಗಾರರಿಗೆ ಸರಿಯಾಗಿ ಕೆಲಸ ಮಾಡದೆ ಯಿರಲು, ರಾಜನ ಕಚೆಯ ಭಟರು ಬಂದು ಹೊಡೆಯಲಾಗಿ, ಆ ಪೆಟ್ಟುಗಳೆಲ್ಲವೂ ರಾಜನ ಪರಿವಾರದವರಿಗೆ ತಗುಲುತ್ತಿರಲು, ಆಗ ಈತನೇ ಶಿವನೆಂದು ತಿಳಿದು, ದೊರೆಯು ಶಂಕರನನ್ನು ಸ್ತೋತ್ರ ಮಾಡಿ ಮೆಚ್ಚಿಸಿ, ತನ್ನ ರಾಜ್ಯದಲ್ಲಿ ಹೊಸ್ತಿನ ಮಳೆಯು ಸುರಿವಂತೆ ಮಾಡಬೇಕೆಂತಲೂ, ತನ್ನ ಮನೆಯುಲ್ಲಾದ ನೈವೇದ್ಯಪದಾರ್ಥಗಳನ್ನು ಪ್ರತಿದಿನವೂ ನೀನು ಸಲಿಸಬೇಕೆಂತಲೂ ಪ್ರಾರ್ಥಿಸಲು, ಅದರಂತೆಯೇ ಆಗಲಿಯೆಂದು ಶಿವನು ವರವಿತ್ತನು. ಕರಿಕಾಲಚೋಳನು ಕಳುಹಿಕೊಟ್ಟ ಷಡ್ರಸಾನ್ನವನ್ನು ಪರಿಗ್ರಹಿಸಿ ಶಂಕರನು ತೆರೆಯ ಮರೆಯಲ್ಲಿ ಸವಿಯುತ್ತಿದ್ದನು. ಒಂದಾನೊಂದು ದಿನ ಆಹಾರವನ್ನು ಸಲಿಸವೆ ಶಿವನು ಸುಮ್ಮನಿರಲು, ದೊರೆಯು ಆ ಸಂಗತಿಯನ್ನು ತಿಳಿದು, ದೇವಾಲಯಕ್ಕೆ ಬಂದು, ಕತ್ತಿಯನ್ನು ಹಿರಿದು ನಿಂತು, ಅದೇಕೆ ಸವಿಯುವುದಿಲ್ಲವೆಂದು ಶಿವನನ್ನು ಕೇಳಲು, ನಾನು ಈದಿನ ಮಾವರಚೆನ್ನಯ್ಯನೊಡನೆ ಭುಂಜಿಸಿ ಬಂದೆನಾದಕಾರಣ ಹೊಟ್ಟೆಯು ತುಂಬಿ, ಇಲ್ಲಿನ ಉಪಹಾರಗಳನ್ನು ಸವಿಯುವುದಕ್ಕಾಗಲಿಲ್ಲವೆಂದು ಶಂಕರನು ನುಡಿವನು. ನಿನ್ನೊಡನೆ ಊಟಮಾಡಿದ ಚೆನ್ನಯ್ಯನೆಂಬ ಆ ಮಹಾತ್ಮನಾರು? ತೋರಿಸುವೇಕೆಂದು ಕೇಳಲು, ಪರಶಿವನು ಚಿತನನ್ನು

ಚೆನ್ನಯ್ಯನ ಮನೆಗೆ ಕರೆದುಕೊಂಡು ಹೋಗಿ ತೋರಿಸಿದನು. ಕರಿಕಾಲನು ಆತನನ್ನು ಕಂಡು ಪಾದಕ್ಕೆ ನಮಸ್ಕರಿಸಿ ಪರಿಪರಿಯಾಗಿ ಸ್ತುತಿಸಿದನು. ಪರಮೇಶನು ಅವರೀರ್ವರಿಗೂ ಕೈಲಾಸವಾಸವನ್ನು ದಯಪಾಲಿಸಿದನು.

ಅತ್ತ ಕಳಚಂಗಪೆರುಮಾಳೆಯೆಂಬ ರಾಜನ ಹೆಂಡತಿಯಾದ ಚೊಲ್ಲ ಡಿನಾಚಿಯೆಂಬುವಳು ದೇವಾಲಯದಲ್ಲಿ ಶಿವಪೂಜೆಗಾಗಿ ಇಟ್ಟಿದ್ದ ಹೂವನ್ನು ಕಂಡು ತೆಗೆದುಕೊಂಡು ಮೂಸಿನೋಡಲು, ತಮ್ಮಡಿಯು ಆಕೆಯ ಅಪರಾಧಕ್ಕಾಗಿ ಅವಳ ಮೂಗನ್ನು ಕತ್ತರಿಸಿದನು. ದೊರೆಗೆ ಈ ಸುದ್ದಿಯು ಮುಟ್ಟಲು, ಮೊದಲು ಹೂವನ್ನು ತೆಗೆದುಕೊಂಡುದು ಹಸ್ತವಾದುದರಿಂದ ಅದನ್ನು ಮೊದಲು ಶಿಕ್ಷಿಸದೆ, ಏನೆ ಅಪರಾಧವನ್ನು ಮಾಡಿದ ಮೂಗನ್ನು ಕತ್ತರಿಸಿದುದು ಸರಿಯಲ್ಲವೆಂದು ಹೇಳಿ, ಆಕೆಯ ಕೈಯನ್ನು ತಾನು ಕತ್ತರಿಸಿದನು. ಆಗ ಚಂದ್ರಶೇಖರನು ಆ ಮೂವರಿಗೂ ಕೈಲಾಸಪದವಿಯನ್ನು ಕರುಣಿಸಿದನು.

ಸತ್ಯೇಂದ್ರಚೋಳನೆಂಬ ರಾಜನಿಗೆ ಮಂತ್ರಲಕ್ಷ (ರಾಜಶೇಖರ) ನೆಂಬ ಮಗನಿದ್ದನು. ಅವನು ಮಂತ್ರಿಯ ಮಗನಾದ ಮಿತವಚನನೆಂಬ ತನ್ನ ಮಿತ್ರನೊಡನೆ ಹೊಸಕುದುರೆಯನ್ನೇರಿ, ರಾಜವೀಥಿಯಲ್ಲಿ ಉತ್ಸವಗೊಂಡು ಬರುತ್ತಿದ್ದನು. ಆಗ ತಿರುಕುಳನಾಚಿಯೆಂಬ ಭಕ್ತೆಯ ಮಗನಾದ ಶಂಕರನೆಂಬ ಸಣ್ಣ ಹುಡುಗನು ಬೀದಿಯಲ್ಲಾಡುತ್ತಿರಲು, ದೊರೆಮಗನ ಹಿಂದೆ ಬರುತ್ತಿದ್ದ ಮಂತ್ರಿಮಗನ ಕುದುರೆಯ ಕಾಲಿನ ಏಟಿನಿಂದ ಆ ಹುಡುಗನ ಕತ್ತು ಮುರಿದುಹೋಗಲು, ಅವನು ಸತ್ತನು. ನೀರಿಗೆ ಹೋಗಿದ್ದ ತಾಯಿಯು ಬಂದು, ಮಗನ ಅಳಿವನ್ನು ನೋಡಿ ಪ್ರಲಾಪಿಸಿ, ಮುಂಡವನ್ನು ಹಿಡಿದು ದೊರೆಯಬಳಿಗೆ ಬಂದು ದೂರನ್ನು ಹೇಳಿಕೊಳ್ಳಲು, ರಾಜನು ಮಗನನ್ನೂ ಮಂತ್ರಿಸುತನನ್ನೂ ಕರೆಯಿಸಿ ನಿಜಸ್ಥಿತಿಯನ್ನು ವಿಚಾರಿಸುವಲ್ಲಿ, ಮಿತವಚನನನು ತನ್ನ ಅಪರಾಧವೆಂದು ಒಪ್ಪಿಕೊಂಡರೂ, ಮಂತ್ರಲಕ್ಷನು—ತನ್ನ ಮಾತಿನಮೇರೆಗೆ ಕುದುರೆಯ ಸ್ವಾರಿಗೆ ಬಲಾತ್ಕಾರದಿಂದ ಮಂತ್ರಿಪುತ್ರನು ಬಂದ ಕಾರಣದಿಂದಲೂ, ಅವನಿಗಾದ ತಪ್ಪು ತನ್ನದೆಂದು ಮೊದಲೇ ತಾನು ಮಾತುಕೊಟ್ಟಿದ್ದುದರಿಂದಲೂ, ಈ ಅಪರಾಧದ ಶಿಕ್ಷೆಯು ತನಗಾಗಬೇಕೆಂದು ರಾಜಪುತ್ರನು ನುಡಿದನು. ಹಾಗಾದರೆ ಮಗನ ಶಿರಸ್ಸ

ನ್ನೇ ಕತ್ತರಿಸಿ ತಲೆಯನ್ನು ತಂದು ತೋರಿಸಬೇಕೆಂದು ಸತ್ಯೇಂದ್ರನು ಮಂತ್ರಿಗೆ ಅಪ್ಪಣೆಮಾಡಿದನು. ಅವನು ತನ್ನ ಮಗನು ಮಾಡಿದ ತಪ್ಪಿಗಾಗಿ ದೊರೆಯ ಮಗನನ್ನು ಕೊಲ್ಲಿಸಿ, ಅದನ್ನು ನೋಡಿಕೊಂಡಿರುವುದಕ್ಕಿಂತಲೂ ತನ್ನ ತಲೆಯನ್ನೇ ಮೊದಲು ತರಿದುಕೊಳ್ಳುವುದು ಲೇಸೆಂದು ಯೋಚಿಸಿ, ರಾಜಪುತ್ರನ ಶಿರಚ್ಛೇದನಕ್ಕಾಗಿ ಬೇರೊಬ್ಬ ದೂತನನ್ನು ನೇಮಿಸಿ, ತನ್ನ ಮನೆಯಲ್ಲಿ ತಾನು ಶಿರಚ್ಛೇದನವನ್ನು ಮಾಡಿಕೊಂಡನು. ಮಂತ್ರಲಕ್ಷನು ಶಿವಮಂತ್ರಸ್ಮರಣೆಮಾಡುತ್ತಿರುವ ತನ್ನ ಕೊರಲನ್ನು ಕತ್ತರಿಸಿ ದೂತನ ಕೈಗೆ ಕೊಟ್ಟನು. ಅವನ ಮುಂಡವನ್ನು ದೊರೆಯ ಒಳಗೆ ತಂದು ಇಡಲು, ತನ್ನ ಮಗನು ಅದುಹೇಗೆ ಶಿರಸ್ಸನ್ನು ಕತ್ತರಿಸಿಕೊಂಡನೆಂದು ರಾಜನು ಕೇಳುವಲ್ಲಿ, ದೂತನು— ಇದೋ ಹೀಗೆ ಕತ್ತರಿಸಿಕೊಂಡನೆಂದು ಹೇಳಿ ತೋರಿಸುತ್ತ, ತನ್ನ ಕತ್ತನ್ನೂ ಕತ್ತರಿಸಿ ಮುಂದಿಟ್ಟನು. ತನ್ನ ಮಗನ ೧ ತಲೆಗೆ ೨ ತಲೆಗಳು ಬಿದ್ದುದನ್ನು ಶಿರುಕಾಳನಾಚಿಯು ಕಂಡು, ಹೆಚ್ಚಿನ ತಲೆಗೆ ತನ್ನ ತಲೆಯನ್ನು ಒಪ್ಪಿಸಬೇಕೆಂದು ಯೋಚಿಸಿ, ತಾನೂ ಕೊರಲನ್ನು ಕೊಯ್ದು ಮುಂಡವನ್ನು ಮುಂದಿಟ್ಟಳು. ಅಷ್ಟುಹೊತ್ತಿಗೆ ಮಂತ್ರಿಯ ಶಿರಸ್ಸೂ ಅಲ್ಲಿಗೆ ಬಂದಿತು. ೫ ಶಿರಸ್ಸುಗಳೂ ಪಂಚಾಕ್ಷರವನ್ನು ಜಪಿಸುತ್ತಿದ್ದವು. ಮಂತ್ರಿಯು ತನ್ನ ಕತ್ತನ್ನು ನಿಷ್ಕಾರಣವಾಗಿ ಕತ್ತರಿಸಿಕೊಂಡನಾದಕಾರಣ, ಅವನ ಶಿರಸ್ಸಿಗೆ ತನ್ನ ತಲೆಯು ಸಮಾನಾಗಲಿ ಎಂದು ಹೇಳಿ ದೊರೆಯು ತನ್ನ ಕೊರಲನ್ನು ಕತ್ತರಿಸಿ ಮುಂದಿಟ್ಟನು. ಅಷ್ಟರಲ್ಲಿ ಮಿತಪಚನನು ಅಲ್ಲಿಗೆ ಬಂದು, ಈ ಅನರ್ಥಕ್ಕೆಲ್ಲ ತನ್ನ ಕುದುರೆಯು ತುಳಿದುದೇ ಮೂಲವಾದುದರಿಂದ, ನಾನು ಮೊದಲೇ ಸಾಯುವಿದ್ದುದು ತಪ್ಪು ಎಂದು ಯೋಚಿಸಿ, ತನ್ನ ಶಿರಸ್ಸನ್ನೂ ಕಡಿದಿಕ್ಕಿದನು. ಈ ಸುದ್ದಿಯು ರಾಣಿವಾಸಕ್ಕೆ ಮುಟ್ಟಲು, ರಾಜನ ಪೆಂಡತಿ ಅವ್ಯತವತಿಯೂ, ಯುವರಾಜನ ಪೆಂಡತಿ ಸರ್ವಮಂಗಳೆಯೂ, ಪತಿಮೋಹಿಮಂತ್ರಿಯ ಪತ್ನಿಯೂ, ಅವಳ ಸೊಸೆಯೂ ಸಹ ಬಂದು ತಮ್ಮ ತಮ್ಮ ಗಂಡಂದಿರ ಶಿರಸ್ಸಿನ ಮುಂದೆ ನಿಂತು, ತಮ್ಮ ತಮ್ಮ ಕುತ್ತಿಗೆಗಳನ್ನು ಕತ್ತರಿಸುತ್ತಿರುವಷ್ಟರಲ್ಲಿ, ಪರಶಿವನು ಪ್ರತ್ಯಕ್ಷನಾಗಿ, ಎಲ್ಲರಿಗೂ ಪ್ರಾಣದಾನಮಾಡಿ, ಕೈಲಾಸಕ್ಕೆ ಕರೆದುಕೊಂಡು ಹೋದನು.

ಕರವ್ಯೂರೆಂಬ ಪಟ್ಟಣದಲ್ಲಿ ಧರ್ಮಚೋಳನೆಂಬ ರಾಜನಿದ್ದನು. ಅವನಿಗೆ ಭೀಮಚೋಳನೆಂಬ ಮಗನಿದ್ದನು. ಅವನು ಒಂದುದಿನ ರಥವನ್ನೇರಿ ಹೋಗುತ್ತಿರಲು, ಅದರ ಚಕ್ರಕ್ಕೆ ಬಂದು ಎಳೆಗರುವು ಸಿಕ್ಕಿ ಸತ್ತಿತು. ಅದನ್ನು ದೊರೆಯು ಕೇಳಿ, ಮಗನನ್ನು ಕರತರಿಸಿ, ಅವನಪರಾಧಕ್ಕಾಗಿ ಅವನ ಕತ್ತನ್ನೇ ಛೇದಿಸಿದನು. ಆಗ ಶಿವನು ಪ್ರತ್ಯಕ್ಷನಾಗಿ ನಿನ್ನ ಇಷ್ಟವೇನೆಂದು ಕೇಳಲು, ಸತ್ತ ಕರುವಿಗೆ ಪ್ರಾಣದಾನವಾಗೆಂದು ಪ್ರಾರ್ಥಿಸಲು, ಹರನು ಅತನ ಮನೋಭಾವಕ್ಕೆ ಸಂತೋಷಿಸಿ, ರಾಜಪುತ್ರನಿಗೂ ಕರುವಿಗೂ ಪ್ರಾಣದಾನವಾಡಿ, ಎಲ್ಲರನ್ನೂ ಕೈಲಾಸಕ್ಕೆ ಕರೆದೊಯ್ದನು.

ಉತ್ತುಂಗಚೋಳನೆಂಬ ರಾಜನು ಶಿವನ ವರದಿಂದ ಐವಡಿಚೋಳನೆಂಬ ಮಗನನ್ನು ಪಡೆದಿದ್ದನು. ಅವನು ಒಂದುದಿನ ಬೀದಿಯಲ್ಲಿ ಆಡುತ್ತಿರುವಾಗ ಮದವೇರಿದ ಆನೆಯು ಓಡಿಬರುತ್ತಿರಲು, ಅದನ್ನು ತನ್ನ ಅಂಗುಷ್ಠದಿಂದ ಮೆಟ್ಟಿ ಕೊಂದು ಉರುಳಿಸಲು, ಈತನಶೌರ್ಯವನ್ನು ಉಳಿದರಾಜರೆಲ್ಲರೂ ಕೇಳಿ ಭಯಪಟ್ಟು ಪಲಾಯನಗೊಂಡರು. ಇದನ್ನು ಚೋಳನು ಕೇಳಿ, ನಾನು ಅವರನ್ನೋಡಿಸಿ ಮಹಾಪರಾಧವಾಡಿದೆನೆಂದು ಬಗೆದು, ತತ್ಪರಿಹಾರಕ್ಕಾಗಿ ಬಂದುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸಿ ಕೈಲಾಸವನ್ನು ಪಡೆದನು.

ರಾಜೇಂದ್ರಚೋಳನೆಂಬ ರಾಜನು ಚೋಳದೇಶದ ಪಾಂಡ್ಯದೇಶದ ಇತರ ರಾಜರನ್ನೆಲ್ಲ ಕೂಡಿಕೊಂಡು ಪ್ರತಿದಿನವೂ ದೇವೇಂದ್ರನ ಸಭೆಗೆ ಹೋಗಿಬರುತ್ತಿರಲು, ಒಂದುದಿನ ಸಭೆಯಿಂದ ಬರುವಾಗ ಬಾಗಿಲಲ್ಲಿ ಬಿಟ್ಟದ್ದ ಹಾವುಗೆಗಳಮೇಲೆ ತನ್ನ ಕುದುರೆಯನ್ನು ದಾಟಿಸಿಕೊಂಡು ಬಂದನು. ಇವನ ಅಹಂಕಾರವನ್ನು ದೇವೇಂದ್ರನು ಕಂಡು, ಅವನ ರಾಜ್ಯದಲ್ಲಿ ಮಳೆಯನ್ನೇ ಹುಯ್ಯದಂತೆ ನಕ್ಷತ್ರಗಳಿಗೆ ಕಟ್ಟುಮಾಡಿದನು. ತನ್ನ ದೇಶದಲ್ಲಿ ಅನಾವೃಷ್ಟಿಯುಂಟಾದುದನ್ನು ರಾಜೇಂದ್ರನು ಕಂಡು, ಅಮರಾವತಿಗೆ ಹೋಗಿ ಎಲ್ಲಾ ನಕ್ಷತ್ರಗಳನ್ನೂ ಇಂದ್ರನನ್ನೂ ಹಿಡಿತಂದು ಸೆರೆಯಲ್ಲಿಟ್ಟನು. ಇಂದ್ರನ ದಂಡು ದೊರೆಯ ಮೇಲೆ ಮುತ್ತಿತು. ಆಗ ಚೊಕ್ಕನಯ್ಯನೆಂಬ ಶರಣನು ತನ್ನ ಕ್ರಿಯಾಸಿದ್ಧಿಯಿಂದ ನರಿಯ ಹಿಂಡನ್ನು ಕುದುರೆಗಳನ್ನು ಮಾಡಿಕೊಡಲು, ಅವುಗಳ ಸಹಾಯದಿಂದ ರಾಜೇಂದ್ರಚೋ

ಳನು ದೇವಸೇನೆಯನ್ನೆಲ್ಲ ಸೋಲಿಸಿದನು. ಇಂದ್ರನು ನಾಚಿ, ಎಂದಿನಂತೆ ಅವನ ರಾಜ್ಯದಲ್ಲಿ ಮಳೆ ಹುಯ್ದುಕೊಂಡಿರುವಂತೆ ನಕ್ಷತ್ರಗಳಿಗೆ ಬೆಸಸಿದನು. ಇವೇ ರಾಜೇಂದ್ರಚೋಳನು ರೇವಣಸಿದ್ಧೇಶನಿಗೆ ತನ್ನ ಕುಮಾರಿಯನ್ನು ಕೊಟ್ಟು, ಶಿವಭಕ್ತರಿಗೆ ತನ್ನ ರಾಜ್ಯಸಂಪತ್ತನ್ನೆಲ್ಲ ದಾನಮಾಡಿ, ಕೈಲಾಸವನ್ನು ಹೊಂದಿದನು. ಪಾಂಡ್ಯಭೂಪನು ತನ್ನ ರಾಷ್ಟ್ರವನ್ನು ಚೊಕ್ಕನೈನಾರರ ಸೇವೆಗಾಗಿ ಒಪ್ಪಿಸಿ, ಶಿವಲೋಕವನ್ನು ಹೊಕ್ಕನು.

ತಿರುನೀಲಕಂಠನೆಂಬ ಶರಣನು ಜಡೆಯನೈನಾರರಿಗೂ ಯಸ್ಯಜ್ಞಾನಿದೇವಿಗೂ ಮಗನಾಗಿ ಹುಟ್ಟಿ, ನರಸಿಂಗವೊನೆಯೂರರಿಗೂ ನಂಬಿದೇವಿಗೂ ಸಾಕುಮಗನಾಗಿ, ಸಂಕಿಲೆ ಪರವೆ ಯೆಂಬ ಭಕ್ತೆಯರನ್ನು ವರಿಸಿ, ಆ ಪರವೆಯೆಂಬ ಮೋಹಪತ್ನಿಯ ಕುಚಕಲಶದಲ್ಲಿ ಶಿವನನ್ನು ನೆನೆದು ಮಾತನಾಡಿಸಿ, ದಿನವೊಂದಕ್ಕೆ ಬಂದು ಬೊಗಸೆಯ ಹೊನ್ನನ್ನು ಶಂಕರನಿಂದ ಪಡೆಯುತ್ತ, ಸೋಮಾಸಿಮಾರಯ್ಯನ ವ್ರಜಾಕಾರ್ಯಕ್ಕಾಗಿ ಶಿವನನ್ನು ಅವನ ಮನೆಗೆ ಕಳುಹಿಸಿಕೊಟ್ಟು, ಪೆರುಮಾಳಿಯಕುಮಂಬರನ್ನು ಜತೆಯಲ್ಲಿ ಕೂಡಿಕೊಂಡು ಕೈಲಾಸವನ್ನು ಸೇರಿದನು.

ಚೇರಮರಾಜನು, ಶರಣರಲ್ಲಿ ವಿಧೇಯತೆಯಿಲ್ಲದ ನಂಬ್ಯಣ್ಣನನ್ನು ಶಿವನು ಕೈಲಾಸಕ್ಕೆ ಕರೆದುಕೊಂಡುಹೋದನೆಂಬ ಸುದ್ದಿಯನ್ನು ಕೇಳಿ, ತನ್ನ ಬೊಕ್ಕಸವನ್ನೆಲ್ಲ ತಿರುನೀಲಕಂಠರಿಗೆ ಒಪ್ಪಿಸಿ, ಕೈಲಾಸಕ್ಕೆ ದಾಳಿಯಿಟ್ಟು ನಡೆದು ಶಿವನನ್ನು ಮೆಚ್ಚಿಸಿ ಸಾಲೋಕ್ಯವನ್ನು ಪಡೆದನು.

ಪೊನೆಯುಧರನೆಂಬ ಚೋಳನು ರಾಜ್ಯವನ್ನಾಳಿಕೊಂಡಿರುವಾಗ, ಒಬ್ಬ ಜಂಗಮನು ತನ್ನ ಪತ್ನಿಯು ಅಳಿದ ಶೋಕದಿಂದ ತಾನೂ ಮೃತನಾಗುವುದಕ್ಕೆ ಸಿದ್ಧನಾಗಿರಲು, ದೊರೆಯು ಆ ವಾರ್ತೆಯನ್ನು ಕೇಳಿ ಮರುಗಿ, ತನ್ನ ಸತಿಯನ್ನೇ ಆ ಜಂಗಮನಿಗೆ ಒಪ್ಪಿಸಿ, ವಸ್ತ್ರಾಭರಣಾದಿಗಳನ್ನಿತ್ತು, ಸೇವಿಸಿ, ಶಿವಾನುಗ್ರಹದಿಂದ ಕೈಲಾಸವನ್ನು ಸೇರಿದನು.

ಕೈವಲ್ಯಚೋಳನೆಂಬ ಭೂಪತಿಯು ಶತ್ರುಗಳ ಮೇಲೆ ದಂಡೆತ್ತಿ ಹೋಗಿ ಮೂರುವರ್ಷ ಕಾದಾಡುತ್ತಿರಲು, ತನ್ನ ದೇಶಕ್ಕೆ ಕ್ಷಾಮವು ತಟ್ಟಿತು. ಆಗ ಅವನ ಪ್ರಜೆಯಾದ ಶ್ರೀಮಂತಸೆಟ್ಟಿಯೊಬ್ಬನು ತನ್ನಲ್ಲಿದ್ದ ದ್ರವ್ಯವನ್ನೆಲ್ಲ ಪ್ರಜೆಗಳಿಗೆ ಕೊಟ್ಟು, ಕಾಪಾಡಲು, ಅದನ್ನು ದೊರೆಯು

ಕಂಡು, ಆ ಸೆಟ್ಟಗೇ ತನ್ನ ರಾಜ್ಯದ ಪಟ್ಟವನ್ನು ಕಟ್ಟಿ. ನೀನೇ ಈ ದೇಶವನ್ನೆಲ್ಲ ಸಲಹಿಕೊಂಡಿರೆಂದು ಬಿನ್ನೈಸಲು, ಅವನು ನನಗೆ ಬೇಡವೆಂದು ತಿರಸ್ಕರಿಸಿದನು. ಶಂಕರನು ಅವರೀರ್ವರಿಗೂ ಸಾಲೋಕ್ಯಪದವಿಯನ್ನು ದಯೆಪಾಲಿಸಿದನು.

ಮನುಜೇಂದ್ರಚೋಳನೆಂಬ ನರಪತಿಯು, ಪ್ರಸಲನೆಂಬ ಭಕ್ತೋತ್ತಮನು ತನ್ನ ಮನಸ್ಸಿನಲ್ಲೇ ದೇವಾಲಯವನ್ನು ನಿರ್ಮಿಸಿ, ಅಲ್ಲಿಗೆ ಶಿವನನ್ನು ಬಿಜಯಮಾಡಿಸಿ, ಆರಾಧಿಸುತ್ತಿರುವುದನ್ನು ತಿಳಿದು, ತಾನೂ ಅಸದೃಶವಾದ ಶಿವದೇವಾಲಯವನ್ನು ಕಟ್ಟಿಸಿ, ಲಿಂಗವನ್ನು ಪ್ರತಿಷ್ಠಿಸಿ, ಮಜ್ಜನಕ್ಕೆ ಎಣ್ಣೆಯನ್ನು ತೆಗೆವುದಕ್ಕಾಗಿ ಎಳ್ಳನ್ನು ಬಣಹಾಕಿರಲು, ಮುನಿರಾಜನೋರ್ವನು ಬಂದು ಆ ಎಳ್ಳನ್ನು ತಿಂದನು. ಕಾವಲುಗಾರರು ಆತನನ್ನು ಹಿಡಿತಂದು ದೊರೆಯ ಮುಂದೆ ನಿಲ್ಲಿಸಿ, ಅವನ ತಪ್ಪನ್ನು ಬಿನ್ನೈಸಲು, ಅದೇತಕ್ಕೆ ಹೀಗೆ ಮಾಡಿದೆ ಯೆಂದು ದೊರೆಯು ಕೇಳುವಲ್ಲಿ– ಸದಾಶಿವನಿಗೆ ಮಗನಾಗಿ ಹುಟ್ಟುವುದಕ್ಕೋಸುಗ ಹೀಗೆ ಮಾಡಿದೆನೆಂದು ಹೇಳಿದನು. ಹಾಗಾದರೆ ನಾನೂ ಶಿವಭಕ್ತನ ಮಗನಾಗಿ ಹುಟ್ಟುವುದಕ್ಕೆ ಇದು ಒಳ್ಳೆಯ ಉಪಾಯವೆಂದು ದೊರೆಯು ಯೋಚಿಸಿ, ಅವನ ಬಾಯೊಳಗಿದ್ದ ಎಳ್ಳನ ಕಾಳನ್ನೇ ತೆಗೆದುಕೊಂಡು ತಾನು ತಿಂದನು. ಇವರೀರ್ವರೂ ಎಳ್ಳನ್ನು ಕೆತ್ತಾಡುವಾಗ ಚೆಲ್ಲಿದ ಕಾಳನ್ನು, ಶಿವನು ಭಕ್ತವೇಷದಿಂದ ಬಂದು ಆಯ್ದು ತಿನ್ನುತ್ತಿರಲು, ಇವರಿಬ್ಬರೂ– ಅದೇಕೆ ಎಳ್ಳನ್ನಾರಿಸಿಕೊಂಡು ತಿನ್ನುತ್ತೀಯೆ? ಎಂದು ಆತನನ್ನು ಕೇಳಲು, ಭಕ್ತೋತ್ತಮರಾದ ನಿಮ್ಮಿಬ್ಬರಿಗೂ ಮಗನಾಗಿ ನಾನು ಹುಟ್ಟುವುದಕ್ಕಾಗಿ ತಿನ್ನುತ್ತೇನೆ, ಎಂದು ಉತ್ತರಕೊಟ್ಟು, ಅವರೀರ್ವರ ಭಕ್ತಿಗೂ ಮೆಚ್ಚಿ ಪ್ರತ್ಯಕ್ಷನಾಗಿ ಕೈಲಾಸಕ್ಕೆ ಕರೆದುಕೊಂಡು ಹೋದನು.

ವೀರಚೋಳನೆಂಬ ಭೂಪಾಲನು ಪ್ರತಿದಿನವೂ ಸಾವಿರ ತಾವರೆ ಹೂವುಗಳಿಂದ ಶಿವನನ್ನು ಪೂಜಿಸುತ್ತ, ಬಂದುದಿನ ಬಂದುಹೂವು ಸಾಲದಿರಲು, ತನ್ನ ಕೊರಲನ್ನೇ ಕತ್ತರಿಸಿ, ಶಿರಃಕಮಲವನ್ನು ಸ್ವಾಮಿಗೆ ಅರ್ಪಿಸಿ, ಶಿವಪುರವನ್ನು ಪಡೆದನು.

ಪಗಲ್ಚೋಳನು ತನ್ನ ಶತ್ರುಗಳ ಪೆಣವನ್ನು ಹೇರಿತಂದ ಬಂಡಿಯು

ಲ್ಲಿ, ರಕ್ತದಿಂದ ಜಡೆಕಟ್ಟಿದ್ದ ಮುಡಿಯ ತಲೆಯೊಂದನ್ನು ಕಂಡು, ಅದು ಜಂಗಮನ ಶಿರಸ್ಸೆಂದು ತಿಳಿದು, ಅದನ್ನು ಕತ್ತರಿಸಿದ ಅಪರಾಧಕ್ಕಾಗಿ ತನ್ನ ತಲೆಯನ್ನೇ ಕಡಿದು ಶಿವನ ಮೆಚ್ಚಿಗೆಯಿಂದ ಕೈಲಾಸವನ್ನು ಪಡೆದನು.

ವೀರಪಾಂಡ್ಯನು, ಶಿವನಿಗೆ ಪರ್ವತರಾಜನು ತನ್ನ ಮಗಳನ್ನು ಕೊಟ್ಟನೆಂಬ ಸುದ್ದಿಯನ್ನು ಕೇಳಿ, ತಪಸ್ಸಿನಿಂದ ತನ್ನ ಹೆಂಡತಿಯ ಗರ್ಭದಲ್ಲಿ ಪಾರ್ವತಿಯನ್ನು ಮಗಳಾಗಿ ಪಡೆದು, ಈಶ್ವರನಿಗೆ ಮದುವೆಮಾಡಿಕೊಟ್ಟು, ತನ್ನ ರಾಜ್ಯಕೋಶವನ್ನೆಲ್ಲ ಶಿವಶರಣರಿಗೆ ದಾನ ಮಾಡಿ, ಕೈಲಾಸವನ್ನು ಸೇರಿದನು.

ನೃಪಕುಲೋತ್ತುಂಗಚೋಳನು ತನ್ನ ಪಟ್ಟಣದಲ್ಲಿ ಒಬ್ಬ ರೋಗಿಯೂ ಇರದಂತೆ ಮಾಡಿರಬೇಕೆಂಬ ನಿಯಮದಿಂದಿರಲು, ಒಂದುದಿನ ಕುಷ್ಠರೋಗದ ಜಂಗಮನೊಬ್ಬನು ಬಂದುದನ್ನು ಕಂಡು, ತನ್ನ ವ್ರತಕ್ಕೆ ಭಂಗವಾಯ್ತೆಂದು ಚಿಂತಿಸಿ, ತನ್ನ ತಲೆಯನ್ನೇ ಕತ್ತರಿಸಿಕೊಂಡು ಶಿವಾನುಗ್ರಹದಿಂದ ಶಿವಲೋಕವನ್ನು ಪಡೆದನು.

ಶ್ರೀಕಾಳಿಯೆಂಬ ಪಟ್ಟಣವಲ್ಲಿ ಜನಿಸಿದ್ದ ತಿರುಜ್ಞಾನಸಂಬಂಧಿಗಳು ಉತ್ತುಂಗಚೋಳರಾಜನಿಗೆ ಗುರುವಾಗಿದ್ದರು. ಈ ಚೋಳನ ಮಗಳಾದ ಮಂಗಾಯಕ್ಕರಸಿಯು ಜೈನಮತದವನಾದ ಮಧುರೆಯ ಕೂನಪಾಂಡ್ಯನಿಗೆ ಹೆಂಡತಿಯಾಗಿರಲು, ಒಂದಾನೊಂದುವೇಳೆ ಆಕೆಯು ತನ್ನ ತವರುಮನೆಯ ಗುರುವಾದ ತಿರುಜ್ಞಾನಸಂಬಂಧಿಗಳನ್ನು ತನ್ನ ಗಂಡನ ಪಟ್ಟಣಕ್ಕೆ ಬರಮಾಡಲು, ಈ ಗುರುವು ಅಲ್ಲಿನ ಜೈನರನ್ನೆಲ್ಲ ಸಭೆಯಲ್ಲಿ ವಾದದಿಂದ ಜೈಸಿದನು. ವಿಧೇಯರಾದವರಿಗೆಲ್ಲ ಶಿವದೀಕ್ಷೆಯನ್ನು ಮಾಡಿದನು. ಪ್ರತಿಭಟಿಸಿದವರನ್ನೆಲ್ಲ ದೊರೆಯ ಮಂತ್ರಿಯಾದ ಕುಲಚ್ಚರಿಯರು ಶೂಲಕ್ಕೆತ್ತಿಸಿದನು. ರಾಜನೂ ಶಿವದೀಕ್ಷೆಗೊಂಡನು. ದೊರೆಯ ಕೂನಾಗಿದ್ದ ಬೆನ್ನು ಗುರುವಿನ ಅನುಗ್ರಹದಿಂದ ನೆಟ್ಟಗಾಯಿತು. ಒಳಿಕ ಪಾಂಡ್ಯನು ತನ್ನ ಹೆಂಡತಿಯ ಹೊಟ್ಟೆಯಲ್ಲಿ ಮಗಳನ್ನು ಪಡೆದು ಅವಳನ್ನು ಶಿವನಿಗೆ ಸಮರ್ಪಿಸಿ, ತಿರುಜ್ಞಾನಸಂಬಂಧಿಗಳೂ ತಾನೂ ತನ್ನ ಹೆಂಡತಿಯು ಸಹ ಕೈಲಾಸವನ್ನು ಹೊಂದಿದರು.

ತಿರುವಾವಲೂರಿನಲ್ಲಿದ್ದ ತಿರುವಲಿನಾಚಿಯೆಂಬ ಭಕ್ತೆಯು, ತನ್ನ ತ

ಮ್ಮನಾದ ಪಾರ್ಶ್ವನಾಥಪಂಡಿತನೆಂಬುವನಿಗೆ ಉದರಶೂಲರೋಗವು ಪ್ರಾಪ್ತವಾಗಿದ್ದಾಗ್ಗೆ, ಶಿವಭಕ್ತಿಮಾರ್ಗವನ್ನು ಹೇಳಿ, ವಿಭೂತಿರುದ್ರಾಕ್ಷಧಾರಣಗಳಿಂದ ಆ ರೋಗವನ್ನು ಹೋಗಲಾಡಿಸಿ, ತನ್ನ ಗುರುವಾದ ವಾಗೀಶನೈನಾರಿಗೆ ತಮ್ಮನನ್ನು ಶಿಷ್ಯನನ್ನಾಗಿ ಮಾಡಿ, ಶಿವದೀಕ್ಷೆಗೊಳಿಸಿದಳು. ಆತನು ತಿರುವಾಕರೀಶ್ವರನೆಂಬ ಹೆಸರಿನಿಂದ ಶಿವಭಕ್ತನಾಗಿದ್ದು ಕಡೆಗೆ ಅಕ್ಕನೊಡನೆ ಕೈಲಾಸವನ್ನು ಹೊಂದಿದನು.

ಸುಂದರನಂಬ್ಯಣ್ಣನು ಭಕ್ತರಲ್ಲಿ ಅಹಂಕಾರವನ್ನು ತೋರಿಸಿದಕಾರಣ, ಮೆರೆಮಿಂಡದೇವನು ಆತನಿಗೆ ಬಹಿಷ್ಕಾರವನ್ನು ಕೊಟ್ಟನು. ಶಿವನ ಉಪದೇಶದಿಂದ ನಂಬ್ಯಣ್ಣನು ಶಿವಶರಣರನ್ನು ಸ್ತೋತ್ರಮಾಡಲು, ಅವರಿಬ್ಬರನ್ನೂ ಶಿವನು ತನ್ನಲೋಕಕ್ಕೆ ಕರೆದೊಯ್ದನು. ನಂಬ್ಯಣ್ಣನು ಸೂಳೆಯ ಮನೆಗೆ ಶಿವನನ್ನು ದೂತನನ್ನಾಗಿ ಮಾಡಿ ಕಳುಹಿಕೊಟ್ಟದ್ದ ಕಾರಣ, ಅವನು ಪರಮಪಾತಕಿಯೆಂದು ಅವನ ದರ್ಶನವನ್ನು ಮಾಡದೆಯಿದ್ದ ಕಲಿಕಾಮರು, ಶಿವನು ಬೋಧಿಸಿಯನ್ನು ಮಾಡಿದರೂ ತಮ್ಮ ಶೂಲರೋಗಚಿಕಿತ್ಸೆಗಾಗಿ ಸುಂದರನನ್ನು ಬದುಕಿಸಿಕೊಳ್ಳದೆ ಪ್ರಾಣವನ್ನೇ ಕಳೆದುಕೊಂಡು ಕೈಲಾಸವನ್ನು ಪಡೆದರು.

ತಿರುನೀಲಕಂಠರು ತಮ್ಮ ಪತ್ನಿಯೊಡನೆ ೮೦ ವರ್ಷಗಳ ವರೆಗೆ ಮಾತನಾಡದಿರಲು, ಶಿವನು ಜಂಗಮವೇಷದಿಂದ ಬಂದು, ಬಂದುಭಿಕ್ಷಾಪಾತ್ರೆಯನ್ನು ಕೊಟ್ಟು ಹೋಗಿ, ಅದನ್ನಿಲ್ಲದಂತೆ ಮಾಡಿ, ಮತ್ತೆ ಬಂದು ಕೇಳಿ, ಕಡೆಗೆ ಗಂಡಹೆಂಡಿರನ್ನು ಬಂದುಗೂಡಿಸಿ, ಅಂತ್ಯದಲ್ಲಿ ಶಿವಲೋಕವನ್ನಿತ್ತನು. ಬಂದು ಕೌಪೀನವನ್ನು ಜಂಗಮವೇಷದ ಶಿವನು ತನ್ನಲ್ಲಿ ಇಟ್ಟು ಹೋಗಿದ್ದು, ಅದು ಮಾಯವಾಗಲು, ಅವರನೀತಿಗಳು ಕೌಪೀನದ ತೂಕಕ್ಕೆ ತನ್ನನ್ನೂ ತನ್ನ ಸತೀಸುತಾದಿಗಳನ್ನೂತೂಗಿ ಕೊಟ್ಟು ಶಿವನ ಮೆಚ್ಚಿಗೆಯನ್ನು ಪಡೆದರು. ಕರವೂರಿನ ಇರಿವತ್ತನೆಂಬ ಶರಣನು ಭಕ್ತನನ್ನು ವಧಿಸಿದ ಆನೆಯನ್ನು ಕೊಂದು, ಮರಳಿ ಪ್ರಾಣವನ್ನುಕೊಟ್ಟು ಶಿವಲೋಕವನ್ನೈದಿದನು. ಅಹಃಪಗೆಯನಾರು ಕೇಳಿದ ಜಂಗಮನಿಗೆ ತನ್ನ ಹೆಂಡತಿಯನ್ನು ಕೊಟ್ಟು, ಶಿವಾನುಗ್ರಹವನ್ನು ಪಡೆದರು. ತಿರುಕುರುಪೆತೊಂಡರೆಂಬಶರಣರು ಜಂಗಮವೇಷದ ಶಿವನಬಟ್ಟೆಯನ್ನು ಸಂಧ್ಯಾಕಾಲದೊಳಗೇ ಒಗೆದು

ಮಡಿವಾಡಿ ಕೊಡುತ್ತೇನೆಂದು ಬಪ್ಪಿ ತೆಗೆದುಕೊಂಡು, ದೊಡ್ಡಮಳೆಯಿಂದ ಆ ಅವಧಿಯೊಳಗೆ ತಂದು ಕೊಡಲಿಕ್ಕಾಗದಿರಲು, ತನ್ನ ತಲೆಯನ್ನೇ ಕಲ್ಲಿನಮೇಲೊಗೆದು, ಶಿವನ ಮೆಚ್ಚಿಗೆಯನ್ನು ಪಡೆದರು. ತಿರುಮೂಲರೆಂಬ ಶರಣರು, ಗೋಪಾಲಕನೊಬ್ಬನು ಅಳಿದಿದ್ದುದರಿಂದ ಸುತ್ತಲೂ ಬಳಸಿ ವ್ಯಸನಪಡುತ್ತಿದ್ದ ಗೋವುಗಳನ್ನು ನೋಡಿ ಮರುಗಿ, ಪರಕಾಯಪ್ರವೇಶವಿದ್ಯೆಯಿಂದ ಆ ಗೊಲ್ಲನ ಶವದಲ್ಲಿ ಪ್ರವೇಶಿಸಿ, ಎದ್ದು, ಕಡೆಗೆ ತಪಶ್ಚರ್ಯೆಯಿಂದ ಶಿವಲೋಕವನ್ನು ಪಡೆದರು. ತಿರುನಾಳ್ಪೋವರೆಂಬ ಶರಣರು ತಮ್ಮ ಚಂಡಾಲಜನ್ಮಸಂಬಂಧದಿಂದ ಚಿದಂಬರನಾಥಾಲಯಪ್ರವೇಶಕ್ಕೆ ಅವಕಾಶವಿಲ್ಲದಿರಲು, ಶಿವನಪ್ಪಣೆಯಮೇರೆ ಅಗ್ನಿಪ್ರವೇಶದಿಂದ ಪರಿಶುದ್ಧರಾಗಿ, ಶಿವದರ್ಶನ ಮಾಡಿ, ಕೈಲಾಸವನ್ನು ಹೊಂದಿದರು. ಇಳಿಯಾಂಡಗುಡಿವಾರರು ಸರಿರಾತ್ರಿಯಲ್ಲಿ ತನ್ನ ಮನೆಗೆ ಬಂದ ಜಂಗಮನಿಗೆ ಗನ್ದೆಯಲ್ಲಿ ಮಡಿಯನೀರಿನ ಮೇಲೆ ತೇಲುತ್ತಿದ್ದ ಮೊಳೆತ ಬತ್ತವನ್ನಾಯ್ದು ತಂದು, ಅಡಿಗೆ ಮಾಡಿಕ್ಕಿಸಿ, ತೃಪ್ತಿಪಡಿಸಿದರು. ಶಿವಚಿಹ್ನಧಾರಿಗಳೆಲ್ಲ ಶಿವನೆಂಬ ಭಾವದಿಂದ ಕಾಣುತ್ತಿದ್ದ ಸೇದಿರಾಜರು ಕಪಟಜಂಗಮನು ತನ್ನನ್ನು ಕತ್ತರಿಸುತ್ತಿದ್ದರೂ ತಲೆಯೊಡ್ಡಿದನು. ಏಣಾಧಿನಾಥನು ತನ್ನ ಶತ್ರುರಾಜನು ಜಂಗಮವೇಷದಿಂದ ಬರಲು, ಅವನ ಪಾದಕ್ಕೆ ಮಣಿದು, ಆ ಕಪಟಜಂಗಮನ ಕತ್ತಿಯೇಟಿನಿಂದಲೇ ವ್ಯತನಾದರು. ಕೊಳಲಸ್ಯನಾರು ಕಕ್ಕೆಯಮರವನ್ನೇ ಶಿವನೆಂದು ಭಾವಿಸಿದರು. ವಲಗಾಂಡಮೂರ್ತಿಯು ಬೊಳಕ್ಕೆಯಿಂದ ಶ್ರೀಗಂಧವನ್ನು ತೇದು ಶಿವನಿಗೆ ಸಮರ್ಪಿಸಿದರು. ಕಾರಿಕಾಲ್ಪೆ ಎಂಬ ಊರಿನಲ್ಲಿದ್ದ ಪುನೀತವತಿಯು ಜಿನನಾದ ತನ್ನ ಗಂಡನಿಗೆ ಶಿವದತ್ತವಾದ ಮಾವಿನ ಹಣ್ಣನ್ನು ಕೊಟ್ಟು ಶಿವಭಕ್ತನನ್ನು ಮಾಡಿದಳು. ಚಂಡೇಶನು ಲಿಂಗದ್ರೋಹಿಯಾದ ತಂದೆಯ ಕಾಲನ್ನು ಕಡಿದುಪಾಕಿದನು. ನಕ್ಕನಯ್ನಾರ ಹೆಂಡತಿ ನೀಲಕ್ಕನು ಲಿಂಗದಮೇಲಣ ಜೇಡರ ಹುಳುವನ್ನು ಉರುಬಿ ನೂಕಿದಳು. ಕಣ್ಣಪ್ಪನು ಶಿವಲಿಂಗಕ್ಕೆ ತನ್ನ ಕಣ್ಣನ್ನೇ ಕಿತ್ತು ಅರ್ಪಿಸಿದನು. ನಾಟ್ಯನ ಮಿತ್ತಂಡಿಯು ಶಿವನ ದೇಹವಕ್ರತೆಯನ್ನು ಪರಿಹರಿಸುವುದಕ್ಕೆ ತನುವನ್ನೇ ಸಮರ್ಪಿಸಿದನು. ರುದ್ರಪಶುಪತಿಯು ಶಿವನ ಕಂಠದ ವಿಷವನ್ನು ನೋಡಿ ಭಯಪಟ್ಟು ಪ್ರಾಣವನ್ನು ಕಳೆದುಕೊಳ್ಳಲು ಸಿದ್ಧನಾದನು. ವಾಯಿನಾಳ್ಳ

ರಣರು ಮಾನಸಪೂಜೆಯನ್ನು ಮಾಡಿದರು. ಕಲಿಯನೈನಾರು ಜಡೆಯನ್ನು ಹೊತ್ತಿಸಿ ದೀಪವನ್ನು ಬೆಳಗಿದರು. ಕಲಿಕಂಬರು, ಜಂಗಮವೇಷಧಾರಿಯಾದವನನ್ನು ಪೂರ್ವಭಾವದಿಂದ ದಾಸಿಯ ಮಗನೆಂದು ತಿಳಿದು ಆತನ ಕಾಲನ್ನು ತೊಳೆಯದೆ ಹೋದ ತನ್ನ ಹೆಂಡತಿಯ ಕೈಯನ್ನು ಕತ್ತರಿಸಿದರು. ಕಲಚೆತ್ತಿಯಾಂಡರು ಶಿವದೂಷಣೆಯನ್ನು ಮಾಡಿದವರ ಜಿಹ್ವಾಛೇದನವನ್ನು ಮಾಡುತ್ತಿದ್ದರು. ಅರಿವಾಳಯ್ಯನು ೭ ದಿನದವರೆಗೂ ಶಿವನೈವೇದ್ಯವು ದೊರೆಯದೆ ಯಿದ್ದು, ಕಡೆಗೆ ದೊರೆತ ಅರೆಮಾನವೂ ತರುವಾಗ ಸುರಿದು ಹೋಗಲು, ತನ್ನ ತಲೆಯನ್ನೇ ಕತ್ತರಿಸಿಕೊಂಡನು. ಕೊಂಗುಲಿಯಕಲಿಯನಾರು ಶಿವನಿಗೆ ಸಮರ್ಪಿಸುವ ಧೂಪಕ್ಕಾಗಿ ಉರುಗಿದ್ದ ಲಿಂಗವನ್ನು ನೇರವಾಡಿದನು. ಸಿರಿಯಾಳಸೆಟ್ಟಿಯು ಜಂಗಮವೇಷದ ಶಿವನಿಗೆ ತನ್ನ ಮಗನನ್ನೇ ಕತ್ತರಿಸಿ ಅಟ್ಟಕ್ಕಿದನು. ಅವರಂತೆಯೇ ಮನುಚಕೋಳನೂ ಶಿವನಿಗಾಗಿ ತನ್ನ ಮಗನನ್ನು ಕೊಂದು ಬೇಯಿಸಿಕ್ಕಿದನು. ನಮಶ್ಶಿವಾಯರು ಶಿವಮಂತ್ರಪ್ರಭಾವವನ್ನು ಮೆರೆದರು. ಮಾನಕಂಜರನು ಜಂಗಮನಿಗೆ ತನ್ನ ಸತಿಯ ಮುಡಿಯನ್ನು ಕತ್ತರಿಸಿ ಒಪ್ಪಿಸಿದನು. ಸಾಂಖ್ಯತೊಂಡನು ಕಲ್ಲಿಗೆ ಪ್ರತಿಯಾಗಿ ತನ್ನ ಶಿರವನ್ನು ಕಡಿದು, ಅದರಿಂದ ಶಿವನನ್ನು ಆರಾಧಿಸಿದನು. ನಮಿನಂದಿಯು ಶಿವನಿಗೆ ಪ್ರತಿದಿನವೂ ಸಾವಿರದದೀಪಗಳನ್ನು ಬೆಳೆಗುವ ವ್ರತವನ್ನು ಹಿಡಿದು, ಕಡೆಗೆ ಸಾಗದಿರಲು, ತನ್ನ ಪ್ರಾಣತ್ಯಾಗಕ್ಕೆ ಸಿದ್ಧನಾದನು. ಕಡವಲನಂಬಿಯು ತನ್ನ ದೇಹವನ್ನೇ ದೀಪಸ್ತಂಭವನ್ನು ಮಾಡಿ ಉರಿಸಿದನು. ಕೊಲ್ಲುಪಿಯಾಂಡರು ಶಿವಾಲಯವನ್ನು ಕಟ್ಟಿಸಿ, ನೈವೇದ್ಯಕ್ಕಾಗಿಟ್ಟಿದ್ದ ಧಾನ್ಯವನ್ನು ತಿಂದ ಸತೀಸುತಾದಿಗಳನ್ನು ಕತ್ತರಿಸಿದರು. ವೆಳ್ಳೂತರು ಕಿರೀಟಕ್ಕೆ ಪ್ರತಿಯಾಗಿ ಶಿವಪಾದವನ್ನೇ ಧರಿಸಿದರು. ಎಡಗಣೆಯ ಪೆರುಮಾಳಿಯರು ಜಂಗಮರಿಗೆ ಕೇಳಿದುದನ್ನೆಲ್ಲ ನೀಡಿ, ಪ್ರತಿಭಟಿಸಿದವರನ್ನು ಗೆದ್ದು, ಸಕಲಸಿದ್ಧಿಸಂಪನ್ನರಾಗಿದ್ದರು. ಕಡವೂರ ಕಾರಿಯರು ರಾಜಸಭೆಯಲ್ಲಿ ಹಾಸ್ಯಗಾರರಾಗಿದ್ದು ಸಂಪಾದಿಸಿದ ಹಣದಿಂದ ಶಿವನ ಭಕ್ತರ ಸೇವೆಯನ್ನು ಮಾಡಿಕೊಂಡಿದ್ದರು. ಅಚ್ಯುತಭಕ್ತನು ಜಾಜಿನ ಕಾಯಕದಲ್ಲಿದ್ದನು. ಗೊಲ್ಲಾಳನು ಶಿವದ್ರೋಹಿಯಾದ ತಂದೆಯ ತಲೆಯನ್ನು ಕೊಡಲಿಯಿಂದ ಕಡಿದನು. ಚಿರುಪುಲಿಯಿರಿತ್ತಾಂಡಿಯರು ಪ್ರತಿದಿನವೂ

ಜಂಗವಾರಾಧನೆಯಿಲ್ಲದೆ ಭುಂಜಿಸದ ವ್ರತದಿಂದಿರುತ್ತ, ೭೦ ದಿನಗಳವರೆಗೂ ಜಂಗವರು ಸಿಕ್ಕದಿರಲು ಉಪವಾಸವಾಗಿಯೇ ಇದ್ದರು. ಇರಿವತ್ತಾಂಡಾರಿಯೆಂಬ ಹುಟ್ಟು ಕುರುಡಭಕ್ತನು ಶಿವನ ಮಜ್ಜನದ ನೀರಿಗಾಗಿ ಬಾವಿಯನ್ನಗೆಯುತ್ತಲಿದ್ದು, ಅದಕ್ಕೆ ವಿಘ್ನವನ್ನಾಚರಿಸಿದಜೈನರನ್ನೆಲ್ಲ ಶಿವಾನುಗ್ರಹದಿಂದ ಕುರುಡರನ್ನು ಮಾಡಿದನು. ಅತಿಭಕ್ತನು ಬಲೆಯ ಕಾಯಕವನ್ನು ಮಾಡುತ್ತ, ಮೊದಲು ಸಿಕ್ಕಿದ ಮೀನನ್ನು ಶಿವಾರ್ಪಿತಮಾಡಿ, ಒಳಕ ಸಿಕ್ಕಿದುದನ್ನು ಹಿಡಿದು ಮಾರಿ, ಬಂದ ಹಣದಿಂದ ಜಂಗಮಸೇವೆಯನ್ನು ಮಾಡುತ್ತಿದ್ದನು. ಇವರೆಲ್ಲರೂ ಮೇಲೆಕಂಡ ಆಯಾಕ್ರಿಯೆಗಳಿಂದ ಶಿವನನ್ನು ಮೆಚ್ಚಿಸಿ ಕೈಲಾಸವನ್ನು ಪಡೆದವರು. ಮತ್ತೂ ಮಳೆಯರಾಜನು ತನ್ನ ಸಕಲರಾಜ್ಯಐಶ್ವರ್ಯವನ್ನೂ, ಮುಲ್ಲಾಣನು ಘನಭಕ್ತಿಯಿಂದ ತನ್ನ ಕಾಂತೆಯಾದ ಮುಲ್ಲಾಣಿಯೊಡನೆಯೂ, ಓಹಿಲಯ್ಯನು ಧೂಪವನರ್ಪಿಸುವ ಭಕ್ತಿಯಿಂದ ಸ್ಥೂಲದೇಹಸಮೇತನಾಗಿಯೂ, ಕೈಲಾಸವನ್ನು ಪಡೆದರು. ಸಲುವದಿಗೆ ಯೆಂಬ ಊರಿನಲ್ಲಿ ಕುಷ್ಠರೋಗಿಣಿಯಾಗಿದ್ದ ಮಾದರಗುಡ್ಡವ್ವೆಯು ತನ್ನನ್ನು ಪರವಾಗಿಗಳು ಓಡಿಸಲು, ತಾನು ಸೌರಾಷ್ಟ್ರ ಸೋಮನಾಥನ ಅನುಗ್ರಹದಿಂದ ನೀರೋಗಿಣಿಯಾದಳು. ಕಾಳಿಂಗರಾಜನು ಗೋಡೆಯ ಮೇಲೆ ಬರೆದಿದ್ದ ಹುಲಿಯನ್ನು ನೋಡಿ, ಹೆದರಿ ಪ್ರಾಣವನ್ನು ಬಿಡಲು, ಚೆನ್ನವ್ವೆಯು ಸತ್ತ ಆತನ ಶವವನ್ನೇ ಮದುವೆಯಾಗಿ, ಬಸವನ ನೋಂಪಿಯನ್ನು ಮಾಡಿ, ಶಿವಾನುಗ್ರಹದಿಂದ ಗಂಡನ ಪ್ರಾಣವನ್ನು ಪಡೆದು ಮುತ್ತೈದೆಯಾಗಿದ್ದು, ಕಡೆಗೆ ಪತಿಯೊಡನೆ ಶಿವಲೋಕವನ್ನೈದಿದಳು. ಉಚ್ಛಿಷ್ಟಾನ್ನನು ಮೃತನಾಗಲು, ಆತನನ್ನು ಸುಟ್ಟ ಹೊಗೆಯು ಸೊಂಕಿನಿಂದ ಅನೇಕ ಪಿಶಾಚಗಳು ತಮ್ಮ ನೀಚಜನ್ಮವನ್ನು ಕಳೆದುಕೊಂಡುವು. ಹೊಗೆ ಸೊಂಕಿಯದೆ ಉಳಿದಿದ್ದ ಬಂದು ಪಿಶಾಚವು ಉಚ್ಛಿಷ್ಟಾನ್ನನ ಶಿಷ್ಯನಾವ ಭೋಜನವನ್ನು ಬೇಡಿ, ಗುರುವಿನ ಮೂಳೆಯನ್ನು ಪೊತ್ತಿಸಿ ಹೊಗೆಯನ್ನುಂಟುಮಾಡಿಸಿ, ಅದರ ಸೊಂಕಿನಿಂದ ತಮಗೆ ವಾಸವಾಗಿದ್ದ ಆಲದವರದ ಸಮೇತವಾಗಿ ರಾಜ ಮಂತ್ರಿ ಪ್ರಮುಖರೆಲ್ಲರನ್ನೂ ಕೂಡಿ ಕೈಲಾಸವನ್ನು ಸೇರಿತು. ಹೀಗೆಯೇ ಗಣಸಿಂಗಯ್ಯ, ಸಾತ್ವಿಕಸಂಗಯ್ಯ, ದೇವರಸ, ಪಡಿಹಾರಿಬಸವಯ್ಯ, ಕಾಮುಲದೇವಿ, ದೇವಯ್ಯ,

ರೇವಯ್ಯ, ಮೇಳಗೆಯ ಸಂಗವ್ವೆ, ಕನ್ನಮರಸಿ, ಹೂವಿನ ಬಾಚಿದೇವ, ಓಹಿಲಯ್ಯ, ಬೊಪ್ಪದೇವಿ, ಬೊಮ್ಮಸೆಟ್ಟ—ಇವರು ತೇರಸಗಣಂಗಳು ; ನಾನಾಪವಾಡಗಳಿಂದ ಶಿವಲೋಕವನ್ನು ಪಡೆದವರು. ಶಿವನಪ್ಪಣೆಯಮೇರೆ ಪಾರ್ವತಿಯು ಷೋಡಶಕಲೆಗಳಿಂದ ಕೂಡಿ, ಗುಡ್ಡಾಪುರದಲ್ಲಿ— ಹೊನ್ನಯ್ಯ, ಕಿನ್ನರಬ್ರಹ್ಮಯ್ಯ, ಪಾಂಡ್ಯರಾಯ, ಬೀರದೇವಯ್ಯ, ಬೀಚಯ್ಯ, ಹಂದಯ್ಯ, ಕಿನ್ನರಬ್ರಹ್ಮಯ್ಯ, ಗುಡ್ಡವ್ವ, ಹೂವಿನ ಬಾಚಿದೇವಯ್ಯ, ಕಂದುಲಿಗೆನಾಗಯ್ಯ, ಉಪ್ಪೆನಾಗಯ್ಯ, ಬಾಚಲದೇವಿ, ಕೇತಲದೇವಿ, ಕಾಳವ್ವೆ, ಚಿಕ್ಕುಲಿಗೆ ನಾಚಯ್ಯ, ಪಡಿಹಾರಿ ಸೋಮಯ್ಯ, ಎಂಬ ಹೆಸರಿನಿಂದ ಷೋಡಶಗಣಂಗಳಾಗುದಿಸಿರಲು, ಅತ್ತ ಅಣವೂರಿನಲ್ಲಿ ಪರಸವಾಯಿಗಳು ಬ್ರಹ್ಮೇಶನನ್ನು ಕಿತ್ತು, ವಿಷ್ಣುವಿಗ್ರಹವನ್ನು ಪ್ರತಿಷ್ಠಿಸಿರುವ ಸಂಗತಿಯನ್ನು ಶಿವನು ಚಿಕ್ಕುಲಿಗೆನಾಚಯ್ಯನ ಸ್ವಪ್ನದಲ್ಲಿ ಬಂದು ತಿಳಿಸಲು, ಆತನು ಗುಡ್ಡಾದೇವಿಗೆ ವಿಜ್ಞಾಪಿಸಲಾಗಿ, ಆಕೆಯು ಎಲ್ಲರೊಡನೆ ಕೂಡಿ, ಹೋಗಿ, ಅಲ್ಲಿ ಶಿವಮೂರ್ತಿಯನ್ನು ಪ್ರತಿಷ್ಠಿಸಿ, ಪರಮತಸ್ಥರನ್ನು ಜೈಸಿದಳು. ಗಂಟೆಯ ವೈಲಿದೇವಿ, ಕಾಮಲದೇವಿ, ಬೊಪ್ಪಲದೇವಿ, ಚೋಳವ್ವೆ, ಬೀಚಲದೇವಿ, ಕನ್ನಮ್ಮರಿಸಿ. ದೋರಿದೇವಯ್ಯ, ಸಿಂಗರಾಜ, ಎಂಬಿವರು ದಶಗಣಂಗಳು, ಶಿವಾನುಗ್ರಹಕ್ಕೆ ಪಾತ್ರರಾಗಿ ನಾನಾಪವಾಡಗಳನ್ನು ಮೆರೆದವರು. ಎಂದು ಚೆನ್ನಬಸವೇಶನು ನಿರೂಪಿಸಿದನೆಂಬಲ್ಲಿಗೆ ಎರಡನೆ ಅಧ್ಯಾಯವು ಸಂಪೂರ್ಣವು.

ಮೂನೆ ಅಧ್ಯಾಯವು.

ಸಾನಂದಗಣೇಶ ಚರಿತ್ರವು.

ಎಲೈ ಸಿದ್ಧರಾಮೇಶನೆ, ಪೂರ್ಣವಿತ್ತನೆಂಬ ಋಷಿಗೆ ಶಿವಾನುಗ್ರಹದಿಂದ ಒಬ್ಬ ಮಗನು ಹುಟ್ಟಲು, ಆತನಿಗೆ ಸಾನಂದನೆಂಬ ಹೆಸರನ್ನು ಕರೆದನು. ಆ ಕುಮಾರನು ಶಿವಭಕ್ತಿಜ್ಞಾನಗಳೇ ಈ ಆಕೃತಿಯಿಂದ ಒಳೆಯುತ್ತಿರುವಂತೆ ದಿನದಿನಕ್ಕೆ ಪ್ರವರ್ಧಮಾನನಾದನು. ಶೈಶವವು ಕಳೆದ ಒಳಕಮಾನಿಗೆ ವಿದ್ಯಾಭ್ಯಾಸಕ್ಕೆ ಹಾಕಿ ಉಚಿತಕಾಲದಲ್ಲಿ ತಂದೆಯು ಶೈವಮಂತ್ರೋಪದೇಶವನ್ನು ಮಾಡಿಸಿದನು. ಮಗನು ಬರಬರುತ್ತ ಸಕಲ ವೇದಾಗ

ಮಪುರಾಣೇತಿಹಾಸಾದಿಗಳನ್ನೆಲ್ಲ ಓದಿ ಪರಮಜ್ಞಾನಿಯಾಗಿ, ವೈರಾಗ್ಯವು ಬಲಿದು, ದಂಡ ಕಮಂಡಲು ಕಾಷಾಯಾಂಬರ ವಿಭೂತಿರುದ್ರಾಕ್ಷಧಾರಿಯಾಗಿ ಅಪರಶಿವನಂತೆ ತೋರುತ್ತಿದ್ದನು. ಈ ಋಷಿಯು ದೃಢವಾದ ತಪಶ್ಚರ್ಯದಿಂದ ಪರಶಿವನನ್ನು ಮೆಚ್ಚಿಸಿದನು. ಸ್ವಾಮಿಯು ಪ್ರತ್ಯಕ್ಷನಾಗಿ ಅವನಿಷ್ಟಪ್ರಕಾರ ಶಿವಮಂತ್ರವನ್ನು ತಾನೇ ಉಪದೇಶಿಸಿ, ಗಣಪದವಿಯನ್ನು ಕೊಟ್ಟು, ಅವನಿಗೆ ಸಂಚಾರಕ್ಕಾಗಿ ಪುಷ್ಪವಿಮಾನವನ್ನೂ, ಊಳಿಗದವರನ್ನೂ ಅನುಗ್ರಹಿಸಿ, ತೆರಳಿದನು. ಇತ್ತ ಸಾನಂದಗಣೇಶನು ಸದಾ ತನ್ನ ಬಳಯಲ್ಲಿ ಋಷಿಸ್ತೋಮವನ್ನು ಕೂಡಿಕೊಂಡು, ತತ್ತ್ವಾರ್ಥವಿಚಾರದಿಂದ ಕಾಲವನ್ನು ಕಳೆಯುತ್ತಿದ್ದನು. ಒಂದುದಿನ, ಪ್ರಸ್ತಾಪತ್ಸೇನ ಒಬ್ಬ ಋಷಿಯು ಭೂಲೋಕದ ಜನಗಳ ಪಾಪಪುಣ್ಯಾಚರಣೆಗಳನ್ನೂ, ಯಮದೂತರು ಪುಣ್ಯಶಾಲಿಗಳನ್ನು ಕರೆದುಕೊಂಡುಹೋಗುವ ರೀತಿಯನ್ನೂ, ಪಾಪಿಗಳನ್ನು ಎಳೆದುಕೊಂಡು ಹೋಗಿ ಹಿಂಸಿಸುವುದನ್ನೂ ಕುರಿತು ವಿವರಿಸತೊಡಗಿದನು. ಹೇಗೆಂದರೆ– ಧರ್ಮಾಚರಣೆಯಲ್ಲಿದ್ದ ಪುಣ್ಯಶಾಲಿಗಳನ್ನು ಕರೆದೊಯ್ಯುವ ಪರಲೋಕದ ಮಾರ್ಗವನ್ನು–ಕಸ್ತೂರಿ ಪನ್ನೀರಿನ ಚಳಯವನ್ನು ಕೊಟ್ಟು, ಒಗೆಬಗೆಯ ರಂಗಿನ ರಂಗವಲ್ಲಿಗಳನ್ನು ಬಿಟ್ಟು, ಅಲ್ಲಲ್ಲಿಗೆ ಗುಡಿತೋರಣಚಪ್ಪರಗಳನ್ನು ರಚಿಸಿ, ಮೇಲ್ಕಟ್ಟುಗಳನ್ನು ಕಟ್ಟಿ, ಹೂವಿನ ಮಾಲೆಗಳನ್ನೂ ಮುತ್ತಿನ ಕುಚ್ಚುಗಳನ್ನೂ ಇಳಿಯಬಿಟ್ಟು, ಧೂಪದ ಹೊಗೆಯನ್ನು ಹಾಕಿ, ಮಘಮಘಿಸುವಂತೆ ಮಾಡಿರುವರು. ಅಲ್ಲಲ್ಲಿಗೆ ತಂಪಾದ ನೆಳಲಿನ ತೋಪುಗಳು, ತಿಳಿಗೊಳಗಳು, ಅರವಟ್ಟಿಗೆಗಳು, ಸಾಲು ಮರಗಳು, ಲತಾಗೃಹಗಳು, ನರ್ತನ ಗಾನಮಂಟಪಗಳು, ಉದ್ಯಾನಗಳು, ಫಲವೃಕ್ಷಗಳು, ಕ್ರೀಡಾಪಕ್ಷಿಗಳು, ರಂಜಿಸುತ್ತಿರುವುವು. ಆ ದಾರಿಯಲ್ಲಿ ಬರುವ ಧರ್ಮಾತ್ಮರನ್ನು ನೋಡಿದವರು ಈ ದಿವಸ ನಿಮ್ಮ ದರ್ಶನದಿಂದ ನಾವು ಧನ್ಯರಾದೆವೆಂದು ನುಡಿದು, ಕೈಹಿಡಿದು ಬಂದೊಂದು ಮಂಟಪಗಳಿಗೆ ಕರೆದುಕೊಂಡುಹೋಗಿ, ಪಾದ್ಯಾರ್ಘ್ಯಾದಿಗಳನ್ನು ಕೊಟ್ಟು, ಷಡ್ರಸಾನ್ನಭೋಜನ ಮಾಡಿಸಿ, ಒಗೆಬಗೆಯ ಹಣ್ಣು ಹೂವು ಗಂಧ ಮೊದಲಾದುವುಗಳನ್ನೊಪ್ಪಿಸಿ, ಉಪಚಾರಗಳಿಂದ ಸಂತೋಷಪಡಿಸಿ, ವಸ್ತ್ರಾಭರಣಾಲಂಕಾರಗಳನ್ನಿತ್ತು ಮರ್ಯಾದಿಸಿ, ಮುಂದೆ ಕಳುಹಿಕೊಡುವರು.

ಆ ದಾರಿಯಲ್ಲಿ ಹೋಗುವವರಿಗೆ ತಾವು ಹೆಂಡಿರು ಮಕ್ಕಳು ಮನೆಮಠಗ ಳನ್ನು ಬಿಟ್ಟು ಬಂದೆವಲ್ಲ ಎಂಬ ಚಿಂತೆಯು ಲೇಶಮಾತ್ರವೂ ಹತ್ತುವು ದಿಲ್ಲ. ಹೀಗೆ ಉಪಚರಿಸಿಕೊಂಡು ಸಂತೋಷದಿಂದ ಹೋದ ಜನಗಳನ್ನು ದೂತರು ಯಮಧರ್ಮನ ಮುಂದೆ ನಿಲ್ಲಿಸಿದಾಗ, ಆತನು ಇವರುಗಳು ಮಾ ಡಿದ ಧರ್ಮಕಾರ್ಯವಿವರಣಗಳೇನೆಂದು ಕೇಳುವನು. ಚಿತ್ರಗುಪ್ತರಾದರೊ— ಈತನು ಪರೋಪಕಾರಿ, ಈತನು ದಯಾಳು, ಈತನು ವಿದ್ಯಾದಾತನು, ಈತನು ಗುರುಹಿರಿಯರಲ್ಲಿ ವಿನಯದಿಂದ ನಡೆದುಕೊಂಡವನು, ಈತನು ಸನ್ಮಾರ್ಗಗಾಮಿ, ಇವನು ಭೂದಾತೃವು, ಈತನು ಗೋದಾನಮಾಡಿದ ವನು, ಈತನು ವಸ್ತ್ರದಾನಮಾಡಿದವನು, ಇವನು ಗೃಹದಾತನು, ಇ ವನು ಅನ್ನದಾನಿಯು, ಇವನು ಪ್ರಾಣದಾನಿಯು, ಈತನು ಜಂಗಮಸ ತ್ಕಾರಕನು, ಈತನು ಗುರುಭಕ್ತನು, ಈತನು ದೇವಾಲಯಪ್ರತಿಷ್ಠಾಪ ಕನು, ಈತನು ದೈವಭಕ್ತನು, ಈತನು ಸತ್ಯವ್ರತನು, ಈತನು ಗೋರ ಕ್ಷಕನು, ಈತನು ಭಸ್ಮರುದ್ರಾಕ್ಷಧಾರಕನು, ಈತನು ಶಿವಚಿಹ್ನಧಾರಿ ಗಳ ಸೇವಕನು, ಈತನು ಪಂಚಾಕ್ಷರಜಾಪಕನು, ಇವನು ಶಿವಾರಾಧ ನೆಗೆ ಹೂವನ್ನೆತ್ತಿಕೊಟ್ಟವನು, ಇವನು ಕೆರೆಯನ್ನು ಕಟ್ಟಿಸಿದವನು, ಇವ ನು ತೋಪನ್ನು ನಿರ್ಮಿಸಿದವನು, ಇವನು ಪುಷ್ಪೋದ್ಯಾನವನ್ನು ನಿರ್ಮಿಸಿದ ವನು, ಈತನು ಧರ್ಮಕಲ್ಯಾಣವನ್ನು ಮಾಡಿದವನು, ಈತನು ರಿಕ್ತರಿಗೆ ಅನ್ನ ವಸ್ತ್ರದಾನ ಮಾಡಿದವನು, ಇವನು ಪುರಾಣಶ್ರವಣ ಮಾಡಿಸಿದವ ನು, ಇವನು ಸತ್ಪುತ್ರನನ್ನು ಪಡೆದವನು, ಇವನು ಮಾತಾಪಿತೃಭಕ್ತನು, ಇವನು ಅರವಟ್ಟಿಗೆಯನ್ನಿಡಿಸಿದವನು, ಇವನು ಛತ್ರವ್ಯಜನಪಾದುಕಾದಿಗ ಳನ್ನು ದಾನಮಾಡಿದವನು, ಇವನು ಅನ್ನಸತ್ರಗಳನ್ನು ಪ್ರತಿಷ್ಠಿಸಿದವನು, ಇವನು ವಿದ್ಯಾಶಾಲೆಗಳನ್ನು ಸ್ಥಾಪಿಸಿದವನು, ಇವನು ದಾರಿಗಳನ್ನು ಸರಿ ಮಾಡಿಸಿದವನು, ಇವನು ಗೂಳಿಗಳನ್ನು ಬಿಡಿಸಿದವನು, ಇವನು ಏಕಪತ್ನೀ ವ್ರತಸ್ಥನು, ಈತನು ಶುಚಿತಮನು, ಈತನು ನಿಷ್ಕಪಟಿಯು, ಈತನು ಅಹಿಂಸಕನು, ಈತನು ದೀನಬಂಧುವು, ಈತನು ನೀತಿಪರನು, ಈತನು ಬೆಟ್ಟಕ್ಕೆ ಕಂಬಿಯನ್ನು ಹೊಡಿಸಿದವನು, ಎಂದು ಮೊದಲಾಗಿ ಅವರವರು ಮಾಡಿದ ಧರ್ಮಕಾರ್ಯಗಳನ್ನು ವಿವರಿಸಿ ಹೇಳುವರು. ಅದರಮೇಲೆ ಅವರ

ಕರ್ಮಾನುಸಾರವಾದ ಭೋಗಗಳನ್ನು ಇಷ್ಟಿಷ್ಟು ದಿವಸ ಸ್ವರ್ಗಲೋಕದಲ್ಲಿ ಅನುಭವಿಸಿಕೊಂಡಿರುವುದಕ್ಕಾಗಿ ಆಯಾ ಸ್ಥಲಕ್ಕೆ ಕಳುಹಿಸಿಕೊಡಿರೆಂದು ಯಮಧರ್ಮನು ಅಪ್ಪಣೆ ಮಾಡಿ, ಪುಷ್ಪವಿಮಾನಗಳಲ್ಲಿ ಕುಳ್ಳಿರಿಸಿ, ಕಳುಹಿಸಿಕೊಡುವನು. ಅವರು ತನ್ನ ನಿಯಮಿತಕಾಲದವರೆಗೆ ಸುಖವಾಗಿರುವರು. ಪಾಪಿಗಳನ್ನು ಯಮದೂತರು ಕರೆದುಕೊಂಡುಹೋಗುವಾಗಲಾದರೂ— ಹಲ್ಲನ್ನು ಕಡಿದು, ಕೋರೆಯನ್ನು ಕಿರಿದು, ಹುಬ್ಬನ್ನು ಗಂಟಿಕ್ಕಿ, ಬಿರುಗಣ್ಣನ್ನು ಬಿಟ್ಟು, ಗಜರಿ, ಅಪ್ಪಳಿಸಿ, ಹೊಡಿ ಬಡಿ ಎಳಿ ಎಂದು ಮೊದಲಾಗಿ ಕೂಗಿ, ಹೆದರಿ ಹಿಂಜರಿದವರನ್ನು ಕೈಕಾಲ್ಪಿಡಿದು ದರದರನೆ ಎಳೆದೊಯ್ಯುವರು. ಮರಣೋನ್ಮುಖನಾದವನು ಅವರನ್ನು ಕಂಡಕೂಡಲೇ ಜಲಮಲಗಳನ್ನು ಬಿಟ್ಟುಕೊಳ್ಳುವನು. ಇವರನ್ನು ಕರೆದೊಯ್ಯುವ ಮಾರ್ಗಗಳಲ್ಲಿ ಕಲ್ಲುಗಳು, ಮುಳ್ಳುಗಳು, ಬೆಟ್ಟಗಳು, ಗುಡ್ಡಗಳು, ಸ್ಮಶಾನಗಳು, ಕ್ರೂರವ್ಯಗಗಳು, ಹಾವುಗಳು, ಮರುಭೂಮಿಗಳು, ಕಾಳ್ಕಿಚ್ಚುಗಳು, ಬರಸಿಡಿಲ್ಮಿಂಚುಗಳು, ಕೆಂಡದ ಮಳೆಗಳು, ಹಳ್ಳಕೊಳ್ಳಗಳು, ಹುತ್ತುಗಳು, ಶಾಕಿನಿಡಾಕಿನಿಯರು, ತುಂಬಿರುವುವು. ಎಲ್ಲಿ ನೋಡಿದರೂ ನೆಳಲಿಲ್ಲ; ನೀರಿಲ್ಲ; ಸುಡುಗಾಡು, ಕಡುಬಿಸಿಲು, ಬೆಂಕಿಯ ಹೊಗೆ, ಕಾದ ನೆಲಗಳೇ ಇರುವುವು. ಕಾಲ್ಗೆ ಕಲ್ಲು ನಟ್ಟು ಮುಳ್ಳುಗಳು ಚುಚ್ಚಿ, ಹೊಪ್ಪಳೆದ್ದು, ರಕ್ತವು ಸುರಿದು, ಸಂಕಟಪಟ್ಟು ನಡೆಯಲಾರದೆ ಕುಳಿತರೆ, ದೂತರು ತಿವಿಯುತ್ತಲೂ, ಬಡಿಯುತ್ತಲೂ, ಚುಚ್ಚುತ್ತಲೂ, ಎಳೆಯುತ್ತಲೂ, ಹಳ್ಳಗಳಿಗೆ ನೂಕುತ್ತಲೂ, ಮುಳ್ಳುಗಳಮೇಲೆ ಉರುಳಿಸುತ್ತಲೂ, ಬೆಂಕಿಗೆ ನುಗ್ಗಿಸುತ್ತಲೂ, ವಿಷದ ಗುಳಿಗಳಲ್ಲಿ ಮುಳುಗಿಸುತ್ತಲೂ, ಕಿರಿಚಿದರೆ ಬಾಯ್ಗೆ ಸಲಾಕಿಯನ್ನು ಸಿಕ್ಕಿಸುತ್ತಲೂ, ಬಿದ್ದುಕೊಂಡರೆ ಕಾಲ್ಗಳಿಂದೊದೆಯುತ್ತಲೂ, ಚಾಟಿಗಳಿಂದ ಹೊಡೆಯುತ್ತಲೂ, ಕೆಂಡವನ್ನು ತಲೆಯಮೇಲೆ ಸುರಿಸುತ್ತಲೂ, ಹಸಿದ ಹುಲಿಗಳ ಮುಂದೆ ಇಡುತ್ತಲೂ, ಬುಸುಗುಟ್ಟುವ ಹಾವುಗಳಿಂದ ಕಡಿಸುತ್ತಲೂ, ಶಾಕಿನಿಡಾಕಿನಿಯರಿಂದ ಕರುಳನ್ನು ಬಗಿಸುತ್ತಲೂ, ಹದ್ದು ಕಾಗೆಗಳಿಂದ ಕಣ್ಣನ್ನು ಕೀಳಿಸುತ್ತಲೂ, ಬಾಯಾರಿತೆಂದು ನೀರನ್ನು ಕೇಳಿದರೆ ಕಾದ ಸೀಸವನ್ನು ಹೊಯ್ಯುತ್ತಲೂ, ವಿಚಿತ್ರಹಿಂಸೆಗೊಳಿಸಿ ಎಳೆದೊಯ್ಯುವರು. ಹೀಗೆ ನಷೆ

ದುಹೋದ ಕರ್ಮಿಗಳನ್ನು ದೂತರು ಯಮರಾಜನ ಮುಂದೆ ನಿಲ್ಲಿಸಲು, ಅವನು ಘುಡುಘುಡಿಸಿ, ಕೆಂಗಣ್ಣಿನಿಂದ ನೋಡಿ, ಇವರೇನನ್ನು ಮಾಡಿದರೆಂದು ಕೇಳುವನು. ಚಿತ್ರಗುಪ್ತರಾದರೊ– ಇವನು ಕೆರೆಯನ್ನೊಡೆದವನು. ಇವನು ಮನೆಗೆ ಬೆಂಕಿಯನ್ನಿಕ್ಕಿದವನು. ಇವನು ವಿಷಪ್ರಯೋಗನನ್ನು ಮಾಡಿದವನು. ಇವನು ಜೀವಹಿಂಸೆಯನ್ನು ಮಾಡಿದವನು. ಇವನು ಗೋಹತ್ಯಮಾಡಿದವನು. ಇವನು ಬ್ರಹ್ಮಘ್ನನು, ಇವನು ಮಾಡಿದುಪಕಾರವನ್ನು ಮರೆತವನು, ಇವನು ಪರಸ್ತ್ರೀಗಾಮಿಯು, ಇವನು ಗುರುದ್ರೋಹಿಯು, ಇವನು ಪರಸ್ವಾಪಹಾರಿಯು, ಇವನು ಹಿರಿಯರನ್ನು ನಿಂದಿಸಿದವನು, ಇವನು ಗುರೂಪದೇಶದೂಷಕನು, ಇವನು ಮತಭ್ರಷ್ಟನು, ಇವನು ಅನೃತವಾದಿಯು, ಇವನು ಭಕ್ತರನ್ನು ನಿಂದಿಸಿ ಮನಸ್ಸನ್ನು ನೋಯಿಸಿದವನು, ಇವನು ಅನೃತಸಾಕ್ಷ್ಯವನ್ನು ನುಡಿದವನು, ಇವನು ನಂಬಿಸಿ ಮೋಸಮಾಡಿದವನು, ಇವನು ಆಶ್ರಯಿಸಿದವರನ್ನುಪೇಕ್ಷಿಸಿದವನು. ಈತನು ಸ್ವಾಮಿದ್ರೋಹಿ, ಈತನು ಕುಲಘಾತಕನು, ಈತನು ಮಿತ್ರದ್ರೋಹಿ, ಇವನು ಸೂತಕಿಯರನ್ನೂ ಮಗಳನ್ನೂ ಸೊಸೆಯನ್ನೂ ಮಿತ್ರನ ಹೆಂಡತಿಯನ್ನೂ ಗರ್ಭಿಸಿದವನು, ಇವನು ಚಾಡಿಕೋರನು, ಇವನು ಶಿವಾಲಯವನ್ನು ಹಾಳ್ಮಾಡಿದವನು, ಇವನು ಶಿಶುಹತ್ಯಗಾರನು, ಇವನು ಅನ್ನದಾನ ಗೋದಾನಾದಿಗಳಿಗೆ ಅಡ್ಡಿಯಾದವನು, ಇವನು ಮದುವೆಯನ್ನು ತಡೆದವನು, ಇವನು ಭಸ್ಮರುದ್ರಾಕ್ಷ ಶಿವಮಂತ್ರಾದಿಗಳನ್ನು ತಿರಸ್ಕರಿಸಿದವನು, ಇವನು ಜಾತಿಧರ್ಮಗಳನ್ನು ಬಿಟ್ಟವನು, ಇವನು ಸಜ್ಜನಹಿಂಸಕನು, ಇವನು ಪರರ ಮಾನವನ್ನು ಖಂಡಿಸಿದವನು, ಇವನು ತಾಯ್ತಂದೆಗಳನ್ನು ಹೊಡೆದು ಬೈದವನು, ಇವನು ತನ್ನ ಅಣ್ಣತಮ್ಮಂದಿರಿಗೆ ದ್ರೋಹಮಾಡಿದವನು, ಇವನು ಹುಲ್ಲು ನೀರನ್ನು ಸೇವಿಸುವ ಗೋವುಗಳನ್ನು ಅಟ್ಟಿದವನು, ಇವನು ಲಂಚವನ್ನು ತಿಂದವನು, ಇವನು ಅಭ್ಯಾಗತರನ್ನು ಓಡಿಸಿದವನು, ಇವನು ಶಿವನಿರ್ಮಾಲ್ಯವನ್ನು ಬಿಸುಡಿದವನು, ಇವನು ಅಭಕ್ಷ್ಯಭಕ್ಷಣ ಅಪೇಯಪಾನಗಳನ್ನು ಮಾಡಿದವನು, ಇವನು ದಯಾಹೀನನು, ಇವನು ಪರರ ಉನ್ನತಿಯನ್ನು ಸಹಿಸದವನು, ಇವನು ಎಂದೂ ಶಿವಾರಾಧನೆಯನ್ನು ಮಾಡದವನು, ಇವನು ಪರಾನ್ನದಿಂದಲೇ ಜೀವಿಸಿದವನು, ಇವನು ದಾರಿಗೆ

ಕಲ್ಲುಮುಳ್ಳುಗಳನ್ನಿಳಿದವನು, ಇವನು ಸೂಳೆಯೊಡನುಂಡವನು, ಇವನು ಸಾಲುಮರಗಳನ್ನು ತರಿದವನು, ಇವನು ಕಳ್ಳನು, ಇವನು ಯುದ್ಧದಲ್ಲಿ ಹಿಮ್ಮೆಟ್ಟೋಡಿದವನು, ಇವನು ವಿಷಯಲಂಪಟನು, ಇವನು ಭಕ್ತಿಹೀನನು, ಇವನು ತನ್ನ ಕುಟುಂಬವನ್ನು ಸಾಕಲಾರದೆ ಬಿಟ್ಟೋಡಿದವನು, ಇವನು ಮೃಗ ಪಕ್ಷಿ ಜಲಚರಾದಿಗಳನ್ನು ಕೊಂದವನು, ಇವನು ಸಾಲವನ್ನು ತೀರಿಸದಿದ್ದವನು, ಇವನು ಬೆಟ್ಟಕ್ಕೆ ಬೇಗೆಯನ್ನಿಕ್ಕಿದವನು, ಇವನು ಜಗಳವನ್ನು ತಂದಿಕ್ಕಿ ನೋಟನೋಡುತ್ತಿದ್ದವನು, ಇವನು ದಾರಿಕಾಯ್ದು ತಲೆಯೊಡೆದವನು, ಇವನು ಕೊಟ್ಟ ದಾನವನ್ನು ನೆನೆದು ವ್ಯರ್ಥಪಟ್ಟವನು, ಇವನು ಮಾಡಿದ ದಾನವನ್ನು ಹೊಗಳಿಕೊಂಡವನು, ಇವಳು ಗಂಡನು ಮಾಡುತ್ತಿದ್ದ ದಾನಕ್ಕೆ ಅಡ್ಡಿಮಾಡಿದವಳು, ಇವಳು ಭಿಕ್ಷೆಗೆ ಬಂದವರನ್ನು ಗದರಿ ಅಟ್ಟಿದವಳು, ಇವಳು ಮಾವ ಅತ್ತೆಯರನ್ನು ಟೊಣೆದು ಗೋಳಾಡಿಸುತ್ತಿದ್ದವಳು, ಇವಳು ಪಙ್ಕ್ತಿಭೇದವನ್ನು ಮಾಡಿದವಳು, ಇವಳು ಹಾದರಕ್ಕೆ ಹೇಸದವಳು, ಇವಳು ಅನಾಚಾರಕ್ಕೆ ತವರಾದವಳು, ಇವಳು ಭಕ್ತಿಯ ಗುರು ತನ್ನು ಕಾಣದವಳು, ಇವಳು ಎಂದೂ ಶಿವಕಥಾಶ್ರವಣವನ್ನು ಮಾಡದವಳು, ಇವಳು ಗಂತನನ್ನು ಹೀಯಾಳಿಸುತ್ತಿದ್ದವಳು. ಇವಳು ಪರರ ಮುಕ್ಕಳನ್ನು ವಿಷವಿಕ್ಕಿ ಕೊಂದವಳು, ಇವಳು ಅತ್ತಿಗೆ ನಾದಿನಿಯರೊಡನೆ ಕಾಯುತ್ತಿದ್ದವಳು, ಇವಳು ಗಂತನ ತಲೆಯಮೇಲೆ ಕಲ್ಲನ್ನು ಹಾಕಿ ಕೊಂದು ಮಿಂಡನನ್ನು ಕೂಡಿದವಳು, ಎಂದು ಮೊದಲಾಗಿ ಅವರವರ ಕೃತ್ಯವನ್ನು ವಿವರಿಸಿ ನುಡಿಯುವರು. ಇದೆಲ್ಲವನ್ನು ಯಮಧರ್ಮನು ಕೇಳಿ, ಕೋಪವೇರಿ ಗರ್ಜಿಸಿ, ಈ ಪಾಪಿಗಳನ್ನೆಲ್ಲ ಮುಂದಲೆಹಿಡಿದು ಎಳೆದೊಯ್ದು. ಮುಹಾನರಕಗಳಲ್ಲಿ ಕೆಡಹಿ, ಕಾಲುಗಳನ್ನು ಕಡಿದು, ಕೈಗಳನ್ನು ಕತ್ತರಿಸಿ, ನಾಲಿಗೆಗಳನ್ನು ಸೀಳಿ, ಕಣ್ಣುಗಳನ್ನು ಕಿತ್ತು, ಮೂಗುಗಳನ್ನು ಕೊಯ್ದು, ಹೊಟ್ಟೆಗಳನ್ನು ಬಗಿದು, ಚರ್ಮಗಳನ್ನು ಸುಲಿದು, ಮೂಳೆಗಳನ್ನು ಮುರಿದು, ಶೂಲಕ್ಕೇರಿಸಿ, ಕೆಂಡದಮೇಲೆ ಉರುಳಿಸಿ, ಚಾಟಿಗಳಿಂದ ಹೊಡೆದು, ದೊಣ್ಣೆಗಳಿಂದ ಬಡಿದು, ಗರಗಸದಿಂದ ಕೊಯ್ದು, ಕಾದಕಂಬವನ್ನು ತಬ್ಬಿಸಿ, ಇಕ್ಕಳದಿಂದ ಕಚ್ಚಿಸಿ, ಸಲಾಕೆಗಳಿಂದ ಚುಚ್ಚಿಸಿ, ಪರಿಪರಿಯಾಗಿ ಶಿಕ್ಷಿಸಿರಿ ಹೋಗಿ, ಎಂದು ಅಪ್ಪಣೆ ಮಾಡಿ ಕಳುಹುವನು. ದೂತರಾದ

ರೊ ತಮ್ಮೊಡೆಯನು ಹೇಳಿದುದಕ್ಕೆ ೧ ಕ್ಕೆ ನೂರಾಗಿ ಈ ಪಾತಕಿಗಳನ್ನು ಶಿಕ್ಷಿಸುತ್ತ, ನಾನಾನಾಯಕನರಕಗಳಲ್ಲಿ ಕೆಡಹಿ, ಹಿಂಸೆಗೊಳಿಸಿ, ಬಹು ಕಾಲ ನರಳಿಸುತ್ತಿರುವರು. ಎಂದು ಮುನಿಪತಿಯು ನುಡಿಯಲು, ಸಾನಂದಗಣೇಶನು ಎಲ್ಲವನ್ನೂ ಕೇಳಿ, ಮನದಲ್ಲಿ ಬಹಳವಾಗಿ ನೊಂದು, " ಶಿವ ಶಿವಾ ! ಮುಂದಾಗುವುದನ್ನು ಕಾಣದೆ ನರರು ಅಕೃತ್ಯವನ್ನು ಮಾಡಿದರೆ, ಅವರನ್ನು ಯಮಧರ್ಮನು ಇಷ್ಟೊಂದುಪರಿಯಾಗಿ ಹಿಂಸಿಸಬಹುದೆ ? ಅಯ್ಯೋ ! ಆ ಪ್ರಾಣಿಗಳು ಎಷ್ಟು ನೊಂದುಕೊಳ್ಳುತ್ತಿರುವರೊ ! " ಎಂದು ಪರಿತಪಿಸಿ, " ಓ ಪರಶಿವನೇ ! ನೀವು ಇಂಥವರನ್ನೆಲ್ಲ ಹಿಂಸೆಗೆ ಬಿಳಗುಮಾಡಿ ನೋಡಿಕೊಂಡು ಸುಮ್ಮನಿರಬಹುದೆ ? ನೀವೇ ತಟಸ್ಥರಾದ ಬಳಿಕ, ಇನ್ನು ಆ ಬಡವರನ್ನು ಉದ್ಧರಿಸುವರಾರು ? ಸರ್ವದಯಾಪರ, ಶಂಕರ, ಸರ್ವಗತ, ಎಂಬ ಬಿರುದು ನಿಮಗಲ್ಲದೆ ಮತ್ತಾರಿಗಿರುವುದು ? ಕೆರದ ಕಾಲಿಂದೊದೆದರೂ, ಬಿಲ್ಲಿನಿಂದ ಹೊಡೆದರೂ, ಕಲ್ಲಿನಿಂದ ಇಟ್ಟರೂ, ಅವರನ್ನೆಲ್ಲ ಮೆಚ್ಚಿ ಕೈಲಾಸಕ್ಕೆಕರೆದುಕೊಂಡು ಹೋದ ನಿಮ್ಮ ದಯೆಯು ಈ ದೀನಪ್ರಾಣಿಗಳ ಮೇಲೆ ಅದೇಕೆ ಪ್ರಸರಿಸಲಿಲ್ಲ? ಹರಹರಾ ! ನಮಶ್ಶಿವಾಯ ! " ಎಂದು ಪರಿಪರಿಯಾಗಿ ಪ್ರಲಾಪಿಸಿ, ಇದನ್ನು ಕೇಳಿಕೊಂಡು ಸುಮ್ಮನಿರುವುದು ಸರಿಯಲ್ಲವಾದುದರಿಂದ ಈಗಳೇ ಯಮಪುರಿಗೆ ಹೋಗಿ, ಅಲ್ಲಿ ಯಾತನೆಗೊಳಗಾಗಿರುವವರನ್ನೆಲ್ಲಾ ಶಿವಲೋಕಕ್ಕೆ ಕರೆದುಕೊಂಡು ಹೋಗುವುದೇ ಕರ್ತವ್ಯವೆಂದು ಯೋಚಿಸಿ, ಥಟ್ಟನೆದ್ದನು. ಬಳಿಯಲ್ಲಿದ್ದ ಋಷಿಗಳೆಲ್ಲರೂ ಅತನೊಡನೆಯೇ ಎದ್ದರು. ಶಿವದತ್ತವಾದ ಪುಷ್ಪಕದಲ್ಲಿ ಎಲ್ಲರೊಡನೆ ಕುಳಿತು ಸಾನಂದಗಣೇಶನು ಹೊರಟನು. ಮುಂದೆ ಕಹಳೆಗಳು ಭೇರಿಗಳು ಧ್ವನಿಮಾಡಿದುವು. ಯಮಪುರದ ಸಮೀಪಕ್ಕೆ ಹೋಗುವುದರೊಳಗಾಗಿ ಚಾರನೊಬ್ಬನು ಓಡಿಹೋಗಿ, ಮಹಾತೇಜಸ್ವಿಯಾದ ಸಾನಂದಗಣಾಧೀಶ್ವರನು ಇಲ್ಲಿಗ ದಯೆಮಾಡಿಸುತ್ತಿರುವನೆಂದು ತಮ್ಮ ರಾಜನಾದ ಅಂತಕನೊಡನೆ ಬಿನ್ನೈಸಿದನು. ಯಮನು ಝಗ್ಗನೆದ್ದು, ಪುರವೀಥಿಗಳನ್ನಲಂಕರಿಸುವಂತೆ ಅಪ್ಪಣೆಮಾಡಿ, ಪರಿವಾರದೊಡನೆ ಇದಿರ್ಗೊಳ್ಳುವುದೆಕ್ಕಾಗಿ ಪಟ್ಟಣದ ಹೊರಬಾಗಿಲಿಗೆ ಬಂದನು. ಅತ್ತ ಗಣಾಧೀಶ್ವರನು ಪುರದ ಮಹಾದ್ವಾರದಲ್ಲಿ ವಿಮಾನದಿಂದಿಳಿದು, ಹಾವುಗೆಗಳನ್ನು ಮೆಟ್ಟಿ ಋಷಿಸ್ತೋ

ಮದೊಡನೆ ಒಳನುಗ್ಗಿದನು. ಯಮರಾಜನು ಋಷೀಶ್ವರನನ್ನು ಕಂಡು, ಕಾಣ್ಕೆಯನ್ನು ಮುಂದಿಟ್ಟು, ದೀರ್ಘವಾಗಿ ನಮಸ್ಕರಿಸಲು, ಮುನೀಶನು ಕರುಣದಿಂದ ಅವನ ಮಂಡೆಯನ್ನು ಹಿಡಿದೆತ್ತಿ, ಯಮರಾಜನೆ ಕುಶಲವೆ? ಎಂದು ಕೇಳಿದನು. ಯಮನಾದರೊ– ಸ್ವಾಮಿಯ ಅನುಗ್ರಹದಿಂದ ಇ ಪ್ಪತ್ತಮಟ್ಟಿಗೆ ಕುಶಲಿಯಾಗಿರುವೆನು, ಬಹುಕಾಲಕ್ಕೆ ನನ್ನಮೇಲೆ ಕೃಪೆಯಿ ಟ್ಟು ತಾವು ದಯೆಮಾಡಿಸಿದುದರಿಂದ ನನ್ನ ಆನಂದವು ಮಿತಿಮೀರಿರುವುದು; ಈ ಅಲ್ಪನು ಮಾಡುವ ಸೇವೆಯನ್ನು ಪರಿಗ್ರಹಿಸಿ, ಧನ್ಯನನ್ನು ಮಾಡುವು ದಕ್ಕಾಗಿ ಅರಮನೆಗೆ ಚಿತ್ತೈಸಬೇಕೆಂದು ಪ್ರಾರ್ಥಿಸಿದನು. ಅದಕ್ಕಾಗಿಯೇ ನಾವು ಬಂದೆವೆಂದು ಋಷೀಶನು ನುಡಿಯಲು, ಯಮನು ಹಸ್ತಾವಲಂಬನ ವನ್ನು ಕೊಟ್ಟು, ಕರೆದುಕೊಂಡು ಹೋಗುತ್ತಿರಲು, ಸಾನಂದಗಣೇಶನು ಯಮನಗರಿಯ ಸೌಂದರ್ಯವನ್ನೆಲ್ಲ ನೋಡಿಕೊಂಡು ಹೋಗುತ್ತಿದ್ದು,–ಯ ಮರಾಜನೆ ! ನಿನ್ನ ಪಟ್ಟಣದಲ್ಲಿರುವ ನರಕಪಚ್ಚಿಗಳ ವಿಸ್ತಾರವನ್ನೆಲ್ಲ ಸ್ವ ಲ್ಪ ತೋರಿಸು, ಎಂದು ನುಡಿಯಲು, ಯಮನು– ಸ್ವಾಮಿ, ಪರಶಿವನ ಪ ರಾವತಾರರಾದ ತಮ್ಮಂಥವರು ಪಾಪಿಗಳಿರುವ ಆ ವೈತರಣಿಯ ಬಳಿಯ ನ್ನು ಅವಲೋಕಿಸಬಾರದು, ಅಲ್ಲಿರುವ ಮಹಾನಾರಕಿಗಳ ದರ್ಶನಭಾಷಣ ಗಳಿಂದ ಇತರರಿಗೂ ಪಾಪಸಂಘಟನವಾಗುವುದು, ಎಂದು ವಿಸ್ಮೈಸಿದನು. ಗಣೇಶನಾದರೊ– ಹರಹರಾ ! ಮಹಾದೇವಾ ! ನಾವು ಇಷ್ಟುದೂರ ಬಂ ದು, ಆ ದೀನಪಾತಕಿಗಳನ್ನು ನೋಡದೆ ಹೋಗಬಹುದೆ ? ಅದರಿಂದೇನಾ ದರೂ ಆಗಲಿ ; ನೀನು ಅವಶ್ಯಕವಾಗಿ ನಮಗೆ ತೋರಿಸಲೇ ಬೇಕು, ಎಂ ದು ನುಡಿದನು. ಅದಕ್ಕೆ ಪ್ರತ್ಯುಪಾಯವನ್ನು ಯಮನು ಕಾಣದೆ, ಸ್ವಾಮಿ ಯ ಚಿತ್ತವಿದ್ದಂತಾಗಲಿ, ಎಂದು ಬಾಹ್ಯದಲ್ಲಿ ನುಡಿದು, ಮನದಲ್ಲಿ ನೊಂ ದು, ಮುಂದೆ ಸಾಗಿ, ನರಕಗಳ ಕೇರಿಗೆ ಕೈಹಿಡಿದು ಕರೆದುಕೊಂಡು ಹೋ ದನು. ಅಲ್ಲಿ ದೂತರು ಘುಡುಘುಡಿಸಿ, ನಾರಕಿಗಳನ್ನು ಸೀಳುತ್ತಲೂ, ಮುಂದಲೆಯನ್ನು ಹಿಡಿದು ಎಳೆಯುತ್ತಲೂ, ಕುಸುರಿ ಬಿಸುಡುತ್ತಲೂ, ಚಾಟಿಯ ಹೊಡೆತದಿಂದ ಬಾಯ್ಬಿಡಿದುಕೊಂಡರೆ ಮುಳ್ಳುಗಳನ್ನು ಗಂಟಲಿ ಗೆ ತುಂಬುತ್ತಲೂ, ಗರಗಸದಿಂದ ಕೊರೆದು ಕಿವಿಮೂಗುಗಳನ್ನು ತರಿದು, ಅಲಗುಗಳನ್ನು ಮರ್ಮಸ್ಥಾನಗಳಿಗೆ ಚುಚ್ಚಿ, ಕಲ್ಲುಗಾಣಗಳಲ್ಲಿ ಅರೆದು, ಉ

ಕ್ಕಿನ ಕಾಗೆಗಳಿಂದ ಕುಕ್ಕಿಸಿ, ಖಂಡಗಳನ್ನು ಕಡಿದು, ಕೊಡಲಿಗಳಿಂ ದ ತರಿದು, ಶೂಲದಿಂದಿರಿದು, ಮೂಳೆಗಳನ್ನು ಮುರಿದು, ಮುಸಲಗಳಿಂದ ಬಡಿದು, ಜಡಿದು, ಒಗೆಒಗೆಯಾಗಿ ಹಿಂಸೆಗೊಳಿಸುತ್ತಿದ್ದರು. ನಾರಕಿಗಳು ತಡೆಯಲಾರದೆ, ಅಯ್ಯೋ ! ಅಪ್ಪಾ ! ಹೊಡೆಯಬೇಡಿರಿ, ದಮ್ಮಯ್ಯ ! ಸಾಕು ! ತುಳಿಯಬೇಡಿರಿ, ಕೊಲ್ಲಬೇಡಿರಿ ; ಕೊಚ್ಚಬೇಡಿರಿ ; ಎಂದು ತೆ ರತೆರನಾಗಿ ಬಾಯ್ಬಿಟ್ಟು ಬೇಡಿಕೊಳ್ಳುತ್ತಿದ್ದರೂ, ದೂತರು ನಿಷ್ಕರುಣಿಗ ಳಾಗಿ ಮತ್ತಷ್ಟು ಹೆಚ್ಚಾಗಿ ಹಿಂಸಪಡಿಸುತ್ತಿದ್ದರು. ಅಷ್ಟೊಂದುಪರಿಯಾಗಿ ಹಿಂಸೆಗೊಳ್ಳುತ್ತಲಿರುವ ಪ್ರಾಣಿವರ್ಗವನ್ನೆಲ್ಲ ಋಷೀಕನು ನೋಡಿ, ಮನ ದಲ್ಲಿ ಮರುಗಿ, ಇವರನ್ನೆಲ್ಲ ಕಡೆಗೆ ಏನುಮಾಡುವಿರಿ ? ಎಂದು ಯಮರಾಜ ನನ್ನು ಕೇಳಲು, ಮಹಾನಿರಯಕುಂಡದಲ್ಲಿ ಇವರನ್ನು ಹಾಕುವೆವು. ಎಂ ದು ಪ್ರೇತರಾಜನು ನುಡಿದನು. ಅದೆಲ್ಲಿರುವುದೆಂದು ಗಣೇಶ್ವರನು ಕೇಳ ಲು, ಯಮನು ಆಮಹಾನರಕಕುಂಡವನ್ನು ತೋರಿಸಿದನು. ಅದರಲ್ಲಿ ಕೋ ಟ್ಯನುಕೋಟಿಪ್ರಾಣಿಗಳು ಬೇಯುತ್ತಿರುವುದನ್ನು ಸಾನಂದಮುನಿಯು ಕಂಡು, ಶಿವಶಿವಾ ! ನಿನ್ನ ಪಟ್ಟಣದಲ್ಲಿ ಇಂಥ ಕೂಪಗಳು ಎಷ್ಟಿರುವು ವೆಂದು ಕೇಳಿದನು. ಇಂಥವು ಇಪ್ಪತ್ತೆಂಟು ಕೋಟಿ ನಾಯಕನರಕಗಳಿ ರುವುವೆಂತಲೂ, ಅವುಗಳಿಗೆ ಉಪಕುಂಡಗಳು ಇನ್ನೂ ಅಗಣಿತವಾಗಿರುವು ವೆಂತಲೂ ವಿನ್ನೈಸಲು, ಮುನಿಪತಿಯು ಕೇಳಿ, ಆಶ್ಚರ್ಯಸಮುದ್ರದಲ್ಲಿ ಮು ಳುಗಿದನು. ಮತ್ತೂ ಆ ಪ್ರಾಣಿಗಳಮೇಲೆ ಮಹಾಕರುಣಗೊಂಡು ಕೈಯೆ ತ್ತಿ "ಶಿವಶಿವನಮಶ್ಶಿವಾಯ ! ಎಂದು ಮಹಾಮಂತ್ರವನ್ನು ಗಟ್ಟಿಯಾಗಿ ಉಚ್ಚೈಸಿದನು. ಅದು ಆ ನಾರಕಿಗಳ ಕಿವಿಗೆಲ್ಲ ಉಪದೇಶಿಸಿದಂತೆ ಕೇ ಳಿತು. ಅವರೆಲ್ಲರಿಗೂ ಸಾನಂದಗಣೇಶನ ಅನುಗ್ರಹದಿಂದ ಸದ್ಬುದ್ಧಿಯುಂ ಟಾಗಲು, ಅದನ್ನೇ ಗುರೂಪದಿಷ್ಟಮಂತ್ರವಂತೆ ಸ್ವರೂ ತಿಳಿದು " ಶಿವ ನಮಶ್ಶಿವಾಯ ! " ಎಂದು ಪಠಿಸಿದರು. ಆ ಕೂಡಲೇ ಥಟ್ಟನೆ ಅವರು ಯಾತನೆಗಳಿಂದ ನಿಷ್ಮುಕ್ತರಾದರು. ನರಕಗಳನ್ನು ಬಿಟ್ಟಿದ್ದರು. ಕೇರಿಕೇರಿ ಯಲ್ಲೂ ಸಾನಂದಗಣಪತಿಯ ಅಪ್ಪಣೆಯಮೇರೆ " ನಮಶ್ಶಿವಾಯ " ಎಂ ಬ ಮಂತ್ರವು ಸಾರಿಸಲ್ಪಟ್ಟಿತು. ಎಲ್ಲರೂ ಆ ಮಂತ್ರವನ್ನು ಪುನಶ್ಚರಣ ಮಾಡಿ, ಎದ್ದೆದ್ದು ಬಂದು, ಮುನಿಪನ ಸುತ್ತಲೂ ನಿಂತರು. ಯಮದೂತರು

ನಿಂತಲ್ಲಿಯೇ ನಿಂತು, ಹಲ್ಲನ್ನು ಕಡಿದುಕೊಳ್ಳುತ್ತಿದ್ದರು. ನಾರೆಕಿಗಳೆಲ್ಲರೂ ಚಿತ್ರಗುಪ್ತರನ್ನು ಪರಿಪರಿಯಾಗಿ ಹಂಗಿಸಿ ಬೈಯುತ್ತಲೂ, ಸಾನಂದಗಣೇಶನನ್ನು ಸ್ತುತಿಸುತ್ತಲೂ ಇದ್ದರು. ಯಮರಾಜನು ಬೆರಗಾಗಿ ನಿಂತನು.

ಸಾನಂದಗಣೇಶನು ಸರ್ವರನ್ನೂ ವಿಮಾನದಲ್ಲಿ ಕುಳ್ಳಿರಿಸಿ, ಕೈಲಾಸಕ್ಕೆ ಸಾಗಿಸಿದನು. ಇತ್ತ ಯಮಧರ್ಮನು ನರಕಗಳೆಲ್ಲ ಒರಿದಾದುದನ್ನು ಕಂಡು, ಖಿನ್ನನಾಗಿ ಮಲಗಿರಲು, ಚಿತ್ರಗುಪ್ತರು ತಮ್ಮ ಸ್ವಾಮಿಯಬಳಿಗೆ ಹೋಗಿ, " ಜೀಯಾ ! ಇದಕ್ಕಾಗಿ ತಾವು ವ್ಯಸನಪಡುವುದೇಕೆ ? ತಮಗೆ ಅಧಿಕಾರವನ್ನು ಕೊಟ್ಟದ್ದ ಪರಶಿವನ ಬಳಿಗೆ ಹೋಗಿ ಈ ಸಂಗತಿಯನ್ನೆಲ್ಲ ಬಿನ್ನೈಸಿ, ಆ ಸಾನಂದನಿಗೆ ತಕ್ಕ ಪ್ರತಿಕ್ರಿಯೆಯನ್ನು ಮಾಡಿಸಿದರಾಯಿತು " ಎಂದು ಹೇಳಿ, ಸಮಾಧಾನಪಡಿಸಿದರು. ಯಮನು ಅದೇ ಸರಿಯೆಂದು ಯೋಚಿಸಿ, ಆಪ್ತಜನರನ್ನು ಕೂಡಿಕೊಂಡು ಕೈಲಾಸಕ್ಕೆ ಬಂದನು. ಯಮನು ರೋದಿಸುತ್ತ ಶಿವನ ಮುಂಗಡೆಗೆ ಹೋಗಿ, ನರಕಲೋಕದ ಬೀಗದಕೈಗಳ ಜೊಂಪೆಯನ್ನೆಲ್ಲ ಮುಂದಿಟ್ಟು, ನಮಸ್ಕರಿಸಿ,— ಪ್ರಭುವೇ ! ಸಾನಂದಮುನಿಯು ನಮ್ಮ ಪುರಕ್ಕೆ ಬಂದು, ನಾರಕಿಗಳನ್ನೆಲ್ಲ ಕರೆದುಕೊಂಡು ಹೋಗಿ, ನನ್ನ ಪುರವನ್ನು ಹಾಳ್ಗೆಡಹಿದನು; ಇನ್ನು ನನಗೆ ನರಕಲೋಕಾಧಿಕಾರವೇತಕ್ಕೆ ? ಎಂದು ದುಗುಡದಿಂದ ಬಿನ್ನೈಸಿದನು. ಅದನ್ನು ಕೇಳಿ ಮಹಾದೇವನು ನಸುನಕ್ಕು— " ಸಾನಂದನು ಮುಂದಾಲೋಚನೆಯನ್ನು ಮಾಡದೆ ಅಚಾತುರ್ಯದಿಂದ ಮಾಡಿರಬಹುದು; ಮುಂದೆ ಹಾಗೆ ಮಾಡದಂತೆ ನಾನು ಆತನಿಗೆ ಬೆಸಸುತ್ತೇನೆ; ಇದಕ್ಕಾಗಿ ನೀನು ಮನಸ್ಸಿನಲ್ಲಿ ಚಿಂತೆಪಡಬೇಡ; ಎಂದಿನಂತೆ ಪಾಪಿಗಳನ್ನು ಶಿಕ್ಷಿಸುವ ಕೆಲಸವನ್ನು ಮಾಡಿಕೊಂಡಿರು, ಹೋಗು " ಎಂದು ಹೇಳಿ, ಸಮಾಧಾನಪಡಿಸಿ, ಬೀಗದಕೈಗಳನ್ನೆಲ್ಲ ಅವನೊಡನೆಯೇ ಹೊರಿಸಿ ಕಳುಹಿಕೊಟ್ಟನು. ಇತ್ತ ಸಾನಂದನನ್ನು ತೆಗೆದಪ್ಪಿ ಸಂತೈಸಿ, ಗಣಪದವಿಯಿತ್ತು, ನರಕವನ್ನು ಬಿಟ್ಟು ಅವನೊಡನೆ ಬಂದಿದ್ದವರಿಗೆಲ್ಲ ಸಾಲೋಕ್ಯವನ್ನು ಅನುಗ್ರಹಿಸಿದನು; ಎಂದು ಚೆನ್ನಬಸವೇಶನು ನಿರೂಪಿಸಿದನೆಂಬಲ್ಲಿಗೆ ಮೂರನೆ ಅಧ್ಯಾಯವು

ಸಂಪೂರ್ಣಂ.

೪೯ ನೆ ಅಧ್ಯಾಯವು.

ವೀರಶೈವಶರಣರ ಚರಿತ್ರೆ.

ಬಳಿಕ ಸಿದ್ಧರಾಮೇಶನು ಚೆನ್ನಬಸವೇಶನನ್ನು ಕುರಿತು— ಶಿವಮಂತ್ರಜಪಾದಿಗಳಿಂದಲೇ ಅನೇಕರು ಕೈಲಾಸವನ್ನು ಹೊಂದಿದರೆಂದು ತಾವೇ ಅಪ್ಪಣೆಕೊಡಿಸಿದಿರಪ್ಪಿ. ಹೀಗಿರುವಲ್ಲಿ ಇನ್ನು ಇಷ್ಟಲಿಂಗಧಾರಣವೇತಕ್ಕೆ? ಎಂದು ಬೆಸಗೊಳ್ಳಲು, ಚೆನ್ನಬಸವೇಶನು— ಲಿಂಗಹೀನರು ಭಕ್ತಿಜಪತಪಸ್ಸುಗಳಿಂದ ಶಿವಲೋಕಕ್ಕೆ ಹೋದರೂ, ಅಲ್ಲಿನ ಹೊರಬಾಗಿಲಲ್ಲಿ ನಂದೀಶನು ಅವರೆಲ್ಲರಿಗೂ ಲಿಂಗಧಾರಣೆಯನ್ನು ಮಾಡಬೆ ಬಳಹುಗಿಸುವುದೇ ಇಲ್ಲ, ಎಂದನು. ಹಾಗಾದರೆ ಭೂಲೋಕದಲ್ಲೇ ಲಿಂಗಧಾರಣವನ್ನು ಮಾಡಿಕೊಂಡಿದ್ದು ಶಿವಲೋಕವನ್ನೈದಿದವರ ಚರಿತ್ರವನ್ನು ನನಗೆ ಅಪ್ಪಣೆಕೊಡಿಸಬೇಕೆಂದು ಪ್ರಾರ್ಥಿಸಲು, ಚೆನ್ನಬಸವೇಶನು ಹೇಳತೊಡಗಿದನೆಂತೆಂದರೆ— ಲಿಂಗಧಾರಕರಾದ ವೀರಶೈವರಿಗೆ ಜಾತಿ, ಜನನ, ಪ್ರೇತ, ಉಚ್ಛಿಷ್ಟ, ರಜಸ್ಸು, ಎಂಬಿವುಗಳ ಪಂಚಸೂತಕಗಳು ಇಲ್ಲ. ಶ್ವಪಚಯ್ಯನಿಗೆ ಶಿಷ್ಯನಾಗಿ ದೀಕ್ಷೆಯನ್ನು ಪಡೆದುಕೊಂಡ ಸಾಮುವೇದಿಗಳು ಜಾತಿಸೂತಕವಿಲ್ಲವೆಂಬುದನ್ನೂ, ನಿಂಬಿವ್ವೆಯು ಮಗನನ್ನು ಕೊಂದು ಮತ್ತೆ ಆಗಳೇ ಶಿವನಿಗೆ ಬೋನವನ್ನು ಮಾಡಿಕ್ಕಿ ಪ್ರೇತಸೂತಕವಿಲ್ಲವೆಂಬುದನ್ನೂ, ದಾಸಿನಿಂಬ್ಯಕ್ಕನು ರಜಸ್ಸೂತಕವಿಲ್ಲವೆಂಬುದನ್ನೂ, ಸಿಂಗಮುರಾಳನು ಜನನಸೂತಕವಿಲ್ಲವೆಂಬುದನ್ನೂ, ಬಿಬ್ಬಬಾಚಯ್ಯನು ಉಚ್ಛಿಷ್ಟಸೂತಕವಿಲ್ಲವೆಂಬುದನ್ನೂ, ದೃಷ್ಟಪಡಿಸಿರುವರು. ಕಾಚಿರಾಜನು ಪಾದೋದಕದ ಮಹಿಮೆಯನ್ನು ಮೆರೆಯಿಸಿದನು. ವೀರಶಂಕರದಾಸನು ಕನಸಿನಲ್ಲಿ ತಾನು ಭವಿಷ್ಯವನ್ನು ಪುಟ್ಟದೆನೆಂದು ತಿಳಿದು ಕಾದಕೊಪ್ಪರಿಗೆಯಲ್ಲಿ ಶರೀರವನ್ನೊಪ್ಪಿಸಿದನು. ಕರುಳಕೇತಯ್ಯನು ಹಾಲನ್ನು ಲಿಂಗಕ್ಕೆ ಸಮರ್ಪಿಸದೆ ಕುಡಿದೆನೆಂದು ತಿಳಿದು ಕರುಳನ್ನೇ ಬಗಿದುಕೊಂಡನು. ಪರ್ವತನಾಥನು ತಾಯಿಯ ಮಾತಿಗಾಗಿ ಕರುಳಿನ ತೋರಣವನ್ನು ಕಟ್ಟಿದನು. ಗಂಡಗತ್ತರಿಯ ನಾಚಯ್ಯನು ಶಿವನಿಂದಕನನ್ನು ತುಂಡುತುಂಡಾಗಿ ಕತ್ತರಿಸಲಾಗಿ ಪರಮತಸ್ಥರು ಬಂದು ಮುತ್ತಿಕೊಳ್ಳಲು, ಆಗ ನಾಚಯ್ಯನು ತಲೆಯನ್ನು ಕತ್ತ

ರಿಗೆ ಕೊಟ್ಟು ಕತ್ತರಿಸಲು, ರಾಚಮಲ್ಲಯ್ಯನ ತಾಳಕ್ಕೆ ಸರಿಯಾಗಿ ಆ ಮುಂಡವು ಕುಣಿದಾಡಿ ಮತ್ತೆ ರುಂಡಕ್ಕೆ ಸೇರಿ ನೇರವಾಯಿತು. ಹಾವಿನ ಹಾಳಕಲ್ಲಯ್ಯನು ಹಾರ್ವರೊಡನೆ ವಾದಮಾಡಿ ನಾಯಿಯಿಂದ ವೇದವನ್ನು ಹೇಳಿಸಿದನು. ಜಂಬೂರಕಾಳಯ್ಯನು ಹಾಗೆಯೇ ಶುನಕನಿಂದ ವೇದವನ್ನೋದಿಸಿದನು. ತಂದೆಯು ತನ್ನ ತಲೆಯನ್ನು ತರಿದು ಶಿವನಿಗೆ ಆರತಿಯೆತ್ತಿ ಮತ್ತೆ ಮುನ್ನಿನಂತೆ ಸೇರಿಸಿಡಲು, ಮಗನಾದ ಗೋವಿಂದಭಟ್ಟನು ಅದನ್ನು ಕಂಡು, ಶಿವನಿಗೆ ಸಮರ್ಪಿಸಿದ ಕಾರಣದಿಂದ ನಿರ್ಮಾಲ್ಯವಾದ ಶಿರಸ್ಸನ್ನು ಮತ್ತೆ ಧರಿಸಿಕೊಳ್ಳುವುದು ಅನುಚಿತವೆಂದು ತಿರಸ್ಕರಿಸಿ, ತನ್ನ ತಲೆಯನ್ನು ತರಿದು ಶಿವನಿಗೆ ಬೆಳಗಿ, ಮೂರುದಿನದನಂತರ ಹೊಸತಲೆಯನ್ನು ಪಡೆದನು. ಮೊರಟಿದ ಬಂಕಯ್ಯನು ಬಣಗಿದ ಮೋಟುಮರವನ್ನು ಚಿಗುರಿಸಿ, ಗೊಡ್ಡು ಹಸುವಿನಿಂದ ಹಾಲನ್ನು ಕರೆದು, ಬತ್ತಿದ್ದ ಚಿಲುಮೆಯಲ್ಲಿ ನೀರನ್ನು ಹುಟ್ಟಿಸಿ, ಜಂಗಮನಿಗೆ ಕೊಟ್ಟನು. ಮತ್ತೂ ತನ್ನ ಶಿರಸ್ಸನ್ನು ತರಿದು ಲಿಂಗಕ್ಕೆ ಆರತಿಯನ್ನು ಬೆಳಗಿ, ತಲೆಯು ಮತ್ತೆ ಹುಟ್ಟಲಾಗಿ, ಅದನ್ನೂ ತರಿದು ಸಮರ್ಪಿಸುತ್ತ, ಹೀಗೆ ಅರುವತ್ತೆರಡುಬಾರಿ ಮಾಡಿ, ಹೊಸಹೊಸತಲೆಗೆ ಬೇರೆ ಬೇರೆ ಶರೀರಗಳನ್ನು ಪಡೆದನು. ಅನ್ಯರ ಲಿಂಗವನ್ನು ತಾನು ಎಂದಿಗೂ ಮುಟ್ಟದಿರುವ ನೇಮದ ಬೊಮ್ಮಯ್ಯನೊಬ್ಬನಿದ್ದನು. ತನ್ನ ಲಿಂಗವನ್ನು ಇತರರ ಕೈಯಿಂದ ಮುಟ್ಟಿಸದ ನಿಯಮವುಳ್ಳ ಮತ್ತೊಬ್ಬ ಬೊಮ್ಮಯ್ಯನಿದ್ದನು. ಇವರಿಬ್ಬರೂ ಬಸವೇಶನ ಅರಮನೆಗೆ ಬಂದು ಶಿವಾರ್ಚನೆಯನ್ನು ಮಾಡಿಕೊಳ್ಳುತ್ತಿರುವಲ್ಲಿ, ಮೊದಲಿನವನು ಎರಡನೆಯವನ ಲಿಂಗವನ್ನು ಮುಟ್ಟಲಾಗಿ, ಅವರವರ ವ್ರತಕ್ಕೆ ಭಂಗ ಬಂದು, ಈರ್ವರ ಪ್ರಾಣವೂ ಹೋಯಿತು. ಇವರಿಬ್ಬರೂ ಪ್ರಾಣವಳಿದುದನ್ನು ಮತ್ತೊಬ್ಬ ಬೊಮ್ಮಯ್ಯನು ನೋಡಿ, ಭಕ್ತಪ್ರಾಣಿಯಾದುದರಿಂದ ತಾನೂ ಪ್ರಾಣವನ್ನು ಬಿಟ್ಟನು. ಇವರು ಮೂವರನ್ನೂ ನೋಡಿದ ಬಸವೇಶನು ತಾನು ಪ್ರಾಣವನ್ನು ಕಳೆದುಕೊಳ್ಳಲು ಸಿದ್ಧನಾಗುವಷ್ಟರಲ್ಲಿ, ವೀರಬಂಕಯ್ಯನು ತನ್ನ ಕೊರಲಿಗೆ ಖಡ್ಗವನ್ನು ಹಾಕಿ, ಶಿವಾನುಗ್ರಹದಿಂದ ಮೂವರ ಪ್ರಾಣವನ್ನೂ ಬರಮಾಡಿದನು. ಜೈನನಾದ ಜಯಸಿಂಹ್ಮರಾಜನ ಹೆಂಡತಿ ಶಿವಭಕ್ತೆಯಾದ ಸುಗ್ಗಲದೇವಿಯು, ತನ್ನ ಗುರುವಾದ ದೇವರ ದಾಸಿಮಯ್ಯನನ್ನು ಬರಮಾ

ಡಿ ಜನರೊಡನೆ ವಾದಮಾಡಿಸುವಲ್ಲಿ, ಘಟದಲ್ಲಿ ಮುಚ್ಚಿ ತಂದಿದ್ದ ಸರ್ಪವನ್ನು ಚಂದ್ರಕಾಂತದ ಲಿಂಗವನ್ನಾಗಿ ಗುರುವು ಮಾಡಲು, ಜಿನರಾಜನು ಬೆರ ಗಾಗಿ ಶಿವದೀಕ್ಷೆಯನ್ನು ಪಡೆದುಕೊಂಡನು. ಋಷಿಶಾಪದಿಂದ ಕರಡಿಯಾ ಗಿದ್ದ ಗಂಧರ್ವನನ್ನು ತೆಲುಂಗುಜೊಮ್ಮಯ್ಯನು ಕೊಂದು ಮುಕ್ತನನ್ನು ಮಾಡಿದನು. ಮತ್ತೂ ಪುರಾಣಿಕ ಬ್ರಾಹ್ಮಣನೊಬ್ಬನು ಶಿವನಿಂದೆಯನ್ನು ಮಾಡುತ್ತಿರಲು, ಅವನ ಎದೆಗೆ ಶೂಲವನ್ನು ನಟ್ಟು ಕೊಂದನು. ಅದೇತ ಕ್ಕೆ ಕೊಂದೆಯೆಂದು ರಾಜನು ವಿಚಾರಿಸಲು, ಅವನು ಪಾಪಿಯೆಂದು ನುಡಿ ದು, ಅವನ ದೇಹವನ್ನೆಲ್ಲ ಹಳುಗಳ ರಾಶಿಯನ್ನು ಮಾಡಿ ತೋರಿಸಿದನು. ಹೆಂಡದ ಮೂರಯ್ಯನು ತನ್ನ ಕೈಯನ್ನೇ ಕಡಿದುಕೊಂಡೂ, ಕೋಲಶಾಂ ತಯ್ಯನು ಜಂಗಮ ಘಾತಕನನ್ನು ಕೊಂದೂ, ಕಕ್ಕಯ್ಯನು ವಿಷ್ಣುಭಕ್ತ ಪುರಾಣಿಕನನ್ನು ಇರಿದೂ, ಪ್ರಭಾತಯ್ಯನು ತನ್ನ ಮಗನ ಅಳಿವನ್ನು ನೋ ಡಿ ಸತ್ತ ಕನ್ಯೆಗೆ ಪ್ರಾಣವನ್ನು ಕೊಟ್ಟೂ, ತಮ್ಮ ವೀರವ್ರತವನ್ನು ಮೆರೆ ದರು. ಒಬ್ಬ ಸೂಳೆಯ ಮನೆಯು ಬೆಂಕಿಯಿಂದ ಬೇಯುತ್ತಿರುವಾಗ, ಅ ವಳ ವಿಟನಾದ ಜಂಗಮನು ತನ್ನ ಕಾಂತೆಯು ಬೆಂಕಿಯಲ್ಲಿ ಸುಟ್ಟುಹೋ ಗುವಳೆಂದು ವ್ಯಥೆಪಡುತ್ತಿರಲು, ಉರಗರಾಯಣ್ಣನೆಂಬುವನು ಕಂಡು, ಅ ಗ್ನಿಯ ಬಾಯಿಂದ ಆ ಸೂಳೆಯನ್ನು ಈಚೆಗೆ ಉಗುಳಿಸಿ ಬದುಕಿಸಿದನು. ಜೋದಮಾಯಣ್ಣನು ಬೇಡಿದ ಜಂಗಮನಿಗೆ ಗಜದಾನವನ್ನು ಮಾಡಿದನು. ರಕ್ಕಸಬ್ರಹ್ಮನು ತನ್ನ ಸಮಯಾಚಾರದ ಜಂಗಮಮೂರ್ತಿಯು ಅಳಿದುದ ರಿಂದ ತನ್ನ ತಲೆಯನ್ನು ಕತ್ತರಿಸಿ ಪ್ರಾಣಬಿಟ್ಟನು. ಕಣ್ಣಪ್ಪನೆಂಬ ಶರಣ ನು ಲಕ್ಷದತೊಂಭತ್ತಾರುಸಾವಿರ ಜಂಗಮರಿಗೆ ಸಲಿಸುವುದಕ್ಕಾಗಿ ಬಿನ್ನಹ ಮಾಡಿ, ಅವರು ಬರದಿರಲು, ಅವರ ಲಿಂಗಗಳನ್ನೆಲ್ಲ ಆಕರ್ಷಿಸಿಕೊಂಡನು. ರಕ್ಕಸಮಾರಣ್ಣನು ತನ್ನೆಡೆಯನ್ನು ಜಂಗಮನು ಉಣ್ಣಲಾಗಿ ಕತ್ತಿಯಿಂದ ಕತ್ತರಿಸಿ, ತನ್ನ ಪಾಲನ್ನು ತೆಗೆದುಕೊಂಡು, ಮರಳಿ ಜಂಗಮನಿಗೆ ಪ್ರಾಣ ವನ್ನು ಕೊಟ್ಟನು. ಮುಷ್ಟಿಒಡೆಯಯ್ಯನು ಇಟ್ಟಯಹಣ್ಣನ್ನು ಇನಿವಣ್ಣ ನ್ನಾಗಿ ಮಾಡಿ ಜಂಗಮನಿಗೆ ತಿನ್ನಿಸಿದನು. ಹೂಳಿದ್ದ ಬಸವನನ್ನು ಏಳಿಸಿ ದನು. ಸತ್ತಿದ್ದವಳಿಗೆ ಪ್ರಾಣವನ್ನು ಬರಮಾಡಿದನು. ಕೋಹೂರ ಬೊ ಮ್ಮಯ್ಯನು ಜೈನರೊಡನೆ ವಾದಮಾಡುವಾಗ ಅವರು ಸುಟ್ಟ ಆಲದ ಮರ

ವನ್ನು ತಾನು ಮೊದಲಂತೆ ಮಾಡಿದನು. ಸತ್ತಿದ್ದ ಮಗನಿಗೆ ಆರುತಿಂಗಳ ಮೇಲೆ ಪ್ರಾಣವನ್ನು ಕೊಟ್ಟನು. ಪೇಮನಾರ್ಯನು ತನಗೆ ನಮಸ್ಕರಿಸಿದ ರಾಜನಿಗೆ ಅಲ್ಪಾಯುಷ್ಯವಿದ್ದುದರಿಂದ ಹರಸದೆ ಬಿಟ್ಟು, ಕಡೆಗೆ ಅವನು ಸರ್ಪದಷ್ಟನಾಗಿ ಅಳಿಯಲು, ಹರಣವನ್ನಿತ್ತನು. ಅಮರಗುಂಡದ ಮಲ್ಲಿಕಾರ್ಜುನಾರ್ಯರೆಂಬ ತಮ್ಮ ಗುರುವಿನ ಹಾವುಗೆಗಳನ್ನು ತನ್ನ ಪಾದವು ಸೊಂಕಲಾಗಿ ಗುರುಭಕ್ತಾರ್ಯನು ಕೂಡಲೇ ತನ್ನ ಕಾಲನ್ನು ಕಡಿದು ಕೊಂಡು, ಗುರುವಿನ ಆಜ್ಞೆಯಮೇರೆ ಶೂಲವನ್ನೇರಿ, ಆ ಗುರುವಿನ ಅನುಗ್ರಹದಿಂದಲೇ ಮತ್ತೆ ಕಾಲನ್ನು ಪಡೆದನು. ಪರಾಶ್ರವತಿಯನ್ನು ತನ್ನ ಗುರುವಿನ ಸೂಳೆಯೆಂದು ಕಾಣುವೆ ಮೋಹಿಸಿವ ಗುರುಭಕ್ತಾಂಡಾರಿಯು ಅವಳಿಂದ ನಿಜಸ್ಥಿತಿಯನ್ನು ತಿಳಿದ ಒಳಿಕ ಕೊರಗಿ ತನ್ನ ಕಣ್ಣನ್ನೇ ಕಳೆದುಕಾಕಿ, ಗುರುಕರುಣದಿಂದ ಪಡೆದುಕೊಂಡನು. ಉಷಃಕಾಲಕ್ಕೆ ಶಿವಾರ್ಚನೆಯನ್ನು ಮಾಡುವ ನೇವುದ ವೆಲ್ಲಗೊಂಡದ ಮಹಾದೇವನು ಒಂದು ದಿನ ಮೈಮರೆದು ನಿದ್ರೆಯಲ್ಲಿದ್ದು ಎದ್ದಾಗ ಸೂರ್ಯನುದಿಸಿರುವುದನ್ನು ಕಂಡು ಕಾಲವಿಪರೀತವೆಂದು ಭಯದಿಂದ ತನ್ನ ಕಣ್ಣನ್ನೇ ಕಳಚಿ, ಮತ್ತೆ ಶಿವಾನುಗ್ರಹದಿಂದ ಪಡೆದನು. ಮತ್ತೊ ತನ್ನ ಗುರುವಾದ ಪಂಡಿತಾರಾಧ್ಯರ ಪೂಜೋಪಕರಣಗಳನ್ನು ತನ್ನ ಕಾಲು ಸೊಂಕಲು, ಅದನ್ನು ಕಡಿದು, ಮತ್ತೆ ಗುರುಕರುಣದಿಂದ ಪಡೆದನು. ಶಂಕರವಾಸಿಮಯ್ಯನು ಶಿವನಿಂದ ಅಗ್ನಿನೇತ್ರವನ್ನುಪಡೆದು, ಅನ್ಯದೇವಾಲಯಗಳನ್ನು ಆಕಣ್ಣಿನಿಂದ ನೋಡಿ ಸುಡುತ್ತಿದ್ದನು. ಈಶರಣನು ಪೂಜೆಯಕಾಯಕದಿಂದ ಜೀವಿಸುತ್ತಿರಲು, ಈತನು ಬಡವನೆಂದು ತಿಳಿದು ಜೇಡರದಾಸಯ್ಯನು ತನ್ನ ಮನೆಯ ಬತ್ತವನ್ನು ಕಳುಹಿಸಿಕೊಡಲು, ಅವನ್ನು ಕೈಯಲ್ಲಿ ಹಿಡಿದು, ಜೇಡರದಾಸಯ್ಯನ ಕಣಜದ ಬತ್ತವೆಲ್ಲಾ ಬಯಲಾಗುವಂತೆಮಾಡಿ, ಅವನು ಬಂದು ಕೊಂಡಾಡಲು, ಮತ್ತೆ ಎಂದಿನಂತೆ ಬತ್ತವನ್ನುಂಟುಮಾಡಿದನು. ಈ ಮಹಿಮನ ಮುಂದೆ ಮಸಣದಮಾರಯ್ಯನು ಒಬ್ಬ ಮಸಣಿಯನ್ನು ಕುಣಿಸಲು, ನನ್ನಮುಂದೆ ಮಸಣಿಯೆ? ಎಂದು ದಾಸಿಮಯ್ಯನು ಕಿಡಿಗಣ್ಣನ್ನು ಬಿಡಲು, ಅದನ್ನು ಮಸಣಿಯು ಬೆರಲಿನಿಂದ ಮಿಂಟಿ ನುಂಗಲು, ಅದನ್ನು ಶಿಕ್ಷಿಸಿ, ಅದರ ಮುಖದಿಂದ ಕಿಡಿಗಣ್ಣನ್ನುಮಾರಯ್ಯನಮೇಲೆಯೇ ಉಗುಳಿಸಿದನು. ಸತ್ಯಾಸಿಮಂ

ಚಣ್ಣನು ತನ್ನ ಕೈದೊಣ್ಣೆಯಿಂದಲೇ ಹೊನ್ನನ್ನು ಕರೆದು ಜಂಗಮನಿಗೆಕೊಟ್ಟನು. ವೊರನವೇವಯ್ಯನು ತನ್ನ ದೇಹದವೇಲೆ ಹತ್ತಿದ್ದ ಕೊಳೆಯನ್ನು ಹೊನ್ನನ್ನು ವಾಡಿತ್ತನು. ತೋಳಿಗೆಯವಾರಯ್ಯನು ಸೌದೆಗಳನ್ನೆಲ್ಲ ಚೆನ್ನದಗಟ್ಟಿಗಳನ್ನು ವಾಡಿ ಜಂಗವರಿಗೆ ಕೊಟ್ಟನು. ನುಲಿಯಚಂದಯ್ಯನು ಜಂಗವರಿಗೆ ಚಿನ್ನದ ಕೋಲುಗಳನ್ನುಕೊಟ್ಟನು. ಬೊಂತಾದೇವಿಯು ತನ್ನವೈವೇಲಣ ಬೊಂತೆಯನ್ನೊದರಿಹೊನ್ನನ್ನುದುರಿಸಿಜಂಗವವೂರ್ತಿಗಿತ್ತಳು. ವಾರಗೌಡನು ಜಂಗವಕ್ಕೆ ಸಾವಿರ ಹೊನ್ನುಗಳನ್ನುಹುಟ್ಟಿಸಿ ಕೊಟ್ಟನು. ಶೂಲಾಯುಧಯ್ಯನು ಚಿತ್ರಪ್ರತಿವೆಗೆ ಪ್ರಾಣವನ್ನುಬರಿಸಿ,ಜಂಗವನಿಗೆ ದಾನವಾಡಿದನು. ಗೌಳಭಟ್ಟಾರಕನು ಕನ್ನಡಿಯಲ್ಲಿ ಜಂಗವನಿಗೆ ಶಿವ ಸ್ವರೂಪವನ್ನು ತೋರಿಸಿದನು. ಕೆಂಬಾವಿಬೋಗಯ್ಯನು ಅಂತ್ಯಜನನ್ನು (ತದ್ರೂಪಶಿವನನ್ನು) ಪ್ರಜಿಸಿದನೆಂದು ತಿಳಿದು, ಆ ವೂರಿನ ವಿಪ್ರರು ಅವನನ್ನು ಹೊರಕ್ಕೆ ಹೊರಡಿಸಲು, ಊರಿನ ಲಿಂಗಗಳೆಲ್ಲ ಅವನೊಡನೆಯೇ ಉರುಳಿಕೊಂಡುಹೋದುವು. ಮರಳಿ ಆತನನ್ನು ಕರೆದುಕೊಂಡುಬರಲು ಲಿಂಗಗಳೂ ಬಂದು ಬಂದರ ಪೀಠದಲ್ಲಿ ಮತ್ತೊಂದು ಕುಳಿತುಕೊಂಡುವು. ಪೋರಾಂಡಲದ ಸೂರವ್ವೆಯು ಅಂತ್ಯಜರೂಪದಿಂದ ಬಂದಿದ್ದ ಶಿವನಿಗೆ ಉಣಬಡಿಸಿತಲು, ಆ ಅಗ್ರಹಾರವ ಹಾರ್ವರೆಲ್ಲರೂ ಅವಳ ಮನೆಯಸುತ್ತಲೂ ಮುತ್ತಿ, ಹೆದರಿಸುತ್ತಿರುವಾಗ, ಶಿವನು— ಇನ್ನೇನುಗತಿ! ಯೆಂದು ಭಯವನ್ನು ನಟಿಸುತ್ತಿರುವಲ್ಲಿ, ಈಕೆಯು ಅಭಯವನ್ನು ಹೇಳಿ ಶಿವನ ವೆಚ್ಚಿಗೆಯನ್ನು ಪಡೆದಳು. ತೆಲುಗೇಶನು ನವಲಿಂಗಾನುಸಂಧಾನವನ್ನರಿತೂ, ವುಸಣಯ್ಯನು ಲಿಂಗಾಂಗಸಾವರಸ್ಯಜ್ಞಾನವನ್ನು ಪಡೆದೂ, ಡಕ್ಕೆಯ ಬೊವ್ಮಯ್ಯನು ಅಷ್ಟಾವರಣತತ್ತ್ವವನರಿದೂ, ಭಾನುದೇವನು ಶಿವನನ್ನೇ ಗುರುವನ್ನಾಗಿ ವಾಡಿಕೊಂಡು ಲಿಂಗಾಂಗಸಂಬಂಧವನ್ನರಿತೂ, ಬಡಿಹೋರಿಬ್ರಹ್ಮನು ಬಡಿಹೋರಿಕಾಯಕವನ್ನು ವಾಡಿಯೂ, ಎಲೇಶ್ವರದಕೇತಯ್ಯನು ವುಗನಿಗೆ ವುಗಳನ್ನೇ ವದುವೆವಾಡಿಯೂ, ಕಣಿಯೂರಬಾಚಯ್ಯನು ಹುರಿದ ಬೀಜವನ್ನು ಬಿತ್ತಿ ಬೆಳೆದೂ, ಸುಗುಣಯ್ಯನು ಕೊಯ್ದ ಕೂಳಿಯಲ್ಲಿ ವತ್ತೆ ತೆನೆಗಳನ್ನು ಕೊಯ್ದೂ, ಇಳೆಹಾಳಬೊವ್ಮಯ್ಯನು ಬೀಜವನ್ನು ಬಿತ್ತದೆ ಬೇಕಾದ ಧಾನ್ಯಗಳನ್ನು ಬೆಳೆದೂ, ಭಕ್ತಿಪ್ರಭಾವವನ್ನು

ಮೆರೆಯಿಸಿದರು. ಕಾಳಿದಾಸನು ತನ್ನ ಇಷ್ಟಲಿಂಗಕ್ಕೆ ಷಡ್ರಸಾನ್ನವನ್ನು ಣಿಸುತ್ತಿದ್ದನು. ಚೆನ್ನಯ್ಯನು ತಾನುಣ್ಣುತ್ತಿದ್ದ ಅಂಬಲಿಯು ರುಚಿಯಾಗಿ ರಲು, ಶಿವನಿಗೂ ಕುಡಿಸಿದನು. ಶೀಲವಂತಕೇತಯ್ಯನು ಪ್ರತಿದಿನವೂ ಮು ಳೆಯ ನೀರನ್ನು ಕರೆಯಿಸುತ್ತಿದ್ದನು. ಪುಲಿಕಾಮನು ನವನಿಧಿಯನ್ನು ಪಡೆ ದಿದ್ದನು. ಕೋಟೆಯ ಶಿವನಾಗಯ್ಯನು ಧಾನ್ಯದ ಮಳೆಯನ್ನು ಒರಿಸಿ ದನು. ಅಂಬಿಗರಚೌಡಯ್ಯನು ಸಂಸಾರಸಾಗರವನ್ನು ದಾಟಿದನು. ಚಂ ಡಕೇಶಿ–ಮಾರಾಭಕ್ತ–ಇವರಿಬ್ಬರೂ ಲಿಂಗದಲ್ಲೀ ಹೊಕ್ಕು ಅಡಗಿದರು. ಚಿಕ್ಕಲಿಗೆನಾಗಯ್ಯನು ಹಾಡಿ ಶಿವಪ್ರಸಾದವನ್ನು ಪಡೆದನು. ಕಕ್ಕಯ್ಯನ ಕೋಲುಗೆಜ್ಜೆಯ ಲಯಕ್ಕೆ ಸರಿಯಾಗಿ ಶಿವನು ಕುಣಿದನು. ಚಿಕ್ಕಯ್ಯನ ಭ ಕ್ತಿಗೆ ಮೆಚ್ಚಿ ಶಿವನು ಲಿಂಗರೂಪದಿಂದ ನೆಲಸಿದನು. ಅಕ್ಕಿಯಮಾರಣ್ಣನು ಜಂಗಮರಿಗೆ ಮೃಷ್ಟಾನ್ನವಂನೀಡಿ ಶಿವಾನುಗ್ರಹವನ್ನು ಪಡೆದನು. ಉಡುಗ ಣಿಯ ಪೆರುಮಳೆಯು ಜಂಗಮರಿಗೆ ರಾಜ್ಯವನ್ನೆಲ್ಲ ಕೊಟ್ಟನು. ಇಡುಗ ಡಲ ಪೇರ್ಮಡಿಯು ಜಂಗಮರಿಗೆ ಧನಧಾನ್ಯವನ್ನೆಲ್ಲ ಸಮರ್ಪಿಸಿದನು. ನಿಡು ಗುಡಿಯ ಮಾರನು ಜಂಗಮನಿಗೆ ತನ್ನ ಹೆಂಡತಿಯ ಸೀರೆಯನ್ನು ಬಿಚ್ಚಿಸಿ ಕೊಟ್ಟನು. ಸಿಂಘಬಲ್ಲಾಳನೂ ಆಯ್ದಕ್ಕಿಯ ಮಾರಯ್ಯನೂ ಅಹಃಪ ರೆಯೂ, ತಮ್ಮ ತಮ್ಮ ಹೆಂಡಿರನ್ನು ಜಂಗಮರಿಗೆ ಕೊಟ್ಟರು. ವೀರಬೊ ಮ್ಮಯ್ಯನು ಪರವಾದಿಯಾದ ಶಿವದ್ವೇಷಿ ಶಂಕರಕೂಚಿಗನನ್ನು ಕೊಂದೂ, ವೀರಬಲದೇವನು ವೆಲನಾಡುಚೋಳನ ತಲೆಯನ್ನು ಕಡಿದೂ, ಸಗರದಬೊ ಮ್ಮದೇವನು ಪರವಾದಿಜೈನನನ್ನು ಕೊಂದೂ, ಶಿವಾನುಗ್ರಹವನ್ನು ಪಡೆದ ರು. ಪಂಚಮಭಕ್ತಯ್ಯನು ಅಳಿದ ಗುರುವಿಗೆ ತನ್ನ ಪ್ರಾಣವನ್ನಿತ್ತು ಳುಹಿದ ನು. ಬಿಲ್ಲಮರಾಯನು ತನ್ನ ಗುರುವನ್ನು ಶಿವಲೋಕಕ್ಕೆ ಕರೆದೊಯ್ದನು. ಗೂಗೆಯ ಮಾರಣ್ಣನು ಗುರೂಪದೇಶದಿಂದ ಮುಕ್ತನಾದನು. ಜೊಪ್ಪಿದೇ ವನು ತನ್ನ ಮಗನಿಗೆ ಗುರುವಿನ ಹೆಸರನ್ನು ಕರೆದು ಕಾಯಸಿದ್ಧಿಯನ್ನು ಪಡೆದನು. ಮಾದರಧೂಳಯ್ಯನು ಮಾಚಯ್ಯನಿಗೆ ಉಳಿಯ ಮೊನೆಯಲ್ಲಿ ಶಿವಲಿಂಗವನ್ನು ತೋರಿಸಿದನು. ಚಿಕ್ಕಲಿಗೆಯಯ್ಯನು ಒಲೆಯಲ್ಲಿ ಭೀಮರ ಸನಿಗೆ ಲಿಂಗವನ್ನು ತೋರಿಸಿದನು. ಪೆದ್ದಯ್ಯನಿಗ ಇದಿರಿನಲ್ಲಿ ಉರಿಲಿಂಗವ ನ್ನು ತೋರಿಸಿದನು. ಸೊಡ್ಡಳಬಾಚಿರಾಜಯ್ಯನಿಗೆ ಸೌರಾಷ್ಟ್ರ ಸೋಮೇ

ತನು ದನಸದ ಕೊಟ್ಟಾರವಲ್ಲಿ ತೋರಿದನು. ವೀರರೇಚಯ್ಯನೂ ಸೋಮಿ ದೇವಯ್ಯನೂ ಶಿವಸ್ಸನ್ನು ಕತ್ತಿನಿ ಶಿವಲಿಂಗಕ್ಕೆ ಆರತಿಯನ್ನೆತ್ತಿ ಮತ್ತೆ ಪ ಡೆಯುತ್ತಿದ್ದರು. ಭವಿಗಳನ್ನು ಮುಟ್ಟದ ವ್ರತದಿಂದಿದ್ದ ಕೇಶಿತಂದೆಯು ತ ನ್ನ ತಲೆಯನ್ನು ಭವಿಯು ಮುಟ್ಟಲಾಗಿ, ಆ ಶಿರವನ್ನೇ ಕತ್ತರಿಸಿ, ಮತ್ತೆ ಪಡೆದನು. ಏಕಾಂತರಾಮಯ್ಯನು ಜೈನರೊಡನೆ ವಾದಮಾಡಿ ತಲೆಯನ್ನು ಕತ್ತರಿಸಿಕೊಂಡು, ಏಳುದಿನದಮೇಲೆ ಪಡೆದನು. ಪುಲಿಗೆರೆಯ ಸೋಮ ಣ್ಣನು ಜಿನವಿಗ್ರಹವನ್ನು ನೋಡಿ ಸೀಳಿ ಶಿವಲಿಂಗವನ್ನು ಮಾಡಿದನು. ಮಾ ರುಡಿಗೆನಾಚಯ್ಯನು ಜೈನರನ್ನು ಕೊಂದು ಅವರ ಬಸದಿಗಳಲ್ಲಿ ಲಿಂಗಪ್ರತಿ ಷ್ಠೆ ಮಾಡಿದನು. ಆದಯ್ಯನು ಜಂಗಮರಿಗಾಗಿ ಮಾಡಿಸಿದ್ದ ಅನ್ನವನ್ನು ಜೈನರು ಎತ್ತಿಕೊಂಡು ಹೋಗಿ, ಆತನ ಹೆಂಡತಿಯನ್ನು ಕತ್ತರಿಸಿಪಾಕ ಲು, ಪುಲಿಗೆರೆಸೋಮಯ್ಯನಸನ್ನು ಸುರಹೊನ್ನೆಯೆಂಬ ಜೈನರ ಬಸದಿಗೆ ಕ ರೆತಂದು ಅವರನ್ನೆಲ್ಲ ಕೊಲ್ಲಿಸಿದನು. ಮೂರ್ಖನೈನಾರು ವೇಷಧಾರಿಯಾದ ಶಿವನೊಡನೆ ಜೂಜಾಡಿ, ಸೋಲಿಸಿ, ಅವನು ಪಣವನ್ನು ಕೊಡದಿರಲು, ಕ ಟ್ಟಹಾಕಿದ್ದು, ಅವನನ್ನು ಜಂಗಮನೆಂದು ತಿಳಿದಾಗ ಬಿಟ್ಟುಬಿಟ್ಟನು. ಚಿ ರುತೊಣೆಯನು ಜಂಗಮಾರ್ಚನೆಗೆಂದು ಕೊಟ್ಟದ್ದ ಧನವನ್ನು ಹೆಂಡತಿಯು ಬಂಧುಗಳಿಗೆ ವೆಚ್ಚಮಾಡಿ ಉಣ್ಣಿಸಲಾಗಿ, ಅವಳನ್ನೂ ನಂಟರನ್ನೂ ಕಡಿ ದು ಕೈಲಾಸಕ್ಕೆ ಹೋದನು. ಸಿರಿಯಾಳಸೆಟ್ಟಿಯು ತನ್ನ ಮಗನನ್ನು ತರಿದು ಶಿವನಿಗೆ ಉಣಬಡಿಸಿದನು. ಶಿವನನ್ನೂ ಆ ಸಿರಿಯಾಳನನ್ನೂ ಸ್ತೋರಕೃತ್ಯಾ ಚರಣೆಗಾಗಿ ಹಲಾಯುಧಯ್ಯನು ಬಹಿಷ್ಕರಿಸಲು, ಸಿರಿಯಾಳನಹೆಂಡತಿಯು ಪಾರ್ವತಿಯೂ ಆತನ ಒಳಗೆ ಬಂದು ಬೇಡಿಕೊಳ್ಳಲು, ಅವರ ಗಂಡಂದಿ ರನ್ನು ಗುಂಪಿಗೆ ತೆಗೆಮಾಕೊಂಡನು. ಬಾಹೂರಬೊಮ್ಮಯ್ಯನು ಆನೆಯನ್ನು ಕೊಂದು ಪ್ರಾಣವನ್ನೆತ್ತು ಜೋಳವರಾಶಿಯಲ್ಲಿ ಶಿವನನ್ನು ಮಾತನಾಡಿಸಿ, ಶಿಶಿಯು ನಂದಿಗೆ ಕಬ್ಬನ್ನು ಕಿನ್ನಿಸಿದನು ಕಾಳವ್ವೆಯು ಕಗ್ಗಲ್ಲಿನಿಂದ ಹಾಲ ನ್ನು ಕರೆದು ಶಿವನಿಗುಣಿಸಿದಳು. ಕೋಳೂರಕೂಡಗೂಸು ಹಾಲನ್ನು ಶಿ ವಲಿಂಗಕ್ಕೆ ಕುಡಿಸಿದಳು. ಚೋಳಿಯಕ್ಕನು ಉಣ್ಣುವಾಗ ರುಚಿಯಾಗಿ ಕಂಡ ಹುಗ್ಗಿಯನ್ನು ಭೀಮನಾಥನಿಗೆ ಉಣಿಸಿದಳು. ವಿರೂಪಾಕ್ಷಯ್ಯನು ತನ್ನ ಎರಡುಕಣ್ಣುಗಳನ್ನೂ ಶಿವನಿಗೆ ಅರ್ಪಿಸಿ ಮತ್ತೆ ಪಡೆದನು. ದೇವಯ್ಯ

ನು ತನ್ನ ಕಣ್ಣನ್ನುಕಳೆದು ಶಿವನಿಗೆ ಅರ್ಚಿಸುವುದನ್ನು ಪರಮತದವರುನೋಡಿ ಹಾಸ್ಯಮಾಡಲು, ಕೊತ್ತಿಯ ಕಣ್ಣನ್ನು ಕಳೆದು ಮತ್ತೆ ಪಡೆದುತೋರಿದನು. ಶಿವರಾತ್ರಿಯು ಸಂಕಣ್ಣನು ಹುಲಿಯ ಭಯದಿಂದ ಮರದಮೇಲೆ ಕುಳಿತು ಬಿಲ್ವಪತ್ರೆಯನ್ನು ಕಿತ್ತು ಹಾಕುತಲಿದ್ದು ಶಿವಾರ್ಚನೆಯನ್ನು ಮಾಡಿ ಕೈಲಾಸವನ್ನು ಪಡೆದನು. ಇದರಂತೆಯೇ ಶಿವರಾತ್ರಿಅಪ್ಪಯ್ಯನೂ ಭದ್ರಯ್ಯನೂ ಬಿಲ್ವದಿಂದರ್ಚಿಸಿ ಮುಕ್ತರಾದರು. ಹಾಲಮಲ್ಲಯ್ಯನು ಶಿವಾರ್ಚನೆಗೆ ಬಂದುಕಣಗಿಲೆಯ ಹೂವು ಸಾಲದಿರಲು, ತನ್ನ ಕಣ್ಣನ್ನೇ ತೆಗೆದರ್ಪಿಸಿ ಮತ್ತೆ ಪಡೆದನು. ಇದರಂತೆಯೇ ಶಿವಯೋಗಿದೇವಯ್ಯನು ತನ್ನ ನಾಲಿಗೆಯನ್ನು ಕಡಿದು ಮತ್ತೆ ಪಡೆದನು. ಉರುಲಿಂಗಪೆದ್ದಯ್ಯನು ಶರಣಸೀಸತಿ ಲಿಂಗವೇಪತಿಯೆಂಬ ಭಾವದಿಂದಿರಲು, ಸ್ತನವೇ ಲಿಂಗವಾಗಿ ಪರಿಣಮಿಸಿತು. ಹೆಂಗುಸು ಗಂಡಾದಳು. ಪರಿವಳಿಗೆಯು ವೈಜಿವ್ವೆಯು ಜಂಗಮರಿಗೆ ಊಟಕ್ಕಕ್ಕಲಾಗಿ ಜಿನನಾದ ಗಂಡನು ಆಕೆಯನ್ನು ಹೊಡೆದೋಡಿಸಲಾಗಿ, ಅವಳು ಪೆರಿ ಶಿವಾಲಯವೆಂದು ಜಿನಾಲಯವನ್ನು ಹೊಕ್ಕು, ಶಿವಲಿಂಗವೆಂದು ಜಿನನನ್ನುತಬ್ಬಿಕೊಳ್ಳಲು, ಅದು ಬಿಡದು ಅವಳನ್ನು ಐಕ್ಯಮಾಡಿಕೊಂಡು ಲಿಂಗಾಕಾರವಾಗಿ ವೈಜಕೇಶ್ವರನೆಂದು ಪ್ರಸಿದ್ಧವಾಯಿತು. ಶಿವಯೋಗಿ ಪುಲ್ಲಸರಾಜ್ಞೆಯಿಂದ ಸಕಳೇಶನಾದಿರಾಜನು ಕಲ್ಯಾಣವಲ್ಲಿರುತ್ತ, ಚಿಕ್ಕವಾದಣ್ಣನು ಅಳಿಯಲಾಗಿ, ಅವನ ಹೆಂಡತಿ ಮಾದೇವಿಯು ಸಮಾಧಿಯನ್ನು ತೋಡುತ್ತಿರಲು, ಮಗನಾದ ಬಾಲಲಿಂಗಯ್ಯನು ಮಾವಿರಾಜನೊಡನೆ ಬಿಜ್ಜಳಸಲು, ಚಿಕ್ಕವಾದಣ್ಣನ ಪ್ರಾಣವನ್ನು ಒತ್ತಮಾಡಿದನು. ಶಿವಲಿಂಕ ಮಂಚಣಪಂಡಿತನು ತನ್ನ ಬೆರಳನ್ನು ಕಡಿದು ಶಿವನಿಗೆ ಸಮರ್ಪಿಸುತ್ತಿರಲು, ದೂಷಕರು ಕಂಡು ಹಾಸ್ಯಮಾಡಲಾಗಿ, ಕಾಶಿಯ ವಿಶ್ವೇಶ್ವರನ ಮುಂದೆ ಪರಿಯು ಬಂದು ಅಡ್ಡಬೀಳುವಂತೆ ಮಾಡಿದನು. ಅಯ್ಯಮರಾಜನು ಹರಿಯೆಂದು ನುಡಿದ ಹಾವ್ವನನ್ನು ಕೊಂದನು. ಸತ್ಯಕ್ಕನು ವಿಷ್ಣುನಾಮೋಚ್ಚರಣೆಯನ್ನು ಮಾಡಿದ ಭಿಕ್ಷುಕನನ್ನು ಸೌಟಿನಿಂದಲೇ ಬಡಿದು ಕೊಂದಳು. ಬಳ್ಳೇಶಮಲ್ಲಯ್ಯನು ಬಳ್ಳವನ್ನೇ ಲಿಂಗವನ್ನಾಗಿ ಮಾಡಿದನು. ಕಲಿಗಣನಾಥನು ಭವಿಗಳಿಗೆಲ್ಲ ಲಿಂಗಧಾರಣೆಮಾಡಿಸುತ್ತಿರಲು, ಶಿವನು ಭವಿನೀಷದಿಂದ ಅವನಿದಿರಿಗೆ ಬಂದು, ಬಲಾತ್ಕರಿಸಿದ

ರೂ ಲಿಂಗವನ್ನು ಕಟ್ಟಿಕೊಳ್ಳದಿದ್ದು, ಅವನು ಕಡಿಯಲಾಗಿ ನಿಜರೂಪವ
ನ್ನು ತೋರಿಸಿ, ಕಡೆಗೂ ಅವನಿಂದ ಲಿಂಗಧಾರಣೆಯನ್ನು ಮಾಡಿಸಿಕೊಂ
ಡನು. ಕುಂಬಾರಗುಂಡಯ್ಯನು ಮಡಕೆಯನ್ನು ತಟ್ಟುವ ಲಯಕ್ಕೆ ಸರಿ
ಯಾಗಿ ಶಿವನನ್ನು ಕುಣಿಸಿದನು. ಒಡ್ಡಯ್ಯನೂ ಭದ್ರಗಾಯಕದ ಅಲ್ಲಮ
ಯ್ಯನೂ ಕೇಶವನೂ ಹಾಡಿ ಶಿವನನ್ನು ಮೆಚ್ಚಿಸಿದರು. ಚಾಡಯ್ಯನು ಶಿವ
ನನ್ನು ಕುಣಿಸಿದನು. ಸೋಮಣ್ಣನು ರಂಗವಲ್ಲಿಯ ಸೇವೆಯಿಂದಲೂ, ಸು
ಕುಮಾರಯ್ಯನು ಕಳುವಿನ ಕಾಯಕದಿಂದಲೂ, ವಿರಕ್ತಮಾಣಿಕಯ್ಯನು
ಲಿಂಗವನ್ನು ಮೆಟ್ಟಿಯೂ, ಹೂವಿನ ದಂಡಯ್ಯನು ಹೂವಿನ ಕರಡಿಗೆಯಿಂದ
ಲಿಂಗವನ್ನು ಒಡಿದೂ, ಲಿಂಗದಿಂದ ಮುಕ್ತಿಯನ್ನು ಪಡೆದರು. ಪರವಾದಿಗ
ಳನ್ನು ಕೊಲ್ಲುತ್ತಿದ್ದ ವೀರಸಂಗಯ್ಯನು ಜಂಗಮನೇಷಧಿಂದ ಬಂದವನಿಗೆ
ಶರೀರವನ್ನಿತ್ತನು. ಹೇರೂರನಾಚಯ್ಯನು ಜಂಗಮನಿಗೆ ತನ್ನ ದೇಹವನ್ನು
ಕಡಿದೊಪ್ಪಿಸಿದನು. ವೀರಸೋಮಯ್ಯನು ಕಾಲಿನಲ್ಲಿ ದಸಿಯು ನಟ್ಟಿದ್ದ
ರೂ ಲಕ್ಷಿಸದೆ ಶಿವನಿಗೆ ಅಭಿಷೇಕಜಲವನ್ನು ತಂದರ್ಪಿಸಿದನು. ವೀರಭೋ
ಗಣ್ಣನು ತನ್ನ ದೇಹವನ್ನು ಆಯುಧಗಳಿಂದ ಕಡಿದುಕೊಂಡನು. ದಸರ
ಯ್ಯನು ಜಂಗಮನೇಷದ ಮೋಟನು ತನ್ನನ್ನು ಹೊಡೆದರೂ, ಅವನಿಗೆ ಕೈ
ಯಿತ್ತನು. ಕೇಶಿರಾಜನು ತನ್ನ ಕೈಯ ಲಿಂಗವು ನೀರಿನಲ್ಲಿ ಬಿದ್ದುಹೋಗ
ಲಾಗಿ ಸ್ತೋತ್ರಮಾಡಿ ಮತ್ತೆ ಅದನ್ನೇ ಒರಮಾಡಿಕೊಂಡನು. ಶಿವದೇವ
ಯ್ಯನು ಒಚ್ಚಲ ನೀರಿನಿಂದ ತೊನ್ನನ್ನು ಹೋಗಲಾಡಿಸಿದನು. ಅದರಂತೆ
ಯೇ ಮಾವರದೂಡಯ್ಯನು ಸ್ನಾನಮಾಡಿದ ನೀರಿನಿಂದ ಅನೇಕರ ಕುಷ್ಠ
ವನ್ನು ಪರಿಹರಿಸಿದನು. ನಿರ್ವಿಷದ ಸಂಗಯ್ಯನು ತನ್ನನ್ನು ಕಚ್ಚಿ ಸತ್ತ ಹಾ
ವಿಗೆ ಪ್ರಾಣವನ್ನಿತ್ತನು. ಅದರಂತೆಯೇ ಧರ್ಮಯ್ಯನೂ ಹಾವಿಸಹಾಳ ಕಲ್ಲ
ಯ್ಯನೂ ತಮ್ಮನ್ನು ಕಚ್ಚಿ ಮಡಿದ ಹಾವುಗಳಿಗೆ ಪ್ರಾಣವನ್ನಿತ್ತರು. ಇವೇ
ಕಲ್ಯಾಣಪಟ್ಟಣದಲ್ಲಿರುವ ಕಿನ್ನರಬ್ರಹ್ಮಯ್ಯನು ಬಿಜ್ಜಳರಾಜನು ಕಾಣು
ವಂತೆಯೇ ತ್ರಿಪುರಾಂತಕೇಶ್ವರನಿಂದ ಸಾಕ್ಷ್ಯವನ್ನು ನುಡಿಸಿದನು. ಈ
ಮುಗಿದೇವಯ್ಯನು ಮನೆಯಿಂದ ಹೊರಡಿಸಲ್ಪಟ್ಟ ಕಾರಣದಿಂದ ಲಿಂಗದ
ತಲೆಯಮೇಲೆ ತನ್ನಮನೆಯ ಮುತ್ತುಮುಟ್ಟುಗಳನ್ನೆಲ್ಲ ಹೊರಿಸಿಕೊಂಡುಹೋ
ದನು. ಈತನೇ ಕನ್ನವ ಕಾಯಕದಿಂದ ಜಂಗಮಾರ್ಚನೆಯನ್ನು ಮಾ

ಡುತ್ತ, ಗೋಡೆಯ ಮಣ್ಣನ್ನು ಚಿನ್ನವನ್ನಾಗಿ ಮಾಡಿದ ಬೊಮ್ಮಯ್ಯನು. ಹಾದರದ ಬೊಮ್ಮಣ್ಣನು ಸಾಯಲಾಗಿ, ಇವನ ಹೆಂಡತಿಯು ಹಾದರದಿಂದ ಹಣವನ್ನು ಗಳಿಸಿ, ಜಂಗಮರಿಗೆ ಪಾಕಮಾಡಿಕ್ಕಿ, ಅವರು ಹಸಿದುದರಿಂದ ತಡಮಾಡದೆ ಎದ್ದು ಪಚ್ಚಿಗೆ ಬಾರೆಂದು ಸತ್ತಿದ್ದ ಗಂಡನನ್ನು ಕೂಗಿ ಎಬ್ಬಿಸಿದಳು. ಈ ನಿರ್ಲಜ್ಜೆಯ ಶಾಂತಯ್ಯನೂ ಇವನ ಹೆಂಡತಿಯು ಸಹ ಶೀತನನ್ನು ತಡೆಯಲಾರೆನೆಂದು ಜಂಗಮವೇಷದ ಶಿವನು ಬೇಡಲಾಗಿ ಉಟ್ಟಿದ್ದ ಬಟ್ಟೆಗಳನ್ನೇ ತೆಗೆದುಕೊಟ್ಟು ದಿಗಂಬರರಾಗಿದ್ದವರು. ಈ ಮರುಳಶಂಕರದೇವನು ಕಾಳಿಂಗದೇಶದಿಂದ ಇಲ್ಲಿಗೆ ಒಂದು ೧೨ ವರ್ಷಗಳಾದುವು. ಇವನು ಪ್ರಸಾದಸೇವನೆಯಿಂದಲೇ ಮುಕ್ತಿಯನ್ನು ಪಡೆಯುವನು. ಪಾರ್ವತಿಯಂಶನೇ ಉಡುತಡಿಯ ಮಹಾದೇವಿಯಕ್ಕನಾಗಿ ಹುಟ್ಟಿ, ಕಾಶಿರಾಜನನ್ನು ಭವಿ ಯೆಂಬುದಾಗಿ ಜರೆದುಬಿಟ್ಟು, ಘನವೈರಾಗ್ಯದಿಂದ ಬಾಳಿದ ವಳು. ಮಲ್ಲಗಣಪನೆಂಬುವನು ಮೇಖಲಾಸುರನನ್ನು ಕೊಂದು, ಭೂಮಿಯಲ್ಲಿ ಕಲಕೇತಯ್ಯನೆಂಬ ಹೆಸರಿನಿಂದವತರಿಸಿ, ಬಿಜ್ಜಳನ ತಗರನ್ನು ಕೊಂದು, ದೊರೆಯು ಬಂದು ಸ್ತುತಿಸಲಾಗಿ ಅದಕ್ಕೆ ಪ್ರಾಣವನ್ನಿತ್ತು, ಅದರ ಕೊಂಬನ್ನು ಸದಾ ಕೈಯಲ್ಲಿ ಹಿಡಿದು, ಸುಂಕದ ಬಂಕಯ್ಯನಿಗೆ ಹೊನ್ನನ್ನು ಉದುರಿಸಿಕೊಟ್ಟನು. ದಕ್ಷಯಾಗವನ್ನು ನಾಶಮಾಡಿದ ವೀರಭದ್ರೇಶನೇ ಭೂಮಿಯಲ್ಲಿ ಪರವಾದಿಗಳನ್ನು ಬಿಲಗೊಳಿಸುವುದಕ್ಕಾಗಿ ಮಡಿವಳ ಮಾಚಯ್ಯನಾಗಿ ಅವತರಿಸಿ, ಬಿಜ್ಜಳನ ಸೈನ್ಯವನ್ನು ಕೊಂದು, ಮತ್ತೆ ಅವನು ಸ್ತುತಿಸಲಾಗಿ ಮೊದಲಿನಂತೆ ಹುಟ್ಟಿಸಿ, ಶಿವಶರಣರ ಮನೋಮಾಲಿನ್ಯವನ್ನೆಲ್ಲ ತೊಳೆದು ನಿರ್ಮಲಗೊಳಿಸುತ್ತ, ಮಡಿವಳತನದ ಕಾಯಕದಲ್ಲಿರುವನು. ಈತನೇ ನಿಜಗುಣಮಹಾರಾಜನು, ಈತನೇ ಚಂದಿಮರಸನು, ಇವರೀರ್ವರೂ ಘನತರಮಂತ್ರಿಗಳಾಗಿದ್ದು ವೈರಾಗ್ಯವನ್ನು ಪಡೆದವರು. ಈತನು ಸಪ್ಪೆಯ ಅಲ್ಲಮದೇವ, ಈತನೇ ಮಿಂಡಸಂಗಯ್ಯ, ಈತನೇ ಮುಗ್ಧಸಂಗಯ್ಯ, ಈತನೇ ಮಾರಿತಂದೆ, ಈತನೇ ಪ್ರಸಾದಿಭೋಗಣ್ಣ, ಈತನೇ ಮೇದರಕೇತಯ್ಯ, ಈತನೇ ಡೋಹರಕಕ್ಕಯ್ಯ, ಈತನೇ ಭರಿತಾರ್ಪಣದ ಸಂಗಯ್ಯ, ಈತನೇ ವೈದ್ಯದ ಸಂಗಣ್ಣ, ಈತನೇ ಸತ್ಯಣ್ಣ, ಈತನು ದಾಸೋಹಿಸಂಗಣ್ಣ, ಈತನು ಬಾಚಿಯ ಕಾಯಕದ ಬಸವಪ್ಪ,

ಈತನು ನಗೆಯ ಮೂರಣ್ಣ, ಈತನು ಘಟ್ಟಮರಸಯ್ಯ, ಈತನು ಒಕ್ಕ
ಲಿಗಮುದ್ದಯ್ಯ. ಈತನು ಲದ್ದೆಯ ಸೋಮಯ್ಯ, ಈತನು ಗಾವುದಿ
ಮೂರಿತಂದೆ, ಈತನು ಲಿಂಕಬಂಕಣ್ಣ, ಈತನು ರಾಯಸದ ಮಂಚಣ್ಣ,
ಇವನು ಅವಸರದ ಲಿಂಕಣ್ಣ, ಈತನು ಪಡಿಹಾರಿಯುತ್ತಣ್ಣ, ಈತನು ಬೊ
ಕ್ಕಸದ ಚಿಕ್ಕಣ್ಣ, ಈತನು ಭಂಡಾರಿ ಶಾಂತಯ್ಯ, ಈತನು ಹಡಪದಪ್ಪ
ಣ್ಣ, ಈತನು ಚವರದಜಾಚಯ್ಯ, ಈತನು ಕಾಳಂಜಿಯಪ್ಪಣ್ಣ, ಈತ
ನು ಘಟ್ಟಮೂರಣ್ಣ, ಈತನು ಸ್ತುತಿಪಾಠಕ ಗಬ್ಬಿದೇವಯ್ಯ, ಈತನು
ಕೂಗಿನಮಾರಯ್ಯ, ಈತನು ಕೋಲಶಾಂತಯ್ಯ, ಈತನು ಪ್ರಹರಿಯ
ಮೂರಣ್ಣ, ಈತನು ಹೊಡೆಹುಲ್ಲಬಂಕಯ್ಯ, ಈತನು ತುರುಗಾವಿಯ ಮಾ
ರಣ್ಣ, ಈತನು ಅಗ್ಗಣಿಯ ಹೊನ್ನಯ್ಯ, ಈತನು ಸತ್ತಿಗೆಯ ಶಾಂತಯ್ಯ
ಇವರು ಮೊದಲಾದ ಏಳುನೂರೆಪ್ಪತ್ತಮರಗಣಂಗಳು ತಮ್ಮ ತಮ್ಮ ಕಾ
ಯಕವನ್ನು ಮಾಡಿಕೊಂಡಿರುವರು. ಇವರೆಲ್ಲರನ್ನೂ ಕೂಡಿಕೊಂಡು ಬಸ
ವರಾಜನು ಭೂಮಿಯಲ್ಲಿ ವೀರಶೈವಾಚಾರವನ್ನುದ್ಧರಿಸುವುದಕ್ಕಾಗಿ ಬಂದಿ
ರುವನು. ಇವರೆಲ್ಲರ ಮಹಿಮೆಯನ್ನೂ ಸಾಂಗವಾಗಿ ವರ್ಣಿಸುವುದಕ್ಕೆ ನ
ನಗೆ ಅಸಾಧ್ಯವು. ಇವರಲ್ಲಿ ಬಸವೇಶನ ಮಹಿಮೆಯೊಂದನ್ನು ಈಗ ವರ್ಣಿ
ಸುತ್ತೇನೆ; ಕೇಳು.— ಇವನು ಸಾಮ್ಬಸದಾಶಿವಸ್ವರೂಪಿಯಾದ ದ್ವಿತೀ
ಯಶಂಭುವು. ಶಿಲಾದನುನಿಯ ತಪಸ್ಸಿನಿಂದ ಅವನಿಗೆ ಸುತನಾಗಿ ಅವತರಿ
ಸಿ, ಘನತಪಸ್ಸಿನಿಂದ ಶಿವನನ್ನು ಮೆಚ್ಚಿಸಿ ಕೈಲಾಸದಲ್ಲಿದ್ದನು. ಹೀಗಿರು
ವಲ್ಲಿ ಬಂದುದಿವಸ ಹರಿಬ್ರಹ್ಮಾದಿಸಕಲದೇವತಾಸ್ತೋಮದಿಂದ ಸೇವೆ
ಗೊಳ್ಳುತ್ತಲಿದ್ದ ಪರಶಿವನ ಬಹ್ಣೀಲಗಕ್ಕೆ ದೇವೇಂದ್ರನು ತನ್ನ ಚತುರಂ
ಗಬಲದೊಡನೆ ಬರುತ್ತಲಿರಲು, ಶಿವನ ಇದಿರಿಗಿದ್ದ ನಂದೀಶನಿಗೆ ದೇವೇಂ
ದ್ರನ ದೇಹವು ಸೊಂಕಿತು. ಆಗ ನಂದೀಶನು ತನ್ನ ಬಾಲದಿಂದ ಝಾಡಿ
ಸಿದನು. ಅದರಿಂದ ಇಂದ್ರನು ಸೊಂದು, ಗರುಡ ಹಂಸ ಐರಾವತ ಉ
ಚ್ಚೈಶ್ರವಸ್ಸು ಮೊದಲಾದ ಎಷ್ಟೋ ಉತ್ತಮವಾಹನಗಳಿರುವಲ್ಲಿ, ಪರ
ಶಿವನು ಈ ಗೊಡ್ಡು ಮುದಿಯೆತ್ತನ್ನು ಅದೇಕೆ ಮೆಚ್ಚಿಕೊಂಡಿರುವನೋ
ಕಾಣೆ, ಎಂದು ಸಭಿಕರೊಡನೆ ಗೊಣಗುಟ್ಟಿಕೊಂಡನು. ಶಿವನು ಇದನ್ನು
ಕೇಳಿದವನಂತೆ ಸುಮ್ಮನಿದ್ದನು. ಇಂದ್ರನ ಗರ್ವೋಕ್ತಿಯನ್ನು ಕೇಳಿದರೂ

ಶಿವನು ಉಪೇಕ್ಷಿಸಿ ಸುಮ್ಮನಾವನೆಂದು ನಂದೀಶನು ತಿಳಿದು, ಕೋಪ ಗೊಂಡು ಸಭೆಯಿಂದೆದ್ದು ಹೊರಟನು. ನಾರದನು ಈ ಸುದ್ದಿಯನ್ನು ಶಂ ಕರನಿಗೆ ಅರಿಕೆಮಾಡಿದನು. ಆಗ ಇಂದ್ರನನ್ನು ಕುರಿತು—ಅಯ್ಯಾ ! ನಮ್ಮ ನ್ನು ವಹಿಸುವ ಸಾಮರ್ಥ್ಯವು ಧರ್ಮಸ್ವರೂಪನಾದ ಈ ನಂದಿಗಲ್ಲದೆ ಮು ತ್ತಾರಿಗಿರುವುದು ? ಅದನ್ನು ಕಾಣದೆ ನೀನು ಆತನನ್ನು ಜರೆಯಬಹುದೆ ? ನೀನೇ ಹೋಗಿ ನಂದೀಶನನ್ನು ಸಮಾಧಾನ ಮಾಡಿ ಕರೆದುಕೊಂಡುಬಾ ರೆಂದು ಶಿವನು ಅಪ್ಪಣೆ ಮಾಡಲು, ಇಂದ್ರನು ಚತುರಂಗಸೇನಾಸಮೇತ ನಾಗಿ ಹೋಗಿ ನಂದೀಶನನ್ನು ಕರೆಯಲು, ಅವನು ಬರದೆ ಹೋದನು. ಆಗ ಯಮ ವರುಣರು ಪಾಶವನ್ನಿಕ್ಕಿ ನಂದೀಶನನ್ನೆಳೆದರು. ಅವನು ಕೋಪ ದಿಂದ ಭೂಮಿಯನ್ನು ಪಾದದಿಂದ ಝಾಡಿಸಿ ಕೆರೆಯಲು, ಅದರಿಂದ ರಾಶಿ ಯಾಗಿ ಬಿದ್ದ ಮಣ್ಣು ಕ್ಷೇದಾರವಾಯಿತು. ಕೊಂಬಿನಿಂದ ಹಾರಿಸಿದ ಮಣ್ಣು ಸಮುದ್ರದಲ್ಲಿ ಬಿದ್ದು ನಿಷ್ಕಳಧ್ವೀಪವಾಯಿತು. ತೋಡಿದ ಗುಳಿಯು ಮಾನ ಸಸರೋವರವಾಯಿತು. ಹೂಂಕರಿಸಿ ಪ್ರಾಣಂಗಳನ್ನು ಕೀಳಲು, ಆತನ ಶ್ವಾಸೋಚ್ಛ್ವಾಸದಿಂದ ದೇವತೆಗಳು ತರತರಿಲೆಗಳಂತೆ ಹಾರಾಡಿದರು. ಆಗ ಇಂದ್ರನು ನಂದೀಶನ ಮಹತ್ತ್ವವನ್ನು ತಿಳಿದು, ಭಯಭಕ್ತಿಯಿಂದ ಸ್ತೋ ತ್ರ ಮಾಡಲಾಗಿ, ಆತನು ಪ್ರಸನ್ನನಾಗಿ ನಿನ್ನ ಇಷ್ಟವೇನೆಂದು ಕೇಳಿದ ನು. ಇಂದ್ರನು—ಪ್ರಭುವೇ ! ಈ ನನ್ನ ಭಾಗ್ಯವು ಅತ್ಯಲ್ಪವಾದುದು, ಮು ತ್ತೂ ಅಸ್ಥಿರವು; ಶಾಶ್ವತವಾದ ಘನಮುಕ್ತಿಯನ್ನು ಪಡೆವುದಕ್ಕಾಗಿ ನನಗೆ ಇಷ್ಟಲಿಂಗಧಾರಣವನ್ನು ಅನುಗ್ರಹಿಸು ಎಂದು ಬೇಡಲು, ನಂದೀಶನು—ಇಂದ್ರನೆ, ನಿನಗೆ ಈ ಜನ್ಮದಲ್ಲಿ ಅದು ಲಭಿಸಲಾರದು, ನವಜನ್ಮದಲ್ಲಿ ನೀ ನು ಅವತರಿಸಿ ಶಿವಭಕ್ತಿಯುಳ್ಳವನಾಗಿದ್ದರೆ, ನಾನೇ ಬಂದು ನಿನ್ನ ಇಷ್ಟಾ ರ್ಥವನ್ನು ನೆರವೇರಿಸುವೆನು ಎಂದನು. ಅದರಂತೆಯೇ ಇಂದ್ರನು ಭೂ ಲೋಕಕ್ಕೆ ಬಂದು, ಪಟ್ಟಗಲ್ಲೆಂಬ ಪಟ್ಟಣದಲ್ಲಿ ಚಾಳುಕ್ಯಕುಲದರಸನಾ ದ ತ್ರೈಲೋಕ್ಯಚೂಡಾಮಣಿ ಯೆಂಬ ಪ್ರಭುವಿನ ಪತ್ನಿ ಮಹಲೆಕ್ಷ್ಮಿ ಯೆಂಬುವಳ ಗರ್ಭದಲ್ಲಿ ಅನಿಮಿಷನೆಂಬ ನಾಮದಿಂದ ಹುಟ್ಟಿದನು. ಇವನು ಯೌವನಸ್ಥನಾಗಿ ಪ್ರತಿದಿನವೂ ಶಿವಲಿಂಗದರ್ಶನವಿಲ್ಲದೆ ಭುಂಜಿಸದ ವ್ರತವ ನ್ನು ಹಿಡಿದಿದ್ದನು. ಒಮ್ಮದಿನ ಬೇಟೆಗೆ ಹೋಗಿ ಕಾಡಿನಲ್ಲಿ ಶಿವಲಿಂಗವನ್ನು

ಕಾಣದೆ ಹಸಿದು ಬಳಲುತ್ತಿದ್ದನು. ಆತನ ಕುದುರೆಯೂ ಮಾಯವಾಯಿತು. ನಂದೀಶನು ಅವನಿಗೆ ಪೂರ್ವಜನ್ಮದಲ್ಲಿ ಕೊಟ್ಟಿದ್ದ ವರವನ್ನು ನೆರವೇರಿಸುವುದಕ್ಕಾಗಿ ಆ ಅರಣ್ಯಕ್ಕೆ ಬಂದನು. ಅವನನ್ನು ಅನಿಮಿಷನು ಕಂಡು ಲಿಂಗವನ್ನು ಕೇಳಿದನು. ನಂದೀಶನು ಅವನಿಗೆ ಲಿಂಗದೀಕ್ಷೆಯನ್ನಿತ್ತು ಪ್ರಾಣಲಿಂಗಿಯನ್ನಾಗಿ ಮಾಡಿದನು. ಬಳಿಕ ಲಿಂಗೈಕ್ಯನಾದ ಅನಿಮಿಷಯ್ಯನಿಗೆ ಆತನ ಮಂತ್ರಿವರ್ಗದವರು ಕ್ರಮವಾಗಿ ಸಮಾಧಿಯನ್ನು ಮಾಡಿದರು. ನಂದೀಶನು ತನ್ನಲಿಂಗವನ್ನು ಅನಿಮಿಷಯ್ಯನಿಗೆ ಕೊಟ್ಟುಬಿಟ್ಟನೆಂಬ ಸುದ್ದಿಯನ್ನು ನಾರದನು ಮುಂದಾಗಿ ಕೈಲಾಸಕ್ಕೆ ಹೋಗಿ ಹೇಳಿದನು. ಕೈಲಾಸದ್ವಾರದಲ್ಲಿದ್ದ ಸಿಹ್ಮಕೇಸರಿ, ದ್ರವಿಡ ಎಂಬುವರು ಲಿಂಗವಿಲ್ಲದ ಭವಿಯೆಂದು ನಂದೀಶನನ್ನು ಒಳಕ್ಕೆ ಬಿಡದೆ ತಡೆಯಲು, ಇದನ್ನು ಶಿವನು ಕೇಳಿ, ಆ ನಂದೀಶನು ಸರ್ವಾಂಗಲಿಂಗಿಯು, ಅಂಥವನನ್ನು ನೀವುಗಳು ಭವಿಯೆಂದು ತಿರಸ್ಕರಿಸಿದ ಕಾರಣ, ಭೂಮಿಯಲ್ಲಿ ಭವಿಗಳಾಗಿ ಹುಟ್ಟಿ, ಆ ನಂದೀಶನ ಮಹಿಮೆಯನ್ನು ತಿಳಿದು, ಜ್ಞಾನೋದಯಗೊಂಡು, ಮರಳಿ ಕೈಲಾಸಕ್ಕೆ ಬನ್ನಿರಿ ಎಂದು ಆಜ್ಞಾಪಿಸಿದನು. ಅದರಂತೆ ಕಸ್ಯೇಶ, ಬಿಜ್ಜಳ ಎಂಬ ಹೆಸರಿನಿಂದ ಅವರು ಅವತರಿಸಿದರು. ಶಿವನು ಎಂದಿನಂತೆ ಕೈಲಾಸದಲ್ಲಿರಲು, ನಾರದನು ಭೂಲೋಕವಾರ್ತೆಯನ್ನು ತಂದು ಹೇಳುವಾಗ್ಗೆ, ಅಲ್ಲಿ ಶಿವಭಕ್ತಿಯು ಅತಿ ವಿಶಳವಾಗಿರುವುದೆಂಬುದನ್ನು ತಿಳಿಸಲು, ಶಂಕರನು ನಂದೀಶನನ್ನು ಕರೆದು, ವೀರಶೈವಾಚಾರವನ್ನುದ್ಧರಿಸಿ, ಬಿಜ್ಜಳನಿಗೆ ನಿನ್ನ ಮಹತ್ತ್ವವನ್ನು ತೋರ್ಪಡಿಸುವುದಕ್ಕಾಗಿ ಭೂಮಿಯಲ್ಲಿ ನೀನು ಅವತರಿಸು ಎಂದು ಬೆಸಸಿ ಕಳುಹಿಕೊಟ್ಟನು. ನಂದೀಶನು ಅನುಚರಗಣದೊಡನೆ ಕೂಡಿ ಭೂಮಿಗೆ ಬಂದು, ಮಾದರಸನ ಪತ್ನಿ ಮಾದಾಂಬೆಯ ಗರ್ಭದಲ್ಲಿ ಬಸವನೆಂಬ ಹೆಸರಿನಿಂದ ಅವತರಿಸಿದನು. ಬಾಲಲೀಲೆಯ ಕಾಲದಲ್ಲೇ ಒಡನಾಡಿಯಾದ ಬ್ರಾಹ್ಮಣಕುಮಾರನೊಬ್ಬನು ಕಾಲ್ಜಾರಿ ಬಾವಿಯಲ್ಲಿ ಬಿದ್ದು ಸಾಯಲು, ಅವನ ತಾಯ್ತಂದೆಗಳು ಬಸವನೇ ಈ ಕೃತ್ಯವನ್ನು ನಡಿಸಿದನೆಂದು ಬೆನ್ನಟ್ಟಿ ಬರಲು, ತಾನು ಸಂಗಮನಾಥನಲ್ಲಿಗೆ ಹೋಗುತ್ತ, ಅಡ್ಡಲಾಗಿದ್ದ ಪ್ರವಾಹವನ್ನು ಎರಡುಭಾಗಮಾಡಿ, ನಿಲ್ಲಿಸಿ, ಆಚೆಗೆ ಹೋಗಿ, ತಾನು ಆ ಹುಡುಗನನ್ನು ಕೊಲ್ಲಲಿಲ್ಲವೆಂಬ ಸಂಗತಿಯನ್ನು ಸಂಗಮನಾಥನಿಂದ ಸಾಕ್ಷ್ಯವಾಗಿ

ನುಡಿಸಿದನು. ಅನಂತರ ತಂದೆಯು ತನಗೆ ಮಾಡಬೇಕೆಂದಿದ್ದ ಉಪನಯನವನ್ನು ತಿರಸ್ಕರಿಸಿ, ತನ್ನ ಅಕ್ಕನೊಡನೆ ಕೂಡಿ ಕಲ್ಯಾಣಕ್ಕೆ ಬಂದು, ಅಲ್ಲಿನ ಮಂತ್ರಿಯಾದ ಬಲದೇವನ ಮಗಳನ್ನು ಮದುವೆಯಾಗಿ, ಮಾವನು ಸತ್ತ ಬಳಿಕ ಅವನ ಸ್ಥಾನದಲ್ಲಿ ತಾನೇ ಮಂತ್ರಿಯಾಗಿ ನಿಂತು, ಬಿಜ್ಜಳನ ಸಭೆಯಲ್ಲಿ ದೇವಲಿಪಿಯನ್ನೋದಿ, ಗದ್ದುಗೆಯ ಕೆಳಗಿದ್ದ ಅರುವತ್ತುಕೋಟಿಯ ಹೊನ್ನನ್ನು ತೆಗಿಸಿ, ರಾಜನಿಗೆ ಕೊಟ್ಟನು. ತನ್ನ ಮನೆಗೆ ನುಗ್ಗಿದ್ದ ಕಳ್ಳರನ್ನು ಲಿಂಗವಂತರನ್ನಾಗಿಯೇಮಾಡಿದನು. ಜೋಳವನ್ನು ಮುತ್ತನ್ನಾಗಿ ಮಾಡಿ ಜಂಗಮರಿಗಿತ್ತನು. ಕನ್ನಡಿಯಲ್ಲಿ ಹಣೆಗಣ್ಣನ್ನು ತೋರಿಸಿಯೂ, ಲೆಕ್ಕದ ಒಪ್ಪಿತವನ್ನು ಮಾಡುವ ಸಮಯದಲ್ಲಿ ೧೧ ದಿನಗಳವರೆಗೆ ಸೂರ್ಯನನ್ನು ತಡೆದೂ, ಗೊಲ್ಲಿತಿಯ ಮಜ್ಜಿಗೆಯ ಗೂಡೆಯನ್ನು ಹಿಡಿದೂ, ಮಂಚಣ್ಣನ ಚಾಡಿಯಿಂದ ರಾಜನಿಗೆ ನಾನಾಸಂದರ್ಭಗಳಲ್ಲಿ ಉಂಟಾಗಿದ್ದ ಸಂಶಯಗಳನ್ನೆಲ್ಲ ಬಗೆಬಗೆಯಾಗಿ ಪರಿಹರಿಸಿಯೂ, ಗಡಿಗೆಯೊಳಗಣ ನೀರನ್ನು ಗಟ್ಟಿ ಮಾಡಿಯೂ, ಶಿವನಾಗಯ್ಯನ ಬೆರಲಿನಿಂ ಹಾಲನ್ನು ಕರೆದೂ, ಕಣಗಿಲೆಯ ಹೂವನ್ನು ಸಂಪಗೆಹೂವನ್ನಾಗಿ ಮಾಡಿಯೂ, ತನ್ನ ದೇಹವನ್ನು ಕಚ್ಚಿ ಸತ್ತ ಹಾವಿಗೆ ಪ್ರಾಣವನ್ನು ಕೊಟ್ಟೂ, ಚಿತ್ರದಲ್ಲಿ ಬರೆದಿದ್ದ ಹಲಸಿನ ಹಣ್ಣನ್ನು ನಿಜವಾದ ಹಣ್ಣನ್ನಾಗಿ ಮಾಡಿಯೂ, ಹೆಂಡವನ್ನು ಅಮೃತವನ್ನು ಮಾಡಿಯೂ, ವಿಷವನ್ನು ಅಮೃತವಂತೆ ಮಾಡಿಯೂ. ದೊರೆಯ ರಾಣಿವಾಸವವರನ್ನೆಲ್ಲ ಜಂಗಮರನ್ನಾಗಿ ಮಾಡಿಯೂ, ತೊಗರಿಯನ್ನು ರತ್ನಗಳನ್ನು ಮಾಡಿಯೂ, ಜಂಗಮಕ್ಕೆ ತನ್ನ ಹೆಂಡತಿಯನ್ನು ಕೊಟ್ಟೂ, ಜಂಗಮನೊಡನೆ ತನ್ನ ಪ್ರಾಣವನ್ನು ಬಿಟ್ಟೂ, ಅಗ್ಗಣಿಯ ಹೊನ್ನಯ್ಯನ ಕುಷ್ಠವನ್ನು ಪರಿಹರಿಸಿಯೂ, ಹೀಗೆ ಬಸವೇಶನು ನಾನಾವಿಧವಾದ ಪವಾಡಗಳನ್ನು ಅಪರಿಮಿತವಾಗಿ ನಡೆಯಿಸಿರುವನು. ಅವುಗಳನ್ನೆಲ್ಲ ಇಷ್ಟೆಂದು ಹೇಳುವುದಕ್ಕೆ ನನಗೆ ಅಸಾಧ್ಯವು. ಎಲೆ ಸಿದ್ಧರಾಮೇಶನೆ, ಪೂರ್ವದಲ್ಲಿ ಅಲ್ಲಮಪ್ರಭುವು ನಿರ್ಮಾಯನೆಂಬ ಗಣನಾಥನಿಗೂ ನಿರಹಂಕಾರಸುಜ್ಞಾನಿಗೂ ಮಗನಾಗಿ ಅವತರಿಸಿ, ಮಾಯೆಯನ್ನು ಜರೆದು ಬಂದು, ಅನಿಮಿಷಯ್ಯನ ಕೈಗೆ ನಂದೀಶನು ಕೊಟ್ಟದ್ದ ಲಿಂಗವನ್ನು ತೆಗೆದು ಕೊಂಡು, ಗೊಗ್ಗಯ್ಯ ಮುಕ್ತಾಯಿಗಳನ್ನು ಲಿಂಗಾಂಗಸಾಮರಸ್ಯಬೋಧೆಯಿಂದ ಮುಕ್ತರನ್ನು ಮಾಡಿದನು. ಅ

ಲ್ಲಿಂದ ನಿನ್ನು ಪಟ್ಟಣಕ್ಕೆ ಬಂದು, ನಿನ್ನು ಕೃತ್ಯವನ್ನೆಲ್ಲ ನೋಡಿ, ತಿರಸ್ಕರಿಸಿ, ಶಿವತತ್ತ್ವೋಪದೇಶವನ್ನು ಮಾಡಿ, ಇಷ್ಟಲಿಂಗಸ್ವರೂಪವನ್ನು ನಿನಗೆ ತಿಳಿಯುಪಡಿಸಬೇಕೆಂದುದ್ದೇಶಿಸಿ, ಇಲ್ಲಿಗೆ ಕರೆದುಕೊಂಡು ಬಂದಿರುವನು. ಈ ಮಹಾಮಹಿಮನ ಅದ್ಭುತಲೀಲೆಯು ಪವಿತ್ರವಾದುದು. ಈ ಜಗತ್ತಿನಲ್ಲಿರುವ ೮೪ ಲಕ್ಷ ಜೀವರಾಶಿಗಳಲ್ಲಿ ಗೋಜನ್ಮವು ಉತ್ತಮವಾದುದು. ಅದಕ್ಕಿಂತಲೂ ಮಾನವಜನ್ಮವಧಿಕವು. ಅವರಲ್ಲೆಲ್ಲ ಶಿವಭಕ್ತರು ಉತ್ತಮರು. ಅವರೊಳಗೆಲ್ಲ ವೀರಶೈವರು ಶ್ರೇಷ್ಠರು. ಅವರಲ್ಲೂ ಷಟ್ಸ್ಥಲತತ್ತ್ವವನ್ನರಿತವರು ಅಧಿಕರು. ಆ ಷಟ್ಸ್ಥಲ ಬ್ರಹ್ಮಿಗಳಾದ ನಿರಾಭಾರಿಗಳಿಗಿಂತಲೂ ಅಧಿಕರಾದವರು ಮೂರು ಲೋಕದಲ್ಲಿ ಯಾರೂ ಇಲ್ಲ. ಅದುಕಾರಣ, ಅಂತಹ ಷಟ್ಸ್ಥಲಬ್ರಹ್ಮಿಗಳನ್ನಲ್ಲದೆ ಇತರರನ್ನು ಈ ಬಾಗಿಲಿನಿಂದೊಳಗೆ ಹೋಗಗೊಳಿಸರು, ಎಂದು ನುಡಿದನು. ಇದನ್ನು ಕೇಳಿದ ಅಲ್ಲಿದ್ದ ಶರಣರಲ್ಲಿ ಕೆಲರು,— " ಅದು ನಿಜ, ಇಷ್ಟಲಿಂಗವಿಲ್ಲದವರ ಮುಖವನ್ನು ಕೂಡ ನೋಡಬಾರದು " ಎಂದು ಹೇಳಿದರು. ಆಗ ಅಲ್ಲಮಪ್ರಭುವು— ಈ ಸಿದ್ಧರಾಮನಂತಹ ಸರ್ವಾಂಗಲಿಂಗಿಗೆ ಇಷ್ಟಲಿಂಗಧಾರಣವೇತಕ್ಕೆ ? ಆಕಾಶವನ್ನೇ ಹತ್ತುವವನಿಗೆ ಊರುದೊಣ್ಣೆಯೇತಕ್ಕೆ ? ಸಮುದ್ರವನ್ನು ದಾಟುವವನಿಗೆ ಹರಿಗೋಲೇತಕ್ಕೆ? ಎನ್ನಲು, ಚೆನ್ನಬಸವೇಶನು ಪ್ರಭುವನ್ನು ಕುರಿತು— ಮುಖ್ಯವಾದ ಇಷ್ಟಲಿಂಗಧಾರಣೆಯೇಯಿಲ್ಲದ ಈ ಸಿದ್ಧರಾಮನು ಅದು ಹೇಗೆ ಸರ್ವಾಂಗಲಿಂಗಿಯಾದನು? ಅದನ್ನು ಅರುಹಬೇಕು, ಎಂದು ಬೆಸಗೊಂಡನು. ಆಗ ಸಿದ್ಧರಾಮೇಶನು " ಇಲ್ಲಿ ನೋಡು " ಎಂದು ಹೇಳಿ, ತನ್ನ ದೇಹವೆಲ್ಲ ಲಿಂಗಗಳ ಗೊಂಚಲಾಗಿರುವುದನ್ನು ತೋರ್ಪಡಿಸಿದನು. ಅದನ್ನು ಚೆನ್ನಬಸವೇಶನು ನೋಡಿ ನಕ್ಕು, ಇಂತಹ ಇಂದ್ರಜಾಲದ ಸರ್ವಾಂಗಲಿಂಗಿತ್ವವು ನಿಷ್ಪ್ರಯೋಜಕವು, ನಿನಗೆ ನಿಷ್ಕಲಿಂಗನಿಷ್ಠೆಯು ಅಳವಟ್ಟಲ್ಲ ಮನೆಗೆ ಅಲ್ಲಮನು ಬರಲಾಗಿ, ಅವನನ್ನು ಸುಡಬೇಕೆಂದು ನೀನು ಉರಿಗಣ್ಣನ್ನು ಬಿಟ್ಟೆ; ಅದುಕಾರಣ ನೀನು ಜಂಗವಮೊಹಿ, ಹೋಗು, ಎಂದು ತಿರಸ್ಕರಿಸಿದನು. ಮತ್ತೂ ಅಲ್ಲಮನ ಕಡೆಗೆ ತಿರುಗಿ, ನೀನು ಈ ಜಂಗವಮೊಹಿಯನ್ನು ಇಲ್ಲಿಗೆ ಕರೆತಂದು, ಇವನ ಸರ್ವಾಂಗಲಿಂಗಿತ್ವದ ಪ್ರಭಾವವನ್ನು ಮೆರೆಯಿಸುತ್ತಿರುವೆ! ನು

ರುವಿಲ್ಲದೆ ಲಿಂಗವನ್ನು ಸಂಪಾದಿಸಿ ತಂದಿರುವೆ! ನಿನ್ನಾಟವೇನು ಸಾಮಾನ್ಯವೆ? ನಿಮ್ಮಿಬ್ಬರ ಮುಖವನ್ನೂ ನೋಡಬಾರದು, ಎನ್ನಲು, ಅಕ್ಕಮನು— ನಾನು ಗುರುವನ್ನು ಬಿಟ್ಟು ಲಿಂಗವನ್ನು ತಂದಿಲ್ಲ; ಈ ಲಿಂಗದಲ್ಲೇ ಗುರುವಿನ ಚಿತ್ಕಳೆಯೂ ಅಡಕವಾಗಿದೆ ನೋಡು, ಎಂದನು. ಮತ್ತೂ ದ್ವಿತೀಯಶಂಭುವಾದ ಬಸವೇಶನು ಗುರುವಾಗಿಯೂ, ನೀನು ಪರಮಗುರುವಾಗಿಯೂ ಇರುವಾಗ, ಗುರುವನ್ನು ಬಿಟ್ಟುದು ಹೇಗೆ? ಎನ್ನಲು, ಅದನ್ನು ಕೇಳಿದ ಶರಣರೆಲ್ಲರೂ ಚಕಿತರಾಗಿ ಆನಂದಗೊಂಡರು. ಆಗ ಸಿದ್ಧರಾಮನು ಬೆರಗಾಗಿ, ಪ್ರಭುವಿನ ಪಾದಕ್ಕೆ ಬಿದ್ದು, ಮುಂದೆ ನನ್ನ ಗತಿಯೇನೆಂದು ಕೇಳಿದನು. ನೀನು ಇಷ್ಟಲಿಂಗವನ್ನು ಪಡೆದುಕೊಂಡಲ್ಲದೆ ಬೇರೆ ಮಾರ್ಗವಿಲ್ಲವೆಂದು ಪ್ರಭುವು ಹೇಳಲು, ನನಗೆ ಇಷ್ಟಲಿಂಗದೀಕ್ಷೆಯನ್ನು ಮಾಡುವವರಾರೆಂದು ಬೆಸಗೊಂಡನು. ಪ್ರಭುವಾದರೊ— ಈಬಸವೇಶನೊಡನಾದ ಏಳುನೂರೆಪ್ಪತ್ತಮಂದಿ ಗಣಂಗಳು ಭೂಮಿಯಲ್ಲಿ ವೀರಶೈವಮಾರ್ಗವನ್ನುದ್ಧರಿಸುವುದಕ್ಕಾಗಿ ಬಂದಿರುವರು; ಇವರಿಗೆ ಪ್ರಾಣಲಿಂಗಸಂಬಂಧದ ಷಟ್ಸ್ಥಲತತ್ತ್ವವನ್ನು ಬೋಧಿಸುವುದಕ್ಕಾಗಿ ಶಿವನ ಚಿತ್ಕಳಾಕುಮಾರನೇ ಈ ಚೆನ್ನಬಸವೇಶನಾಗಿ ಅವತರಿಸಿರುವನು. ಈತನೇ ನಿನಗೆ ಇಷ್ಟಲಿಂಗವನ್ನು ಅನುಗ್ರಹಿಸುವನು, ಎಂದು ನುಡಿದನು. ಸಿದ್ಧರಾಮೇಶನು ಹರ್ಷದಿಂದೆದ್ದು ಚೆನ್ನಬಸವೇಶನಿಗೆ ದೀರ್ಘದಂಡವಾಗಿ ನಮಸ್ಕರಿಸಿ,— ಎಲೈ ಗುರುವೆ, ಜೀವರಾಶಿಗಳಲ್ಲಿ ತಾರತಮ್ಯಗಳನ್ನು ತಾವು ಸೂಚಿಸಿದಿರಷ್ಟೆ; ಆ ಜೀವಭೇದಗಳನ್ನೂ, ಮನುಷ್ಯಜನ್ಮದ ಪಿಂಡಲಕ್ಷಣ ಮೊದಲಾದುವನ್ನೂ ನನ್ನ ಮೇಲೆ ಕರುಣವಿಟ್ಟು ನಿರೂಪಿಸಿ, ಇಷ್ಟಲಿಂಗದೀಕ್ಷೆಯನ್ನಿತ್ತು ಕೃತಾರ್ಥನನ್ನು ಮಾಡಬೇಕೆಂದು ಪ್ರಾರ್ಥಿಸಿದನಂಬಿಲ್ಲಿಗೆ ಬಾಲ್ಯಕಾಂಡ ಅಧ್ಯಾಯವು ಸಂಪೂರ್ಣವು.

ಹನ್ನೆರಡನೆ ಅಧ್ಯಾಯವು.

ಪಿಂಡೋತ್ಪತ್ತಿಕರಣಹಸುಗೆಗಳು.

ಎಲೆ ಸಿದ್ಧರಾಮೇಶನೆ ಕೇಳು.— ಹಿಂದೆ ನಾನು ವಿವರಿಸಿದಂತೆ ಸತ್ಕರ್ಮಾಚಾರಿಗಳು ಸ್ವರ್ಗವನ್ನನುಭವಿಸಿ, ಪಾಪಿಗಳು ಯಮಲೋಕದಲ್ಲಿ

ನರಕಯಾತನೆಯನ್ನನುಭವಿಸಿ, ಹಾಗೆ ಫಲಾನುಭವವು ತೀರಿದ ನಂತರ ಆ ಯೆರಡು ವಿಧದವರೂ ಕೂಡ ಜನ್ಮದ ಬಾಗಿಲಾದ ಆಕಾಶ, ವಾಯು, ಅಗ್ನಿ, ಜಲ, ಪೃಥ್ವಿ ಎಂಬ ಐದು ಭೂತಗಳಲ್ಲಿ ಸೇರಿ, ಗಿಡು ಬಳ್ಳಿ ಮೊದಲಾದುವುಗಳಾಗಿ ಜನಿಸಿ, ಅವುಗಳ ಸಾರವಾದ ಅನ್ನರೂಪದಿಂದ ಪ್ರಾಣಿಗಳ ದೇಹದಲ್ಲಿ ಸೇರಿ, ರೇತಸ್ಸಾಗಿ ಪರಿಣಮಿಸಿ, ಅದರಿಂದ ಪಿಂಡವಾಗಿ ಮರಳಿ ಹುಟ್ಟುವರು. ಈ ಬ್ರಹ್ಮಾಂಡವಲ್ಲಿರತಕ್ಕ ಪ್ರಾಣಿಗಳೆಲ್ಲಾ ಸ್ಥಾವರ ಜಂಗಮ ಎಂದು ಎರಡು ವಿಧವಾಗಿರುವುವು. ಇವೆರಡೂ ಅಂಡಜ ಸ್ವೇದಜ ಉದ್ಭಿಜ್ಜ ಜರಾಯುಜ ಮಂತ್ರಜವೆಂದು ಐದುಪ್ರಕಾರಗಳಾಗಿರುವುವು. ಈ ಎಲ್ಲಜಾತಿಗಳೂ ಸೇರಿ ೮೪ ಲಕ್ಷ ಜೀವರಾಶಿಗಳಾಗುವುವು. ಹೇಗೆಂದರೆ– ಗಿಡ ಮರ ಬಳ್ಳಿ ಮೊದಲಾದ ಉದ್ಭಿಜ್ಜಗಳಲ್ಲಿ ೨೦ ಲಕ್ಷ ಭೇದವು, ಮಂತ್ರಜಗಳಾದ ದೇವತೆಗಳಲ್ಲಿ ೧೪ ಲಕ್ಷ ಭೇದವು. ಅಂಡಜಗಳಾದ ಪಕ್ಷಿಸರ್ಪಾದಿಗಳಲ್ಲಿ ೨೦ ಲಕ್ಷ ಭೇದವು. ಸ್ವೇದಜಗಳಾದ ಕ್ರಿಮಿಕೀಟಾದಿಗಳಲ್ಲಿ ೧೦ ಲಕ್ಷ ಭೇದವು. ಜರಾಯುಜಗಳಾದ ಮಾನವಜಾತಿಯಲ್ಲಿ ೯ ಲಕ್ಷಭೇಧವು, ಪಶುಮೃಗಾದಿಗಳಲ್ಲಿ ೧೦ ಲಕ್ಷ ಭೇದವು ಇರುವುವು. ಜೀವನು ಮಂತ್ರಜಗಳ ಹೊರತು ಉಳಿದ ನಾಲ್ಕುಬಗೆಯ ಜನ್ಮಗಳಲ್ಲಿ ಬಂದು. ತ್ರಯಾಯು ಜಾತಿಗೆ ವಿಹಿತವಾದ ನಡೆಗಳನ್ನಾಚರಿಸಿ, ಅಳಿದು, ಗೋಜನ್ಮವನ್ನು ಪಡೆದು, ಅಲ್ಲಿಂದ ಮಾನವಜನ್ಮಕ್ಕೆ ಬರುವನು. ಆ ಜನ್ಮಾದಿವಿವರಣವನ್ನು ಹೇಳುತ್ತೇನೆ ಕೇಳು– ಸ್ತ್ರೀಯು ಋತುಕಾಲದಲ್ಲಿ ಪುರುಷಸೊಡನೆ ಕೂಡಲಾಗಿ, ಅವಳ ಶೋಣಿತವೂ ಪುರುಷನ ವೀರ್ಯವೂ ಒಂದುಗೂಡುವುವು. ಆ ಸಂಯುಕ್ತವಸ್ತುವಿಗೆ ಮೊದಲನೆಯ ದಿನವಲ್ಲಿ ಕಲಲವೆಂಬ ಹೆಸರು. ಅದುಳಿ ದಿನಕ್ಕೆ ಗುಳ್ಳೆಯಂತಾಗುವುದು. ೧೦ ದಿನಕ್ಕೆ ರಕ್ತಗೂಡುವುದು. ೧೪ ದಿನಕ್ಕೆ ಮಾಂಸದ ಉಂಡೆಯಂತಾಗುವುದು. ೨೧ ದಿನಕ್ಕೆ ಗಟ್ಟಿಯಾಗುವುದು. ೩೪ ದಿನಕ್ಕೆ ಅವಯವಗಳು ಮೂಡುವುವು. ೧ ತಿಂಗಳಿಗೆ ಶಿರಸ್ಸು ಹುಟ್ಟುವುದು. ೨ ನೆ ತಿಂಗಳಿಗೆ ತೋಳ್ತೊಡೆಗಳೂ, ತಿಂಗಳು ೪ ಕ್ಕೆ ಕೈ ಕಾಲು ಬೆರಳುಗಳೂ, ೪ ಕ್ಕೆ ಮೂಗು ಕಣ್ಣು ಕಿವಿಗಳೂ ಗುದ ಮೇಢ್ರ ರೋಮಗಳೂ, ೫ ಕ್ಕೆ ನವದ್ವಾರಗಳೂ ಹೊಟ್ಟೆಯೂ, ೬ ಕ್ಕೆ ಉಗುರು ತಲೆಕೂದಲೂ, ಮೂಡುವುವು. ೭ ಕ್ಕೆ ಅ

ವಯವದ ಸಂಧಿಬಂಧಗಳು ಬಲಿದು ಚೈತನ್ಯವು ಹುಟ್ಟಿ, ತಾಯಿಯುಂಡ ಅನ್ನದ ರಸವು ಹೊಕ್ಕುಳ ನಾಳದ್ವಾರದಿಂದ ಆ ಶಿಶುವಿನ ಉದರಕ್ಕೆ ಸೇರುವುದು. ತಿಂಗಳು ೪ ರಲ್ಲಿ ಗರ್ಭಕೋಶದೊಳಗೆ ಬಚ್ಚಲ ಹುಳುವಿನಂತೆ ಒದ್ದಾಡುತ್ತ, ತನ್ನ ಜನ್ಮಸ್ಥಿತಿಯನ್ನು ಪರಿಭಾವಿಸಿ ದುಃಖಿಸುತ್ತಿರುವುದು. ೯ ರಲ್ಲಿ ಶಿವಧ್ಯಾನಪರನಾಗಿ ಮುಂದೆ ಮುಕ್ತನಾಗುವೆನೆಂದು ನೆನೆಯುತ್ತಿದ್ದು ನವಮಾಸ ತುಂಬಿದ ಬಳಿಕ ಸೂತಿಕಾವಾಯುವಿನಿಂದ ಧೊಪ್ಪನೆ ಬಡಿಯಲ್ಪಟ್ಟು, ಬಲುನೊಂದು. ತಲೆಕೆಳಗಾಗಿ, ಪ್ರೂರ್ವವಿವೇಕವನ್ನು ಮರೆದು, ಮೂರ್ಛೆಗೊಂಡು, ಯೋನಿದ್ವಾರದಿಂದ ತಲೆ ಮುಂದಾಗಿ ತೂರಿ ಬರುವುದು. ಸ್ತ್ರೀಯು ರಜಸ್ವಲೆಯಾಗಿ ಸ್ನಾನಗೊಂಡ ೧೬ ದಿನದಲ್ಲಿ ಪುರುಷಸಂಗದಿಂದ ಪಿಂಡವು ನಿಂತರೆ, ಕುಲಗೇಡಿಯಾದ ಸ್ತ್ರೀಶಿಶುವು ಜನಿಸುವುದು. ೩ ನೆ ದಿನದಲ್ಲಿ ನಿಂತ ಪಿಂಡವು ಪಾಪಿ, ೪ ನೆ ದಿನದಲ್ಲಿ ಕಳ್ಳ, ೫ ರಲ್ಲಿ ಕಪಟಿ, ೫ ರಲ್ಲಿ ಮತಿವಂತ, ೬ ರಲ್ಲಿ ವ್ರತಭ್ರಷ್ಟ, ೭ ರಲ್ಲಿ ದಯಾಶಾಲಿ, ೮ ರಲ್ಲಿ ದರಿದ್ರ, ೯ ರಲ್ಲಿ ಶ್ರೀಮಂತ, ೧೦ ರಲ್ಲಿ ಕಾಮುಕ, ೧೧ ರಲ್ಲಿ ವೈರಾಗ್ಯಶಾಲಿ, ೧೩ರಲ್ಲಿ ಕೋಪಿಷ್ಠ, ೧೩ ರಲ್ಲಿ ಪಂಡಿತ, ೧೪ ರಲ್ಲಿ ರೋಗಿ, ೧೫ ರಲ್ಲಿ ರಾಹು, ೧೬ ರಲ್ಲಿ ಶಿವಯೋಗಿಯಾಗಿ ಜನಿಸುವನು. ಸ್ತ್ರೀ ಪುರುಷರು ಸಂಭೋಗಸಮಯದಲ್ಲಿ ಅನ್ಯರಲ್ಲಿ ಮನಸ್ಸಿಟ್ಟಿದ್ದರೆ ಜನಿಸುವವನು ಜಾರನಾಗುವನು. ಶಿವಧ್ಯಾನತತ್ಪರರಾಗಿದ್ದರೆ ಭಕ್ತಿಸಂಪನ್ನನಾಗಿ ಹುಟ್ಟುವನು. ಸೂರ್ಯೋದಯಕಾಲಕ್ಕೆ ಹುಟ್ಟಿದವನು ಅತ್ಯಂತ ಕೋಪಿಯು, ಮಧ್ಯಾಹ್ನದಲ್ಲಿ ಜನಿಸಿದವನು ಪಾಪಿಯು, ಸಾಯಂಕಾಲದಲ್ಲಿ ಹುಟ್ಟಿದವನು ಮನಸ್ತಾಪವುಳ್ಳವನಾಗುವನು. ರಾತ್ರಿಯಲ್ಲಿ ಹುಟ್ಟಿದವನು ಶಾಂತ್ಯಾದಿ ಸದ್ಗುಣಭರಿತನಾಗುವನು. ಸಂಯೋಗಕಾಲದಲ್ಲಿ ಪುರುಷವೀರ್ಯವು ಹೆಚ್ಚಾದರೆ ಪಿಂಡವು ಗಂಡಾಗುವುದು. ಸ್ತ್ರೀಯ ಶೋಣಿತವು ಹೆಚ್ಚಾಗಿದ್ದರೆ ಹೆಣ್ಣಾಗುವುದು ಎರಡೂ ಸಮನಾಗಿದ್ದರೆ ನಪುಂಸಕನಾಗುವುದು. ಈ ಸ್ಥೂಲಶರೀರದಲ್ಲಿ ಪಿತ್ತವು ಐದು ಬಳ್ಳವೂ, ಶ್ಲೇಷ್ಮವು ೩ ಬಳ್ಳವೂ, ಮಾಂಸವು ಇಪ್ಪತ್ತು ಸಾವಿರ ಪಲದ ತೂಕವೂ, ಕೊಬ್ಬು ೧೦ ಸಾವಿರ ಪಲದ ತೂಕವೂ, ರಕ್ತವು ೧೫ ಸಾವಿರ ಪಲದ ತೂಕವೂ, ಮಜ್ಜೆಯು ೪ ಸಾವಿರ ಪಲದ ತೂಕವೂ, ರೇತಸ್ಸು ೧೨ ಸಾವಿರ ಪಲದ ತೂಕವೂ, ಇರುವು

ವು. ೪೫ ಕೋಟಿ ರೋಮಗಳಿರುವುವು. ೩೬೦ ಮೂಳೆಗಳಿರುವುವು. ಈ ಸಪ್ತಧಾತುಗಳಲ್ಲಿ ನರಗಳು ರೇತಸ್ಸು ಮೂಳೆ ರೋಮಗಳು ಸಹ ತಂದೆಯಂಶವು; ಚರ್ಮ ಮಾಂಸ ರಕ್ತಗಳು ತಾಯಿ ಅಂಶಗಳು; ಮೇಲೆ ಹೇಳಿದ ಆಕಾಶಾದಿಪಂಚಭೂತಗಳನ್ನು ಒಂದೊಂದನ್ನೈರಡೈರಡಾಗಿ ಭಾಗಿಸಿ, ಪ್ರತಿಯೊಂದರ ಮೊದಲಭಾಗವನ್ನು ಮಹಾಭೂತವನ್ನಾಗಿಟ್ಟು, ಉಳಿದ ಒಂದೊಂದು ಭಾಗವನ್ನು ಎರಡೆರಡು ಭಾಗವನ್ನಾಗಿ ಮಾಡಿ, ಆ ಭಾಗಗಳನ್ನೇ ಮತ್ತೆ ೪–೪ ಭಾಗವನ್ನಾಗಿ ಮಾಡಿ, ಆ ೪ಭಾಗವನ್ನು ಅದರದರ ಎರಡನೆ ಭಾಗದಲ್ಲಿ ಸೇರಿಸಿದೆ. ಉಳಿದುವುಗಳ ಎರಡೆರಡನೆಯ ಭಾಗದಲ್ಲಿ ಒಂದೊಂದನ್ನು ಕೂಡಿಸಿದರೆ, ೫೫ ತತ್ವಗಳಾಗುವುವು. ಹೇಗೆಂದರೆ– ಆಕಾಶದ ಎರಡನೆ ಭಾಗವು ಜ್ಞಾತೃವು, ವಾಯುವಿನ ೨ ನೆ ಭಾಗದಲ್ಲಿ ಕೂಡಿದುದೇ ಮನಸ್ಸು, ತೇಜಸ್ಸಿನ ೨ ನೆ ಭಾಗದಲ್ಲಿ ಸೇರಿದುದೇ ಬುದ್ಧಿಯು, ಜಲದ ೨ ನೆ ಭಾಗದಲ್ಲಿ ಸೇರಿದುದೇ ಚಿತ್ತವು, ಭೂಮಿಯ ೨ ನೆ ಭಾಗದಲ್ಲಿ ಬೆರೆದುದೇ ಅಹಂಕಾರವು. ಇವು ಆಕಾಶದ ಪಂಚೀಕರಣಗಳು. ಹೀಗೆಯೇ ವಾಯುವಿನ ದ್ವಿತೀಯಭಾಗವನ್ನು ಇತರ ಭೂತಗಳ ದ್ವಿತೀಯಭಾಗದೊಡನೆ ಕೂಡಿಸುತ್ತ ಹೋದರೆ ಪ್ರಾಣ–ಅಪಾನ–ಸಮಾನ–ಉದಾನ–ವ್ಯಾನವೆಂಬ ಪಂಚವಾಯುಗಳು; ಅಗ್ನಿಯಿಂದ– ನೇತ್ರ, ಶ್ರೋತ್ರ, ತ್ವಕ್ಕು, ಜಿಹ್ವಾ, ಘ್ರಾಣನೆಂಬ ಪಂಚಜ್ಞಾನೇಂದ್ರಿಯಗಳು; ಜಲದಿಂದ–ಶಬ್ದ, ಸ್ಪರ್ಶ, ರೂಪ, ರಸ, ಗಂಧ ಎಂಬ ವಿಷಯಗಳು; ಪೃಥ್ವಿಯಿಂದ– ವಾಕ್ಕು, ಪಾಣಿ. ಪಾದ, ಪಾಯು, ಉಪಸ್ಥ, ಎಂಬ ೫ ಕರ್ಮೇಂದ್ರಿಯಗಳು ಉದಿಸಿದುವು. ಇನ್ನು ಪಿಂಡಾಂಡಪಂಚೀಕರಣನೆಂತೆಂದರೆ—ಹಿಂದೆ ಹೇಳಿದ ಈ ಪಂಚಭೂತಗಳೇ ಪಂಚಾಂಶ ಪಂಚೀಕೃತವಾಗಿ ದೇಹವೆನಿಸುವುವು ದೇಹದಲ್ಲಿರುವ ಅಸ್ಥಿ, ತೊಕ್ಕು, ನಾಡಿ, ಮಾಂಸ, ರೋಮ—ಇವೈದೂ ಪೃಥ್ವಿಯಿಂದಾದಂಶಗಳು. ಹಸಿವು, ನೀರಡಿಕೆ, ನಿದ್ರೆ, ಆಲಸ್ಯ, ಸಂಗ– ಇವಿಷ್ಟೂ ಅಗ್ನಿಯಿಂದಾದ ಗುಣಗಳು. ಕೂಡುವುದು, ಅಗಲುವುದು, ಸುತ್ತುವುದು, ಹಾರುವುದು, ನಡೆಯುವುದು,– ಇವಿಷ್ಟೂ ವಾಯುವಿನಿಂದಾದ ಗುಣಗಳು. ಅಜ್ಞಾನ, ಪ್ರೀತಿ, ದ್ವೇಷ, ನಾಚಿಕೆ, ಭಯ– ಇವಿಷ್ಟೂ ಆಕಾಶದಿಂದಾದ ಗುಣಗಳು. ಹೀಗೆ ಸ್ಥೂಲದೇಹದಲ್ಲಿರುವ ಪಂಚಭೂತಗಳ

೨೫ ಗುಣಗಳಲ್ಲದೆ, ಸೂಕ್ಷ್ಮದೇಹದ ಪ್ರತಿಯೊಂದು ಭೂತದ ಸೂಕ್ಷ್ಮಾಂಶಗಳನ್ನೂ ಅದರದರ ವಿಷಯಗಳಿಂದ ಗುಣಿಸುವಾಗ ೫೫ ವಿಭೇದ ಗುಣಗಳು ಉಂಟಾಗುವುವು. ಹೇಗೆಂದರೆ– ಭೂಮಿಗೆ ೫ ವಿಷಯಗಳಿರುವುದರಿಂದ, ಅದಕ್ಕೆ ೫ × ೫ = ೨೫ ಗುಣಗಳು, ಜಲಕ್ಕೆ ೪ ವಿಷಯವಾದುದರಿಂದ ಅದಕ್ಕೆ ೫ × ೪ = ೨೦ ಗುಣಗಳು. ಅಗ್ನಿಗೆ ೩ ವಿಷಯಗಳಿರುವುದರಿಂದ ಅದಕ್ಕೆ ೫ × ೩ = ೧೫ ಗುಣಗಳು. ವಾಯುವಿಗೆ ೨ ವಿಷಯಗಳಿರುವುದರಿಂದ ಅದಕ್ಕೆ ೫ × ೨ = ೧೦ ಗುಣಗಳು. ಆಕಾಶಕ್ಕೆ ೧ ವಿಷಯವಿರುವುದರಿಂದ ಅದಕ್ಕೆ ೫ × ೧ = ೫ ಗುಣಗಳು. ಅಂತೂ ೫೫ ಮಿಶ್ರಗುಣಗಳಾದುವು. ಇನ್ನು ಭೂತಪಂಚೀಕರಣವು ಹೇಗೆಂದರೆ– ಪೃಥ್ವಿಯಲ್ಲಿರುವ ಪೃಥಿವ್ಯಂಶವೇ ಪಾಯು, ಪೃಥ್ವಿಯಲ್ಲಿಯ ಜಲಾಂಶವೇ ಗಂಧ, ಅದರ ಅಗ್ನ್ಯಂಶವೇ ನಾಸಿಕೇಂದ್ರಿಯ, ಅದರಲ್ಲಿನ ವಾಯ್ವಂಶವೇ ಪ್ರಾಣ, ಅದರ ಆಕಾಶಾಂಶವೇ ಚಿತ್ತವು. ಇದರಂತೆಯೇ ಜಲಭೂತದಲ್ಲಿ ಕ್ರಮವಾಗಿ– ಗುಹ್ಯ, ರಸ, ಜಿಹ್ವಾ, ಅಪಾನ, ಬುದ್ಧಿ ಎಂಬಿವುಗಳೂ, ಅಗ್ನಿಯಲ್ಲಿ– ಪಾದ, ರೂಪ, ನೇತ್ರ, ಉದಾನ, ಅಹಂಕಾರವೆಂಬಿವುಗಳೂ, ವಾಯುವಿನಲ್ಲಿ– ಪಾಣಿ, ಸ್ಪರ್ಶ, ತ್ವಕ್ಕು, ವ್ಯಾನ, ಮನಸ್ಸು– ಎಂಬಿವುಗಳೂ, ಆಕಾಶದಲ್ಲಿ– ವಾಕ್ಕು, ಶಬ್ದ, ಶ್ರೋತ್ರ, ಸಮಾನ, ಜ್ಞಾನವೆಂಬಿವುಗಳೂ ಪಂಚೀಕೃತಗಳು.

ಒಳಿಕ ಜ್ಞಾನೇಂದ್ರಿಯಗಳು ಅವುಗಳ ವಿಷಯ, ಭೂತ, ಅಧಿದೇವತೆ ಮೊದಲಾದ ವಿಷಯಗಳು ಹೇಗೆಂದರೆ– ಶ್ರೋತ್ರ, ತ್ವಕ್ಕು, ನೇತ್ರ, ಜಿಹ್ವೆ, ಘ್ರಾಣ ಎಂಬಿವುಗಳೇ ಜ್ಞಾನೇಂದ್ರಿಯಗಳು. ಇವುಗಳಲ್ಲಿ ಶ್ರೋತ್ರಕ್ಕೆ ಆಕಾಶ ಭೂತ, ದಿಕ್ಕುಗಳು ಅಧಿದೇವತೆ, ಶಬ್ದವೇ ವಿಷಯ, ಅಕ್ಷರಾತ್ಮಕ, ಅನಕ್ಷರಾತ್ಮಕ–ಇವೆರಡು ಶಬ್ದಭೇದಗಳು. ತ್ವಕ್ಕಿಗೆ ವಾಯು ಭೂತ, ಇಂದ್ರ ಅಧಿದೇವತೆ, ಸ್ಪರ್ಶವೇ ವಿಷಯ, ಶೀತ–ಉಷ್ಣ–ವ್ಯಧು–ಕಠಿನ–ಇವೇ ಸ್ಪರ್ಶಭೇದಗಳು. ನೇತ್ರಕ್ಕೆ–ಅಗ್ನಿ ಭೂತ, ಸೂರ್ಯನು ಅಧಿದೇವತೆ, ರೂಪವೇ ವಿಷಯ, ಶ್ವೇತ-ಪೀತ-ಹರಿತ–ಕಪೋತ–ಕೃಷ್ಣ–ಮಾಂಜಿಷ್ಠ, ವೆಂಬಿವಾರೇ ರೂಪಭೇದಗಳು. ಜಿಹ್ವೇಂದ್ರಿಯಕ್ಕೆ– ಜಲವೇ ಭೂತ, ವರುಣನು ಅಧಿದೇವತೆ, ರಸವೇ ವಿಷಯ, ಮಾಧುರ್ಯ–ಲವಣ ಆಮ್ಲ––ತಿಕ್ತ ಕಟು–ಕಷಾಯ–ಎಂಬಿವಾರು ರಸಭೇದಗಳು. ಘ್ರಾಣೇಂದ್ರಿಯಕ್ಕೆ ಪೃಥ್ವಿ

ಯೇ ಭೂತ, ಅಶ್ವಿನೀದೇವತೆಗಳು ಅಧಿದೇವತೆ, ಗಂಧವೇ ವಿಷಯ, ಸು ಗಂಧ–ದುರ್ಗಂಧ–ವೆಂಬೆರಡು ಗಂಧಭೇದಗಳು.

ಇನ್ನು ಕರ್ಮೇಂದ್ರಿಯಗಳಿಗೆ ಹೇಗೆಂದರೆ– ವಾಕ್ಕು, ಪಾದ, ಪಾಣಿ, ಪಾಯು, ಗುಹ್ಯ ಎಂಬಿವೇ ಕರ್ಮೇಂದ್ರಿಯಗಳು. ಇವುಗಳಲ್ಲಿ ವಾಕ್ಕಿಗೆ– ನಾಗವಾಯುವು, ಸರಸ್ವತಿ ಅಧಿದೇವತೆ, ಸುವಾಕ್ಯ ದುರ್ವಾಕ್ಯಗಳೇ ವಿಷಯವು. ಪಾಣೀಂದ್ರಿಯಕ್ಕೆ–ಕೂರ್ಮವಾಯು, ಇಂದ್ರನಧಿದೇವತೆ, ದಾನ–ಆದಾನವೆಂಬ ವಿಷಯವು. ಪಾದೇಂದ್ರಿಯಕ್ಕೆ–ಕೃಕರವಾಯು, ವಿಷ್ಣು ವಧಿದೇವತೆ, ಗಮನಾಗಮನಗಳು ವಿಷಯವು. ಪಾಯ್ವಿಂದ್ರಿಯಕ್ಕೆ–ದೇ ವದತ್ತವಾಯು, ಮೃತ್ಯ್ವಧಿದೇವತೆ, ಸರ್ಜನ ವಿಸರ್ಜನ ವಿಷಯಗಳು. ಗುಹ್ಯೇಂದ್ರಿಯಕ್ಕೆ–ಧನಂಜಯವಾಯು, ಬ್ರಹ್ಮನು ಅಧಿದೈವ, ಆನಂದ ಅನಾನಂದಗಳೇ ವಿಷಯವು.

ಇನ್ನು ದಶವಾಯುಗಳ ಸ್ಥಾನಕರ್ಮಾದಿಗಳು ಹೇಗೆಂದರೆ– ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ, ನಾಗ, ಕೂರ್ಮ, ಕೃಕರ, ದೇವ ದತ್ತ, ಧನಂಜಯ, ಎಂಬಿವೇ ದಶವಾಯುಗಳು. ಇವುಗಳಲ್ಲಿ ಪ್ರಾಣವಾ ಯುವಿಗೆ–ಇಂದ್ರನೀಲವರ್ಣ, ಹೃದಯದಲ್ಲಿ ನೆಲೆ, ಇದು ಪಾದದ ಹೆಬ್ಬೆರ ಲಿನಿಂದ ಹಿಡಿದು ತಲೆಕೂದಲ ತುದಿಯವರೆಗೂ ದೇಹದಲ್ಲಿ ವ್ಯಾಪಿಸಿ, ಉ ಚ್ಛ್ವಾಸನಿಶ್ವಾಸಗಳನ್ನು ಮಾಡಿಸುತ್ತ, ಆಹಾರವನ್ನು ಜೀರ್ಣಗೊಳಿಸುತ್ತಿ ರುವುದು. ಅಪಾನವಾಯುವು–ಹಸುರುಬಣ್ಣ, ಇದು ಗುದಸ್ಥಾನದಲ್ಲಿದ್ದು ಮಲ ಮೂತ್ರವಿಸರ್ಜನಗಳನ್ನು ಮಾಡಿಸುತ್ತ, ಗುದದ್ವಾರವನ್ನು ಮುಚ್ಚಿ ಅನ್ನ ರಸವನ್ನು ವ್ಯಾಪನಗೊಳಿಸುತ್ತಿರುವುದು. ಸಮಾನವಾಯುವು–ಕಪ್ಪುಬಣ್ಣ, ಇದು ನಾಭಿಸ್ಥಾನದಲ್ಲಿದ್ದು ಅಪಾದಮಸ್ತಕವಾಗಿ ದೇಹದಲ್ಲೆಲ್ಲ ವ್ಯಾಪಿಸಿ, ಅನ್ನರಸವನ್ನು ರೋಮಗಳಿಗೆಲ್ಲ ಏರಿಸುವುದು. ಉದಾನವಾಯುವು–ಎಳೆ ಮಿಂಚಿನಬಣ್ಣ, ಇದು ಕೊರಲಿನಲ್ಲಿದ್ದು, ಸೀನು, ಕೆಮ್ಮು, ಕಸಸು, ಏ ಳಿಸುವುದು, ಕುಳ್ಳಿರಿಸುವುದು, ಓಕರಿಸುವುದು. ಅವನ್ನು ತಡೆಯುವುದು– ಈ ಕೆಲಸಗಳನ್ನು ಮಾಡಿಸುತ್ತ, ಇಳಿವ ಅನ್ನರಸವನ್ನು ಮತ್ತೆ ಮೇಲಕ್ಕೇ ರಿಸುತ್ತಿರುವುದು. ವ್ಯಾನವ್ಯಾಯುವು ಹಾಲಿನ ಬಣ್ಣ, ಇದು ಅಂಗಸಂಧಿ ಗಳಲ್ಲಿದ್ದು, ಮುಮುಡಿದ್ದ ಅಂಗವನ್ನು ತಿದ್ದುವ ಕೆಲಸವನ್ನು ಮಾಡಿಸುತ್ತ,

ಅಲ್ಲಲ್ಲಿಗೆ ತಕ್ಕಷ್ಟು ಅನ್ನಪಾನಗಳನ್ನು ಒದಗಿಸಿ ಕೊಡುತ್ತಿರುವುದು. ಇವೇ ಪ್ರಾಣಪಂಚಕಗಳು; ಶ್ರೋತ್ರಾದಿಜ್ಞಾನೇಂದ್ರಿಯ ಚೇಷ್ಟೆಗೆ ಹೇತುಗಳು. ಇನ್ನು ೫ ಉಪವಾಯುಗಳಲ್ಲಿ ನಾಗವಾಯುವು ಹೊಂಬಣ್ಣ, ಇದು ರೋಮನಾಳಗಳಲ್ಲಿದ್ದು, ನಿಶ್ಚಲತೆಯಿಂದ ಹಾಡಿಸುತ್ತಿರುವುದು. ಕೂರ್ಮವಾಯುವು–ಬಿಳಿಯ ಬಣ್ಣ, ಇದು ಉದರಲಲಾಟಸ್ಥಾನದಲ್ಲಿದ್ದು, ದೇಹಪುಷ್ಟಿಯನ್ನು ಮಾಡುತ್ತ, ಕಣ್ಣಾಬ್ಬಳ್ಗಳನ್ನು ಮುಚ್ಚಿ ತೆರೆಯಿಸುತ್ತಿರುವುದು. ಕೃಕರವೆಂಬ ವಾಯುವು– ಕಾಡಿಗೆಯ ಬಣ್ಣ, ಇದು ಮೂಗಿನ ತುದಿಯಲ್ಲಿದ್ದುಕೊಂಡು, ಕ್ಷುತ್ತೃಷಾವಿಘ್ನಂಗಳನ್ನುಂಟುಮಾಡಿ, ಗಮನಾಗಮನಗಳನ್ನು ಮಾಡಿಸುತ್ತಿರುವುದು. ದೇವದತ್ತವಾಯುವು–ಸ್ಫಟಿಕವರ್ಣವು, ಇದು ಗುಹ್ಯಕಟಿಸ್ಥಾನಗಳಲ್ಲಿದ್ದುಕೊಂಡು, ಕುಳ್ಳಿರುವ, ಏಳುವ, ಮಲಗುವ, ಪೊರಳುವ, ಮಾತನಾಡುವ, ನಗುವ ಕೆಲಸಗಳನ್ನು ಮಾಡಿಸುವುದು. ಧನಂಜಯವಾಯುವು– ನೀಲದ ಬಣ್ಣ, ಇದು ಬ್ರಹ್ಮರಂಧ್ರಸ್ಥಾನದಲ್ಲಿದ್ದು, ಕೆವಿಗಳಲ್ಲಿ ಸನಾದಪ್ರಸ್ಫೋಟನಂತೆ ಮಾಮಾಗಳೂ ಮೊರೆಯುತ್ತಿದ್ದು, ಮರಣಕಾಲಕ್ಕೆ ಸದ್ದಳಿದಿರುವುದು ಮತ್ತೂ ಸತ್ತ ಬಳಿಕ ೫ ದಿನದವರೆಗೂ ದೇಹದಲ್ಲಿದ್ದು ಅದನ್ನು ಊದಿಸಿ ಒಡಿಸಿ ತಾನು ದೇಹವನ್ನು ಬಿಡುವುದು. ಈ ೫ ವಾಯುಗಳು ಸಾಗಾವಿಕಶ್ರೋತ್ರೇಂದ್ರಿಯಚೇಷ್ಟೆಗಳಿಗೆ ಕಾರಣವಾಗಿರುವುವು.

ಇನ್ನು ಕರಣಗಳ ವಿವರವನ್ನು ಪೇಳುತ್ತೇನೆ ಕೇಳು–ಆತ್ಮನು, ಆ ಕಾಶವೊಡನೆ ಬೆರೆಯಲು ಜ್ಞಾನವು ಹುಟ್ಟಿತು. ವಾಯುವಿನೊಡನೆ ಕೂಡಲು ಮನಸ್ಸಾಯಿತು, ಅಗ್ನಿಯೊಡನೆ ಕೂಡಲು ಅಹಂಕಾರವು ಹುಟ್ಟಿತು, ಜಲವೊಡನೆ ಕೂಡಲು ಬುದ್ಧಿ ಹುಟ್ಟಿತು. ಪೃಥ್ವಿಯೊಡನೆ ಕೂಡಲು ಚಿತ್ತವಾಯಿತು. ಇವೇ ಜ್ಞಾನಕರಣಗಳು. ಇವುಗಳಲ್ಲಿ ಮನಸ್ಸಿಗೆ– ವಾಯುಭೂತವು, ಚಂದ್ರನು ಅಧಿದೇವತೆ, ಸಂಕಲ್ಪವಿಕಲ್ಪಗಳೇ ಕಾರ್ಯವು. ಅಹಂಕಾರಕ್ಕೆ– ಅಗ್ನಿಯು ಭೂತ, ರುದ್ರನಧಿದೇವತೆ, ಹಮ್ಮನ್ನು ತಾಳುವುದೇ ಕಾರ್ಯವು. ಬುದ್ಧಿಗೆ–ಅಪ್ಪು ಭೂತವು, ಬ್ರಹ್ಮನಧಿದೇವತೆ, ನಿಶ್ಚಯಸುವಿಕೆಯೇ ಕಾರ್ಯವು. ಚಿತ್ತಕ್ಕೆ– ಪೃಥ್ವಿಯೇ ಭೂತವು, ವಿಷ್ಣುವಧಿದೇವತೆಯು, ಅವಧರಿಸಿ ಅನುಸಂಧಿಸುವುದೇ ಕಾರ್ಯವು.

ಈ ಮೇಲೆ ಹೇಳಿದ ಭೂತಪಂಚಕ, ವಾಯುಪಂಚಕ, ಜ್ಞಾನೇಂದ್ರಿಯಪಂಚಕ, ಕರ್ಮೇಂದ್ರಿಯಪಂಚಕ, ಕರಣಚತುಷ್ಟಯ—ಇವಿಷ್ಟೂ ಸೇರಿ ೨೪ ತತ್ತ್ವಗಳಾದುವು. ಜ್ಞಾನಕರಣವೂ ಸೇರಿದರೆ ೨೫ ಆಗುವುವು. ಈ ತತ್ತ್ವಗಳಿಂದ ಕೂಡಿದುದೇ ದೇಹವು, ಇಂತಹ ದೇಹವನ್ನು ತಾಳಿದ ಆತ್ಮನಿಗೆ ಜ್ಞಾನೇಂದ್ರಿಯನೇ ಚಿತ್ಸ್ವರೂಪವಾಗಿರುವುದು. ಪರಶಿವನೇ ಅಧಿದೇವತೆಯು, ಈ ಆತ್ಮನು ಸರ್ವಾಂಗವನ್ನೂ ತುಂಬಿಕೊಂಡು ಚೈತನ್ಯ ರೂಪನಾಗಿ, ತೊಳಗಿ ಬೆಳಗುತ್ತಿರುವನು. ಈ ಆತ್ಮನು ಜೀವಾತ್ಮ, ಅಂತರಾತ್ಮ, ಪರಮಾತ್ಮನೆಂದು ಮೂರು ಭೇದವನ್ನು ಪಡೆದಿರುವನು. ಸಂಸಾರಸುಖದುಃಖಬದ್ಧನೇ ಜೀವಾತ್ಮನು, ಈ ಸುಖದುಃಖಗಳನ್ನು ಹೊಂದಿಯೂ ಹೊಂದದಂತಿರುವವನು ಅಂತರಾತ್ಮನು, ಪ್ರಪಂಚವ್ಯಾಪಾರಕ್ಕೆ ಸಿಕ್ಕದೆ ನಿರಾಕಾರಿಯಾಗಿರುವವನು ಪರಮಾತ್ಮನು. ಇನ್ನು ಸ್ಥೂಲ, ಸೂಕ್ಷ್ಮ, ಕಾರಣನೆಂಬ ತನುತ್ರಯಗಳ ವಿವರವೆಂತೆಂದರೆ—ಪಂಚಭೂತವಿಯವಾದುದೇ ಸ್ಥೂಲದೇಹವು; ಪಂಚಪ್ರಾಣವಾಯುಗಳು, ದಶೇಂದ್ರಿಯಗಳು, ಮನೋಬುದ್ಧಿಗಳೆರಡು, ಈ ೧೭ ತತ್ತ್ವಗಳಿಂದಾದುದೇ ಲಿಂಗ ಭೌತಿಕವೆಂಬ ಸೂಕ್ಷ್ಮಶರೀರವು; ಅಹಂಕಾರ ಚಿತ್ತ ಆತ್ಮಸಂಯೋಗದಿಂದಾದುದೇ ಕಾರಣತನುವು.

ಇನ್ನು ಅಂಗ, ಪ್ರತ್ಯಂಗ, ಸಾಂಗಾಂಗ, ಉಪಾಂಗಗಳ ಭೇದವನ್ನು ಹೇಳುವೆನು— ಶಿರಸ್ಸು ಎದೆ ತೊಡೆ ಭುಜ—ಇವುಗಳು ಅಂಗವು; ಮುಖ ಮೂಗು ಕಿವಿ ತುಟಿ ಕಣ್ಣು ಬೆರಳು—ಇವು ಪ್ರತ್ಯಂಗಗಳು; ಕರಣಚತುಷ್ಟಯವು ಸಾಂಗಾಂಗವು. ವಸ್ತ್ರ ಆಭರಣ ಅನುಲೇಪನಗಳು ಉಪಾಂಗಗಳು. ಇನ್ನು ದಶನಾಡಿಗಳ ವಿವರವು ಹೇಗೆಂದರೆ—ಎಡಮೂಗಿನ ಚಂದ್ರನಾಡಿಯು ಇಡೆ, ಬಲಮೂಗಿನ ಸೂರ್ಯನಾಡಿಯು ಪಿಂಗಳೆ, ಮಧ್ಯದ ನಾಡಿಯೇ ಸುಷುಮ್ನೆಯು, ಬಲಗಣ್ಣಿನಲ್ಲಿ ಗಾಂಧಾರಿಯು, ಎಡಗಣ್ಣಿನಲ್ಲಿ ಹಸ್ತಿಜಿಹ್ವೆಯು, ಬಲಗಿವಿಯಲ್ಲಿ ಪೂಷೆ, ಎಡಗಿವಿಯಲ್ಲಿ ಪಯಸ್ವಿನಿ, ಮೇಢ್ರನಾಳವೇ ಆಲಂಬುವು, ಗುದನಾಳವೇ ಲಕುಹವು, ನಾಭಿನಾಳವೇ ಶಂಕಿನಿಯು.

ಬಳಿಕ ಪೃಥ್ವಿ ಅಪ್ಪು ತೇಜಸ್ಸು ವಾಯು ಆಕಾಶ ಸೂರ್ಯ ಚಂದ್ರ ಆತ್ಮ ಎಂಬ ಅಷ್ಟಮೂರ್ತಿಗಳ ಸಂಬಂಧವ ಮುಪಗಳಿರುವುವು. ಆತ್ಮನು

ಪೃಥ್ವೀಮದಸಂಬಂಧವುಳ್ಳವನಾದರೆ ದೇಹಗುಣಭರಿತನಾಗಿ ವಸ್ತ್ರಾಭರಣತಾಂಬೂಲಾದಿಗಳನ್ನು ಅಪೇಕ್ಷಿಸುವನು. ಜಲಮದದಿಂದ ಕೂಡಿದರೆ ಸಂಸಾರಿಯಾಗಿ, ಅನು ಬೇಕು ಇದು ಬೇಕು ಎಂದು ಅಪೇಕ್ಷಿಸುತ್ತಿರುವನು. ಅಗ್ನಿಮದದಿಂದ ಕೂಡಿದರೆ ಕಾಮುರನಾಗಿ, ನೋಡಬೇಕು ಮಾತನಾಡಿಸಬೇಕು ಎಂಬುದು ಮೊದಲಾದ ಇಚ್ಛೆಯುಳ್ಳವನಾಗುವನು. ವಾಯುಮದವೇರಿದರೆ ಗಮನೋನ್ಮುಖನಾಗುವನು. ಆಕಾಶಮದವೇರಿದರೆ ವಾಹನವನ್ನೇರಬೇಕೆಂದಿಚ್ಛಿಸುವನು. ರವಿಮದವೇರಿದರೆ ಕೋಪನೇರಿರುವನು. ಚಂದ್ರಮದವೆತ್ತಿದರೆ ಚಿಂತಾಕುಲನಾಗುವನು. ಆತ್ಮಮದವಂಟಿದರೆ ಅಹಂಕಾರಯುಕ್ತನಾಗುವನು.

ಇನ್ನು ಸಪ್ತಧಾತುಗಳ ಉತ್ಪತ್ತಿ ವರ್ಣಾಂಶಾದಿವಿಷಯವೆಂತೆಂದರೆ— ರಸ, ರುಧಿರ, ಮಾಂಸ, ಮೇದಸ್ಸು, ಅಸ್ಥಿ, ಮಜ್ಜೆ, ಶುಕ್ಲ, ಎಂಬಿವುಗಳೇ ಸಪ್ತಧಾತುಗಳು. ಉಂತನ್ನವೇ ಪ್ರತಿಯೋಳು ಏನಕ್ಕೆ ಕ್ರಮವಾಗಿ ಮೇಲೆಕಂಡ ರಸಾದಿನಾಮಕಗಳುಳ್ಳುದಾಗುವುದು. ಮೊದಲನೆ ರಸವು ಕಪಿಲವರ್ಣವಾದುದು. ಪೃಥ್ವಿಯ್ಯಂಶದೇಹವನ್ನು ನಡುಗಿಸುವುದು. ರಕ್ತವು ನೀಲವರ್ಣವು, ಜಲಾಂಶದೆ ಹವನ್ನು ಕಳವಳಗೊಳಿಸುವುದು. ಮೇದಸ್ಸು ಕೆಂಪು ಬೆರೆದ ಹೊಂಬಣ್ಣ, ಅದು ವಾಯ್ವಂಶತನುವನ್ನು ಹೆದರಿಸುವುದು. ಅಸ್ಥಿಯು ಕಪ್ಪುಬಣ್ಣವ ಧಾತು, ಇದು ಆಕಾಶಾಂಶದೇಹವನ್ನು ಹುಚ್ಚುಹುಚ್ಚಾಗಿ ನಡಿಸುವುದು ಮಜ್ಜೆಯು ತಾಮ್ರವರ್ಣವುಳ್ಳುದು, ಅದು ರವ್ಯಂಶದೇಹವನ್ನು ಕಳವಳಿಸುವಂತೆ ಮಾತುವುದು. ಶುಕ್ಲವು ಬಿಳಿಯುಬಣ್ಣದುದು, ಅದು ಚಂದ್ರಾಂಶತನುವನ್ನು ನಡುಗುಹುಟ್ಟಿಸುವುದು.

ಬಳಿಕ ಸಪ್ತವ್ಯಸನಗಳ ವಿವರವು ಪೇಗೆಂದರೆ— ತನು ಮನ ಧನ ರಾಜ್ಯ ವಿಶ್ವ ಉತ್ಸಾಹ ಸೇವಕರ ವ್ಯಸನವೆಂಬಿವುಗಳು ವಿಳಾಗಿರುವುವು. ತನುವ್ಯಸನವೇರಿದರೆ ದೇಹವು ಕೃಶವಾಯ್ತೆನ್ನುವನು. ಮನೋವ್ಯಸನವಂಟಿದರೆ ಕಳವು ಹಾವರಗಳನ್ನಿಚ್ಛಿಸುವನು. ಧನವ್ಯಸನದಿಂದ ಹಣವನ್ನಿಚ್ಛಿಸುವನು. ರಾಜ್ಯವ್ಯಸನದಿಂ ವಾಹನ ವಸ್ತ್ರಾಭರಣಛತ್ರಪಾದುಕಾದಿಗಳನ್ನಪೇಕ್ಷಿಸುವನು. ವಿಶ್ವವ್ಯಸನದಿಂದ ಮನೆ ಹೊಲ ಗದ್ದೆಗಳನ್ನು ಬಯಸುವನು. ಉತ್ಸಾಹವ್ಯಸನದಿಂದ ಪುತ್ರಮಿತ್ರಭಾಂಧವಾದಿಗಳನ್ನಿಚ್ಛಿಸು

ಸುವನು. ಸೇವಕವ್ಯಸನವುಂಟಾದರೆ ಕೊಳ್ಳುವೆನು ಕೊಡುವೆನು ಉಡುವೆನು ತೊಡುವೆನು ಎಂಬ ಇಷ್ಟಚಿಂತೆಯುಳ್ಳವನಾಗುವನು.

ಇನ್ನು ಷಡೂರ್ಮಿಗಳು ಯಾವುವೆಂದರೆ— ಹಸಿವು, ನೀರಡಿಕೆ, ಶೋಕ, ಮೋಹ, ಜನನ, ಮರಣ, ಎಂಬಿವುಗಳು. ಇವುಗಳಲ್ಲಿ ಹಸಿವು, ಬಾಯಾರಿಕೆಗಳು ಪ್ರಾಣಧರ್ಮವು, ಮೋಹಶೋಕಗಳು ಮನೋಧರ್ಮವು, ಜನನಮರಣಗಳು ದೇಹಧರ್ಮವು.

ಅರಿಷಡ್ವರ್ಗಗಳಾವುವೆಂದರೆ— ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳು. ಷಡ್ಭಾವಿಕೆಗಳಾವುವೆಂದರೆ— ಜಾತಿ, ವರ್ಣ, ಕುಲ, ಗೋತ್ರ, ಆಶ್ರಮ, ನಾಮ ಎಂಬಿವುಗಳು. ಷಡ್ಭಾವವಿಕಾರಗಳಾವುವೆಂದರೆ— ಅಸ್ತಿ,ಜಾಯತೆ, ವಿಪರಿಣಮತೆ ವಿವರ್ಧತೆ ಅಪಕ್ಷೀಯತೆ, ವಿನಶ್ಯತೆ ಎಂಬಿವು. ಅಸ್ತಿಯೆಂದರೆ ಉಂಟೆನಿಸುವುದು, ಜಾಯತೆಯೆಂದರೆ—ತಾಯು ಗರ್ಭದಿಂದಹುಟ್ಟುವುದು, ವಿಪರಿಣಮತೆ ಯೆಂದರೆ ಆಕಾರಗೊಳ್ಳುವುದು, ವಿವರ್ಧತೆಯೆಂದರೆ ಬೆಳೆಯುವುದು, ಅಪಕ್ಷೀಯತೆ ಯೆಂದರೆ ಕ್ಷಯಿಸುವುದು. ವಿನಶ್ಯತೆ ಯೆಂದರೆ ಕೆಡುವುದು.

ಪಂಚಕೋಶಗಳಾವುವೆಂದರೆ— ಅನ್ನಮಯ, ಪ್ರಾಣಮಯ, ವಿಜ್ಞಾನಮಯ, ಆನಂದಮಯ, ಮನೋಮಯ ಎಂಬಿವುಗಳು.

ಗುಣತ್ರಯಲಕ್ಷಣಗಳು— ಸತ್ವಗುಣಕ್ಕೆ—ಸತ್ಯ, ಹರ್ಷ, ಕ್ಷಮೆ, ಜ್ಞಾನ, ಮೌನ, ಶ್ರದ್ಧೆ, ಧೈರ್ಯ, ವಿವೇಕ, ಸಾಹಸ, ನಿಶ್ಚಯ, ಎಂಬ ೧೧ ಲಕ್ಷಣಗಳು. ರಜೋಗುಣಕ್ಕೆ— ಗರ್ವ, ಕೋಪ, ದ್ವೇಷ, ಮಚ್ಚರ, ಅಹಂಕಾರ, ಅಸ್ಥಿರ, ಡಂಭ, ಉದ್ಯೋಗ, ವಾಚಕ, ವಾದ ಎಂಬ ೧೧ ಲಕ್ಷಣಗಳು. ತಮೋಗುಣಕ್ಕೆ— ನಿದ್ರೆ, ಆಲಸ್ಯ, ಮೋಹ, ಚಾಪಲ್ಯ, ಹಿಂಸೆ, ನಿಂದೆ, ಹೀನವೃತ್ತಿ ಪಾಪಬುದ್ಧಿ ಎಂಬ ೮ ಲಕ್ಷಣಗಳು.

ಅಂತರಂಗದ ಅಷ್ಟಮದಗಳು— ಸಂಸ್ಥಿತೆ, ತೃಣೀಕೃತೆ, ವನ್ತಿನಿ, ಕ್ರೋಧಿನಿ, ಗಂಧಚಾರಿಣಿ, ಮೋಹಿನಿ, ಅಚಾರಿಣಿ, ವಾಸಿನಿ—ಯೆಂಬಿವುಗಳು.

ಬಹಿರಂಗದ ಅಷ್ಟಮದಗಳು— ಕುಲ, ಛಲ, ಧನ, ಯೌವನ, ರೂಪ, ವಿದ್ಯಾ, ರಾಜ್ಯ, ತಪಸ್ಸು— ಇವುಗಳಿಂದ ಬಂದ ಮದಗಳು.

ತಾಪತ್ರಯಗಳು— ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕವೆಂದು. ಇವುಗಳಲ್ಲಿ ಆಧ್ಯಾತ್ಮಿಕವು—ಮಾನಸ, ಶಾರೀರವೆಂದು ಎರಡುಪ್ರಕಾರವಾಗಿರುವುದು. ಮದಮತ್ಸರಾದಿಗಳಿಂದುಂಟಾದ ದುಃಖವು ಮಾನಸವು. ಜ್ವರಾದಿರೋಗಗಳಿಂದುಂಟಾದ ದುಃಖವು ಶಾರೀರಕವು. ರಾಜರು ಚೋರರು ಪಶು ಪಕ್ಷಿ ವ್ಯಾಘ್ರಾದಿಗಳಿಂದುಂಟಾದ ದುಃಖವು ಆಧಿಭೌತಿಕವು. ಜನನ ಮರಣ ಹಸಿವು ತೃಷೆ ಅಜ್ಞಾನ ಮೊದಲಾದುವುಗಳಿಂದುಂಟಾದ ದುಃಖವು ಅಧಿದೈವಿಕವು. ಹೀಗೆ ಜನ್ಮಜನ್ಮಾಂತರದಲ್ಲಿ ಹುಟ್ಟು ತಾಪತ್ರಯಗಳ ಭ್ರಮೆಯಿಂದ ನೊಂದು ಬೇಸತ್ತ ಜೀವನಿಗೆ ಜನ್ಮಾಂತರಾರ್ಜಿತಸುಕೃತವಾಸನೆಯ ಬಲದಿಂದ ಶಿವಭಕ್ತಿ ಹುಟ್ಟುವುದು. ಅದರಿಂದ ಶಿವಜ್ಞಾನಸಿದ್ಧಿಯಾಗುವುದು. ಆ ಜ್ಞಾನವು—ಪ್ರತ್ಯಕ್ಷ, ಪರೋಕ್ಷ, ಅಪರೋಕ್ಷವೆಂದು ೩ ತೆರನಾಗಿರುವುದು. ಸ್ಥೂಲಾದಿಶರೀರತ್ರಯಗಳಲ್ಲಿಯೂ, ಶ್ರೋತ್ರಾದಿಜ್ಞಾನೇಂದ್ರಿಯಪಂಚಕದಿಂದಲೂ, ಶಬ್ದಾದಿಪಂಚವಿಷಯಗಳಿಂದಲೂ, ಜ್ಞಾನಾದಿಅಂತಃಕರಣಪಂಚಕದಿಂದಲೂ, ತಿಳಿದುಕೊಳ್ಳುವುದೇ ಪ್ರತ್ಯಕ್ಷಜ್ಞಾನವು. ದೇಶಕಾಲಗಳನ್ನೂ, ಲೋಕಾಂತರವನ್ನೂ, ಜನ್ಮಾಂತರ ಸುಖದುಃಖಗಳನ್ನೂ, ಸುಕರ್ಮದುಷ್ಕರ್ಮಗಳನ್ನೂ, ಬಂಧಮೋಕ್ಷಗಳನ್ನೂ, ವೇದಾಗಮಾದಿಗಳ ವಿಚಾರದಿಂದ ತಿಳಿದುಕೊಳ್ಳುವುದೇ ಪರೋಕ್ಷಜ್ಞಾನವು. ಬಹಿರಂಗದಲ್ಲಿ ಕಾಣುವ ಭೂತಪಂಚಕವೂ, ಅಂತರಂಗದಲ್ಲಿರುವ ಸೂಕ್ಷ್ಮಭೂತಪಂಚಕವೂ, ಬಂದೇ ಎಂದು ತಿಳಿದು, ತದ್ಭೂತಗುಣಧರ್ಮಾದಿವಿಷಯಗಳನ್ನೆಲ್ಲ ತಾನಲ್ಲವೆಂದರಿತು, ಜೀವಪರಮರ ಐಕ್ಯವನ್ನು ನಿರ್ಧರಿಸಿ, ತನ್ನ ಹೊರತು ಬೇರೊಂದು ವಸ್ತುವಿಲ್ಲವೆಂಬುದನ್ನು ಶ್ರೀಗುರುಕಟಾಕ್ಷದಿಂದ ನಿಜವಾಗಿ ಅರಿತುಕೊಳ್ಳುವುದೇ ಅಪರೋಕ್ಷಜ್ಞಾನವು. ಎಂದು ಚೆನ್ನಬಸವೇಶನು ಅಪ್ಪಣೆ ಕೊಡಿಸಲು, ಸಿದ್ಧರಾಮೇಶನು ಸಂತುಷ್ಟನಾಗಿ ನಮಸ್ಕರಿಸಿದನು. ಎಂಬಿಲ್ಲಿಗೆ ಐದನೆ ಅಧ್ಯಾಯವು ಸಂಪೂರ್ಣವು.



೬ನೆ ಅಧ್ಯಾಯವು.

ಲಿಂಗದೀಕ್ಷಾ ಗುರುಲಿಂಗಜಂಗಮ ಮಾಹಾತ್ಮ್ಯವು.

ಬಳಿಕ ಸಿದ್ಧರಾಮೇಶನು ಚೆನ್ನಬಸವೇಶನನ್ನು ಕುರಿತು—ಗುರುವರೇಣ್ಯನೆ! ನನಗೆ ಮುಂದೇನುಗತಿ? ಎಂದು ಕೇಳಿಕೊಳ್ಳಲು, ಶಿವಾಗಮಾರ್ಥವಿಜ್ಞಾನಿಗಳಾದವರ ಕರುಣದಿಂದ ಅಷ್ಟಾವರಣಲಕ್ಷಣವನ್ನು ತಿಳಿದು, ವೀರಶೈವತತ್ತ್ವೋಪದೇಶವನ್ನು ಪಡೆದು, ಜನ್ಮಬಂಧವನ್ನು ಕಳೆದುಕೊಳ್ಳೆಂದು ಚೆನ್ನಬಸವೇಶನು ನುಡಿಯಲು, ನೀನು ಹೊರತು ನನಗೆ ಬೇರೆ ಗುರುವಿಲ್ಲವಾದಕಾರಣ, ಅವನ್ನೆಲ್ಲ ನೀನೇ ಉಪದೇಶಿಸಬೇಕೆಂದು ಸಿದ್ಧರಾಮನು ಬೇಡಿ, ಮತ್ತೆ ನಮಸ್ಕರಿಸಿದನು. ಆಗ ಚೆನ್ನಬಸವೇಶನು—ಗುರುವಾದವನು ವೇದಾಗಮಪುರಾಣಾದಿಗಳ ಅರ್ಥವನ್ನು ತಿಳಿದು, ಪರಮಶಾಂತನೂ, ಪರಿಶುದ್ಧನೂ, ಶಿವಾಚಾರಸಂಪನ್ನನೂ, ಅಂಗವೈಕಲ್ಯರಹಿತನೂ, ಜಿತೇಂದ್ರಿಯನೂ, ದುರ್ಗುಣರಹಿತನೂ, ಗುರುಸಂಪ್ರದಾಯಾಗತನೂ, ಸತ್ಪಂಶಜಾತನೂ, ಶಿವಧ್ಯಾನಯುಕ್ತನೂ ಆಗಿರಬೇಕು ಅಂಥವರಲ್ಲಿ ಹೋಗಿ ನೀನು ದೀಕ್ಷೆಯನ್ನು ಪಡೆದು ಬಾರೆಂದು ಹೇಳಲು; "ಗುರುವೆ! ತಾವು ಅಪ್ಪಣೆಕೊಡಿಸಿದ ಗುಣಗಳೆಲ್ಲ ತಮ್ಮಲ್ಲೇ ಇರುವುವು ತಾವೇ ಶಿವನ ಚಿಕ್ಕಳಾಸ್ವರೂಪರು ನೀವು ಈ ಬಸವೇಶ್ವರಾದಿ ಪ್ರಮಥಗಣರಿಗೆಲ್ಲ ಪ್ರಾಣಲಿಂಗೋಪದೇಶನವನ್ನು ಮಾಡಿರುವಿರಿ. ಅದುಕಾರಣ, ತಾವೇ ನನಗೂ ಕರುಣದಿಂದ ಶಿವದೀಕ್ಷೆಯನ್ನು ಮಾಡಿ ಭವಪಾಶದಿಂದ ಬಿಡಿಸಿ ಉದ್ಧರಿಸಬೇಕು" ಎಂದು ಸಿದ್ಧರಾಮೇಶನು ಬೇಡಿದನು. ಅದಕ್ಕಾಚೆನ್ನಬಸವೇಶನು—ಎಲೆ ಸಿದ್ಧರಾಮೇಶನೆ, ವೀರಶೈವಾಚರಣೆ ಯೆಂಬುದು ನಿನಗೆ ಸುಲಭವಲ್ಲ, ಅದು ಕತ್ತಿಯ ಬಾಯಲ್ಲಿರುವ ಜೇನುತುಪ್ಪದಂತೆಯೂ. ಸರ್ಪನ ತಲೆಯಲ್ಲಿರುವ ರತ್ನದಂತೆಯೂ ಸಾಮಾನ್ಯರಿಗೆ ದುರ್ಲಭವಾಗಿರುವುದು. ಮಲತ್ರಯಗಳನ್ನೂ ಪಂಚಸೂತಕಗಳನ್ನೂ ಕಳೆದು, ಅನ್ಯದೈವಭಜನೆಯನ್ನೂ ಭವಿಸಂಗವನ್ನೂ ಬಿಟ್ಟು, ಪಂಚಾಚಾರತತ್ಪರನಾಗಿದ್ದವನೇ ವೀರಶೈವನೆನಿಸಿಕೊಳ್ಳುವನು ಎನ್ನಲು, ಆ ಮಲತ್ರಯಾದಿಗಳ ವಿವರವನ್ನು ತಿಳಿಸಬೇಕೆಂದು ಸಿದ್ಧರಾಮೇಶನು ಕೇಳಲಾಗಿ, ಹೇಳಿದನೆಂತೆಂದರೆ—ನನ್ನ ತಾಯಿ ತಂದೆ ಮಕ್ಕಳು ಎಂಬ ಅಭಿಮಾನವು ಆಣವಮಲವು.

ಕುಲಗೋತ್ರಾದಿಗಳ ಅಭಿಮಾನವು ಮಾಯಾಮಲವು, ಧನಾದ್ಯಭಿಮಾನವು ಕಾರ್ಮಿಕಮಲವು. ಇವನ್ನೆಲ್ಲ ಬಿಟ್ಟು, ಪಾರ್ವತೀಪರಮೇಶ್ವರರೇ ನನ್ನ ತಾಯ್ತಂದೆಗಳು, ಈಶ್ವರನ ಕುಲವೇ ನನ್ನ ಕುಲ, ಸಕಲ ಸಂಪತ್ತೂ ಶಿವನದೇ ಹೊರತು ನನ್ನದಲ್ಲ, ಎಂಬ ಭಾವವುಳ್ಳವನಿಗೆ ಮಲತ್ರಯಗಳು ಅಳಿದು ಹೋಗುವುವು. ಜಾತಿಸೂತಕ, ಜನನಸೂತಕ, ಪ್ರೇತಸೂತಕ, ರಜಸ್ಸೂತಕ, ಉಚ್ಛಿಷ್ಟಸೂತಕ, ಇವೇ ಪಂಚಸೂತಕಗಳು. ಸ್ಥಾವರಾದಿ ಅನ್ಯಲಿಂಗಪೂಜೆ, ತೀರ್ಥಕ್ಷೇತ್ರಯಾತ್ರೆ, ಇತ್ಯಾದಿಗಳೇ ಅನ್ಯದೇವಾರ್ಚನೆಯು, ಲಿಂಗವಿಹೀನರಾದವರನ್ನು ತನ್ನ ತಾಯ್ತಂದೆ ಬಂಧುಗಳೆಂದು ಭಾವಿಸುವುದು ಭವಿಸಂಗವು. ಇವೆಲ್ಲವನ್ನೂ ಬಿಡಬೇಕು ಎನ್ನಲು, " ಗುರುವೆ ! ನನ್ನ ಕಲ್ಪತರುವೆ ! ತಮ್ಮಪ್ಪಣೆಯಂತೆ ಅದೆಲ್ಲವನ್ನೂ ಬಿಟ್ಟಿರುವೆನು ; ಇನ್ನೇನನ್ನು ಬಿಡಬೇಕೋ ಅವನ್ನೂ ಅಪ್ಪಣೆ ಕೊಡಿಸಿರಿ ; ನನ್ನನ್ನು ಶಿವದೀಕ್ಷೆಯಿಂದ ಧನ್ಯನಂ ಮಾಡಿರಿ " ಎಂದು ಸಿದ್ಧರಾಮೇಶನು ಕೇಳಿದನು. ಆಗ ಚೆನ್ನಬಸವೇಶನು ಕರುಣಾಕಟಾಕ್ಷದಿಂದ ಸಿದ್ಧರಾಮೇಶನನ್ನು ನೋಡಿ, ಬಳಿಕ ಶಿವಶರಣರ ಕಡೆಗೆ ತಿರುಗಿ--ಈ ಸಿದ್ಧರಾಮೇಶನು ಪರಶಿವನ ಪ್ರತಿಬಿಂಬವು, ಹೇಗೆಂದರೆ– ಪೂರ್ವದಲ್ಲಿ ಗಂಧರ್ವದಂಪತಿಗಳಿಬ್ಬರು ಶಿವನ ಬಳಿಗೆ ಹೋಗುತ್ತ, ಅಲ್ಲಿದ್ದ ಭೃಂಗೀಶ್ವರನನ್ನು ನೋಡಿ ನಕ್ಕರು. ಅದರಿಂದ ಭೃಂಗಿಯು ಕೆರಳಿ, " ನೀವು ಮಾನವಜನ್ಮದಲ್ಲಿ ಭವಿಗಳಾಗಿ ಹುಟ್ಟಿರಿ " ಎಂದು ಅವರಿಗೆ ಶಾಪವಿತ್ತನು. ಅವರು ಹದರಿ, ತಂದೆಯೆ, ನಾವು ಅಜ್ಞಾನದಿಂದ ನಕ್ಕೆವು, ಕರುಣದಿಂದ ಶಾಪವಿಮೋಚನವನ್ನು ಅನುಗ್ರಹಿಸಬೇಕೆಂದು ಬೇಡಲು, ನಿಮ್ಮ ಗರ್ಭದಲ್ಲಿ ಒಬ್ಬ ಶಿವಯೋಗಿಯು ಜನಿಸಿದಾಗ ವಿಮೋಚನವಾಗುವುದು ಎಂದು ಭೃಂಗೀಶನು ಹೇಳಿದನು. ಅಲ್ಲಿಂದ ಆಗಂಧರ್ವರು ಶಿವನಬಳಿಗೆ ಹೋಗಿ ತಮಗಾದ ಸಂಕಟವನ್ನು ಹೇಳಿಕೊಂಡು ಅತ್ತರು. ಆಗ ಶಂಕರನು– ನೀವು ಹೆದರಬೇಡಿರಿ, ನಿಮ್ಮ ಗರ್ಭದಲ್ಲಿ ನನ್ನ ಪ್ರತಿರೂಪನೇ ಅವತರಿಸಿ, ನಿಮಗೆ ಮುಕ್ತಿಗುಡುವಂತೆ ಮಾಡುವೆನು, ಎಂದು ಅಭಯವನ್ನು ಕೊಟ್ಟನು. ಆ ದಂಪತಿಗಳು ಸೊನ್ನಲಿಗೆ (ಸೊಲ್ಲಾಪುರ) ಯೆಂಬ ಊರಿನಲ್ಲಿ ಕುಡಿಯೊಕ್ಕಲಿಗರಿಬ್ಬರ ಗರ್ಭದಲ್ಲಿ ಜನಿಸಿದರು. ಗಂಡನು ಮುದ್ದಗೌಡನಾದನು. ಹೆಂಡತಿಯು ಸುಗ್ಗಾಯಿಯಾ

ರ್ಯೇದಾಧ್ಯಯನ, ಹುಲಿಯವಾಹನ, ಕುಮಾರಪರ್ವತದ ತಪ್ಪಲಿನಲ್ಲಿ ಮುಂ ದಾರವೃಕ್ಷದ ಬುಡದೊಳಗೆ ವ್ಯಾಘ್ರಚರ್ಮದಮೇಲೆ ಗೋಮುಖಾಸನಾಸೀನ ನಾಗಿ, ಭಸ್ಮರುದ್ರಾಕ್ಷಗಳನ್ನುಧರಿಸಿ, ಶಿಷ್ಯರಿಗೆ ದೀಕ್ಷೆಯಂ ಮಾಡುವಾಗ ಗರುಕೆಯಿಂದ ಸೇಚಿಸುವನು, ಆತನ ಕಲಶವು ಲೋಹಮಯವಾಗಿ ದಕ್ಷಿಣ ದಿಕ್ಕಿನಲ್ಲಿರುವುದು. ಏಕೋರಾಮಾಚಾರ್ಯನಿಗೆ-- ಜ್ಞಾನಶಕ್ತಿ, ವಾಮದೇವ ಮುಖ, ಐದುಜಡೆ, ಕಾವಿಯವಸ್ತ್ರ, ತಾಮ್ರದಪಾತ್ರೆ, ಚಿತ್ರದಂಡ, ಕುಂಡಲ. ಜಡೆಯಲ್ಲಿ ಭೋಗಮಲ್ಲಿಕಾರ್ಜುನನನ್ನಿಟ್ಟು ಆರಾಧಿಸುವಿಕೆ, ಪ್ರಸಾದಪಂಚಾಕ್ಷರೀಮಂತ್ರಜಪ, ಸಾಮವೇದಾಧ್ಯಯನ, ಹಂಸವಾಹನ ವಾನಪ್ರಸ್ಥಾಶ್ರಮ, ಮೇರುಪರ್ವತದ ತಪ್ಪಲಿನಲ್ಲಿ ಆಲದಮರದ ಕೆಳಗೆ ಕಾ ಷಾಯವಸ್ತ್ರದ ಗದ್ದಿಗೆಯಮೇಲೆ ಭದ್ರಾಸನಾಸೀನನಾಗಿ, ಭಸಿತರುದ್ರಾಕ್ಷ ಧಾರಿಯಾಗಿ, ಶಿಷ್ಯರಿಗೆ ದೀಕ್ಷೆಯನ್ನಿಸಗುವಾಗ ಹೊಂಬಾಳೆಯಿಂದ ಪರಿಷೇ ಚಿಸುವನು. ಆತನ ತಾಮ್ರದಕಲಶವು ಉತ್ತರದಿಕ್ಕಿನಲ್ಲಿರುವುದು. ಪಂಡಿತಾ ಚಾರ್ಯನಿಗೆ-ಕ್ರಿಯಾಶಕ್ತಿ ಸದ್ಯೋಜಾತಮುಖ, ಬಂದುಜಡೆ, ಬಿಳಿಯ ಬ ಟ್ಟೆ, ಬೆಳ್ಳಿಯ ಕರಪಾತ್ರೆ, ಮುತ್ತಿನ ಕುಂಡಲ, ಕೈಯಲ್ಲಾಗಲಿ ಕಾಂಕು ಳಲ್ಲಾಗಲಿ ಚೆನ್ನಮಲ್ಲಿಕಾರ್ಜುನಲಿಂಗವನ್ನು ಧರಿಸಿ ಆರಾಧಿಸುವುದು. ಹಂ ಸಪಂಚಾಕ್ಷರೀಮಂತ್ರಜಪ, ಅಥರ್ವಣವೇದಾಧ್ಯಯನ, ಗಜವಾಹನ, ಗೃ ಹಸ್ಥಾಶ್ರಮ, ತ್ರಿಕೂಟಪರ್ವತದ ತಪ್ಪಲಿನಲ್ಲಿ ಮಾವಿನಮರದ ಕೆಳಗೆ ರನ್ನ ಗಂಬಳಿಯ ಗುದ್ದಿಗೆಯಮೇಲೆ ಸುಖಾಸನಾಸೀನನಾಗಿ, ಭಸ್ಮರುದ್ರಾಕ್ಷ ಗಳನ್ನು ಧರಿಸಿ, ತನ್ನ ಶಿಷ್ಯರಿಗೆ ದೀಕ್ಷೆಯನ್ನು ಮಾಡುವಾಗ ವೀಳೆಯದೆ ಲೆಯಿಂದ ಪ್ರೋಕ್ಷಿಸುವನು. ಆತನ ರಜತಕಲಶವು ಪಶ್ಚಿಮದಿಕ್ಕಿನಲ್ಲಿರುವು ದು. ಈ ನಾಲ್ವರು ಆಚಾರ್ಯರು ಪ್ರತಿಯುಗದಲ್ಲೂ ಭೂಮಿಯಜನಕ್ಕೆ ಶಿವ ದೀಕ್ಷೆಯನ್ನಿತ್ತು ಧನ್ಯರಂ ಮಾಡುವುದಕ್ಕಾಗಿ ಅವತರಿಸುವರು. ಈ ಆಚಾ ರ್ಯರ ವಂಶಿಕರಲ್ಲಿ ಹಿರಿಯರನ್ನೇ ದೀಕ್ಷಾಸಮಯದಲ್ಲಿ ಆಯಾ ಆಚಾರ್ಯರ ಕ ಲಶಗಳನ್ನಾರಾಧಿಸುವುದಕ್ಕೆ ಕುಳ್ಳಿರಿಸುವರು. ಮಧ್ಯದಲ್ಲಿ ಗುರುಕಲಶವನ್ನಿ ಟ್ಟು ಗುರುವಿನಂತೆ ಅದನ್ನು ಭಾವಿಸಿ ಪೂಜಿಸುವರು ದೀಕ್ಷೆಯನ್ನು ಮಾ ಡುವವರೂ ಮಾಡಿಸಿಕೊಳ್ಳುವವರೂ ಅಂಗದಲ್ಲಿ ಊನವಿಲ್ಲದವರಾಗಬೇಕು. ಬ್ರಹ್ಮ ಕ್ಷತ್ರಿಯ ವೈಶ್ಯ ಶೂದ್ರರೆಂಬ ಚತುರ್ವರ್ಣದವರೂ ಈ ದೀಕ್ಷೆಯ

ನ್ನು ಪಡೆಯುಬಹುದು. ಆದರೆ ಅವರಿಗೆ ದೀಕ್ಷೆಮಾಡುವಾಗ ಬ್ರಾಹ್ಮಣನ ನ್ನು ೫ ವರ್ಷ, ಕ್ಷತ್ರಿಯನನ್ನು ೬ ವರ್ಷ, ವೈಶ್ಯನನ್ನು ೯ ವರ್ಷ, ಶೂ ದ್ರನನ್ನು ೧೨ ವರ್ಷಗಳವರೆಗೆ, ಉತ್ತಮನನ್ನು ನೀಚಕಾರ್ಯದಲ್ಲೂ, ನೀಚ ರನ್ನು ಉತ್ತಮಕಾರ್ಯದಲ್ಲೂ ಸೇರಿಸಿ, ಹೊಡೆದುಬಡಿದು ನಾನಾಪ್ರಕಾರವಾ ಗಿ ಶಿಕ್ಷಿಸಿ, ಅವರ ಮನಃಪರಿಪಾಕಾದಿಗಳನ್ನು ಪರೀಕ್ಷಿಸಿ, ಒಳಿಕ ಅವರಿಗೆ ತ್ರಿವಿಧ ದೀಕ್ಷೆಯನ್ನು ಮಾಡಬೇಕು ; ಎಂದು ಹೇಳಲು, ದೀಕ್ಷಾತ್ರಯ ವೆಂದರೇನು ? ಲಿಂಗತ್ರಯವೆಂದರೇನು ? ಅದನ್ನು ವಿವರಿಸಿ ನಿರೂಪಿಸಬೇ ಕೆಂದು ಸಿದ್ಧರಾಮೇಶನು ಬೇಡಿದನು. ಆಗ ಚೆನ್ನಬಸವೇಶನು— ಪ್ರಳ ಯಕಾಲಾಗ್ನಿಯ ತೇಜಸ್ಸನ್ನು ಕೂಡ ಧಿಕ್ಕರಿಸುತ್ತ ಕೋಟಿಮಿಂಚಿಗೆ ಸ ಮನಾದ ಕಾಂತಿಯಿಂದ ಶಿವಾಚಕ್ರದಲ್ಲಿ ಸೂಕ್ಷ್ಮವಾಗಿ ಹೊಳೆಯುತ್ತಿರುವ ಚಿತ್ಕಳೆಯನ್ನು ಗುರುವರನು ತನ್ನ ಭಾವನಸೋರ್ದೃಷ್ಟಿಗಳಿಂದ ಹಸ್ತಕ್ಕೆ ತಂದು, ಆ ಪರಮ ಹಸ್ತವನ್ನು ಶಿಷ್ಯನ ಮಂಡೆಯಮೇಲಿಟ್ಟು, ವೇಧಾ ದೀಕ್ಷೆಯಿಂದ ಭಾವಲಿಂಗವನ್ನು ಕಾರಣತನುವಿನಲ್ಲಿ ಹೀಗೆ ನೆಲೆಗೊಳಿಸು ವನು. ಕಿವಿಯಲ್ಲಿ ಮಂತ್ರವನ್ನುಪದೇಶಿಸಿ, ಪ್ರಾಣಲಿಂಗವನ್ನು ಸೂಕ್ಷ್ಮ ದೇಹದಲ್ಲಿ ಸ್ಥಾಪಿಸಿ, ಹೀಗೆ ಮನುದೀಕ್ಷೆಯನ್ನು ಮಾಡುವನು. ಸ್ಥೂ ಲದೇಹದಲ್ಲಿ ಇಷ್ಟಲಿಂಗವನ್ನು ಧರಿಸಿ, ಕ್ರಿಯಾದೀಕ್ಷೆಯನ್ನು ಮಾ ಡುವನು ದೀ—ಕ್ಷೆ ಎಂಬಕ್ಷರಗಳು, ಗುರುವರನ ಅನುಗ್ರಹದಿಂದ ಶಿವಜ್ಞಾ ನಸಂಬಂಧವು (ದೀಯತೆ) ಕೊಡಲ್ಪಡುವುದು. ಮಲತ್ರಯವು (ಕ್ಷೀಯು ತೆ) ನಾಶಗೊಳ್ಳುವುದು. ಎಂಬರ್ಥವನ್ನು ಸೂಚಿಸುತ್ತಿರುವುದು ಅದು ಕಾರಣವೇ ಈ ಸಂಸ್ಕಾರಕ್ಕೆ ದೀಕ್ಷೆ ಯೆಂದು ಪೆಸರು.

ಗುರುವು ಸಚ್ಚಿದಾನಂದಸ್ವರೂಪನು, ಅವನಿಗೆ ಪರವಾದ ವಸ್ತುವೇ ಇಲ್ಲ. ಅದುದರಿಂದಲೇ " ನಗುರೋರಧಿಕಂ " ಎಂದು ಪ್ರಮಾಣವಚನವಿ ರುವುದು. ಇನ್ನು ಲಿಂಗತ್ರಯಭೇದವನ್ನು ಕೇಳು— ಹಿಂದೆ ನಾನು ನಿನಗೆ ಬೋಧಿಸಿದ ಮಹಾಲಿಂಗವೇ ನಿಷ್ಕಲವಾಗಿ ಭಾವಕ್ಕೆ ಗೋಚರಿಸಿ, ಭಾವ ಲಿಂಗವಾಯಿತು. ಅದೇ ಸಕಲ ನಿಷ್ಕಲವಾಗಿ ಮನಸ್ಸಿಗೆ ಗೋಚರಿಸಿ ಪ್ರಾಣಲಿಂಗವಾಯಿತು. ಅದೇ ಸಕಲವಾಗಿ ಕಣ್ಣಿಗೆ ಗೋಚರಿಸಿ, ಇಷ್ಟ ಲಿಂಗವೆನಿಸಿತು. ಅತ್ಯತಿಷ್ಠದ್ದಶಾಂಗುಲ, ನಿರುಪಮ, ನಿತ್ಯ, ನಿರಾಮಯ,

ನಿರ್ಗುಣ, ನಿರಂಜನ, ನಿರ್ದ್ವಂದ್ವ, ಅವ್ಯಕ್ತ, ಅವ್ಯಯ, ಪರಾತ್ಪರ, ಅದ್ವಿತೀಯಬ್ರಹ್ಮ, ವೆಂಬ ಪದಕ್ಕೆ ವಾಚ್ಯವಾದ ಪರವಸ್ತುವೇ ಈ ಲಿಂಗವು. ಇಂತಹ ಲಿಂಗವನ್ನು ಶಿರಸ್ಸಿನಲ್ಲಾಗಲಿ, ಬಾಯಲ್ಲಾಗಲಿ, ಕೊರಲಿನಲ್ಲಾಗಲಿ, ಕೌಂಕುಳಿನಲ್ಲಾಗಲಿ, ಎದೆಯುಮೇಲಾಗಲಿ ಧರಿಸಬಹುದು. ಆದರೆ ಹೊಕ್ಕುಳಿನಿಂದ ಕೆಳಗಣ ಅಪಶರೀರದಲ್ಲಿ ಮಾತ್ರ ಧರಿಸಕೂಡದು. ಅದು ಪಾತಕವು. ಬಳಿಕ ಘಟವಿಸುವವರೆಗೂ ಭೋಜನ, ಶಯನ, ಮಲಮೂತ್ರವಿಸರ್ಜನ, ಸ್ತ್ರೀಸಂಗ, ರಾಜಭಯ, ಮೊದಲಾದ ಯಾವ ಸಂದರ್ಭದಲ್ಲೂ ದೇಹದಿಂದ ಈ ಲಿಂಗವನ್ನು ಅಗಲಿಸಕೂಡದು. ಈ ಲಿಂಗಕ್ಕೆ ಜಂಗಮವೇ ಮುಖವು. ಜಂಗಮನ ಮುಖದಿಂದ ಈ ಲಿಂಗಕ್ಕೆ ತೃಪ್ತಿಯುಂಟಾಗುವುದು. ಆ ಜಂಗಮರ ಲಕ್ಷಣವನ್ನು ಕೇಳು– ಆದಿಮಧ್ಯಾಂತಶೂನ್ಯನಾಗಿ, ನಿತ್ಯನೂ, ಪರಿಪೂರ್ಣನೂ, ನಿರಾಮಯನೂ, ಸಗುಣನಿರ್ಗುಣನೂ, ಹರಿಬ್ರಹ್ಮಶಿವಾದಿಪೂಜ್ಯನೂ ಆಗಿರುವವನೇ ಜಂಗಮನು. ಎಂದು ಚೆನ್ನಬಸವೇಶನು ಹೇಳಿದನಂಬಿಲ್ಲಿಗೆ ಆರನೆ ಅಧ್ಯಾಯವು ಸಂಪೂರ್ಣವು.



ಏ ನೆ ಅಧ್ಯಾಯವು.

ಭಸ್ಮರುದ್ರಾಕ್ಷಿ ಮಹಾತ್ಮ್ಯವು.

ಗುರುವರ್ಯನೆ, ಇನ್ನು ಲಿಂಗಾರ್ಚನಕ್ರಮವನ್ನೂ ಭಸ್ಮರುದ್ರಾಕ್ಷಿ ಪಾದೋದಕಪ್ರಸಾದಗಳ ಮಹಾತ್ಮ್ಯವನ್ನೂ ನಿರೂಪಿಸಬೇಕೆಂದು ಸಿದ್ಧರಾಮೇಶನು ಪ್ರಾರ್ಥಿಸಲು, ಚೆನ್ನಬಸವೇಶನು ಹೇಳಲಾರಂಭಿಸಿದನು.– ಶಿವಪೂಜೆಗೆ ನಕ್ಷತ್ರಗಳೆಲ್ಲ ಆಕಾಶದಲ್ಲಿ ಸಂಪೂರ್ಣವಾಗಿರುವ ಕಾಲವು ಉತ್ತಮವಾದುದು. ಅವುಗಳು ಕಾಂತಿವಿಹೀನವಾಗುತ್ತಿರುವ ಕಾಲವು ಮಧ್ಯಮವು. ಸೂರ್ಯೋದಯಕಾಲದ ಪೂಜೆಯು ಅಧಮವು. ಉತ್ತಮಕಾಲದಲ್ಲಿ ಶಿವಸ್ಮರಣೆ ಮಾಡುತ್ತ ನಿದ್ರೆಯಿಂದೆದ್ದು, ಮಲಮೂತ್ರಗಳನ್ನು ವಿಸರ್ಜಿಸಿ, ವ್ಯತ್ತಿಕಾಶೌಚವನ್ನು ಮಾಡಿ, ಹಸ್ತಪಾದಗಳನ್ನು ತೊಳೆದು, ಬಳಿಕ, ಹಾಲಿರುವ, ಮೊಗ್ಗಾಗುವ, ಮುಳ್ಳಿರುವ, ಮೂರು ಜಾತಿ

ಯ ಮುರದ ಕಡ್ಡಿಗಳಿಂದ (ಅವುಗಳಿಗೆಲ್ಲ ಕಗ್ಗಲಿಯ ಕಡ್ಡಿಯುತ್ತಮ) ಹಲ್ಲ ನ್ನುಜ್ಜಿ, ಲಿಂಗೋದಕದಿಂದ ಬಾಯ್ಮುಕ್ಕುಳಿಸಿ, ಮುಖವನ್ನು ತೊಳೆದು, ಸ್ನಾನ ಮಾಡಿ, ಮಡಿಯುಟ್ಟು, ಮನೆಯ ಈಶಾನಭಾಗದಲ್ಲಿರುವ ಶಿವಪೂ ಜಾಗಾರವನ್ನು ಹೊಕ್ಕು, ಸಾರಿಸಿ, ರಂಗವಲ್ಲಿಯನ್ನಿಕ್ಕಿ, ಪದ್ಮಾಸನದಲ್ಲಿ ಕುಳಿತು, ನಿರ್ಮಲಚಿತ್ತದಿಂದ ಶಿವಪೂಜಾಸಾಮಗ್ರಿಗಳನ್ನೆಲ್ಲ ಇರಿಸಿಕೊಳ್ಳ ಬೇಕು. ಬಳಿಕ ಭಸ್ಮದ ಸ್ನಾನ, ಉದ್ಧೂಳನ, ತ್ರಿಪುಂಡ್ರಧಾರಣಗಳನ್ನು ಮಾಡಿ, ರುದ್ರಾಕ್ಷಮಾಲಿಕೆಯನ್ನು ಧರಿಸಿ, ಶಿವಮಂತ್ರವನ್ನು ಪಠಿಸುತ್ತ, ಪೂಜಾಸಾಮಗ್ರಿಗಳನ್ನರ್ಚಿಸಿ, ಶಿವಾರ್ಚನೆಯನ್ನು ಮಾಡಬೇಕು. ಭ ಸ್ಮಾದಿಗಳ ವಿವರವು ಹೇಗೆಂದರೆ— ಪರಶಿವನ ಸದ್ಯೋಜಾತಮುಖದಿಂದ ಪೃಥ್ವಿಯುತ್ಪನ್ನವಾಯಿತು, ಅದಕ್ಕೆ ನಿವೃತ್ತಿಯೆಂಬ ಕಲೆ, ಅದಕ್ಕೆ ನಂದಿ ಯೆಂಬ ಕಪಿಲವರ್ಣದ ಹಸುವಿನ ಸಂಬಂಧವು; ಅಂಥ ಹಸುವಿನ ಸಗಣ ವನ್ನು ಸುಟ್ಟು ಮಾಡಿದುದೇ ವಿಭೂತಿಯು. ವಾಮದೇವಮುಖದಿಂದ ಜಲ ಭೂತವು, ಅದಕ್ಕೆ ಪ್ರತಿಷ್ಠಾಕಲೆ, ಭದ್ರೆ ಯೆಂಬ ಕಾಳಹಸುವು, ಅದರ ಸಗಣದಿಂದಾದುದು ಭಸಿತವು. ಅಘೋರಮುಖದಿಂದ ಅಗ್ನಿಭೂತವು, ಅ ದಕ್ಕೆ ವಿದ್ಯಾಕಲೆ, ಸುರಭಿ ಯೆಂಬ ಕೆಂಬಣ್ಣದ ಹಸು, ಅದರ ಸಗಣದಿಂ ದಾದುದು ಭಸ್ಮವು. ತತ್ಪುರುಷಮುಖದಿಂದ ವಾಯುಭೂತವು. ಅದಕ್ಕೆ ಶಾಂತಿಕಲೆ, ಸುಶೀಲೆಯೆಂಬ ಬಿಳಿಯಹಸುವು, ಅದರ ಸಗಣದಿಂದಾದು ದೇ ಕ್ಷಾರವು. ಈಶಾನಮುಖದಿಂದ ಆಕಾಶಭೂತವು, ಅದಕ್ಕೆ ಶಾಂತ್ಯ ತೀತೆ ಯೆಂಬ ಕಲೆ, ಸುಮನಸೆ ಯೆಂಬ ಚಿತ್ರವರ್ಣದ ಹಸು, ಅದರ ಸಗ ಣದಿಂದಾದುದೇ ರಕ್ಷೆಯು. ಇವುಗಳಲ್ಲಿ ಭೂತಿ ಮತ್ತೂ ಭಸಿತ ಇವುಗಳು ಜ್ಞಾನವರ್ಧಕಗಳು. ಭಸ್ಮವು ಪಾಪಹರವು, ಕ್ಷಾರವು ವಿಷತ್ಪರಿಹಾರಕವು. ರಕ್ಷೆಯು ಭಯನಿವಾರಕವು. ಹೀನಪದಾರ್ಥಗಳನ್ನು ತಿನ್ನುವ, ಕರುವಿಲ್ಲ ದ, ರೋಗವೆರೆದ, ಬಲಹೀನವಾದ, ಅಂಗವಿಕಾರವುಳ್ಳ. ಅಮಿತವಾಗಿ ತಿ ನ್ನುವ, ಬರೆ ಹಾಕಿರುವ ಅಂಗಹೀನವಾದ, ಗೊಡ್ಡಿಯಾದ, ತುಂಟಾದ, ಹಾಲು ಕರೆಯದ, ಎಳಗಂತಿಯಾದ ಹಸುಗಳನ್ನು ಬಿಟ್ಟು, ಸಲಕ್ಷಣವಾದ ಮೇಲೆ ಹೇಳಿದ ಬಣ್ಣದ ಗೋವುಗಳಿಂದ ಸಗಣವನ್ನು ಭೂಮಿಗೆ ಬೀಳ ಗೊಳಿಸದಂತೆ ಅತುಕೊಂಡು, ಗ್ರಹಿಸುವುದು, ಉಂಡೆ ಮಾಡುವುದು, ಬಣ್ಣ

ಗಿಸುವುದು, ಸುಡುವುದು, ಶೋಧಿಸುವುದು, ಈ ಪಂಚಕಾರ್ಯಗಳನ್ನು ವಿಧ್ಯುಕ್ತ್ಯನುಸಾರವಾಗಿ ಮುಂತ್ರೋಚ್ಚಾರದೊಡನೆ ನಡಿಸಿ, ಧೂಳಿಯನ್ನಾಗಿಯೊ ಗಟ್ಟಿಯನ್ನಾಗಿಯೊ ಮಾಡಿ ಇಟ್ಟುಕೊಳ್ಳಬೇಕು. ಇಂತಹ ಭಸಿತಾದಿಗಳಿಲ್ಲದಿದ್ದರೆ, ಅನ್ಯರು ಕೊಟ್ಟುದನ್ನು ಭಕ್ತಿಯಿಂದ ಸ್ವೀಕರಿಸಬೇಕು. ಶಿರಸ್ಸು, ಮುಖ, ಹೃದಯ, ಗುಹ್ಯ, ಪಾದಾದಿಸರ್ವಾಂಗ, ಈ ಸ್ಥಲಗಳಲ್ಲಿ ಕ್ರಮವಾಗಿ ಈಶಾನಾದಿ ಮುಂತ್ರಗಳಿಂದ ಭಸ್ಮಸ್ನಾನ ಮಾಡಬೇಕು. ಭಸ್ಮಸ್ನಾತನಿಗೆ ಭವಬಂಧವಿರುವುದಿಲ್ಲ. ಬೆಸಿಲಿನಿಂದ ಕೂಡಿದ ಮಳೆಯ ಸ್ನಾನಕ್ಕೆ ದಿವ್ಯಸ್ನಾನವೆಂದು ಹೆಸರು. ಗೋವಿನ ಗೊರಸಿನಿಂದೆದ್ದು ಗಾಳಿಯಿಂದ ಕೊಚ್ಚಿ ಬಂದ ಭೂಧೂಳಿಯ ಸ್ನಾನವೇ ವಾಯವ್ಯಸ್ನಾನವು. ನೀರಿನಿಂದ ಮಾಡುವ ಮಜ್ಜನವು ವಾರುಣಸ್ನಾನವು. ಆ ವಾರುಣಸ್ನಾನದಲ್ಲೆಲ್ಲ ಗಂಗಾಸ್ನಾನವಧಿಕವು. ಶಿವಧ್ಯಾನವೇ ಮನಸ್ಸ್ನಾನವು. ಭಸ್ಮದಿಂದ ಮಾಡುವ ಸ್ನಾನವೇ ಆಗ್ನೇಯಸ್ನಾನವು. ಮೇಲೆಕಂಡ ಸ್ನಾನಗಳೊಳಗೆಲ್ಲ ಭಸ್ಮಸ್ನಾನವೇ ಶ್ರೀಷ್ಠವಾದುದು. ಭಸ್ಮಸ್ನಾನಾನಂತರ ಉದ್ಧೂಳನ ಮಾಡಿ, ಬಳಿಕ, ಶಿರಸ್ಸು, ಹಣೆ, ಕಿವಿಗಳು. ಕೊರಲು, ಪಾದಗಳು, ಭುಜಗಳು, ಎದೆ, ಹೊಕ್ಕುಳು, ಬೆನ್ನು, ಮಣಿಬಂಧಗಳು, ಹೆಕ್ಕತ್ತು, ಈ ಏಕಾದಶ ಸ್ಥಲಗಳಲ್ಲಿ ಕ್ರಮವಾಗಿ—ಪರಮಾತ್ಮ, ಶಿವ, ಮಹೇಶ್ವರ, ರುದ್ರ, ಶ್ರೀಕಂಠ, ಶಂಭು, ಈಶ್ವರ, ಮಹಾದೇವ, ಪಶುಪತಿ, ಶಂಕರ, ವೃಷಧ್ವಜ, ಎಂಬ ಏಕಾದಶರುದ್ರರುಗಳನ್ನು ಸ್ಮರಿಸಿ ತ್ರಿಪುಂಡ್ರಧಾರಣವನ್ನು ಮಾಡಬೇಕು. ತಲೆ, ಹಣೆ, ಕಿವಿಗಳು ೨, ಕಣ್ಣುಗಳು ೨, ಮೂಗಿನ ಹೊಳ್ಳೆಗಳು ೨, ಬಾಯಿ, ತೋಳುಗಳು ೨, ಭುಜಗಳು ೨, ಸ್ತನಗಳು ೨, ಹೊಟ್ಟೆ, ಮುಂಗೈಗಳು ೨, ಪಕ್ಕಗಳು ೨, ಹೊಕ್ಕುಳು, ಶಿಶ್ನ ಬೆನ್ನು ಮುಂಡಿಗಳು ೨, ಮೊಣಕಾಲುಗಳು ೨, ತೊಡೆಗಳು ೨, ಗುದ, ಕಾಲುಗಳು ೨, ಇನ್ನೇ ೩೨ ಸ್ಥಾನಗಳು. ಸಮರ್ಥರಾದವರು ಈ ಸ್ಥಾನಗಳೆಲ್ಲಿ ಧರಿಸಬಹುದು. ಶಕ್ತಿಯಿಲ್ಲದಿದ್ದರೆ ಮುಂಡೆ, ಹಣೆ, ಕಿವಿಗಳು, ಕತ್ತು, ತೋಳುಗಳು, ಭುಜಗಳು, ಮುಂಗೈಗಳು, ತುಟಿಗಳಿರಡು, ಎದೆ, ಬೆನ್ನು, ಹೊಕ್ಕುಳು, ಈ ಹದಿನಾರು ಸ್ಥಲಗಳಲ್ಲಿ ಧರಿಸಬಹುದು. ಇಷ್ಟಕ್ಕೂ ಶಕ್ತಿಯಿಲ್ಲದಿದ್ದರೆ ತಲೆ, ಹಣೆ, ಕತ್ತು, ಭುಜಗಳು, ಎದೆ, ಹೊಕ್ಕುಳು, ಬೆ

ನ್ನು ಈ ಎಂಟುಸ್ಥಾನದಲ್ಲಾದರೂ ಪ್ರತಿದಿನವೂ ತಪ್ಪದೆ ಧರಿಸಬೇಕು. ಭೂತ, ಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ಅಪಸ್ಮಾರ, ದುಷ್ಟಮೃಗ, ಸರ್ಪ, ವೃಶ್ಚಿಕ, ಚೋರ, ರಾಜ, ಮೊದಲಾದವರ ಭಯವನ್ನಿಲ್ಲ ಈ ಭಸ್ಮವು ಸೊಂಕಿದಮಾತ್ರದಿಂದಲೇ ಪರಿಹರಿಸುವುದು. ಏಕೆಂದರೆ— ಇದು ಪರಶಿವಸ್ವರೂಪವಾದುದು. ಇನ್ನು ರುದ್ರಾಕ್ಷೆಯ ವಿಷಯವನ್ನು ಕೇಳು.— ಪೂರ್ವದಲ್ಲಿ ಶಂಕರನು ತ್ರಿಪುರದಹನವನ್ನು ಮಾಡುವಾಗ್ಗೆ ಅದರ ಕೀಲನ್ನು ನಿರೀಕ್ಷಿಸುತ್ತಿರಲು, ಆಮಹಾದೇವನ ಕಣ್ಣಿನಿಂದ ನೀರಿನ ಹನಿಗಳುದುರಿ, ಅವೇ ರುದ್ರಾಕ್ಷಗಳಾದುವು. ಈ ಮಣಿಗಳನ್ನು ಶಿವಸ್ವರೂಪವೆಂದು ತಿಳಿದು ಜಡೆಯುತುದಿಯಲ್ಲಿ ೧, ನೆತ್ತಿಯಲ್ಲಿ ೩, ತಲೆಗೆ ೫, ಕಿವಿಗೆ ೧ರಾದು. ಕೊರಲಿಗೆ ೫೨, ರೋಮಗಳಿಗೆ ೫೧, ಉಪವೀತಕ್ಕೆ ೧೦೮, ಭುಜಗಳಿಗೆ, ೧೬, ಮುಂಗೈಗೆ ೧೨, ಜಪಮಾಲಿಕೆಗೆ ೧೦೮, ಹೀಗೆ ಆಯಾಸ್ಥಲದಲ್ಲಿ ಸಂಖ್ಯಾನುಗುಣವಾಗಿ ಧರಿಸಬೇಕು. ರುದ್ರಾಕ್ಷೆಯನ್ನು ಶಿರಸ್ಸಿನಲ್ಲಿ ಧರಿಸಿದರೆ ಕೋಟಿಭಾಗದಷ್ಟು ಫಲವು, ಕಿವಿಯಲ್ಲಿ ಧರಿಸಿದರೆ ೧೦ ಕೋಟಿ ಫಲವು, ಕೊರಲಿನಲ್ಲಿ ಧರಿಸಿದರ ೧೦೦ ಕೋಟಿಯ ಫಲವು. ತೋಳುಗಳಲ್ಲಿ ಧರಿಸಿದರೆ ಸಾವಿರಕೋಟಿ ಫಲವು. ಹಸ್ತಕ್ಕೆ ಧರಿಸಿದರೆ ಗಣನಾತೀತವಾದ ಫಲವು ಲಭಿಸುವುದು. ೫೫ ಮಣಿಗಳ ಸರವನ್ನು ಧರಿಸಿದರೆ ಮೋಕ್ಷಸಿದ್ಧಿಯು. ೨೮ ರ ಸರದಿಂದ ದೇಹಪುಷ್ಟಿಯು. ೨೭ ರ ಸರದಿಂದ ವೃಷ್ಟಿಸ್ಥಭುಕ್ತಿಯು, ೫೬ ರ ಸರದಿಂದ ದ್ರವ್ಯಲಾಭವು, ೫೨ ರ ಸರದಿಂದ ಕಾರ್ಯಜಯವು, ೧೫೫ ರ ಸರದಿಂದ ವ್ಯಾಪಕತೆಯುಂಟಾಗುವುದು. ಇನ್ನು ಪ್ರಣವದುತ್ಪತ್ತಿಯನ್ನು ಹೇಳುತ್ತೇನೆ- ಪರಶಿವನ ಚಿತ್ತೇ ಚಿತ್ಪ್ರಣವವಾಯಿತು. ಅದರಿಂದ ನಾದ ಬಿಂದು ಕಲೆಗಳು ಹುಟ್ಟಿದುವು. ಇವುಗಳೇ ಕ್ರಮವಾಗಿ ಅಕಾರ— ಉಕಾರ— ಮಕಾರಗಳಾದುವು. ಇವು ಮೂರೂ ಒಂದುಗೂಡಲು ಓಂಕಾರವೆಂಬ ಪ್ರಣವವಾಯಿತು. ಇದರಿಂದ ತಾರಕ—ದಂಡಕ—ಕುಂಡಲ—ಅರ್ಧಚಂದ್ರ— ಬಿಂದುವೆಂಬ ಪಂಚಲಕ್ಷಣಗಳುದಿಸಿದುವು. ಅವುಗಳಲ್ಲಿ ತಾರಕಾಕೃತಿಯೇ ನಕಾರವು, ದಂಡಾಕೃತಿಯೇ ಮಕಾರವು, ಕುಂಡಲಾಕಾರವೇ ಶಿಕಾರವು, ಅರ್ಧಚಂದ್ರಾಕಾರವೇ ವಕಾರವು, ಬಿಂದುವೇ ಯಕಾರವು, ಈ ಪಂಚಾಕ್ಷರಗಳಿಂದ ಕೂಡಿ ಹುಟ್ಟಿದ ಚಿತ್ಪ್ರಣ

ವವೆಂಬ ತಾರಕಬ್ರಹ್ಮದಿಂದ ಹುಟ್ಟಿದುವು. ಈ ಪಂಚಾಕ್ಷರಗಳಿಂದ ಪಂಚಸಂಜ್ಞೆಗಳು ಹುಟ್ಟಿದುವು. ಅವುಗಳಿಂದ ಪಂಚಸಾದಾಖ್ಯಗಳಾದುವು. ಅವುಗಳೇ ಪಂಚಮುಖಗಳಾದುವು. ಅವುಗಳಿಂದ ಪಂಚಕಲೆಯೂ, ಪಂಚಶಕ್ತಿಯೂ, ಪಂಚಭೂತಗಳೂ, ಆ ಭೂತಗಳಿಂದ ೨೫ ತತ್ತ್ವಗಳೂ ಹುಟ್ಟಿದುವು. ಹೀಗೆ ಸಕಲಕ್ಕೂ ಮೂಲವಾದುದೇ ಪ್ರಣವ ಸಹಿತವಾದ ಪಂಚಾಕ್ಷರೀಮಂತ್ರವು. ಇದು ಅನೇಕ ಕೋಟಿ ಮಂತ್ರಗಳಿಗೆಲ್ಲ ಮಾತೆಯಾಗಿರುವುದು ಇದನ್ನು ಸದಾ ಜಪಿಸುವವನು ಪ್ರತ್ಯಕ್ಷ ಪರಶಿವನೇ ಆಗುವನು. ಈ ಮಂತ್ರದಿಂದಲೇ ಪ್ರಾಜಾದ್ರವ್ಯಶುದ್ಧಿಯನ್ನು ಮಾಡಬೇಕು. ಅಂತಹ ಉಪಕರಣಗಳಿಂದ ಶಿವಾರ್ಚನೆಯನ್ನು ಮಾಡಬೇಕು. ಹೇಗೆಂದರೆ- ಪಾದ್ಯ, ಅರ್ಘ್ಯ, ಆಚಮನೀಯಗಳಿಂದಲೂ, ಕ್ಷೀರ ದಧಿ ಮೊದಲಾದ ಪಂಚಾಮೃತಗಳಿಂದಲೂ, ಗಂಧೋದಕ, ಪುಷ್ಪೋದಕ, ಮಂತ್ರೋದಕ, ಸ್ನಾನೋರ್ದಕದಿಂದಲೂ ಶಿವಲಿಂಗವನ್ನಭಿಷೇಕಿಸಿ, ಬಳಿಕ ಪಾದೋದಕವನ್ನು ಪರಿಗ್ರಹಿಸಬೇಕು. ಪಾದೋದಕದ ವಿವರವೆಂತೆಂದರೆ—ಇದು ಮೂರು ವಿಧವಾಗಿರುವುದು. ಗುರುವಿನ ಪಾದೋದಕವೇ ಕರುಣೋದಕವು. ಲಿಂಗಪಾದೋದಕವೇ ವಿಷಯೋದಕವು. ಜಂಗಮ-ಪಾದೋದಕವೇ ಸಮತೋದಕವು. ಈ ತ್ರಿವಿಧೋದಕದಿಂದ ಸಂಚಿತ ಆಗಾಮಿ ಪ್ರಾರಬ್ಧವೆಂಬ ಕರ್ಮತ್ರಯಗಳು ಅಳಿವುವು. ಇದಲ್ಲದೆ ಮತ್ತೆ ತ್ರಿವಿಧೋದಕಗಳಿರುವುವು. ಯಾವುವೆಂದರೆ-ಪಂಚಾಕ್ಷರೀಮಂತ್ರಪ್ರಸಕ್ಷಣದಿಂದ ತನ್ನ ಮನಸಿಗೆ ಹೊರಗಿಸಿಂದ ತೆಗೆದುಕೊಂಡು ಬಂದುದೇ ಮಂತ್ರೋದಕವು. ಅದನ್ನು ಇಷ್ಟಲಿಂಗಕ್ಕೆ ಅಭಿಷೇಕಿಸಿದರೆ ಪಾದೋದಕವೆನಿಸಿಕೊಳ್ಳುವುದು. ಆ ಲಿಂಗಕ್ಕೆ ಸಮರ್ಪಿಸಿದುದೇ ಪ್ರಸಾದೋದಕ ವೆನಿಸಿಕೊಳ್ಳುವುದು. ಇವುಗಳಲ್ಲಿ ಮಂತ್ರೋದಕದಿಂದ ಅಡಿಗೆಯನ್ನು ಮಾಡಬೇಕು. ಪಾದೋದಕದಿಂದ ಮುಖವನ್ನು ತೊಳೆಯಬೇಕು. ಪ್ರಸಾದೋದಕವನ್ನು ಕುಡಿಯಬೇಕು. ಇನ್ನು ಪುಂಡರ ಶಿವಪ್ರಾಪ್ತಿಕ್ರಮವನ್ನು ಹೇಳುತ್ತೇನೆ— ಷೋಡಶೋಪಚಾರಗಳಿಂದಲೂ ಅಷ್ಟವಿಧಪೂಜೆಯಿಂದಲೂ ಭಕ್ತಿಯಿಂದ ಶಿವಲಿಂಗವನ್ನಾರಾಧಿಸಿ, ನೈವೇದ್ಯವನ್ನು ನಿವೇದಿಸಿ, ಆ ಲಿಂಗಪ್ರಸಾದವನ್ನು ಚಿಲ್ಲದಂತೆ ತಾನು ಶ್ರದ್ಧೆಯಿಂದ ನಿಶ್ಶೇಷವಾಗಿ ಭುಂಜಿಸಿ, ಅದರ ದ್ರ

ವವನ್ನು ಅಂಗಕ್ಕೆ ಲೇಪಿಸಿಕೊಳ್ಳಬೇಕು. ಈ ಪ್ರಸಾದವಿವರವೆಂತೆಂದರೆ— ಇದು ಶುದ್ಧ ಸಿದ್ಧ ಪ್ರಸಿದ್ಧವೆಂದು ಮೂರು ತೆರನಾಗಿರುವುದು. ಗುರುವುಂಡುಳಿಸಿದುದೇ ಶುದ್ಧಪ್ರಸಾದವು. ಶಿವಾರ್ಪಿತವೇ ಸಿದ್ಧಪ್ರಸಾದವು. ಜಂಗಮನುಂಡುಳಿಸಿದುದೇ ಪ್ರಸಿದ್ಧ ಪ್ರಸಾದವು. ಹಿಂದೆ ಹೇಳಿದ ಶಿವಪೂಜೆಯಲ್ಲಿ— ರಾಜಸ, ತಾಮಸ, ಸಾತ್ವಿಕ ವೆಂದು ಮೂರು ಭೇದಗಳುಂಟು. ವೇದಾಗಮೋಕ್ತಮಂತ್ರವಿಧಿಗಳನ್ನನುಸರಿಸದೆ ಮನಸ್ಸುಬಂದಂತೆ ಪೂಜಿಸುವುದೇ ರಾಜಸಪೂಜೆಯು. ವೇದಾಗಮಗಳಲ್ಲಿ ಉಕ್ತವಾದುದನ್ನೂ ಅನುಕ್ತವಾದುದನ್ನೂ ಒಟ್ಟುಗೂಡಿಸಿ ಮಾಡುವುದು ತಾಮಸಪೂಜೆಯು. ವೇದಾಗಮೋಕ್ತಿಯನ್ನು ಬಿಡದೆ ಅನುಸರಿಸಿ ಭಕ್ತಿಯಿಂದ ಮಾಡುವುದೇ ಸಾತ್ವಿಕ ಪೂಜೆಯು. ಇನ್ನು ಆ ಸಾತ್ವಿಕಪೂಜೆಯಲ್ಲಿರುವ ಶುದ್ಧ ಮಿಶ್ರ ಸಂಕೀರ್ಣವೆಂಬ ಭೇದಗಳನ್ನು ಹೇಳುತ್ತೇನೆ.—ಅಖಂಡಪರಿಪೂರ್ಣತೇಜೋರಾಶಿಯಾದ ಪರಶಿವನು ತನ್ನ ಲಿಂಗವಲ್ಲಿ ನೆಲಸಿರುವನೆಂಬ ದೃಢಭಾವದಿಂದ ಪೂಜಿಸುವುದೇ ಶುದ್ಧಪೂಜೆಯು. ಆ ಲಿಂಗವನ್ನು ೫ ಮುಖಿಗಳು, ೧೫ ಕಣ್ಣುಗಳು, ೧೦ ತೋಳುಗಳು, ಶುದ್ಧಸ್ಫಟಿಕದ ಬಣ್ಣ—ಇವುಗಳುಳ್ಳ ಸದಾಶಿವಸ್ವರೂಪವೆಂದು ಭಾವಿಸಿ ಪೂಜಿಸುವುದೇ ಮಿಶ್ರಪೂಜೆಯು. ಆ ಲಿಂಗದಲ್ಲಿ ಹರಿ ಬ್ರಹ್ಮೇಂದ್ರಾದಿದೇವತೆಗಳ ಮಧ್ಯದಲ್ಲಿ ಪಾರ್ವತಿಯೊಡನೆ ಕೂಡಿದ ಪರಶಿವನು ಒಪ್ಪುತ್ತಿರುವನೆಂಬ ಭಾವನೆಯಿಂದ ಅರ್ಚಿಸುವುದೇ ಸಂಕೀರ್ಣಪೂಜೆಯು. ಇನ್ನು ಕರ್ಮ ಭಕ್ತಿ ಜ್ಞಾನಪೂಜೆಗಳ ವಿವರವನ್ನು ಕೇಳು— ವರ್ಣಾಶ್ರಮ ಧರ್ಮಕರ್ಮಗಳಿಂದ ಕೂಡಿ, ಫಲಾಪೇಕ್ಷೆಯಿಂದ ಮಾಡುವುದೇ ಸೋಪಾಧಿಕವಾದ ಕರ್ಮಪೂಜೆಯು. ವರ್ಣಾಶ್ರಮಧರ್ಮಕರ್ಮಗಳನ್ನು ಬಿಟ್ಟು, ಭವಿ ಭಕ್ತರ ಭೇದವನ್ನು ಅರಿತು, ಫಲಾಪೇಕ್ಷೆಯಿಲ್ಲದೆ ಮಾಡುವುದೇ ನಿರುಪಾಧಿಕಭಕ್ತಿಪೂಜೆಯು. ವರ್ಣಾಶ್ರಮಧರ್ಮಕರ್ಮಗಳನ್ನೆಲ್ಲ ಅಪ್ರಯೋಜಕಗಳೆಂದು ತಿರಸ್ಕರಿಸಿ, ಫಲಪದವಿಗಳನ್ನೆಲ್ಲ ವಿಚಾರಿ, ಪ್ರಾಜ್ಯಪ್ರಾಜಕವಸ್ತುಗಳೆರಡರಲ್ಲೂ ಏಕಭಾವವನ್ನು ಹೊಂದಿ, ಸ್ವಾನುಭಾವದಿಂದ ಅರ್ಚಿಸುವುದೇ ಜ್ಞಾನಪೂಜೆಯು. ಇದು ಸದ್ಯೋಮುಕ್ತಿಪ್ರದವಾದುದು. ಇನ್ನು ಶಿವತತ್ತ್ವಭೇದವನ್ನು ಹೇಳುತ್ತೇನೆ.— ಅನಾದಿಪರಶಿವನ ಚಿತ್ತದಲ್ಲಿ ಪ್ರವೃತ್ತಿಯು ಸ್ಫುರಿಸಲು, ಅವನ ಚಿತ್ತವೇ ಚಿಚ್ಛಕ್ತಿಯಾಯಿತು. ಅದರಿಂದ ಮಹಾ

ಲಿಂಗವುದ್ಭವಿಸಿತು. ಅದರಿಂದ ಪಂಚಕಲೆಗಳು ಜನಿಸಿದುವು. ಆ ಮಹಾಲಿಂಗವು--ಪರ, ಗೂಢ, ಶರೀರಸ್ಥ, ಲಿಂಗಕ್ಷೇತ್ರ, ಅನಾದಿ, ಎಂದು ೫ ಸಂಜ್ಞೆಗಳುಳ್ಳುದಾಯಿತು. ಸಕಲ ತತ್ತ್ವಗಳಿಗೂ ಪರವಾದುದರಿಂದ ಪರವೆಂತಲೂ, ತಾನು ಮೂರ್ತಿಮತ್ತಲ್ಲದೆ ಸಕಲ ಮೂರ್ತಿಗಳನ್ನೂ ತನ್ನಿಂದಲೇ ಹುಟ್ಟಿಸುತ್ತ ಗುಪ್ತವಾಗಿರುವ ಕಾರಣ ಗೂಢವೆಂತಲೂ, ಸಕಲ ಚರಾಚರಪ್ರಪಂಚವನ್ನೆಲ್ಲ ತಾನೇ ಸೃಷ್ಟಿಸಿ, ಅದಕ್ಕೆಲ್ಲ ತಾನೇ ಆಧಾರವಾಗಿ, ಅದರೊಳಗೆಲ್ಲಾ ತಾನೇ ವ್ಯಾಪಿಸಿರುವುದರಿಂದ ಶರೀರಸ್ಥವೆಂತಲೂ, ತನ್ನಲ್ಲೇ ಹುಟ್ಟಿದ ಸಚರಾಚರವನ್ನೆಲ್ಲ ಲಯಗೊಳಿಸಿ, ತನ್ನಲ್ಲೇ ಲೀನಗೊಳಿಸಿಕೊಳ್ಳುವುದರಿಂದ ಲಿಂಗಕ್ಷೇತ್ರವೆಂತಲೂ, ಶಿವಾದಿಸುವ್ಯಾಂತವಾದ ಸಕಲತತ್ತ್ವಗಳಿಗೂ ತಾನೇ ಆದಿಯಾಗಿಯೂ ತನಗೆ ಆದಿಯಾದ ವು ಮತ್ತೊಂದಿಲ್ಲದೆಯೂ ಇರುವ ಕಾರಣ ಅನಾದಿಯೆಂತಲೂ ಹೇಳಲ್ಪಡುವುದು. ಹಿಂದೆ ಹೇಳಿದ ೫ ಕಲೆಗಳು, ೫ ಸಾದಾಖ್ಯಗಳು, ಪರಶಿವತತ್ತ್ವವೊಂದು, ಇವು ಹನ್ನೊಂದೂ ಲಿಂಗತತ್ತ್ವಗಳು. ಮೊದಲು ಹೇಳಿದ ಅಂಗತತ್ತ್ವಗಳು ೫೫. ಇವಿಷ್ಟೂ ಕೂಡಿದರೆ ೬೬ ತತ್ತ್ವಗಳಾದುವು. ಎಂದು ಚೆನ್ನಬಸವೇಶನು ಸಿದ್ಧರಾವೇಶನಿಗೆ ನಿರೂಪಿಸಿದನೆಂಬಲ್ಲಿಗೆ ೪ನೆ ಅಧ್ಯಾಯವು ಸಂಪೂರ್ಣವು.

೪ನೆ ಅಧ್ಯಾಯವು.

ಷಟ್ಸ್ಥಲವಿವರಣವು.

ಗುರುವೆ! ಇನ್ನು ನನಗೆ ಷಟ್ಸ್ಥಲತತ್ತ್ವಾರ್ಥವನ್ನು ನಿರೂಪಿಸಿ ಕೃತಕೃತ್ಯನನ್ನು ಮಾಡಬೇಕೆಂದು ಸಿದ್ಧರಾವೇಶನು ಪ್ರಾರ್ಥಿಸಲು, ಚೆನ್ನಬಸವೇಶನು ಹೇಳಲಾರಂಭಿಸಿದನೆಂತೆಂದರೆ-- ಮೂರಾದಿತತ್ತ್ವಗಳಿಗೆಲ್ಲ ಜನ್ಮಸ್ಥಲವಾಗಿಯೂ, ಪ್ರಕೃತಿಪುರುಷಾತ್ಮಕವಾದ ಜಗತ್ತಿಗೆಲ್ಲ ಲಯಸ್ಥಾನವಾಗಿಯೂ ಇರುವ ಪರಬ್ರಹ್ಮವೇ ಸ್ಥಲನೆಂದು ಹೇಳಲ್ಪಟ್ಟಿತು. ಅಂತಹ ಪರಬ್ರಹ್ಮವೇ (ಮಹಾಸ್ಥಲನೇ) ತನ್ನಲ್ಲಿ ಎಡೆವಿಡದೆ ಲೀನವಾಗಿರುವ ಚಿಚ್ಛಕ್ತಿಯ ಸ್ಫುರಣದಿಂದ, ನಿಸ್ತರಂಗ ಸಮುದ್ರದಲ್ಲಿ ವಾಯುಚಲನೆಯಿಂದ ತೆರೆಗಳೂ ನೊರೆಗಳೂ ಹುಟ್ಟುವಂತೆ, ಲಿಂಗಸ್ಥಲ ಅಂಗಸ್ಥಲವೆಂದು ಎರಡುತೆರ

ನಾಯಿತು. ಲಿಂಗವೇ ಪೂಜ್ಯವಾಯಿತು. ಅಂಗವೇ ಪೂಜಕವಾಯಿತು. ಲಿಂಗವೇ ಬ್ರಹ್ಮವು, ಅಂಗವೇ ಜೀವವು. ಸ್ಥಲಶಬ್ದವಾಚ್ಯವಾದ ಶಿವತತ್ತ್ವವು ಎರಡುತೆರನಾದಕೂಡಲೇ ತದ್ಗತವಾಗಿದ್ದ ಮಹಾಶಕ್ತಿಯು ಕೂಡ ಸ್ವಸ್ವಾತಂತ್ರ್ಯದಿಂದಲೂ ಪರಶಿವಸಮಾನಧರ್ಮದಿಂದಲೂ, ದೊಡ್ಡಬೆಂಕಿಯು ಬೇರೆ ಬೇರೆ ಸಣ್ಣದೀಪಗಳಾದಂತೆ, ಕಲೆ ಅಥವಾ ಪರೆ, ಆಥವಾ ಶಕ್ತಿಯೆಂತಲೂ, ಮತ್ತೊಂದು ಭಕ್ತಿಯೆಂತಲೂ, ಎರಡು ವಿಧವಾಯಿತು. ಬೆಂಕಿಯು ಜ್ವಾಲೆಯು ಹೊಗೆಯಿಂದ ಮುಸುಕಿರುವಾಗ ಬೆಳಕನ್ನು ಹರಡಲಾರದೆ ಮುಂಕಾಗಿರುವಂತೆ ಕಲೆ (ಶಕ್ತಿಯು) ವಾಸನಾಸಹಿತವಾಗಿರುವುದು. ಭಕ್ತಿಯು ಹೊಗೆಯಿಲ್ಲದೆ ಬೆಳಗುವ ಜ್ಯೋತಿಯಂತೆ ನಿರ್ವಾಸನೆಯಾಗಿ ಹೊಳೆಯುತ್ತಿರುವುದು. ಭಕ್ತಿಯು ಮಹತ್ತರವಾದುದು, ಸೂಕ್ಷ್ಮವಾದುದು, ಮತ್ತೂ ಮುಕ್ತಿಯನ್ನು ಕೊಡತಕ್ಕುದು. ಶಕ್ತಿಯಾದರೊ ಪುಣ್ಯಫಲವನ್ನು ಕೊಡುವುದು. ಶಕ್ತಿಯಿಂದ ಪ್ರಪಂಚದ ಸೃಷ್ಟಿಗೆ ದಾರಿಯಾಗುವುದು. ಭಕ್ತಿಯಿಂದ ಆ ಪ್ರಪಂಚದ ಲಯವಾಗುವುದು. ಶಕ್ತಿಯ ವೈಚಿತ್ರ್ಯದಿಂದ ನೀರೂಪವಾದುದುಕೂಡ ಸರೂಪವಾಗುವುದು. ಭಕ್ತಿಯಿಂದ ಸರೂಪವಾಗಿದ್ದುದೂ ನೀರೂಪವಾಗುವುದು. ಪ್ರಪಂಚದ ವೃದ್ಧಿಯನ್ನಪೇಕ್ಷಿಸುವುದೇ ಶಕ್ತಿಯ ಸ್ವಾಭಾವಿಕಗುಣವು. ಪ್ರಪಂಚದ ಲಯವನ್ನಪೇಕ್ಷಿಸುವುದೇ ಭಕ್ತಿಯ ಸ್ವಭಾವಗುಣವು. ಶಕ್ತಿಯು ಮಾಯಾಸಹಿತವು. ಭಕ್ತಿಯು ಮಾಯಾರಹಿತವು ಶಕ್ತಿಯು— ಅಧೋಮುಖಿಯೆಂತಲೂ, ಪ್ರವೃತ್ತಿಮಾರ್ಗವುಳ್ಳುದೆಂತಲೂ, ಭಕ್ತಿಯು— ಊರ್ಧ್ವಮುಖಿಯೆಂತಲೂ, ನಿವೃತ್ತಿಮಾರ್ಗವುಳ್ಳುದೆಂತಲೂ ಹೇಳಲ್ಪಡುವುದು. ಅದುಕಾರಣ, ಶಕ್ತಿಗಿಂತಲೂ ಭಕ್ತಿಯೇ ಅಧಿಕವು. ಶಕ್ತಿಗೆ ಉಪಾಸ್ಯತ್ತ್ವವುಂಟಾದುದರಿಂದ ಅದು ಲಿಂಗಸ್ಥಲವನ್ನಾಶ್ರಯಿಸಿತು. ಭಕ್ತಿಗೆ ಉಪಾಸಕತ್ತ್ವವುಂಟಾದುದರಿಂದ ಅದು ಅಂಗಸ್ಥಲವನ್ನಾಶ್ರಯಿಸಿತು. ಲಿಂಗ ಅಂಗಗಳೇ ಶಿವಜೀವರುಗಳೆಂದು ಮೇಲೆ ಹೇಳಲ್ಪಟ್ಟಿದಯಷ್ಟೆ. ಅಂಥ ಲಿಂಗತಂಗಗಳ ಸಾಮರಸ್ಯವೇ ಶಿವಜೀವೈಕ್ಯವೆಂದು ಹೇಳಲ್ಪಡುವುದು. ಆ ಲಿಂಗಸ್ಥಲವು ವೇಧಾ ಮನು ಕ್ರಿಯಾ ಎಂಬ ದೀಕ್ಷಾತ್ರಯದಿಂದಲೂ, ನಾದ ಬಿಂದು ಕಲೆಗಳ ಸಂಬಂಧದಿಂದಲೂ, ಕ್ರಮವಾಗಿ— ಭಾವಲಿಂಗ,

ಪ್ರಾಣಲಿಂಗ, ಇಷ್ಟಲಿಂಗವೆಂದು ಮೂರು ತೆರನಾಯಿತು. ಭಾವದಿಂದ ಗ್ರಹಿಸಲ್ಪಡುವ ಸದ್ರೂಪವಾದ ಭಾವಲಿಂಗವೇ ನಿಷ್ಕಲವು; ಮನಸ್ಸಿನಿಂದ ಗ್ರಹಿಸಲ್ಪಡುವ ಚಿದ್ರೂಪವಾದ ಪ್ರಾಣಲಿಂಗವೇ ಸಕಲನಿಷ್ಕಲವು; ಕಣ್ಣಿನ ನೋಟದಿಂದ ಗ್ರಹಿಸಲ್ಪಡುವ ಆನಂದರೂಪವಾದ ಇಷ್ಟಲಿಂಗವೇ ಸಕಲವು. "ತತ್ತ್ವಮಸಿ" ಎಂಬ ಮಹಾವಾಕ್ಯದಲ್ಲಿರುವ ತತ್ ಪದವೇ ಇಷ್ಟಲಿಂಗವಾಚಕವು, ತ್ವಂ ಪದವೇ ಪ್ರಾಣಲಿಂಗವಾಚಕವು, ಅಸಿ ಪದವೇ ಭಾವಲಿಂಗವಾಚಕವಾದುದು. ಇಷ್ಟಲಿಂಗವು– ಹೊರಗೆ ತೋರುವ ಸ್ಥೂಲ ತತ್ತ್ವಾತ್ಮಕವು; ಪ್ರಾಣಲಿಂಗವು-ಒಳಗೆ ತೋರುವ ಸೂಕ್ಷ್ಮತತ್ತ್ವಾತ್ಮಕವು; ಭಾವಲಿಂಗವು–ಒಳಗೂ ಹೊರಗೂ ಅಖಂಡವಾಗಿ ತೋರುವ ಪರತತ್ತ್ವಾತ್ಮಕವಾಗಿರುವುದು. ಈ ತ್ರಿವಿಧಲಿಂಗಸ್ಥಲಗಳೂ ಒಂದೊಂದು ಎರಡೆರಡರಂತೆ ಆರುಭೇದಗಳನ್ನೈದಿವುವು. ಹೇಗೆಂದರೆ- ಭಾವಲಿಂಗವೇ ಮಹಾಲಿಂಗಪ್ರಸಾದಲಿಂಗವೆಂತಲೂ, ಪ್ರಾಣಲಿಂಗವೇ– ಜಂಗಮಲಿಂಗ ಶಿವಲಿಂಗವೆಂತಲೂ, ಇಷ್ಟಲಿಂಗವೇ– ಗುರುಲಿಂಗ ಆಚಾರಲಿಂಗವೆಂತಲೂ, ಎರಡೆರಡು ಪ್ರಕಾರವಾದುವು. ಹೀಗೆ ಲಿಂಗಸ್ಥಲಗಳು ಆರಾಗಲು, ತದ್ಗತವಾದ ಜಿಚ್ಛಕ್ತಿಯೂ ಕೂಡ ಆರು ತೆರನಾದ ಕಳೆಗಳನ್ನು ಹೊಂದಿ ೬ ತೆರದ ಶಕ್ತಿಯಾಯಿತು. ಹೇಗೆಂದರೆ— ಶಾಂತ್ಯತೀತೋತ್ತರೆಯೆಂಬ ಕಲೆಯೇ ಚಿಚ್ಛಕ್ತಿಯು, ಶಾಂತ್ಯತೀತಕಲೆಯೇ ಪರಾಶಕ್ತಿಯು, ಶಾಂತಿಕಲೆಯೇ ಆದಿಶಕ್ತಿಯು, ವಿದ್ಯಾಕಳೆಯೇ ಇಚ್ಛಾಶಕ್ತಿಯು. ಪ್ರತಿಷ್ಠಾಕಳೆಯೇ ಜ್ಞಾನಶಕ್ತಿಯು, ನಿವೃತ್ತಿಕಳೆಯೇ ಕ್ರಿಯಾಶಕ್ತಿಯು ಆದುವು. ಈ ಆರು ತೆರದ ಶಕ್ತಿಗಳೂ ಹಿಂದೆ ಹೇಳಿದ ಆರು ಲಿಂಗಗಳೊಡನೆ ಕೂಡಿದುವು. ಆಗ ಆ ಪ್ರತಿಯೊಂದು ಲಿಂಗಗಳ ಸ್ವರೂಪಲಕ್ಷಣಗಳು ಹೇಗಾದುವೆಂದರೆ— ಮಹಾಲಿಂಗವು– ಶಾಂತ್ಯತೀತೋತ್ತರ ಕಲಾಸಮೇತವಾಗಿ ಚಿಚ್ಛಕ್ತಿಯಿಂದ ಕೂಡಿ, ಮಹಾಸಾದಾಖ್ಯವನ್ನು ಹೊಂದಿ ಭಾವಗಮ್ಯವಾಗಿರುವುದು. ಪ್ರಸಾದಲಿಂಗವು– ಶಾಂತ್ಯತೀತಕಲಾಸಮೇತವಾಗಿ ಪರಾಶಕ್ತಿಯಿಂದ ಕೂಡಿ, ಶಿವಸಾದಾಖ್ಯವನ್ನು ಹೊಂದಿ ಜ್ಞಾನೈಕಗಮ್ಯವಾಗಿರುವುದು. ಜಂಗಮಲಿಂಗವು– ಶಾಂತಿಕಲಾಸಮೇತವಾಗಿ, ಆದಿಶಕ್ತಿಯಿಂದ ಕೂಡಿ, ಅಮೂರ್ತಸಾದಾಖ್ಯವನ್ನು ಹೊಂದಿ, ಮನೋಗಮ್ಯವಾಗಿರುವುದು. ಶಿವಲಿಂಗವು–

ವಿದ್ಯಾಕಲಾಸಮೇತವಾಗಿ ಇಚ್ಛಾಶಕ್ತಿಯಿಂದ ಕೂಡಿ, ಮೂರ್ತಸಾದಾಖ್ಯವನ್ನು ಹೊಂದಿ, ಅಹಂಕಾರಗವ್ಯವಾಗಿರುವುದು. ಗುರುಲಿಂಗವು– ಪ್ರತಿಷ್ಠಾಕಲಾಸಮೇತವಾಗಿ ಜ್ಞಾನಶಕ್ತಿಯಿಂದ ಕೂಡಿ, ಕರ್ತೃಸಾದಾಖ್ಯವನ್ನು ಹೊಂದಿ, ಬುದ್ಧಿಗವ್ಯವಾಗಿರುವುದು. ಆಚಾರಲಿಂಗವು–ನಿವೃತ್ತಿಕಲಾಸಮೇತವಾಗಿ, ಕ್ರಿಯಾಶಕ್ತಿಯಿಂದ ಕೂಡಿ, ಕರ್ಮಸಾದಾಖ್ಯವನ್ನು ಹೊಂದಿ ಚಿತ್ತಗವ್ಯವಾಗಿರುವುದು. ಹೀಗೆ ಉಪಾಸ್ಯವಾದ ಲಿಂಗಸ್ಥಲವು ಮೊದಲು ಮೂರಾಗಿ, ಬಳಿಕ ಆರಾದಂತೆ, ಉಪಾಸಕವಾದ ಅಂಗಸ್ಥಲವುಕೂಡ ಮೊದಲು ಯೋಗಾಂಗ ಭೋಗಾಂಗ ತ್ಯಾಗಾಂಗವೆಂದು ಮೂರುಭೇದಗಳನ್ನು ಪಡೆದಿತು. ಯೋಗಾಂಗವು– ಶಿವನ ಐಕ್ಯಾನುಸಂಧಾನವೇ ಲಕ್ಷಣವಾಗುಳ್ಳುದು, ಭೋಗಾಂಗವು– ಶಿವಪ್ರಸಾದಸೇವನೆಯಿಂದುಂಟಾದ ಸುಖಪರಿಣಾಮವೇ ಲಕ್ಷಣವಾಗುಳ್ಳುದು, ತ್ಯಾಗಾಂಗವು– ಸಂಸಾರಭ್ರಾಂತಿಪರಿತ್ಯಾಗವೇ ಲಕ್ಷಣವಾಗುಳ್ಳುದು. ಮೊಲದನೆ ಯೋಗಾಂಗವು– ಕಾರಣಶರೀರಸಂಬಂಧವಾಗಿ, ಸುಷುಪ್ತ್ಯವಸ್ಥೆಯನ್ನೈದಿ ಪ್ರಾಜ್ಞನೆನಿಸಿಕೊಳ್ಳುವುದು. ಭೋಗಾಂಗವು– ಸೂಕ್ಷ್ಮದೇಹಸಂಪನ್ನವಾಗಿ ಸ್ವಪ್ನಾವಸ್ಥೆಯಿಂದ ತೈಜಸವೆನ್ನಲ್ಪಡುವುದು. ತ್ಯಾಗಾಂಗವು– ಸ್ಥೂಲದೇಹಯುಕ್ತವಾಗಿ, ಜಾಗ್ರದವಸ್ಥೆಯಿಂದ ವಿಶ್ವನೆನಿಸಿಕೊಳ್ಳುವುದು. ಈ ಅಂಗತ್ರಯಗಳಿಗೇ ಕ್ರಮವಾಗಿ ಪರಮಾತ್ಮ ಅಂತರಾತ್ಮ ಜೀವಾತ್ಮ ಎಂದು ಬೇರೆ ಹೆಸರುಗಳಿರುವುವು. ಬಳಿಕ ಈ ಮೂರು ಅಂಗಸ್ಥಲಗಳೇ ಬಂದೊಂದಕ್ಕೆರಡೆರಡರಂತೆ ಆರು ತೆರನಾದುವು. ಹೇಗೆಂದರೆ– ಭೋಗಾಂಗವೇ– ಐಕ್ಯ ಶರಣ, ಎಂತಲೂ, ಯೋಗಾಂಗವೇ– ಪ್ರಸಾದಿ, ಪ್ರಾಣಲಿಂಗಿಯೆಂತಲೂ, ತ್ಯಾಗಾಂಗವೇ–ಮಾಹೇಶ, ಭಕ್ತ ಎಂತಲೂ, ವಿಭಿನ್ನವಾದುವು. ಹೀಗೆ ಅಂಗಸ್ಥಲವು ೬ ಆಗಲು, ಅದನ್ನೈದಿದ ಭಕ್ತಿಯೂ ಕೂಡ–ಸಮರಸಭಕ್ತಿ, ಆನಂದಭಕ್ತಿ, ಅನುಭವಭಕ್ತಿ, ಅವಧಾನಭಕ್ತಿ, ಸೃಷ್ಟಿಕೀಭಕ್ತಿ, ಸದ್ಭಕ್ತಿಯೆಂದು ೬ ತೆರನಾಯಿತು. ಇವು ಕ್ರಮವಾಗಿ ಅಂಗಸ್ಥಲಗಳನ್ನು ಎಂದರೆ– ಐಕ್ಯಸ್ಥಲವನ್ನು ಸಮರಸಭಕ್ತಿಯೂ, ಶರಣಸ್ಥಲವನ್ನು ಆನಂದಭಕ್ತಿಯೂ, ಪ್ರಾಣಲಿಂಗಿಸ್ಥಲವನ್ನು ಅನುಭವಭಕ್ತಿಯೂ, ಪ್ರಸಾದಿಸ್ಥಲವನ್ನು ಅವಧಾನಭಕ್ತಿಯೂ, ಮಾಹೇಶ್ವರಸ್ಥಲ

ವನ್ನು ನೈಷ್ಠಿಕೀಭಕ್ತಿಯೂ, ಭಕ್ತಸ್ಥಲವನ್ನು ಸದ್ಭಕ್ತಿಯೂ, ಹೊಂದಿದುವು. ಪ್ರವೃತ್ತಿಮಾರ್ಗಾನುಸಾರವಾದ ಅಂಗಸ್ಥಲದ ಕ್ರಮವನ್ನು ಕೇಳು–ಶಿವನೇ ತನ್ನ ಚೆಚ್ಛಾಶಕ್ತಿಸ್ಫುರಣದಿಂದ ಮಹಾಲಿಂಗವಾದನಷ್ಟೆ, ಉಪಾಸ್ಯವಾದ ಆ ಮಹಾಲಿಂಗಸ್ಥಲಕ್ಕೆ ಐಕ್ಯಸ್ಥಲವು ಉಪಾಸಕವಾಯಿತು. ಆ ಮಹಾಲಿಂಗದಲ್ಲಿ ಪರಾಶಕ್ತಿಸ್ಫುರಣದಿಂದ ಪ್ರಸಾದಲಿಂಗವಾಯಿತು. ಅದಕ್ಕೆ ಶರಣಸ್ಥಲವು ಉಪಾಸಕವಾಯಿತು. ಆ ಪ್ರಸಾದಲಿಂಗದಲ್ಲಿ ಆದಿಶಕ್ತಿಸ್ಫುರಣದಿಂದ ಜಂಗಮಲಿಂಗವಾಯಿತು. ಅದಕ್ಕೆ ಪ್ರಾಣಲಿಂಗಿಸ್ಥಲವು ಉಪಾಸಕವಾಯಿತು. ಆ ಜಂಗಮಲಿಂಗದಲ್ಲಿ ಇಚ್ಛಾಶಕ್ತಿಸ್ಫುರಣದಿಂದ ಶಿವಲಿಂಗವುದಿಸಿತು. ಅದಕ್ಕೆ ಪ್ರಸಾದಿಸ್ಥಲವು ಉಪಾಸಕವು. ಆ ಶಿವಲಿಂಗದಲ್ಲಿ ಜ್ಞಾನಶಕ್ತಿಸ್ಫುರಣದಿಂದ ಗುರುಲಿಂಗವುದಿಸಿತು. ಅದಕ್ಕೆ ಮಾಹೇಶ್ವರಸ್ಥಲವು ಉಪಾಸಕವು. ಆ ಗುರುಲಿಂಗದಲ್ಲಿ ಕ್ರಿಯಾಶಕ್ತಿಸ್ಫುರಣದಿಂದ ಆಚಾರಲಿಂಗವುದಿಸಿತು. ಅದಕ್ಕೆ ಭಕ್ತಸ್ಥಲವು ಉಪಾಸಕವಾಯಿತು. ಹೀಗೆ ಷಟ್ಸ್ಥಲಸಮನ್ವಿತವಿದ ಅಂಗವೆಂಬ ಅಪರನಾಮವುಳ್ಳ ಆತ್ಮನಿಂದ ಆಕಾಶವೂ, ಆಕಾಶದಿಂದ ವಾಯುವೂ, ಅದರಿಂದ ಅಗ್ನಿಯೂ, ಅದರಿಂದ ಜಲವೂ, ಅದರಿಂದ ಭೂಮಿಯೂ, ಉದಿಸಿದುವು. ಇದರಂತೆಯೇ ಪರತತ್ತ್ವದಿಂದ ಭಾವವೂ, ಭಾವದಿಂದ ಜ್ಞಾನವೂ, ಅದರಿಂದ ಅಹಂಕಾರವೂ, ಅದರಿಂದ ಬುದ್ಧಿಯೂ, ಅದರಿಂದ ಚಿತ್ತವೂ ಆದುವು. ಪ್ರತಿಯೊಂದು ಅಂಗಸ್ಥಲವೂ ಕ್ರಮವಾಗಿ ಒಂದೊಂದು ಲಿಂಗವನ್ನೂ, ಭಕ್ತಿಯನ್ನೂ, ಪಸ್ತೋಪಕರಣವನ್ನೂ ಕೊಂಡು, ತಮ್ಮ ತಮ್ಮ ಉಪಾಸ್ಯಲಿಂಗವನ್ನು ಸೇವಿಸುವುವು. ಹೇಗೆಂದರೆ– ಐಕ್ಯಸ್ಥಲವು ನಿತ್ಯಾಂಗವನ್ನೈದಿ, ಚೆಚ್ಛಾಶಕ್ತಿಯಿಂದ ಕೂಡಿದ ಮಹಾಲಿಂಗವನ್ನು ಭಾವಹಸ್ತದಿಂದ ಸಮರಸಭಕ್ತಿಯೊಡನೆ ಪೂಜಿಸುವುದು. ಶರಣಸ್ಥಲವು– ಆಕಾಶಾಂಗವನ್ನೈದಿ, ಪರಾಶಕ್ತಿಯಿಂದ ಕೂಡಿದ ಪ್ರಸಾದಲಿಂಗವನ್ನು ಜ್ಞಾನಹಸ್ತದಿಂದ ಆನಂದಭಕ್ತಿಯೊಡನೆ ಪೂಜಿಸುವುದು. ಪ್ರಾಣಲಿಂಗಿಸ್ಥಲವು ವಾಯ್ವಂಗವನ್ನೈದಿ, ಆದಿಶಕ್ತಿಯಿಂದ ಕೂಡಿದ ಜಂಗಮಲಿಂಗವನ್ನು ಮನೋಹಸ್ತದಿಂದ ಅನುಭವಭಕ್ತಿಯೊಡನೆ ಪೂಜಿಸುವುದು. ಪ್ರಸಾದಿಸ್ಥಲವು– ಅಗ್ನ್ಯಂಗವನ್ನೈದಿ, ಇಚ್ಛಾಶಕ್ತಿಯಿಂದ ಕೂಡಿದ ಶಿವಲಿಂಗವನ್ನು ಅಹಂಕಾರಹಸ್ತದಿಂದ ಅವಧಾನಭಕ್ತಿಯೊಡನೆ

ಪೂಜಿಸುವುದು. ಮಾಹೇಶಸ್ಥಲವು– ಜಲಾಂಗವನ್ನೈದಿ, ಜ್ಞಾನಶಕ್ತಿಯಿಂದ ಕೂಡಿದ ಗುರುಲಿಂಗವನ್ನು ಬುದ್ಧಿಹಸ್ತದಿಂದ ನಿಷ್ಠಾಭಕ್ತಿಯೊಡನೆ ಪೂಜಿಸುವುದು. ಭಕ್ತಸ್ಥಲವು– ಪೃಥಿವ್ಯಂಗವನ್ನೈದಿ, ಕ್ರಿಯಾಶಕ್ತಿಯಿಂದ ಕೂಡಿದ ಆಚಾರಲಿಂಗವನ್ನು ಚಿತ್ತಹಸ್ತದಿಂದ ಸದ್ಭಕ್ತಿಯೊಡನೆ ಪೂಜಿಸುವುದು. ಹೀಗೆ ಐಕ್ಯಾದಿಭಕ್ತಾಂತವಾದ ೬ ಸ್ಥಲಗಳು ಆಯಾ ಲಿಂಗವನ್ನು ಧರಿಸಿ ಪೂಜಿಸುವುದೇ ಲಿಂಗಾಂಗಸಂಯೋಗವೆನಿಸಿಕೊಳ್ಳುವುದು. ಹಿಂದೆ ಹೇಳಿದಂತೆ ಷಡ್ವಿಧಭಕ್ತ್ಯಾದಿಗಳಿಂದ ಕೂಡಿರುವ ಐಕ್ಯಾದಿಸ್ಥಲಗಳ ಮುಖ್ಯಲಕ್ಷಣವು ಹೇಗೆಂದರೆ– ನಾನು ನೀನು ಎಂಬ ವ್ಯವಹಾರವೆರಡಕ್ಕೂ ವಿಷಯನಾದವನು ನಾನೇ; ಪ್ರಾಣದೇಹೇಂದ್ರಿಯಾದಿ ಭೇದಗಳೆಲ್ಲ ಭ್ರಾಂತಿಜನ್ಯಗಳೇ ಹೊರತು ನನ್ನಲ್ಲಿಲ್ಲ, ಎಂಬ ಭಾವದಿಂದ ಸುಖಸಾಮರಸ್ಯರೂಪವಾಗಿರುವುದೇ ಐಕ್ಯಸ್ಥಲವು. ಅರಿವಿನ ಬೆಳಕಿನಿಂದ ದೇಹೇಂದ್ರಿಯಾದಿಗಳೆಲ್ಲ ತನ್ನ ರೂಪೆಂದು ತಿಳಿದು, ಸಕಲ ವಿಷಯಗಳಲ್ಲೂ ತಗುಲಿದ್ದರೂ ಶುದ್ಧಾತ್ಮನಾಗಿ ಆನಂದದಿಂದಿರುವುದೇ ಶರಣಸ್ಥಲವು. ಪ್ರಾಣೇಂದ್ರಿಯಾದಿಗಳೆಲ್ಲವೂ ನನ್ನವೆಂಬ ಭ್ರಾಂತಿಯನ್ನು ಬಿಟ್ಟು, ಎಲ್ಲವನ್ನೂ ಲಿಂಗವೇ ಎಂದು ತಿಳಿದು, ಲಿಂಗೈಕಾಯತ್ತಚಿತ್ತನಾಗಿರುವುದೇ ಪ್ರಾಣಲಿಂಗಸ್ಥಲವು. ಪ್ರತಿಯೊಂದು ಇಂದ್ರಿಯಮುಖವಾಗಿ ಅನುಭವಿಸುವ ಸೌಖ್ಯವನ್ನೂ ಮೊದಲು ಲಿಂಗಕ್ಕೆ ಸಮರ್ಪಿಸಿ, ಬಳಿಕ ಅದನ್ನು ಪ್ರಸಾದಬುದ್ಧಿಯಿಂದ ತಾನನುಭವಿಸುವುದೇ ಪ್ರಸಾದಿಸ್ಥಲವು. ಯಾವಾಗಲೂ ಲಿಂಗೈಕನಿಷ್ಠೆಯಿಂದ ಆಸ್ತಿಕ್ಯ, ನಿತ್ಯಕರ್ಮ, ಸತ್ಯ, ಸದಾಚಾರ, ಧರ್ಮ, ಸೌಶೀಲ್ಯಾದಿಗಳನ್ನು ಹೊಂದಿ, ವೀರಶೈವವ್ರತಸಂಪನ್ನನಾಗಿರುವುದೇ ಮಾಹೇಶ್ವರಸ್ಥಲವು. ಶರೀರಪ್ರಾಣಧರ್ಮಾದಿಗಳೆಲ್ಲವೂ ಸ್ಥಿರವೆಂದು ತೋರುತ್ತಿದ್ದರೂ, ತನ್ನ ಕ್ರಿಯಾವಿಶೇಷದಿಂದ ಆ ಭ್ರಾಂತಿಯನ್ನು ಬಿಡುತ್ತ, ಚಿತ್ತವನ್ನು ಸದಾ ಶಿವಭಕ್ತಿ ಸದಾಚಾರಗಳಲ್ಲಳವಡಿಸಿರುವುದೇ ಭಕ್ತಸ್ಥಲವು. ಇನ್ನು ಲಿಂಗಾಂಗಸಂಯೋಗಕ್ರಮವನ್ನು ಹೇಳುತ್ತೇನೆ– ಲಿಂಗವೆಂದರೆ ಬ್ರಹ್ಮ, ಅಂಗವೆಂದರೆ ಜೀವ, ಇವುಗಳ ನಿತ್ಯಸಂಬಂಧವೇ ಸಂಯೋಗವೆನಿಸಿಕೊಳ್ಳುವುದು. ಲಿಂಗವೇ ತತ್ಪದವಾಚ್ಯವು, ಅಂಗವೇ ತ್ವಂಪದವಾಚ್ಯವು, ಸಂಯೋಗವೇ ಅಸಿಪದವಾಚ್ಯವು; ಲಿಂಗವೇ ನಾ

ದ, ಅಂಗವೇ ಬಿಂದು, ಸಂಯೋಗವೇ ಕಳೆಯು; ಲಿಂಗವೇ ಸನ್ಮಾತ್ರ, ಅಂಗವೇ ಚಿನ್ಮಾತ್ರ, ಆನಂದವೇ ಯೋಗವು; ಇದೇ ಮಹಾಲಿಂಗಾಂಗ ಸಂಯೋಗವು. ತನ್ನ ತ್ರಿವಿಧದೇಹದಲ್ಲಿರುವ ತ್ರಿವಿಧಲಿಂಗವನ್ನೂ ಅವಸ್ಥಾ ತ್ರಯಗಳಲ್ಲಿ ವಿಶ್ವ ತೈಜಸ ಪ್ರಾಜ್ಞರೂಪನಾಗಿ ಉಪಾಸಿಸುತ್ತಿರುವುದೇ ಲಿಂಗಾಂಗಸಂಯೋಗವು. ಸಂಯೋಗವೆಂದರೆ ದ್ವೈತನಾಶ; ಆ ನಾಶವೇ ನಿವೃತ್ತಿ, ನಿವೃತ್ತಿಯೇ ವಿಶ್ರಾಂತಿ, ಆ ವಿಶ್ರಾಂತಿಯೇ ಪರಮಪದ ಅಥವಾ ಮುಕ್ತಿಯೆನಿಸಿಕೊಳ್ಳುವುದು. ಇನ್ನು ಸರ್ವಾಂಗಲಿಂಗಸಾಹಿತ್ಯವನ್ನು ಹೇಳುವೆನು.— ಗುರುವಿನಿಂದ ತ್ರಿವಿಧದೇಹದಲ್ಲಿ ತ್ರಿವಿಧಲಿಂಗಗಳು ಸ್ಥಾಪಿಸಲ್ಪಟ್ಟಿರುವಂತೆಯೇ ಜ್ಞಾನೇಂದ್ರಿಯಗಳಲ್ಲೂ ಒಂದೊಂದು ಲಿಂಗವು ಸ್ಥಾಪಿಸಲ್ಪಟ್ಟಿರುವುದು. ಹೇಗೆಂದರೆ— ಹೃದಯಾಂಗದಲ್ಲಿ ಮಹಾಲಿಂಗ, ಶ್ರೋತ್ರಾಂಗದಲ್ಲಿ ಪ್ರಸಾದಲಿಂಗ, ತ್ವಗಂಗದಲ್ಲಿ ಚರಲಿಂಗ, ನೇತ್ರಾಂಗದಲ್ಲಿ ಶಿವಲಿಂಗ, ಜಿಹ್ವಾಂಗದಲ್ಲಿ ಗುರುಲಿಂಗ, ನಾಸಿಕಾಂಗದಲ್ಲಿ ಆಚಾರಲಿಂಗವು ಇರುವುವು. ಇದರಂತೆಯೇ ಕರ್ಮೇಂದ್ರಿಯಗಳಲ್ಲೂ ಇರುವುವು. ಹೇಗೆಂದರೆ— ಒಂದು ಜ್ಞಾನೇಂದ್ರಿಯ, ಅದರ ವಿಷಯ, ಒಂದು ಕರ್ಮೇಂದ್ರಿಯ, ಅದರ ವಿಷಯ, ಒಂದೊಂದು ಭೂತ, ಇವೈದೈದಕ್ಕೂ ಈಶಾನಾದಿ ಪಂಚಮೂರ್ತಿಗಳಲ್ಲೊಂದೊಂದು ಅಧಿದೈವವಾಗಿರುವುವು. ಅದರ ವಿವರವೆಂತೆಂದರೆ— ಶ್ರೋತ್ರ—ಶಬ್ದ, ವಾಕ್ಕು—ವಚನ, ಆಕಾಶ—ಇವುಗಳಿಗೆ ಈಶಾನಮೂರ್ತಿಯೂ, ತ್ವಕ್ಕು—ಸ್ಪರ್ಶ, ಪಾಣಿ—ಆದಾನ, ವಾಯು—ಇವುಗಳಿಗೆ ತತ್ಪುರುಷಮೂರ್ತಿಯೂ, ನೇತ್ರ—ರೂಪ, ಪಾದ—ಗಮನ, ಅಗ್ನಿ—ಇವುಗಳಿಗೆ ಅಘೋರಮೂರ್ತಿಯೂ, ಜಿಹ್ವಾ—ರಸ, ಗುಹ್ಯ—ಆನಂದ, ಜಲ—ಇವುಗಳಿಗೆ ವಾಮದೇವಮೂರ್ತಿಯೂ, ನಾಸಿಕ—ಗಂಧ, ಪಾಯು, ವಿಸರ್ಜನ, ಭೂಮಿ—ಇವುಗಳಿಗೆ ಸದ್ಯೋಜಾತಮೂರ್ತಿಯೂ, ಅಧಿದೈವಗಳಾಗಿರುವುವು. ಈ ಜ್ಞಾನಕರ್ಮೇಂದ್ರಿಯಗಳಿಗೆಲ್ಲ ಹೃದಯವೇ ಆಶ್ರಯವು. ಹೀಗೆ ಸಕಲೇಂದ್ರಿಯಗಳಿಗೂ ಅವಕಾಶವನ್ನು ಕೊಟ್ಟುಕೊಂಡಿರುವುದರಿಂದ ಇದಕ್ಕೆ ಹೃದಯಾಕಾಶನೆಂದು ಹೆಸರು. ಇದು ಮಹಾಲಿಂಗಕ್ಕಾಶ್ರಯವಾದುದು. ಮೇಲೆಕಂಡ ಇಂದ್ರಿಯಗಳೆಲ್ಲ ಸ್ಥೂಲಾಂಗದಲ್ಲಿ ಸ್ಥೂಲರೂಪವಾಗಿಯೂ, ಸೂಕ್ಷ್ಮಾಂಗದಲ್ಲಿ ಸೂಕ್ಷ್ಮರೂಪವಾಗಿಯೂ, ಕಾರಣಾಂಗದಲ್ಲಿ

ಕಾರಣರೂಪವಾಗಿಯೂ ಇರುವುವು. ಈ ತ್ರಿವಿಧರೂಪವಾದ ಇಂದ್ರಿಯಗಳಲ್ಲೂ ಸತ್ಯಾದಿಲಕ್ಷಣಲಕ್ಷಿತವಾದ ಗುರೂಪದೇಶ ಸಂಸಿದ್ಧಲಿಂಗವು ಸರ್ವತೋಮುಖವಾಗಿ ಶೋಭಿಸುತ್ತಿರುವುದು. ಪ್ರತಿಯೊಂದು ಇಂದ್ರಿಯಗಳ ಮುಖವಾಗಿ ಬರುವ ವಿಷಯವನ್ನೂ ಲಿಂಗಮುಖವಾಗಿಯೇ ಪರಿಗ್ರಹಿಸಬೇಕು. ಆ ಲಿಂಗಮುಖವನ್ನು ತಿಳಿಯುವುದು ಸೂಕ್ಷ್ಮದರ್ಶಿಗಳಿಗಲ್ಲದೆ ಜಡಾತ್ಮರಿಗೆ ಸುಲಭವಲ್ಲ, ಅಂತಹ ಸೂಕ್ಷ್ಮದರ್ಶಿಗಳಿಗೆ ಹೃದಯಕ್ಕೆ ಹೃದಯವೂ, ಶ್ರೋತ್ರಕ್ಕೆ ಶ್ರೋತ್ರವೂ, ತ್ವಕ್ಕಿಗೆ ತ್ವಕ್ಕೂ, ನೇತ್ರಕ್ಕೆ ನೇತ್ರವೂ, ಜಿಹ್ವೆಗೆ ಜಿಹ್ವೆಯೂ, ನಾಸಿಕಕ್ಕೆ ನಾಸಿಕವೂ. ವಾಕ್ಕಿಗೆವಾಕ್ಕೂ, ಪಾಣಿಗೆ ಪಾಣಿಯೂ, ಪಾದಕ್ಕೆ ಪಾದವೂ, ಪಾಯುವಿಗೆ ಪಾಯುವೂ, ಗುಹ್ಯಕ್ಕೆ ಗುಹ್ಯವೂ, ಮುಖವಾಗಿ ತೋರುವುವು. ಹೇಗೆಂದರೆ— ಹೃದಯಕ್ಕೆ ಹೃದಯವೇ ಮಹಾಲಿಂಗವು, ಶ್ರೋತ್ರಕ್ಕೆ ಶ್ರೋತ್ರವೇ ಪ್ರಸಾದಲಿಂಗವು, ತ್ವಕ್ಕಿಗೆ ತ್ವಕ್ಕೇ ಜಂಗಮಲಿಂಗವು. ನೇತ್ರಕ್ಕೆ ನೇತ್ರನೇ ಶಿವಲಿಂಗವು, ಜಿಹ್ವೆಗೆ ಜಿಹ್ವೆಯೇ ಗುರುಲಿಂಗವು, ನಾಸಿಕಕ್ಕೆ ನಾಸಿಕವೇ ಆಚಾರ ಲಿಂಗವು. ಇವಿಷ್ಟೂ ಪ್ರವೃತ್ತಿಮಾರ್ಗಕ್ರಮವಾಯಿತು. ಇನ್ನು ನಿವೃತ್ತಿಮಾರ್ಗಕ್ರಮವೆಂತೆಂದರೆ— ದೇಹದ ಗುದಸ್ಥಾನ, ಗುಹ್ಯಸ್ಥಾನ, ಹೊಕ್ಕುಳು, ಹೃದಯ, ಕಂಠ, ಹುಬ್ಬಿನ ಮಧ್ಯ, ಇವಾರು ಸ್ಥಲಗಳೂ ಕ್ರಮವಾಗಿ ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞಾ, ಎಂಬ ಆರು ಚಕ್ರಸ್ಥಾನಗಳಾಗಿರುವುವು. ಮೊದಲನೆ ಆಧಾರಚಕ್ರಕಮಲಕ್ಕೆ ೪ ದಳ, ಸ್ವಾಧಿಷ್ಠಾನಕ್ಕೆ ೬ ದಳ, ಮಣಿಪೂರಕಕ್ಕೆ ೧೦ ದಳ, ಅನಾಹತಕ್ಕೆ ೧೨ ದಳ, ವಿಶುದ್ಧಿಗೆ ೧೬ ದಳ, ಆಜ್ಞಾಚಕ್ರಕ್ಕೆ ೨ ದಳಗಳಿರುವುವು. ಮೇಲೆಕಂಡ ಪ್ರತಿಚಕ್ರದ ಪ್ರತಿಯೊಂದು ದಳದಲ್ಲೂ ಬಂದೊಂದು ಪ್ರಣವವಿರುವುವು. ಹೇಗೆಂದರೆ— ಆಧಾರಚಕ್ರದಲ್ಲಿ ವ ಶ ಷ ಸ; ಸ್ವಾಧಿಷ್ಠಾನದಲ್ಲಿ— ಬ ಭ ಮ ಯ ರ ಲ, ಮಣಿಪೂರಕದಲ್ಲಿ— ಡ ಢ ಣ ತ ಥ ದ ಧ ನ ಪ ಫ; ಅನಾಹತಚಕ್ರದಲ್ಲಿ— ಕ ಖ ಗ ಘ ಙ ಚ ಛ ಜ ಝ ಞ ಟ ಠ; ವಿಶುದ್ಧಿಚಕ್ರದಲ್ಲಿ— ಅ ಆ ಇ ಈ ಉ ಊ ಋ ೠ ಎ ಏ ಐ ಒ ಓ ಔ ಅಂ ಅಃ; ಆಜ್ಞಾಚಕ್ರದಲ್ಲಿ ಹಂ ಕ್ಷಂ; ಎಂಬಿವುಗಳೂ ಪ್ರಣವಗಳಾಗಿರುವುವು. ಈ ಷಟ್ಚಕ್ರದ

ದಳಗಳ ಮಧ್ಯಕರ್ಣಿಕೆಗಳಲ್ಲಿ ಕ್ರಮವಾಗಿ ಯ ವಾ ಶಿ ಮ ನ ಓಂ ಎಂಬ ಪ್ರಣವಗಳು ಬಂದೊಂದಾಗಿರುವುವು. ಇವುಗಳಲ್ಲಿ ನಕಾರವೇ ಆಚಾರ ಲಿಂಗವು, ಮಕಾರವೇ ಗುರುಲಿಂಗವು, ಶಿಕಾರವೇ ಶಿವಲಿಂಗವು, ವಾಕಾರವೇ ಆಚಾರಲಿಂಗವು, ಯಕಾರವೇ ಪ್ರಸಾದಲಿಂಗವು, ಓಂಕಾರವೇ ಮಹಾಲಿಂಗವು. ಈ ಷಟ್ಪ್ರಣವಗಳಲ್ಲಿ ಓಂಕಾರವು ತ್ವಕ್ಕಿನಲ್ಲೂ, ನಕಾರವು ರಕ್ತದಲ್ಲೂ, ಮಕಾರವು ಮಾಂಸದಲ್ಲೂ, ಶಿಕಾರವು ಮೇದಸ್ಸಿನಲ್ಲೂ, ವಾಕಾರವು ಅಸ್ಥಿಯಲ್ಲೂ, ಯಕಾರವು ಮಜ್ಜೆಯಲ್ಲೂ, ಈ ಷಡ್ವರ್ಗಗಳೂ ಒಟ್ಟಿಗೆ ಶುಕ್ಲದಲ್ಲೂ ವ್ಯಾಪಿಸಿಕೊಂಡಿರುವುವು. ಇದೇ ವೀರಶೈವ ನ ಸರ್ವಾಂಗಲಿಂಗಸಾಹಿತ್ಯವು. ಇನ್ನು ಲಿಂಗಾರ್ಪಣವಿಧಾನವನ್ನು ಹೇಳುತ್ತೇನೆ.—ಲಿಂಗಾರ್ಪಣವು ಕ್ರಿಯಾರ್ಪಣ ಜ್ಞಾನಾರ್ಪಣವೆಂದು ಎರಡು ತೆರನಾಗಿರುವುದು. ಕ್ರಿಯಾರ್ಪಣವೆಂದರೆ—ತನ್ನ ಉಪಭೋಗಕ್ಕಾಗಿ ಅದಾಗಿ ಬಂದ ದ್ರವ್ಯವನ್ನು ತ್ರಿವಿಧಲಿಂಗಗಳಿಗೆ ಸಮರ್ಪಿಸಿ, ತತ್ಪ್ರಸಾದವನ್ನನುಭವಿಸುವುದು. ಆ ಕ್ರಿಯಾರ್ಪಣವು— ಸ್ಥೂಲದ್ರವ್ಯಾರ್ಪಣ. ಸೂಕ್ಷ್ಮದ್ರವ್ಯಾರ್ಪಣ, ಆನಂದದ್ರವ್ಯಾರ್ಪಣವೆಂದು ಮೂರು ವಿಧವಾಗಿರುವುದು. ರೂಪವೇ ಸ್ಥೂಲದ್ರವ್ಯ, ರುಚಿಯೇ ಸೂಕ್ಷ್ಮದ್ರವ್ಯ, ತೃಪ್ತಿಯೇ ಆನಂದದ್ರವ್ಯವಾಗಿರುವುವು. ಸ್ಥೂಲದ್ರವ್ಯವಾದ ರೂಪವನ್ನು ಇಷ್ಟಲಿಂಗಾರ್ಪಣ ಮಾಡುವವನೇ ವಿಶ್ವಾಸಿ. ಆ ಲಿಂಗದ ಪ್ರಸಾದವು ಶುದ್ಧವು. ಸೂಕ್ಷ್ಮದ್ರವ್ಯವಾದ ರುಚಿಯನ್ನು ಪ್ರಾಣಲಿಂಗಕ್ಕರ್ಪಿಸುವವನೇ ತೈಜಸನು. ಆ ಲಿಂಗಪ್ರಸಾದವೇಸಿದ್ಧವು. ಆನಂದದ್ರವ್ಯವಾದ ತೃಪ್ತಿಯನ್ನು ಭಾವಲಿಂಗಕ್ಕರ್ಪಿಸುವವನೇ ಪ್ರಾಜ್ಞನು. ಆ ಲಿಂಗಪ್ರಸಾದವೇ ಪ್ರಸಿದ್ಧವು. ಹೀಗೆ ಜಾಗ್ರದಾದ್ಯವಸ್ಥಾತ್ರಯಗಳಲ್ಲಿ ಆತ್ಮನು ತ್ರಿವಿಧಲಿಂಗಾರ್ಪಿತವಂ ಮಾಡಿ ತತ್ಪ್ರಸಾದೋಪಭೋಗದಿಂದ ಸಂತುಷ್ಟನಾಗಿರುವುದೇ ಕ್ರಿಯಾರ್ಪಣವು. ಇನ್ನು ಜ್ಞಾನಾರ್ಪಣವೆಂತೆಂದರೆ— ಸಕಲೇಂದ್ರಿಯಮುಖಗಳಿಗೂ ಬರುವ ಸರ್ವದ್ರವ್ಯಗಳನ್ನೂ ಷಡ್ವಿಧಾಂಗದಿಂದ ಷಡ್ವಿಧಲಿಂಗಗಳಿಗೆ ಸಮರ್ಪಿಸಿ ತತ್ಪ್ರಸಾದವನ್ನುಪಭೋಗಿಸುವುದು. ಅವು ಹೇಗೆಂದರೆ— ಗಂಧ ರಸ ರೂಪ ಸ್ಪರ್ಶ ಶಬ್ದ ಪರಿಣಾಮ ಎಂಬ ಷಡ್ವಿಷಯಗಳೇ ೬ ಪದಾರ್ಥಗಳು. ಹೇಗೆಂದರೆ— ಗಂಧವು ಚಂದನಾದಿಪರಿಮಳಪದಾರ್ಥಮಯವಾಗಿರುವುದು ರ

ಸವು ಮಧುರಾದಿಪದಾರ್ಥಮಯವಾಗಿರುವುದು ರೂಪವು ನಾನಾವರ್ಣಪದಾರ್ಥಮಯವಾಗಿರುವುದು. ಸ್ಪರ್ಶವು ಮೃದುಕಠೋರಾದಿಪದಾರ್ಥಮಯವಾಗಿರುವುದು. ಶಬ್ದವು ನಾದಪದಾರ್ಥಮಯವಾಗಿರುವುದು. ಪರಿಣಾಮವು ಸುಖಪದಾರ್ಥಮಯವಾಗಿರುವುದು. ಇವುಗಳನ್ನು ಆತ್ಮನು ಷಡಂಗಗಳಿಂದ ಷಡ್ಲಿಂಗಗಳಿಗೆ ಸಮರ್ಪಿಸಿ, ಪ್ರಸಾದವನ್ನು ಸೇವಿಸುವ ರೀತಿಯು ಹೇಗೆಂದರೆ— ಸದ್ಭಕ್ತಿಯಿಂದ ಕೂಡಿದ ಭಕ್ತನು— ತನ್ನ ಭೂವ್ಯಂಗದಿಂದ ಕ್ರಿಯಾಶಕ್ತಿಸಮೇತವಾದ ಆಚಾರಲಿಂಗಕ್ಕೆ ಚಿತ್ತಹಸ್ತದಿಂದ ನಾಸಿಕಾಮುಖೇನ ಚಂದನಾದಿಪದಾರ್ಥಗಳನ್ನರ್ಪಿಸಿ, ತದ್ಗಂಧಪ್ರಸಾದವನ್ನು ಸದಾ ಅನುಭವಿಸುವನು. ನಿಷ್ಠಾಭಕ್ತಿಯುಕ್ತನಾದ ಮಾಹೇಶ್ವರನು— ತನ್ನಜಲಾಂಗದಿಂದ ಜ್ಞಾನಶಕ್ತಿಸಮೇತವಾದ ಗುರುಲಿಂಗಕ್ಕೆ ಸುಬುದ್ಧಿಹಸ್ತದಿಂದ ಜಿಹ್ವಾಮುಖೇನ ಮಧುರಾದಿಷಡ್ರಸಪದಾರ್ಥಗಳನ್ನು ಸಮರ್ಪಿಸಿ, ತದ್ರಸಪ್ರಸಾದವನ್ನು ಸದಾ ಉಪಭೋಗಿಸುವನು. ಅವಧಾನಭಕ್ತಿಯುಕ್ತನಾದ ಪ್ರಸಾದಿಯು— ತನ್ನ ಅಗ್ನ್ಯಂಗದಿಂದ ಇಚ್ಛಾಶಕ್ತಿಸಮೇತವಾದ ಶಿವಲಿಂಗಕ್ಕೆ ನಿರಹಂಕಾರಹಸ್ತದಿಂದ ನೇತ್ರಮುಖೇನ ಶ್ವೇತಾದಿವರ್ಣಪದಾರ್ಥಗಳನ್ನು ಸಮರ್ಪಿಸಿ, ತದ್ರೂಪಪ್ರಸಾದವನ್ನು ಸದಾ ಸೇವಿಸುವನು. ಅನುಭವಭಕ್ತಿಯುಕ್ತನಾದ ಪ್ರಾಣಲಿಂಗಿಯು— ತನ್ನ ವಾಯ್ವಂಗದಿಂದ ಆದಿಶಕ್ತಿಸಮೇತವಾದ ಜಂಗಮಲಿಂಗಕ್ಕೆ ಸುಮನೋಹಸ್ತದಿಂದ ತ್ವಙ್ಮುಖೇನ ಮೃದುಕಠೋರಾದಿಪದಾರ್ಥಗಳನ್ನು ಸಮರ್ಪಿಸಿ, ತತ್ಸ್ಪರ್ಶಪ್ರಸಾದವನ್ನುಪಭೋಗಿಸುವನು. ಆನಂದಭಕ್ತಿಯುಕ್ತನಾದ ಶರಣನು— ತನ್ನ ಏಕಾತ್ಮಾಂಗದಿಂದ ಪರಾಶಕ್ತಿಸಮೇತವಾದ ಪ್ರಸಾದಲಿಂಗಕ್ಕೆ ಸುಜ್ಞಾನಹಸ್ತದಿಂದ ಶ್ರೋತ್ರಮುಖೇನ ಶಬ್ದದ್ರವ್ಯವನ್ನರ್ಪಿಸಿ, ತನ್ನಾದಪ್ರಸಾದವನ್ನುಪಭೋಗಿಸುವನು. ಸಮರಸಭಕ್ತಿಯುಕ್ತನಾದ ಐಕ್ಯನು— ತನ್ನ ಆತ್ಮಾಂಗದಿಂದ ಚಿಚ್ಛಕ್ತಿಸಮೇತವಾದ ಮಹಾಲಿಂಗಕ್ಕೆ ಸದ್ಭಾವಹಸ್ತದಿಂದ ಹೃದಯಮುಖೇನ ಪರಿಣಾಮಪದಾರ್ಥವನ್ನರ್ಪಿಸಿ, ತತ್ತೃಪ್ತಿಪ್ರಸಾದವನ್ನುಪಭೋಗಿಸುವನು. ಹೀಗೆ ಪ್ರತಿಯೊಂದು ಸ್ಥಲದಲ್ಲೂ— ಅಂಗ, ಲಿಂಗ, ಭಕ್ತಿ, ಶಕ್ತಿ. ಮುಖ, ಹಸ್ತ, ಅರ್ಪಣ, ಪದಾರ್ಥ, ಎಂಬ ಎಂಟೂ ಇರುವುವು. ಇದುವರೆಗೆ ಹೇಳಿದ ವಿಷ

ಯಗಳನ್ನೆಲ್ಲ ಪರಿಶೀಲಿಸಿದರೆ, ಒಂದು ಸತ್ತೇ ಅಂಗ ಲಿಂಗವೆಂಬೆರಡು ಭೇದಗಳನ್ನೈದಿ, ಚಿತ್ತೇ ಭಕ್ತಿ ಶಕ್ತಿಯೆಂಬೆರಡು ಭೇದವನ್ನು ಹೊಂದಿ, ಆನಂದವೇ ಅರ್ಪಣ ಪ್ರಸಾದವೆಂಬೆರಡು ತೆರನಾಗಿ, ಈ ಸಚ್ಚಿದಾನಂದಲಕ್ಷಣಲಕ್ಷಿತ ಪರತತ್ವವೇ ಷಟ್ಸ್ಥಲವೆಂಬ ಹೆಸರನ್ನು ಪಡೆದು, ಉಪಾಸ್ಯೋಪಾಸಕಭೇದದಿಂದ ಲಿಂಗಾಂಗಸ್ಥಲಗಳೆಂದು ವಿಭಜನಗೊಂಡಿತೆಂಬುದಾಗಿ ವ್ಯಕ್ತವಾಗುವುದು. ಈ ಸ್ಥಲಗಳು ನಿವೃತ್ತಿಮಾರ್ಗದಿಂದ ವ್ಯಕ್ತವಾಗುವುದು ಹೇಗೆಂದರೆ– ಪರಶಿವನೇ ಲಿಂಗವು, ಆತ್ಮನೇ ಅಂಗವು, ಇವೆರಡಕ್ಕೂ ವಿಯೋಗವಿಲ್ಲದಿರುವುದೇ ಸಂಯೋಗವು. ಆ ಸಂಯೋಗವೇ ಸದ್ಭಕ್ತಿಯೆನಿಸಿಕೊಳ್ಳುವುದು. ಅದರಿಂದಲೇ ಭಕ್ತಸ್ಥಲವಾಯಿತು. ಆ ಭಕ್ತನು ಆಚಾರಲಿಂಗಸಂಯೋಗದಿಂದ ಸದ್ಭಕ್ತಿಯಿಂದಿರುವುದೇ ನಿಷ್ಠಾಭಕ್ತಿಯೆನಿಸಿತು. ಆ ಭಕ್ತಿಮೇಳನದಿಂದ ಆತ್ಮನಿಗೆ ಮಾಹೇಶ್ವರಸ್ಥಲವು ಲಭಿಸಿತು. ಆ ಮಾಹೇಶ್ವರನು ಗುರುಲಿಂಗಸಂಗದಿಂದ ಅವಧಾನಭಕ್ತಿವೆರೆದಿರಲು, ಅದರಿಂದ ಪ್ರಸಾದಿಸ್ಥಲವು ದೊರಕೊಂಡಿತು. ಆ ಪ್ರಸಾದಿಯು ಶಿವಲಿಂಗಸಂಗದಿಂದ ಅನುಭವಭಕ್ತಿವೆರೆಯಲು, ಪ್ರಾಣಲಿಂಗಿಸ್ಥಲವು ಅಳವಟ್ಟಿತು. ಆ ಪ್ರಾಣಲಿಂಗಿಯು ಜಂಗಮಲಿಂಗಸಂಗದಿಂದ ಆನಂದಭಕ್ತಿಯೊಡಗೂಡಲು, ಶರಣಸ್ಥಲವು ಪ್ರಾಪ್ತವಾಯಿತು. ಆ ಶರಣನು ಪ್ರಸಾದಲಿಂಗಸಂಗದಿಂದ ಸಮರಸಭಕ್ತಿಯುಕ್ತನಾಗಲು, ಐಕ್ಯಸ್ಥಲವು ಸಿದ್ಧಿಸಿತು. ಆ ಐಕ್ಯನು ಮಹಾಲಿಂಗಸಂಯೋಗದಿಂದೈಕ್ಯನಾಗಲು, ಅದಕ್ಕಿಂತಲೂ ಪರವಿಲ್ಲವಾಗಿ ನಿಶ್ಶಬ್ದವಾಯಿತು. ಚಂದ್ರನಿಗೂ ಚಂದ್ರಿಕೆಗೂ, ಆಕಾಶಕ್ಕೂ ವಾಯುವಿಗೂ, ಹೂವಿಗೂ ಪರಿಮಳಕ್ಕೂ, ಅಲಿಕಲ್ಲಿಗೂ ನೀರಿಗೂ, ವಾಕ್ಕಿಗೂ ಅರ್ಥಕ್ಕೂ, ದೀಪಕ್ಕೂ ಬೆಳಕಿಗೂ, ರತ್ನಕ್ಕೂ ಕಾಂತಿಗೂ, ರಸಕ್ಕೂ ರುಚಿಗೂ, ಭೇದವತ್ತೂ ಅಭೇದಗಳಿರುವಂತೆಯೇ ಲಿಂಗಾಂಗಗಳ ಭೇದಸಂಯೋಗಗಳು ತನ್ನಲ್ಲಿರುವುವು. ಈ ಭೇದಾಭೇದಗಳನ್ನಳಿದಿರುವುದೇ ಐಕ್ಯವು. ಲಿಂಗಾಂಗಸಂಗವೇ ಸಂಯೋಗವೆನಿಸುವುದು. ಆ ಸಂಯೋಗವೇ ನಿವೃತ್ತಿಯು. ನಿವೃತ್ತಿಯೆಂದರೆ ಅದ್ವೈತವು. ಅದ್ವೈತವೆಂದರೆ ಐಕ್ಯವು. ಅಂತಹ ಐಕ್ಯನೇ ಸಾಯುಜ್ಯವು. ಸಾಯುಜ್ಯವೆಂದರೆ ವಿಶ್ರಾಂತಿಯೆಂದರ್ಥ. ಆ ವಿಶ್ರಾಂತಿಯೇ ಪರಮಪದವಿ

ಯು. ಅದಕ್ಕಿಂತ ಪರವಾದ ಮುಕ್ತಿಯಿಲ್ಲವೆಂಬುದೇ ಸಿದ್ಧಾಂತವು. ಇದೇ ಷಟ್ಸ್ಥಲಮಾರ್ಗಾಚರಣೆಯೆಂದು ಚೆನ್ನಬಸವೇಶನು ನಿರೂಪಿಸಿದನೆಂಬಲ್ಲಿಗೆ ಎಂಟನೆ ಅಧ್ಯಾಯವು ಸಂಪೂರ್ಣವು.



೯ ನೆ ಅಧ್ಯಾಯವು.



ಕಾಲಜ್ಞಾನವು.

ಚೆನ್ನಬಸವೇಶನು ನಿರೂಪಿಸಿದ ಷಟ್ಸ್ಥಲತತ್ತ್ವವನ್ನೆಲ್ಲ ಸಿದ್ಧರಾಮೇಶನು ಕೇಳಿ, "ಗುರುವೆ! ತಮ್ಮನುಗ್ರಹದಿಂದ ಷಟ್ಸ್ಥಲತತ್ತ್ವವನ್ನು ತಿಳಿದು ಕೃತಕೃತ್ಯನಾದೆನು" ಎಂದು ಕೊಂಡಾಡುತ್ತಿರುವಲ್ಲಿ, ಅಲ್ಲಮಪ್ರಭುವು– ಎಲೆ ಸಿದ್ಧರಾಮನೆ, ನೀನಿಲ್ಲಿಗೆ ಬಂದುದು ಸಫಲವಾಯಿತು. ನಾವಿನ್ನು ಹೊರಡುತ್ತೇವೆ ಯೆನ್ನಲು, ಪ್ರಭುವೆ! ತಮ್ಮಿಂದ ನಾನು ಇಂತಪ್ಪ ಗುರುವನ್ನು ಪಡೆದಹಾಗಾಯಿತು, ಎಂದು ಕೃತಜ್ಞತೆಯಿಂದ ಪ್ರಭುವಿನ ಪಾದಕ್ಕೆರಗಿ ಕೊಂಡಾಡಿದನು. ಆಗ ಚೆನ್ನಬಸವೇಶನು ಪ್ರಭುವನ್ನೂ ಸಿದ್ಧರಾಮನನ್ನೂ ಅಲ್ಲಿದ್ದ ಅಖಿಲಗಣಸಮೂಹವನ್ನೂ ತನ್ನ ಮನೆಗೆ ಕರೆದುಕೊಂಡು ಹೋಗಿ, ಎಲ್ಲರಿಗೂ ಮೃಷ್ಟಾನ್ನಭೋಜನದಿಂದ ತೃಪ್ತಿಪಡಿಸಿದನು. ಆಗ ಅಲ್ಲಮನು ಬಸವಾದಿಪ್ರಮಥರನ್ನೆಲ್ಲ ಕುರಿತು– ನೀವುಗಳೆಲ್ಲರೂ ಚೆನ್ನಬಸವೇಶನು ಅನುಗ್ರಹಿಸಿದ ಷಟ್ಸ್ಥಲಮಾರ್ಗವನ್ನು ಚೆನ್ನಾಗಿ ತಿಳಿದುಕೊಂಡು ಅದರಂತೆ ಆಚರಿಸುತ್ತಿದ್ದರೆ, ನಾವು ಮತ್ತೆ ಒಂದು ನಿಮ್ಮಗೆ ಮುಕ್ತಿಯನ್ನು ಕೊಡುವೆವು. ಎಂದು ಹೇಳಿ ನಂಬುಗೆಗೊಟ್ಟು, ಬಸವೇಶ ಚೆನ್ನಬಸವೇಶ ಸಿದ್ಧರಾಮೇಶ ಮೊದಲಾದವರನ್ನೆಲ್ಲ ಅಲ್ಲೇ ನಿಲ್ಲಿಸಿ, ತಾನು ಹೊರಟನು. ಬಳಿಕ ಸಿದ್ಧರಾಮೇಶನು ಚೆನ್ನಬಸವೇಶನಿಗೆ ನಮಸ್ಕರಿಸಿ, ನನಗೆ ಬುದ್ಧಿವಾದವನ್ನಪ್ಪಣೆ ಕೊಡಿಸಬೇಕೆಂದು ಬೇಡಲು, "ನೀನು ಸೊನ್ನಲಾಪುರದಲ್ಲಿ ಸಮಾಧಿಸ್ಥನಾಗಿರು" ಎಂದು ಅಪ್ಪಣೆ ಮಾಡಿದನು. ಅವನು ಮತ್ತೆ ನಮಸ್ಕರಿಸಿ, ಮುಂದೆ ನಡೆಯುವ ವಿಶೇಷ ಸಂಗ

ತಿಗಳ ಕುರುಹನ್ನು ಅಪ್ಪಣೆ ಕೊಡಿಸಬೇಕೆಂದು ಬೇಡಲು, ತ್ರಿಕಾಲಜ್ಞಾನಿಯಾದ ಚೆನ್ನಬಸವೇಶನು ಆ ಭವಿಷ್ಯತ್ತನ್ನು ನಿರೂಪಿಸಿದನೆಂತೆಂದರೆ— ಎಲೆ ಸಿದ್ಧರಾಮನೆ, ಈ ಪ್ರಭುವು ಇಲ್ಲಿಂದ ತೆರಳಿದ ಬಳಿಕ ಅಖಿಲದೇಶವನ್ನೂ ಸಂಚರಿಸಿಕೊಂಡು, ಶಿವಭಕ್ತರಿಷ್ಟಾರ್ಥವನ್ನು ಕೊಡುತ್ತ, ತನ್ನ ಪಾದಸ್ಪರ್ಶದಿಂದ ಗಿರಿಗುಹಾನದೀವನಾದಿಗಳನ್ನೆಲ್ಲ ಪವಿತ್ರವನ್ನಾಗಿ ಮಾಡುತ್ತ, ದ್ರಾವಿಡದೇಶಕ್ಕೆ ಬಂದು, ಕಂಚಿ ಕಾಳಹಸ್ತಿ ಅರುಣಾಚಲ ಮೊದಲಾದುವುಗಳನ್ನೆಲ್ಲ ಸಂಚರಿಸಿ, ಅಲ್ಲಿಂದ ರಾಮೇಶ್ವರಕ್ಕೂ ಗೋಕರ್ಣಸೌರಾಷ್ಟ್ರಗಳಿಗೂ ಕಾಶಿಕೇದಾರಗಳಿಗೂ ಹೋಗಿ, ಬಳಿಕ ಹಿಮವತ್ಪರ್ವತವನ್ನು ದಾಟಿ, ಸವಾಲಕ್ಷಪರ್ವತಕ್ಕೆ ಬರುವನು. ಅಲ್ಲಿದ್ದ ಮುನಿಗಳಿಗೆಲ್ಲ ತತ್ತ್ವಾರ್ಥವನ್ನು ಬೋಧಿಸಿ ಮುಕ್ತರಂ ಮಾಡಿ, ಅಲ್ಲಿನ ಗುಹೆಯೊಳಗೆ ರಾಜಯೋಗದಲ್ಲಿ ೧೨ ವರ್ಷಗಳಿದ್ದು, ಅದುವರೆಗೆ ಶೂನ್ಯಪೀಠದ ಆಡಳಿತವನ್ನು ಬಸವೇಶನು ನಾಗಿಸುತ್ತಿರುವುದನ್ನು ಅರಿತು, ಬಸವೇಶಾದಿಗಳನ್ನುದ್ಧರಿಸುವುದಕ್ಕಾಗಿ ಇಲ್ಲಿಗೆ ಬರುವನು. ಅವನ ಬರುವಿಕೆಯನ್ನು ಇವರೆಲ್ಲರೂ ತಿಳಿದು ಇದಿರ್ಗೊಳ್ಳಲು, ಪ್ರಭುವು ಬಂದು ಶೂನ್ಯಸಿಹ್ಮಾಸನವನ್ನಾರೋಹಿಸುವನು. ಅದನ್ನು ಕಂಡು ಅಲ್ಲಿದ್ದ ಚರಮೂರ್ತಿಗಳೆಲ್ಲ ಕೋಪಿಸಿಕೊಂಡು ಹೊರಟುಹೋಗುವರು. ಇದಕ್ಕೇನು ಮಾಡಬೇಕೆಂದು ಬಸವೇಶನು ಭಯದಿಂದ ನಡುಗಿ ಚಿಂತಿಸುತ್ತಿರಲು. ಪ್ರಭುವು— ಅವರೆಲ್ಲರಿಗೂ ಮಾಡಿದ ಆಹಾರವನ್ನೆಲ್ಲ ತರಿಸಿ ನಮಗೆ ನೀಡಿಸು ಎಲ್ಲವನ್ನೂ ನಾವು ಆರೋಗಿಸುವೆವು, ಎಂದು ನುಡಿಯುವನು. ಅದನ್ನು ಕೇಳಿದ ಬಸವೇಶನು ಅತ್ಯಂತ ಭಕ್ತಿಯಿಂದ ಲಕ್ಷದ ತೊಂಭತ್ತಾರು ಸಾವಿರದ ಜಂಗಮರಿಗಾಗಿ ಮಾಡಿಸಿದ್ದ ಭಕ್ಷ್ಯಭೋಜ್ಯಾದಿಗಳನ್ನೆಲ್ಲ ತರಿಸಿ ನೀಡಿಸುತ್ತಿರಲು, ಎಲ್ಲವನ್ನೂ ಪ್ರಭುವು ಆಕಾಶನೇ ಬಾಯ್ದೆರೆದಂತೆ ಸಲಿಸುತ್ತಿರುವನು. ಹಿಂದೆ ಪಾರ್ವತಿಯು ಶಿವಗಣಕ್ಕೆಲ್ಲ ಔತಣವನ್ನು ಮಾಡಿಸಿದಾಗ, ಅಂಗುಷ್ಠಗಣಪತಿಯೊಬ್ಬನು ಮುಂದಾಗಿ ಬಂದು ಎಲ್ಲವನ್ನೂ ಭುಂಜಿಸಿಬಿಡಲು, ಸಕಲ ಶಿವಗಣರೂ ಅವನೊಬ್ಬನ ತೃಪ್ತಿಯಿಂದಲೇ ತಾವೂ ಪರಿತೃಪ್ತರಾಗಿದ್ದಂತೆ ಈ ನಿರ್ಮಾಯಗಣೇಶನೇ ಅಲ್ಲಮನೆನಿಸಿಬಂದು, ಅದಷ್ಟನ್ನೂ ಒಬ್ಬನೇ ಸಲಿಸಿದುದರಿಂದ ಮುಳಿದುಹೋಗಿದ್ದ ಜಂಗಮರೆಲ್ಲರೂ ತೃ

ಪ್ತರಾಗುವರು. ಎನಲು. ಸಿದ್ಧರಾಮೇಶನು— ಗುರುವೆ! ಒಬ್ಬನಿಂದಿಷ್ಟು ಜನರಿಗೆ ತೃಪ್ತಿಯಾಗುವುದು ಹೇಗೆನ್ನಲು, ಚೆನ್ನಬಸವೇಶನು— ಹಿಂದೆ ದೂರ್ವಾಸನು ೧೫ಸಾವಿರ ಋಷಿಗಳನ್ನು ಕೂಡಿಕೊಂಡು ಧರ್ಮರಾಯನ ಬಳಿಗೆ ಬಂದು ಆಹಾರವನ್ನು ಕೇಳುವಲ್ಲಿ, ಕೃಷ್ಣನಿತ್ತಿದ್ದ ಅಕ್ಷಯಪಾತ್ರೆಯನ್ನು ತೊಳೆದ ನೀರನ್ನು ಕುಡಿಸಲು, ಅಷ್ಟುಮಂದಿಗಳಿಗೂ ಮೃಷ್ಟಾನ್ನ ಭೋಜನದಿಂದಾಗುವ ಪರಿತೃಪ್ತಿಯುಂಟಾಯ್ತೆಂದು ಪ್ರಸಿದ್ಧವಾಗಿರುವಲ್ಲಿ ಇಂಥ ಪ್ರಭುತೃಪ್ತಿಯಿಂದ ಶಿವಗಣತೃಪ್ತಿಯಾಗುವುದೇನಾಶ್ಚರ್ಯ? ಒಳಿಕ, ಹಾಗೆ ತೃಪ್ತಿಪಟ್ಟ ಜಂಗಮವರನ್ನೆಲ್ಲ ಒಸವೇಶನು ಕರಿಸಿ, ಬೇಡಿದುದನ್ನೆಲ್ಲ ಅವರಿಗೆ ಕೊಟ್ಟನು, ಸಕಲ ಗಣರೊಡನೆ ಪ್ರಭುವಿಗೆ ನಮಸ್ಕರಿಸಿ, ನಮಗೆ ಮುಂದೆ ಗತಿಯೇನೆಂದು ಪ್ರಾರ್ಥಿಸುವರು. ಆಗ ಪ್ರಭುವು ಅವರೆಲ್ಲರ ಐಕ್ಯಸ್ಥಲವರ್ತನಕ್ರಮವನ್ನು ಪರೀಕ್ಷಿಸಿ ತಿಳಿದು, ಮೆಚ್ಚಿ, ನಿಮಗೆ ಐಕ್ಯಪದವಿಯು ಅಳವಟ್ಟಿತೆಂದು ಅನುಗ್ರಹಿಸಿ, ಅವರು ಬಯಲಾಗುವ ರೀತಿಯನ್ನು ಅಪ್ಪಣೆಕೊಡಿಸಿ, ನಮ್ಮನ್ನು ತನ್ನೊಡನೆ ಕರೆದುಕೊಂಡು ಶ್ರೀಶೈಲಕ್ಕೆ ದಯೆಮಾಡಿಸುವನು. ಆ ಪರ್ವತದಲ್ಲಿ ಗೋರಕ್ಷ ಮೊದಲಾದ ಯೋಗಿಗಳಿಗೆ ಇಷ್ಟಾರ್ಥವನ್ನು ಕೊಟ್ಟು, ಮಹಾದೇವಿಯಕ್ಕನಿಗೆ ನಿರ್ವಾಣಪದವಿಯು ಮಾರ್ಗವನ್ನರುಹಲು, ಆಕೆಯು ಕದಳಿಯ ವನವನ್ನು ಹೊಕ್ಕು ಬಯಲಾಗುವಳು. ಪ್ರಭುವೂ ಅಲ್ಲೇ ಕದಳಿಯ ವನವನ್ನು ಪ್ರವೇಶಿಸಿ ಐಕ್ಯನಾಗುವನು. ಆ ಸುದ್ದಿಯನ್ನು ಒಸವೇಶನು ಕೇಳಿ, ಸಕಲ ಗಣಸಮೂಹಕ್ಕೂ ನಮಸ್ಕರಿಸಿ, ಶಾಲಿವಾಹನಶಕದ ೩೦೩೨ ರಕ್ತಾಕ್ಷಿ ಸಂವತ್ಸರದ ಫಾಲ್ಗುಣಶುದ್ಧ ೬ಕಾದಶಿ ಮಂಗಳವಾರ ಹಗಲು ೩೫ ಗಳಿಗೆಯಲ್ಲಿ ಸಂಗಮೇಶನಲ್ಲಿ ಐಕ್ಯಗೊಳ್ಳುವನು. ಇವರಿಬ್ಬರ ಐಕ್ಯದ ಸುದ್ದಿಯನ್ನೂ ಹಡಪದಪ್ಪಣ್ಣನು ಒಸವೇಶನ ಪತ್ನಿಯಾದ ನೀಲಾಂಬಿಕೆಗೆ ಬಿಸ್ನೈಸಲು, ಅವರೀರ್ವರೂ ತಮ್ಮಿಷ್ಟಲಿಂಗಗಳಲ್ಲೈಕ್ಯರಾಗುವರು. ಅನಂತರ ಇನ್ನುಕೆಲಶರಣರೂ ಐಕ್ಯರಾಗುವರು. ಆ ಒಳಿಕ ಬಿಜ್ಜಳನು ಒಸವೇಶನ ಪಟ್ಟವನ್ನು ನಮಗೆ ಕಟ್ಟುವನು. ಹಳ್ಳಯ್ಯ ಮಧುವಯ್ಯ ಎಂಬಿಬ್ಬರು ಬೇರೆ ಬೇರೆ ಕುಲದವರು ಬಾಂಧವ್ಯವನ್ನು ಬೆಳಸಿದರೆಂಬ ಕಾರಣದಿಂದ ಅವರನ್ನು ಆನೆಯ ಕಾಲಿಗೆ ಕಟ್ಟಿಸಿ ದೊರೆಯು ಎಳೆಯಿಸಲು, ಆ

ಶಿವದ್ರೋಹಿಯನ್ನು ಶಿಕ್ಷಿಸಬೇಕೆಂದು ಸಂಕಲ್ಪಿಸಿದ್ದ ಜಗದೇವಬೊಮ್ಮಯ್ಯಗಳು ನಮ್ಮಪ್ಪಣೆಯನ್ನು ಪಡೆದು ದೊರೆಯ ಬಳಿಯಲ್ಲಿ ದೀವಟಿಗೆಯ ಊಳಿಗದಲ್ಲಿರುವರು. ಇತ್ತ ನಾವು ಶಿವಶರಣರನ್ನೆಲ್ಲ ಕರಿಸಿ, "ನಾವಿನ್ನು ಈ ಶಿವದ್ರೋಹಿಯ ಪಟ್ಟಣದಲ್ಲಿರಬಾರದು, ಉಳುವೆಯ ಮೂಮನೆಗೆ ಹೋಗಬೇಕು" ಎಂದು ಹೇಳಲು, ಕೆಲವರು ಅದಕ್ಕೊಪ್ಪಿ ಬರುವರು. ಮತ್ತೆ ಕೆಲರು ಬರದೆ ಹೋಗುವರು. ಒಪ್ಪಿದವರನ್ನೆಲ್ಲ ಸಂಗಮೇಶನ ಪರ್ವಕ್ಕೆಂದು ನಾವು ಉಳುವೆಗೆ ಕಳುಹಿಕೊಟ್ಟು, ಆನೆ ಕುದುರೆ ಕಾಲಾಳು ಮೊದಲಾದ ಕಾವಲುಗಾರರನ್ನು ನಮ್ಮ ಅರಮನೆಗಿಟ್ಟುಕೊಂಡಿರುವೆವು. ಅತ್ತ ಜಗದೇವಬೊಮ್ಮಣ್ಣಗಳು ದೀವಟಿಗೆಯನ್ನು ಹಿಡಿದುಕೊಂಡು ಸಮಯವನ್ನು ನಿರೀಕ್ಷಿಸುತ್ತಿದ್ದು, ದೊರೆಯು ಸಭೆಯನ್ನು ವಿಸರ್ಜಿಸಿ ಪಂಜುಗಳ ಬೆಳಕಿನಿಂದ ಅರಮನೆಯನ್ನು ಹುಗುತ್ತಿರುವಲ್ಲಿ, ಇವರುಗಳು ಸುರಗಿಗಳಿಂದ ದೊರೆಯ ಹೊಟ್ಟೆಯನ್ನಿರಿದು ಕೊಂದು ಕೆಡಹಿ, ಶಿವದ್ರೋಹಿಯನ್ನು ಕೊಂದೆವೆಂದು ಆರ್ಭಟಿಸುತ್ತ, ನಮ್ಮರಮನೆಗೆ ಬಂದು, ತಾವು ಮಾಡಿದ ಕೆಲಸವನ್ನು ನಮಗೆ ತಿಳಿಸಿಬಿಟ್ಟು, ಸಂತೋಷದಿಂದ ಕೈಲಾಸಕ್ಕೆ ತೆರಳುವರು. ನಾವು ಹಸ್ತ್ಯಶ್ವಾದಿಗಳನ್ನು ಕೂಡಿಕೊಂಡು ಕಲ್ಯಾಣಪಟ್ಟಣವನ್ನು ಬಿಟ್ಟು ಹೋಗುತ್ತಿರಲು, ಹಿಂದಣಿಂದ ಅಳಿಯಬಿಜ್ಜಳನು ದಂಡನ್ನು ಕಟ್ಟಿಕೊಂಡು ಬಂದು, ನಮ್ಮನ್ನು ತಡೆಗೋಡೆಂಬಲ್ಲಿ ಅಡ್ಡಗಟ್ಟುವನು. ಮಡಿವಳಯ್ಯಗಳುಕೂಗಿನ ಮೂರಯ್ಯನವರು ಮೊದಲಾದ ನಮ್ಮ ಶಿವಶರಣರಿಗೂ ಅವನಸೇನೆಗೂ ಯುದ್ಧವಾಗುವುದು. ಪ್ರತಿಸೇನೆಯು ಅಳಿದು ಸೋಲುವುದು. ಅಳಿಯ ಬಿಜ್ಜಳನನ್ನು ಸೆರೆಹಿಡಿದು ತರುವರು. ಶಿವಶರಣರು ಪರವಧೆಯ ಮಾಡಿದುದನ್ನು ನಾಗಾಂಬಿಕೆಯು ಕೇಳಿ, ಮನದಲ್ಲಿ ಮರುಗಿ, ಅಳಿದಿರುವ ಸೇನೆಗೆ ಪ್ರಾಣದಾನ ಮಾಡಬೇಕೆಂತಲೂ, ಅಳಿಯ ಬಿಜ್ಜಳನನ್ನು ಬಂಧನದಿಂದ ಬಿಟ್ಟು ಬಿಡಬೇಕೆಂತಲೂ ನನಗೆ ಆಜ್ಞಾಪಿಸುವಳಲ್ಲದೆ, ಅತ್ತ ಕೈಲಾಸದಲ್ಲಿ ಜಗದೇವಬೊಮ್ಮಯ್ಯಗಳನ್ನು ಶಿವನು ಕಂಡು, ನೀವು ಬಿಜ್ಜಳರಾಜನನ್ನು ವಧಿಸಿಬಂದ ಕಾರಣದಿಂದ ಮರಳಿ ಭೂಲೋಕಕ್ಕೆಹೋಗಿ, ಶೂಲವನ್ನೇರಿಬರಬೇಕೆಂದು ಕಳುಹಿಕೊಡುವನೆಂತಲೂ, ಅವರು ಅದೇ ಮೇರೆ ಓರುಗಲ್ಲೆಂಬ ಪಟ್ಟಣದಲ್ಲಿ ವೀರಗುಂಡಬ್ರಹ್ಮರೆಂಬ ಹೆಸರಿನಿಂದ

ಹುಟ್ಟುವರೆಂತಲೂ, ಶಿವನು ಕಳ್ಳನ ವೇಷದಿಂದ ಬಂದು, ಅಲ್ಲಿನ ಗಣಪತಿ ರಾಯನರಮನೆಯಲ್ಲಿ ಕದ್ದು. ವೀರಗುಂಡಬ್ರಹ್ಮರ ಮರೆಹುಗಲು, ಅವನನ್ನು ರಾಜಭಟರಿಗೆ ಕೊಡದೆ ರಕ್ಷಿಸುವುದಕ್ಕಾಗಿ ವೀರಗುಂಡಬ್ರಹ್ಮರು ತಾವೇ ಶೂಲವನ್ನು ಹತ್ತಿ ಮುಕ್ತರಾಗುವರೆಂತಲೂ, ಅದುಕಾರಣ, ಶಿವಭಕ್ತರು ಇಂಥ ಹಿಂಸಾಕಾರ್ಯವನ್ನು ಮನಸ್ಸಿನಲ್ಲೂ ಯೋಚಿಸಬಾರದೆಂತಲೂ, ಬೋಧಿಸುವಳು. ಆಗ ನಾನು ಅಳಿಯ ಬಿಜ್ಜಳನನ್ನು ಬಂಧನದಿಂದ ಬಿಡಿಸಿ, ಅವನ ದಂಡಿಗೆಲ್ಲ ಪ್ರಾಣವನ್ನಿತ್ತು, ಹೋಗೆಂದು ಹೇಳುವೆನು. ಅವನು ಮುಂದೆ ನನಗೆ ಗತಿಯೇನೆಂದು ಕೇಳುವನು. "ನೀನು ಬಿಜ್ಜಳನಂತೆ ಶಿವದ್ರೋಹಿಯಾಗದೆ ಸದಾಚಾರದಲ್ಲಿರು" ಎಂದು ಬೋಧಿಸಿ, ಅವನಿಗೆ ಬಿಜ್ಜಳನ ಪಟ್ಟವನ್ನು ಕಟ್ಟಿಸಿ, "ಎಲೆ ದೊರೆಯೆ, ಈ ಪಟ್ಟಣವು ನಿನಗೆ ಇನ್ನು ೬೦ ವರ್ಷಗಳವರೆಗೂ ನಡೆವುದು. ಅಲ್ಲಿಂದಾಚೆಗೆ ಶಿವವರದಿಂದ ಪೀತಾಂಬರರಾಕ್ಷಸನು ತುರುಕರ ಜಾತಿಯಲ್ಲಿ ಹುಟ್ಟಿ ಬಂದು, ಅವನೂ ಅವನ ಸಜಾತಿಯವರೂ ಈ ದೇಶವನ್ನು ೩೫೦ ವರ್ಷಗಳವರೆಗೆ ಆಳುವರು. ಅದರಿಂದ ಈ ದೇಶವೆಲ್ಲ ತುರುಕಾಣ್ಯವೆನಿಸಿಕೊಳ್ಳುವುದು. ಅವರು ಈ ಕಲ್ಯಾಣಪಟ್ಟಣವನ್ನು ಹಾಳ್ಮಾಡಿ ಕಲುಬುಗಿರಿಯನ್ನು ಕಟ್ಟಿಸುವರು, ನಾವಿನ್ನು ಇರಬಾರದು, ಅದುಕಾರಣ ಹೋಗುತ್ತೇವೆ" ಎಂದು ಹೇಳಿ ಅವನನ್ನು ಕಳುಹಿಸಿಕೊಡುವೆವು. ಅಳಿಯ ಬಿಜ್ಜಳನು ರಾಜ್ಯವನ್ನು ಸುಖದಿಂದ ಆಳಿಕೊಂಡಿರುವನು. ನಾವು ಉಳುವೆಗೆ ಹೊರಡಲು ಸಿದ್ಧರಾದಾಗ, ಮಡಿವಳ ಮಾಚಯ್ಯನು ಹಿಪ್ಪರಿಗೆಪಟ್ಟಣಕ್ಕೆ ಹೋಗಿ, ತಮ್ಮ ಗುರುವಾದ ಲಿಂಗಣ್ಣಾರ್ಯರ ಪಾದದಲ್ಲಿ ಐಕ್ಯನಾಗುವನು. ನಾವು ಶಿವಶರಣರೊಡನೆ ಉಳುವೆಗೆ ಬಂದು ದೊಡ್ಡಪರ್ವವನ್ನು ಮಾಡಿಸುವೆವು. ಶರಣರೆಲ್ಲರೂ ತಮ್ಮಿಷ್ಟ ಬಂದಂತೆ ಬಯಲಾಗುವರು. ನಮ್ಮ ಸಮಯಾಚಾರದ ೧೫ ಸಾವಿರ ಜಂಗಮರನ್ನೂ, ಬಸವಣ್ಣನ ಸಮಯಾಚಾರದ ೫೬ ಸಾವಿರ ಮಾಹೇಶ್ವರರನ್ನೂ ಸಹ ಬಟ್ಟೆಗೆ ಹೊನ್ನುರಳಿಯ ಮರಕ್ಕೆ ಕಟ್ಟಿದ ತೊಟ್ಟಿಲಿನಲ್ಲಿ ಕುಳ್ಳಿರಿಸಿ ತೂಗುವೆವು. ಅವರೆಲ್ಲರೂ ಹಾಗೆಯೇ ನಿರವಯವವನ್ನೈದುವರು. ನಾವು ಉಳಿದಿದ್ದ ಚರಮೂರ್ತಿಗಳಿಗೆಲ್ಲ ನಮಸ್ಕರಿಸಿ, "ತಾವುಗಳು ನಿರಾಕಾರವನ್ನು ಧರಿಸುವಿರೊ? ಅಥವಾ ಸಾಕಾ

ರರಾಗಿಯೇ ಇರುವಿರೊ?" ಎಂದು ಕೇಳುವೆವು. ಅವರಾದರೊ—"ನೀವು ಮತ್ತೆ ಇಲ್ಲಿಗೆ ಬರುವವರೆಗೂ ನಾವು ನಮ್ಮ ಗುರುವಿತ್ತ ಪ್ರಸಾದವನ್ನು ಸೇವಿಸುತ್ತ ಕಲ್ಯಾಣಪಟ್ಟಣದಲ್ಲೇ ಗೂಢವಾಗಿರುವೆವು" ಎಂದು ಹೇಳಲು, ರುದ್ರಮುನಿ ಮೊದಲಾದ ಚರಮೂರ್ತಿಗಳಿಗೆ ನಾವು ನಮಸ್ಕರಿಸಿ ಕಳುಹಿಕೊಟ್ಟು, ಒಳಿಕ ನಾವು ಬರುವವರೆಗೂ ನೀನು ಸೊನ್ನಲಾಪುರಕ್ಕೆ ಹೋಗಿ ಶಿವಯೋಗಸಮಾಧಿಯಲ್ಲಿರೆಂದು ನಿನಗೆ ಹೇಳಿ ಕಳುಹಿಕೊಟ್ಟು, ಮರೆತುಬಂದಿರುವ ಹಾವುಗೆಯನ್ನು ತೆಗೆದುಕೊಂಡುಬಾರೆಂದು ರೇಚಣ್ಣನಿಗೆ ಹೇಳಿ ಕಳುಹಿಸಿ, ಅಕ್ಕ ನಾಗಾಂಬಿಕೆಯೊಡನೆ ಇತರ ಶರಣರನ್ನೆಲ್ಲ ನಿರವಯವವನ್ನೈದಿಸಿ. ಕಡೆಗೆ ನಾವು ಬಯಲಾಗುವೆವು. ಆಗ ಭೂಲೋಕದಲ್ಲುಳಿದ ಜಂಗಮರೆಲ್ಲ ನಾನಾದಿಕ್ಕುಗಳಿಗೆ ಚದರಿಹೋಗಲು, ಚರಪತಿಗಳು ಮಾತ್ರ ಕಲ್ಯಾಣದಲ್ಲುಳಿದು ಗೋಪ್ಯದಿಂದಿರುವರು. ಅವರಲ್ಲಿ ರುದ್ರಮುನಿ ತಂದೆಯು ತನ್ನ ಶಿಷ್ಯನಾದ ಮುಕ್ತಿಮುನಿಯನ್ನು ಕುರಿತು—ನೀನು ದೇಶಾಟನವನ್ನು ಮಾಡುತ್ತ, ಪರವಾದಿಗಳನ್ನು ಜೈಸಿ, ಶಿವಶರಣರನ್ನು ರಕ್ಷಿಸೆಂದು ಹೇಳಿಕಳುಹುವನು. ಅದೇಮೆರೆಗೆ ಮುಕ್ತಿಮುನಿಯು ಸಂಚರಿಸಿಕೊಂಡು, ಶ್ರೀಗಿರಿಯ ಸಿಹ್ಮಾಸನಕ್ಕೆ ಬಂದು ನಿಂತು ಭಕ್ತರನ್ನು ಪೊರೆಯುವನು. ಅಲ್ಲಿಂದ ೫೬ ದೇಶಗಳಮೇಲೂ ಗಣಾಚಾರಿಗಳನ್ನುನೇಮಿಸಿ ಕಳುಹಿ, ಸದಾಚಾರವನ್ನು ಬೋಧಿಸಿ, ತನ್ನಾಜ್ಞೆಯನ್ನುಮೀರಿ ನಡೆದವರಿಂದ ಅಪರಾಧಕಾಣಿಕೆಗಳನ್ನು ತರಿಸಿಕೊಳ್ಳುತ್ತ, ಪರವಾದಿಗಳನ್ನು ಸಹ್ಮರಿಸುತ್ತಲಿರುವನು. ಅತ್ತ ಮಲೆನಾಡಿನಲ್ಲಿ ಜೈನದೊರೆಗಳು ಪ್ರಬಲಿಸಿ, ಅಲ್ಲಿದ್ದ ವೀರಭದ್ರೇಶ್ವರನನ್ನುಕಿತ್ತು ನದಿಯಲ್ಲಿ ಬಿಸುಡಿದ್ದರು. ಈ ಸುದ್ದಿಯನ್ನು ಮುಕ್ತಿಮುನಿನಾಥನು ಕೇಳಿ, ಅಜಾತಭಿಕ್ಷಾವೃತ್ತಿಯೆಂಬ ತಮ್ಮ ಶಿಷ್ಯನಿಗೆ ತಮ್ಮ ಪಟ್ಟವನ್ನು ಕಟ್ಟಿ, ಕಾಣ್ಕೆಯನ್ನು ಕೊಟ್ಟು, ಇನ್ನೊಬ್ಬ ಶಿಷ್ಯನಾದ ದಿಗಂಬರಮುಕ್ತಿಮುನಿಯನ್ನು ಕರೆದು ನೀನು ಮಲೆನಾಡಿಗೆ ಹೋಗಿ ಪರವಾದಿಗಳನ್ನು ಸಹ್ಮರಿಸೆಂದು ಹೇಳಿ ಕಳುಹಿಸಿ, ತಾನು ಮಲ್ಲಿಕಾರ್ಜುನಲಿಂಗದಲ್ಲೈಕ್ಯನಾಗುವನು. ಗುರುವಿನಾಜ್ಞೆಯಂತೆ ದಿಗಂಬರಮುಕ್ತಿಮುನಿಯು ಇನ್ನು ಕೆಲ ಚರಪತಿಗಳನ್ನು ಕೂಡಿಕೊಂಡು, ಮಲೆನಾಡಿಗೆ ಬಂದು, ಖಾಂಡ್ಯದಲ್ಲಿ ನಿಂತು, ಅಲ್ಲಿನ ಜೈನರನ್ನೆಲ್ಲ ಸಹ್ಮರಿಸಿ, ಅವರ ಹಲ್ಲುಗಳನ್ನೆಲ್ಲ ಕಳೆಯಿ

ಸಿ, ಒಂದು ಮಣವೂ ಮೂರು ಕಂಡುಗದ ತೂಕವಿದ್ದ ಅಪ್ಪ ಹಲ್ಲುಗಳನ್ನೂ ಕಣಜದಲ್ಲಿ ತುಂಬಿಸುವನು. ಒಳಕ ಹೊಳೆಯಲ್ಲಿದ್ದ ವೀರೇಶನನ್ನು ತೆಗೆದು, ಬಾಳೆಯೆಲೆಯಮೇಲೆ ಅದನ್ನು ಮಲಗಿಸಿ, ಸಾಗಿಸಿತಂದು, ಹೊನ್ನೂರಿನ ಒಳಯಲ್ಲಿ ಒಂದು ಗುಡಿಯನ್ನು ಕಟ್ಟಿಸಿ, ಪ್ರತಿಷ್ಠಿಸಿ, ತಾನೂ ಅಲ್ಲೇ ನೆಲಸಿ, ಉಳಿದಿರುವ ದುರ್ಜನರನ್ನು ಸಹ್ಮರಿಸಬೇಕೆಂದು ಯೋಚಿಸಿ, " ಬಾಳೆಹಳ್ಳಿ " ಯೆಂಬ ಊರನ್ನು ಅಲ್ಲೇ ಕಟ್ಟಿಸಿ, ಸಿಹ್ಮಾಸನಾಸೀನನಾಗಿದ್ದು, ಕೆಲಕಾಲಾನಂತರ, ಚರಪತಿಗಳಲ್ಲಿ ಯೋಗ್ಯನಾಗಿ ತೋರಿದವನೊಬ್ಬನನ್ನು ಕರೆದು, ಆತನಿಗೆ ಪಟ್ಟವನ್ನು ಕಟ್ಟಿ, ಶಿವಶರಣರನ್ನು ಪಾಲಿಸುವುದೂ, ಪರವಾದಿಗಳನ್ನು ಜೈಸುವುದೂ, ನಿನಗೆ ಮುಖ್ಯಕಾರ್ಯವಾಗಿರಬೇಕೆಂದು ಬೋಧಿಸಿ, ತಾನು ಶಿವಯೋಗಸಮಾಧಿಯಲ್ಲಿರುವನು. ದಿಗಂಬರಮುಕ್ತಿಮುನಿನಾಥನ ಅಪ್ಪಣೆಯಂತೆಯೇ ಆ ಸುಕುಮಾರ ಚೆನ್ನಬಸವೇಶನು ನಡೆಯುತ್ತಿರಲು, ಚರಪತಿಗಳಲ್ಲೇ ಒಬ್ಬನಾದ ಚಿಕ್ಕಸಿದ್ಧೇಶ್ವರನು ಚರಸಮೂಹದೊಡನೆ ಸಂಚರಿಸಿಕೊಂಡು ಶಿವಗಂಗೆಗೆ ಹೋಗಿ, ಅಲ್ಲಿನ ಹೊನ್ನಾದೇವಿಯಿಂದ ಕಂಕಣವನ್ನು ಪಡೆಯುವನು. ಬಸವೇಶನು ಐಕ್ಯವಾದ ೬೦ ವರ್ಷಗಳನಂತರ ಅಳಿಯ ಬಿಜ್ಜಳನು ತುರುಕರೊಡನೆ ಕಾಯ್ದು ಸಾಯುವನು. ತುರುಕರು ಕಲ್ಯಾಣವನ್ನು ಕೆಡಿಸಿ, ತ್ರಿಪುರಾಂತಕ ದೇವಾಲಯದಲ್ಲಿ ಗೋವುಗಳನ್ನು ಕೊಂದು, ಧ್ವಜಸ್ತಂಭವನ್ನು ಮುರಿದು, ಅಲ್ಲಿ ಮಸೀದಿಯನ್ನು ಕಟ್ಟಿಸುವರು. ಕಲ್ಯಾಣದ ಪ್ರಜೆಗಳನ್ನೆಲ್ಲ ಸುಲಿದು ಸೂರೆಮಾಡುವರು. ಅವರಲ್ಲಿ ಕೇವಲ ಶಿವವ್ರತತತ್ಪರರಾದ ಗುಮ್ಮಣ್ಣ ಪೆಮ್ಮಣ್ಣರೆಂಬಿಬ್ಬರು ತಪ್ಪಿಸಿಕೊಂಡು, ದಕ್ಷಿಣಕಾಶಿಯೆಂದು ಪ್ರಸಿದ್ಧವಾದ ಶಿವಗಂಗೆಗೆ ಹೋಗಿ, ಅದರ ಒಳಯಲ್ಲಿ ಗುಮ್ಮಳಾಪುರವೆಂಬ ಹೆಸರಿನಿಂದ ಒಂದು ಪಟ್ಟಣವನ್ನು ಕಟ್ಟಿಸಿಕೊಂಡಿರುವರು. ಅದನ್ನು ಕಟ್ಟಿಸುವಾಗ ಅವರು ಹಸಿಯ ಮಣ್ಣಿನ ಗಡಿಗೆಯಲ್ಲಿ ಜಂಗಮಪಾದೋದಕವನ್ನು ತುಂಬಿ, ಹರಿವಾಣದಲ್ಲಿಟ್ಟು, ಹೊತ್ತುಕೊಂಡು ಆ ಪುರದ ಎಲ್ಲೆಗೆ ಸರಿಯಾಗಿ ತಿರುಗಿ ಬಂದು, ಮಧ್ಯದಲ್ಲಿ ಕಲಶವನ್ನು ನಿಕ್ಷೇಪಿಸಿ, "ಲಿಂಗವಿಲ್ಲದ ಭವಿಯು ಈ ಪುರವನ್ನು ಪ್ರವೇಶಿಸಿದರೆ, ಕೂಡಲೇ ಸಾಯಲಿ" ಎಂದು ಆಜ್ಞಾಪಿಸುವರು. ಆ ಪಟ್ಟಣವು ಅತ್ಯಂತವೈಭವದಿಂದ ಮೆರೆಯುತ್ತಿರುವು

ಮು. ಅಲ್ಲಿ ಧೂಳಪವಾಡದವರು ಮೊದಲಾದ ೬೪ ಕೀಲದವರೂ ಇರುವರು ಸದಾಚಾರವೇ ಪ್ರಾಣವಾಗುಳ್ಳ ವೀರಶೈವಭಕ್ತರು ಮಾಹೇಶ್ವರರು ಪ್ರಸಾದಿಗಳು ಮೊದಲಾದವರು ಅಲ್ಲಿ ಅನಂತವಾಗಿರುವರು. ಆ ಪ್ರಾಂತದಲ್ಲಿ ಧನವಂತರಾದ ಸೆಟ್ಟಿಗಳು ಹೆಚ್ಚಾಗಿರುವುದರಿಂದ "ಸೆಟ್ಟಿನಾಡು" ಎನಿಸಿಕೊಳ್ಳುವುದು. ಸಕಲಸೌಭಾಗ್ಯಕ್ಕೂ ನಿಧಿಯಾಗಿರುವುದರಿಂದ 'ಪ್ರಭುನಾಡು" ಎಂತಲೂ ಹೇಳಿಸಿಕೊಳ್ಳುವುದು. ಸಕಲ ವಿದ್ಯಾವೈದುಷ್ಯವುಳ್ಳ ಕರ್ನಾಟಕರಿಗೆ ನೆಲೆಯಾಗಿರುವುದರಿಂದ "ಕನ್ನಡನಾಡು" ಎಂತಲೂ ಕರಸಿಕೊಳ್ಳುವುದು. ಆ ದೇಶದಲ್ಲಿ ಸತ್ಯವ್ರತತತ್ಪರರಾದ ಜನರು ವಿಶೇಷವಾಗಿರುವುದರಿಂದ ಅದು ಉಳಿದ ದೇಶಕ್ಕೆಲ್ಲ ಶ್ರೇಷ್ಠವಾಗಿರುವುದು. ಆ ದೇಶದಲ್ಲಿ ಕಾಲಿವಾಹನಶಕ ಎಂಟುನೂರು ವರ್ಷ ಕಳೆದನಂತರ, ಒರುವ ವಿಳಂಬಿ ಸಂವತ್ಸರದ ಚೈತ್ರಶುದ್ಧ ದಶಮಿ ಗುರುವಾರದದಿನ ೯೨ ಗಳಿಗೆಯಲ್ಲಿ ಹೊಯ್ಸಳಬಲ್ಲಾಳನಿಗೆ ಪಟ್ಟವಾಗುವುದು. ಅವನಾಳಿಕೆಯಿಂದ ಆ ರಾಜ್ಯಕ್ಕೆ ಹೊಯ್ಸಳರಾಜ್ಯವೆಂದು ಹೆಸರಾಗುವುದು. ಅವನೂ ಸೇರಿ ೯ ಮಂದಿ ಬಲ್ಲಾಳರು ಅದನ್ನಾಳುವರು. ಅವರಲ್ಲಿ ವಿಷ್ಣುವರ್ಧನನೆಂಬುವನು ವೇಲಾಪುರದಲ್ಲಿ ಒಂದು ಗುಡಿಯನ್ನು ಕಟ್ಟಿಸಿ, ಬೈಲಿನಲ್ಲಿ ಬಿದ್ದಿದ್ದ ಒಂದು ವಿಷ್ಣುವಿಗ್ರಹವನ್ನು ತರಿಸಿ, ಅಲ್ಲಿ ಪ್ರತಿಷ್ಠೆ ಮಾಡಿಸಿ, ಅಲ್ಲಿ ಹೊಲೆಯ ಮೊದಲಾಗಿ ೧೮ ಜಾತಿಯವರೂ ಒಟ್ಟಿಗೆ ಸೇವೆಯನ್ನೊಪ್ಪಿಸುವಂತೆ ಏರ್ಪಡಿಸುವನು ಹಳಿಬೀಡೆಂಬ ಪಟ್ಟಣದಲ್ಲಿ ನರಸಿಹ್ಮಬಲ್ಲಾಳನ ಹತ್ತಿರ ಗಣಕ (ಮುತ್ಸದ್ದಿ) ರಲ್ಲಿ ಅಗ್ರಗಣ್ಯಾಧಿಕಾರವನ್ನು ವಹಿಸಿದ್ದ ಹರೀಶ್ವರದೇವನನ್ನು ಆ ಬಲ್ಲಾಳನು ಲೆಕ್ಕವನ್ನು ಕೇಳುವಲ್ಲಿ, ಆತನು ಕಡಿತವನ್ನು ಬಿಟ್ಟು ಕೈಯನ್ನು ಹೊಸಗುವನು. ಇದೇನಂದು ದೊರೆಯು ಕೇಳಲು, ಹಂಪೆಯ ವಿರೂಪಾಕ್ಷದೇವಾಲಯದಲ್ಲಿ ದೀಪವು ಸೊಂಕಿ ತೆರೆಯು ಸುಡುತ್ತಿದ್ದಿತು, ಅದನ್ನು ತಿಕ್ಕಿ ನಾನಾರಿಸಿದೆನೆಂದು ಹರೀಶ್ವರನು ಹೇಳುವನು. ರಾಜನು— ಹಂಪೆಯೆಲ್ಲಿ? ನೀನೆಲ್ಲಿ? ಎಂದು ಆಶ್ಚರ್ಯಪಟ್ಟು, ಕೂಡಲೇ ಒಬ್ಬ ಆಳನ್ನು ಹಂಪೆಗೆ ಕಳುಹಿಸಿ, ವಿಚಾರ ಮಾಡಿಸುವಲ್ಲಿ, ಅಲ್ಲಿನ ಅರ್ಚಕರು— ತೆರಸುಡುತ್ತಿದ್ದಾಗ ಹರಿಹರದೇವನು ಇಲ್ಲೇ ಇದ್ದು ಆರಿಸಿದನೆಂದು ಹೇಳ, ತೆರೆಯನ್ನೂ ತೋರಿಸುವರು. ಅದನ್ನು ತಿಳಿದುಬಂದು ಆಳು

ದೊರೆಗೆ ತಿಳಿಸುವಲ್ಲಿ, ಅವನು ಅತ್ಯಾಶ್ಚರ್ಯಗೊಂಡು—ಹರಿದೇವನೆ! ಇನ್ನು ಮುಂದೆ ನೀನು ಆ ವಿರೂಪಾಕ್ಷದೇವಾಲಯದಲ್ಲೇ ಲೆಕ್ಕವನ್ನು ಬರೆದು ಕೊಂಡಿರಬಹುದೆಂದು ಹೇಳಿ ಕಳುಹಿಕೊಡುವನು. ಅದರಂತೆ ಹರಿದೇವನು ಹಂಪೆಗೆ ಬಂದು, ಶಿವಗಣದರಗಳೆಯೆಂಬ ಗ್ರಂಥವನ್ನೂ, ಗಿರಿಜಾ ಕಲ್ಯಾಣವನ್ನೂ ರಚಿಸಿ, ವಿರೂಪಾಕ್ಷಲಿಂಗದಲ್ಲೈಕ್ಯನಾಗುವನು. ಆ ಹರೀಶ್ವರನ ಸೋದರಳಿಯನಾದ ಉಭಯಕವಿಶರಭಭೇರುಂಡ ಮೊದಲಾದ ನಾನಾಬಿರುದುಗಳುಳ್ಳ ರಾಘುವಾಂಕನು ಓರುಗಲ್ಲೆಂಬ ಪಟ್ಟಣಕ್ಕೆ ಹೋಗಿ, ಪರವಾದಿಗಳನ್ನೆಲ್ಲ ವಾದದಲ್ಲಿ ಗೆದ್ದು, ವೀರೇಶನಿಂದ ಪದಕವನ್ನು ಪಡೆದು, ವೇಲಾಪುರಿಗೆ (ಬೇಲೂರು) ಹಿಂತಿರುಗಿ ಬಂದು, ಅಲ್ಲಿ ದೇಹವನ್ನು ಬಿಟ್ಟು, ಸಮಾಧಿಸ್ಥಿತನಾಗುವನು. ಅಲ್ಲೇ ಪದ್ಮರಸನೆಂಬ ವೀರಶೈವನಾದ ಬ್ರಾಹ್ಮಣೋತ್ತಮನು ರಾಜಸಲ್ಲಿ ಮಂತ್ರಿಯಾಗಿರುವನು. ಅಲ್ಲಿಗೆ ತ್ರಿಭುವನತಾತಾಚಾರ್ಯನೆಂಬ ಶ್ರೀವೈಷ್ಣವನು ಬಂದು, ವಾದ ಮಾಡಲು, ಪದ್ಮರಸನು ತೃಣಪುರುಷನನ್ನು ಮಧ್ಯದಲ್ಲಿಟ್ಟು, ತನ್ಮುಖವಾಗಿ ವೈಷ್ಣವನನ್ನು ಗೆದ್ದು, ಶರಣಾಗತನಾದ ಆತನಿಗೆ ವೀರಶೈವದೀಕ್ಷೆಯನ್ನಿತ್ತು, ಶಿಷ್ಯನನ್ನು ಮಾಡಿಕೊಳ್ಳುವನು. ಬಿಟ್ಟಬಲ್ಲಾಳನು ಆ ಪದ್ಮರಸನನ್ನು ಕರೆಯಿಸಿ, ತನ್ನಲ್ಲಿಟ್ಟುಕೊಂಡು, ಬಂದು ಕೆರೆಯನ್ನು ಕಟ್ಟಿಸಬೇಕೆಂದು ಅವನ ವಶಕ್ಕೆ ಅಪರಿಮಿತವಾದ ಧನವನ್ನು ಕೊಟ್ಟು ಕಳುಹಿಸುವನು. ಆ ಹಣವನ್ನೆಲ್ಲ ಪದ್ಮರಸನು ಜಂಗಮಾರ್ಚನೆಗೆ ವೆಚ್ಚಮಾಡಿಬಿಡುವನು. ಕಡೆಗೆ ಶಿವಾನುಗ್ರಹದಿಂದ ದೊರೆಗೆ ದೊಡ್ಡಕೆರೆಯನ್ನು ರಚಿಸಿಕೊಡುವನು. ದೊರೆಯು ಆ ಕೆರೆಯ ಕೆಳಗಣ ಭೂಮಿಯನ್ನು ಮುಂದಿ ಬ್ರಾಹ್ಮಣರಿಗೆ ದಾನಮಾಡಿ, ನಿಮಗೆ ಯಾವ ಬಯಲಾಗಬೇಕೆಂದು, ಪದ್ಮರಸನನ್ನು ಕೇಳಲು, ನಮಗೆ ಈ ಮೂಬಯಲೇ ಸಾಕೆಂದುಹ್ಯೇಳಿ, ಬಯಲಿನಲ್ಲಿ ಬೆರೆದು ಬಯಲಾಗುವನು. ಪಾಲ್ಕುರಿಕೆಸೋಮಾರಾಧ್ಯನು ಕ್ರಮವಾಗಿ ೬೪ ಶೀಲಗಳನ್ನಾಚರಿಸಿ, ಕಳ್ಳಿಯಕ್ಕೆ ಬಂದು, ಅಲ್ಲಿ ಸಮಾಧಿಗೊಳ್ಳುವನು. ಮೋಪ್ರೂರಿನ ಭೈರವರಾಜನು ಶೌರ್ಯಶಾಲಿಯಾಗಿ ಮಲ್ಲಿಪಟ್ಟಣಕ್ಕೆ ಬಂದು, ಅಲ್ಲಿ ದೊರೆಯನ್ನು ಕಂಡು, ಅಲ್ಲಿನವರೆಲ್ಲರನ್ನೂ ಗೆದ್ದು, ಬೇಟೆಯ ನೆವಾಡದಿಂದ ಅಲ್ಲಿ ವೀರಶೈವದೀಕ್ಷೆಯನ್ನು ಪಡೆದು, ಸಾಸ


ಲಿಗೆ ಹೋಗಿ ಶಿವೈಕ್ಯನಾಗುವನು. ಆ ಸಾಸಲಿನಲ್ಲಿ ಸೋಮೇಶ್ವರಲಿಂಗ ದಿಂದ ಹಾಲು ಸುರಿಯುವುದು. ಅದರ ಸಮೀಪದಲ್ಲಿ ಕೆಂಡದಮಳೆ ಸುರಿಯು ವುದು. ಶ್ರೀಶೈಲದಮೇಲೆ ಸೂಳೆಯರು ಗುಡಿಸಲನ್ನು ಕಟ್ಟುವರು. ಅ ಲ್ಲಿ ಹೆಂಡವನ್ನು ಮಾರುವರು. ರಕ್ತದ ಹೊಳೆಯು ಹರಿಯುವುದು. ದಿಂ ಡುಗೂರಿನಲ್ಲಿ ನಾಗಾಭಕ್ತನು ಭಕ್ತಿಯಿಂದ ಜಂಗಮಸೇವೆಯನ್ನು ಮಾ ಡುತ್ತಿದ್ದು, ಅದಕ್ಕಾಗಿ ಸಾಲವನ್ನು ಮಾಡಿ, ಶಿವನಿಂದ ಹಣವನ್ನು ಪ ಡೆದು, ಸಾಲವನ್ನು ತೀರಿಸಿ, ಕೈಲಾಸವನ್ನು ಪಡೆಯುವನು. ಹರಿಭಕ್ತ ಕಂಜನೂರಾಂಡಿಯು ವೇದಗಳಿಗೆ ಭಾಷ್ಯವನ್ನು ಬರೆದು, ತನ್ನಳಿಯನನ್ನು ಕೊಳದಲ್ಲಿ ಮುಳುಗಿಸಿ, ಕಾಶಿಯ ಮಣಿಕರ್ಣಿಕೆಯಲ್ಲೇಳಿಸಿ, ರಂಗನಾಥ ನ ಕೈಯಿಂದ ದೇವಾಲಯದ ಬಾಗಿಲನ್ನು ತೆಗಿಸಿ, ಈ ತನ್ನ ಮಹಿಮೆಯಿಂ ದ ಲೋಕವನ್ನು ಬೆರಗುಮಾಡಿ, ಕಡೆಗೆ ಶಿವಾನುಗ್ರಹದಿಂದ ತನ್ನೂರಿನ ಎ ರಡುಕೇರಿಯ ಜನಗಳೊಡನೆ ಕೂಡಿ ಕೈಲಾಸವನ್ನೈದುವನು. ವೆಕ್ಕಲೂರಿ ನಲ್ಲಿ ನುಲಿಯಕಲ್ಲಪ್ಪನೆಂಬೊಬ್ಬನು ಹೊಲದಲ್ಲಿ ಬಿಣಗಿದ ನಾರನ್ನು ಎತ್ತು ತ್ತಿದ್ದ ತನ್ನಮಗನು ಸರ್ಪದಷ್ಟನಾಗಿ ಸಾಯಲು, ತಂದೆಯು ಜಂಗಮಾರ್ಚ ನೆ ಯನ್ನು ಮಾಡಿ, ಪಾದತೀರ್ಥಪ್ರಸಾದವನ್ನುತಂದು ಮಗನಿಗೆ ಕೊಟ್ಟು ಏಳಿ ಸುವನು. ಎಲ್ಲರೂ ಶಿವಕಾರುಣ್ಯದಿಂದ ಕೈಲಾಸವನ್ನು ಪೊಂದುವರು. ಕ ರಿಯೆಡೆಯೆಂಬೂರಿನಲ್ಲಿದ್ದ ಮುಮ್ಮಡಿಭಕ್ತನು ಬಂದ ಜಂಗಮರಿಗೆ ಮೃ ಷ್ಟಾನ್ನಭೋಜನವನ್ನು ಮಾಡಿಸಿ ವಸ್ತ್ರದಾನ ಮಾಡುತ್ತಿರಲು, ಒಬ್ಬ ಜಂಗಮನು ಬಂದು ಆ ಭಕ್ತನ ಪೆಂಡತಿಯುಟ್ಟಿರುವ ಸೀರೆಯ ಸೆರಗನ್ನು ಬೇಡಲು, ಆ ಭಕ್ತನು ಹರಿದು ಕೊಟ್ಟು, ಪಾದೋದಕವನ್ನು ತಳಿದು ಮತ್ತೆ ಸೆರಗನ್ನು ಬಳೆಯಿಸುವನು. ಪೆರುಮೊಗೆಯೆಂಬೂರಿನ ದೇವಮ್ಮನು ವಾರಕ್ಕೊಂದುದಿನ ಜಂಗಮರಿಗೆ ದಾಸೋಹವನ್ನು ಮಾಡುತ್ತಿರಲು, ಒಬ್ಬ ಜಂಗಮನು ಬಂದು ತನ್ನ ಹುಲಿಯ ಚರ್ಮವನ್ನು ಮಡಿಗಿರೆಂದು ಹೇಳಿ ಕೊಟ್ಟದ್ದು, ಮರಳಿ ಬಂದು ಕೇಳುವನು. ಆಗ ಆಕೆಯು ಹುಡುಕುವಲ್ಲಿ ಚರ್ಮವು ಇಲ್ಲದೆ ಹೊಗಲು, ತನ್ನ ಮೈಯ ಚರ್ಮವನ್ನೇ ಸುಲಿದುಕೊಡುವ ಳು. ಬಯಲಲಿಂಗಣ್ಣನು ಕೆಂಚೆಯಲ್ಲಿ ವಾದಮಾಡಿ ಚೀಟಿಯಲ್ಲಿ ಪಂಚಾ ಕ್ಷರಮಂತ್ರವನ್ನು ಬರೆದು, ತೂಗಿ, ಅದರ ಸರ್ವೋತ್ತಮತ್ವವನ್ನು ಸಿ

ದ್ದಾಂತಪಡಿಸುವನು. ಗುಜರಾತಿಯ ದೇಶಾರಾವ್ರತನು ತನ್ನ ಕೈ ಬೆರಲಿನ ಉಂಗುರದಲ್ಲಿದ್ದ ಬಸವನಿಗೆ ಬಂದು ರಾಶಿಯ ಕಡಲೆಯನ್ನೆಲ್ಲ ತಿನ್ನಿಸುವನು. ಪಟ್ಟೀಶ್ವರದ ವೀರಭದ್ರನಮುಂದೆ ಬಸವಪ್ಪನು ತನ್ನ ಇಬ್ಬರು ಮಕ್ಕಳ ಕತ್ತನ್ನು ತರಿದು ಮತ್ತೆ ಮುಂಡಕ್ಕೆ ಆ ರುಂಡಗಳನ್ನು ಹತ್ತಿಸಿ, ಪವಾಡ ದಿಂದ ಪರವಾದಿಗಳನ್ನು ಗೆಲ್ಲುವನು. ಪರವಾದಿಗಳು ಬಸವಪುರಾಣವಾ ರಾಯಣವನ್ನು ಹಾಸ್ಯಮಾಡಲು, ರಾಮಯ್ಯನು ಆ ಪುರಾಣಪುಸ್ತಕವನ್ನು ಬೆಂಕಿಗೆಹಾಕಿ, ಅದು ಸುಡದೆ ಯಿರಲು, ವಾದಿಗಳನ್ನು ಭಂಗಿಸುವನು. ರಾಜಮಹೇಂದ್ರದಲ್ಲಿ ವಿಪ್ರರು ತಮ್ಮವನೊಬ್ಬನು ಶಿವಭಕ್ತನಾದುದನ್ನು ಕಂಡು ನಿಂದಿಸಲಾಗಿ ಅವರ ಮನೆಗಳೆಲ್ಲವೂ ಉರಿದು ಈಭಕ್ತನ ಮನೆಯು ಮಾತ್ರ ಉಳಿವುದು. ಆಗ ಅವರು ಶಿವಭಕ್ತನಾದ ಬಂಡಾರಿ ಸೋಮಣ್ಣ ನಿಗೆ ಶಿಷ್ಯರಾಗಿ ಕಾರುಣ್ಯವನ್ನು ಪಡೆದು ಎಂದಿನಂತೆ ಬಾಳುವರು. ದಕ್ಷಿ ಣಾಪುರದಲ್ಲಿ ಶಿವಭಕ್ತರು ಕೊರತನ್ನು ಕುಣಿಸಿ, ಬರಡಾಕಳನ್ನು ಕರೆಯು ವರು, ಎಂದು ಅವರ ಮಹಿಮೆಯನ್ನು ಜೀಳೆಯೊಡೆಯರು ಕೊಂಡಾಡಲು, ಅದನ್ನು ತುರುಕರು ಕೇಳಿ, ಹಾಗಾದರೆ ನೀವೂ ಹಾಗೆ ಮಾಡಿ ತೋರಿಸಿರಿ ಎನ್ನಲಾಗಿ, ಆ ಜಡೆಯರು ಮರದ ಕುದುರೆಯನ್ನು ಹತ್ತಿ ಕುಣಿಸಿ. ಗೊ ಡ್ಡಿ ಹಸುವಿನಲ್ಲಿ ಹಾಲನ್ನು ಕರೆದು, ಮಾನನ್ನು ಚಂದ್ರಕಾಂತಲಿಂಗವನ್ನಾಗಿ ಮಾಡಿ, ಹೋಳಾದ ಲಿಂಗವನ್ನು ಬಂದುಗೂಡಿಸುವರು. ಕುರುಪನೆಂಬೂ ರಿನಲ್ಲಿ ಸೊಪ್ಪಿನ ಬಸಪ್ಪನೆಂಬುವನು ಪ್ರತಿದಿನವೂ ಕಲ್ಲಿನ ಬಸವನಿಗೆ ಸೊ ಪ್ಪನ್ನು ತಿನ್ನಿಸುತ್ತಿರಲು, ಅದನ್ನು ಅಲ್ಲಿನ ಸುರಿತಾಳನು ಕೇಳಿ, ಅವನನ್ನು ಹಿಡಿತರಿಸಿ, ಮನೆಗೆ ಕೂಡಿ ಬೆಂಕಿಯನ್ನಿಕ್ಕಿಸಲಾಗಿ, ಬಸವಪ್ಪನು ಆ ಮ ನೆಯಲ್ಲೇ ಇರದೆ ಸೊಪ್ಪಿನಂಗಡಿಯಲ್ಲಿರುವನು. ಅದನ್ನು ಸುರಿತಾಳನು ಕೇಳಿ ಆಶ್ಚರ್ಯಪಟ್ಟು, ಆ ಬಸಪ್ಪನಿಗೆ ಶರಣಾಗತನಾಗುವನು. ಬಿದರೆಯಲ್ಲಿ ಶಿವಕವೀಶನೆಂಬುವವನು ಸುರಿತಾಳನೊಡನೆ ವಾದಮಾಡಿ, ಸತ್ತ ಕುದು ರೆಗೂ, ಸುರಿತಾಳನ ಸತ್ತ ಮಗನಿಗೂ, ಹಾವ್ಕಚ್ಚಿ ಸತ್ತ ಇನ್ನೊಬ್ಬನಿಗೂ ಪ್ರಾಣದಾನ ಮಾಡುವನು. ಕೊಂಕಣದಲ್ಲಿ ಗೋಪೇಶ್ವರದ ನೀಲಕಂಠ ದೇವಾಲಯದಲ್ಲಿ ಶೀಲವಂತ ಸೂಜೆಕಾಯಕದ ವೀರಪ್ಪನು ಪರವಾದಿಗಳ ನ್ನೆಲ್ಲ ಮಹಿಮೆಯಿಂದ ಗೆದ್ದು ಎಲ್ಲರೂ ನೋಡಿ ಆಶ್ಚರ್ಯಪಡುವಂತೆ ಕೈಲಾ

ಸಕ್ಕೆ ಹೋಗುವನು. ಉಪ್ಪಲಿಕರಣ್ಣಪ್ಪನೆಂಬುವವನು ವಿಷ್ಣುಭಕ್ತನಾಗಿರಲು, ಶಿವನು ಕಾಲಿನಲ್ಲಿ ವೈಷ್ಣವಮುದ್ರೆಗಳನ್ನು ಹೊಂದಿ ವೇಷಾಂತರದಿಂದ ಅವನಲ್ಲಿಗೆ ಬಂದು ಶಿವಭಕ್ತನಾಗೆಂದು ಹೇಳಲು. ವೈಷ್ಣವರೆಲ್ಲವಾದಮೂಡಲಾಗಿ, ಕಡುಬೇಸಗೆಯಲ್ಲಿ ಮಳೆಯನ್ನು ಕರೆದು ಕೆರೆಗಳನ್ನೆಲ್ಲ ತುಂಬಿಸಿ, ವೈಷ್ಣವರನ್ನು ಬೆರಗುಗೊಳಿಸಿ, ಸೋಲಿಸಿ, ಶಿವಭಕ್ತರನ್ನು ಮಾಡುವನು. ಸುಗ್ಗಲೂರಿನಲ್ಲಿ ಕಾಟನಾಯಕನೆಂಬ ವಿಷ್ಣುಭಕ್ತನು ಬೇಟೆಗೆ ಹೋಗಿ ಬಂದು ವೊಲವನ್ನು ಬೆನ್ನಟ್ಟಿ ಹೋಗಲು ಅದು ಕೆರೆಯಲ್ಲಿ ಬಿದ್ದು ಮುಳುಗಿಕೊಳ್ಳುವುದು. ತಾನೂ ಅದರೊಡನೇ ಬಿದ್ದು ಹಿಡಿಯುವಲ್ಲಿ ಅದು ಲಿಂಗವಾಗಿರುವುದು. ಅದನ್ನು ತಾನು ಭಕ್ತಿಯಿಂದ ಧರಿಸಿಕೊಂಡು ಮಹಾಲಿಂಗದೇವಯ್ಯನೆಂದು ಹೆಸರು ಕರಿಸಿಕೊಂಡು ಕಡೆಗೆ ಆ ಲಿಂಗದಲ್ಲೇ ಐಕ್ಯನಾಗುವನು. ಅಸಗೋಡಮಲ್ಲಪ್ಪಯ್ಯನು ತನ್ನ ಹೋರಿಗೆ ಮುದ್ರೆಯನ್ನೊತ್ತಿ ಬಸವನನ್ನಾಗಿ ಬಿಟ್ಟರಲು, ಅದು ಕೆಲಕಾಲದ ಮೇಲೆ ಸಾಯಲು, ತಾನು, ತನ್ನ ಹೆಂಡತಿ, ಮಗ, ಮಗನ ಹೆಂಡತಿ ಸಹ ಅದರ ಜತೆಗೆ ಸಮಾಧಿಯಲ್ಲಿ ಕುಳಿತು ಬಸವನ ಪ್ರಾಣವನ್ನು ಬರಮಾಡುವನು. ಇವರೇ ಮೊದಲಾದ ಶಿವಶರಣರು ಅಲ್ಲಲ್ಲಿ ಹೀಗೆ ನಾನಾ ಮಹಿಮೆಗಳನ್ನು ತೋರಿಸಿ ಕೈಲಾಸವನ್ನು ಸೇರುವರು ಮುಂದೆ ಹೊಸಮಲೆಯಲ್ಲಿ ಕಂಪಲಸೆಂಬ ರಾಜಸಿರುವನು. ಅವನ ಕುಮಾರನಾದ ರಾಮನಾಥನು ತನಗಾಗಿ ಕುಮ್ಮಟವೆಂಬ ದುರ್ಗವನ್ನು ಕಟ್ಟಿಸಿಕೊಂಡು ವಾಸಮಾಡುತ್ತ ಸುತ್ತಣ ರಾಜರನ್ನೆಲ್ಲ ಗೆದ್ದು ಅಧಿರಾಜನಾಗಿ ಹೊಗಳಿಸಿಕೊಳ್ಳುತ್ತಿರುವನು ದಿಲ್ಲಿಯ ಖಾನನು ಇವನ ಏಳ್ಗೆಯನ್ನು ಕೇಳಿ ಲಕ್ಷದ ತೊಂಭತ್ತಾರುಸಾವಿರ ರಾವುತರನ್ನು ಕೂಡಿಕೊಂಡು ಆ ಕುಮ್ಮಟಕ್ಕೆ ಮುತ್ತಿಗೆಯನ್ನು ಹಾಕುವನು. ಆಗ ತಂದೆಮಕ್ಕಳುಗಳು ಅವರಮೇಲೆ ಕಾದು ಅಲ್ಲೇ ಮಡಿಯುವರು. ಅಲ್ಲಿಗೆ ಕುಮ್ಮಟವು ಹಾಳಾಗುವುದು. ಎಂದು ಸಿದ್ಧರಾಮೇಶನು ನುಡಿದನೆಂಬಲ್ಲಿಗೆ ಐವತ್ತನೆ ಅಧ್ಯಾಯವು ಸಂಪೂರ್ಣವು.



೧೦ ನೆ ಅಧ್ಯಾಯವು.



ನೂ ರೊ ಂ ದು ವಿ ರ ತ ರ ವ ತ ರ ಣ ವು .

ಎಲೆ ಸಿದ್ಧರಾಮೇಶನೆ, ಶಾಲೀವಾಹನ ಶಕ ೧೩೫೪ ರ ಬಳಿಕ ಬರುವ ಧಾತುಸಂವತ್ಸರದ ವೈಶಾಖ ಶುದ್ಧ ೬ ಯ ದಿವಸ ಹರಿಹರನಿಗೆ ಪಟ್ಟವಾಗುವುದು. ಅವನ ಸಂತತಿಯವರು ೧೪ ಪಟ್ಟದವರೆಗೂ ರಾಜ್ಯವನ್ನಾಳುವರು. ಆ ಹರಿಹರನ ವಂಶೋದ್ಭವನಾದ ರಾಜನೊಬ್ಬನು ಅನೆಗುಂದಿಯಲ್ಲಿರುತ್ತ, ಹಂಪೆಯ ವಿರೂಪಾಕ್ಷದೇವಾಲಯದ ಹತ್ತಿರ ವಿದ್ಯಾನಗರಿ (ವಿಜಯನಗರ) ಯೆಂಬ ಪ್ರಶಸ್ತವಾದ ಪಟ್ಟಣವನ್ನು ಕಟ್ಟಿಸುವನು. ಅತ್ತ ದೇವೇಂದ್ರನು ಕೈಲಾಸಕ್ಕೆ ವೈಭವದಿಂದ ಹೋಗುತ್ತ, ಅಲ್ಲಿದ್ದ ವಿಕಟರೂಪಿನ ಗಣಾಧೀಶ್ವರರನ್ನು ನೋಡಿ, ಇವರಿಗೆ ಶಿವಲಾಂಛನವೆಂಬುದು ಸ್ವಲ್ಪವೂ ಇಲ್ಲ, ಇವರ ರೀತಿಯೇ ಬಂದು ತೆರನಾಗಿದೆ, ಇವರೇನು ಭವಿಗಳೋ ಏನೋ ತಿಳಿಯದು, ಎಂದು ತನ್ನವರೊಡನೆ ನುಡಿವನು. ಆ ಮಾತನ್ನು ಗಣಾಧೀಶ್ವರರು ಕೇಳಿ, ಕೋಪವನ್ನು ತಾಳಿ, "ಎಲೆ ಸುರಪಾಲನೆ, ನೀನು ಮೂಢತನದಿಂದ ನಮ್ಮ ಮಹಿಮೆಯನ್ನರಿಯದೆ, ನಿಂದಾವಚನಗಳನ್ನಾಡಿದುದರಿಂದ ನೀನು ಭೂಮಿಯಲ್ಲಿ ಭವಿಯಾಗಿ ಹುಟ್ಟು" ಎಂದು ಶಾಪವಿತ್ತರು. ಆ ಸಂಗತಿಯನ್ನು ದೇವೇಂದ್ರನು ಶಿವನೊಡನೆ ಬಿನ್ನೈಸಿ ವ್ಯಸನಪಡಲು, ಗಣವರರ ಶಾಪವನ್ನು ತಿರುಗುವುದಕ್ಕಿಲ್ಲವಾದಕಾರಣ, ಪೌಷ್ಠದೇವೇಂದ್ರನೆಂಬ ಹೆಸರಿನಿಂದ ನೀನು ಭೂಮಿಯಲ್ಲಿ ಅವತರಿಸು ಎಂದು ಪರಶಿವನು ಹೇಳಿ, ಆ ಗಣಾಧೀಶನನ್ನು ಕುರಿತು, ನಿವೂ ಭೂಮಿಯಲ್ಲಿ ಅವತರಿಸಿ, ಶಿವಭಕ್ತಿಮಹತ್ವವನ್ನು ಪ್ರಕಾಶಪಡಿಸಿ ಒನ್ನಿರೆಂದು ಬೆಸಸಿ ಕಳುಹಿಸಿಕೊಡುವನು. ಇಂದ್ರನು ಆ ವಿದ್ಯಾನಗರಿಯಲ್ಲಿ ಹರಿಹರ ಬುಕ್ಕರಾಯರ ವಂಶದಲ್ಲಿ ಹುಟ್ಟಿ, ಪೌಷ್ಠದೇವೇಂದ್ರನೆಂಬ ಹೆಸರನ್ನು ತಾಳಿ ರಾಜ್ಯವಾಳುತ್ತಿರುವನು. ಗಣಾಧೀಶ್ವರರು ೧೦೦ ವಿರಕ್ತರಾಗಿ

ಭೂಮಿಯಲ್ಲಿ ಅವತರಿಸುವರು. ಅವರಲ್ಲಿ ಕರಸ್ಥಲದ ವೀರಣ್ಣೊಡೆಯರೆಂ ಬುವರೊಬ್ಬರಿರುವರು. ಅವರಿಗೆ ಅಕ್ಕಸಾಲೆನಾಗಯ್ಯನೆಂಬ ಶಿಷ್ಯನಿರುವ ನು. ಅವನು ಬಂದುವಿನ ವ್ಯಭಿಚಾರಕ್ಕಾಗಿ ಬಂದು ಮನೆಗೆ ನುಗ್ಗುವನು. ಮನೆಯವರು ಎಚ್ಚತ್ತು ಅವನನ್ನು ಹಿಡಿದುಕೊಳ್ಳುವರು. ಆಗ ಅವನಿಗೆಜ್ಞಾ ನೋದಯವಾಗಲು, ಪರಮವೈರಾಗ್ಯವನ್ನು ತಾಳಿ ಸಂಸಾರವನ್ನು ಪರಿತ್ಯ ಜಿಸುವನು. ಪೀಠವನ್ನು ಕರಡಿಗೆ ಕಳೆದುಬಿಸುಟು, ಲಿಂಗವನ್ನು ಕರಪೀಠದ ಲ್ಲೇ ಸದಾ ಧರಿಸಿಕೊಳ್ಳುವನು. ಮಯ್ಗೆ ಬೂದಿಯನ್ನು ಒಳದು ಒತ್ತಲೆ ಯಾಗಿ ಹುಚ್ಚನಂತೆ ತಿರುಗುತ್ತಿರಲು, ಊರಜನರೆಲ್ಲರೂ ನೋಡಿ ಆಶ್ಚರ್ಯಪ ಡುತ್ತಿರುವರು. ಬಳಿಕ ನಾಗಯ್ಯನು ತನ್ನ ಗುರುವಿದ್ದ ಊರಿಗೆ ಬರಲು, ಅವರು ಇದೇನು ವೈಚಿತ್ರ್ಯವೆಂದು ಕೇಳಲು, ತನಗೆ ಸಂಭವಿಸಿದ ವಿಷ ಯವನ್ನೆಲ್ಲ ಹೇಳಿ ಹಸ್ತಲಿಂಗವನ್ನು ತೋರಿಸುವನು. ಗುರುಗಳು ಆ ಲಿಂ ಗವನ್ನು ಮತ್ತೊಂದು ಪೀಠದಲ್ಲಿ ನಿಯೋಜಿಸಿ, ಬಾಹ್ಯಕ್ರಿಯೆಗಳು ಅಳವ ವರೆಗೂ ಈ ಲಿಂಗವನ್ನು ಪೀಠದಿಂದ ತೊಲಗಿಸಬೇಡವೆಂದು ಬೋಧಿಸಿ, ತನ್ನ ಪ್ರಸಾದವನ್ನು ಕೊಟ್ಟು, ಕಳುಹಿಕೊಡುವರು. ನಾಗಯ್ಯನು ದೇ ಶಾಂತರಗಳನ್ನೆಲ್ಲ ಸುತ್ತಿಕೊಂಡು ಮತ್ತೆ ವೀರಣ್ಣೊಡೆಯರ ಮನೆಗೆ ಬರುವ ನು. ಆಗಲವರು ನಾಗಯ್ಯನನ್ನು ಶಿಷ್ಯನೆಂದು ಭಾವಿಸದೆ, ಅರ್ಘ್ಯಪಾ ದ್ಯಾಚಮನಗಳನ್ನಿತ್ತು ಭಕ್ತಿಯಿಂದ ಅವನನ್ನು ಸತ್ಕರಿಸಿ, ಮಣಿಮಂಚದ ಲ್ಲಿ ಕುಳ್ಳಿರಿಸಿ, ತಾವು ಹೂವನ್ನೆತ್ತಿತರುವದಕ್ಕೆ ಹೋಗುವರು. ಇತ್ತ ನಾ ಗಯ್ಯನು ಮನೆಯೊಳಗೆ ಮೂರುತಾವಿನಲ್ಲಿ ಮಲವಿಸರ್ಜನೆಯನ್ನು ಮಾಡಿ, ವೀರಣ್ಣೊಡೆಯರ ಹೆಂಡತಿಯನ್ನು ಕುರಿತು– ಅಮ್ಮಾ ! ನಿನ್ನಗಂಡನು ಈ ಮಲಕ್ಕೆ ಬಳಗಾಗಿದ್ದರೆ ಇಲ್ಲೇ ಸುಖನಾಗಿರಲಿ, ಹಾಗಿಲ್ಲದಿದ್ದರೆ ನಮ್ಮೊ ಡನೆ ಬರಲಿ ; ಎಂದು ಹೇಳಿ, ಹೊರಟು ಹೋಗುವನು. ಬಳಿಕ ವೀರ ಣ್ಣೊಡೆಯನು ಬಂದು ಹೆಂಡತಿಯಿಂದ ಎಲ್ಲಸಂಗತಿಯನ್ನೂ ಕೇಳಿ, ಆಶ್ಚ ರ್ಯಪಟ್ಟು, ತಾನೂ ಘನವಿರಕ್ತಿಯಿಂದ ಎಲ್ಲವನ್ನೂ ತೊರೆದು, ಮನೆಯ ಬಿಟ್ಟು, ನಾಗಯ್ಯನನ್ನು ಅರಸಿಕೊಂಡು ಹೊರಡುವನು. ದಾರಿಯಲ್ಲಿ ಬಂ ದುಮೆಳಿಗೆ ತಲೆಯು ಕೂಡಲು ಸಿಕ್ಕಿ ಪರಮ ಶಿವಯೋಗದಿಂದ ನಾಗಯ್ಯ ನು ಅಲ್ಲೇ ನಿಂತಿರುವ್ವದನ್ನು ವೀರಣ್ಣೊಡೆಯರು ಕಾಣುವರು. ಆವನ

ಕೂವಲನ್ನು ಮೆಲ್ಲಗೆ ಬಿಡಿಸುವನು. ನಾಗಯ್ಯನು ಕಣ್ಣನ್ನು ಬಿಟ್ಟು ಒಡೆಯನನ್ನು ನೋಡಿ, ನೀನು ಸಂಸಾರವನ್ನು ಬಿಟ್ಟು ಬಂದೆಯಾ? ಛಲಾ! ಎಂದು ಹೊಗಳುವನು. ಅವರೀರ್ವರೂ ಕೂಡಿಕೊಂಡು ವಿದ್ಯಾನಗರಿಗೆ ಬರುವರು. ಅಲ್ಲಿ ಹುಚ್ಚರಾವುತನ ಮನೆಯಲ್ಲಿ ಲಿಂಗಾರ್ಪಿತದ ಭಿಕ್ಷೆಯನ್ನು ಕೇಳಲು, ಮನೆಯಾಕೆಯು ಭಸ್ಮವನ್ನು ತಂದು ಮುಂದಿರಿಸಿ, ತನ್ನನ್ನೇ ಪರಿಗ್ರಹಿಸಬೇಕೆಂದು ಬೇಡುವಳು. ಇವರು ಆಕೆಯನ್ನು ಮನೆಯ ಮುಂದೆಯೇ ಸಂಭೋಗಮಾಡುತ್ತಿರಲು, ಯಜಮಾನನು ಬಂದು ಇದನ್ನು ಕಂಡು ಕಡುಸಿಟ್ಟಿನಿಂದ ಕತ್ತಿಯನ್ನು ಹಿರಿದು ಇಬ್ಬರನ್ನೂ ಎಷ್ಟು ತಿವಿದರೂ ದೇಹದಲ್ಲಿ ಗಾಯವೂ ರಕ್ತವೂ ಕಾಣದಿರುವುದನ್ನು ನೋಡಿ, ಆಶ್ಚರ್ಯಪಟ್ಟು, ಕಡೆಗೆ ತಾನು ಮಾಡಿದಪರಾಧದಿಂದ ಭಯಗೊಂಡು ನಡುಗುತ್ತಿರುವನು. ಆಗ ಅವರಿಬ್ಬರೂ—ಎಲೆ ರಾವುತನೇ! ಹೆದರಬೇಡ, ನೀನೊಂದು ವಿಧದ ಭಿಕ್ಷೆಯನ್ನು ಕೊಟ್ಟೆ, ನಿನ್ನ ಹೆಂಡತಿಯು ಬಂದು ತೆರದ ಭಿಕ್ಷೆಯನ್ನಿತ್ತಳು; ಇವೆರಡೂ ನಮಗೆ ಬಂದೇಸವು, ಎಂದು ಹೇಳಿ ಅಭಯದಾನ ಮಾಡುವರು. ಬಳಿಕ ಆ ರಾವುತನು ಈ ಸಂಗತಿಯನ್ನೆಲ್ಲ ತನ್ನ ದೊರೆಯಾದ ಪ್ರೌಢದೇವೇಂದ್ರನಿಗೆ ಬಿನ್ನೈಸುವನು. ಅವನು ಭಕ್ತಿಯಿಂದ ಇವರಿಬ್ಬರನ್ನೂ ಬರಮಾಡಿ, ನಮಸ್ಕರಿಸಿ, ಗುರುಬಸವೇಶನರಮನೆಗೆ ಇವರನ್ನು ಶಿವಾರ್ಪಣಕ್ಕಾಗಿ ಕಳುಹಿಕೊಡುವನು. ಆ ಗುರುಬಸವದೇವರು ಪೂಜಾಸಾಮಗ್ರಿಗಳನ್ನು ಅಸಂತವಾಗಿಟ್ಟುಕೊಂಡು ಶಿವಾರ್ಚನೆಯನ್ನು ಮಾಡುತ್ತಿರಲು, ನಾಗಿದೇವಯ್ಯನು ಅದೆಲ್ಲವನ್ನೂ ನೋಡಿ, ಎತ್ತಿ ಬೆಸುಟು, ಚೆಲ್ಲಾಡಲು; ಬಸವದೇವರು ಅದೇಕೆಂದು ಕೇಳುವಲ್ಲಿ, ನಾಗಯ್ಯನು-ನಿನ್ನ ಮನೋಭಾವಗಳು ಲಿಂಗವನ್ನು ಬಿಟ್ಟು ಎಲ್ಲಿ ಹರಿದಾಡುತ್ತಿದ್ದವು? ಬಾಹ್ಯಾಡಂಬರಗಳಿಂದೆಲ್ಲ ಬರುವ ಫಲವೇನು? ಅರ್ಪಣಾನುಸಂಧಾನ ಕ್ರಮವನ್ನರಿಯದೆ ಬರಿಯ ಡಾಂಭಿಕಪೂಜೆಯನ್ನು ಎಷ್ಟು ದಿನ ಮಾಡಿದರೂ ವ್ಯರ್ಥವು, ಎಂದು ಹೇಳುವನು. ಆಗ ಬಸವದೇವರು ಜ್ಞಾನೋದಯಗೊಂಡು, ನಾಗಿದೇವನಿಗೆ ನಮಿಸಿ, ವಿರಕ್ತಿಯಿಂದ ಅವರೊಡನೆಯೇ ಮಧುವನದ ಕಡೆಗೆ ಹೊರಡುವನು. ಅಲ್ಲಿ ಬಹುಮಂದಿ ವಿರಕ್ತರು ಸೇರಿ ತೆಂಗಿನಮರದಮೇಲಿರುವ ಎಳನೀರನ್ನು ನೋಡಿ, ತಮ್ಮ ಲಿಂಗಕ್ಕೆ

ಅವು ಅರ್ಪಿತವಾದುವೆಂದು ಹೇಳಲು, ತೋಟಗಾರನು ಅವರಿಷ್ಟವನ್ನು ತಿಳಿದು, ಬೇಕಾದಷ್ಟು ಎಳನೀರುಗಳನ್ನು ಕಿತ್ತುಕೊಡುವನು. ಎಲ್ಲರೂ ತಾವು ಮನವಿಕ್ಕಿದ್ದವುಗಳ ಮೊಗಳನ್ನು ತೆಗೆಯುವಲ್ಲಿ, ನೀರುತುಂಬಿರುವುವು. ನಾಗಿದೇವನು ನೋಡಿದ್ದ ಎಳನೀರಿನಲ್ಲಿ ಮಾತ್ರ ನಿರೇ ಇರುವುದಿಲ್ಲ. ಆಗ ವೀರಣ್ಣೊಡೆಯರು ನೋಡಿ, ನಮ್ಮಂತೆ ಕ್ರಿಯಾಸ್ಥಲದಿಂದ ಶಿವನಿಗೆ ಸಮರ್ಪಿಸಿ ಯಾವುದೊಂದನ್ನೂ ಪರಿಗ್ರಹಿಸುವುದೊಂದು ರೀತಿ; ಅದಿಲ್ಲದಿದ್ದರೆ ಈ ನಾಗಿದೇವನಂತೆ ಕ್ರಿಯೆಯನ್ನುಳಿದು ಹೀಗೆ ಅರ್ಪಣಾನುಸಂಧಾನದಿಂದ ನಡೆಯುವುದೊಂದುರೀತಿ. ಇವೆರಡು ರೀತಿಯನ್ನೂ ಬಿಟ್ಟು ತಾಯಿ ತಪ್ಪಿದ ಕರುವಿನಂತೆ ಕಳವಳಗೊಳ್ಳುವುದು ನಡೆಯಲ್ಲವೆಂದು ಹೇಳಿ, ಷಟ್ಸ್ಥಲಾಚರಣರಹಸ್ಯವನ್ನು ಅಲ್ಲಿದ್ದ ವಿರಕ್ತರಿಗೆಲ್ಲ ಬೋಧಿಸಿ, ನಾಗಿದೇವನೂ ವೀರಣ್ಣೊಡೆಯರೂ ಶ್ರೀಶೈಲಕ್ಕೆ ತೆರಳುವರು. ವೀರಣ್ಣೊಡೆಯರು ನಾಗಿದೇವನನ್ನು ಕುರಿತು ನಾವಿನ್ನು ನಿರ್ಯಾಣವನ್ನೈದಬೇಕೆಂದು ಹೇಳಲು, ಆತನು ಮೋಹಿನೀಗಜವಿರುವ ಸ್ಥಲಕ್ಕೆ ಹೋಗಿ, ತನಗೆ ಹಗ್ಗವನ್ನು ಕಟ್ಟಿ ಮೇಲಕ್ಕೆ ಪತ್ತಿ, ಗುರುವೇ ನೋಡೆಂದು ಹೇಳಲು, ವೀರಣ್ಣೊಡೆಯರು ಹಗ್ಗಗಳೆಲ್ಲ ಸುವರ್ಣಮಯವಾಗಿರುವುವೆಂದು ನುಡಿವರು. ಹಾಗಾದರೆ, ನೀವು ಇನ್ನು ಕೆಲಕಾಲ ರಾಜ್ಯಪ್ರಜೆಯನ್ನು ಕೈಕೊಳ್ಳುತ್ತಿರಬೇಕೆಂದು ಹೇಳಲು, ಮಗನೇ ಅನಂತರ ನಾನು ಮುಕ್ತನಾಗುವುದು ನಿಜವೆ? ಎನ್ನಲು, ಅವಕ್ಕೆ ಸಂಶಯವಿಲ್ಲ, ನಾನೇ ನೀವಿದ್ದಲ್ಲಿಗೆ ಒಂದು, ಎಲ್ಲರೂ ಕಾಣುವಂತೆಯೇ ನಿಮಗೆ ನಿರವಯವವನ್ನೈದಿಸುವೆನು, ಎಂದು ಹೇಳಿ, ನಂಬುಗೆಗೊಟ್ಟು ಕಳುಹಿಸಿ, ತಾನು ಬಯಲಾಗುವನು. ಇತ್ತ ಬಡೆಯರು ಚಿಂತೆಯಿಂದ ವಿದ್ಯಾನಗರಿಗೆ ಬರಲು, ಪ್ರೌಢದೇವೇಂದ್ರನು ತನ್ನ ಮಗಳನ್ನು ಅವರಿಗೆ ಕೊಟ್ಟು ಮದುವೆ ಮಾಡುವನು. ನಾಗಿದೇವನು ಬರುವವರೆಗೂ ನಾವು ಈ ಪುರವನ್ನು ಬಿಟ್ಟು ಹೊರಗೆ ಹೋಗಬಾರದೆಂದು ನಿರ್ಧರಿಸಿ, ಶಿವಾನುಭವಪ್ರಸಂಗದಲ್ಲಿ ಬಡೆಯರು ಕಾಲಯಾಪನೆ ಮಾಡುತ್ತಿರುವರು. ಒಂದು ದಿನ ಬಡೆಯರು ರಾಜನೊಡನೆ ಹಂಪೆಯ ತುಂಗಭದ್ರಾನದೀತೀರದಲ್ಲಿ ಒಂದು ನಿಂತಿರಲು, ಮೀನ್ಬಲಿಗನೆಂಬ ಹಕ್ಕಿಯು ಆಕಾಶದಲ್ಲಿ ಹಾರುತಿದ್ದು, ನೀರಿನಲ್ಲಿ ಮುಳುಗಿ, ಒಂದು ಮೀನನ್ನು

ಕಚ್ಚಿ ಮೇಲಕ್ಕೆ ಹಾರುವಾಗ, ಮೀನು ಕಳೆದು ನೀರಿಗೆ ಬೀಳಲು, ಹಕ್ಕಿಯು ಒಡನೆಯೇ ದುಮಿಕಿ ಅದೇ ಮೀನನ್ನು ಹಿಡಿದುಕೊಳ್ಳಲು, ಹಕ್ಕಿಯ ಚಟುವಟಿಕೆಗೆ ಒಡೆಯರು ಮೆಚ್ಚಿ,ತಮ್ಮ ಕೈಯಲ್ಲಿದ್ದ ರನ್ನದ ಒಂದು ಕಟಕವನ್ನು ತೆಗೆದು ಆ ಹಕ್ಕಿಗಾಗಿ ಎಸೆವರು. ಅದು ನೀರಿನಲ್ಲಿ ಮುಳುಗುವುದು. ದೊರೆಯು ಕಂಡು ಇದೇಕೆ ಕಟಕವನ್ನು ಬಿಸುಡಿದೆ ? ಎಂದು ಕೇಳಲು, ಹಕ್ಕಿಗಾಗಿ ಮೆಚ್ಚಿ ಕೊಟ್ಟೆನೆಂಬರು. ಎಲ್ಲಿ ಬಿಸುಡಿದೆ? ಯೆನ್ನಲು, ಮತ್ತೊಂದುಕಟಕವನ್ನೂ ಕಳೆದು ಮೊದಲು ಬಿಸುಡಿದ್ದ ಸ್ಥಲಕ್ಕೇ ಅದನ್ನೂಇಟ್ಟು ಅದೋ ಅಲ್ಲಿ ಎಂದು ತೋರಿಸುವರು. ದೊರೆಯು ಬೆಲೆಯುಳ್ಳ ರತ್ನದ ಕಟಕಗಳು ಹಾಳಾದುವೆಂದು ವ್ಯಸನಪಡುತ್ತಿರಲು, ಒಡೆಯರು— ರಾಜನೆ! ಅದೇಕೆ ಚಿಂತಿಸುತ್ತೀಯೆ? ನಿನ್ನ ಕಟಕಗಳು ಬೊಕ್ಕಸದಲ್ಲೇ ಇವೆ, ನೋಡಿಸು, ಎನ್ನಲು, ದೊರೆಯು ಹುಡುಕಿಸುವಾಗ ಪೆಟ್ಟಿಗೆಯಲ್ಲೇ ಆ ಕಟಕಗಳಿರುವುವು. ದೊರೆಯು ಬೆರಗಾಗುವನು. ಅಗಸರ ಹೊನ್ನಯ್ಯನು ಎರಡು ಚಂದ್ರಗಾವಿಯ ಹಚ್ಚಡವನ್ನು ಮಡಿಮಾಡಿ, ವೀರಣ್ಣೊಡೆಯರಿಗೊಂದನ್ನೂ ಅವರ ಹೆಂಡತಿಗೊಂದನ್ನೂ ಕೊಡುವನು. ಅಕೆಯು ಹಚ್ಚಡವನ್ನುಟ್ಟು ತಂದೆಯಾದ ದೊರೆಯ ಬಳಿಗೆ ಹೋಗಲು, ತನ್ನ ಈ ಹಚ್ಚಡವನ್ನು ಅಗಸನು ಅಕಗೆ ಹೇಗೆ ಕೊಟ್ಟನೆಂದು ಕರೆಯಿಸಿ ಕೇಳುವಲ್ಲಿ, ಪ್ರಭುವೇ ತಮ್ಮ ಹಚ್ಚಡವು ಬೊಕ್ಕಸದಲ್ಲೇ ಇದೆ, ನನ್ನ ಗುರುವಿನ ಒಡವೆಯನ್ನು ಗುರುವಿಗೆ ಒಪ್ಪಿಸಿದೆನು, ಎಂದು ಅಗಸನು ನುಡಿವನು. ದೊರೆಯು ನೋಡಿಸುವಲ್ಲಿ ಹಚ್ಚಡವು ಬೊಕ್ಕಸದಲ್ಲೇ ಇರುವುದು. ಹೊನ್ನಯ್ಯನೆ, ನೀನು ಸಾಧಾರಣನಾದ ಅಗಸನಲ್ಲ; ಮಹಾಮಹಿಮ; ಎಂದು ದೊರೆಯು ಕೊಂಡಾಡಲು, ತನ್ನ ಸ್ವರೂಪವು ಪ್ರಕಟವಾಯ್ತೆಂದು ತಿಳಿದು, ಹೊನ್ನಯ್ಯನು ಬಯಲಾಗುವನು. ಮಿಡಿಬಿಲ್ಲಶಾಂತಿದೇವನು ಬಿಲ್ಲಿಗೆ ತನ್ನ ಲಿಂಗವನ್ನು ಸೇರಿಸಿ, ಎಲ್ಲರಿಗೂ ಹೊಡೆಯುವುದಕ್ಕೆ ಹೋಗುವನು. ಇವನನ್ನು ಹುಚ್ಚನೆಂದು ತಿಳಿದು ಇತರರು ಓಡುವರು. ಹೀಗೆಯೇ ವೀರಣ್ಣೊಡೆಯರ ಬಳಿಗೆ ಇವನು ಹೋಗಲು, ಅವರು— "ಲಿಂಗಾನುಸಂಧಾನವಾಯಿತು, ಹೊಡೆಯುಬಹುದು" ಎನ್ನಲು, ಆತನು ಲಿಂಗವನ್ನು ಬಿಲ್ಲಿನಿಂದ ಪ್ರಯೋಗಿಸಿ, ಅದರೊಡನೆಯೇ ಪ್ರಾಣವನ್ನೂ ಬಿಡುವನು. ಹೀಟ

ಯಮರುಳನೆಂಬುವನು ಹುಂಜಗಳನ್ನು ಕಾಯಿಸುತ್ತ, ಗೆದ್ದುಕೊಂಡ ಕೋಳಿಗಳನ್ನು ಎತ್ತಿಕೊಂಡು ಹೋಗುತ್ತಿರಲು, ವೀರಣ್ಣೊಡೆಯರು ಬಂದು ನೋಡುವಾಗ, ಕೋಳಿಗಳನ್ನೆಲ್ಲ ಈತನು ಬಯಲು ಮಾಡುವನು. ನಿನ್ನ ರಹಸ್ಯವು ನನಗೆ ತಿಳಿಯುವುದೆಂದು ಒಡೆಯರು ನುಡಿಯಲು, ಮರುಳಯ್ಯನು ನಿರ್ಮಾಣವನ್ನೈದುವನು. ತಗರ ಕಾಳಗವನ್ನು ಮಾಡಿಸುತ್ತಿದ್ದ ಪ್ರಭುವು ಅಂಗಡಿಗಳಿಗೆ ನುಗ್ಗಿ ಕಜ್ಜಾಯವನ್ನು ಎತ್ತಿ ತಿಂದು ಅಂಗಡಿಯವರಿಂದ ಹೊಡೆಯಿಸಿಕೊಳ್ಳುತ್ತಿರುವನು. ವೀರಣ್ಣೊಡೆಯರು ಬಂದು "ಅವನನ್ನು ಹೊಡೆಯಬೇಡಿರಿ, ಆತನು ಮಹಾಶಿವಯೋಗಿ" ಎಂದು ಹೇಳಲು, ತನ್ನ ಸ್ವರೂಪವು ಬಯಲಾಯ್ತೆಂದು ಯೋಚಿಸಿ, ಪ್ರಭುವು ಬಯಲಾಗುವನು. ಬಾಲಲಿಂಗಣ್ಣನು ವೀರಣ್ಣೊಡೆಯರ ಮನೆಗೆ ಬಂದು ಭಿಕ್ಷೆಯನ್ನು ಬೇಡಲು, ಮನೆಯವರು ಅವನನ್ನು ಒಳಕ್ಕೆ ಕರೆದುಕೊಂಡು ಹೋಗಿ ಮಂಚದಮೇಲೆ ಮಲಗಿಸಿ, ನಿದ್ದೆಯಲ್ಲಿದ್ದಾಗ, ಅವನ ಕೈಯಲ್ಲಿದ್ದ ಲಿಂಗವನ್ನು ಲಿಂಗಣ್ಣೊಡೆಯರು ಹಾಸ್ಯಕ್ಕಾಗಿ ತೆಗೆದುಕೊಳ್ಳುವರು. ಊಟಕ್ಕೆ ಕುಳಿತಾಗ ಬಾಲಲಿಂಗಣ್ಣನನ್ನು ಏಳಿಸುವುದಕ್ಕೆ ಹೋಗಲು, ಲಿಂಗಣ್ಣನ ಪ್ರಾಣವು ಅಳಗು, ಡಿಂಬವು ಮಾತ್ರವಿರುವುದು. ಆಗ ಒಡೆಯರು ಉಳಿದ ವಿರಕ್ತರನ್ನೆಲ್ಲ ಕೂಡಿಕೊಂಡು ಬಂದು, ಮೊದಲು ತಾವು ತೆಗೆದು ಕೊಂಡಿದ್ದ ಲಿಂಗವನ್ನು ಅವನ ಅಂಗೈಯಲ್ಲಿರಿಸಲು, ಲಿಂಗಣ್ಣನು ಕಣ್ದೆರೆದು ಏಳುವನು. ಊಟಕ್ಕೇಳೆಂದು ಅವರು ಕರೆಯಲು, ನಾನು ಆಗಳೇ ನಿಮ್ಮೊಡನೆ ಉಂಡೆನೆಂದು ನುಡಿಯುವನು. ಅದು ಹೇಗೆ ಉಂಡೆ? ಯೆಂದು ಒಡೆಯರು ಕೇಳಲು, ಅವರು ಊಟವಾಡಿದ ಪದಾರ್ಥಗಳ ಹೆಸರು ರುಚಿ ಮೊದಲಾದ ಗುಣಾವಗುಣಗಳನ್ನೆಲ್ಲ ಹೇಳುವನು. ಆಗ ಅವನ ಪ್ರಾಣಲಿಂಗಾನುಸಂಧಾನಕ್ರಮವನ್ನು ಒಡೆಯರು ತಿಳಿದು, ಕೊಂಡಾಡಲು, ನಾಗಿದೇವನು ಅವರಿಬ್ಬರನ್ನೂ ಆಗ ನಿರವಯವಗೊಳಿಸುವನು. ಇನ್ನೊಬ್ಬ ವಿರತನು ಕಾಲಿನ ಹಗ್ಗಕ್ಕೆ ಲಿಂಗವನ್ನು ಕಟ್ಟಿಕೊಂಡು ಮಲಗಿರುವನು. ಪ್ರೌಢರಾಯನು ನೋಡಿ ಆ ಲಿಂಗವನ್ನು ಬಿಚ್ಚಿಸಲು, ಮಲಗಿದ್ದವನ ಪ್ರಾಣವೇ ಹೋಗುವುದು. ದೊರೆಯು ಬೆಚ್ಚಿ, ಮತ್ತೆ ಲಿಂಗವನ್ನು ಹಗ್ಗಕ್ಕೆ ಕಟ್ಟಿಸಲು, ಪ್ರಾಣ ಬರುವುದು. ಆಗ ತನ್ನ ಸ್ಥಿತಿಯು ಭೂಜನಕ್ಕೆ

ಗೊತ್ತಾಯ್ತೆಂದು ಯೋಚಿಸಿ ವಿರತನು ಬಯಲಾಗುವನು. ಒತ್ತಲೇಶ್ವರನೆಂಬ ಶಿವಯೋಗಿಯೊಬ್ಬನು ಕೃಶನಾಗಿ ಗುಹೆಯಲ್ಲಿ ತಪಸ್ವಿಯಾಗಿರಲು, ದೊರೆಯು ಪದ್ಮಾವತಿಯೆಂಬ ವಾರಾಂಗನೆಗೆ ಆ ಯತಿಯನ್ನು ತೋರಿಸಿ ನೀನು ಈತನನ್ನು ವರಿಸುವೆಯಾ? ಎಂದು ಕೇಳಲು, ಈತನನ್ನು ವಶ ಮಾಡಿಕೊಂಡು ಮಗನನ್ನು ಪಡೆದು ಬರುತ್ತೇನೆಂದು ಆಕೆಯು ಹೇಳಿ, ಅದರಂತೆಯೇ ಯತಿಯನ್ನು ವಶಮಾಡಿಕೊಂಡು, ಅವನಿಂದ ಮಗನನ್ನು ಪಡೆವಳು. ಒಂದು ದಿನ ವಿರೂಪಾಕ್ಷ ರಥೋತ್ಸವಕ್ಕೆ ಪದ್ಮಾವತಿಯು ಆ ತನ್ನ ನಾಯಕನೊಡನೆ ಕೂಡಿ ಬರುವಳು. ಆಗ ಮಗನನ್ನು ಅವನ ಕೈಗೆ ಕೊಟ್ಟು, ಅಲ್ಲಿಗೆ ಬಂದಿದ್ದ ದೊರೆಗೆ ತನ್ನ ವಲ್ಲಭನನ್ನು ತೋರಿಸಿ, ಈತನೇ ಬತ್ತಲೆಯೋಗೀಶ್ವರನೆಂದು ಹೇಳುವಳು. ಆಗ ಯತಿಯು ಇನ್ನು ನಾವಿಲ್ಲಿರಬಾರದೆಂದು ಮಗುವನ್ನು ಆಕಾಶಕ್ಕೆಸೆದು ತಾನೂ ಬಯಲಾಗುವನು. ಪೌಢರಾಯನ ಗುರುವಾದ ಬಸವೇಶನು ವಾದದಲ್ಲಿ ಗೆದ್ದು ಅಲ್ಲಿನ ಶಾರದಾಪೀಠವನ್ನು ಏರಿ, ಅಲ್ಲಿಂದ ರಾಜನರಮನೆಗೆ ಬಂದು ಸುಖವಾಗಿರುತ್ತಿರಲು, ಒಬ್ಬ ಯೋಗೀಶನು ಆಕಾಶಸಂಚಾರಿಯಾಗಿ ದೊರೆಯ ಕಣ್ಣಿಗೆ ಗೋಚರಿಸಲು, ಆತನು ಅತ್ಯಾಶ್ಚರ್ಯಪಟ್ಟನು. ಅವನ ಭಾವವನ್ನು ಗುರು ಬಸವೇಶನು ತಿಳಿದು, ತನ್ನ ಕ್ರಿಯಾಸಿದ್ಧಿಯ ಬಲದಿಂದ ಆ ಯೋಗೀಶನಿಗಿಂತಲೂ ಮೇಲಾಗಿ ಆಕಾಶದಲ್ಲಿ ವಿಹರಿಸುತ್ತ, ರಾಗಾಲಾಪಗಳನ್ನು ಮಾಡುತ್ತ ಇದ್ದು, ಬಯಲಾಗುವನು. ನಿರ್ವಾಣಿಬೋಳೇಶನೆಂಬುವನು ನಾನಾ ಮಹಿಮೆಗಳನ್ನು ತೋರಿಸಿ, ಆಲದ ಮರದ ಜಡೆಯನ್ನು ಹಿಡಿದು ಜೋಲುತ್ತ, ಶಿವಯೋಗನಿಷ್ಠನಾಗಿರಲು, ಅಲ್ಲಿನ ಭಕ್ತಜನರು ಈತನು ಅಳಿದನೆಂದು ಯೋಚಿಸಿ, ಅವನ ದೇಹವನ್ನು ಹಿಡಿದು ಎಳೆಯಲು, ಅಲ್ಲೇ ಬಯಲಾಗುವನು. ಪರಪಟ್ಟ ಯೆಂಬ ವಿರತನು ಹುಚ್ಚನಂತೆ ಮುಕ್ಕಳೊಡನೆ ಆಡಿಕೊಂಡಿರಲು, ದೊರೆಯು ಅವನ ರೀತಿಯನ್ನು ನೋಡಿ, ಈತನು ಪರಮಶಿವಯೋಗಿಯಾಗಿರಬಹುದೆಂದು ಊಹಿಸಲು, ತನ್ನ ಇರವನ್ನು ರಾಜನು ಅರಿತನೆಂದು ತಿಳಿದು ವಿರತನು ಬಯಲಾಗುವನು. ಹೀಗೆ ನೂರೊಂದು ಮಂದಿ ವಿರತರೂ ಭೂಮಿಯಲ್ಲಿದ್ದು ನಿರ್ವಾಣವನ್ನೈದುವರು. ಇವರಲ್ಲದೆ ಮೊಗ್ಗೆಯ ಮಾಯಿದೇವಪ್ರಭುವು ಸಕಲ ಷಟ್ಸ್ಥಲತತ್ತ್ವರಹಸ್ಯವನ್ನೂ

ಜಗತ್ತಿಗೆ ತಿಳಿಯಪಡಿಸುವುದಕ್ಕಾಗಿ ಅನುಭವಸೂತ್ರ ಮೊದಲಾದ ಗ್ರಂಥಗಳನ್ನು ಬರೆದು ಪ್ರೌಢರಾಯನಿಂದ ಪೂಜ್ಯನಾಗಿದ್ದು ಶಿವಯೋಗಸಮಾಧಿಯಿಂದ ಮುಕ್ತನಾಗುವನು. ಬಳಿಕ ಪ್ರೌಢದೇವೇಂದ್ರನು ಅಳಿವನು. ಅವನ ವಂಶೋದ್ಭವನಾದ ವಿರೂಪಾಕ್ಷರಾಯನೆಂಬುವನು ದೇಶವನ್ನಾಳುತ್ತಿರುವಲ್ಲಿ ನರಸಣ್ಣರಾಯನೆಂಬುವನು ಅವನನ್ನು ಸೋಲಿಸಿ, ವಿದ್ಯಾನಗರಿಯನ್ನು ತಾನು ಹಿಡಿದುಕೊಳ್ಳುವನು. ಅವನ ಮಗನು ೫೦ ವರ್ಷಗಳವರೆಗೆ ೫ ರಾಜ್ಯವನ್ನಾಳುವನು. ಅವನ ವಂಶಕ್ಕೆ ಅಚ್ಯುತರಾಜನೇ ಕಡೆಯವನು. ಪ್ರೌಢರಾಯನು ಅಳಿದ ಬಳಿಕ ರಾಜ್ಯದಲ್ಲಿ ಅನಾಚಾರವು ಹೆಚ್ಚಿ, ವೀರಶೈವಾಚಾರವು ಕುಗ್ಗಿ, ಪರಮತವಾದಿಗಳು ಪ್ರಬಲಿಸುವರು. ಆಗ ನಾರದನು ಕೈಲಾಸಕ್ಕೆ ಹೋಗಿ, ಶಿವನಿಗೆ ಭಕ್ತಿಯಿಂದ ನಮಸ್ಕರಿಸಿ, ಭೂಲೋಕದಲ್ಲಿ ಶಿವಾಚಾರವು ತಗ್ಗಿ, ಅನಾಚಾರವು ಹೆಚ್ಚಿಕೊಂಡಿರುವುದರಿಂದ ನೀನೇ ಭೂಮಿಯಲ್ಲವತರಿಸಿ ಷಟ್ಸ್ಥಲಾಚಾರವನ್ನುದ್ಧರಿಸಬೇಕೆಂದು ಬಿನ್ನೈಸುವನು. ಆಗ ಶಂಕರನು ನಿರಂಜನಗಣೇಶನನ್ನು ಕರೆದು, ನೀನು ಏಳ್ನೂರುಮಂದಿ ಗಣೇಶ್ವರರನ್ನು ಕರೆದುಕೊಂಡು ಭೂಲೋಕಕ್ಕೆ ಹೋಗಿ, ಜಂಗಮಸ್ಥಲವನ್ನಾಶ್ರೈಸಿ, ಷಟ್ಸ್ಥಲಾಚಾರವನ್ನುದ್ಧರಿಸಿ ಬಾರೆಂದು ಅಪ್ಪಣೆ ಮಾಡುವನು. ಅದರಂತೆಯೇ ನಿರಂಜನಗಣೇಶ್ವರನು ಸಿದ್ಧೇಶನೆಂಬ ಹೆಸರಿನಿಂದ ಗೋಸಲಚೆನ್ನಬಸವೇಶ್ವರನ ಶಿಷ್ಯನಾಗಿ ಅವತರಿಸಿ, ಕಗ್ಗೆರೆಯ ಗ್ರಾಮದ ಒಳಯಣ ತೋಟಕ್ಕೆ ಹೋಗಿರುವನು. ಆ ಪೂರಿನಲ್ಲಿದ್ದ ನಂಬಿಯಣ್ಣನೆಂಬ ಭಕ್ತನು ತೋಟಕ್ಕೆ ಬಂದು ಸಿದ್ಧೇಶನನ್ನು ಕಂಡು ಭಕ್ತಿಯಿಂದ ನಮಸ್ಕರಿಸಿ, ತನ್ನ ಮನೆಯ ಭಿಕ್ಷೆಯನ್ನು ಕೈಕೊಂಡು ಧನ್ಯನಂ ಮಾಡಬೇಕೆಂದು ಬಿನ್ನೈಸಿ, ಮನೆಗೆ ಹೋಗಿ ಮತ್ತೆ ಬರುವೆನೆಂದು ಹೇಳಿ ತೆರಳುವನು. ಅವನು ಹೋದ ಬಳಿಕ ಊರಿನೊಳಗೆ ದೊಡ್ಡ ಜಗಳವು ಹುಟ್ಟಿ, ಕೆಲವು ದಿನಗಳವರೆಗೂ ಅವನು ಹಿಂತಿರುಗಿ ಬರುವುದಕ್ಕವಕಾಶವಿಲ್ಲದ ಹೋಗಲು, ಅನಂತರ ತೋಟಕ್ಕೆ ಬಂದು ನೋಡುವಲ್ಲಿ, ಸಿದ್ಧೇಶನು ಶಿವಧ್ಯಾನಪರವಶನಾಗಿ ಕುಳಿತಲ್ಲಿಂದ ಕದಲದೆ ಇರಲು, ಆತನ ಮೇಲೆ ಗೆದ್ದಲು ಹುತ್ತುವನ್ನು ಕಟ್ಟಿರುವುದು. ಜನವೆಲ್ಲವೂ ಇದನ್ನು ನೋಡಿ ಅತ್ಯಾಶ್ಚರ್ಯಪಟ್ಟು, ಈ ಸಿದ್ಧಲಿಂಗೇಶನು ಮಹಾಮಹಿಮನೆಂದು ಭಯ

ಭಕ್ತಿಯಿಂದ ಪೂಜಿಸುವರು. ಬಳಿಕ ಸಿದ್ಧಲಿಂಗೇಶನು ಆ ಭಕ್ತಗ ಭಕ್ತಿಯನ್ನೆಲ್ಲ ಸ್ವೀಕರಿಸುತಲಿರುವನು. ಉಳಿದ ಗಣನಾಥರೆಲ್ಲ ನಾನಾದೇಶಗಳಲ್ಲಿ ಜಂಗಮರಾಗಿ ಚರಿಸುತ್ತ, ಅನೇಕ ಮಹತ್ತ್ವಗಳನ್ನು ಪ್ರದರ್ಶನ ಮಾಡಿ, ಶಿವಭಕ್ತ್ಯಾಚಾರಗಳಲ್ಲಿ ಶ್ರದ್ಧೆಯನ್ನು ಹೆಚ್ಚಿಸುತ್ತ ಸಿದ್ಧಲಿಂಗೇಶನ ಬಳಿಗೆ ಬರುವರು. ಆ ವಿರಕ್ತರೊಡನೆಲ್ಲ ಸಿದ್ಧೇಶನು ಷಟ್ಸ್ಥಲಾನುಭವಪ್ರಸಂಗವನ್ನು ಮಾಡುತ್ತಲಿರುವನು. ಆಗ– ಸಿದ್ಧಲಿಂಗೇಶ್ವರ, ಕಂಬಳಿಯದೇವ, ಸಿದ್ಧನಂಜೇಶ್ವರ, ಚೆನ್ನದೇವ, ದೊಡ್ಡಸಿದ್ಧಲಿಂಗೇಶ್ವರ, ಗುಮ್ಮಳಾಪುರದ ಸಿದ್ಧಲಿಂಗೇಶ, ಕಂಕಣದದೇವ, ಲಂಬಕರ್ಣದದೇವ, ಸಿದ್ಧಮಲ್ಲೇಶ, ಎಡತೊರೆಯ ಗುರುಸಿದ್ಧವೀರಣ್ಣೊಡೆಯ, ಘನಲಿಂಗದೇವ, ಚಿಕ್ಕಮಲ್ಲೇಶ, ಮರುಳಸಿದ್ಧೇಶ್ವರ, ಚಂದ್ರಶೇಖರ, ಸುರಗಿಯಾರ್ಯ, ಕಾಂತಮಲ್ಲಿಕಾರ್ಜುನದೇವ, ಬೆಡಗಿನ ಪರ್ವತೇಶ್ವರ, ಪಟ್ಟಣದದೇವ, ಹಗುನಿ ಮರುಳದೇವ, ಮಳೆಯದೇವ, ಬತ್ತಲೆಯದೇವ, ಸಂಪಗೆಯ ರಾಚವಟ್ಟದೇವ, ಸಪ್ಪಿಯಯ್ಯ, ಉಪ್ಪಿನಪಳ್ಳಿಯಯ್ಯ, ಶೀಲವಂತಯ್ಯ, ಕೊಡಗಿ ಪಳ್ಳಿಯಯ್ಯ, ಜೋಳಿಯ ಒಸವೇಶ, ರಾಚವಟ್ಟಿಯ ಕೋರಿ ಸಿದ್ಧ ಒಸವೇಶ, ಹಿರಣ್ಯಾಯ್ಯ, ಶಿವಪ್ರೂಜೆಯಯ್ಯ, ಜೋಳಿಒಸವೇಶ, ಕಿತ್ತಾವರದ ಚೆನ್ನಮಲ್ಲೇಶ, ಮೊದಲಾದ ಪರಿಪರಿಯ ಹೆಸರಿನ ೩೦೦ ಮಂದಿ ವಿರಕ್ತರುಗಳು ತೊಳಲಿಬಂದ ಸಿದ್ಧಲಿಂಗೇಶ್ವರನ ಹತೆಯಲ್ಲಿರುವರು. ಇವರೆಲ್ಲರೂ ಭೂಮಿಯಲ್ಲಿ ಷಟ್ಸ್ಥಲಾಚಾರವನ್ನು ವಿಸ್ತರಿಸುತಲಿದ್ದು ಮುಕ್ತರಾಗುವರು. ಹುಚ್ಚನಂಜೇಶ, ಹುಚ್ಚವಿರೂಪಾಕ್ಷ, ಎಂಬವರಿಬ್ಬರೂ ಶ್ರೀಶೈಲದಲ್ಲಿರುವ ಮೋಹಿನೀಗಜವನ್ನು ಹತ್ತಿ ಬಯಲಾಗುವರು. ಮಾದಾಪ್ರದ ಮರುಳದೇವರು ಪರಮತದವರೊಡನೆ ವಾದ ಮಾಡಿ, ಸತ್ತಿದ್ದವರ ಪ್ರಾಣವನ್ನು ಬರಿಸಿ, ಬಿತ್ತಿದ ಆರು ತಿಂಗಳಿಗೆ ತೆಂಗಿನಗಿಡದಿಂದ ಫಲವನ್ನು ಬಿಡಿಸುವರು. ಹೊನ್ನವಳ್ಳಿಯ ಸಿದ್ಧವೀರೇಶನು ಹಲವು ಪವಾಡಗಳನ್ನು ಮೆರೆದು ಮುಕ್ತನಾಗುವನು. ನಿತುಮಾವುಡಿಯ ಕರಿಬಸವೇಶನು ತೆಂಗಿನಮರವನ್ನು ಭಿಕ್ಷೆಯನ್ನು ಬೇಡಲು, ಅದು ಒಗ್ಗಿ ಫಲವನ್ನು ಕೊಟ್ಟು ನೊದಲಂತೆ ನಿಲ್ಲುವುದು. ಕರಡಿಯ ಹಾಲದೇವರೂ, ಸರವಿಯ ಸಿದ್ಧರಾಮೇಶ ಮೊದಲಾದವರೂ ಹೀಗೆಯೇ ಬೇರೆ ಬೇರೆ ಪವಾಡಗಳನ್ನು ತೋರಿಸುವರು. ಯತಿಕು

ಲಶೇಖರನಂತಿರುವ ಕೋರನ್ನದಾರ್ಯ, ಬುಕ್ಕಸಾಗರದ ಕೆರೆಯ ಸಿದ್ಧೇಶ, ನಾರಕಂಫೆಯದೇವ, ಚೆಂಗಡಹಳ್ಳಿ ವೀರಪ್ಪ, ಮಾವಿನಹಳ್ಳಿ ಮಲ್ಲಪ್ಪ, ಗ್ರಾಮದ ಸಂಗಮೇಶ, ಗುಮ್ಮಳಾಪುರದ ವೀರಪ್ಪ, ಪ್ರಸಾದಿ ದೇವಯ್ಯ ಮೊದಲಾದ ಚರಮೂರ್ತಿಗಳೆಲ್ಲರೂ ಒಂದ ಜಂಗಮರಿಗೆ ಮೃಷ್ಟಾನ್ನಭೋಜನವನ್ನು ಮಾಡಿಸುತ್ತಿರುವರು. ಜಂಗಮರಿಗೆ ದಾಸೋಹವನ್ನು ನಡಿಸುತ್ತಿರುವ ದೊರೆಗಳು ಯಾರೆಂದರೆ– ನಂಜರಾಯ, ಕೆಂಚಸೋಮಣ್ಣನಾಯಕ, ಎಳಂದೂರರಸು, ಚೆನ್ನೊಡೆಯ, ಬರಗಿಯದೇವಿನಾಯಕ, ಬುಕ್ಕಣ್ಣೊಡೆಯ, ಸಿದ್ಧಮಲ್ಲಿನಾಯಕ, ಸಂಕಣ್ಣನಾಯಕ, ಜಂಬೂರದಾನಿವಾಸದ ಅರಸಗು. ಕೇತಸಾಗರದ ಚಿಕ್ಕಣ್ಣಸೆಟ್ಟ, ಬಿಜ್ಜಾವರದ ಪ್ರಭು, ಚಿಕ್ಕಣ್ಣಗೌಡ, ತಗಡೂರಪ್ರಭುವು, ತಲಕಾಡ ಚಂದ್ರಶೇಖರ ರಾಜ. ಭೋಗವಾಡಿಯ ಲಿಂಗರಾಜ, ಉಡುವಂಕನಾಡಪ್ರಭು ಮೊದಲಾದವರು. ಇವರಲ್ಲದೆ, ಸೋಲೂರ ಬಸವಪ್ಪ, ಸಂಗಯ್ಯ, ಮಹಾಂತಯ್ಯ, ಸಂಡಿಗೆಯ ಸಿದ್ದಪ್ಪ, ಮುದ್ದುಗಂಗಪ್ಪ, ದಾಸೋಹದಲಿಂಗಪ್ಪ, ಮಲ್ಲಪ್ಪ, ಕಾಬಣದ ಗಂಗಾಧರಪ್ಪ, ಕಳಲೆಯ ವೀರಪ್ಪ, ದೂಳಾಭಕ್ತ, ಹೊಸಹಳ್ಳಿ ನಾಗಪ್ಪ, ಬಸವಪ್ಪ, ಮೋಳಿಗಯ್ಯ, ಬಾಣಾವರದ ಸಿದ್ದಪ್ಪ, ಶೀಲವಂತ ಸಿರಿಯಾಳಯ್ಯ, ಹೋಳಿಸಿದ್ದಪ್ಪ, ದುರ್ಗದ ಕಲ್ಲುಪ್ಪ, ವಿರಕ್ತಬಸವಪ್ಪ, ಮರುಳಪ್ಪ, ಮಾನಂಗಿಶಿಖರಪ್ಪ, ಬಿಟ್ಟಮಂತೆಯಪ್ರಭು, ಬಯಲಪ್ರಭು, ಕಳಲೆ ಕಂಚಿದೇವ, ಕಾನಾಪುರದ ಮರುಳಸಿದ್ಧೇಶ, ಉಪ್ಪಲಗುಡಿ ಸಂಗಮೇಶ, ಕೊಟ್ಟೂರು ಬಸವಲಿಂಗೇಶ, ಆನೆಯಗುಂದಿ ಬೆಟ್ಟದ ಹುಚ್ಚದೇವ, ಬೆಳುಗಾವಿಯ ಹುಚ್ಚಸಿದ್ಧರಾಮೇಶ, ಇವರೆಲ್ಲ ಜಂಗಮರಿಗೆ ದಾಸೋಹಮಾಡಿ, ಹಲವು ಪವಾಡಗಳನ್ನು ತೋರಿಯುವರು. ಹಿಂದೆ ಹೇಳಿದ ನರಸಿಂಹರಾಯನ ಮಕ್ಕಳೆಲ್ಲ ಅಳಿದನಂತರ, ನರಸಿಂಹರಾಜನ ಅಳಿಯಂದಿರು ಮೂವರು ಕೂಡ ತುರುಕರೊಡನೆ ಕಾಯ್ದು ಸಾಯುವರು. ಹಿರಿಯನ ತಲೆಯು ಕಾಶಿಯಲ್ಲಿ ಸದಾ ಪೂಜೆಗೊಳ್ಳುತ್ತಿರುವುದು. ತುರುಕರು ಊರನ್ನೆಲ್ಲ ಸುಲಿಯುವರು. ಹಂಪೆಯ ವಿರೂಪಾಕ್ಷದೇವಾಲಯದ ಗೋಪುರವನ್ನು ಕೆಡಹಿಸುವರು. ಆನೆಯಿಂದ ವೀರೇಶವಿಗ್ರಹವನ್ನು ಕೀಳಿಸಿ, ವಿಷ್ಣು ಮೊದಲಾವವರ ಪ್ರತಿಮೆಗಳನ್ನು ಒಡೆದು, ಸಿಕ್ಕಿದವರನ್ನೆಲ್ಲ ಸಹ್ಮ

ರಿಸಿ, ಕೆಲದಿನಗಳವರೆಗೆ ಅಲ್ಲಿದ್ದು ಹೊರಟುಹೋಗುವರು. ಬಳಿಕ ಪಟ್ಟಣಗಳೆಲ್ಲ ಕೆಟ್ಟು, ರಾಜ್ಯಗಳೆಲ್ಲ ಅನಾಯಕವಾಗಿ, ಅಲ್ಲಲ್ಲಿ ಬಲಶಾಲಿಗಳಾದ ಶೆಟ್ಟರುಗಳು ಗುಂಪು ಕಟ್ಟಿ ಸಿಕ್ಕಿದಕಡೆಯಲ್ಲಿ ಕೊಳ್ಳೆಹೊಡೆಯುತ್ತ, ಭಕ್ತವುಮಾಹೇಶ್ವರಾದಿಗಳು ತಂತಮ್ಮ ಆಚಾರಗಳನ್ನು ಬಿಟ್ಟು ಸ್ವೇಚ್ಛೆಯಿಂದ ನಡೆಯುತ್ತ, ಧರ್ಮಭ್ರಷ್ಟರಾಗುವರು. ಮೂರಿ ಮನುಷ್ಯ ದುರ್ಗಿಯರು ಮನುಜರನ್ನು ಬೇಟೆಯಾಡುವರು. ಅಪರಿಮಿತಪ್ರಜಾಲಯವಾಗಿ, ಕುಲಕ್ಕೊಬ್ಬೊಬ್ಬರಂತೆ ಅಲ್ಲಲ್ಲಿ ಸತ್ಯಪರರಾದ ಶರಣರುಳಿಯುವರು. ಕಲಿಯುಗದಲ್ಲಿ ೪೬೪೫ನೆ ಸ್ವಭಾನು ಸಂವತ್ಸರದ ಮಾಘಬಹುಳ ಚತುರ್ದಶಿ ಸೋಮವಾರದ ದಿವಸ ೨೮ ಗಳಿಗೆಯ ಸಮಯದಲ್ಲಿ ಕರ್ಣಾಟದೇಶಕ್ಕೆ ವೀರವಸಂತನೆಂಬ ರಾಜನು ಗುಟ್ಟಿನಿಂದ ಬರುವನು. ಆತನು ಶಿವಭಕ್ತಕ್ಷತ್ರಿಯರಲ್ಲಿ ಹುಟ್ಟುವನು. ಎಣ್ಣೆಹೊಳೆಗೂ ಕಾವೇರೀನದಿಗೂ ಮಧ್ಯದಲ್ಲಿರುವ ಬಸವಪಟ್ಟಣಕ್ಕೆ ಹೋಗುವನು. ಆಗ ನಾವು ಬ್ರಾಹ್ಮಣಜಾತಿಯಲ್ಲಿ ಹುಟ್ಟಿ ಷಟ್ಸ್ಥಲವನ್ನುದ್ಧಾರಮಾಡುವೆವು. ಬಸವೇಶನು ಸಕಲ ಗಣಸಮೂಹದೊಡನೆ ಅಲ್ಲಿಗೆ ಬರುವನು. ನರಸಿಮ್ಮರಾಜನವಂಶದ ಅಳಿಯರ ಮಕ್ಕಳು ಅಷ್ಟರಲ್ಲಿ ಪ್ರಬಲರಾಗಿ ತುರುಕಾಣ್ಯಕ್ಕೆ ಹೋಗಿ, ಬಿದರೆ ಕೋಟೆಯನ್ನು ಕೆಡಹಿ, ಕಾಶಿಯವರೆಗೂ ತುರುಕರನ್ನು ಅಟ್ಟಿಕೊಂಡು ಹೋಗಿ ಸಹ್ಮರಿಸಿ, ಅಲ್ಲಲ್ಲಿ ಅವರ ಗುಮ್ಮಟಗೋರಿ ಮೊದಲಾದ ಗುರ್ತಿನ ಜಾಗಗಳನ್ನು ಹಾಳ್ಮಾಡುವರು. ಈ ಸುದ್ದಿಯನ್ನು ದಿಲ್ಲಿಯ ಸುಲ್ತಾನನು ಕೇಳಿ ಕೆರಳಿ, ಆ ತೆಲುಗಾಣ್ಯರಸರಮೇಲೆ ದಂಡೆತ್ತಿ ಹೊರಟು, ರಾಮೇಶ್ವರದವರೆಗೂ ಅಟ್ಟಿಕೊಂಟು ಒರುವನು. ತುರುಕರ ಕಡೆಯ ೧೮ ಮಂದಿ ಖಾನರುಗಳು ತಮ್ಮ ೧೮ ಲಕ್ಷ ರಾವುತರೊಡನೆ ಸಕಲ ದೇಶಗಳನ್ನೂ ಗೆದ್ದು ಹಾಳ್ಮಾಡುತ್ತ, ರಾಮಸೇತುವಿನ ಬಳಿಗೆ ಹೋಗಿ, ಅಲ್ಲಿಂದ ಹಿಂತಿರುಗುವರು. ಕಾಡಿನ ಬೇಡರು ಅವರೊಡನೆ ಕಾದಿ, ಅವರ ಕುದುರೆಗಳನ್ನೆಲ್ಲ ಹಿಡಿದು ಕಾಡಿನ ಗಿಡವೊಂದಕ್ಕೊಂದೊಂದರಂತೆ ಕಟ್ಟಿಹಾಕುವರು. ಕಡೆಗೆ ತುರುಕರು ದಂಡಿನೊಳಗೆ ಅರ್ಧಭಾಗವನ್ನು ಕಳೆದುಕೊಂಡು, ಆನೆಗುಂದಿಗೆ ಹೋಗಿ, ಪಾಳಯವನ್ನು ಮಾಡಿ, ವಾಲಿಯ ಬಂಡಾರವನ್ನು ತೆಗಿಸಿ, ಅದರಲ್ಲಿದ್ದ ದ್ರವ್ಯರಾಶಿಯನ್ನು ನನಗೆ ತನಗೆಂದು ಹಂಚಿಕೊಳ್ಳುವುದಕ್ಕಾಗಿ ಕಡಿದಾಡಿ ಸಾಯುವ

ರು. ತುರುಕರಿಗೆ ಶಿವನು ಕೊಟ್ಟದ್ದ ವರವು ಅಲ್ಲಿಗೆ ಸಮಾಪ್ತವಾಗುವುದು. ನರಸಿಹ್ಮನ ವಂಶವೂ ಅಲ್ಲಿಗೆ ಕೊನೆಮುಟ್ಟುವುದು. ಬಳಿಕ ಬೇಡರು ಆ ನೆ ಗುಂದಿಗೆ ಬಂದು, ಅಲ್ಲಿ ಹೊಸದಾಗಿ ಪಟ್ಟಣವನ್ನು ಕಟ್ಟಿ, ವಾಸ ಮಾ ಡುತ್ತ, ಆರು ತಿಂಗಳವರೆಗೆ ಪಟ್ಟವನ್ನನುಭವಿಸುವರು. ಅಷ್ಟರಲ್ಲಿ ಅತ್ತ ಬಸವಪಟ್ಟಣದೊಳಗೆ ವೀರವಸಂತರಾಯನಿಗೆ ಪಟ್ಟವಾಗುವುದು. ಆತ ನು ವಿದ್ಯಾನಗರಿಗೆ ಬಂದು, ವಾಲಿಬಂಡಾರದ ಹಣವನ್ನೆಲ್ಲ ಸ್ವಾಧೀನ ಮಾ ಡಿಕೊಂಡು, ಆ ರಾಜ್ಯವನ್ನೆಲ್ಲ ತಾನೇ ಆಳುತ್ತಲಿರುವನು. ಕಲ್ಯಾಣಪಟ್ಟ ಣವನ್ನು ಮತ್ತೆ ಚೆನ್ನಾಗಿ ಕಟ್ಟಿಸುವನು. ಕೋಟೆ ಕೊತ್ತಳ ಮಹಾದ್ವಾರ ತ್ರಿಪುರಾಂತಕದೇವಾಲಯಾದಿಗಳೆಲ್ಲ ನಿರ್ಮಿಸಲ್ಪಡುವುವು. ಬಸವೇಶ ಮೊ ದಲಾದವರ ಅರಮನೆಗಳೂ, ಜಂಗಮರ ಮಠಗಳೂ ರಚಿಸಲ್ಪಡುವುವು. ಆ ಪಟ್ಟಣದಲ್ಲಿ ಭಕ್ತ್ಯಾಚಾರಸದ್ಧರ್ಮಾದಿಗಳು ವೃದ್ಧಿಗೊಳ್ಳುವುವು. ಬಳಿ ಕ ವೀರವಸಂತನು ವಿದ್ಯಾನಗರಿಯಿಂದ ಕಲ್ಯಾಣಕ್ಕೆ ಬಂದು, ಅಳಿಯಬಿ ಜ್ಜಳನರಮನೆಯಲ್ಲೇ ವಾಸಮಾಡುವನು. ಬಸವೇಶನು ೩೫೦ ಅಮರಗ ಣಂಗಳನ್ನು ಕೂಡಿಕೊಂಡು ಬಂದು, ತನ್ನರಮನೆಯಲ್ಲಿ ವಾಸ ಮಾಡುವ ನು. ವೀರವಸಂತನು ನಮಗೆ ಪ್ರಧಾನಿಪಟ್ಟವನ್ನು ಕಟ್ಟಿಲು, ನಾವು ನ ಮ್ಮರಮನೆಯಲ್ಲಿರುವೆವು. ಇದೇ ಮುಂದೆ ನಡೆಯುವ ಸಂಗತಿಯ ಸಂಕ್ಷಿ ಪ್ತವಿವರಣವು. ನೀನು ಸೊನ್ನಲಾಪುರಕ್ಕೆ ಹೋಗಿ ನಾವು ಮತ್ತೆ ಬರುವ ವರೆಗೂ ಅಲ್ಲೇ ಶಿವಯೋಗ ಸಮಾಧಿಯಲ್ಲಿರು. ಎಂದು ಚೆನ್ನಬಸವೇಶನು ಅಪ್ಪಣೆಕೊಡಿಸಲು, ಸಿದ್ಧರಾಮೇಶನು ಎದ್ದು, ಆ ತನ್ನ ಗುರುವಿಗೂ ಬಸ ವಾದಿಪ್ರಮಥರಿಗೂ ಸಾಷ್ಟಾಂಗನಮಸ್ಕಾರ ಮಾಡಿದನು. ಅವರೆಲ್ಲರೂ ಪ್ರತಿನಮಸ್ಕಾರ ಮಾಡಲು, ಸಿದ್ಧರಾಮೇಶನು ಸಾಗಗಳುಪಿಸಿಕೊಂಡು ಸೊನ್ನಲಾಪುರಕ್ಕೆ ದಯೆಮಾಡಿಸಿ, ಶಿವಯೋಗಸಮಾಧಿಯಲ್ಲಿದ್ದನು. ಕ ಲ್ಯಾಣಪಟ್ಟಣದಲ್ಲಿ ಚೆನ್ನಬಸವೇಶ ಬಸವೇಶ ಮೊದಲಾದ ಶರಣರೆಲ್ಲರೂ ಶಿ ವಾನುಭವಾನಂದಸಂದೋಹತುಂದಿಲರಾಗಿ ವಿರಾಜಿಸುತ್ತಿದ್ದರು.

ಶಾಲಿವಾಹನಶಕ ೧೫೧೯ ನೆ ತಾರಣಸಂವತ್ಸರ ಶ್ರಾವಣ ಬಹುಳ ದ ಶಮಿ ಗುರುವಾರದದಿವಸ ಶ್ರೀ ವಿರೂಪಾಕ್ಷಪಂಡಿತರು ವಾರ್ಧಕಷಟ್ಪದಿಯ ಕಾವ್ಯವಾಗಿ ರಚಿಸಿ ಪೂರ್ಣಗೊಳಿಸಿದ ಚೆನ್ನಬಸವೇಶ್ವರಪುರಾಣವು, ಶಾಲಿ

ಮಾಹನಳಕ ೧೮೭೯ನೆ ಪರಾಭವಸಂವತ್ಸರದ ಕಾರ್ತಿಕ ಶುದ್ಧ ೫ ಬುಧವಾರ ದ ದಿವಸ, ಮೈಸೂರಿನ, ಎಕ್. ಆರ್. ಕರಿಬಸವಶಾಸ್ತ್ರಿಯಿಂದ ಲೋಕ ಹಿತಾರ್ಥವಾಗಿ ಬಿಡುಗನ್ನಡನುಡಿಯಿಂದ ರಚಿಸಿ ಪೂರ್ಣಗೊಳಿಸಲ್ಪಟ್ಟತು. ಜಗಜ್ಜನನೀಜನಕರಾದ ಪಾರ್ವತೀಪರಮೇಶ್ವರರೂ, ಪವಿತ್ರಚರಿತರೂ ಕರುಣಾಮಯರೂ ಅಪರಿಮಿತಮಹಿಮರೂಪಿದ ಬಸವಾದಿಪ್ರಮಥರೂ, ಈ ಗ್ರಂಥವನ್ನೋದುವ ಕೇಳುವ ಸಕಲಸಜ್ಜನರಿಗೂ ಇಷ್ಟಾರ್ಥವನ್ನಿತ್ತು ಕಾಪಾಡಲಿ.

ಶ್ರೀಮತ್ಸಚ್ಚಿದಾನಂದಮೂರ್ತಿಯಾದ ಯಾವ ಸದಾಶಿವನ ಇಚ್ಛಾಮಾತ್ರವು ಸಕಲಜಗತ್ಸೃಷ್ಟಿಸ್ಥಿತಿಲಯಗಳಿಗೆ ಹೇತುವಾಗಿರುವುದೋ, ಯಾವ ಮಹಾದೇವನ ಘನತರಲೀಲಾಸಂದೋಹಗಳು ಜಗದುದ್ಧರಣಕ್ಕೆ ಕಾರಣವಾಗಿರುವುವೋ, ಯಾವ ಪರಮೇಶ್ವರನ ಕರುಣಾಕಟಾಕ್ಷಲೇಶವೂ ಭವಭಯನಿವಾರಕವಾಗಿರುವುದೋ, ಯಾವ ಶಂಕರನ ಪರಮಾನುಗ್ರಹವು ಸಕಲಸೌಭಾಗ್ಯಪ್ರದಾಯಕವೋ, ಭಕ್ತೈಕಸುಲಭನಾದ ಆ ನನ್ನ ದಯಾಳುಪ್ರಾಣನಾಥನನ್ನು ಸದಾ ನನ್ನ ಹೃದಯಕಮಲಮಂದಿರದಲ್ಲಿಟ್ಟು ಸೇವಿಸುತ್ತಿರುವೆನು.

ಶ್ರೀಮದ್ವೀರಶೈವಮತಸುಧಾಶರಧಿಯನ್ನಭಿವೃದ್ಧಿಗೊಳಿಸಿ, ಭಕ್ತಜನಮನಶ್ಚಕೋರಗಳನ್ನು ಪರಿತುಷ್ಟಿಪಡಿಸಿ, ಕಲ್ಯಾಣಭಾಗ್ಯಕುವಲಯವನ್ನು ವಿಕಸನಗೊಳಿಸಿ, ತನ್ನ ಶುದ್ಧವರ್ತನಾವೃತಕಿರಣಜಾಲದಿಂದ ಭಕ್ತಿಮಾರ್ಗವನ್ನು ಪ್ರದರ್ಶನ ಮಾಡಿದ ಪ್ರಣವಮೂರ್ತಿಯಾದ ಶ್ರೀಮದ್ಬಸವೇಶಚಂದ್ರಮನ ತಳರಡಿಗೆರಗಿ ಭವಸಂತಾಪಶಾಂತಿಯನ್ನು ಪ್ರಾರ್ಥಿಸುವೆನು.

ಜಗತ್ತಿನಲ್ಲಿ ಆವರಿಸಿದ್ದ ಅಜ್ಞಾನಾಂಧಕಾರವನ್ನು ತನ್ನ ಉಪದೇಶವಾಗ್ಜ್ವಾಲಕಿರಣಗಳಿಂದ ಕಡಿಮೊಲಗಿಸಿ, ಷಟ್ಸ್ಥಲಸಿದ್ಧಾಂತಕಮಲದ ಸುಜ್ಞಾನಪರಿಮಳವನ್ನು ಹರಡಿ, ನಿತ್ಯಸುಖತೇಜಸ್ಸಿನಲ್ಲಿ ಶಿವಶರಣರೆಲ್ಲರೂ ವಿಹರಿಸುವಂತೆ ಮಾಡಿದ, ಚಿತ್ಕಳಾಮೂರ್ತಿಯಾದ ಶ್ರೀ ಚೆನ್ನಬಸವೇಶ್ವರಭಾಸ್ಕರನ ಪಾದಕಮಲಕ್ಕೆ ಮಣಿದು ಶಿವಜ್ಞಾನಾರೋಗ್ಯಭಾಗ್ಯವನ್ನು ಕೋರುವೆನು.

ಮಾಯಾಟವಿಯನ್ನು ದಹಿಸಿ, ಬಸವಾದಿಪ್ರಮಥರೆಲ್ಲರ ಮನೋವಾ

ಲಿನ್ಯವನ್ನು ತೊಡೆದು, ಚಿಜ್ಜ್ಯೋತಿಪ್ರಭೆಯಿಂದ ಆಶ್ರಿತರ ಚಿತ್ತಗುಹಾಂತರವನ್ನೆಲ್ಲ ಬೆಳಗಿ, ವೈರಾಗ್ಯವನ್ನು ಬಿತ್ತರಿಸಿದ, ಮಹಾನಿರಂಜನ ಮೂರ್ತಿಯಾದ ಶ್ರೀಮದಲ್ಲಮಪ್ರಭುಪಾವಕನ ಪಾದಾಶ್ರಯವನ್ನು ನಂಬಿ ಚಿದ್ವ್ಯಕ್ತಿಯನ್ನು ಬೇಡುವೆನು.

ಭೂತಭವಿಷ್ಯದ್ವರ್ತಮಾನಕಾಲದ ಸಕಲ ಶಿವಶರಣರ ಪಾದಪಯೋಜಕ್ಕೆ ಕೈಂಕರ್ಯದಿಂದ ತಲೆವಾಗುವೆನು.

ಶಿವಾನುಗ್ರಹದಿಂದ ಜಗತ್ತಿನಲ್ಲಿ ಸದ್ಭಕ್ತಿ ಶಿವಜ್ಞಾನಗಳು ವೃದ್ಧಿಗೊಂಡು, ಸುವೃಷ್ಟಿ ಸುಭಿಕ್ಷ ಸೌಭಾಗ್ಯಗಳುಂಟಾಗಲೆಂದು ಕೋರುವೆನು.

ಶ್ರೀಸದಾಶಿವಾನುಗ್ರಹಬಲದಿಂದ ಬರೆಯಲ್ಪಟ್ಟಿರುವ ಈ "ಚೆನ್ನಬಸವೇಶವಿಜಯ" ಕೃತಿಯು, ಶ್ರೀ ಶಿವಶರಣರ ಮಚ್ಚುಗೆಗೆ ಪಾತ್ರವಾಗಿ, ಸಕಲಸದ್ಭಕ್ತಜನಗಳಿಂದ ಅಂಗೀಕೃತವಾಗಿ, ಆಚಂದ್ರತಾರಕವಾಗಿ ವಿರಾಜಿಸುತ್ತಿರಲಿ.

ಶ್ರೀಸರ್ವಮಂಗಳಾವರನು ಸಕಲರಿಗೂ ಸನ್ಮಂಗಳವನ್ನುಂಟುಮಾಡಲಿ. ಎಂಬಿಲ್ಲಿಗೆ ೧೦ನೆ ಅಧ್ಯಾಯದೊಡನೆ ಚೆನ್ನಬಸವೇಶವಿಜಯವು



ಕಂ ॥ ಮೆರೆವ ಪರಾಭವಸಂವ-
ತ್ಸರಕಾರ್ತಿಕಶುದ್ಧ ಸಪ್ತಮಿಬುಧದಿನದೊಳ್ ॥
ಕರಿಬಸವಣಾಸ್ತ್ರರಚಿತಂ ।
ಪರಿಪೂರ್ಣಮಿದಾಯ್ತು ಪರಮಶಿವನತ್ಕೃಪೆಯಿಂ ॥